
ಕರ್ನಾಟಕ ಸರ್ಕಾರ

ವಿಜಯನಗರ ಅಧ್ಯಯನ

ಸಂಪುಟ – ೧೦



ವಿಜಯನಗರ ವಿಚಾರ ಸಂಕಿರಣ 2004ರಲ್ಲಿ
ಮಂಡಿಸಿದ ಪ್ರಬಂಧಗಳು

ಸಂಪಾದಕರು
ಡಾ. ಆರ್.ಗೋಪಾಲ್
ಚಿಕ್ಕಮಾರೇಗೌಡ
ಡಾ. ಟಿ.ಎಂ.ಮಂಜುನಾಥಯ್ಯ

ವಿಜಯನಗರ ಅಧ್ಯಯನ

ಸಂಪುಟ ೧೦

ಹಂಪಿ ಉತ್ಸವ ೨೦೦೪ ರಲ್ಲಿ ಮಂಡಿಸಿದ ಪ್ರಬಂಧಗಳು

ವಿಜಯನಗರ ಅಧ್ಯಯನ

ಸಂಪುಟ ೧೦

ಹಂಪಿ ಉತ್ಸವ ೨೦೦೪ ರಲ್ಲಿ ಮಂಡಿಸಿದ ಪ್ರಬಂಧಗಳು

ಸಂಪಾದಕರು

ಡಾ.ಆರ್.ಗೋಪಾಲ್

ಚಿಕ್ಕಮಾರೇಗೌಡ

ಡಾ.ಟಿ.ಎಂ. ಮಂಜುನಾಥಯ್ಯ

ಕರ್ನಾಟಕ ಸರ್ಕಾರ

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ

ಮೈಸೂರು

VIJAYANAGARA ADHYAYANA
Vol - 10

Publisher
Director
Directorate of Archaeology and Museums
Mysore - 570 001
Ph: 2424673/4

First Print : 2005

Pages : xviii + 346

Price: Rs.140-00

DTP and Printed at
Sri Sadguru Printers
Mysore Ph : 2442655

ವಿಜಯನಗರ ಅಧ್ಯಯನ
ಸಂಪುಟ - ೧೦

ಪ್ರಕಾಶಕರು
ನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ
ಮೈಸೂರು - ೫೭೦ ೦೦೧
ದೂರವಾಣಿ : ೨೪೨೪೬೭೩/೪

ಮೊದಲ ಮುದ್ರಣ : ೨೦೦೫

ಪುಟಗಳು : xviii + ೩೪೬

ಬೆಲೆ : ರೂ. ೧೪೦-೦೦

ಅಕ್ಷರ ಜೋಡಣೆ ಮತ್ತು ಮುದ್ರಣ
ಶ್ರೀ ಸದ್ಗುರು ಪ್ರಿಂಟರ್ಸ್
ಮೈಸೂರು ಫೋನ್ : ೨೪೪೨೬೫೫

ಪ್ರಸ್ತಾವನೆ

ವಿಜಯನಗರ ಇಡೀ ಭಾರತದಲ್ಲೇ ಖ್ಯಾತಿಯನ್ನು ಪಡೆದಿರುವ ಯುಗ. ದಕ್ಷಿಣ ಭಾರತದಲ್ಲಂತೂ ಅದು ಸುವರ್ಣ ಯುಗ. ಬಹುಶಃ ಈ ಸಾಮ್ರಾಜ್ಯದ ವಿವಿಧ ರಾಜಕೀಯ ಮತ್ತು ಸಾಂಸ್ಕೃತಿಕ ಮುಖಗಳನ್ನು ಕುರಿತಾದಷ್ಟು ಸಂಶೋಧನೆ ಹಾಗೂ ಬರವಣಿಗೆ ಬೇರೆ ಯಾವ ಒಂದು ರಾಜಮನೆತನದ ವಿಷಯದಲ್ಲಿಯೂ ಆಗಿಲ್ಲವೆಂದರೆ ತಪ್ಪಾಗಲಾರದು. ಅದಕ್ಕೆ ಈ ಸಾಮ್ರಾಜ್ಯದ ಮಹತ್ತು ಮತ್ತು ಬೃಹತ್ತು, ಒಂದು ಕಾರಣವಾದರೆ, ಅಗಾಧವಾದ ಮಾಹಿತಿಗಳು ಇನ್ನೊಂದು ಕಾರಣ. ಶಾಸನಗಳು, ನಾಣ್ಯಗಳು, ವಿದೇಶೀಯರ ಬರಹಗಳು, ಸಾಹಿತ್ಯಿಕ ಗ್ರಂಥಗಳು, ವಾಸ್ತುಶಿಲ್ಪ ಕೃತಿಗಳು, ಜಾನಪದ ಪರಂಪರೆ - ಹೀಗೆ ಹತ್ತು ಹಲವಾರು ಆಕರಗಳು ಇತಿಹಾಸಕಾರರನ್ನು ಕೈ ಬೀಸಿ ಕರೆಯುತ್ತಿವೆ. ಆದರೆ ಇದು ಎಷ್ಟೊಂದು ಸಮೃದ್ಧವಾಗಿದೆಯೆಂದರೆ ನಾಲ್ಕಾರು ವರ್ಷಗಳಲ್ಲಿ ಮುಗಿಯುವಂತಹುದಲ್ಲ; ಹಾಗಾಗಿ ಪ್ರತಿವರ್ಷವೂ ನಡೆಸಲಾಗುತ್ತಿರುವ ಹಂಪಿ ಉತ್ಸವದ ವಿಚಾರ ಸಂಕಿರಣದಲ್ಲಿ ಹೊಸ ಹೊಸ ವಿಷಯಗಳು ವಿದ್ವಾಂಸರ ಮೂಲಕ ಬೆಳಕಿಗೆ ಬರುತ್ತಿದ್ದು, ಈ ಸಾಮ್ರಾಜ್ಯದ ವಿಷಯದಲ್ಲಿ ನೂತನ ವೈಶಾಲ್ಯತೆ ಕಾಣುತ್ತಿದೆ.

ಕರ್ನಾಟಕ ಸರ್ಕಾರವು ಪ್ರತಿ ವರ್ಷ ಹಂಪಿ ಉತ್ಸವವನ್ನು ಆಚರಿಸಿಕೊಂಡು ಬರುತ್ತಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಇದರಿಂದ ಕನ್ನಡಿಗರಿಗೆ ತಮ್ಮ ಇತಿಹಾಸ ಮತ್ತು ಸಂಸ್ಕೃತಿಯ ಬಗೆಗೆ ವಿಶೇಷ ಆಸಕ್ತಿಯುಂಟಾಗುತ್ತಿದೆ. ಇದೊಂದು ಸ್ತುತ್ಯಾರ್ಹವಾದ ಕಾರ್ಯ.

2004 ರ ನವೆಂಬರ್ 4 ರಂದು ಈ ನಿರ್ದೇಶನಾಲಯ ಏರ್ಪಡಿಸಿದ್ದ ವಿಚಾರ ಸಂಕಿರಣವನ್ನು ಕರ್ನಾಟರ ಸರ್ಕಾರದ ಸನ್ಮಾನ್ಯ ಕಂದಾಯ ಸಚಿವರಾದ ಶ್ರೀ ಎಂ.ಪಿ. ಪ್ರಕಾಶ್‌ರವರು ಉದ್ಘಾಟಿಸಿದ್ದರು. ಅದರ ಪ್ರಬಂಧ ಸಂಕಲನವೇ ವಿಜಯನಗರ ಅಧ್ಯಯನ ಸಂಪುಟ - 10. ಇದನ್ನು ವಿದ್ವಾಂಸರು ಮತ್ತು ಕನ್ನಡಿಗರಿಗೆ ಅರ್ಪಿಸಲು ಅತೀವ ಹರ್ಷವಾಗುತ್ತಿದೆ.

ಈ ವಿಚಾರ ಸಂಕಿರಣ ಯಶಸ್ವಿಯಾಗಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಉಷಾ ಗಣೇಶ್, ಭಾ.ಆ.ಸೇ. ಇವರು ತಮ್ಮ ಇತರ ಕಾರ್ಯಗಳಿದ್ದಾಗ್ಯೂ ನಮ್ಮ ನಿರ್ದೇಶನಾಲಯಕ್ಕೆ ಮಾರ್ಗದರ್ಶನ ಮತ್ತು ಪ್ರೋತ್ಸಾಹ ನೀಡುತ್ತ ಬಂದಿದ್ದಾರೆ. ಇವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಈ ವಿಚಾರ ಸಂಕಿರಣವನ್ನು ಏರ್ಪಡಿಸಲು ಈ ನಿರ್ದೇಶನಾಲಯದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ನೆರವಾಗಿದ್ದಾರೆ. ಇವರೆಲ್ಲರಿಗೂ ನನ್ನ ಧನ್ಯವಾದಗಳು.

30-10-05
ಮೈಸೂರು

ಡಾ. ಆರ್. ಗೋಪಾಲ್
ನಿರ್ದೇಶಕರು

ವಿಜಯನಗರ ಅಧ್ಯಯನ
ಸಂಪುಟ ೧೦
ಸಮ್ಮೇಳನ ಅಧ್ಯಕ್ಷರ ಭಾಷಣ

ಡಾ. ಎಸ್. ನಾಗರಾಜು

ಪ್ರಾಸ್ತಾವಿಕ

ಈ ಸಮ್ಮೇಳನವನ್ನು ಉದ್ಘಾಟಿಸುತ್ತಿರುವ ಕರ್ನಾಟಕ ಸರ್ಕಾರದ ಸನ್ಮಾನ್ಯ ಸಚಿವ ರಾದ ಶ್ರೀ ಎಂ.ಪಿ.ಪ್ರಕಾಶ್ ಅವರೇ, ಈ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿರುವ ಹೊಸಪೇಟೆಯ ಸನ್ಮಾನ್ಯ ಶಾಸನಕರಾದ ಶ್ರಿ ಹೆಚ್.ಆರ್.ಗವಿಯಪ್ಪ ನವರೇ, ಈ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿರುವ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಉಷಾ ಗಣೇಶ್ ಅವರೇ, ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಕೆ.ಆರ್.ರಾಮಕೃಷ್ಣ ಅವರೇ ಹಾಗು ಇಲ್ಲಿ ನೆರೆದಿರುವ ಇತಿಹಾಸ ತಜ್ಞರೇ ಮತ್ತು ಆಸಕ್ತರೇ ಮತ್ತು ಹಂಪಿ-ವಿಜಯನಗರದ ಅಭಿಮಾನಿಗಳೇ, ಈ ವರ್ಷದ ಈ ಹಂಪಿ ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ವಹಿಸುವ ಅವಕಾಶವನ್ನು ಮಾಡಿಕೊಟ್ಟ ಎಲ್ಲ ಸನ್ಮಿತ್ರರನ್ನು ಮನಃಪೂರ್ವಕವಾಗಿ ಅಭಿನಂದಿಸಿ ಈ ಸಂದರ್ಭದಲ್ಲಿ ಇತಿಹಾಸ ಪ್ರಜ್ಞೆ ಮತ್ತು ವಿಜಯ ನಗರದ ವಿಶ್ವದೃಷ್ಟಿ ಎಂಬ ಎರಡು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಲು ಅನುವು ಮಾಡಿಕೊಡಬೇಕೆಂದು ಬಿನ್ನವಿಸುತ್ತೇನೆ.

ಇತಿಹಾಸ ಪ್ರಜ್ಞೆ

ಈ ಸಂದರ್ಭದಲ್ಲಿ ಸಮಯೋಚಿತವಾಗಿ ಕೆಲವು ಮಾತುಗಳನ್ನು ಹೇಳಲೇ ಬೇಕಾಗಿದೆ. ಅದು ಇತ್ತೀಚಿನ ದಿನಗಳಲ್ಲಿ ನಮ್ಮ ಸುತ್ತಲಿನ ವೈಚಾರಿಕ ಪರಿಸರದಲ್ಲಿ ನಡೆಯುತ್ತಿರುವ ಇತಿಹಾಸ ಕುರಿತು ಜಿಜ್ಞಾಸೆಗಳು ಮತ್ತು ವಿವಾದಗಳು. ಈ ಹಿಂದಿನ ಕೆಲವು ದಿನಗಳ ಪತ್ರಿಕೆಗಳನ್ನು ನೋಡಿದವರಿಗೆ ಇತಿಹಾಸ ಎಂಬುದು ಒಂದು ನಂಬಬಹುದಾದ ವೈಜ್ಞಾನಿಕ ವಿಷಯವೇ ಅಥವಾ ಕೆಲವು ವ್ಯಕ್ತಿಗಳು ಮತ್ತು ಸಮೂಹಗಳು ತಮ್ಮ ಕಾರ್ಯಾಚರಣೆಗೆ ಅನುಕೂಲವಾಗುವಂತೆ ಸೃಷ್ಟಿಸುವ ಕಥಾನಕಗಳೇ ಎಂಬ ಅಭಿಪ್ರಾಯ ಸಹಜವಾಗಿ ಮೂಡುತ್ತದೆ. ಇಂಥ ಸಂದರ್ಭದಲ್ಲಿ ಈಗ ಇಲ್ಲಿ ನಡೆಯು

ತ್ತಿರುವ ವಿಜಯನಗರಕ್ಕೆ ಸಂಬಂಧಿಸಿದ ಗೋಷ್ಠಿ ಸಹ ಎಷ್ಟರ ಮಟ್ಟಿಗೆ ವಸ್ತುನಿಷ್ಠವಾಗಿರಬಲ್ಲದು ಮತ್ತು ಅಥವಾ ಎಷ್ಟರ ಮಟ್ಟಿಗೆ ಸಮಾಜ ಸಮೂಹಗಳ ಸ್ವ-ವೈಚಾರಿಕ ಅನುಕೂಲ ಮತ್ತು ಕಾರ್ಯಾಚರಣೆಗಳಿಗೆ ಸಂಬಂಧಿಸಿದವಾಗಿರುತ್ತವೆ ಎಂಬಪ್ರಶ್ನೆ ನನ್ನನ್ನು ನಿಮ್ಮನ್ನು ಸಹಜವಾಗಿ ಕಾಡುತ್ತಿರಬಹುದು. ಇದಕ್ಕೆ ಉತ್ತರವನ್ನು ಕಂಡುಹಿಡಿದುಕೊಳ್ಳುವುದು ಸುಲಭ ಸಾಧ್ಯವಲ್ಲ. ಏಕೆಂದರೆ ಪ್ರತಿಯೊಬ್ಬ ವಿದ್ವಾಂಸರೂ ತಾವು ಹೇಳುವುದೇ ಪರಮ ಸತ್ಯ ಎಂಬ ಉದ್ಗಾರದೊಡನೆಯೇ ಮುಂದುವರಿಯುತ್ತಿರುತ್ತಾರೆ. ಇಲ್ಲಿ ಪ್ರಶ್ನಿಸಬೇಕಾದ ಕೆಲವು ಸಂದರ್ಭಗಳಲ್ಲಿ ಸಂಬಂಧಿತ ವ್ಯಕ್ತಿಗಳ ಪ್ರಾಮಾಣಿಕತೆಯನ್ನು ಹಾಗು ಹೇಳುವ ವಿಷಯಗಳ ಸತ್ಯಾಸತ್ಯತೆಯನ್ನು ಇಂತಹ ಒಂದು ಜಿಜ್ಞಾಸೆಗೆ ಕೈ ಹಾಕುವವನ ಸ್ವಕೀಯ ದೃಷ್ಟಿ ಒಲವು ನಿಲುವುಗಳು ಸಹ ಇಲ್ಲಿ ಕೆಲಸ ಮಾಡುತ್ತವೆಯಾದ್ದರಿಂದ ಈ ಕಾರ್ಯ ವಿಧಾನವೂ ಸಂಘರ್ಷಕ್ಕೆ ಅವಕಾಶ ಮಾಡಿ ಕೊಡುತ್ತದೆಯೇ ಹೊರತು ವಿಷಯಸ್ಪಷ್ಟತೆಯನ್ನು ಮೂಡಿಸುವುದಿಲ್ಲವಾದುದರಿಂದ ಎಲ್ಲವೂ ಗೊಂದಲಮಯವಾಗಿಯೇ ಉಳಿಯುತ್ತದೆ.

ಇತಿಹಾಸ ತತ್ವವೇತ್ತನೊಬ್ಬನ ಅಭಿಪ್ರಾಯದ ಪ್ರಕಾರ ಇತಿಹಾಸ ಎಂಬುದು "ಇಂದು ಮತ್ತು ಹಿಂದೆ ಇವುಗಳ ನಡುವೆ ನಡೆಯುವ ನಿರಂತರ ಸಂವಾದ". ಇವು ಎಂದಿಗೂ ಒಂದೇ ರೀತಿಯಲ್ಲಿ ಇರಲು ಸಾಧ್ಯವಿಲ್ಲ. ಹಿಂದೆ ಎಂಬುದು ಒಂದೇ ಸಾರಿ ಇದ್ದು ಆಗಿ ಹೋಗಿದ್ದಾದರೂ ಇಂದು ಎಂಬುದು ನಿರಂತರವಾಗಿ ಬದಲಾಯಿಸುತ್ತಲೇ ಇರುತ್ತದೆ. ಅಂದರೆ ಒಂದು ವಸ್ತುನಿಷ್ಠ ಅಥವಾ ಖಚಿತವಾದ ಸಾರ್ವಕಾಲಿಕ ಸತ್ಯ ಎಂಬುದನ್ನು ಇತಿಹಾಸದಲ್ಲಿ ಕಾಣುವುದು ಕಷ್ಟ ಎಂಬುದು ಇಲ್ಲಿಯ ತೀರ್ಮಾನ ಎಂದು ಅನಿಸುವುದು ಸಹಜ. ಹೀಗಿರುವಲ್ಲಿ ನಾವೇಕೆ ಇಂತಹ ಅಸ್ಪಷ್ಟ ಕೆಲಸದಲ್ಲಿ ಆಸಕ್ತಿವಹಿಸಬೇಕು ಎಂಬ ಪ್ರಶ್ನೆ ಚುಚ್ಚುತ್ತಿದ್ದರೂ, ನಮ್ಮನ್ನೂ ಒಳಗೊಂಡಂತೆ ಅನೇಕರು ಇತಿಹಾಸವನ್ನು ಪುನಾರಚಿ ಸುವ ಕಾರ್ಯದಲ್ಲಿ ನಿರತರಾಗಿದ್ದಾರೆಯಷ್ಟೆ. ಈ ದ್ವಂದ್ವದಿಂದ ಹೊರಬರಲು ಸಾಧ್ಯವೇ ಎಂಬುದನ್ನು ವಿಚಾರ ಮಾಡಬೇಕು.

ಮಾನವನ ಜ್ಞಾನರಂಗದ ಹಲವಾರು ವಿಭಾಗಗಳಲ್ಲಿ ವಸ್ತುನಿಷ್ಠತೆ, ತಾರ್ಕಿಕ ಬದ್ಧತೆ ಸ್ಪಷ್ಟವಾಗಿ ಕಂಡು ಬರುತ್ತದೆ. ಉದಾಹರಣೆಗೆ ಗಣಿತ, ಭೌತಶಾಸ್ತ್ರ, ರಾಸಾಯನಿಕ ಶಾಸ್ತ್ರ, ಖಗೋಳ ವಿಜ್ಞಾನ ಇತ್ಯಾದಿ ವೈಜ್ಞಾನಿಕ ರಂಗಗಳು. ಈ ಅಧ್ಯಯನದ ಹಿನ್ನೆಲೆಯಲ್ಲಿರುವುದು ತನ್ನ ಸುತ್ತಲಿನ ಪ್ರಪಂಚದ ಗುಟ್ಟುಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವ ಮತ್ತು ಸಾಧ್ಯವಾದರೆ ಮುಂದೆ ಅವನ್ನು ತನ್ನ ಅನುಕೂಲತೆಗೆ ಅವಶ್ಯವಾಗುವಂತೆ ಉಪಯೊಗಿಸಿಕೊಳ್ಳುವ ಆಶಯದಿಂದ. ತರ್ಕಬದ್ಧ ಅಧ್ಯಯನ ವಿಧಾನದಿಂದ ಸ್ಪಷ್ಟಪಡಿಸಿಕೊಂಡ ಈ ವಿಷಯಗಳನ್ನು ಯಾವುದೇ ರೀತಿಯ ಪ್ರಯೋಗ ಗಳಿಗೆ ಒಳಪಡಿಸಿದರೂ, ಅವುಗಳ ಫಲಿತ ಒಂದೇ ರೀತಿಯಾಗಿದ್ದು ಸಾರ್ವತ್ರಿಕರೀತಿ ಪ್ರಯೋಗಗಳಿಗೆ ಒಳಪಡಿಸಿದರೂ, ಅವುಗಳ ಫಲಿತ ಒಂದೇ ರೀತಿಯಾಗಿದ್ದು ಸಾರ್ವತ್ರಿಕ ಸತ್ಯಗಳಾಗಿ ಸ್ಥಿರಗೊಳ್ಳುತ್ತವೆ. ಆದರೆ ಇತಿಹಾಸದಲ್ಲಿ ಹಾಗಿರಲು ಸಾಧ್ಯವೇ?

ಭಾರತೀಯ ಪರಂಪರಾತ್ಮಕ ನಂಬುಗೆಯ ಪ್ರಕಾರ ಇದು ಸಾಧ್ಯವಿಲ್ಲದ್ದು. ಇತಿಹಾಸ ಎಂಬ ಪದವೇ ಹೇಳುವಂತೆ (ಇತಿ-ಹ-ಅಸ) ಇದು ಹೀಗಿತ್ತಂತೆ ಎಂಬುದಷ್ಟನ್ನೇ ಇದು ತಿಳಿಸುತ್ತದೆ. ಇಲ್ಲಿಯ ಅಂತೆ ಸ್ಪಷ್ಟವಾಗಿ ಇದು ನಮ್ಮ ಅನಿಸಿಕೆ, ನಿಜವೇನೋ ಗೊತ್ತಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಆದರೆ ೧೯-೨೦ನೇ ಶತಮಾನಗಳಲ್ಲಿ ಪಾಶ್ಚಾತ್ಯ ಜ್ಞಾನರಂಗದಲ್ಲಿ ನಡೆದ ಜಿಜ್ಞಾಸೆಗಳಲ್ಲಿ ಇತಿಹಾಸವು ಒಂದು ವಸ್ತುನಿಷ್ಠ ವಿಜ್ಞಾನ ಎಂಬ ಅಭಿಪ್ರಾಯ ಕಂಡುಬಂದಿರುತ್ತದೆ. ಇಂತಹ ಪ್ರತಿಪಾದನೆಯ ಅವಶ್ಯಕತೆ ಕಂಡುಬಂದಿದ್ದೇ ಅದು ವಸ್ತು ನಿಷ್ಠ ವಿಜ್ಞಾನವಲ್ಲ ಎಂಬ ಅಭಿಪ್ರಾಯ ಇದ್ದುದರಿಂದ. ಗತಕಾಲದ ಎಲ್ಲ ಘಟನೆಗಳು ಒಮ್ಮೆ ಮಾತ್ರ ಸಂಭವಿಸಿರುತ್ತವೆ. ಅವನ್ನು ಯಾರೂ ಬದಲಾಯಿಸಲು ಸಾಧ್ಯವಿಲ್ಲ. ಆದ್ದರಿಂದ ಗತಕಾಲ ಒಂದು ಸಾರ್ವತ್ರಿಕ, ಸಾರ್ವಕಾಲಿಕ ಪರಮಸತ್ಯ. ಇದು ಇತಿಹಾಸ. "ಇತಿಹಾಸ" ಇದನ್ನು ಅರ್ಥೈಸುವುದು ಹಾಗೂ ಗತ ಘಟನಾವಳಿಗಳನ್ನು ಜೋಡಿಸಿ ವಿವರಿಸುವ "ಇತಿಹಾಸ ನಿರೂಪಣೆ"ಗೂ ವ್ಯತ್ಯಾಸವಿದೆ. ಆದರೂ ವಸ್ತುನಿಷ್ಠ ಇತಿಹಾಸ ರಚನೆಯ ಸಾಧ್ಯತೆ ಇದೆ ಎಂಬುದು ಇದರ ಆಶಯ.

ಇದುವರೆಗೆ ನಡೆದಿರುವ ವಿಶ್ವದ ಎಲ್ಲೆಡೆಯ ಇತಿಹಾಸ ಪುನಾರಚನೆಯನ್ನು ಗಮನಿಸಿದಲ್ಲಿ ಕೆಲವು ಅಂಶಗಳು ಸ್ಪಷ್ಟಗೊಳ್ಳುತ್ತವೆ.

೧. ಈ ಭೂಮಂಡಲದಲ್ಲಿರುವ ಇಡೀ ಮಾನವ ಸಂಕುಲ ತನ್ನ ದೈಹಿಕ ಸ್ವರೂಪ ಹಾಗೂ ಬೌದ್ಧಿಕ - ಸಾಮಾಜಿಕ ಕಲ್ಪನೆಗಳು ಕ್ರಮಕ್ರಮೇಣ ವಿಕಸನ ಹಂತಗಳಲ್ಲಿ ಬೆಳೆದು ಬರುತ್ತಿವೆ.

೨. ಇಂದಿನ ಮಾನವ ಸಮೂಹಗಳಲ್ಲಿ ಅನೇಕ ರೀತಿಯ ಪ್ರಭೇದಗಳು-ದೇಶ, ಭಾಷೆ, ವರ್ಗ, ಮತ, ಜಾತಿ-ಇತ್ಯಾದಿಗಳು ಕಂಡುಬಂದರೂ ಅತ್ಯಂತ ಪ್ರಾಚೀನ ಕಾಲದ ಇಂತಹ ವಿವಿಧ ಗುಂಪುಗಳು ಇಲ್ಲದಿದ್ದ ಕಾಲಕ್ಕೆ ಸಂಬಂಧಿಸಿದ ವಿಷಯಗಳು (ಉದಾ: ಪುರಾತತ್ವ) ಹೆಚ್ಚು ವಿವಾದಗಳು ಇಲ್ಲದೆ, ವಸ್ತುನಿಷ್ಠತೆಯನ್ನು ಪ್ರಶ್ನೆ ಮಾಡುವ ಅವಶ್ಯಕತೆಯೂ ಇಲ್ಲದೆ ವೈಜ್ಞಾನಿಕ ಶಾಸ್ತ್ರವಾಗಿ ಬೆಳೆದಿದೆ. ಅಂದರೆ ಇತಿಹಾಸ ಎಂಬುದು ಪ್ರಪಂಚದ ಎಲ್ಲಾ ಕಾರ್ಯರಂಗಗಳಲ್ಲಿಯೂ ಪ್ರಭಾವ ಬೀರುವುದರಲ್ಲಿ ಅತಿಶಕ್ತಿಯುತವಾದ ಸಾಧನವಾಗಿರುವುದೇ ಇದಕ್ಕೆ ಕಾರಣದ ಸಂಭಂದಗಳಿಂದ ನಿರ್ಧರಿತವಾಗುವುದರಿಂದ ಎಲ್ಲಾ ಕಾರ್ಯಗಳನ್ನೂ ಕಾರಣದ ಹಿನ್ನೆಲೆಯನ್ನು ಕಂಡುಹಿಡಿದು ಕೊಳ್ಳಬೇಕಾಗಿದೆ. ವ್ಯಕ್ತಿ- ಸಮೂಹಗಳು ತಮ್ಮ ಸ್ವಕಾರ್ಯ ಸಾಧನೆಗೆ ತಕ್ಕಂತೆ ಈ ಕಾರಣಗಳನ್ನು ಗುರುತಿಸುವ ಪ್ರಯತ್ನ ಮಾಡುತ್ತವೆ. ಅಂತಹ ವ್ಯಕ್ತಿ ಸಮೂಹಗಳಲ್ಲಿ ವೈರುಧ್ಯತೆಗಳು ಇದ್ದಲ್ಲಿ ಆಯಾ ಸಮೂಹಗಳಿಂದ ರಚಿತವಾದ ಇತಿಹಾಸಗಳಲ್ಲಿ ಸಹ ಆ ವೈರುಧ್ಯತೆಗಳ ಪ್ರಭಾವ ಎದ್ದು ಕಾಣುತ್ತದೆ. ಇದು ಇಂದು ನಡೆಯುತ್ತಿರುವ ವಿವಾದದ ಹಿನ್ನಲೆ ಎಂಬುದು ಸ್ಪಷ್ಟವೇ ಆಗಿದೆ.

ಇತಿಹಾಸ ಪುನಾರಚನೆ ಪ್ರಕ್ರಿಯೆ ಒಂದು ದೃಷ್ಟಿಯಿಂದ ನೋಡಿದಲ್ಲಿ ನ್ಯಾಯಾಲಯದ ಪ್ರಕ್ರಿಯೆಯಂತೆಯೇ ಇದೆ. ಅಲ್ಲಿ ಹೇಗೆ ಕಕ್ಷಿದಾರರು ತಮ್ಮ ತಮ್ಮ ಪರವಾದ

ವಾದಗಳನ್ನು ಮುಂದಿಟ್ಟರೂ ಆ ವಾದದ ತಿರುಳನ್ನೆಲ್ಲಾ ಅರ್ಥೈಸಿಕೊಂಡು, ಇತರ ಸಾಂದರ್ಭಿಕ ಮಾಹಿತಿಗಳೊಡನೆ ಪರಾಮರ್ಶಿಸಿ ಯಾವುದೇ ತರ್ಕಬದ್ಧವಾದ ಕಾರ್ಯ ಕಾರಣ ಸಂಬಂಧಕ್ಕೆ ಹೊಂದಿಕೊಳ್ಳುತ್ತದೋ ಅಂಥವನ್ನು ನ್ಯಾಯಾಧೀಶ ಸತ್ಯವೆಂದು ಘೋಷಿಸುತ್ತಾನೆ. ನಿಜವಾದ ಇತಿಹಾಸಕಾರ ಕಕ್ಷಿದಾರರ ಪರ ವಕೀಲನಾಗದೆ ನ್ಯಾಯಾಧೀಶರ ವಿಧಾನದಲ್ಲಿ ಸತ್ಯಾನ್ವೇಷಣೆಯಲ್ಲಿ ತೊಡಗುವುದು ಅತ್ಯಂತ ಮುಖ್ಯವಾದ ಅವಶ್ಯಕತೆ. ಇದನ್ನು ಇತಿಹಾಸಕಾರರೆಂದು ಗುರುತಿಸಿಕೊಳ್ಳುವ ಎಲ್ಲ ವಿದ್ವಾಂಸರು ಪ್ರಜ್ಞಾಪೂರ್ವಕವಾಗಿ ಕೈಗೊಳ್ಳಬೇಕಾದ ಒಂದು ಮುಖ್ಯ ನಿರ್ಧಾರ.

ಇಂಥ ಸತ್ಯನಿಷ್ಠ ಇತಿಹಾಸ ಪುನಾರಚನೆಗೆ ಅವಶ್ಯಕವಾದದು ಕಕ್ಷಿದಾರರ ವಾದಗಳಲ್ಲದೆ ಅವಕ್ಕೆ ಸಂಬಂಧಿಸಿದ ಸಾಂಧರ್ಭಿಕ ಸಾಕ್ಷ್ಯಗಳು. ಈ ಸಾಕ್ಷ್ಯಗಳು ವಿಸ್ತಾರವೂ, ದೃಢವೂ ಆಗಿದ್ದಷ್ಟು ಸತ್ಯ ನಿರ್ಧಾರದ ಕೆಲಸ ಸುಲಭವಾಗುತ್ತದೆ. ವಿವಾದಗಳು ಸುಲಭವಾಗಿ ಅಂತ್ಯವಾಗುತ್ತವೆ. ಇತಿಹಾಸಕ್ಕೆ ಸಂಬಂಧಸಿದ ಇಂತಹ ಸಾಂದರ್ಭಿಕ ಸಾಕ್ಷ್ಯಗಳನ್ನು ಉಳಿಸಿ ಪರಿರಕ್ಷಿಸುವ ಮಹಾತ್ಕಾರ್ಯವನ್ನು ಇಡೀ ದೇಶದ ಜನತೆ ತನ್ನ ಮತ್ತು ಮುಂದಿನ ಪೀಳಿಗೆಯವರ ಹಿತರಕ್ಷಣೆಗಾಗಿ ಕೈಗೊಳ್ಳಬೇಕಾಗುತ್ತದೆ.

ಇವುಗಳ ಪರಿರಕ್ಷಣೆ ಅಷ್ಟೇ ಅಲ್ಲದೆ, ಇವುಗಳನ್ನು ಸರಿಯಾಗಿ ಅರ್ಥೈಸುವುದು ಅಷ್ಟೇ ಮುಖ್ಯವಾದ ಕೆಲಸ. ಇದು ಇತಿಹಾಸ ಮತ್ತು ಪುರಾತತ್ವ ತಜ್ಞರು ವೈಜ್ಞಾನಿಕವಾಗಿ ನಡೆಸಬೇಕಾದ ಕಾರ್ಯ. ಈಗ ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ ಏರ್ಪಡಿಸುತ್ತಿರುವ ಇಂತಹ ವಿಚಾರ ಸಂಕಿರಣಗಳು ಈ ದೃಷ್ಟಿಯಿಂದ ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ ಎಂದು ನಾನು ನಂಬಿದ್ದೇನೆ.

ನಮ್ಮ ಹಿಂದಿನ ಇತಿಹಾಸದ ಬಗ್ಗೆ ಖಚಿತತೆ ಮತ್ತು ಸ್ಪಷ್ಟತೆ ಮೂಡಿದಷ್ಟೂ, ನಮ್ಮ ಮುಂದಿನ ಬೆಳವಣಿಗೆಯ ಬಗ್ಗೆ ಚಿಂತನೆ ಹೆಚ್ಚು ತರ್ಕಬದ್ಧವಾಗಿರುತ್ತದೆ. ವರ್ಗವರ್ಗಗಳ ದೂಷಣೆ, ಶೋಷಣೆಗಳಿಂದ ದೂರವಾಗಿ ಇಡೀ ಸಮಷ್ಟಿಯ ಒಟ್ಟಾರೆ ಹಿತವನ್ನು ಬಲಿಗೊಡುತ್ತಿರುವ ಅರೆಸತ್ಯ ಐತಿಹಾಸಿಕ ಪುನಾರಚನೆ ಕೊನೆಗೊಂಡು ಸಮಷ್ಟಿಯ ಹಿತಸಾಧಿಸುವ ತರ್ಕಬದ್ಧ ವಸ್ತುನಿಷ್ಠ ಇತಿಹಾಸ ಸಾಧ್ಯವಾಗಬೇಕಾಗಿದೆ. ಇತಿಹಾಸ ಪುನಾರಚನೆ ಸತ್ಯಾನ್ವೇಷಣೆಗಷ್ಟೇ ಮೀಸಲಾಗಿರಬೇಕು ಎಂಬ ಪ್ರಜ್ಞೆ ಇತಿಹಾಸಕಾರರಲ್ಲಿ ಉದ್ಬೋಧಿತವಾಗಬೇಕು. ಈಗ ನಾವು ಅನುಸರಿಸುತ್ತಿರುವ ಇತಿಹಾಸ ಪುನಾರಚನೆಯ ಹೊಸಮಾರ್ಗಕ್ಕೆ ನಾಂದಿ ಹಾಕಿದ ೧೯ನೆಯ ಶತಮಾನದ ಇತಿಹಾಸ ತತ್ವಜ್ಞರಾದ ರ್‍ಯಾಂಕೆ, ನೆಬುರ್ ಇವರು ಹೇಳುವಂತೆ, "ನಾನು ಬರೆದಿರುವುದೆಲ್ಲ ಸತ್ಯ, ಸತ್ಯವನ್ನು ಬಿಟ್ಟು ನಾನು ಇನ್ನೇನನ್ನೂ ಬರೆದಿಲ್ಲ" ಎಂದು ಆತ್ಮಸಾಕ್ಷಿಯಾಗಿ ಹೇಳಿಕೊಳ್ಳುವಂತೆ ಆಗಬೇಕು.

ವಿಜಯನಗರ ವಿಶ್ವ ದೃಷ್ಟಿ

ಈ ಮೇಲಿನ ವಿಚಾರ ಇಡೀ ಇತಿಹಾಸ ರಂಗಕ್ಕೆ ಅನ್ವಯಿಸುತ್ತದೆ. ಪ್ರಸ್ತುತ ವಿಚಾರ ಸಂಕಿರಣಕ್ಕೆ ಸಂಬಂಧಿಸಿದಂತೆ ಸಹ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಮೇಲೆ ಹೇಳಿದ

ವಿಷಯಗಳ ಹಿನ್ನೆಲೆಯಲ್ಲಿ ವಿಜಯನಗರದ ಇತಿಹಾಸವನ್ನು ಪರಾಮರ್ಶಿಸುವುದಾದರೆ ನಮ್ಮ ಇತಿಹಾಸ ಅಧ್ಯಯನ ವಿಧಾನದಲ್ಲಿಹೆಚ್ಚು ತಾರ್ಕಿಕ ವಿಧಾನವನ್ನು ಅಳವಡಿಸಿ ಕೊಳ್ಳುವ ಅವಶ್ಯಕತೆ ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಪ್ರಾಚೀನ ಇತಿಹಾಸಕ್ಕೆ ಸಂಬಂಧಿಸಿದ ಇದುವರೆಗಿನ ಹೆಚ್ಚಿನ ಅಧ್ಯಯನಗಳಲ್ಲಿ ಮುಖ್ಯವಾಗಿ ನಾಲ್ಕು ಮೂಲಭೂತ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವುದಷ್ಟೆ ಆಗಿದೆ. ಅವು ಯಾರು?, ಎಲ್ಲಿ?, ಏನು?, ಯಾವಾಗ? ಎಂಬುದರ ಜೊತೆಗೆ ಏಕೆ ಮತ್ತು ಹೇಗೆ ಎಂಬ ಇನ್ನೆರಡು ಪ್ರಶ್ನೆಗಳನ್ನು ಸೇರಿಸಿ ತನ್ನ ಜಿಜ್ಞಾಸೆಯನ್ನು ಮುಂದುವರಿಸಬೇಕು. ಇಂತಹ ಇತಿಹಾಸ ಪುನಾರಚನೆಯು ಕೇವಲ ಇತಿಹಾಸ ಆಧಾರಗಳಿಂದ ಸಾಧಿತವಾಗುವುದಿಲ್ಲ. ಇದರ ಹಿನ್ನೆಲೆಯಲ್ಲಿ ಮಾನವ ಸಮಾಜದ ಆಶಯಗಳು, ಪ್ರಕ್ರಿಯೆಗಳು ಇವುಗಳ ಸ್ಪಷ್ಟ ಕಲ್ಪನೆ ಹಾಗೂ ಇವುಗಳ ಆಲೋಚನಾ ಮತ್ತು ಕಾರ್ಯ ವಿಧಾನ ಇಂಥ ಮೂಲ ಸಾಮಾಜಿಕ ಅಂಶಗಳೊಡನೆ ಜೊತೆಗೂಡಿಸಿ ಪರಿಸ್ಥಿತಿಯನ್ನು ಅರ್ಥೈಸಬೇಕಾಗುತ್ತದೆ. ಇದಕ್ಕೆ ಐತಿಹಾಸಿಕ ಸಾಮಗ್ರಿಗಳ ಅಧ್ಯಯನವಷ್ಟೆ ಅಲ್ಲದೆ ಸಾಮಾಜಿಕ ಪ್ರಕ್ರಿಯೆಗಳ ಆಳವಾದ ಅಧ್ಯಯನವೂ ಅವಶ್ಯವಾಗಿರುತ್ತದೆ.

ಅಂದರೆ ನಮ್ಮ ಚಿಂತನಾ ಮಾರ್ಗ ಮತ್ತಷ್ಟು ವೈಜ್ಞಾನಿಕವಾಗಬೇಕು. ಪ್ರಕೃತಿಯ ಅಧ್ಯಯನವನ್ನು ನಡೆಸುವ ಎಲ್ಲ ವೈಜ್ಞಾನಿಕ ರಂಗಗಳಲ್ಲೂ, ಈ ಹೇಗೆ? ಮತ್ತು ಏಕೆ ? ಎಂಬ ಪ್ರಶ್ನೆಗಳೇ ಪ್ರಮುಖ ಗುರಿಗಳಾಗಿರುತ್ತವೆ. ಇದರಿಂದ ವಿಶ್ವ ನಿಯಮಗಳು ದೃಗ್ಗೋಚರವಾಗಿ, ಆ ಮೂಲ ನಿಯಮಗಳೇ ವೈಜ್ಞಾನಿಕ ಅಧ್ಯಯನದ ಅನಿರ್ಬಾಧಿತ ಸಿದ್ಧಾಂತಗಳಾಗುತ್ತವೆ. ಹೀಗಿದ್ದಲ್ಲಿ ಗತಕಾಲದ ಮಾನವ ಸಮೂಹಗಳ ಅಧ್ಯಯನವನ್ನು ನಡೆಸುವ ಇತಿಹಾಸಕಾರ ಸಹ ಆ ಮಾನವ ಸಮೂಹಗಳೂ (ನಾವೂ ಸಹ) ವಿಶ್ವಪ್ರಕ್ರಿಯೆಯ ಒಂದು ಭಾಗವಷ್ಟೇ ಎಂದು ಅರಿತುಕೊಂಡಲ್ಲಿ ಗತ ಇತಿಹಾಸವನ್ನೂ ಸಹ ವೈಜ್ಞಾನಿಕ ವಿಧಾನದಿಂದ ನಿರೂಪಿಸಲು ಸಾಧ್ಯವಾಗುತ್ತದೆ.

ಈ ಸಾಧ್ಯತೆಯನ್ನು ಕುರಿತಂತೆ ನಡೆದಿರುವ ಇತ್ತೀಚಿನ ವೈಚಾರಿಕ ಬೆಳವಣಿಗೆಯನ್ನು ನಾನು ಇನ್ನೊಂದೆಡೆ ವಿಶದಪಡಿಸಿರುವುದನ್ನು ಇಲ್ಲಿರುವ ಕೆಲವು ಇತಿಹಾಸಕಾರರಾದರೂ ಗಮನಿಸಿರಬಹುದು. ಇತ್ತೀಚಿನ ದಿನಗಳಲ್ಲಿ ವೈಜ್ಞಾನಿಕ ರಂಗಗಳಲ್ಲಿ ವಿಶಿಷ್ಟ ಸ್ಥಾನವನ್ನು ಬೆಳೆಸಿಕೊಂಡಿರುವ ವ್ಯವಸ್ಥಾ ಮೀಮಾಂಸೆ (systems theory) ಯನ್ನು ಈಗಾಗಲೇ ಗುರುತಿ ಸಿರಬಹುದು. ಇತಿಹಾಸಕಾರರು ಇದನ್ನು ಅರ್ಥಪೂರ್ಣವಾಗಿ ಉಪಯೋಗಿಸಿಕೊಳ್ಳ ಬಹುದು. ಸಂಕ್ಷೇಪವಾಗಿ ಹೇಳುವುದಾದರೆ ಇಡೀ ಇತಿಹಾಸ ಪ್ರಕ್ರಿಯೆ ನಡೆಯುವುದು ಮಾನವ - ಪರಿಸರ ಸಂಬಂಧದಿಂದ. ಜನಸಮೂಹಗಳು ತಮ್ಮ ಸುತ್ತಲಿನ ಪರಿಸರದಿಂದ ತಮ್ಮ ಬದುಕನ್ನು ಸಾಧಿಸಲು ಅನೇಕ ತಂತ್ರ ವಿಧಾನಗಳನ್ನು ಅನುಸರಿಸುತ್ತವೆ. ಮಾನವ ಸಮೂಹಗಳ ಹಿಂದಿನ ಅನುಭವಗಳ ಆಧಾರದ ಮೇಲೆ ಹಾಗೂ ಹೊಸದಾಗಿ ರೂಢಿಸಿ ಕೊಳ್ಳುವ ಅನುಭವಗಳ ಮೇಲೆ (ವಿಜ್ಞಾನ, ತಂತ್ರಜ್ಞಾನ) ಅವಲಂಬಿತವಾಗಿರುತ್ತದೆ. ಮಾನವ ವ್ಯವಹಾರದಲ್ಲಿ ಒಳಗೊಳ್ಳುವ ಎಲ್ಲ ಕಾರ್ಯಕ್ಷೇತ್ರಗಳನ್ನು ಪ್ರತ್ಯೇಕ ವ್ಯವಸ್ಥೆಗಳೆಂದು ಪರಿಗಣಿಸಿ ಅವು ಪರಸ್ಪರ ಪ್ರಭಾವಿಗಳಾಗಿದ್ದು ಒಟ್ಟಾರೆಯಾಗಿ ಮಾನವನ ಜೀವನ

ವರ್ತನೆಗಳನ್ನು ತೀರ್ಮಾನಿಸುತ್ತದೆ ಎಂಬುದು ಈ ವ್ಯವಸ್ಥಾ ಮೀಮಾಂಸೆಯ ಮೂಲ ಚಿಂತನೆ.

ಇಲ್ಲಿ ಪರಿಸರ ಹೆಚ್ಚು ಕಡಿಮೆ ತೀವ್ರ ಬದಲಾವಣೆಗೆ ಒಳಗಾಗದ ವ್ಯವಸ್ಥೆ. ಆದರೆ ಮಾನವ ಕಾಲ ಕಾಲಕ್ಕೂ ವಿಕಾಸಗೊಳ್ಳುವ ವ್ಯವಸ್ಥೆಗೆ ಸೇರಿದವನು. ಇವನ ಚೈತನ್ಯಶೀಲ ಪ್ರವೃತ್ತಿ ಪರಿಸರದಲ್ಲೂ ಬದಲಾವಣೆಗಳನ್ನು ತರುತ್ತವೆ. ಈ ಚೈತನ್ಯ ಕಾರ್ಯ ಪ್ರವರ್ತವಾಗುವುದಕ್ಕೆ ಮೂಲ ಕಾರಣ ಅವನ ಬದುಕಿನ ಆಶಯಗಳು. ಅವುಗಳನ್ನು ಪೂರೈಸಿಕೊಳ್ಳುವ ಕಾರ್ಯರಂಗ ಪರಿಸರ. ಈ ಸಂಬಂಧ ರೀತಿಯನ್ನು ನಿರ್ಧರಿಸುವುದು ಅವನ ವಿಶ್ವದೃಷ್ಟಿ (World view). ಮಾನವ ಸಮೂಹಗಳಲ್ಲಿ ಈ ದೃಷ್ಟಿ ಬದಲಾದಂತೆಲ್ಲಾ ಆ ಸಮೂಹಗಳ ವರ್ತನಾ ವಿಧಾನವೂ ಬದಲಾಗುತ್ತದೆ. ಈ ಸೈದ್ಧಾಂತಿಕ ಹಿನ್ನೆಲೆಯಲ್ಲಿ ವಿಜಯನಗರ ಕಾಲದ ವಿಶ್ವ ದೃಷ್ಟಿ ಏನಿದ್ದಿರಬಹುದು ಎಂಬುದನ್ನು ತಿಳಿದುಕೊಳ್ಳಲು ಸಾಧ್ಯವಾದಲ್ಲಿ ಇಡೀ ವಿಜಯನಗರದ ಇತಿಹಾಸವನ್ನೆಲ್ಲಾ ಸುಲಭವಾಗಿ ಅರ್ಥೈಸಬಹುದು. ಆದರೆ ಇದಕ್ಕೆ ಪೂರಕವಾಗಿ ನಮ್ಮ ಸಂಶೋಧನಾ ಮಾರ್ಗಗಳನ್ನು ಸಾಕಷ್ಟು ಬದಲಾಯಿಸಿ ಕೊಳ್ಳ ಬೇಕಾಗುತ್ತದೆ. ಕೇವಲ ದಾಖಲಾಗಿರುವ ಅನೇಕ ವಿಷಯಗಳನ್ನು ತರ್ಕಬದ್ಧವಾಗಿ ಸಾಧಿಸಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ ಪರಿಮಾಣದ ಕಲ್ಪನೆ (quantification). ವಿಜಯನಗರದ ಇತಿಹಾಸವನ್ನು ಓದಿದವರಿಗೆಲ್ಲಾ ಅದರ ಸಂಪತ್ತು, ಸಾಮರ್ಥ್ಯ ಮತ್ತು ವೈಭವಗಳ ಕಲ್ಪನೆ ಇದೆ. ಇವೆಲ್ಲಾ ಹೇಗೆ ಸಾಧ್ಯವಾಯಿತು ಎಂಬುದನ್ನು ತಿಳಿದುಕೊಳ್ಳುವ ಒಂದು ಪ್ರಯತ್ನವನ್ನು ಈ ಸಿದ್ಧಾಂತಕ್ಕೆ ಒಂದು ಪ್ರಾಯೋಗಿಕ ಉದಾಹರಣೆಯಾಗಿ ಉಪಯೋಗಿಸಬಹುದು.

ವಿಜಯನಗರದ ಆಳ್ವಿಕೆಗೆ ಒಳಪಟ್ಟ ಇಡೀ ಪ್ರದೇಶ ಪ್ರಾಕೃತಿಕವಾಗಿ ಮಲಯ ಮಾರುತಗಳಿಂದ ಪ್ರಭಾವಿತವಾಗಿರುವಂತದು. ಇಲ್ಲಿ ವರ್ಷದ ಕೇವಲ ನಾಲ್ಕು ತಿಂಗಳ ಕಾಲ ಮಳೆ. ಆಗ ಬೀಳುವ ಮಳೆಯೇ ವರ್ಷಪೂರ್ತದ ಮಾನವ ಜೀವನಕ್ಕೆ ಆಧಾರ. ಈ ಜಲಸಂಪನ್ಮೂಲದ ಸಮರ್ಥ ನಿರ್ವಹಣೆಯೇ ಇಡೀ ದೇಶದ ಸಂಪತ್ತಿಗೆ ಮತ್ತು ಸಮೃದ್ಧಿಗೆ ಮುಖ್ಯ ಕಾರಣ ಎಂಬುದನ್ನು ಅಂದಿನ ಆಳರಸರು, ಚಿಂತನಶೀಲರೂ ಚೆನ್ನಾಗಿ ಅರ್ಥಮಾಡಿಕೊಂಡಿದ್ದರು. ಇದರ ಜೊತೆಗೆ, ಯಾವ ಒಂದು ವ್ಯವಸ್ಥೆಯೂ ಒಂದು ಕಾಲದಲ್ಲಿ ಸಮೃದ್ಧಿಯನ್ನು ತರುವಂತಿದ್ದರೂ ಎಲ್ಲ ಕಾಲಕ್ಕೂ ಅದೇ ಸಾಕಾಗಲಾರದು. ಇದಕ್ಕೆ ಮೂಲಭೂತ ಕಾರಣ ಜನಸಂಖ್ಯೆ ನಿರಂತರ ಬೆಳವಣಿಗೆ. ನಾನು ಬೇರೆಡೆಯಲ್ಲಿ ಕರ್ನಾಟಕದ ಪ್ರದೇಶಕ್ಕೆ ಸಂಬಂಧಿಸಿದಂತೆ ಕ್ರಿ.ಶ. ೧೧-೧೩ ಈ ಶತಮಾನದ ಆಸುಪಾಸಿನಲ್ಲಿ ಈ ಪ್ರದೇಶದ ಜನಸಂಖ್ಯೆಯೆ ಸುಮಾರು ೩೦ ಲಕ್ಷದಷ್ಟು ಇದ್ದಿರಬಹುದು ಮತ್ತು ಆಗ ಸುಮಾರು ೧೫,೦೦೦ ಕೆರೆ, ಕುಂಟೆ, ಇತ್ಯಾದಿಗಳು (ಅಂದರೆ ೨೦೦ ಜನ ೧ ಕೆರೆ ಪ್ರಮಾಣ ದಲ್ಲಿ) ಇದ್ದು ಸಾರ್ವತ್ರಿಕ ಸಮೃದ್ಧಿಯನ್ನು ಸಾಧಿಸಿಕೊಳ್ಳಲಾಗಿತ್ತು ಎಂದು ತರ್ಕಿಸಿದ್ದೇನೆ. ವಿಜಯನಗರ ಕಾಲದಲ್ಲಿ ಈ ಭಾಗದಲ್ಲಿ ಕಡೆಯ ಪಕ್ಷ ೫,೦೦೦ ಕೆರೆಗಳಾದರೂ ಹೊಸ ದಾಗಿ ನಿರ್ಮಿತವಾದವು. ಅಂದರೆ ಜನಸಂಖ್ಯೆಯ ಅಭಿವೃದ್ಧಿಯೊಡನೆ ಜಲಸಂಪನ್ಮೂಲದ

ವಿಚಕ್ಷಣ ನಿರ್ವಹಣೆ ಮುಂದುವರೆದಿತ್ತು. ಅದೇ ವಿಜಯನಗರದ ಸಂಪತ್ತು ಮತ್ತು ವೈಭವದ ಮೂಲಾಧಾರವಾಗಿರಬೇಕು ಎಂದು ಊಹಿಸಬಹುದು. ಉಳಿದ ಘಟನಾವಳಿಗಳೆಲ್ಲಾ (ಉದಾಹರಣೆಗೆ ಕೋಟೆ ಕಟ್ಟುವುದು, ಯುದ್ಧಾಕಾಂಕ್ಷೆ, ದೇವಾಲಯ ನಿರ್ಮಾಣ, ಸಾಹಿತ್ಯ ಅಭಿವೃದ್ಧಿ) ಇವೆಲ್ಲ ಈ ಮೂಲಭೂತ ಸಂಪನ್ಮೂಲ ನಿರ್ವಹಣೆಯ ಆಧಾರದಿಂದಲೇ ನಡೆಯುತ್ತಿದ್ದವು.

ಈ ನಿರ್ವಹಣೆ ವ್ಯವಸ್ಥಿತವಾಗಿ ಚಾಲನೆಗೆ ತರಲು ಕಾರಣವಾದದ್ದು ಆ ಕಾಲದ ವಿಶ್ವದೃಷ್ಟ ಈ ಪ್ರಾಪಂಚಿಕ ದೃಷ್ಟಿ ಕರ್ನಾಟಕದ ಅನೇಕ ಚಿಂತನಶೀಲರು, (ವಿಜ್ಞಾನೇಶ್ವರ, ವಿದ್ಯಾರಣ್ಯ) ಅನುಭವಿಗಳು ಮತ್ತು ಕವಿಗಳ (ಸಿದ್ಧರಾಮ, ಲಕ್ಕಣ್ಣ ದಂಡೇಶ ಇತ್ಯಾದಿ) ರಚನೆಗಳಲ್ಲಿ ಎದ್ದುಕಾಣುತ್ತದೆ. ಉದಾಹರಣೆಗೆ, ಒಂದು ದೇಶದಲ್ಲಿ ರಾಜನ ಮತ್ತು ಆಡಳಿತಗಾರರ ಕರ್ತವ್ಯಗಳೇನು, ಅವರ ವರ್ತನೆ ಹೇಗಿರಬೇಕು, ಎಂಬ ವೈಚಾರಿಕ ಕಲ್ಪನೆಯ ಮಾದರಿಗಳು ಅವರ ಕಾರ್ಯ ವಿಧಾನವನ್ನು ಬಿತ್ತರಿಸುತ್ತವೆ. ವಿಜಯನಗರದ ಕಾಲದಲ್ಲಿ ಇದ್ದದ್ದು ಭಾರತ ದೇಶದಲ್ಲಿ ಪರಂಪರಾಗತವಾಗಿ ನಡೆದು ಬಂದಿದ್ದ ರಾಜತತ್ವದ ಚಿಂತನೆಗಳು (Indian political Philosophy). ಇದಕ್ಕೆ ಮಹಾಭಾರತದ ಭೀಷ್ಮಪರ್ವದಲ್ಲಿ ಬರುವ ರಾಜಧರ್ಮ ವಿಭಾಗ, ಕೌಟಿಲ್ಯನ ಅರ್ಥಶಾಸ್ತ್ರ, ಕಾಮಂದಕನ ನೀತಿಸಾರ, ಕರ್ನಾಟಕದವನೇ ಆದ ಸೋಮದೇವ ಸೂರಿಯ ನೀತಿ ವಾಕ್ಯಾಮೃತ ಇತ್ಯಾದಿಗಳು ರಾಜ್ಯ ವಿಧಾನವನ್ನೂ ರಾಜನ ಕರ್ತವ್ಯವನ್ನೂ ನಿರ್ದೇಶಿಸಿದವು. ಅವುಗಳ ಪ್ರಕಾರದಲ್ಲಿ ಧರ್ಮ ಸಂರಕ್ಷಣೆಯೇ ರಾಜನ ಮುಖ್ಯ ಕರ್ತವ್ಯ. ಇಲ್ಲಿ, ಧರ್ಮ ಎಂದರೆ ಯಾವುದೋ ಮತಾಚರಣೆ ಅಲ್ಲ. ಯಾವುದೇ ಇಡೀ ಪ್ರಪಂಚವನ್ನು ಅಂದರೆ ಜನ ಹಾಗೂ ಚರಾಚರ ಜಂತುಗಳನ್ನು ಒಳಗೊಂಡ ಈ ಪ್ರಪಂಚವನ್ನು ಸುಸ್ಥಿತಿಯಲ್ಲಿ ಇಡಬಲ್ಲದೋ ಅದೇ ಧರ್ಮ (ಇಡೀ ಪ್ರಪಂಚವನ್ನು ಧಾರಣೆ ಮಾಡುವುದೇ ಧರ್ಮ). ಗಮನಿಸಬೇಕಾದ ವಿಷಯವೆಂದರೆ ಎಲ್ಲ ಜನ ಸಮೂಹ ಮತ್ತು ಪ್ರಾಣಿ ಪಕ್ಷಿಗಳಿಗೂ ಉಪಯುಕ್ತವಾಗುವ ಜಲಸಂಪನ್ಮೂಲ ನಿರ್ವಹಣೆಯು ರಾಜ್ಯಧರ್ಮದ ಒಂದು ಭಾಗ ಹಾಗೂ ಅದರ ಒಂದು ಕರ್ತವ್ಯ ಎಂದು ಪರಿಗಣಿತವಾಗಿತ್ತು. ಇದೇ ವಿವರಗಳನ್ನು ೧೨ನೇ ಶತಮಾನದ ಸಿದ್ಧರಾಮ ಎಂಬ ಕವಿ ತನ್ನ ರಚನೆಗಳಲ್ಲಿ ಸ್ಪಷ್ಟಪಡಿಸಿದ್ದಾನೆ. ವಿಜಯನಗರ ಕಾಲದ ಒಂದು ಶಾಸನವು "ದೇವರುಗಳಿಗೆ, ಜನರಿಗೆ, ಪಕ್ಷಿಗಳಿಗೆ, ಪ್ರಾಣಿಗಳಿಗೆ ವೃಕ್ಷಲತಾದಿ ಚರಾಚರ ಜೀವಿಗಳಿಗೆ ಆಧಾರವನ್ನೂ ತೃಪ್ತಿಯನ್ನೂ ನೀಡುವ ಒಂದು ಕೆರೆಯನ್ನು ಕಟ್ಟಿದಲ್ಲಿ, ಕಟ್ಟಿದವರ ಹಿಂದಿನ ಏಳು ಪೀಳಿಗೆಗಳೂ, ಮುಂದಿನ ಏಳು ಪೀಳಿಗೆಗಳೂ ಪುನೀತಗೊಳ್ಳುತ್ತವೆ" ಎಂದು ಅಂದಿನ ವಿಶ್ವದೃಷ್ಟಿಯನ್ನುನಿರೂಪಿಸುತ್ತದೆ. ವಿಜಯನಗರ ಕಾಲದ ಲಕ್ಷ್ಮೀಧರ ದಂಡನಾಯಕನಿಗೆ ಅವನಿನ್ನೂ ತಾಯಿಯ ತೊಡೆಯ ಮೇಲಿನ ಕೂಸಾಗಿದ್ದಾಗ "ಕೆರೆಯಂ ಕಟ್ಟಿಸು, ಭಾವಿಯಂ ಸವೆಸು" ಎಂದು ಅವನ ತಾಯಿ ಭೋಧಿಸುತ್ತಿದ್ದಳು ಎಂಬ ಮಾತು ಬಹು ಪ್ರಸಿದ್ಧವಾಗಿದೆ.

ಜನರ ಅವಶ್ಯಕತೆಗಳು, ಪರಿಸರವು ಒದಗಿಸುವ ಸಂಪನ್ಮೂಲಗಳು, ಅವನ್ನು ಉಪಯೋಗಿಸಲು ಅವಶ್ಯವಾದ ತಂತ್ರಜ್ಞಾನ, ನಿರ್ವಹಿಸುವ ಆಡಳಿತ ವ್ಯವಸ್ಥೆ, ಇವುಗಳಲ್ಲಿ

ಗೌರವವನ್ನು ಮೂಡಿಸಿ ಜನರನ್ನು ಕಾರ್ಯಪ್ರವೃತ್ತರನ್ನಾಗಿ ಮಾಡಲು ಅವಶ್ಯವಾದ ಭಾವನಾತ್ಮಕ ಚಿಂತನೆಗಳು - ಈ ಉಪ ವ್ಯವಸ್ಥೆಗಳನ್ನೆಲ್ಲಾ ಸುವ್ಯವಸ್ಥಿತವಾಗಿ ಒಗ್ಗೂಡಿಸುವ ಚಾಲಕ ಈ ಕಾಲದ ವಿಶ್ವದೃಷ್ಟಿ. ಇತಿಹಾಸಕಾರನು ಜನಸಮೂಹದ ಆಗುಹೋಗುಗಳನ್ನು ನಿರ್ಧರಿಸುತ್ತಿದ್ದ ಇಂತಹ ವ್ಯವಸ್ಥೆಗಳು ಮತ್ತು ವಿಷಯಗಳ ಬಗ್ಗೆ ಹೆಚ್ಚಿನ ಗಮನವನ್ನು ಹರಿಸಬೇಕು. ಕೇವಲ ಯುದ್ಧಗಳು, ಸಣ್ಣಪುಟ್ಟ ವ್ಯವಹಾರಗಳು ಇವುಗಳ ಬಗ್ಗೆ ಹೆಚ್ಚು ಒತ್ತುಕೊಡದೆ ಕೀಲಕವಾದ ವಿಷಯಗಳ ಬಗ್ಗೆ ತರ್ಕಬದ್ಧವಾಗಿ ಪರಿಶೀಲನೆಯನ್ನು ಮಾಡುವ ಕಾರ್ಯದಲ್ಲಿ ತೊಡಗಬೇಕು. ಆಗ ಇತಿಹಾಸ ವೈಜ್ಞಾನಿಕ ವಾಗುತ್ತದೆ ಎಂಬುದು ನನ್ನ ಅನಿಸಿಕೆ.

ಪರಿವಿಡಿ

೧. ಬುಕ್ಕ ಭೂಪತಿಯ ಹಂಪೆ ಶಾಸನ

ಡಾ.ಜಗದೀಶ

ಹಂಪಿ ಕೃಷ್ಣ ದೇವಾಲಯದ ಬಳಿಯಿರುವ ಆಂಜನೇಯ ದೇವಾಲಯದ ನೆಲ ಹಾಸಿನಲ್ಲಿ ಶಾಸನವೊಂದಿದೆ. ಇದರ ಬಗ್ಗೆ ೧೯೭೫-೭೬ ರಲ್ಲಿ ವರದಿ ಪ್ರಕಟವಾಗಿದೆ. ಶಾಸನ ಪರಿಷ್ಕರಿಸಿದ ಪಾಠ ಹೀಗಿದೆ.

೧. ಓಂ ಸ್ವಸ್ತಿ ಆದಿನಾಥ ಪ್ರಸಾದಾತುಃ ಸಂ

೨. ವತ್ ೧೪೦೮ ವರುಶೇ ಮಾರ್ಗ್ಗಸಿರ ಮಾಸೆ ಶುಕ್ಲ

೩. ಪಕ್ಷೇ ೧೧ ತಿಥಉ ಬುಧದಿನೇ ರೈವತೆ ನಕ್ಷತ್ರೇ ಮೀನಸ್ಥೇ ಚಂದ್ರೇ ವ್ರಿ

೪. ಸ್ಚಿಕಸ್ತೆ ರವೀಥರೆ ಮೇಖಸ್ಥೇ ದೇವಗುರು ಶಿಖಾ

೫. ಗ್ರೇಹಾ ಜೇಥಾ ಸ್ಥಾನೇ ಮೂಲಂ ಜ (ನಂ) ವೃತೇ ಅಮ್ರು

೬. ತ ಶಿಥ ಜೋಗೆ ಭಾಸ್ಕರ ಕ್ಷೇತ್ರೆಯೇ ಅ...

೭. ಆದಿಕಂಥ ದೇವನಾಥ ಪ್ರಗಟನಾಥಃ ಮಠ ಮ

೮. ಂಡಪ ತೋರಣ ಥಾಡುರಾ ಸಂಸ್ಥಾಪ್ಯಾ [ಶ್ಚುತಾ]

೯. ದ ಲಾಠದ ದುರಃ ಮಹಾರಾಜಾದಿ ರಾಜ

೧೦. ಶ್ರೀ ಬುಕ್ಕ ಭುವವಿತಿ ವಿಜಯರಾಜ್ಯ ಮಂ

೧೧. ತ್ರಿ ಬಸವ ದಂಣಾಯಕ ಪ್ರತಿಪ [ದೌ] (ಪ್ರತಿಷ್ಠೌ?) ರಾಜಾ

೧೨. ಪ್ರಜಾ ಗೋಬ್ರಾಹ್ಮಣೇಭ್ಯೋ ಉರು.ಮ.

೧೩. ಬಲ

ಈ ಶಾಸನವು ಅಂದಿನ ದಿನದ ಗ್ರಹಗಳ ಗತಿಯನ್ನು ಸೂಚಿಸುವ ಕಾರಣ ಹಲವುಕಡೆ ಉಲ್ಲೇಖಿಸಲ್ಪಡುತ್ತಿದೆ. ಕರ್ನಾಟಕದಲ್ಲಿ ಈ ರಾಶಿಗಳ ಗ್ರಹ ಸ್ಥಾನ ವಿವರಗಳುಳ್ಳ ಶಾಸನ ಬೆರಳೆಣಿಕೆಯಷ್ಟು ಕಡಿಮೆ. ಈಗ ವರದಿಯಾಗಿರುವಂತೆ ಶಾಸನವು ೨೫ ನವಂಬರ್ ೧೫೦೬ಕ್ಕೆ ಸರಿಹೊಂದುವುದಾಗಿ ತಿಳಿಯಲಾಗಿದೆ. ಈ ಕಾಲಕ್ಕೆ ಬುಕ್ಕ ಆಳುತ್ತಿರುವ ಕಾಲ ಮುಗಿದು ಹೋಗಿರುವುದರಿಂದ ಶಾಸನದ ಕಾಲ ಪ್ರಾಯಶಃ ತಪ್ಪಾಗಿದ್ದು, ಅದು ಶಾಲಿವಾಹನ ಶಕೆ ೧೩೦೮ ಅಂದರೆ ೧೧ ನವೆಂಬರ್ ೧೩೮೬ ಆಗುತ್ತದೆ.

ಮತ್ತು ಆಗ ಇಮ್ಮಡಿ ಹರಿಹರನ ಮಗ ಒಂದನೆಯ ಬುಕ್ಕ ಆಳುತ್ತಿದ್ದನೆಂದು ತಿಳಿಯಲಾಗಿದೆ.

ಮೊದಲು ಈಗಾಗಲೇ ತಿಳಿಯಲಾಗಿರುವ ಕಾಲ ಶಾಸನದ ವಿವರದಂತೆ ಚಂದ್ರ ಮತ್ತು ಗುರು ಗ್ರಹಗಳು ಕ್ರಮವಾಗಿ ಮೀನ ಮತ್ತು ಮೇಷ ರಾಶಿಗಳಲ್ಲಿ, ಹಾಗೂ ಉಳಿದ ಎಲ್ಲಾಗ್ರಹಗಳು ವೃಶ್ಚಿಕ ರಾಶಿಯಲ್ಲಿವೆ. ಈ ದಿನಾಂಗಳನ್ನು ಸರಿದೂಗಿಸಲು ಶಾಸನದಲ್ಲಿ ಸೂಚಿತವಾಗಿರುವ ರೇವತಿ ನಕ್ಷತ್ರವನ್ನು ಪರಿಗಣಿಸಲಾಗಿದೆ.

೨೫.೧೧.೧೫೦೬ ರ ಗ್ರಹ ರಾಶಿ ವಿವರ ಹೀಗಿದೆ.

ಜಾತಕವು ಸೂಚಿಸುವಂತೆ ೨೫.೧೧.೧೫೦೬ ರಂದು ಮೀನದಲ್ಲಿ ಚಂದ್ರ ಇದ್ದರೆ, ವೃಶ್ಚಿಕದಲ್ಲಿ ರವಿ ಮತ್ತು ಬುಧ ಗ್ರಹಗಳಿವೆ, ಗುರು ಗ್ರಹ ಮೇಷದಲ್ಲಿಲ್ಲ, ಕನ್ಯಾ ರಾಶಿಯಲ್ಲಿದ್ದಾನೆ. ಉಳಿದಂತೆ ಇತರೆ ಗ್ರಹಗಳು ಬೇರೆ ಬೇರೆ ರಾಶಿಗಳಲ್ಲಿವೆ.

ಶಾಸನವು ಮರುಪರಿಶೀಲನೆಗೆ ಯೋಗ್ಯ ಎಂದು ನಿರ್ಧರಿಸಿ ನಿರ್ದೇಶಕರು (ಶಾಸನ ಶಾಸ್ತ್ರ) ಕೇಂದ್ರ ಪುರಾತತ್ವ ಸರ್ವೇಕ್ಷಣ ಇಲಾಖೆ, ಮೈಸೂರು ಇವರನ್ನು ಭೇಟಿ ಮಾಡಿ ಶಾಸನ ಪ್ರತಿಯನ್ನು ನೋಡಲಾಗಿ, ಶಾಸನದ ಶಕೆ ವರ್ಷವನ್ನು ಬರೆಯುವಾಗ ೧೪೮ ಬರೆದಿದ್ದು ನಾಲ್ಕು ಅಂಕಿಯ ಕೆಳಗೆ ಅಂಕಿಯನ್ನು ಬರೆದು ಹೀಗೆ ೧೪೨೮ ಸೇರಿಸಿರುವುದು ಕಂಡು ಬಂತು. ಈ ಕಾರಣದಿಂದ ಶಕ ವರ್ಷವನ್ನು ೧೪೨೮ ಎಂದು ಹಿಂದೆ ಪರಿಗಣಿಸಲಾಗಿತ್ತು. ಆದರೆ ಶಾಸನದ ಗ್ರಹ ವಿವರಗಳು ಆ ದಿನಕ್ಕೆ ತಾಳೆಯಾಗು ತ್ತಿಲ್ಲ. ಕಾಲವನ್ನು ಹಿಂದಕ್ಕೆ ಹಾಕಿ ಅನೇಕ ಪ್ರಯತ್ನಗಳ ನಂತರ ೧೪೦೮ರ ಜಾತಕವನ್ನು ಪಡೆದಾಗ ಗ್ರಹ ವಿವರಗಳು ಸುಮಾರು ಸರಿಹೊಂದುವುದನ್ನು ಕಂಡು, ಶಾಸನದ ಮರು ಎಸ್ಟಾಂಪೇಜ್ ಪಡೆಯಲಾಯಿತು. ಆಗ ತಿಳಿದ ಬಂದುದೇನೆಂದರೆ ಲಿಪಿಕಾರ ಬರೆಯುವಾಗ೧೪೮ ಬರೆದಿದ್ದು, ನಂತರ ೦ ಅಂಕೆ ಬಿಟ್ಟಿರುವುದು ಗಮನಕ್ಕೆ ಬಂದು ನಾಲ್ಕರಲ್ಲಿನ ಶೂನ್ಯವನ್ನು ಸೇರಿಸಿ ಇನ್ನೊಂದು ದೊಡ್ಡ ಶೂನ್ಯ ಸೂಚಿಸಿದ್ದಾನೆ. ಆದ್ದರಿಂದ ಶಾಸನದ ಕಾಲವನ್ನು ೧೪೨೮ ಕ್ಕೆ ಬದಲಾಗಿ ೧೪೦೮ ಎಂದು ಪರಿಗಣಿಸ ಬೇಕು.

ಶಾಲಿವಾಹನ ವರ್ಷ ೧೪೦೮ ಕ್ಕೆ ಹೊಂದಿದ ಗ್ರಹ ರಾಶಿ ವಿವರ ಹೀಗಿದೆ.

೨೬.೧೧.೧೪೮೨ರ ಜಾತಕದಲ್ಲಿ ಗ್ರಹ ರಾಶಿ ಸ್ಥಾನಗಳು ಶಾಸನದ ವಿವರಗಳಿಗೆ ಸರಿಹೊಂದುತ್ತವೆ. ಶನಿ ಗ್ರಹ ಮಾತ್ರ ವೃಶ್ಚಿಕರಾಶಿಯಿಂದ ಧನಸ್ಸುರಾಶಿಗೆ ೮ ಅಂಶದಷ್ಟು (ಡಿಗ್ರಿ) ಕ್ರಮಿಸಿದ್ದಾನೆ. ಈ ರೀತಿಯ ಗ್ರಹ ರಾಶಿ ಪರಿಶೀಲಿಸುವಾಗ ಗಣನೆಗೆ ತೆಗೆದು ಕೊಳ್ಳಬೇಕಾದ ಮುಖ್ಯ ಗ್ರಹಗಳು ಗುರು ಮತ್ತು ಶನಿ. ಇವು ಅದೇ ರಾಶಿಗಳಿಗೆ ಕ್ರಮವಾಗಿ ೧೨ ಮತ್ತು ೨೦ ವರ್ಷಗಳ ನಂತರ ಬರುತ್ತಾರೆ. ಈ ಎರಡೂ ಗ್ರಹಗಳು ಶಾಸನದಲ್ಲಿ ಸೂಚಿತವಾಗಿರುವ ರಾಶಿಗಳಲ್ಲಿ ಬರಬೇಕಾದರೆ ೬೦ ವರ್ಷಗಳು ಬೇಕಾಗು ತ್ತದೆ. ಆಗ ಶಾಸನದ ಕಾಲ ೧೪೨೬ ಕ್ಕೆ ಬದಲಾಗಿ ೧೪೬೩ ಅಥವಾ ೧೫೪೬ ಆಗಬೇಕು.

ಶಾಸನದ ಕಾಲ ೧೪೮೬ ಮತ್ತು ಬುಕ್ಕ ಭುವಿಪತಿ ಎಂದು ಇರುವುದರಿಂದ ಆ ಕಾಲಕ್ಕಾಗಲೇ ಎರಡನೆಯ ಬುಕ್ಕನ ಆಳ್ವಿಕೆ ಮುಗಿದಿದೆ. ಭುವಿಪತಿ ಯಾರು ?

ಮೇಲಿನ ಶಾಸನ ಸರಿಯಾದ ದಿನಾಂಕ ಒದಗಿಸುವುದಲ್ಲದೆ ಮಠ, ಮಂಟಪ, ತೋರಣ ಮತ್ತು ಸ್ತಂಭ ಸ್ಥಾಪನೆಯ ದಿನವನ್ನು ನಿಗದಿಪಡಿಸುತ್ತದೆ. ಸಂಸ್ಕೃತದಲ್ಲಿನ ಭುವಿಪತಿ ಕನ್ನಡದಲ್ಲಿ ಭೂಪತಿ ಆಗುವ ಸಾದ್ಯತೆ ಇದೆ. ಆಂತೆಯೇ ಶಿಥಿ-ತಿಥಿ, ಜೋಗೇ -ಯೋಗೇ ಆಗಿದೆ. ಘುಡ-ಒಂದು ಕಂಬ (ಕನ್ನಡ ಶಬ್ದಕೋಶ). ಈ ದೇವಾಲಯದ ಆವರಣ ಕೂಡಾ ಇದನ್ನು ಪುಷ್ಟೀಕರಿಸುತ್ತದೆ. ಮೊದಲೇ ಇದ್ದ ದೇವನಾಥ ಗರ್ಭಗೃಹಕ್ಕೆ ಪ್ರಗಥನಾಥ ದೇವಾಲಯಸೇರಿಸಿ, ಮಂಟಪ, ಮಠ ಮತ್ತು ಪೂರ್ವದಿಕ್ಕಿನ ತೋರಣ ಮತ್ತು ಸ್ತಂಭ ರಚನೆ ಆಗಿದೆ.

ಅಲ್ಲದೆ ಈ ದೇವಾಲಯದ ಮುಂದೆ ಇರುವ ಭೂಪತಿ ಕೆರೆ ಉಲ್ಲೇಖ ಕ್ರಿ.ಶ. ೧೧.೦೨.೧೫೧೫ ರ ಶಾಸನದಲ್ಲಿ ಬರುತ್ತದೆ. (ಎಸ್.ಐ.ಐ ೪ ನಂ೨೫೫). ಭೂಪತಿಕೆರೆಯೊಂದಿಗೆ ಬುಕ್ಕಭೂಪತಿ ಹೆಸರಿನ ಸಾಮ್ಯತೆಯಿಂದಾಗಿ ಇದು ಭೂಪತಿಯ ನಿರ್ಮಾಣ ಅಗಿದೆಯೇ ಎಂದು ಪರಿಶೀಲಿಸಬೇಕು. ಒಂದನೆಯ ದೇವರಾಯನ ೧೪೦೬-೧೪೨೨ ನಾಲ್ಕು ಮಕ್ಕಳಲ್ಲಿ ಮೊದಲನೆಯವನು ವೀರವಿಜಯ (೧೪೨೨-೧೪೨೨). ಇವನು ವಿಜಯಬುಕ್ಕ ಮತ್ತು ವಿಜಯಭೂಪತಿ ಎಂದು ಕರೆಯಲ್ಪಟ್ಟಿದ್ದನು. ಆವರ ವಂಶಾವಳಿ ಹೀಗಿದೆ.

ದೇವರಾಯ (೧೪೦೬-೧೪೨೪)

ವೀರ ವಿಜಯ ವೀರ ಮಲ್ಲಿಕಾರ್ಜುನ ಹರಿಹರ ೩ ರಾಮಚಂದ್ರ

(ವಿಜಯ ಭೂಪತಿ)

(ವಿಜಯ ಬುಕ್ಕ ೩)

(೧೪೨೨ ೧೪೪೪)

ದೇವರಾಯ೨ ಪ್ರತಾಪರಾಯ

(೧೪೨೪-೧೪೪೬)

ಮಲ್ಲಿಕಾರ್ಜುನ

(೧೪೪೬-೧೪೬೫) ಮೊದಲ ಮಗ ವಿರೂಪಾಕ್ಷ ಬುಕ್ಕ ಭೂಪತಿ

(೧೪೬೫-೧೪೮೫) (೧೪೮೬-೮೭)

ಪ್ರತಾಪರಾಯನ ಮೊದಲ ಮಗ ಮಲ್ಲಿಕಾರ್ಜುನನ ಕೊಲೆ ಮಾಡಿ, ನಂತರ ಅವನು ತಮ್ಮನನ್ನು ಪಟ್ಟಕ್ಕೆ ತಂದನು. ವಿರುಪಾಕ್ಷನ ನಂತರ ಸಾಳುವ ನರಸಿಂಹನು ಆಳ್ವಿಕೆ

೧೪೮೫ ರಿಂದ ಪ್ರಾರಂಭವಾಯಿತೆಂದು ಪರಿಗಣಿಸಲಾಗುತ್ತಿದೆ. ಆದರೆ ಕ್ರಿ.ಶ. ೧೪೮೨ ರಲ್ಲಿ ಸಂಗಮ ದೊರೆಯೊಬ್ಬನ ಶಾಸನವು ಇದ್ದು ನರಸಿಂಹನ ಆಳ್ವಿಕೆ ನಂತರ ಪ್ರಾರಂಭ ವಾಗಿರುವ ಸೂಚನೆ ದೊರೆಯುತ್ತದೆ. ಬುಕ್ಕ ಭೂಪತಿ ಪ್ರತಾಪರಾಯನ ಇನ್ನೊಬ್ಬ ಮಗನಾಗಿರಬಹುದೇ? ಎಂಬ ಸಂದೇಹ ಇದ್ದಂತೆ, ಪ್ರಸ್ತುತ ಶಾಸನ ಅಪೂರ್ವ ವಿವರ ನೀಡುವುದರೊಂದಿಗೆ ಕೆಲವು ವಿಜಯನಗರ ಕಟ್ಟಡಗಳ ನಿಖರ ಕಾಲಮಾನವನ್ನು ಗುರುತಿಸಲು ಸಹಕಾರಿಯಾಗಿದೆ.

೨. ವಿಜಯನಗರದ ಅರಸರ ಕೆಲವು ಪ್ರಾಚೀನ ಶಾಸನಗಳ ಪುನರ್ ಪರಿಶೀಲನೆ

ಡಾ.ಎಂ.ಜಿ.ಮಂಜುನಾಥ

ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದ ಸಂಗಮವಂಶದ ಅರಸರ ಪ್ರಾಚೀನ ಶಾನಗಳೆಂದು ವಿದ್ವಾಂಸರು ಗುರ್ತಿಸಿರುವ ಕೆಲವು ಶಾಸನಗಳನ್ನು ಪ್ರಸ್ತುತ ಸಂಶೋಧನಾ ಪ್ರಬಂಧದಲ್ಲಿ ಪುನರ್ ಪರಿಶೀಲಿಸಲಾಗಿದೆ.

ಮೊದಲಿಗೆ ಕೋಲಾರ ಜಿಲ್ಲೆ ಹಾಗೂ ತಾಲ್ಲೂಕಿಗೆ ಸೇರಿದ ವಾನರಾಸಿ ಶಾಸನದ ಬಗ್ಗೆ ಗಮನಿಸೋಣ. ಈ ಶಾಸನವನ್ನು ಮೊಟ್ಟಮೊದಲು ಸಂಪಾದಿಸಿ ಪ್ರಕಟಿಸಿದ ಕೀರ್ತಿ ಶ್ರೀಬಿ.ಎಲ್. ರೈಸ್ ಅವರಿಗೆ ಸಲ್ಲುತ್ತದೆ.[1] ಈ ಶಾಸನವು ಕ್ರಿ.ಶ.೧೩೨೩ರ ಕಾಲ ಘಟಕ್ಕೆ ಸೇರುತ್ತದೆಂದು ರೈಸ್ ಅಭಿಪ್ರಾಯಪಟ್ಟಿದ್ದರು.[2] ಆದರೆ ಡಾ.ವಸುಂದರಾ ಫಿಲಿಯೋಜಾ ಅವರು 'ವಿಜಯನಗರ ಸಾಮ್ರಾಜ್ಯ ಸ್ಥಾಪನೆ' ಎಂಬ ಕೃತಿಯಲ್ಲಿ ವಾನರಾಸಿಯ ಶಾಸನವು ಕ್ರಿ.ಶ.೧೩೧೩ರದ್ದೆಂದು ಅಭಿಪ್ರಾಯ ಪಟ್ಟಿದ್ದಾರೆ.[3] ರೈಸ್ ಅವರು ಈ ಶಾಸನವು ಬುಕ್ಕರಾಯನ ಪುತ್ರ ಇಮ್ಮಡಿ ಕಂಪಣನದೆಂದು ಅಭಿಪ್ರಾಯ ಪಟ್ಟಿದ್ದರು. ಆದರೆ ಡಾ.ವಸೂಂಧರಾ ಫಿಲಿಯೋಜಾ ಅವರು 'ಈ ಶಿಲಾಶಾಸನದ ತೇದಿ ಕ್ರಿ.ಶ. ೧೩೧೩ನೇ ಫೆಬ್ರವರಿ ಮೊದಲನೇ ತಾರೀಖು ಗುರುವಾರಕ್ಕೆ ಸರಿಹೊಂದುತ್ತದೆ. ಹಾಗೂ ಸಂಗಮ ವಂಶಸ್ಥರ ಹೆಸರಿನಲ್ಲಿ ಸಿಗುವ ಮೊಟ್ಟಮೊದಲ ಶಿಲಾಶಾಸನವಿದು' ಎಂದು ಅಭಿಪ್ರಾಯ ವ್ಯಕ್ತಿಪಡಿಸಿದ್ದಾರೆ.

'ಗತಿಸಿಹೋದ ಬಲ್ಲಾಳ ದೊರೆಗೆ ಮನ್ನಣೆ ಕೊಟ್ಟು ಸಂಗಮ ಸಹೋದರರು ಮಹಾರಾಜಾಧಿರಾಜ ಮುಂತಾದ ದೊಡ್ಡ ದೊಡ್ಡ ಬಿರುದು ಧರಿಸದೇ ಶ್ರೀಮನ್ಮಹಾಮಂಡಳೇಶ್ವರ ಎಂದು ಮಾತ್ರ ಹೇಳಿಕೊಳ್ಳುತ್ತಿದ್ದರು. ಎಂತೆಯೇ ಈ ಶಿಲಾಶಾಸನದಲ್ಲಿ ಶ್ರೀಮನ್ಮಹಾಮಂಡಳೇಶ್ವರ ಎಂಬ ಬಿರುದು ಮಾತ್ರ ಇದೆ. ಬಲ್ಲಾಳ ಮಹಾರಾಜ ಜೀವಂತವಾಗಿದ್ದುದರಿಂದ ಕಂಪಂಣೊಡೆಯ ನಮ್ರವಾಗಿ ಮಹಾಮಂಡಳೇಶ್ವರ ಎಂಬ ಬಿರುದು ಮಾತ್ರ ಇಟ್ಟು ಕೊಂಡಿದ್ದಾನೆ' ಎಂದು ಅಭಿಪ್ರಾಯ ವ್ಯಕ್ತಿಪಡಿಸಿದ್ದಾರೆ.[4]

ಶ್ರೀ ಎಂ.ಜಿ.ನಾಗರಾಜ್ ಅವರು ವಾನರಾಸಿ ಶಾಸನವು ಕ್ರಿ.ಶ. ೧೩೧೩ರದ್ದೆಂದು ಅನುಮೋದಿಸಿ ಶಾಸನವನ್ನು ಮತ್ತೊಮ್ಮೆ ಓದಿ ತಮಗೆ ಕಂಡಂತೆ ಶಾಸನಪಾಠವನ್ನು ಹೊಸದಾಗಿ ಕೊಟ್ಟಿದ್ದಾರೆ.

ಬಿ.ಎಲ್. ರೈಸ್ ಅವರು ಕೊಟ್ಟಿರುವ ವಾನರಾಸಿ ಶಾಸನದ ಪಾಠ ಈ ಕೆಳಗಿನಂತಿದೆ.

೧. ಪರಿಧಾವಿ ಸಂವತ್ಸರ ಪಾಲ್ಗುಣ ಸು ಗು

೨. ಶ್ರೀಮತು ಮಹಾ ಮಂಡಳೇಶ್ವರಂ

೩. ಶ್ರೀವೀರ ಕಂಪಣವೊಡೆಯರು

೪. ದುವಾಲೆ ....ರಿಗೆ ಕೊಟ್ಟ

೫. ಸಂ........ ಸಲ್ಲುವ ಹೊ

೬. ದೆನಾಡೊಳಗಣವಾರಣಾಸಿಯೆಂ

೭. ಬಲೂರನೂ ನಿಮಗೆ ಮ. ಪುರವಾ

೮. ಗಿ ಕೊಟ್ಟ ಸಂಮಂಧ ಸರ್ವ್ವ ಮಾಂನ್ಯವಾಗಿ

೯. ವುಭಯ .... ಹೊಙಗಾಗಿಲು

೧೦. ಸರ್ವ್ವಯಾಗತಿ ಸಹ ಸರ್ವ್ವಬಾಧಾಪರಿ

೧೧. ಹಾರವಾಗಿ ಆ ಚಂದ್ರಾರ್ಕ ಸ್ತಾಯಿ ಅಗಿ

೧೨. ಸರ್ವ್ವಮಾನ್ಯವಾಗಿ ಮಡ...... ವಾಗಿ ಕೊಟ್ಟ

೧೩. ... ಸ್ತಾನಮಾಂನ್ಯ .... ಮರಿಯಾದೆ.[5]

ಹಿಂಭಾಗದ ಹುತ್ತದಿಂದ ಮುಚ್ಚಲ್ಪಟ್ಟಿದೆ

ಶ್ರೀ ಎಂ.ಜಿ.ನಾಗರಾಜ್ ಅವರು ನೀಡಿರುವ ಪಾಠ ಈ ಕೆಳಗಿನಂತಿದೆ.

೪. ದೈವಾಲ ಆಯಯಾದ ಕೆಂದು ಕೊಟ್ಟ

೫. ಅಂಗಭೋಗ ದು (ದೈ) ವಾಲಿಕೆ ಸಲುವ ಹೊ

೬. ದೆ ನಾಡೊಳಗಣ ವಂನರಾಸಿಯಂ

೭. ಮಡಿ (ಡ) ಪುರವಾ

೮.

೯. ಉಭಯಂಗರೂರೂಗಾಗಿ ಉದಿ

೧೦. ಪರ್ವ್ವಗಯಾಗಲಿ ಸಹ ಸರ್ವಬಾದಪರಿ

೧೧.

೧೨. ಸರ್ವಮಾಂಸ್ಯ ಅಗ್ರಹಾರಪುರವಾಗಿ ಕೊಟ್ಟ

೧೩. ಸ್ಥಾನಮಾಂನ್ಯ ಪೂರ್ವ ಮರಿಯಾದಿ

ಹಿಂಬದಿ

೧೪. ಯದಲಿ...ಡಿಗಿ

೧೫. ದ......ರದು

೧೬. ....ದಿ

೧೭. ....

೧೮. .....ರು .....ರಸರ ಎಂಬುದಾಗಿ ಶ್ರೀ ಎಂ.ಜಿ. ನಾಗರಾಜ್ ಅವರು ವಾನರಾಸಿ ಶಾಸನದ ಪಾಠವನ್ನು ಕೊಟ್ಟಿದ್ದಾರೆ.[6]

ನಾನು ವಾನರಾಸಿ ಗ್ರಾಮಕ್ಕೆ ಹೋಗಿ ಪಡಿಯಚ್ಚು ತೆಗೆದು ಛಾಯಚಿತ್ರವನ್ನು ತೆಗೆದು ಶಾಸನಪಾಠವನ್ನು ಸಿದ್ಧಗೊಳಿಸಿದ್ದೇನೆ. ವಾನರಾಸಿ ಶಾಸನದ ಹೊಸಪಾಠ ಈ ಕೆಳಗಿನಂತಿದೆ.

೧. ಶ್ರೀ ಪರಿದಾವಿ ಸಂವತ್ಸರದ ಪಾಲ್ಗುಣ ಸುಳಗು

೨. ಶ್ರೀ ಮತುಮಹಾಮಂಡಳೇಶ್ವರಂ

೩. ಶ್ರೀ ವೀರಕಂಪಂಣೋಂಡೆಯರು

೪. ದುವಾಲೆ ಆಯಯಾಗರಿಗೆ ಕೊಟ್ಟ

೫. ಸಂಗ್ತಿನಿಮದೂವಾಲೆಗುಸಲುವಹೊ

೬. ದೆ ನಾಡೊಳಗಣ ವಾರಣಾಸಿಯಂ

೭. ಬ ಊರನೂ ನಿಮಗೆ ಮಟಪುರಾವಾ

೮. ಗಿ ಕೊಟ್ಟ ಸಂಮಂದ ಸರ್ವ್ವಮಾಂನ್ಯವಾಗಿ

೯. ಉಭಯಮಂ ಹೊಱಗಾಗಿಲು

೧೦. ಸರ್ವ್ವಯಗಳು ಸಹ ಸರ್ವ್ವಬಾದಾಪರಿ

೧೧. ಹಾರವಾಗಿ ಆಚಂದ್ರರ್ಕ್ಕಸ್ತಾಯಿಆಗಿ

೧೨. ಸರ್ವ್ವಮಾಂನ್ಯವಾಗಿ ಮಟಪುರವಾಗಿ ಕೊಟ

೧೩. ಸ್ಥಾನ ಮಾಂನ್ಯ ಪೂರ್ವ್ವ ಮರಿಯಾದೆ

ಹಿಂಬದಿ ಬರಹ

೧೪. ಯಾಗಿ ಕೊಟ್ಟ ಕೊಡಗೆ

ಶಾಸನದ ಕಾಲ : ಈ ಶಾಸನವು ಕ್ರಿ.ಶ.೧೩೧೩ರ ಕಾಲಘಟ್ಟದ್ದು ಎಂಬುದಾಗಿ ಡಾ.ವಸುಂಧರಾ ಫಿಲಿಯೋಜಾ ಅವರು ಅಭಿಪ್ರಾಯ ಪಟ್ಟಿರುವುದನ್ನು ಈ ಹಿಂದೆಯೇ ಗಮನಿಸಲಾಗಿದೆ. ವಾನರಾಸಿ ಶಾಸನದಲ್ಲಿ ಮಹಾಮಂಡಲೇಶ್ವರ ಎಂಬ ಬಿರುದು ಮಾತ್ರ ಇದೆ. ಚಕ್ರವರ್ತಿ ಸೂಚಕ ಬಿರುದುಗಳಾದ ಮಹಾರಾಜಾಧಿರಾಜ ಮುಂತಾದ ಬಿರುದು

ಗಳಿಲ್ಲ. ಆದ್ದರಿಂದ ಇದು ಇಮ್ಮಡಿ ಕಂಪಣನ ಶಾಸನವಲ್ಲ. ಒಂದನೇ ಕಂಪಣನ ಶಾಸನ ಎಂದು ಡಾ. ವಸುಂಧರಾ ಅವರ ಅಭಿಪ್ರಾಯ. ತಮ್ಮ ಅಭಿಪ್ರಾಯಕ್ಕೆ ಪೂರಕವಾಗಿ ಕೋಲಾರ ಜಿಲ್ಲೆಯ ಮುಳಬಾಗಿಲು ೧೨ ಹಾಗೂ ಮುಳಬಾಗಿಲು ೭೪ ಸಂಖ್ಯೆಯ ಶಾನಗಳಲ್ಲಿ ಇಮ್ಮಡಿ ಬುಕ್ಕರಾಯನನ್ನು ಮಹಾರಾಜಾಧಿರಾಜ ಎಂಬ ಚಕ್ರಿವರ್ತಿ ಸೂಚಕ ಬಿರುದುಗಳಿಂದ ಗುರುತಿಸಲಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.[7]

ಆದರೆ ಮುಳಬಾಗಿಲು ೧೨ ಹಾಗೂ ಮುಳಬಾಗಿಲು೭೪ ಈ ಎರಡು ಶಾಸನ ಗಳಲ್ಲಿಯೂ ಮಹಾರಾಜಾಧಿರಾಜ ಎಂದು ಬಿರುದು ಉಲ್ಲೇಖವಾಗಿಲ್ಲದಿರುವುದು ಗಮನಾರ್ಹ ಅಂಶ. ಅದೇ ರೀತಿ ಮಹಾರಾಜಾಧಿರಾಜ ಎಂಬ ಬಿರುದು ರಹಿತವಾದ ಮಹಾಮಂಡಲೇಶ್ವರ ಎಂಬ ಉಲ್ಲೇಖ ಮಾತ್ರ ಇರುವ ಇಮ್ಮಡಿ ಹರಿಹರನ ಹಲವಾರು ಶಾಸನಗಳು ಉಪಲಬ್ಧವಾಗಿದೆ. ಉದಾಹರಣೆಗೆ ಕೋಲಾರ ೧೧೩[8] ಮತ್ತು ಕೋಲಾರ ೧೫೦[9] ಸಂಖ್ಯೆಯ ಶಾಸನಗಳಲ್ಲಿ ಇಮ್ಮಡಿ ಹರಿಹರನಿಗೆ ಮಹಾಮಂಡಲೇಶ್ವರ ಎಂಬ ವಿಶೇಣವನ್ನು ಮಾತ್ರ ಬಳಸಲಾಗಿದೆ.

ಕ್ರಿ.ಶ.೧೩೧೩ರ ವೇಳೆಗೆ ೧ನೇ ಕಂಪಣ ಕೋಲಾರ ಜಿಲ್ಲೆಯ ಭಾಗಗಳನ್ನು ಆಳುತ್ತಿದ್ದುದು ನಿಜವೇ ಆಗಿದ್ದರೆ ಆ ಪ್ರದೇಶದಲ್ಲಿ ಕಂಪಣನ ಇನ್ನೂ ಹಲವಾರು ಶಾಸನಗಳು ದೊರೆಯಲೇ ಬೇಕಾಗಿತ್ತು. ಆದ್ದರಿಂದ ವಾನರಾಸಿ ಶಾಸನವು ಕ್ರಿ.ಶ. ೧೩೭೩ರ ಕಾಲದ್ದೆಂಬುದು ಖಚಿತವಾಗುತ್ತದೆ. ೧೩೭೩ರ ವೇಳೆಗೆ ಇಮ್ಮಡಿಕಂಪಣ ಕೋಲಾರ ಜಿಲ್ಲೆಯ ಪ್ರದೇಶಗಳನ್ನು ಆಳುತ್ತಿದ್ದುದಕ್ಕೆ ಅಲ್ಲಿನ ಹಲವಾರು ಶಾಸನಗಳು ಪೂರಕ ಆಧಾರಗಳಾಗಿವೆ.

ಎರಡನೆಯದಾಗಿ ಬೆಂಗಳೂರು ಗ್ರಾಮಾಂತ ಜಿಲ್ಲೆಯ ರಾಮನಗರ ತಾಲ್ಲೂಕಿನ ಜಾಲಮಂಗಲ ಗ್ರಾಮದ ಒಂದು ಶಾಸನವನ್ನು ಗಮನಿಸೋಣ.

ಆ ಶಾಸನದ ಪಾಠ ಈ ಕೆಳಗಿನಂತಿದೆ.

೧. ೧೨೨೧ನೆಯ

೨. ತ್ಸರದ ಆ

೩. ನುಮಹಾ

೪. ರಿಯರಾಯ

೫. ಪೂರ್ವರಾಯ

೬. ಬಾದಾಪರಿಹಾರ

೭. ಬುಕ್ಕಂಣವೊ

೮. ಪೃಥ್ವೀರಾಜ್ಯಂಗೆಯುತ್ತಮಿರೆ

೯. ಮಹಾಸಾಂತಾಧಿಪತಿ

ಎಂಬ ಪಾಠ ಈ ಶಾಸನದ ಮೊದಲ ೯ ಸಾಲುಗಳಲ್ಲಿದೆ.[10]

ಈ ಶಾಸನದ ಮೊದಲ ಸಾಲಿನಲ್ಲಿ ಶಕ ವರ್ಷ ೧೨೨೧ ಎಂಬ ಉಲ್ಲೇಖ ರೈಸ್ **ಅವರು ಸಂಪಾದಿಸಿದ EC ಯ ಬೆಂಗಳೂರು ಜಿಲ್ಲಾ ಶಾಸನ ಸಂಪುಟದ ಕನ್ನಡ ಆವೃತ್ತಿಯಲ್ಲಿದೆ. ಶಕ ೧೨೨೧ರ ಕ್ರಿ.ಶ. ೧೨೯೯ಕ್ಕೆ ಸರಿ ಹೊಂದುತ್ತದೆ. ಆದರೆ ಈ** ಶಾಸನವು ಕ್ರಿ.ಶ.೧೩೫೫ ಕಾಲದ್ದೆಂದು ರೈಸ್ ಅವರು ಬೆಂಗಳೂರು ಜಿಲ್ಲಾ ಶಾಸನ ಸಂಪುಟದ ಇಂಗ್ಲೀಷ್ ಆವೃತ್ತಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[೧೧] ಶ್ರೀ ಎಂ.ಜಿ.ನಾಗರಾಜ್ ಅವರು ಈ ಶಾಸನವು ಶಕ ೧೨೪೧ ಅಂದರೆ ಕ್ರಿ.ಶ. ೧೩೧೯ರ ಕಾಲದ್ದೆಂದು ಅಭಿಪ್ರಾಯ ಪಟ್ಟಿದ್ದಾರೆ.[12]

ಆದರೆ ನಾನು ಈ ಶಾಸನದ ಪಡಿಯಚ್ಚನ್ನು ತೆಗೆದು ಪುನರ್ ಪರಿಶೀಲಿಸಿದಾಗ ರೈಸ್ ಅವರು ಕೊಟ್ಟಿರುವುದಕ್ಕಿಂತ ಹಾಗೂ ಎಂ.ಜಿ.ನಾಗರಾಜ್ ಅವರು ಕೊಟ್ಟಿರುವುದಕ್ಕಿಂತ ಬೇರೆಯದೇ ಆದ ಶಾಸನ ಪಾಠ ದೊರೆಯಿತು. ಹಾಗೂ ಬೇರೆಯದೇ ಆದ ಕಾಲದ ಉಲ್ಲೇಖವೂ ದೊರೆಯಿತು.

ಜಾಲಮಂಗಲ ಶಾಸನದ ಹೊಸಪಾಠ ಈ ಕೆಳಗಿನಂತಿದೆ.

೧. ೧೩೦೧

೨. ತ್ಸರದ ಆ

೩. ಸುದಶಮಿ

೪. ಯಶುಕ್ರ

೫. ವಾರದಲು

೬. ಶ್ರೀಮತು

೭. ಮಹಾರಾಜಾಧಿ

೮. ಪರಮೇಶ್ವರಶ್ರೀ

೯. ವೀರಹರಿಹರರಾಯ

೧೦. ....ಬುಂಕಂಣ

೧೧ ಪೃಥ್ವಿರಾಜ್ಯಂಗೆ

ಎಂಬ ಪಾಠ ದೊರೆಯಿತು. ಶಾಸನದ ಉಳಿದ ಭಾಗದಲ್ಲಿ ಸಿಮೆಂಟು ಹಾಗೂ ಸುಣ್ಣ ತುಂಬಿರುವುದರಿಮದ ಶಾಸನದ ಪೂರ್ಣಪಾಠ ಪಡೆಯಲು ಸಾಧ್ಯವಾಗಲಿಲ್ಲ. ದೊರೆತಿರುವ ೧೧ ಸಾಲುಗಳ ಪಾಠದ ಆಧಾರದಿಂದ ಈ ಶಾಸನವು ಇಮ್ಮಡಿ ಹರಿಹರನ ೨ನೇ ಪುತ್ರನಾದ ಇಮ್ಮಡಿ ಬುಕ್ಕರಾಯನ ಶಾಸನವೆಂದು ಹೇಳಬಹುದು. ಈ ಶಾಸನದಲ್ಲಿ ಹರಿಹರನಿಗೆ 'ಶ್ರೀಮನ್ಮಹಾರಾಜಾಧಿರಾಜ ರ್ಾಜ ಪರಮೇಶ್ವರ' ಎಂಬ

ಚಕ್ರವರ್ತಿ ಸೂಚಕ ಬಿರುದುಗಳನ್ನು ಬಳಸಿರುವುದನ್ನು ಗಮನಿಸಬೇಕು. 'ರಾಜಾಧಿರಾಜ ನೆಂದು ಕರೆಸಿಕೊಂಡ ವಿಜಯನಗರದ ಅರಸರಲ್ಲಿ ಇಮ್ಮಡಿ ಹರಿಹರನೇ ಮೊದಲಿಗ ನೆಂದು ಡಾ.ಸೂರ್ಯನಾಥ ಕಾಮತ್ ಅವರು ಅಭಿಪ್ರಾಯಪಟ್ಟಿದ್ದಾರೆ.[13] ಆದ್ದರಿಂದ ಈ ಶಾಸನ ಇಮ್ಮಡಿ ಹರಿಹರನು ೧೩೭೭ ರಿಂದ ೧೪೦೪ರ ವರೆಗೆ ರಾಜ್ಯಭಾರ ಮಾಡುತ್ತಿದ್ದನು. ಆತನ ಮರಣಾನಂತರ ಅವನ ಹಿರಿಯ ಪುತ್ರನಾದ ವಿರೂಪಾಕ್ಷನು ಕೆಲವು ತಿಂಗಳುಗಳ ಕಾಲ ಮಾತ್ರ ಅರಸನಾಗಿದ್ದನು. ನಂತರ ಹರಿಹರನ ದ್ವಿತೀಯ ಪುತ್ರ ಇಮ್ಮಡಿ ಬುಕ್ಕರಾಯನು ೧೪೦೫-೧೪೦೬ರ ವರೆಗೆ ರಾಜನಾಗಿದ್ದನು. ಇಮ್ಮಡಿ ಹರಿಹರನು ರಾಜನಾದಾಗ ಕ್ರಿ.ಶ.೧೩೭೭ರಲ್ಲಿ ತನ್ನ ಪುತ್ರರನ್ನು ತನ್ನ ರಾಜ್ಯದ ಬೇರೆ ಬೇರೆ ಪ್ರದೇಶಗಳ ರಾಜ್ಯಪಾಲರನ್ನಾಗಿ ನೇಮಿಸಿದ್ದನು. ಹಾಗಾಗಿ ಪ್ರಸ್ತುತ ಜಾಲಮಂಗಲ ಶಾಸನೋಕ್ತ ಇಮ್ಮಡಿ ಬುಕ್ಕನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರದೇಶಗಳ ರಾಜ್ಯಪಾಲನಾಗಿದ್ದನು ಎಂದು ಈ ಶಾಸನದಿಂದ ತಿಳಿದು ಬರುತ್ತದೆ.

ಈ ಶಾಸನದ ಹೊಸಪಾಠದ ಪ್ರಕಾರ ಈ ಶಾಸನವು ಶಕೆ ೧೩೦೧ ಅಂದರೆ ಕ್ರಿ.ಶ.೧೩೭೯ರ ಕಾಲದ್ದೆಂದು ಖಚಿತವಾಗಿ ತಿಳಿದು ಬರುತ್ತದೆ. ಶಕ೧೩೦೧ ಸಿದ್ಧಾರ್ಥಿ ಸಂವತ್ಸರವಾಗಿದ್ದು ಶುದ್ಧ ದಶಮಿ ಶುಕ್ರವಾರವು ಕ್ರಿ.ಶ. ೧೩೭೯ರ ಜೂನ್ ೧೯ ಶುಕ್ರವಾರಕ್ಕೆ ಸರಿಹೊಂದುತ್ತದೆ.

ಮೂರನೆಯದಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕಿನ ಬಾಣಸವಾಡಿ ಗ್ರಾಮದ ಒಂದು ಶಾಸನವನ್ನು ಗಮನಿಸೋಣ. ಆ ಶಾಸನದ ಪಾಠ ಈ ಕೆಳಗಿನಂತಿದೆ.

೧. ಸ್ವಸ್ತಿ ಶ್ರೀ ಕಲಿಯುಗ ವರುಸಂ ೪೪೪೨ ಯದ.....

೨. .....೧೨೬೩ ವಿಕ್ರಮ ಸಂವತ್ಸರದ ....

೩. ಣ ಸಂವತ್ಸರದ ಆಶ್ವಯುಜ ಶು ೧೦ ಮ॥ ಶ್ರೀಮತು

೪. ಮಹಾಮಂಡಳೇಶ್ವರ ಅರಿರಾಯ ವಿಭಾ

೫. ಡ ಭಾಸೆಗೆ ತಪ್ಪುವರಾಯರ ಗಂಡ ಚುಸ್ಸಮು

೬. ದ್ರಾಧಿಪತಿ ಶ್ರೀ ವೀರ ಹರಿಯಪ್ಪವೊಡಯರುಪ್ರ

೭. ಥುವೀ ರಾಜ್ಯಂಗೆ ಯುವಲ್ಲಿ ಶ್ರೀ ಮನುಮಹಾ

೮. ಸಾಮಂತಾಧಿಪತಿ ನರಲೋಕಗಂಡ ಮಯಿಲೆ

೯. ಯ ನಾಯ್ಕರು ಕುಕ್ಕಲ ನಾಡನು ಆಳುತಿರ

೧೦. ಲು ಶ್ರೀಮನು ಮಹಾ ಕುಕ್ಕಲನಾಡ

೧೧ .... ಲಿ ಹೊನ್ನು, ಎಂಬ ಪಾಠವನ್ನು ರೈಸ್ ಅವರು ನೀಡಿದ್ದಾರೆ.[14]

ಈ ಶಾಸನದ ಕಾಲ ಕ್ರಿ.ಶ. ೧೩೪೧ ಎಂದು ರೈಸ್ ಅವರು ಅಭಿಪ್ರಾಯ

ಪಟ್ಟಿದ್ದಾರೆ.[15] ಡಾ.ವಸುಂಧರಾ ಫಿಲಿಯೋಜಾ ಅವರು ಈ ಶಾಸನ ಪಾಠವನ್ನು 'ಸ್ವಸ್ತಿ ಶ್ರೀ ಕಲಿಯುಗ ವರುಸಂ ೪೪೪೨ ಯಾದ ೧೨೬೩ನೆಯ ವಿಕ್ರಮ ಸಂವತ್ಸರದ (ವೃಷ?) ೫ ಸಂವತ್ಸರ ಆಶ್ವಯುಜ ಶು೧೦ ಮಂಗಳವಾರ' ಎಂಬ ಪಾಠವನ್ನು ಕೊಟ್ಟಿದ್ದು ಕ್ರಿ.ಶ. ೧೩೪೨ರ ಸೆಪ್ಟೆಂಬರ್ ೧೦ ರದ್ದೆಂದು ಅಭಿಪ್ರಾಯ ಪಟ್ಟಿದ್ದಾರೆ.

ನಾನು ಸ್ವತಃ ಈ ಶಾಸನದ ಪಡಿಯಚ್ಚು ಹಾಗೂ ಛಾಯ ಚಿತ್ರವನ್ನು ತೆಗೆದು ಕೊಂಡು ಹೊಸದಾಗಿ ಶಾಸನ ಪಾಠವನ್ನು ಸಿದ್ಧಪಡಿಸಿದೆ. ಶಾಸನದ ಹೊಸಪಾಠ ಈ ಕೆಳಗಿನಂತಿದೆ.

೧. ಸ್ವಸ್ತಿ ಶ್ರಿ ಕಲಿಯುಗ ವರುಸಂ ೪೪೪೭ ಯದ....

೨. ......೧೨೬೩ ವಿಕ್ರಮ ಸಂವತ್ಸರದ ....

೩. ೫ ಸಂತ್ಸವರದ ಆಶ್ವಯುಜ ಕು ೧೦ ಮ|| ಶ್ರಿಮತು

ಎಂಬ ಪಾಠ ದೊರೆಯಿತು. ಈ ಶಾಸನ ಪಾಠದಲ್ಲಿ ಕೊಟ್ಟಿರುವ ಕಾಲದ ವಿವರಗಳು ಕ್ರಿ.ಶ. ೧೩೪೫ನೆಯ ಇಸವಿ ತಾರಣ ಸಂವತ್ಸವರದ ಸೆಪ್ಟಂಬರ್ ೨೭ ಮಂಗಳವಾರಕ್ಕೆ ಸರಿಹೊಂದುತ್ತದೆ. ಈ ಶಾಸನದಲ್ಲಿ ಕಲಿಯುಗ ಶಕೆ ಶಾಲಿವಾಹನ ಶಕೆ ಹಾಗೂ ವಿಕ್ರಮ ಶಕೆ ಈ ಮೂರು ಶಕೆಗಳನ್ನು ನೀಡಿರುವುದೊಂದು ವಿಶೇಷ ಅಂಶ.

ನಾಲ್ಕನೆಯದಾಗಿ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ತೊರನಹಳ್ಳಿಯ ಒಂದು ಶಾಸನವನ್ನು ಗಮನಿಸೋಣ.

೧. ಸ್ವಸ್ತಿ ಜಯಭ್ಯುದಯ ಷಕವ

೨. ರುಷಂಗಳು ನಾಲ್ಕು ಸಾವಿರ

೩. ದನಾನೂ ಱ ನಾಲ್ವತ್ತು ನಾಲ್ಕನೆ

೪. ಯಲು ನಡವರ್ತ್ತಮಾನವ್ಯ

೫. ವಿಹಾರಿಕ ವ್ಯಯ ಸಂತ್ಸವರ

೬. ರದ ಕಾರ್ತ್ತಿಕ ಸು| ಆರ

೭. ಭ್ಯವಾಗಿ ಶ್ರೀಮನ್ಮಹಾರಾ

೮. ಜಾಧಿರಾಜರಾಜಪರ

೯. ಮೇಸ್ವರ ಶ್ರೀವೀರಪ್ರತಾಪ

೧೦. ಬ್ಖುರಾಯರ ಕುಮಾರ ಪ್ರತಾ

೧೧. ಪ ಹರಿಹರರಾಯರಯನಿರೂ

೧೨. ಪದಿಂ ಪ್ರಧಾನಯಲರಸ ೧೭

ಇನ್ನು ೧೫ ಸಾಲುಗಳು ಇವೆ.

ಈ ಶಾಸನದಲ್ಲಿರುವ ವಿವರದಂತೆ ಕಲಿಯುಗ ವರುಷ ೪೪೪೪ ಅಂದರೆ ಕ್ರಿ.ಶ. ೧೩೪೨ ಎಂದಾಗುತ್ತದೆ. ಆದರೆ ೧೩೪೨ರಲ್ಲಿ ವ್ಯಯ ಸಂವತ್ಸರ ಬರುವುದಿಲ್ಲ. ವಿಷು ಸಂವತ್ಸರ ಬಂದಿದೆ. ಕ್ರಿ.ಸ. ೧೩೪೭ರಲ್ಲಿ ವ್ಯಯ ಸಂವತ್ಸರ ಬಂದಿದೆ.

ಆದರೆ ೧೩೪೭ರಲ್ಲಿ ೧ನೇ ಹರಿಹರರಾಯನೇ ಅರಸನಾಗಿದ್ದನು. ಇಮ್ಮಡಿ ಹರಿಹರರಾಯನು ೧೩೭೭ರಲ್ಲಿ ಪಟ್ಟಕ್ಕೆ ಬಂದ ವಿಷಯ ಸರ್ವವಿದಿತ. ಪ್ರಸ್ತುತ ಶಾಸನದಲ್ಲಿ ಬುಕ್ಕರಾಯನ ಕುಮಾರ ಇಮ್ಮಡಿ ಹರಿಹರನು ರಾಜ್ಯವಾಳುತ್ತಿದ್ದ ವಿಷಯ ಅತ್ಯಂತ ಸ್ಪಷ್ಟವಾಗಿ ತಿಳಿದು ಬರುತ್ತದೆ. ಹಾಗಾದರೆ ಈ ಶಾಸನದ ಕಾಲ ಯಾವುದು? ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಬಿ.ಎಲ್.ರೈಸ್ ಅವರು ಶಾಸನೋಕ್ತಕಾಲ ತಪ್ಪಾಗಿದೆಯೆಂದು ಹೇಳಿ ಈ ಶಾಸನವು ಕ್ರಿ.ಶ. ೧೪೦೬ರ ಕಾಲದ್ದೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[18] ಆದರೆ ೧೪೦೬ರಲ್ಲಿ ಇಮ್ಮಡಿ ಹರಿಹರನು ಬದುಕಿರಲಿಲ್ಲ. ಆತನು ತಾರಣ ಸಂವತ್ಸರದ ಭಾದ್ರಪದ ಬಹುಳ ದಶಮಿ ಸೋಮವಾರ ಅಂದರೆ ಕ್ರಿ.ಶ. ೧೪೦೪ರ ಆಗಸ್ಟ್ ೩೦ ರಂದು ಮರಣಿಸಿದನೆಂದು ಶ್ರವಣ ಬೆಳಗೊಳದ ಒಂದು ಶಾಸನದಿಂದ ತಿಳಿದು ಬರುತ್ತದೆ.[19] ಆದ್ದರಿಂದ ಈ ಶಾಸನದ ಕಾಲ ಕ್ರಿ.ಶ. ೧೪೦೬ ಅಲ್ಲ ಎಂಬುದು ಖಚಿತವಾಗುತ್ತದೆ.

ಈ ಶಾಸನವು ಕಲಿಯುಗ ವರುಷ ನಾಲ್ಕು ಸಾವಿರದ ಐದುನೂರಾ ನಾಲ್ಕನೆಯ ವರ್ಷ ಅಂದರೆ ಕ್ರಿ.ಶ. ೧೪೦೨ರಲ್ಲಿ ರಚಿತವಾಗಿರ ಬಹುದೆಂದು ತೋರುತ್ತದೆ. ಆಗ ಇಮ್ಮಡಿ ಹರಿಹರನು ಇನ್ನೂ ಚಕ್ರವರ್ತಿಯಾಗಿದ್ದನು. ಆತನ ಹಲವಾರು ಶಾಸನಗಳು ಕೋಲಾರ ಜಿಲ್ಲೆಯಲ್ಲಿ ದೊರೆಯುತ್ತವೆ. ಪ್ರಾಯಶಃ ಕಂಡರಣೆಗಾರನ ಕಣ್ತಪ್ಪಿನಿಂದ ಶಾಸನದ ಕಾಲವು 'ನಾಲ್ಕು ಸಾವಿರದ ಐದುನೂರಾ ನಾಲ್ಕು ಎಂದು ಬರೆಯುವಲ್ಲಿ ನಾಲ್ಕ ಸಾವಿರದ ನಾಲ್ಕು ನೂರಾ ನಲ್ವತ್ತನಾಲ್ಕು ಎಂಬುದಾಗಿ ಕಂಡರಣೆಗಾರನು ರಚಿಸಿರ ಬಹುದೆಂದು ತೋರುತ್ತದೆ.

ಒಟ್ಟಿನಲ್ಲಿ ಇಂತಹ ಸಮಸ್ಯಾತ್ಮಕ ಶಾಸನಗಳನ್ನು ಆಧರಿಸಿ ಇತಿಹಾಸ ರಚಿಸಬೇಕಾದರೆ ಪೂರಕವಾದ ಇತರ ಆಂತರಿಕ ಹಾಗೂ ಬಾಹ್ಯ ಆಧಾರಗಳನ್ನು ಗಮನಿಸುವುದು ತೀರಾ ಅನಿವಾರ್ಯವೆಂದು ಹೇಳಬಹುದು.

ಐದನೆಯದಾಗಿ ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಆನೆಗೊಂದಿಯ ಒಂದು ಶಾಸನವನ್ನು ಗಮನಿಸೋಣ. ಆ ಶಿಲಾ ಶಾಸನದಲ್ಲಿ 'ಬುಕ್ಕರಾಯನ ಮಗನಾದ ಹರಿಹರನ ದಂಡನಾಯಕನಾದ ಬೈರಚಂಡನಾಯಕನ ಮಗ ಇರುಗಪ್ಪನು ಜೈನ ಬಸದಿಯೊಂದನ್ನು ನಿರ್ಮಿಸಿದಾಗ ಬೈಚಪ್ಪದಂಡನಾಯಕನು ನೀಡಿದ ದಾನದ ವಿವರಗಳಿವೆ'.[20] ಈ ಶಾಸನದ ಕಾಲ ಚಿತ್ರ ಭಾನು ಸಂವತ್ಸರ, ವೈಶಾಖ ಶುದ್ಧ ೩ ಸೋಮವಾರ; ಇದು ಸುಮಾರು ಕ್ರಿ.ಶ. ೧೩೪೨ರ ಏಪ್ರಿಲ್ ೮ ಸೋಮವಾರಕ್ಕೆ ಸರಿಹೊಂದುತ್ತದೆ ಎಂದು ಆ ಶಾಸನದ ಸಂಪಾದಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[21]

ಆದರೆ ಈ ಶಾಸನದ ಕಾಲ ಕ್ರಿ.ಶ. ೧೪೦೨. ಏಕೆಂದರೆ ಇಮ್ಮಡಿ ಹರಿಹರ ಅರಸನಾದದ್ದು ಕ್ರಿ.ಶ. ೧೩೭೭ರಲ್ಲಿ ಆದ್ದರಿಂದ ಬುಕ್ಕರಾಯನ ಪುತ್ರನಾದ ಇಮ್ಮಡಿ ಹರಿಹರನ ಆಳ್ವಿಕೆಯ ಕಾಲದಲ್ಲಿ ಈ ಶಾಸನ ಹಾಕಿಸಿರುವುದರಿಂದ ಇದು ಕ್ರಿ.ಶ. ೧೩೭೭ರ ನಂತರದ ಕಾಲದ್ದೆಂಬುದು ಖಚಿತವಾಗುತ್ತದೆ. ಆದ್ದರಿಂದ ಪ್ರಸ್ತುತ ಸಂಪುಟದ ಸಂಪಾದಕರು ಸೂಚಿಸಿರುವ ಕಾಲ ಕ್ರಿ.ಶ. ೧೩೪೨ ತಪ್ಪೆಂದು ಸುಲಭವಾಗಿಯೇ ತಿಳಿಯುತ್ತದೆ.

ಪ್ರಸ್ತುತ ಶಾಸನೋಕ್ತ ಚಿತ್ರಭಾನು ಸಂವತ್ಸರ ಕ್ರಿ.ಶ.೧೩೪೨ರ ನಂತರ ೧೪೦೨ರಲ್ಲಿ ಬರುತ್ತದೆ. ಕ್ರಿ.ಶ.೧೪೦೪ರವರೆಗೆ ಇಮ್ಮಡಿ ಹರಿಹರನು ರಾಜ್ಯಭಾರ ಮಾಡುತ್ತಿದ್ದ ಎಂಬುದು ಎಲ್ಲರಿಗೂ ತಿಳಿದ ವಿಷಯ. ಇಮ್ಮಡಿ ಹರಿಹರನ ಸೇನಾಧಿಪತಿಯಾಗಿದ್ದ ವರು ಬೈಚಪ್ಪ ದಂಡನಾಯಕನು ಹಾಗೂ ಆತನ ಪುತ್ರ ಇರುಗಪ್ಪ ದಂಡನಾಯಕ.

ಇರುಗಪ್ಪ ದಂಡನಾಯಕನು ಆನೆಗೊಂದಿಯಲ್ಲೇ ಅಲ್ಲದೆ ಹಂಪಿಯಲ್ಲಿ ಹಾಗೂ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಗುತ್ತಿಯಲ್ಲಿ ಜೈನ ಬಸದಿಗಳನ್ನು ಕಟ್ಟಿಸಿದ್ದ ವಿಷಯ ಶಾಸನಗಳಲ್ಲಿ ಉಲ್ಲೇಖಿತವಾಗಿರುವುದು ಗಮನಾರ್ಹ ಅಂಶ.

ಹಂಪಿ ಶಾಸನ ಸಂಪುಟದಲ್ಲಿ ಪ್ರಕಟವಾಗಿರುವ ೩೫೦ನೇ ಸಂಖ್ಯೆಯ ಶಾಸನದಲ್ಲಿ ಬೈಚದಂಡನಾಯಕನ ಪುತ್ರನಾದ ಇರುಗಪ್ಪ ದಂಡನಾಯಕನು ಶಕ ವರ್ಷ ೧೩೦೭ ಕ್ರೋಧನ ಸಂವತ್ಸರದ ಫಾಲ್ಗುಣ ಬಹುಳ ೩ ಶುಕ್ರವಾರ ದಂದು ಅಂದರೆ ಕ್ರಿ.ಶ.೧೩೮೬ ಫೆಬ್ರುವರಿ ೨೬ರಂದು ವಿಜಯನಗರದಲ್ಲಿ ಕುಂಥು ಜಿನಾಲಯವನ್ನು ನಿರ್ಮಿಸಿದ ವಿಷಯ ದಾಖಲಾಗಿದೆ. ಆನೆಗೊಂದಿಯ ಶಾಸನವು ಶೇಕಡಾ ೯೫ ರಷ್ಟು ಹಂಪಿ ಶಾಸನದ ನಕಲೇ ಆಗಿದೆ. ಆದರೆ ಆನೆಗೊಂದಿಯ ಶಾಸನವು ಹಂಪಿ ಶಾಸನವನ್ನು ಹಾಕಿಸಿದ ನಂತರ ೧೬ ವರ್ಷಗಳ ಬಳಿಕ ಹಾಕಸಲಾಗಿದೆ.

ಆನೆಗೊಂದಿ ಶಾಸನದ ಸಂಪಾದಕರು ಹೇಳಿರುವಂತೆ ಆ ಶಾಸನದಲ್ಲಿ ಇರುಗಪ್ಪನು ಬಸದಿ ನಿರ್ಮಿಸಿದಾಗ ಆತನ ತಂದೆ ಬೈಚಪ್ಪನು ದಾನ ನೀಡಿದ ವಿವರಗಳಿಲ್ಲ. ಬೈಚಪ್ಪನ ಮರಣಾನಂತರ ಆತನ ಪುತ್ರ ಇರುಗಪ್ಪನು ತನ್ನ ತಂದೆ ನೆನಪಿಗೆ ಬಸದಿಯನ್ನು ನಿರ್ಮಿಸಿದ ವಿವರಗಳು ಆ ಶಾಸನದಲ್ಲಿ ದಾಖಲಾಗಿವೆ.

ಈ ಎಲ್ಲಾ ಆಧಾರಗಳಿಂದ ಆನೆಗೊಂದಿ ಶಾಸನದ ಕಾಲ ಕ್ರಿ.ಶ.೧೩೪೨ ಅಲ್ಲ. ಕ್ರಿ.ಶ. ೧೪೦೨ ಎಂಬುದು ಖಚಿತವಾಗುತ್ತದೆ.

ಪ್ರಸ್ತುತ ಸಂಪ್ರಬಂಧದಲ್ಲಿ ಐದು ಶಾಸನಗಳ ಪುನರ್ ಪರಿಶೀಲನೆಯಿಂದ ಆ ಶಾಸನಗಳ ಸಂಪಾದಕರು ಹಾಗೂ ಮತ್ತಿತರ ವಿದ್ವಾಂಸರು ಆಯಾ ಶಾಸನಗಳ ಕಾಲವನ್ನು ಗುರುತಿಸಿದುದಕ್ಕಿಂತ ಬೇರೆಯದೇ ಆದ ಕಾಲಕ್ಕೆ ಆ ಶಾಸನಗಳು ಸೇರಿದುವೆಂದು ಆಧಾರ ಸಹಿತ ನಿರೂಪಿಸಲಾಗಿದೆ.

ಶಾಸನೋಕ್ತಕಾಲ ಎಫಿಮರೀಸ್ ಕಾಲದೊಂದಿಗೆ ಸರಿಯಾಗಿ ಹೊಂದಾಣಿಕೆಯಾದ ಮಾತ್ರಕ್ಕೆ ಆ ಶಾಸನದ ಕಾಲವನ್ನು ಸಂಪೂರ್ಣವಾಗಿ ನಂಬಲು ಸಾಧ್ಯವಿಲ್ಲ. ಆ ಶಾಸನೋಕ್ತ ಐತಿಹಾಸಿಕ ವ್ಯಕ್ತಿಗಳ ಕಾಲಮಾನ ಮತ್ತಿತರ ಆಂತರಿಕ ಹಾಗೂ ಬಾಹ್ಯ ಆಧಾರಗಳೊಂದಿಗೆ ತೌಲನಿಕವಾಗಿ ವಿಮರ್ಶಿಸಿ ಕಾಲ ನಿರ್ಣಯ ಮಾಡುವ ಅವಶ್ಯಕತೆ ಯನ್ನು ನಿರೂಪಿಸಲಾಗಿದೆ.


ಗ್ರಂಥ ಋಣ

1. EC X ಕೊಲಾರ ೨೦೫ ಕನ್ನಡ ಆವೃತ್ತಿ.ಪುಟ-೪೭ (ಸಂ) ಬಿ.ಎಲ್.ರೈಸ್.
2. (ಸಂ) ಬಿ.ಎಲ್.ರೈಸ್ : EC X ಕೋಲಾರ ೨೦೫ ಇಂಗ್ಲೀಷ್ ಆವೃತ್ತಿ ಪುಟ-೬೨.
3. ಡಾ. ವಸುಂಧರಾ ಫಿಲೊಯೋಜಾ : ವಿಜಯನಗರ ಸಾಮ್ರಾಜ್ಯ ಸ್ಥಾಪನೆ. ಪುಟ-೧೩.
4. ಪೂರ್ವೋಕ್ತ : ಪುಟ-೧೩.
5. (ಸಂ) ಬಿ.ಎಲ್.ರೈಸ್ : EC X ಕೋಲಾರ ೨೦೫, ಕನ್ನಡ ಆವೃತ್ತಿ. ಪುಟ-೪೭.
6. (ಸಂ) ಕೆ.ಆರ್.ರಾಮಕೃಷ್ಣ, ಡಾ.ಆರ್.ಗೋಪಾಲ್ : ವಿಜಯನಗರ ಅಧ್ಯಯನ.ಸಂ-೮, ಪುಟ- ೮೯.
7. ಡಾ.ವಸುಂಧರಾ ಫಿಲೊಯೋಜಾ: ಪೂರ್ವೋಕ್ತ, ಪುಟ-೧೪.
೮ (ಸಂ) ಬಿ.ಎಲ್.ರೈಸ್: ಕೋಲಾರ-೧೧೩. ಕನ್ನಡ ಆವೃತ್ತಿ. ಪುಟ-೨೬.
9. (ಸಂ) ಬಿ.ಎಲ್.ರೈಸ್: ಪೂರ್ವೋಕ್ತ. ಕೋಲಾರ ೧೫೦.ಪುಟ-೩೧.
10. (ಸಂ) ಬಿ.ಎಲ್. ರೈಸ್ ಚನ್ನಪಟ್ಟಣ-೧೭೬, ಜಾಲಮಂಗಲ., ಪುಟ-೩೪೭.
11. ಪೂರ್ವೋಕ್ತ: ಇಂಗ್ಲೀಷ್ ಆವೃತ್ತಿ ಪುಟ-೧೬೮.
12. ಸಂ ಕೆ.ಆರ್.ರಾಮಕೃಷ್ಣ ವಿಜಯನಗರ ಅಧ್ಯಯನ ಸಂ.೮, ಪುಟ-೮೭-೧೦೨., ಅಡಿಟಿಪ್ಪಣಿ೪೬.
13. ಡಾ.ಸೂರ್ಯನಾಥ ಕಾಮತ್: ಕರ್ನಾಟಕ ಸಂಕ್ಷಿಪ್ತ ಇತಿಹಾಸ., ಪುಟ-೧೫೪.
14. (ಸಂ) ಬಿ.ಎಲ್.ರೈಸ್: EC IXನೆಲಮಂಗಲ-೧೯, ಕನ್ನಡ ಆವೃತ್ತಿ., ಪುಟ-೬೧.
15. ಪೂರ್ವೋಕ್ತ : ಇಂಗ್ಲೀಷ್ ಆವೃತ್ತಿ., ಪುಟ-೩೩.
16. ಡಾ.ವಸುಂಧರಾ: ಫಿಲಿಯೋಜಾ ಪೂರ್ವೋಕ್ತ., ಪುಟ-೨೦.
17. (ಸಂ) ಬಿ.ಎಲ್. ರೈಸ್ : EC X ಮಾಲೂರು-೮೭., ಕನ್ನಡ ಆವೃತ್ತಿ., ಪುಟ-೧೭೧.
18. ಪೂರ್ವೋಕ್ತ : ಇಂಗ್ಲೀಷ್ ಆವೃತ್ತಿ., ಪುಟ-೧೭೫.
19. (ಸಂ) ಡಾ.ಬಾ.ರಾ.ಗೋಪಾಲ : EC 2. ಶ್ರವಣ ಬೆಳಗೋಳ ೪೪೬(೩೨೯) ಪುಟ-೨೭೩.
20. (ಸಂ) ಡಾ.ದೇವರಕೊಂಡಾ ರೆಡ್ಡಿ: ಕೊಪ್ಪಳ ಜಿಲ್ಲಾ ಶಾಸನ ಸಂಪುಟ., ಗಂಗಾವತಿ-೨೧.


ಆನೆಗೊಂದಿ ಪುಟ-೩೩೫.

21. ಪೂರ್ವೋಕ್ತ: ಪುಟ-೩೩೫.


22. (ಸಂ) ಡಾ.ದೇವರ ಕೊಂಡಾರೆಡ್ಡಿ: ಹಂಪಿ ಶಾಸನಗಳು., ಹಂಪಿ-೩೫೦., ಪುಟ-೨೫೪.




ವಾನರಾಸಿ ಶಾಸನ



ಜಾಲಮಂಗಲ ಶಾಸನ



ತೊರನಹಳ್ಳಿ ಶಾಸನ



ಬಾಣಸವಾಡಿ ಶಾಸನ

೩. ೧ನೆ ಹರಿಹರ ಮತ್ತು ವಿದ್ಯಾರಣ್ಯರ ತಾಮ್ರಶಾಸನ

ಡಾ.ಡಿ.ವಿ. ಪರಮಶಿವಮೂರ್ತಿ

ಕರ್ನಾಟಕದ ಚರಿತ್ರೆಯಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಮತ್ತು ಅದಕ್ಕೆ ಪ್ರೇರಣೆ ನೀಡಿದವರ ಬಗ್ಗೆ ನಡೆದಷ್ಟು ವಾದ-ವಿವಾದಗಳು ಮತ್ಯಾವ ರಾಜಮನೆತನದ ಬಗೆಗೂ ನಡೆದಿಲ್ಲ. ವಿಜಯನಗರ ಸ್ಥಾಪನೆಯ ಚರ್ಚೆಯಲ್ಲಿ ಐತಿಹಾಸಿಕ ವಿಷಯಗಳ ಜೊತೆಯಲ್ಲಿ ಧಾರ್ಮಿಕ ವಿಷಯಗಳೂ ಬೆಸೆದು ಕೊಂಡಿರುವುದರಿಂದ ಮತ್ತು ಅನೇಕ ಆಕರಗಳ ಕೊರತೆಯ ಕಾರಣದಿಂದ ಅನೇಕ ರೀತಿಯ ಅಭಿಪ್ರಾಯಗಳಿಗೆ ಅವಕಾಶ ವಾಗಿದೆ. ಈ ಕ್ಷಣವೂ ಇದರ ಬಗ್ಗೆ ವಾದ-ವಿವಾದ ಜೀವಂತವಾಗಿದೆ. ಈ ರೀತಿಯ ವಾದಗಳನ್ನು ಶಮನಮಾಡಲೋ ಅಥವಾ ಪ್ರೇರೇಪಿಸಲೋ ಎಂಬಂತೆ ಇತ್ತೀಚೆಗೆ ತಾಮ್ರಶಾಸನ ವೊಂದು ದೊರಕಿದ್ದು, ಅದು ವಿದ್ಯಾರಣ್ಯರ ಅವಧಿಯದ್ದು ಎಂಬುದೇ ವಿಶೇಷವಾಗಿದೆ.

ಲಿಂಗಸುಗೂರು ತಾಲೂಕಿನ ನವಲಿ ಬಹಳ ಪುರಾತನ ಗ್ರಾಮ. ಈ ಗ್ರಾಮದ ಜಡೆಯಶಂಕರಲಿಂಗ ದೇವಾಲಯ ಬಹಳ ವಿಶಿಷ್ಟವಾದ ಶಿವಲಿಂಗವನ್ನು ಹೊಂದಿದೆ. (ಈ ಬಗ್ಗೆ ಡಾ.ಅ.ಸುಂದರ ಅವರ ವಿವರವಾದ ಲೇಖನವೊಂದು ಪ್ರಕಟವಾಗಿದೆ.) ಈ ಗ್ರಾಮದ ಸಮೀಪದಲ್ಲೆ ಕೃಷ್ಣಾನದಿಯ ದಡದಲ್ಲಿದ್ದ ಮತ್ತೊಂದು ಗ್ರಾಮ ಹಾಲ್ಯಾವಟಗಿ. ಈ ಗ್ರಾಮದ ಕ್ಷೇತ್ರ ಪುರೋಹಿತರಾದ ಶ್ರೀ ದತ್ತಾತ್ರೇಯ ಶಿವರಾಮ ಪುರೋಹಿತರ ಮನೆಯಲ್ಲಿ ಮೂರು ತಾಮ್ರಶಾಸನಗಳು ಪತ್ತೆಯಾದವು. ದತ್ತಾತ್ರೇಯ ಶಿವರಾಮ ಪುರೋಹಿತರ ಕುತೂಹಲದ ಫಲವಾಗಿ ಆ ತಾಮ್ರಶಾಸನಗಳು ನನ್ನ ಕೈಸೇರಿದವು. ಅವನ್ನು ಈ ಕುಟುಂಬ ನೂರಾರು ವರ್ಷಗಳಿಂದ ಎಚ್ಚರಿಕೆಯಿಂದ ಕಾಪಾಡುತ್ತ ಮತ್ತು ಪೂಜಿಸುತ್ತ ಬಂದಿದೆ. ಈ ಮೂರು ತಾಮ್ರಶಾಸನಗಳಲ್ಲಿ ಮೊದಲನೆಯದು ಹೊಯ್ಸಳ ಇಮ್ಮಡಿ ಬಲ್ಲಾಳನ ಆಧಿಕಾರಾವಧಿಯ ಕ್ರಿ.ಶ. ೧೨೦೯ರ ಜೈನದಾನ ಶಾಸನ. ಇದು ಮೂರು ತಾಮ್ರದ ಹಲಗೆಗಳಿಂದ ಕೂಡಿದ್ದು, ೬೨ ಸಾಲುಗಳನ್ನು ಹೊಂದಿದ್ದ ಕನ್ನಡಲಿಪಿಯ ಶಾಸನವಾಗಿದೆ. ಎರಡನೆಯ ಶಾಸನವು ವಿಜಯನಗರದ ಅರಸ ಇಮ್ಮಡಿ ಹರಿಹರನ ಶಾಸನವಾಗಿದ್ದು ಕ್ರಿ.ಶ. ೧೩೯೭ರ ಅವಧಿಯದ್ದಾಗಿದೆ. ಇದು ಏಳು ಹಲಗೆಗಳಿಂದ ಕೂಡಿದ್ದು, ನಂದಿನಾಗರಿ ಲಿಪಿ, ಸಂಸ್ಕೃತ ಭಾಷೆಯಲ್ಲಿದೆ. ಮೂರನೆಯ ಶಾಸನವು ಪ್ರಸ್ತುತ ವಿವರಿಸುತ್ತಿರುವ ಶಾಸನವಾಗಿದ್ದು, ಒಂದನೇ ಹರಿಹರನ ಅವಧಿಯ ಕ್ರಿ.ಶ.೧೩೩೬ಕ್ಕೆ ಸೇರಿದ ಶಾಸನವಾಗಿದೆ.

ಮೂರು ತಾಮ್ರಪತ್ರಗಳಿಂದ ಕೂಡಿರುವ ಈ ಶಾಸನವು ೯.೩೦ ಇಂಚು ಉದ್ದ, ೫.೩೦ ಇಂಚು ಅಗಲವಿದ್ದು ಸಂಸ್ಕೃತ ಭಾಷೆ ಮತ್ತು ನಂದಿನಾಗರಿ ಲಿಪಿಯಲ್ಲಿದೆ. ಒಟ್ಟು ೧೨೬ ಸಾಲುಗಳಿರುವ ಈ ಶಾಸನವು ವಿಜಯನಗರ ಅರಸ ಒಂದನೇ ಹರಿಹರನ ಕಾಲದ್ದಾಗಿದೆ.

ಮೂರು ಪತ್ರಗಳಲ್ಲಿರುವ ಈ ಶಾಸನವು ಮೊದಲ ಹಾಗೂ ಕೊನೆಯ ಪತ್ರದ ಒಳ ಬದಿಗಳಲ್ಲಿ, ನಡುವಿನ ಪತ್ರದ ಎರಡೂ ಬದಿಗಳಲ್ಲಿ ಬರಹವಿದೆ. ಈ ಶಾಸನವು ಮಹತ್ವವಾದ ವಿಷಯವನ್ನೊಳಗೊಂಡಿದ್ದು ವಿಜಯನಗರ ಸಾಮ್ರಾಜ್ಯ ಸ್ಥಾಪನಾ ಕಾಲ ಮತ್ತು ಪ್ರೇರಕರಾದ ವಿದ್ಯಾರಣ್ಯರ ಬಗ್ಗೆ ಮತ್ತೊಮ್ಮೆ ಚರ್ಚಿಸಲು ಆಹ್ವಾನವಿತ್ತಿದೆ.

ಶಾಸನವು ಸಂಪ್ರದಾಯದಂತೆ ಗಣಪತಿ ಮತ್ತು ಶಿವನ ಸ್ತುತಿಯಿಂದ ಆರಂಭಗೊಂಡಿದ್ದು ೩೧ನೇ ಸಾಲಿನವರೆಗೂ ಸಂಪ್ರದಾಯಿಕ ವರ್ಣನೆಯಿಂದಲೇ ಕೂಡಿದೆ. ೩೨ನೇ ಸಾಲಿನಿಂದ ಸಂಗಮವಂಶದ ಮೂಲ ಮತ್ತು ವಂಶಾವಳಿಯನ್ನು ವರ್ಣಿಸುತ್ತಿದೆ. "ಬುಕ್ಕ ಮತ್ತು ಮಂಗಾಂಬಿಕೆಯರ ಮಗ ಸಂಗಮ; ಇವನ ಹೆಂಡತಿ ಮಾನಾಂಬಿಕೆ, ಇವರಿಗೆ ಹರಿಹರ, ಕಂಪ, ಬುಕ್ಕ, ಮಾದ ಮತ್ತು ಮುದ್ದ ಎಂಬ ಐದು ಜನ ಮಕ್ಕಳು. ಇವರಲ್ಲಿ ಹಿರಿಯವನಾದ ಹರಿಹರನು ಕುಂಜರಕೋಣಪುರದಲ್ಲಿ ಆಳುತ್ತಿರುತ್ತಾನೆ. (ಇದು ಆನೆಯಗೊಂದಿ). ಒಂದು ದಿವಸ ಬೇಟೆಯಾಡಲು ತುಂಗಭದ್ರ ನದಿಯನ್ನು ದಾಟಿ ದಕ್ಷಿಣ ದಿಕ್ಕಿನಲ್ಲಿರುವ ಅರಣ್ಯಕ್ಕೆ ತನ್ನ ಸೈನ್ಯ ಸಮೇತ ಬರುತ್ತಾನೆ. ಅಲ್ಲಿ ಉಗ್ರವಾದ ಬೇಟೆನಾಯಿಯನ್ನು ಒಂದು ಮೊಲವು ಹೆದರಿಸಿದ್ದನ್ನು ಕಂಡು ರಾಜನು ಆಶ್ಚರ್ಯಪಡುತ್ತಾನೆ. ಸಮೀಪದಲ್ಲಿದ್ದ ವಿರೂಪಾಕ್ಷ ಮತ್ತು ಪಂಪಾದೇವಿ ಯರ ಗುಡಿಗೆ ಬಂದಾಗ ಅಲ್ಲಿಯೇ ತಪಸ್ಸನ್ನು ಕೈಗೊಂಡಿದ್ದ ವಿದ್ಯಾರಣ್ಯಮುನಿಯನ್ನು ಕಾಣುವನು. ಶಾಸನವು ವಿದ್ಯಾರಣ್ಯರನ್ನು ತ್ರಿಕಾಲ ಜ್ಞಾನಿಗಳು, ಶಿವನ ಅವತಾರ ದಂತೆಯೂ ಇದ್ದ ಅವರನ್ನು ಈ ಅಶ್ಚರ್ಯದ ಘಟನೆಯ ಬಗ್ಗೆ ವಿಚಾರಿಸಲು ಅವರು ಆ ನೆಲದ ಮಹಿಮೆಯನ್ನು ಹೇಳಿ ಇಲ್ಲಿ ವಿದ್ಯಾ ಎನ್ನುವ ನಗರವನ್ನು ಸ್ಥಾಪಿಸು, ಅದು ಅಲಕಾನಗರದಂತೆ ಸುಂದರವಾಗಿರಲಿ, ದ್ವಾರಕೆಯಂತೆ ಒಂಬತ್ತು ಬಾಗಿಲು ಗಳನ್ನುಳ್ಳ ಕೋಟೆಯನ್ನು ನಿರ್ಮಿಸು, ಈ ರಾಜ್ಯದ ಚಕ್ರವರ್ತಿಯಾಗಿ ಇಂದ್ರನಂತೆ ಮತ್ತು ನಾಗರಾಜನಂತೆ ಕೀರ್ತಿವಂತನಾಗಿ ರಾಜ್ಯವನ್ನು ಪಾಲಿಸು ಎಂದು ಹೇಳುವರು. ಅವರ ಅಭಿಪ್ರಾಯದಂತೆ ಹರಿಹರನು ಅಲ್ಲಿ ರಾಜ್ಯವೊಂದನ್ನು ಸ್ಥಾಪನೆಮಾಡಿ ಅದಕ್ಕೆ ವಿದ್ಯಾ ಎಂದು ಹೆಸರಿಡುತ್ತಾನೆ. ಇದರ ಸವಿನೆನಪಿಗಾಗಿ "…. ಅಷ್ಟ ಪಂಚೇಷು ಯುಗಳೈಕ ಸಂಖ್ಯೆಯಾ ಸಂಯುತೇ ಶಕ ನೃಪಸ್ಯ ವತ್ಸರೇ ಧಾತೃ ಮಾದವವಳಕ್ಷ ಸಪ್ತಮೀ ಸ್ಪಷ್ಟಿ ಸತ್ಯನಘಲಗ್ನ ತಾರಕೇ….." ಅಂದರೆ ಶಾಲಿವಾಹನ ಶಕೆ ೧೨೫೮, ಧಾತೃನಾಮ ಸಂವತ್ಸರ, ವೈಶಾಖ ಮಾಸದ ಏಳನೇ ದಿವಸದಂದು, ಅಂದರೆ ಕ್ರಿ.ಶ. ೧೩೩೬, ಏಪ್ರಿಲ್ ೧೮ ರಂದು ವಿರೂಪಾಕ್ಷ-ಪಂಪಾದೇವಿಯವರ ಸಮ್ಮುಖದಲ್ಲಿ ಹರಿಹರಪುರ ಅಗ್ರಹಾರವನ್ನು ಸ್ಥಾಪಿಸಿ ಕೌಶಿಕಗೋತ್ರದ ವಿಷ್ಣುಭಟ್ಟನ ಮಗ ತಿಪ್ಪ

ಭಟ್ಟ, ಇವನ ಮಗ ಚೋಭಲಾಯನಿಗೂ ಮತ್ತುಭಾರದ್ವಾಜ ಗೋತ್ರದವನಾದ ಆರಗಮಲ್ಲಪ್ಪ, ಇವನ ಮಗ ಪದ್ಮಯ್ಯನಿಗೂ ಹಸ್ತಿನಾವತಿ ರಾಜ್ಯದ, ಕೆಲವಲೀ ಸ್ಥಳದ ಕೊಪಣಾಚಲ ಸೀಮೆಯ ಕಾತರಿಕೆ ಸ್ಥಳದ ಕೆಲವೊಂದು ಭೂಮಿಯನ್ನು ದಾನವಾಗಿ ನೀಡಲಾಗಿದೆ. ದಾನ ಪಡೆದವರ ವಿವರ ಸ್ಪಷ್ಟವಿಲ್ಲ. ಭಾಷಾ ಅಶುದ್ಧಿಯಿಂದ ಅನೇಕ ಗೊಂದಲಗಳಿವೆ. ೧೦೬ನೇ ಸಾಲಿನಿಂದ ಕನ್ನಡದಲ್ಲಿ ದಾನದ ವಿವರ ಮತ್ತು ಸೀಮೆಯ ವಿವರವನ್ನು ನೀಡಿದ್ದು ೧೧೬ನೇ ಸಾಲಿನಿಂದ ಸಾಂಪ್ರದಾಯಿಕವಾದ ಶಾಪಾಶಯವಿದೆ.

ಈ ಮೊದಲೆ ತಿಳಿಸಿದಂತೆ ಈ ಶಾಸನ ಅನೇಕ ರೀತಿಯ ಚರ್ಚೆಗೆ ಪುನರ್ಜನ್ಮವನ್ನು ನೀಡಿದೆ. ವಿಜಯನಗರ ಸ್ಥಾಪನೆಯ ವಿಷಯವನ್ನು ಖಚಿತವಾಗಿ ತಿಳಿಸುವ ಯಾವ ಆಧಾರಗಳು ಇದುವರೆಗೂ ಲಭ್ಯವಾಗಿಲ್ಲವೆಂದು ಅನೇಕ ವಿದ್ವಾಂಸರು ತಿರ್ಮಾನಿಸಿರುವರು. ಅಲ್ಲದೆ ಸಿಕ್ಕಿರುವ ಕೆಲವೇ ಆಕರಗಳನ್ನು ಅದು ಕೃತಕ ಅಥವಾ ನಂಬಲಸಾಧ್ಯವೆಂದು ತಿರಸ್ಕರಿಸಿರುವರು. ಕೆಲವರಂತೂ ಪೂರ್ವಾಗ್ರಹ ಪೀಡಿತರಾಗಿ ಒಂದೆರೆಡು ಆಧಾರಗಳನ್ನು ಬಳಸಿಯೇ ಪುಟಗಟ್ಟಳೆ ಬರಹಗಳನ್ನು ಬರೆದಿರುವರು. ಆದರೆ ಯಾವುದೇ ಖಚಿತವಾದ ತೀರ್ಮಾನಕ್ಕೆ ಬರಲಾಗಲಿಲ್ಲ. ಕೆಲವರು ಅರೆಮನಸ್ಸಿನಿಂದ ಕೆಲವು ತೀರ್ಮಾನಗಳಿಗೆ ಬಂದರು.

ಈವರೆಗಿನ ಸಮಸ್ಯೆಗಳು ಈ ಕೆಳಕಂಡಂತಿವೆ.

೧. ವಿಜಯನಗರ ಸ್ಥಾಪಕರಾದ ಹಕ್ಕ-ಬುಕ್ಕರ ಮೂಲ.

೨. ಹಕ್ಕ-ಬುಕ್ಕರಿಗೆ ವಿದ್ಯಾರಣ್ಯರು ಪ್ರೋತ್ಸಾಹ ನೀಡಿದ ವಿಷಯ.

೩. ವಿದ್ಯಾರಣ್ಯರು ಹಕ್ಕ-ಬುಕ್ಕರಿಗೆ ಹೊನ್ನಿನ ಮಳೆ ಸುರಿಸಿದ ವಿಷಯ.

೪. ವಿದ್ಯಾರಣ್ಯರ ಮೂಲ-ಅವರ ಇತಿಹಾಸ.

೫. ಮಾದವ-ವಿದ್ಯಾರಣ್ಯರು ಒಬ್ಬರೇ ಅಥವಾ ಭಿನ್ನರೆ ?

೬. ವಿದ್ಯಾರಣ್ಯರೇ ಕ್ರಿಯಾಶಕ್ತಿಯಾಗಿರುವರೆ ? ಅಥವಾ ಕ್ರಿಯಾಶಕ್ತಿಯೇ ವಿದ್ಯಾರಣ್ಯರಾಗಿರುವರೇ ?

೭. ಶೃಂಗೇರಿ ಪೀಠಾಧಿಕಾರಿಗಳಾಗಿ ವಿದ್ಯಾರಣ್ಯರ ಚರಿತ್ರೆ

೮. ಶೃಂಗೇರಿ ಮಠದ ಮೂಲಗುರುಗಳು ಯಾರು ?

೯. ವಿದ್ಯಾರಣ್ಯ ಉಲ್ಲೇಖಿತ ಶಾಸನಗಳು ಕೃತಕವೇ ? ಅಥವಾ ನೈಜವೇ ?

೧೦. ವಿಜಯನಗರ ಸಾಮ್ರಾಜ್ಯ ಕ್ರಿ.ಶ. ೧೩೩೬ ರಲ್ಲಿ ಸ್ಥಾಪನೆಯಾಯಿತೆ ? ಅಥವಾ ಇಲ್ಲವೆ ?

ಹೀಗೆ ಇನ್ನೂ ಅನೇಕ ರೀತಿಯ ಚರ್ಚೆಗಳು ಪ್ರಚಲಿತದಲ್ಲಿವೆ .

ಈವರೆಗೆ ಮೊದಲನೆ ಹರಿಹರನ ಅವಧಿಯ ಮತ್ತು ವಿದ್ಯಾರಣ್ಯರನ್ನು ಹೆಸರಿಸುವ

ಕ್ರಿ.ಶ.೧೩೩೬ರ ಎರಡು ಶಾಸನಗಳು ಪ್ರಕಟವಾಗಿವೆ. ಅದರಲ್ಲಿ ಮೊದಲು ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲೂಕಿನ ಬೆಸ್ತರಹಳ್ಳಿ ಗ್ರಾಮದ ಶಾಸನ ಶ್ರೀ ಬಿ.ಎಲ್.ರೈಸ್ ರವರಿಂದ ಪ್ರಕಟವಾಯಿತು. ಇದರ ಭಾಷೆ ಸಂಸ್ಕೃತ-ಲಿಪಿ ಕನ್ನಡ. ಆದರೆ ಇದು ಮೂಲ ತಾಮ್ರಶಾಸನ ರೂಪದಲ್ಲಿ ದೊರೆಯದೆ ಅದರಿಂದ ಪ್ರತಿಮಾಡಿದ ಪಾಠ ಕಾಗದದ ರೂಪದಲ್ಲಿ ದೊರೆಯಿತು. ಈ ಕಾರಣದಿಂದ ಈ ಶಾಸನವನ್ನು ವಿದ್ವಾಂಸರು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ. ಸ್ವತಃ ಬಿ.ಎಲ್.ರೈಸ್ ಅವರೇ "…. From its date this inscription would be of special interest, if authentic, but it can not be depended on, no original being forthcoming..." ಎಂದು ಹೇಳಿರುವರು.

ಮತ್ತೊಂದು ಶಾಸನ ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯ ಕಾಪಲೂರು ಗ್ರಾಮದಲ್ಲಿ ದೊರಕಿದೆ. ಇದರ ಕಾಲವೂ ಸಹ ಕ್ರಿ.ಶ. ೧೩೩೬ ಆಗಿದೆ. ಇದರ ಲಿಪಿ ನಂದಿನಾಗರಿಯಾಗಿದ್ದು, ಸಂಸ್ಕೃತ ಮತ್ತು ತೆಲುಗು ಭಾಷೆಯಲ್ಲಿ ರಚನೆಯಾಗಿದೆ. ಇದು ಈಗ ಮದ್ರಾಸ್ ವಸ್ತುಸಂಗ್ರಹಾಲಯದಲ್ಲಿದೆ.

ಈಗ ನಮಗೆ ದೊರಕಿರುವ ಪ್ರಸ್ತುತ ಶಾಸನವು ಕ್ರಿ.ಶ.೧೩೩೬ರ ಅವಧಿಯ ಮೂರನೇ ಶಾಸನವಾಗಿದೆ. ಇದು ಸಂಸ್ಕೃತ ಭಾಷೆಯಲ್ಲಿದ್ದು, ನಂದಿನಾಗರಿ ಲಿಪಿಯಲ್ಲಿದೆ. ಮೇಲಿನ ಮೂರೂ ತಾಮ್ರಶಾಸನಗಳ ವಿಷಯ ಒಂದೇ ಆಗಿದ್ದು, ದಾನದ ವಿಷಯಮಾತ್ರ ಬೇರೆ ಬೇರೆಯಾಗಿದೆ. ಮೂರು ಶಾಸನಗಳೂ ಕ್ರಿ.ಶ.೧೩೩೬, ಏಪ್ರಿಲ್ ೧೮ರ ಕಾಲಾವಧಿಯದ್ದೇ ಆಗಿವೆ. ಎಲ್ಲ ಶಾಸನಗಳೂ ಗಣಾಧಿಪತಯೇ ನಮಃ ಎಂದೇ ಪ್ರಾರಂಭವಾಗಿವೆ. ಕಾಪಲೂರು ಮತ್ತು ಹಾಲ್ಕವಟಗಿ ಶಾಸನವು..." ನಮಸ್ತುಂಗ ಶ್ಲೋಕದಿಂದ ಮುಂದುವರಿದರೆ ಬೆಸ್ತರಹಳ್ಳಿ ಶಾಸನವು ಆಂಮ್ನಾಯ ಸಂದರ್ಭ ಕಳಾಕವೀಂದ್ರ..." ಎಂಬ ಶ್ಲೋಕದಿಂದ ಮುಂದುವರಿದು ನಂತರ ನಮಸ್ತುಂಗ ಶ್ಲೋಕವನ್ನು ಹೇಳಿದೆ.

ಸಂಗಮರ ವಂಶಾವಳಿಯನ್ನು ನೀಡುವಾಗ ಮೂರೂ ಶಾಸನಗಳಲ್ಲಿ ಸಂಗಮನ ತಂದೆಯನ್ನು ಬುಕ್ಕನೆಂದು ತಾಯಿಯನ್ನು ಮಂಗಾಂಬಿಕಾ, ಮಾಗಾಂಬಿಕಾ ಎಂದು ಎರಡೂ ರೂಪದಲ್ಲಿ ಉಲ್ಲೇಖಿಸಿದೆ. ಸಂಗಮನ ಹೆಂಡತಿಯನ್ನು ಬೆಸ್ತರಹಳ್ಳಿ ಮತ್ತು ಹಾಲ್ಕಾವಟಗಿ ಶಾಸನಗಳು ಮಾನಾಂಬಿಕಾ ಎಂದು ಹೇಳಿದರೆ, ಕಾಪಲೂರು ಶಾಸನವು ಗಾಳಾಂಬಿಕಾ ಎಂದು ಹೇಳುತ್ತದೆ. ಬೆಸ್ತರಹಳ್ಳಿ ಶಾಸನದಲ್ಲಿ ಅರಕೆರೆಯ ಭಾಸ್ಕರನ ಮಗನಾದ ವಿರೂಪಾಕ್ಷನಿಗೆ ಕೋಡಿಕೊಂಡ ಗ್ರಾಮದ ಸನಿಹ ಭೂಭಾಗಗಳನ್ನು ದಾನವಾಗಿ ನೀಡಿ, ಯರಗುಡಿ ಗ್ರಾಮವನ್ನು ವಿದ್ಯಾರಣ್ಯಪುರವನ್ನಾಗಿ ಪರಿವರ್ತಿಸಿ ಅಗ್ರಹಾರದಾನವನ್ನು ನೀಡಿದೆ. ಕಾಪಲೂರು ಶಾಸನದಲ್ಲಿ ಶಂಖು ಕೇಶವಭಟ್ಟನ ಮಗನಾದ ಆನಂತಸೂರಿಗೆ ಸುವರ್ಣಮುಖಿ ನದಿದಡದ ಪಡ್ಯೆನಾಡು ಸೀಮೆಯ ಭೂಭಾಗಗಳನ್ನು ದಾನ ನೀಡಿದ್ದು, ಕಾಪಲೂರನ್ನು ಹರಿಹರಪುರ ಅಗ್ರಹಾರವನ್ನಾಗಿ ಮಾರ್ಪಡಿಸಲಾಗಿದೆ.

ಪ್ರಸ್ತುತ ಹಾಲ್ಕಾವಟಗಿ (ನವಲಿ) ಶಾಸನದಲ್ಲಿ ವಿಷ್ಣುಭಟ್ಟನ ವಂಶದವನಾದ ಪದ್ಮಯ್ಯನಿಗೆ ತುಂಗಭದ್ರಾ ನದೀ ತೀರದ ಕಾತರಿಕೆ ಸೀಮೆಯ ಭೂಭಾಗಗಳನ್ನು ದಾನ ನೀಡಿದ್ದು ಈ ಸಮಯದಲ್ಲಿ ಹುಲಿ (ಹುಲಿಗೆ) ಗ್ರಾಮಕ್ಕೆ ಸಮೀಪದ ಒಂದು ಗ್ರಾಮವನ್ನು ಹರಿಹರಪುರವೆಂದು ಮರುಹೆಸರಿಟ್ಟು, ಅದನ್ನು ಅಗ್ರಹಾರವನ್ನಾಗಿ ಮಾರ್ಪಡಿಸಿ ದಾನನೀಡಲಾಗಿದೆ. ಈ ಮನೆತನದವರ ಹೇಳಿಕೆಯಂತೆ ಕೊಪ್ಪಳ ಬಳಿಯ ಕಾತರಿಕೆ ಸ್ಥಳದಲ್ಲಿ ಅವರ ನಾಲ್ಕಾರು ತಲೆಮಾರಿನ ಹಿಂದಿನವರು ವಾಸವಾಗಿದ್ದರೆಂದು ತಿಳಿದು ಬರುತ್ತದೆ. ದಾನದ ಸೀಮಾ ವಿವರದಲ್ಲಿ ಹೊಂನ್ನೂರು, ವೇಗ್ಘಾಂಡನ ಹಾಳು, ಹೂಲಿಹಳ್ಳಿ, ಡೋರ್ಣ, ಕಾಸವನಖಂಡಿ (ಕಾಸನಕಂಡಿ), ಊಟಿಗುಂಡು, ಕರಡಿಗುಡ್ಡ, ಹುಲಿಗೆ, ನಲುಕುದುರೆ ಮೊದಲಾದ ಗ್ರಾಮಗಳನ್ನು ಹೆಸರಿಸಲಾಗಿದೆ.

ಮೇಲಿನ ಮೂರು ಶಾಸನಗಳನ್ನು ಒಂದೇ ಸಂದರ್ಭದಲ್ಲಿ ಅಂದರೆ ವಿದ್ಯಾನಗರ ಸ್ಥಾಪನೆ ಮಾಡಿ, ಪಟ್ಟಾಧಿಕಾರವನ್ನು ಸ್ವೀಕರಿಸಿದ ದಿನವೇ ಹೊರಡಿಸಲಾಗಿದೆ. ಶಾಸನ ಕವಿ ಮತ್ತು ಲಿಪಿಕಾರರ ಬಗೆಗೆ ಹೇಳುವುದಾದರೆ ಬೆಸ್ತರಹಳ್ಳಿ ಶಾಸನವನ್ನು ಬರೆದ ಕವಿ ಶಾಸನಾಚಾರ್ಯ ನಾಗದೇವ. ಮಿಕ್ಕ ಇನ್ನೆರಡು ಶಾಸನಗಳಲ್ಲಿ ಕವಿ ಮತ್ತು ಲಿಪಿಕಾರರ ಹೆಸರಿಲ್ಲ. ಆದರೆ ಡಾ.ಕೆ.ವಿ. ರಮೇಶ್ ಅವರು ಕಾಪಲೂರು ಶಾಸನದ ಭಾಷಾಶೈಲಿಯನ್ನು ಪರಿಶೀಲಿಸಿ ಅದನ್ನು ನಾಗದೇವನೇ ಬರೆದಿದ್ದಾನೆಂದು ಹೇಳಿರುವರು. ಈಗಿನ ಹಾಲ್ಕಾವಟಗಿ ಶಾಸನವು ಇದೇ ರೀತಿ ಇರುವುದರಿಂದ ಇದನ್ನೂ ನಾಗದೇವನೇ ಬರೆದಿರುವನೆಂದು ಊಹಿಸ ಬಹುದಾಗಿದೆ. ಈ ನಾಗದೇವನು ಬುಕ್ಕರಾಯನ ಕ್ರಿ.ಶ.೧೩೩೪ ರ ಅವಧಿಯ ಶಾಸನವೊಂದರ (ಮುದೆಯನೂರು ಶಾಸನ) ಲಿಪಿಕಾರನೂ ಆಗಿದ್ದಾನೆ. ಈ ಶಾಸನದ ಕವಿ ಕೋಟಿದೇವರಾಧ್ಯಾನಮಗನಾದ ಮಲ್ಲಣಾರಾಧ್ಯ. ಈ ನಾಗದೇವನ ಮಗನೂ ಲಿಪಿಕಾರನಾಗಿದ್ದನೆಂದು ಇಮ್ಮಡಿ ಹರಿಹರನ ಅಪ್ರಕಟಿತ ಶಾಸನವೊಂದರಿಂದ ತಿಳಿದು ಬರುತ್ತಿದೆ. (ಇದು ಇಷ್ಟರಲ್ಲೆ ಪ್ರಕಟವಾಗಲಿದೆ). ಈ ಶಾಸನದ ಕಾಲ ಕ್ರಿ.ಶ. ೧೩೯೭. ಇದರ ಅಂತ್ಯದಲ್ಲಿ "…. ನಾಗಿದೇವ ತನೂಜೇನ ಮುದ್ದಣಾಚಾರ್ಯ ಶಿಲ್ಪಿನ ಲಿಖಿತಾಂ ಶಾಸನ ಚೈವ ವೃತ್ತಿದ್ವಯ ಮಿಹಾಸ್ತುತೆ…" ಎಂದಿದ್ದು ಲಿಪಿಕಾರನಿಗೂ ಎರಡು ಘೃತ್ತಿಗಳನ್ನು ದಾನವಾಗಿ ನೀಡಲಾಗಿದೆ. ಈ ಆಧಾರಗಳಿಂದ ನಾಗದೇವ ಮತ್ತು ಅವನ ಕುಟುಂಬ ೧ನೇ ಹರಿಹರನ ಕಾಲದಿಂದಲೂ ವೃತ್ತಿಕಾರರಾಗಿದ್ದರೆಂದು ತಿಳಿಯಬಹುದಾಗಿದೆ. ನಾಗದೇವನ ಮಗ ಮುದ್ದಣಾಚಾರ್ಯ ಮುಂದುವರಿಸಿರುವನು.

ಬೆಸ್ತರಹಳ್ಳಿ ಮತ್ತು ಕಾಪಲೂರು ಶಾಸನಗಳ ನೈಜತೆಯ ಬಗ್ಗೆ ವಿದ್ವಾಂಸರು ಅನುಮಾನ ವ್ಯಕ್ತ ಪಡಿಸಿರುವುದು ಸರಿಯಷ್ಟೆ. ಆದರೆ ಯಾವ ವಿದ್ವಾಂಸರೂ ಇವು ಕೃತಕವೆಂಬುದಕ್ಕೆ ಸರಿಯಾದ ಕಾರಣಗಳನ್ನು ನೀಡಿಲ್ಲ. ಅವುಗಳ ಭಾಷೆಯನ್ನು ಮಾತ್ರ ಗಮನಿಸಿ ಈ ತೀರ್ಮಾನಕ್ಕೆ ಬಂದಿರುವರು. ಬೆಸ್ತರಹಳ್ಳಿ ಶಾಸನವು ಕಾಗದಪ್ರತಿಯಲ್ಲಿ ದೊರೆತಿರುವ ಮಾತ್ರಕ್ಕೇ ಅದನ್ನು ಕೃತಕಶಾಸನವೆಂದು ಕರೆಯಲಾಗಿದೆ. ಕಾಪಲೂರು

ಶಾಸನದಲ್ಲಿ ಸಂಗಮನ ಹೆಂಡತಿಯ ಹೆಸರನ್ನು ಗಾಳಾಂಬಿಕಾ ಎಂದಿರುವುದರಿಂದ, ಎರಡೂ ಶಾಸನಗಳಲ್ಲಿ ಸಂಗಮನ ತಂದೆ-ತಾಯಿಯರನ್ನು ಬುಕ್ಕ ಮಂಗಾಂಬಿಕೆಯರೆಂದು ಹೇಳಿರುವುದರಿಂದ ಈ ಶಾಸನಗಳನ್ನು ಕೃತಕವೆಂದು ನಿರ್ಧರಿಸಲಾಗಿದೆ. ಮೇಲಿನ ಈ ಮೂರೂ ಶಾಸನಗಳಲ್ಲಿ ಮಾತ್ರ ಸಂಗಮನ ತಂದೆ-ತಾಯಿಗಳ ಉಲ್ಲೇಖವಿದೆ. ಇನ್ನಾವ ಶಾಸನದಲ್ಲೂ ಇವರ ಉಲ್ಲೇಖವಿಲ್ಲ. ಮುಳಬಾಗಿಲಿನ ಒಂದು ತೆಲುಗು ಶಾಸನದಲ್ಲಿ (ನಂ.೧೫೮) ಸಂಗಮನ ರಾಣಿಯನ್ನು ಮಾಳಾಂಬಿಕಾ ಎಂದು ಕರೆದಿದೆ.

ಪ್ರಸ್ತುತ ಹಾಲ್ಕಾವಟಗಿ ಶಾಸನದಲ್ಲಿಯೂ ಮೇಲಿನ ಅಂದರೆ ಬೆಸ್ತರಹಳ್ಳಿ ಮತ್ತು ಕಾಪಲೂರು ಶಾಸನಗಳ ಬಹುತೇಕ ವಿಷಯಗಳೇ ಇವೆ. ಹೀಗಾಗಿ ಇದನ್ನೂ ಕೂಟಶಾಸನವೆಂದು ಕರೆಯಬೇಕಾಗುತ್ತದೆ. ಆದರೆ ಈ ಶಾಸನದ ಲಿಪಿಲಕ್ಷಣಗಳು, ವ್ಯಾಕರಣ, ಭಾಷಾ ಬಳಕೆ ಮತ್ತು ವಿರೂಪಾಕ್ಷನ ಅಂಕಿತ ಮತ್ತು ತಾಮ್ರ ಪತ್ರಗಳನ್ನು ಕೂಡಿಸಿರುವ ಮುದ್ರೆಯುಂಗುರಗಳನ್ನು ಗಮನಿಸಿದಾಗ ಇದನ್ನು ಕೃತಕ ಶಾಸನವೆಂದು ಕರೆಯಲು ಸಾಧ್ಯವೇ ಇಲ್ಲ. ಎಲ್ಲಾ ಲಕ್ಷಣಗಳಿಂದ ಹಾಲ್ಕಾವಟಗಿ ಶಾಸನವು ನೈಜವಾದುದರಿಂದ, ಇದೇ ವಿಷಯವನ್ನೊಳಗೊಂಡ ಬೆಸ್ತರಹಳ್ಳಿ ಮತ್ತು ಕಾಪಲೂರು ತಾಮ್ರಪತ್ರಗಳೂ ನೈಜವೇ ಆಗುತ್ತವೆ. ಈ ಕಾರಣದಿಂದ ಈ ಮೂರು ತಾಮ್ರ ಪತ್ರಗಳು ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಕ್ರಿ.ಶ.೧೩೩೬, ಏಪ್ರಿಲ್-೧೮ ರಂದು ಆಯಿತೆಂದೂ ಅದಕ್ಕೆ ವಿದ್ಯಾನಗರವೆಂದು ಹೆಸರಿಟ್ಟರೆಂದೂ, ಇದಕ್ಕೆ ವಿದ್ಯಾರಣ್ಯರ ಪ್ರೇರಣೆಯಿತ್ತೆಂದು, ಆ ಶುಭ ಸಮಯದಲ್ಲಿ ಹಲವು ಬ್ರಾಹ್ಮಣ ಕುಟುಂಬಗಳಿಗೆ ನಾಡಿನ ಬೇರೆ ಬೇರೆ ಭಾಗಗಳಲ್ಲಿ ಹರಿಹರನು ದಾನ ನೀಡಿದನೆಂದೂ ಈ ಶಾಸನಗಳನ್ನು ಒಬ್ಬನೇ ಲಿಪಿಕಾರ ನಾಗದೇವನು ರಚಿಸಿದನೆಂದು ದೃಢವಾಗಿ ಹೇಳಬಹುದಾಗಿದೆ. ಇವೆಲ್ಲದರ ಪರಿಣಾಮ ವಾಗಿ ಸಂಗಮ ಮನೆತನ ಕನ್ನಡ ಮೂಲದ್ದು ಮತ್ತು ಹೊಯ್ಸಳರ ಕೃಪಾಕಟಾಕ್ಷವನ್ನು ಪಡೆದಿತ್ತೆಂಬವಾದ ಎದ್ದು ನಿಲ್ಲುತ್ತದೆ. ಇಷ್ಟೆ ಅಲ್ಲದೆ ಇದುವರೆಗೂ ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಕ್ರಿ.ಶ.೧೩೩೬ರಲ್ಲಿ ನಡೆಯಿತೆಂಬ ಐತಿಹ್ಯಕ್ಕೂ ಮತ್ತು ಶಾಸನಗಳಿಗೂ ತಾಳೆಯಾಗುತ್ತದೆ. ಇತಿಹಾಸ ರಚನೆಯಲ್ಲಿ ಹಲವು ಶಿಸ್ತುಗಳು ಹೇಗೆ ಒಂದಕ್ಕೊಂದು ಪೂರಕವಾಗುತ್ತವೆಂಬುದಕ್ಕೂ ಇದು ಸಾಕ್ಷಿಯಾಗುತ್ತದೆ.

ಈ ಮೇಲಿನ ಆಧಾರಗಳಿಂದ ಶೃಂಗೇರಿ ಮತ್ತು ವಿದ್ಯಾರಣ್ಯರ ಸಂಬಂಧದ ಬಗ್ಗೆ ಮತ್ತಷ್ಟು ಗೊಂದಲವೇರ್ಪಡುತ್ತದೆ. ಶೃಂಗೇರಿಯ ದಾಖಲೆ ಮತ್ತು ಶಾಸನಗಳ ಪ್ರಕಾರ ವಿದ್ಯಾರಣ್ಯರ ಉಲ್ಲೇಖ ಕ್ರಿ.ಶ.೧೩೮೮ರಲ್ಲಿ ಮಾತ್ರ ಬಂದಿದೆ. ಇವರಿಗಿಂತ ಪೂರ್ವದಲ್ಲಿ ಭಾರತೀತೀರ್ಥರು (ಕ್ರಿ.ಶ.೧೩೪೬), ಆನಂತರ ವಿದ್ಯಾತೀರ್ಥರು (ಕ್ರಿ.ಶ.೧೩೫೬) ಪೀಠಾಧಿಪತಿಗಳಾಗಿದ್ದರು. ಹಾಗಾದಲ್ಲಿ ವಿದ್ಯಾರಣ್ಯರು ಯಾವ ಕಾಲದಿಂದ ಶೃಂಗೇರಿಯ ಪೀಠಾಧಿಪತಿಗಳಾಗಿದ್ದರು ? ಎಂಬುದಕ್ಕೆ ಆಧಾರಗಳಿಲ್ಲ. ಆದರೆ ಶೃಂಗೇರಿಯ ಒಂದು ಶಾಸನದ ಪ್ರಕಾರ ವಿದ್ಯಾರಣ್ಯರು ಕ್ರಿ.ಶ.೧೩೮೬ರಲ್ಲಿ ದೇಹ ತ್ಯಜಿಸಿದರು ಎಂಬುದಕ್ಕೆ ಆಧಾರವಿದೆ. ಶೃಂಗೇರಿಯನ್ನು ಹೊರತುಪಡಿಸಿದರೆ ಬೇರೆ ಕಡೆಯಲ್ಲಿ ವಿದ್ಯಾರಣ್ಯರ

ಉಲ್ಲೇಖದ ಅನೇಕ ಶಾಸನಗಳು ದೊರಕಿವೆ. ಡಾ.ಕೆ.ವಿ.ರಮೇಶ್ ಅವರು ಮುದೆಯ ನೂರಿನ ಕ್ರಿ.ಶ. ೧೩೪೪ರ ಶಾಸನ ಮತ್ತು ಶೃಂಗೇರಿಯ ಕ್ರಿ.ಶ. ೧೩೪೬ರ ಶಾಸನಗಳನ್ನು ಆಧರಿಸಿ ಅದರಲ್ಲಿನ ವಿದ್ಯಾತಿರ್ಥರೇ ವಿದ್ಯಾರಣ್ಯರೆಂದು ಹೇಳಿರುವರು, ಇಮ್ಮಡಿ ಹರಿಹರನು ಭಾರತೀತೀರ್ಥರ ಮರಣಾನಂತರ (ಕ್ರಿ.ಶ. ೧೩೭೪) ವಿದ್ಯಾರಣ್ಯರನ್ನು ಹಂಪೆಯಿಂದ ಕರೆತಂದು ಶೃಂಗೇರಿಯಲ್ಲಿ ಮಠವನ್ನು ಕಟ್ಟಿಸಿಕೊಟ್ಟನೆಂಬ ವಾದವೂ ಇದೆ. ಆದರೆ ಶೃಂಗೇರಿಯ ದಾಖಲೆಗಳ ಪ್ರಕಾರ ಭಾರತೀತೀರ್ಥರ ಮರಣಾನಂತರ ವಿದ್ಯಾತೀರ್ಥರು ಗುರುಗಳಾದಂತೆ ತಿಳಿಯುತ್ತದೆ. ಈ ವಿದ್ಯಾತೀರ್ಥರೇ ವಿದ್ಯಾರಣ್ಯ ರೆಂದು ಕೆಲವರ ಅಭಿಮತ. ಕಂಚಿಯಲ್ಲಿರುವ ಕಡತಗಳ ಪ್ರಕಾರ ವಿದ್ಯಾತೀರ್ಥರು ಕ್ರಿ.ಶ.೧೨೯೭ ರಲ್ಲಿ ಸನ್ಯಾಸ ಸ್ವೀಕರಿಸಿ ಕ್ರಿ.ಶ.೧೩೮೫ರಲ್ಲಿ ಮರಣಹೊಂದಿದರೆಂದು ತಿಳಿದುಬರುತ್ತದೆ. ಆದರೆ ಈ ಕಾಲಕ್ಕಿಂತಲೂ ಒಂದು ವರ್ಷದ ನಂತರದ ಅಂದರೆ ಕ್ರಿ.ಶ.೧೩೮೬ ಜನವರಿ ೨೯ರ ಪಶ್ಚಿಮವಾಹಿನಿಯ ಶಾಸನದ ಪ್ರಕಾರ ವಿದ್ಯಾರಣ್ಯರು ಬದುಕಿದ್ದರು. ಇವರು ಕಾಲವಾದದ್ದು ಕ್ರಿ.ಶ. ೧೩೮೬ ಮೇ-೨೬ ಎಂದು ಶೃಂಗೇರಿಯ ಶಾಸನ ತಿಳಿಸುತ್ತಿದೆ. ಈ ಕಾರಣಗಳಿಂದ ವಿದ್ಯಾತೀರ್ಥರೇ ವಿದ್ಯಾರಣ್ಯರೆಂಬ ವಾದವು ಸರಿಯಲ್ಲ. ಶ್ರೀ ಗಡಿಯಾರಂ ರಾಮಕೃಷ್ಣಶರ್ಮರವರು ವಿದ್ಯಾರಣ್ಯರು ಕ್ರಿ.ಶ.೧೩೩೧ ರ ಸುಮಾರಿಗೆ ಸನ್ಯಾಸ ಸ್ವೀಕರಿಸಿರಬೇಕೆಂದು ಊಹಿಸಿದ್ದಾರೆ. ಕಂಚಿಯಲ್ಲಿ ಮಾಧವ-ಸಾಯಣರಿಗೆ ಗುರುಗಳಾಗಿದ್ದ ಸರ್ವಜ್ಞವಿಷ್ಣುಗಳೇ ಸನ್ಯಾಸವನ್ನು ಸ್ವೀಕರಿಸಿ ವಿದ್ಯಾತೀರ್ಥ ರೆಂಬ ನಾಮಧೇಯದಿಂದ ಶೃಂಗೇರಿಯಲ್ಲಿ ಪೀಠಾಧಿಪತಿಗಳಾದರೆಂದೂ ಹೇಳುವರು. ಶೃಂಗೇರಿ ದಾಖಲೆಗಳಲ್ಲಿ ವಿದ್ಯಾತೀರ್ಥರು ಕ್ರಿ.ಶ.೧೨೨೮ರಲ್ಲಿ ಸನ್ಯಾಸ ಸ್ವೀಕರಿಸಿ, ಕ್ರಿ.ಶ.೧೩೩೩ರಲ್ಲಿ ಮರಣಹೊಂದಿದ್ದರೆಂದು ತಿಳಿದುಬರುತ್ತದೆ. ಆದರೆ ಕಂಚಿಯ ಮತ್ತು ಶೃಂಗೇರಿಯ ಎರಡೂ ಆಧಾರಗಳನ್ನು ನಿರಾಕರಿಸುವ ಶ್ರೀರಾಮಕೃಷ್ಣ ಶರ್ಮರು ವಿದ್ಯಾತೀರ್ಥರು ಕ್ರಿ.ಶ.೧೩೨೦ರ ಆಸುಪಾಸಿನಲ್ಲಿ ಸನ್ಯಾಸ ಸ್ವೀಕರಿಸಿ, ಕ್ರಿ.ಸ.೧೩೪೫ರ ಹೊತ್ತಿಗೆ ಮರಣಹೊಂದಿದರೆಂದು ಊಹಿಸುವರು.

ಮೇಲ್ಕಂಡ ಅನೇಕ ಆಧಾರಗಳಿಂದ ವಿದ್ಯಾರಣ್ಯರು ಸನ್ಯಾಸ ಸ್ವೀಕರಿಸಿದ ನಂತರ ಬಹುಕಾಲದವರೆಗೆ ಹಂಪಿಯಲ್ಲಿಯೇ ನೆಲೆಸಿದ್ದರೆಂದು ಊಹಿಸಬಹುದು. ಅವರು ತೀರಿಕೊಳ್ಳುವ ಕಾಲಕ್ಕೆ ಅವರಿಗೆ ಸುಮಾರು ೯೦ ವರ್ಷಗಳಷ್ಟಾದರೂ ವಯಸ್ಸಾಗಿರ ಬೇಕು.

ವಿದ್ಯಾರಣ್ಯರ ವಿಷಯ ಚರ್ಚೆಗೆ ಬಂದಾಗ ಕ್ರಿಯಾಶಕ್ತಿಯ ವಿಷಯ ಪ್ರಸ್ತಾಪ ವಾಗಲೇಬೇಕು. ಕೆಲವರು, ವಿದ್ಯಾರಣ್ಯ-ಕ್ರಿಯಾಶಕ್ತಿಯರು ಬೇರೆ ಬೇರೆಯೆಂದು ಕೆಲವರು, ಒಬ್ಬರೇ ಎಂದೂ ಕೆಲವರು ವಾದಿಸುತ್ತಿರುವರು. ಕ್ರಿ.ಶ.೧೦೪೨ ರಿಂದ ಕ್ರಿ.ಶ. ೧೪೩೧ರ ವರೆಗಿನ ಅನೇಕ ಶಾಸನಗಳಲ್ಲಿ ಕ್ರಿಯಾಶಕ್ತಿ ಪಂಡಿತ, ಕಾಶೀವಿಲಾಸ ಕ್ರಿಯಾಶಕ್ತಿ, ವಾಣಿವಿಲಾಸ ಕ್ರಿಯಾಶಕ್ತಿ, ವಿದ್ಯಾಶಂಕರ ಕ್ರಿಯಾಶಕ್ತಿ, ತ್ರಯಂಭಕ.ಕ್ರಿಯಾ ಶಕ್ತಿ, ಚಂದ್ರಭೂಷಣ ಕ್ರಿಯಾಶಕ್ತಿ ಎಂಬ ಹೆಸರಿನ ವಿವಿಧ ರೂಪಗಳು ದೊರೆಯುತ್ತವೆ.

ಕ್ರಿಯಾಶಕ್ತಿಯನ್ನು ಪಂಡಿತದೇವ, ಯತೀಶ್ವರ, ರಾಜಗುರು ಮುಂತಾದ ವಿಶೇಷಣಗಳಿಂದ ಕರೆದಿದೆ.

ಡಾ. ರಘುನಾಥಭಟ್ಟರು ಶೋಧಿಸಿದ ಕ್ರಿ.ಶ.೧೩೬೨ರ ಭಾವಿಕೇರಿಯ ಶಾಸನದಲ್ಲಿ "ನಮ್ಮ ಶ್ರೀ ಗುರು ಕ್ರಿಯಾಶಕ್ತಿ ಯತೀಶ್ವರರ ಒಪ್ಪ" ಎಂಬ ಉಲ್ಲೇಖವಿದೆ. ಕ್ರಿ.ಶ. ೧೩೪೪ರ ಹೊಸಹಳ್ಳಿ ಶಾಸನದಲ್ಲಿ 'ಮಹಾನುಭಾವ' ಎಂದು ಕರೆದಿದೆ. ಈ ಕಾರಣಗಳಿಂದ ಕ್ರಿಯಾಶಕ್ತಿ ಮತ್ತು ವಿದ್ಯಾರಣ್ಯರು ಬೇರೆ ಬೇರೆ ಎಂಬುದು ಸತ್ಯವಾದುದಾಗಿದೆ. ವಿಜಯನಗರ ಸ್ಥಾಪನೆಯಲ್ಲಿ ವಿದ್ಯಾರಣ್ಯರು ಭಾಗವಹಿಸಿದ್ದಂತೆಯೇ, ಕೆಲವಾರು ವರ್ಷಗಳಲ್ಲಿ ಕ್ರಿಯಾಶಕ್ತಿಗಳೂ ಕೈಜೋಡಿಸಿರಬೇಕು. ಇದು ಸಹಜ; ವಿಜಯನಗರದ ಅರಸರು ಕರ್ನಾಟಕದ ಎರಡು ಪ್ರಬಲ ಧರ್ಮಗಳ ಬೆಂಬಲವನ್ನು ಪಡೆದು ರಾಜ್ಯವನ್ನು ಕಟ್ಟಿದರು. ಇದು ಅನಿವಾರ್ಯವೂ ಆಗಿತ್ತು. ಇದನ್ನು ಅರಿತ ಕ್ರಿಯಾಶಕ್ತಿಗಳು ವಿದ್ಯಾರಣ್ಯರ ಕಾರ್ಯಕ್ಕೆ ಬೆಂಬಲವನ್ನು ನೀಡಿರಬೇಕು.

ಮೇಲ್ಕಂಡ ಎಲ್ಲ ಮಾತುಗಳ ಸಾರವನ್ನು ಮತ್ತೊಮ್ಮೆ ಹೇಳುವುದಾದರೆ

೧. ವಿಜಯನಗರ ಸ್ಥಾಪನೆ ಕಾಲ ಕ್ರಿ.ಶ.೧೩೩೬ ಏಪ್ರಿಲ್ ೧೮.

೨. ಐತಿಹ್ಯಗಳು ಹೇಳುತ್ತಿದ್ದ ಅಂಶಗಳನ್ನು ಶಾಸನಗಳು ಸಾಕ್ಷೀಕರಿಸಿವೆ.

೩. ಪ್ರಸ್ತುತ ಹಾಲ್ಕಾವಟಗಿ ಶಾಸನ ನೈಜವಾದುದು.

೪. ಈ ಕಾರಣಕ್ಕೆ ಈವರೆಗೆ ಕೃತಕವೆಂದು ಅನುಮಾನಿಸುತ್ತಿರುವ ಬೆಸ್ತರಹಳ್ಳಿ ಮತ್ತು ಕಾಪಲೂರು ಶಾಸನಗಳು ನೈಜವಾದದ್ದಾಗಿವೆ.

೫. ವಿಜಯನಗರ ಸಾಮ್ರಾಜ್ಯ ಸ್ಥಾಪನಾ ಹೆಸರು ವಿದ್ಯಾನಗರ.

೬. ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ವಿದ್ಯಾರಣ್ಯರ ಪ್ರೇರಣೆ ಐತಿಹಾಸಿಕ ಸತ್ಯವಾಗಿದೆ.

೭. ಇಮ್ಮಡಿ ಹರಿಹರನವರೆಗೆ ವಿದ್ಯಾರಣ್ಯ ಮತ್ತು ಕ್ರಿಯಾಶಕ್ತಿ ಇಬ್ಬರೂ ಸಕ್ರಿಯರಾಗಿದ್ದರು.

೮. ಕರ್ನಾಟಕದ ಎರಡು ಪ್ರಬಲ ಧರ್ಮಗಳು ವಿಜಯನಗರ ಸ್ಥಾಪನೆ ಮತ್ತು ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದವು.

ಪರಾಮರ್ಶನ ಕೃತಿಗಳು

೧. ಸಂಗಮರ ಕಾಲದ ವಿಜಯನಗರ ಸಂ.ಡಾ.ಜಿ.ಎಸ್.ದೀಕ್ಷಿತ್.

೨. ಎಪಿಗ್ರಾಫಿಯಾ ಕರ್ನಾಟಿಕ ಸಂ ೧೧ ಮತ್ತು ಸಂ X (ಹಳೆ).

೩. ವಿದ್ಯಾರಣ್ಯ-ಚಾರಿತ್ರಿಕ ಅಧ್ಯಯನ, ಶ್ರೀ ಗಡಿಯಾರಂ ರಾಮಕೃಷ್ಣಶರ್ಮ.

೪. ವಿದ್ಯಾರಣ್ಯ-ಕ್ರಿಯಾಶಕ್ತಿ ವಿಮರ್ಶೆ, ಆರ್.ಚಕ್ರವರ್ತಿ.

೫. ಹಂಪಿ ಶಾಸನ ಸಂಪುಟ, ಕನ್ನಡ ವಿಶ್ವವಿದ್ಯಾಲಯ.

೬. Uttankita vidyaranya epigraphs, Vol.1.

ಪ್ರಸ್ತುತ ಹಾಲ್ಕಾವಟಿಗೆ ಶಾಸನವನ್ನು ಅಧ್ಯಯನಕ್ಕೆ ನೀಡಿದ ಶ್ರೀ ದತ್ತಾತ್ರೇಯ ಶಿವರಾಮ ಪುರೋಹಿತ ಕುಟುಂಬದವರಿಗೆ, ಶಾಸನದ ಮೊದಲ ಪಾಠವನ್ನು ಸಿದ್ಧಪಡಿಸಿದ ಡಾ.ಭಾರತಿ ಮತ್ತು ಗುರುಗಳಾದ ಡಾ.ಪಿ.ವಿ.ಕೃಷ್ಣಮೂರ್ತಿಯವರಿಗೆ, ಅಂತಿಮ ಪಾಠವನ್ನು ಸಿದ್ಧಪಡಿಸಿದ ಡಾ. ಮಾಧವ ನಾ.ಕಟ್ಟಿ ಮತ್ತು ಶ್ರೀ ಸುಬ್ರಹ್ಮಣ್ಯ ಭಿಡೆ ಅವರಿಗೆ, ಕೆಲವು ಸಂದೇಹಗಳನ್ನು ನಿವಾರಿಸಿದ ಡಾ.ಸುಚೇತ ಅವರಿಗೆ ಗೌರವಪೂರ್ವಕ ಕೃತಜ್ಞತೆಗಳು.

೧ನೇ ಹರಿಹರ ಮತ್ತು ವಿದ್ಯಾರಣ್ಯರ ತಾಮ್ರಶಾಸನ

ಶಾಸನ ಪಾಠ

೧. ಶ್ರೀಗಣಾಧಿಪತಾಯೇ ನಮಃ । ನಮಸ್ತುಂ

೨. ಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ।

೩. ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂ

೪. ಭವೇ । ಆಂಮ್ನಾಯ ಸಂದರ್ಭ ಕಳಾ ಕವೀಂದ್ರಮನಂಗಗರ್ವಾಪಹ ಫಾ

೫. ಲನೇತ್ರಂ । ಅರ್ಧಾಂಗ ಭಾಗಾದವರೋಧ ವಸಂತ ಮಾಶಾಸ್ಮಹೇಬೀಷ್ಠ

೬. ಫಲಾಯ ದೇವಂ । ಪ್ರಾಚೀನ ವಾಕ್ಪಾದಕ ಪೋತ್ರಿ ಪೋತಂ ಪರೋರಜೋ

೭. ಮಾನಸ ಪದ್ಮಹಂಸಂ । ಮಂದೇಹವಾರೀಂದು ಹುತಾಶನೇತ್ರಂ ವಂದಾಮ

೮. ಹೇ ವಾರಣ ರಾಜ ವಕ್ತ್ರಂ । ದಂಷ್ಟ್ರಾಮಯಂ ಯಸ್ಯತುಕೈತುಕಾಗ್ರಂ

೯. ದಧಾತಿ ಸರ್ವಾಮವನೀಯ ಪೂರ್ವಂ । ಸಯೇಷು ದೇವಸ್ಸುಮನೋಭಿವಂ

೧೦. ದ್ಯಃ ಸನಾತನಃ ಪಾತುಪತಿಃ ಕೀಟನಾಂ । ಶರದ್ವನಚ್ಛಾನಿ

೧೧. ಕಾಯ ಕಾಯಾಂ ಶಶಾಂಕ ಲೇಖೋಲ್ಲಸಿತಾಲಕಾಗ್ರಂ । ಶುಕಾ

೧೨. ದಿ ಸೇವ್ಯಾಂ ಶುಕಲಾಲಯಿತ್ರಿಂ ವಿಣಾವತೀನೌಮಿವಚೋಧಿ

೧೩. ದೇವಿಃ । ವಂಶಾಂಬುರಾಶೇಃ ಕುಲತಂತುರಿಂದುರ್ಹರಸ್ಯ ಕೋಟೀರವ

೧೪. ಸಂತರತ್ನಂ ಆ ದಕ್ಷಿಣಂ ಚಕ್ಷುರಧೋಕ್ಷಜಸ್ಯ ವಿಚಕ್ಷಣಾಃ

೧೫. ಸಂಪ್ರತಿಚಕ್ಷತೇಯಂ । ತಸ್ಮಾದುದೀಯಾಯ ಬುಧಾಭಿದಾ

೧೬. ನೋ ವಿಸ್ಮಾಪನಿಯಾನ್ಯ ಮಹಾಪ್ರಭಾವಃ । ಯಂಬೋಧರೂಪಾಮ್ಯ

೧೭. ತ ಸಿಂಧು ಬಂಧುಂ ಪ್ರಚಿಕ್ಷತೇ ಸಂತತಮೇವಸಂತಃ । ತಮನ್ವ

೧೮. ಯಂ ಕಶ್ಚಿದಲಂಚಕಾರ ಸಮಾನ್ವಯೋ ಭೂವಲಯಸ್ಯ ಗೋಪ್ತಾಪು

೧೯. ರೂರವಾಃ ಪುಂಖಿತರಾಗ ವೃತ್ಯಾ ಪುಷ್ಪೇಷು ರೂಪಃ ಸ್ವವಶೋರ್ವ

೨೦. ಶೀಕಃ ಅಸ್ಮಾದ ಭುದಾಯುರಿತಿ ಪ್ರತೀತಃ ಪ್ರತ್ಯರ್ಥಿನಾಂ ಭೂ

೨೧. ಪತಿರರ್ಥಿನಾಂಚ ಸಂಗ್ರಾಮ ಭುಮೌ ಸಮಕಾಲಮೇವ ಸಂಪಾ
೨೨. ದಯಾಮಾಸ ಮಹಾಪದಂಯಃ । ಅಜಾಯತಾಸ್ಮಾನ್ನಹುಷಾಭಿಧಾ
೨೩. ನೋ ಭುಜಾಬಲಾದ್ಯೋ ಭೂವಮಬ್ಧಿಕಾಂಚೀಂ । ನರಾಧಿಪೈರ್ನಮ್ಯಪ
೨೪. ದಶ್ಯ ಶಾಸನ ಕೇವಲಂ ನಾಕ ಸಂದಾಂಚ ರಾಜ್ಯಂ । ನಯಾತಿರಿಕ್ತೋ
೨೫. ಷ್ಯ ಹಿತೋ ಹಿತಸ್ಮಾದ್ಯಯಾತಿ ನಾಮಾನೃಪತಿಃ ಪ್ರತೀತಃ । ದ
೨೬. ಯಾಧಿಕೋದಾನವಶಾಸಿನೋವಾಸ್ತ್ರೀಯಾಸರೇ ಮೇ ಸಹದೇವ
೨೭. ಯಾನ್ಯಾಃ । ಚತುಃಸ್ಸಮುದ್ರಾಧಿಪತೇಸ್ಸುತೋಭೂತ್ತತಶ್ಚತುಷ್ಟ
೨೮. ಷ್ಠಿ ಕಳಾಪ್ರವೀಣಃ । ನಾಮ್ನಾಯದುಃ ಕೋಪಿನರಾಧಿಪೇಂ
೨೯. ದ್ರೋಧಾಮ್ನಾಪ್ರಥಾತೀತ ಭುಜ ಪ್ರತಾಪಃ । ತದ್ವಂಶಮುಕ್ತಾ
೩೦. ಮಣಯೋ ಭೂಪುಶ್ಚತುರ್ವಿಧಾಂಗೈಸ್ಸಹಿತಾ ಮಹಿಪಾಃ ।
೩೧. ಯದೋಃ ಪ್ರತಾಪಾಹಿಮಭಾನುನಾಸ್ತ ಹಿಮಭಾನುನಾ
೩೨. ಸ್ತಾ ಪ್ರತೀಪದಾರಾಶ್ಮಿತ ಚಂದ್ರಿಕಾಸೀತ್ । ತೇಷಾಂ

೨ನೇ ಹಲಗೆ 'ಎ' ಭಾಗ

೩೩. ಕುಲೇ ಕಶ್ಚನ ಬುಕ್ಕನಾಮಾತೇಜೋದುರಾ
೩೪. ಪಸ್ಸಮ ಭೂನ್ಮಹೀಪಃ । ಮಂಗಾಂಭಿಕಾತಸ್ಯ
೩೫. ಬಭೂಪ ರಾಜ್ಞೀಮೇದಿನ್ಯುದನ್ವತ್ತನಯಾಧಿ ವಿ
೩೬. ನ್ನಾ । ತಸ್ಯಾಭವತ್ಸಂಗಮ ನಾಮದೇಯಃ ಸರಸ್ವತೀ ಗೀತ
೩೭. ಭುಜಾಪದಾನಃ । ಶೌರ್ಯೋಯಮಾಹುಃ ಕಿಲಕಾರ್ತವೀರ್ಯಂ ಧೈ
೩೮. ರ್ಯೇ ಹಿಮಾದ್ರಿಂ ಮಹಸೀಹ ಸೂಲಾಂಬಿಕಾತಸ್ಯಾ ಬಭೂವ ಪ
೩೯. ತ್ನೀ ಮಹೇಶ್ವರ ಸ್ಯೇವ ಮಹೀದ್ರಕನ್ಯಾಃ । ವಿದರ್ಭಪುತ್ರೀ ವನಲ
೪೦. ಸ್ಯ ವಿಷ್ಣೋರ್ಲಕ್ಷ್ಮೀರಿವೇಂದ್ರಸ್ಯ ಪುಲೋಮ ಜೇವ । ತೇನೋದಪಾ
೪೧. ದ್ಯಂತ ಸುತಾ ಮಹಿಷ್ಮಾಂತ ಸ್ಯಾಂ ಪ್ರಶಸ್ಯಾಕೃತಿ ಪಾನ್ನಪೇಣ ।
೪೨. ಪಂಚಾಹಿತಾಕ್ಷ್ಮಾಪತಿ ಕುಂಜರಾಣಂ ಪಂಚಾನನಾಃ ಪಂಚ
೪೩. ಶರಾಭಿರೂಪಾಃ । ಹರಿಹರರಾಯ ಕಂಪಧರಣೀ ಬುಕ್ಕ
೪೪. ಮಹೀಪತಿ ವೃಢಮಾರ ಭೂರಮಣ ಮುದ್ದನೃಪಾಃ ಖಲುತೇ । ಅ
೪೫. ನಘ ಗುಣೇಷು ತೇಷು ನವಖಂಡ ಮಹೀಶ್ವರ ತಾಂ ಅಭಜತ
೪೬. ಪೂರ್ವಜತ್ಸಯುಧಿಷ್ಠಿರವನ್ಮಹಸಾ । ಸೋಯಂ ವಿಜಿ
೪೭. ತ್ಯಾಖಿಲ ದಿಗ್ವಿಭಾಗಾಸುತ್ರಾಮಧಾಮಾಂಗ ಕಳಿಂಗ ಪೂ
೪೮. ರ್ವೈ । ವುಪಾಸ್ಯ ಮಾನಃ ಕ್ಷಿತಿಪೈಃಶ್ಚಸರ್ವಾಮುರ್ವ್ವಿಮಶಾತ್ಕುಂ
೪೯. ಜರಕೋಣಪುರ್ಯಾಂ । ಕದಾಚಿದುತ್ತೀರ್ಯ ಸ ತುಂಗಭದ್ರಾಂ ಕ್ಷಮಾ

೫೦. ಧಿಪಾಳೋ ಮೃಗಯಾಭಿಲಾಷಾತು । ಆಸಾಧ್ಯ ಸೈನ್ಯೈಸ್ಸಹತೀ
೫೧. ರಮಸ್ಯಾಯಸ್ತದ್ದಕ್ಷಿಣಂ ಕಾನನ ಮೈಕ್ಷತಸ್ಮ । ತಸ್ಮಿನ್ನ
೫೨. ನೇಕಂಚನ ಸಾರಮೇಯಂ ಸದಂಶನ್ಯೆಕಾಗ್ರರದಾಗ್ರಮು
೫೩. ಗ್ರಂ । ಸಸಂಗಮೇಶಾಬ್ಧಿ ಶಶೀಶಶಂಚ ವಿಶಿಸ್ಮಯೇ ವೀಕ್ಷ್ಯ
೫೪. ವಿಶಾಮಧಿಶಃ । ಕ್ಷೋಣಾಪಾಲೋ ಹರಿಹರಶತಿ ಶ್ರೀ
೫೫. ವಿರೂಪಾಕ್ಷದೇವಂ ಪಂಪಾದೇವಿ ಸಹಚರಮಮುಂ ವೀಕ್ಷ್ಯಭ
೫೬. ಕ್ತ್ಯಾ ಪ್ರಸನ್ನಃ । ಸವಿನ್ಮೂರ್ತಿಂ ಮಹಿತ ತಪಸಂ ತಸ್ಯದೇವಾ
೫೭. ಲಯಂ ತೋ ವಿದ್ಯಾರಣ್ಯಂ ಯತಿ ಮಭಜತಃ ಶ್ರೀ ಮಹೇಶಾನ
೫೮. ಮನ್ಯಂ । ಪ್ರಣಮ್ಯ ತಸ್ಯಾಂತಿಕ ಸೀಮ್ನಿ ಭಕ್ತ್ಯಾತಪೋ
೫೯. ನಿಧಿಂ ಜ್ಞಾನ ಕಳಾನಿಧಾಸಂ । ವೃತ್ತಾಂತ ಮತ್ಯದ್ಭುತ ಹೇತು
೬೦. ಮೇನಂ ವಿಜ್ಞಾಪಯಾ ಮಾಸ ವಿಶೇಷ ವೇದೀ । ತ್ರಿಕಾಲ ವಿಜ್ಞಾ
೬೧. ನ ನಿಧಿರ್ಯತೀಂದ್ರೋ ವಿಹಸ್ಯ ಕಿಂಚಿತ್ತಮುವಾಚಧೀರಂ ।
೬೨. ರಾಜನ್ಮಹಾರಾಜ ತುಲಾಸಿಕಾರ್ಹ ಸೀಮೆಯಮತ್ಯ
೬೩. ೦ತ ಬಲ್ಯೆಕ ಮೂಲಂ । ವಿದ್ಯಾಭಿದಾನಾಮಲಕಾನವದ್ಯಾ
೬೪. ಮತ್ರಾವನೀನಾಥ ಪುರೀಂ ವಿದಧ್ಯಾಃ । ಪುರೀಂ ನವದ್ವಾ

೨ನೇ ಹಲಗೆ 'ಬಿ' ಭಾಗ

೬೫. ರವತೀ ಮುಪೇತಾ ಪುರಂದರಶ್ರೀಸ್ಸಕಲಾಂ
೬೬. ಚ ಪೃಥ್ವೀಂ । ವೀರಶ್ರೀಯೋಯುದ್ಧ ಸಮಾಹೃತಾಯ ವಿಹಾ
೬೭. ರ ಭೂಮಂಟಪ ತಾಮುಪೇತಿ । ಭುಜೇ ಭುಜಂಗೇಂದ್ರ ಸಮೇಬಿಭರ್ತುಭವಾ
೬೮. ನಿ ತಿಕ್ಷ್ಮಾಪತಿ ಮಾದಿದೇಶ । ತದಾ ಹರಿಹರೇಶ್ವರಸ್ಸವಿರಚ
೬೯. ಯ್ಯತಚ್ಛಾಸನಂ ನೃಪಾಸನಮುಪಾಗತ ಶ್ರೀ ತಸಿತಾತ ಪ್ರತ್ರೋಜ್ವಲಃ । ವಿ
೭೦. ಧಾಯಖಲು ಷೋಡಶಾ ಪ್ರತಿ ನಿಧೀ ನಿದಾನಾನ್ಯಹೋವ್ಯರೋಚತ ವಿಶಾ
೭೧. ಲ ಸೀಮ್ನಿ ನಗರೇಹಿ ವಿದ್ಯಾಭಿಭಿದೇ । ಅಷ್ಟ ಪಂಚೇಷು ಯುಗಳೈಕ ಸಂ
೭೨. ಖ್ಯಯಾ ಸಂಯುತೇ ಶಕ ನೃಪಸ್ಯ ವತ್ಸರೇ । ಧಾತ್ನ ಮಾಧವವಳಕ್ಷ
೭೩. ಸಪ್ತಮೀ ಸ್ವಹ್ನಿ ಸತ್ಯನಘಲಗ್ನ ತಾರಕೇ । ಪಟ್ಟಾಭಿಷೇಕೋತ್ಸ
೭೪. ತ್ಸವತಃ ಪುರಸ್ತಾತ್ಪಂಪಾ ವಿರೂಪಾಕ್ಷ ಮಹೇಶ್ವರಸ್ಯ ಚಕ್ರೇಹಿತಾ
೭೫. ಖಂಡಿಲ ವಿಕ್ರಮಶ್ರೀಸ್ಸತ್ಪಾತ್ರ ಸಾದ್ಭುಪತಿರಗ್ರಹಾರಾ
೭೬. ಹ ವಿಷ್ಣುಭಟ್ಟ ಮಹಾಭೋಧಿವೃಕ್ಷ ಚಂದ್ರಾಯ ವೈಷ್ಣವೇ । ಶ್ರೀ ಕೌ
೭೭. ಶಿಕಾನ್ವವಾಯಸ್ಯವರಾ ಪ್ರಸೂತ್ರಿಣೇ । ಯಾಜುಷಾಣಾಂವರೇ
೭೮. ಣ್ಯಾಯ ಯತವಾದ್ನ ನಸೀನ್ಯನ್ಯೆ । ಪದವಾಕ್ಯ ಪ್ರಮಾಣೆಷು ಪ


೭೯. ರಾಂ ಪ್ರೌಢಿಮುಪಯುಷೇ । ಭುದಾನರಾತ್ರ ಭೂತಾಯ ಭೂಮಿ ದೇವಾವಾ
೮೦. ಗ್ರಯಾಯಿನೇ । ಪೇರ್ವಾಲಜಾತಾಯಾರ್ಯಾಯ ಭುಸುರೇಂದ್ರಾಯ ಧೀಮ
೮೧. ತೇ ಕೌಶಿಕಾನ್ವಯ ಜಾತಾಯ ಯಜುಃ ಶಾಖ್ಯಾಮುಷೇತಾ ಸಮಧಾ
೮೨. ತುವತೇಸುತಮಾಪಸ್ತಂಭ ಮನುತ್ತಮಂ । ಅದೀತ ಸಾಂಗವೇದಾಯಸ
೮೩. ದಾಚಾರಾಯ ಧೀಮತೇ । ಸತ್ಯ ಸಂಧಾಯ ಶುಚಯೇ ಸರ್ವಭೂತದಯಾಲ
೮೪. ವೇ ತಿಪ್ಪಾಭಟ್ಟಸ್ಯ ಪುತ್ರಾಯ ಚೋಭಲಾಯ ಮನೀಷಿಣೇ ಸುದಾನಪಾತ್ರ
೮೫. ಭುತಾಯ ಸರ್ವ ಶಾಸ್ತ್ರರ್ಥ ಚುಂಚವೇ । ಭಾರದ್ವಾಜಸಗೋತ್ರಾಯ ಆಶ್ವ
೮೬. ಲಾಯನ ಸೂತ್ರಿಣೇ । ಚಕ್ಷುಚಾನಾಂ ವರೇಣ್ಯಾಯ ಸದಾಚಾರಾಯ ಧೀ
೮೭. ಮತೇ । ನೀತಿಶಾಸ್ತ್ರ ಪ್ರವೀಣಾಯ ಸದಾಸನ್ಮಾರ್ಗವರ್ತಿನೇ । ಆರಗ
೮೮. ಮಲ್ಲಪಸ್ತತ್ಯ ತನಯಾಯ ದಯಾಲವೇ । ರಾಪದ್ಮಾಯ ವರ್ಯಾಯ
೮೯. ಸರ್ವಗಣಾಗ್ರಣಾಯಚ । ಅನಿಶಂಕೃತ ಪುಣ್ಯಾಯ ಸಸಿತಾ
೯೦. ಮರ ಭೂರುಹೇ । ತಸ್ಮೈದ್ವಿಜವರೇಣ್ಯಾಯ ಭೂಸುರೇಂದ್ರಾಯ ಧೀ
೯೧. ಮತೇ । ಹಸ್ತಿನಾವಲ್ತೀ ರಾಜ್ಯೇಚ ಕಾತರಿಕ್ಕಾಷ್ಮವೇ ..ಗ
೯೨. ಕೊಪಣಾಚಲೇ ಸೀಮ್ಯತ್ರ ಶುಭೇ ಕೆಲವಲಿ ಸ್ಥಲೇ । ಭೌ
೯೩. ಮೂರೋಸ್ತುಂಗಭದ್ರಾಯಾಃ ಸಂಗಮಾಧೀಶ್ವರಸ್ಯ ಚ । ವೇಗ್ಝಾಂಡನ
೯೪. ಸ್ಯಾ ಹಾಲೋಶ್ವ ಕಸದಾಭೂಯ ಖಂಡಿನಃ ಗ್ರಾಮಸ್ಯ ಹುಲಿಗ್ರಾ
೯೫. ಮಸ್ಯ ಚೇತೇಷಾಂ ಮಧ್ಯಮೇ ಸ್ತಿತಂ । ಗ್ರಾಮೋತ್ತಮಂ ಮ(ಯ) ಪಾ(ಸ)
೯೬. ನವದ್ಯಂ ಮನುತ್ತಮಂ । ಪ್ರತಿನಾಮ್ನೇತಿ ವಿಖ್ಯಾತ ಸೀ
೯೭. ಮ ಹರಿಹರಾಪುರಂ । ಸುತಾಂ ಸರ್ವಜನ್ಯೈಃ ವೀ.ಸವಿ

೩ನೇ ಹಲಗೆ

೯೮. ಗ್ರಾಮೋತ್ತಮಂ ಶುಭಂ । ಸರ್ವಮಾನ್ಯಂ ಚತುಃ
೯೯. ಸೀಮಾ ಸಂಯುತಂ ಚ ಸಮಂತತಃ । ನಿಧಿ
೧೦೦. ನಿಕ್ಷೇಪ ಪಾಷಾಣಾದಷ್ಟ ಭೋಗ್ಯೈ ರಥೇತರ್ಯೈಃ । ವಿವಿಧ
೧೦೧. ಸಫಲೋಯುಕ್ತ ಸ ತಟಾಕ ಸಭೂರುಹಂ । ಆಚಂದ್ರತಾ
೧೦೨. ರಕಂ ಭೋಗ್ಯಂ ಸರ್ವಸಸ್ಯಸುಶೋಭಿತಂ । ಶುಭೋದಯೇ ರಾ
೧೦೩. ಜ್ಯ ಮಹಾಭಿಷಚನ ಕ್ರಿಯಾರಿನೇ ಹರಿಹರರಾಯ ಭೂಪ
೧೦೪. ದೇಶೈಮುದಾ ಸಸ್ಯ ಫಲ್ಯೈಃ ಸಮನ್ವಿತಂ ಚಿರಾಯತೇಭ್ಯಃ ಸ
೧೦೫. ಹವಾರಿಧಾರಯಾ । ಅಸ್ಯಾಗ್ರಹಾರವರ್ಯಸ್ಯ ಚತುಃಸೀಮಾ
೧೦೬. ವಿನಿರ್ಣಯಃ ಸರ್ವೆಷಾಂ ಸುಖಬೋಧಾಯ ಲಿಖ್ಯಂತೇ ದೇಶ ಭಾ
೧೦೭. ಷಾಯಾ । ಮೂಡಲಿಗೆ ಹೊಂನ್ನೂರು ಆ ಮಧ್ಯದಲಿ ಅಡ್ಡಹಳ್ಳಾ

೧೦೮. ಆಗ್ನೇಯದಲಿ ತುಂಗಭದ್ರೆಯಲ್ಲಿ ಕೂಡಿತೂ ತೆಂಕಲು ತುಂಗ
೧೦೯. ಭದ್ರೆ ನೈರುತ್ಯ ಸಂಗಮೇಶ್ವರ ಆ ಮಧ್ಯದಲ್ಲಿ ದಕ್ಷಿಣ ಪ್ರವಾ
೧೧೦. ಹ ವದಕಾನಿಹಳ್ಳ ಪಡುವಲಿಗೆ ವೇಗ್ಯಾಂಡನಹಾಳು ಆ ಮ
೧೧೧. ಧ್ಯದಲ್ಲಿ ಹೂಲಿಹಳ್ಳಿ ಅಲ್ಲಿಂದ ಮೇಕೆ ಡೋರ್ಣ ವಾಯುವ್ಯಕೆ ಕಾಸ
೧೧೨. ವನಖಂಡಿ ಆ ಮಧ್ಯದಲ್ಲಿ ಊಟಿಗುಂಡು ಅಲ್ಲಿಂದ ಅ. ಡಶಾ
೧೧೩.ರೀ ಆ ತರವಾಯಲ್ಲಿ ಕರಡಿಗುಡ್ಡ ಬಡಗಲು ಈಶಾನ್ಯ
೧೧೪. ಕೆ ಹುಲಿಗೆ ಆ ಮಧ್ಯದಲ್ಲಿ ಕಣುವೆ ಮೇರೆ ಅಲ್ಲಿಂದ ಕುದು
೧೧೫. ರೆ ನಲುಕುದುರೆ ಅಲ್ಲಿಂದ ತೆಂಕಲು ಅಡ್ಡಹಳ್ಳದಲ್ಲಿ ಕೂಡಿ
೧೧೬. ತು ದಾನಪಾಲನಯಾರ್ಮಧ್ಯೇ ದಾನ ಛ್ರೇಯೋನು ಪಾಲನಂ । ದಾ
೧೧೭. ನಾ ಸ್ವರ್ಗ ಮವಾಪ್ನೋತಿ ಪಾಲನಾದಚ್ಯುತಂ ಪದಂ ಸ್ವದತ್ತಾದ್ವಿಗು
೧೧೮. ಣಂ ಪುಣ್ಯಂ ಪರದತ್ತಾನು ಪಾಲನಂ ಪರದತ್ತಾಪಹಾರೇಣ ಸ್ವದ
೧೧೯. ತ್ತಂ ನಿಷ್ಪಲಂ ಭವೇ । ಸ್ವದತ್ತಾಂ ಪರದತ್ತಾಂ ವಾಯೋ ಹರೇತ ವ
೧೨೦. ಸುಂಧರಾಂ ಷಷ್ಠಿರ್ವರ್ಷ ಸಹಸ್ರಾಣಿ ವಿಷ್ಟಾಯಾಂ ಜಾಯತೇಕ್ರಿ
೧೨೧. ಮೀಃ ಏಕೈವ ಭಗಿನೀ ಲೋಕೇ ವಂದಸ್ತ ಸರ್ವೇಷಾಮೇವ ಭೂಭೂಜಾಂ
೧೨೨. ನ ಬೋಜ್ಯಾನ ಕರಗ್ರಾಹ್ಯ ವಿಪ್ರದತ್ತಾ ವಸುಂಧರಾ ಸಾಮಾ
೧೨೩. ನ್ಯೋಯಂ ಧರ್ಮ್ಮಸೇತು ನೃಪಾಣಾಂ ಕಾಲೇ ಕಾಲೇ ಪಾಲನಿಯೋ ಭ
೧೨೪. ವದ್ಭಿಃ ಸರ್ವಾನೇತಾನ್ಭಾವಿನಃ ಪಾರ್ಥಿವೇಂದ್ರಾಂ ಭೂಯೋ ಭೂಯೋ ಯಾಚತೆ
೧೨೫. ರಾಮಭದ್ರಃ ।
೧೨೬. ಶ್ರೀ ವಿರೂಪಾಕ್ಷ

೧ನೇ ಹರಿಹರ ಮತ್ತು ವಿದ್ಯಾರಣ್ಯರ ತಾಮ್ರ ಶಾಸನ



೪. ಕೃಷ್ಣದೇವರಾಯನ ಅಪ್ರಕಟಿತ ತಾಮ್ರ ಶಾಸನ

ಡಾ.ಕಲವೀರ ಮನ್ವಾಚಾರ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚೆನ್ನಪಟ್ಟಣದ ಬಳಿ ಮನೆಯೊಂದರ ಮಣ್ಣನ್ನು ಅಗೆಯುತ್ತಿದ್ದಾಗ ದೊರೆತ ಈ ತಾಮ್ರ ಶಾಸನವನ್ನು ಕೆಲಸಗಾರರು ಒಂದೊಂದು ಪಟವನ್ನು ಹಂಚಿಕೊಂಡಿದ್ದರು. ಅದರಲ್ಲಿ ಎರಡು ಪಟಗಳು ದೊರೆತಿದ್ದು ಉಳಿದ ಮಧ್ಯದ ಒಂದು ಪಟ ಕಾಣೆಯಾಗಿದೆ. ಈ ಎರಡು ಹಲಗೆಗಳ ಉದ್ದ ೨೬.೫ ಸೆ.ಮೀ, ಇದ್ದು, ಅಗಲವು ೧೭ ಸೆ.ಮೀ. ಆಗಿದೆ. ಶಾಸನದ ಲಿಪಿಯು ನಾಗರಿಯಾಗಿದ್ದು, ಕೊನೆಯಲ್ಲಿ ಮಾತ್ರ ಶ್ರೀವಿರುಪಾಕ್ಷ ಎಂಬುದು ಮಾತ್ರ ಕನ್ನಡ ಲಿಪಿಯಲ್ಲಿದೆ.

ವಿಜಯನಗರ ಸಾಮ್ರಾಜ್ಯವನ್ನಾಳಿದ ತುಳುವ ವಂಶದ ಕೃಷ್ಣದೇವರಾಯನ ಆಳ್ವಿಕೆಯ ಆರಂಭಿಕ ವರ್ಷಗಳಲ್ಲಿ ಬಂದ ಶಾಸನವಾಗಿದೆ. ಕಾಂಚಿಪುರಂ ತಾಮ್ರ ಶಾಸನ, ಕುಂಭಕೋಣಂ ತಾಮ್ರ ಶಾಸನ ಹಾಗೂ ಶ್ರಿರಂಗಪಟ್ಟಣದ ತಾಮ್ರ ಶಾಸನಗಳ ಮಾದರಿಯಲ್ಲಿಯೇ ಈ ಶಾಸನವನ್ನು ಬರೆಯಲಾಗಿದೆ. ಶಕವರ್ಷ ೧೪೩೭ ಆಕ್ಟೋಬರ್ ೭ಕ್ಕೆ ಸರಿಹೊಂದುತ್ತದೆ.

ಈ ತಾಮ್ರಶಾಸನವು ದಾನ ಶಾಸನವಾಗಿದ್ದು, ಆರಂಭವಾಗುವುದು ಶ್ರೀಗಣಾಧಿಪತಯೇ ನಮಃ ಎಂದು. ಮುಂದಿನ ಶ್ಲೋಕಗಳಲ್ಲಿ ಶಿವಸ್ತುತಿ ಹಾಗೂ ವಿಷ್ಣುಸ್ತುತಿ ಬಂದಿದೆ. ಶಾಸನದ ಮುಂದಿನ ಬಾಗದಲ್ಲಿ ತುಳು ವಂಶದ ಮೂಲಪುರುಷನನ್ನು ಹೇಳುತ್ತಾ ಚಂದ್ರನಿಂದ ಬುಧ, ಬುಧನಿಂದ ಪುರೂರವ, ಪುರೂರವನಿಂದ ನಹುಷ ನಹುಷನಿಂದ ಯಯಾತಿ, ಯಯಾತಿಯಿಂದ ತುರ್ವಸು ಎಂಬ ಪುರಾಣ ವ್ಯಕ್ತಿಗಳಿಂದ ವಂಶವೃಕ್ಷವನ್ನು ಕಟ್ಟಿಕೊಡಲಾಗುತ್ತದೆ. ನಂತರ ಚಾರಿತ್ರಿಕ ವ್ಯಕ್ತಿಗಳಾದ ದೇವಕಿ ಹಾಗೂ ತಿಮ್ಮ ಎಂಬುವರಿಂದ ಈಶ್ವರ, ಈಶ್ವರ ಹಾಗೂ ಬುಕ್ಕಮಾ ಅವರುಗಳಿಂದ ನರಸ ಎಂಬುವನು ಹುಟ್ಟಿದರು. ನರಸನಾಯಕನಿಂದ ತಿಪ್ಪಾಜಿಯಲ್ಲಿ ವೀರನರಸಿಂಹ ಹಾಗೂ ನಾಗಲಾಂಬಿಕೆಯಿಂದ ಕೃಷ್ಣರಾಯನು ಹುಟ್ಟಿದರು ಎಂದು ಶಾಸನ ವಿವರಿಸುತ್ತದೆ. ನಂತರದಲ್ಲಿ ಶಾಸನವು ಮುಂದುವರೆದಿದೆ. ಕೃಷ್ಣರಾಯನ ವಿಜಯಗಳನ್ನು ವರ್ಣಿಸುತ್ತಾ ಚೇರ, ಚೋಳ, ಪಾಂಡ್ಯ, ಮಧುರಾವಲ್ಲಭ, ತುರುಷ್ಕ ಹಾಗೂ ಗಜಪತಿಗಳನ್ನು ಸೋಲಿಸಿ ಗಂಗಾ ತೀರದಿಂದ ಶ್ರೀಲಂಕಾದವರೆಗೆ ಅವನ ಸಾಮ್ರಾಜ್ಯವು ವಿಸ್ತರಿಸಿತ್ತು ಎಂದು ಹೇಳುತ್ತದೆ. ಅಲ್ಲದೆ ರಾಯನು ಅನೇಕ ದೇವಾಲಯಗಳಿಗೆ ದಾನಕೊಟ್ಟ ವಿಷಯವನ್ನು ಮುಂದೆ ವಿವರಿಸುತ್ತದೆ.

ಮಹತ್ವದ ಉಲ್ಲೇಖಗಳಿರುವ ಮಧ್ಯದ ಪಟ ಕಳೆದಿರುವುದರಿಂದ ದಾನತೆಗೆದು ಕೊಂಡ ವ್ಯಕ್ತಿ, ದಾನಕೊಟ್ಟ ಭೂಮಿ, ಊರು ಮುಂತಾದ ಅನೇಕ ವಿಷಯಗಳು ಲುಪ್ತವಾಗಿವೆ. ಆದರೂ ಶಾಸನದ ಕೊನೆಯ ಕೆಲವು ಸಾಲುಗಳಲ್ಲಿ ಬರುವ ಅಂಶಗಳಿಂದ ಹೀಗೆ ಹೇಳಬಹುದು. ಮಲ್ಲಿದೇವಭಟ್ಟನ ಅಗ್ರಜನಾದ, ಪುರಾಣಾಗಮ, ವೇದ ವೇದಾರ್ಥಗಳಲ್ಲಿ ಪಾಂಡಿತ್ಯವನ್ನು ಹೊಂದಿದ ಕೇಶವ ಭಟ್ಟನಿಗೆ ಭೂಮಿಯನ್ನು ದಾನವಾಗಿ ಕೊಟ್ಟಿರುವುದನ್ನು ತಾಮ್ರಪಟ ಉಲ್ಲೇಖಿಸುತ್ತದೆ. ಶಾಸನವು ರಾಯನ ಆಸ್ಥಾನ ಕವಿ ಸಭಾಪತಿಯಿಂದ ರಚಿತವಾಗಿದ್ದು, ಮಲ್ಲಣಾರ್ಯನಿಂದ ಲಿಖಿತವಾಗಿದೆ.

ಮಧ್ಯದ ಪಟ ಕಳೆದು ಹೋಗಿರುವುದರಿಂದ ಅನೇಕ ಮಹತ್ವದ ವಿಷಯಗಳು ಕಾಣೆಯಾಗಿದೆ. ಅದು ದೊರಕಿದರೆ ಮಹತ್ವದ ವಿಷಯಗಳನ್ನು ಪುನರ್ ರಚಿಸಬಹುದಾಗಿದೆ.

ಪಠ್ಯ

೧. ಗಣಾಧಿಪತೆಯೆ ನಮಃ ನಮಃಸ್ತುಂಗ ಶಿರಸ್ತುಂಬಿ ಚಂದ್ರಚಾಮರ ಚಾರ

೨. ವೈ ತ್ರೈಲೋಕ್ಯ ನಗರಾರಂಭ ಮೂಲಸ್ತಂಬಾಯ ಶಂಭವೇ ॥ ಹರೇಲ್ಲೀಲಾ ವರಾಹಷ್ಯ

೩. ದಂಷ್ಟ್ರದಂಡಃ ಸಪಾತುವಃ॥ ಹೇಮಾದ್ರ ಕಲಶಾ ಯತ್ರ ಧಾತ್ರಛತ್ರಿಶ್ರೀಯಂಧೌ॥

೪. ಕಲ್ಯಾಣಾಯಾಸ್ತು ತದ್ಧಾಮ ಪ್ರತ್ಯೂಹತಿಮಿರಾಪಹಂ ಯದ್ಗಜೋಪ್ಯ ಗಜೋ

೫. ದ್ಭೂತಂ ಹರಿಣಾಪಿ ಚ ಪೂಜ್ಯತೇ । ಅಸ್ತಿ ಕ್ಷಿರಮಯಾದ್ದೇವೈ ಮಥ್ಯಾಮಾನಾನ್ಮ

೬. ಹಾಂಭುದ್ಧೈಃ । ನವನೀತಮಿವೋದ್ಭೂತಮಪನೀತ ತಮೋಮಹಃ । ತಸ್ಯಸಿತ್ತ

೭. ನಯಃ ಸ್ತಪೋ ಹಿರತುಲೈರನ್ವರ್ಥ ನಾಮಾ ಬುಧಃ ಪುಣ್ಯೆರಸ್ಯ ಪುರುರೇವಾ ಭು

೮. ಜಬಲೈರಾಯುದ್ವಿಷಾಂನಿನ್ನತಃ । ತಸ್ಯಾಯುರ್ನ್ನಹುಷೋಷ್ಯ ತಸ್ಯಾಪುರುಷೇ ಯುಧೋ

೯. ಯಯಾತಿ ಕ್ಷಿತೌ ಖ್ಯಾತಸ್ತಸ್ಯ ತುತೂವಗಸೂರ್ವಸುನಿಭ ಶ್ರೀ ದೇವಯಾನಿ ಪತೇ

೧೦. ತದ್ವಂಸೇ ದೇವಕಿ ಜಾನಿದಿ ದೀಪೇ ತಿಮ್ಮಭೂಪತಿಃ ಯಶಸ್ವೀ ತುಲುವೇಂದ್ರೇಷು

೧೧. ಯದೋ ಕೃಷ್ಣ ಇವಾನ್ವಯೇ । ತತೋಭೂದ್ಬುಕ್ಕ ಮಜಾನಿರೀಶ್ವರ ಕ್ಷಿತಿಪಾಲ

೧೨. ಕಃ ಅತ್ರಾ ಸುಮಗುಣ ಭ್ರಂಶಂ ಮೌಲೀರತ್ನಂ ಮಹಿಭುಜಂ । ಸರಸಾದುದಭುತ್ತಸ್ಮಾ

೧೩. ನಾರಸಾವನಿಪಾಲಕಃ ॥ ದೇವಕೀ ನಂದನಾತ್ಮಕೋ ದೇವಕೀ ನಂದನಾದಿವ

೧೪. ಕಾವೇರೀ ಮಾಸುಬುದ್ಧಾ ಬಹುಲ ಜನ ತರಾಯೋ ವಿಲಂಘ್ಯೈವ ಶತೃತಜೀವಗ್ರಾ

೧೫. ಹಂಗ್ರಹೀತ್ವಾ ಸಮಿತಿ ಭುಜಬಲಾತ್ರಂಚ ರಾಜ್ಯಂ ತದೀಯಾಂ ॥ ಕೃತ್ವ ಶ್ರೀರಂಗ

೧೬. ಪೂರ್ವಕಂ ತದಪಿ ನಿಜವಶೇ ಪಟ್ಟಣಂ ಯೋ ಬಭಾಸೇ ಕೀರ್ತಿ ಸ್ತಂಭಂ ನಿಖಾಯತ್ರಿ

೧೭. ಭುವನ ಭುವನ ಸ್ತೂಯಮಾನಾ ಪದಾನ । ಚೇರಂ ಚೋಲಂಚ ಪಾಣ್ಡ್ಯಂ ತಮಪಿ ಚಮ

೧೮. ದುರಾ ವಲ್ಲಭಮ ಮಾನಭೂಷಾಂ ವೀರ್ಯ್ಯಾದಗ್ರಂ ತುರುಷ್ಕಂ ಗಜಪತಿ ನೃಪತಿ ಚಾಮ

೧೯. ದಿತ್ವಾ ತದನ್ಯಾನ್ । ಆ ಗಂಗಾ ತೀರ ಲಂಕಾ ಪ್ರಥಮ ಚರಮ ಭೂಭೃತ್ತಟಾಂತರನಿ

೨೦. ತಾಂತಂ ಖ್ಯಾತ ಕ್ಷೋಣಿಪತೀನಾಂ ಸ್ರಜಮಿವ ಶಿರಸಾಂ ಶಾಸನಂ ಯೋ ವ್ಯಧಾ

೨೧. ನಿತ್ ವಿವಿಧ ಸುಕೃತೋದ್ದಾಮೇ ರಾಮೇಶ್ವರ ಪ್ರಮುಖೇ ಮುಹರ್ಮುದಿತ ಹೃದಯ

೨೨. ಸ್ಥಾನೇ ಸ್ಥಾನೇ ವ್ಯಾಧತ್ತ ಯಥಾ ವಿದಿ । ಬುಧ ಪರಿವೃತೋ ನಾನಾ ದಾನಾನಿ

೨೩. ಯೋ ಭುವಿ ಷೋಡಶ ತ್ರಿಭುವನ ಜನೋದ್ಗೀತಂ ಸ್ಥಿತಂ ಯಶಃ ॥ ಪುನರುಕ್ತಯನ್

೨೪. ಪ್ವಾಜೀ ನಾಗಲಾದೇವ್ಯೋ ಕೌಸಲ್ಯಾ ಶ್ರೀಸುಮಿತ್ರಯೋ ದೇವ್ಯೋರಿವ ನೃಸಿಂಹೇದ್ರಾ

೨೫. ತ್ತಸ್ಮಾಪಂಕ್ತಿ ರಥಾದಿವ ವೀರೌ ವಿನಇನೌ ರಾಮಲಕ್ಷ್ಮಣ ವಿವನಂದನೌ ॥ ಜಾ

ಮೂರನೇ ಹಲಗೆಯ ಮುಂಭಾಗ

೨೬. ಕೃಪತಟಾಕೈಶ್ಚ ತಚ್ಚೇನಾಪಿ ಸಮನ್ವಿತಂ । ಪುತ್ರ ಪೌತ್ರಾದಿಭಿ ಬೋ

೨೭. ಗ್ಯಂ ಕ್ರಮಾದಾ ಚಂದ್ರತಾರಕಂ । ದಾನಸ್ಯಾ ದಮನಸ್ಯಾಪಿ ವಿಕ್ರಯಸ್ಯಾ

೨೮. ಪಿ ಚೋಚಿತಂ । ಪರಿತಃ ಪ್ರಯತೌಃ ಸ್ನಿಗ್ಧೋಃ ಪುರೋಹಿತ ಪುರೋಗಮೈಃ । ವಿವಿಧೌರ್ವಿಬುಧೈಃ

೨೯. ಶ್ರೋತಪಥಿಕೈರಧಿಕೈರ್ಗಿರ । ಕೃಷ್ಣದೇವಮಹಾರಾಯೋ ಮಾನನೀಯೋ ಮನಸ್ವಿನಾಂನಾ

೩೦. ಹಿರಣ್ಯಪಯೋ ಧಾರಾಪೂರ್ವಕಂ ದತ್ತವಾನ್ಮುದಾ । ತತಃ ಪುರಂ ಮಲ್ಲಿಭಟ್ಟೋದೇವಂ ಯಾತೇತ

೩೧. ದಗ್ರಜಃ ಪುರಾಣಾಗಮ ವೇಧರ್ಥತತ್ವಜೋ ವದತಾಂವಟಃ ಸೂರಿಃ ಕೇಶವಭಟ್ಟಾಖ್ಯಃ ಸು

೩೨. ಧಾನಿಷ್ಮಾಂದಿ ಸುಕ್ರಿಭಿಃ । ಪುರಾಣೇಷು ಚ ಶಾಸ್ತ್ರೀಷು ವಿವ್ಯಣ್ವನಿಜರಾತ್ಯರೀಃ ಯುವ

೩೩. ಸಂವತ್ಸರೇ ಮಾಸಿ ಕಾರ್ತಿಕೇ ಸೋಮವಾಸರೇ ದರ್ಶೇ ಚ ಪುಣ್ಯದಿವಸೇ ವಿದ್ವಾದ್ಭಂಪ ವಿಶೋ

೩೪. ಭಿತಂ । ಕೃಷ್ಣರಾಯಮಹೀ ಪಾಲಂ ಸಂತೋಷ್ಯಾ ದಾಯ ಶಾಸನಂ । ಅಕಲ್ಪಮಾನ್ಮನೋ ಭೋ

೩೫. ಗ್ಯಾಃ ಪುತ್ರಪೌತ್ರಾದಿಭಿಃ ಕ್ರಮಾದ್ವಿತ್ರಿಂಶದ್ವೃತ್ತೀ ವಿಧಾಯಾ ನ್ಯಾವೃತ್ತೀರಕೃತವಿಪ್ರಸಾ. ॥

೩೬. ಷಷ್ಟಿ ವೃತ್ತಿ ಸಮಾಯುಕ್ತೇ ಗ್ರಾಮೇಸ್ಮಿನ್ ಧರಣಿ ಸುರಾಃ । ವೃತ್ತಿ ಮಸೋ ವಿಲಿಖ್ಯತೇ ವೇ

೩೭. ದವೇದಾಂಗ ಪಾರಗಃ ॥ ಶೈವವೈಷ್ಣನ ದೇಶ್ಯೆ ದ್ವೈವೃತ್ತಿಯ ಮಿಹಾಪ್ನುತೇ

೩೮. ತದಿದಮವನೀವನೀಪ ಕವಿಭ್ರುತ ಧರಾಯಸ್ಯ ಕೃಷ್ಣರಾಯಸ್ಯ ಶಾಸನಮುರು ಕ

೩೯. ವಿ ವೈಭವ ನಿವಹ ನಿದಾನಸ್ಯ ಭೂರಿ ದಾನಸ್ಯ ಕೃಷ್ಣದೇವಮಹಾರಾಯ ಶಾಸನೇನ ಸಭಾ

೪೦. ಪತಿ ಅಭಾಣೀ ಮೃದ (ಸ)ಂರ್ಭಂ ತದಿದಂ ತಾಂಬ್ರ ಶಾಸನಂ ಕೃಷ್ಣದೇವಮಹಾರಯಸ್ಯ ಭೂಮಿ

೪೧. ಪಾಲಸ್ಯ ಶಾಸನಂ ಮಲ್ಲಣಾಚಾರ್ಯವರ್ಯೇಣ ಲಿಖಿತಂ ತಾಂಬ್ರ ಶಾಸನಂ

೪೨. ದಾನಪಾಲಯೋರ್ಮಧ್ಯೇ ದಾನಾಚ್ಚೇಯೋನುಪಾಲಂ । ದಾನಸ್ವರ್ಗಮವಾಪ್ನೋತಿ ಪಾಲ

೪೩. ನಾದಚ್ಯುತ ಪದಂ ॥ ಸ್ವದತ್ತಾಂ ದ್ವಿಗುಣಂ ಪುಣ್ಯಂ ಪರದತ್ತಾನುಪಾಲಂ ಪರದ

೪೪. ತ್ತಾಪಹಾರೇಣ ಸ್ವದತ್ತಂ ನಿಷ್ಫಲಂ ಭವೇತ್॥ ಸ್ವದತ್ತಾಂ ಪರದತ್ತಾಂ ವಾಯೋ ಹರೇ

೪೫. ಚ್ಚ ವಸುಂಧರಾಂ ಷಷ್ಠಿರ್ವ ಸಹಸ್ರಾಣಿ ವಿಷ್ಟಾಯಾಂ ಜಾಯತೆ ಕ್ರಿಮಿ॥ ಏಕೈವ ಭ

೪೬. ಗಿನಿ ಲೋಕೇ ಸರ್ವೇಷಾಮೇವ ಭುಭುಜಾಂ । ನ ಭೋಜ್ಯಂ ನಖರಗ್ರಾಹ್ಯಾ ವಿಪ್ರದತ್ತಾ ವಸುಂಧರಾ॥

೪೭. ಸಾಮಾನ್ಯೋಯಂ ಧರ್ಮಸೇತು ನೃಪಾಣಾಂ ಕಾಲೆ ಕಾಲೆ ಪಾಲನೀಯೋ ಭವದ್ಭಿಃ ಸರ್ವಾನೇ

೪೮. ತಾನ್ ಭಾವಿನಃ ಪ್ರಾರ್ಥಿವೇಂದ್ರಾನ್ ಭೂಯೋಭೂಯೋ ಯಾಚತೇ ರಾಮಚಂದ್ರಃ (॥)

ಶ್ರೀ ವಿರುಪಕ್ಷ

ಈ ಸಾಲುಗಳ ಮಧ್ಯ ಸ್ವಲ್ಪ ಜಾಗವನ್ನು ಬಿಡಲಾಗಿದೆ.

ಕನ್ನಡ ಲಿಪಿಯಲ್ಲಿ ಬರೆಯಲಾಗಿದೆ

೫. ಹಂಪೆಯ ಪರಿಸರದಲ್ಲಿ ಎರಡು ಹೊಸ ಶಾಸನಗಳು

ಡಾ.ಆರ್.ಗೋಪಾಲ್

ಹಂಪೆಯ ಪರಿಸರದಲ್ಲಿ ಈಗಾಗಲೇ ನೂರಾರು ಶಾಸನಗಳು ಸಂಶೋಧನೆಯಾಗಿ ಪ್ರಕಟಗೊಂಡಿವೆ. ಆದರೆ ಈಗಲೂ ಇಲ್ಲಿ ಹೊಸದಾಗಿ ಶಾಸನಗಳು ಬೆಳಕಿಗೆ ಬರುತ್ತಿರುವುದು ಉತ್ತಮ ಸಂಶೋಧನಾತ್ಮಕ ಬೆಳವಣಿಗೆಯಾಗಿದೆ. ಈ ಹಿನ್ನೆಲೆಯಲ್ಲಿ ಇಲ್ಲಿ ದೊರೆತ ಶಾಸನಗಳಿಂದ, ಸೈನಿಕ ಕಾರ್ಯಾಚರಣೆಗೆ ಸಂಬಂಧಿಸಿದ ಕೋಟೆ, ಕೊತ್ತಳ, ಬಾಗಿಲು, ಹೆಬ್ಬಾಗಿಲು, ದಿಡ್ಡಿ ಮುಂತಾದವುಗಳಾದರೆ ಧಾರ್ಮಿಕ ಹಿನ್ನೆಲೆಯಲ್ಲಿ ದೇವಾಲಯ, ಮಠ, ಮಂಟಪ, ಭಾವಿ, ಛತ್ರ, ಅಗ್ರಹಾರದಂತಹ ವಿದ್ಯಾಕೇಂದ್ರಗಳು, ತೀರ್ಥಗಳು, ಪರ್ವತಗಳ ನೆಲೆ ಹಿನ್ನೆಲೆ ಹಾಗೂ ರಾಜಕೀಯ ಇತಿಹಾಸಕ್ಕೆ ಸಂಬಂಧಿಸಿದಂತೆ ಬಹುಮುಖ್ಯವಾಗಿ, ವಿಶ್ಲೇಷಣೆಯನ್ನು ಗತಇತಿಹಾಸದ ಮೇಲೆ ಬೆಳಕನ್ನು ಚೆಲ್ಲುವುದರಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಿವೆ ಎಂದು ಹೇಳುವ ದಿಶೆಯಲ್ಲಿ ಅತಿಶಯೋಕ್ತಿ ಎನಿಸಲಾರದು. ಈ ಪ್ರಬಂಧದಲ್ಲಿ ಹೊಸದಾಗಿ ಸಂಶೋಧನೆಯಾದ ಎರಡು ಶಾಸನಗಳ ಕುರಿತಾಗಿ ವಿವೇಚಿಸಲಾಗಿದೆ. ಒಂದು ಶಾಸನ ಸೈನಿಕವಾಸ್ತು ಕಲೆಗೆ ಸಂಬಂಧಿಸಿದ ಭದ್ರತೆಗಾಗಿ ಪ್ರಾಕೃತಿಕ ಗುಂಡು ಬಂಡೆಗಳನ್ನು ಅರಸರು ಉಪಯೋಗಿಸಿಕೊಂಡಿರುವ ರೀತಿ ಅಮೂಲ್ಯವಾದುದು. ಅಂತಹದೊಂದು "ಕೊತ್ತಳ" ವನ್ನು ಉಲ್ಲೇಖಿಸುವ ಶಾಸನ ಈಗಿನ ಕಮಲಾಪುರ-ಹಂಪೆ ರಸ್ತೆಯಲ್ಲಿರುವ ಅಕ್ಕ-ತಂಗಿಯರ ಗುಂಡಿನ ಮೇಲೆ ಇರುವುದು. ಈ ಗುಂಡನ್ನು ಜಾನಪದರು ಅಕ್ಕ ತಂಗಿಯರ ಗುಂಡು ಎಂದು ಕರೆದಿರುವರು. ಆದರೆ ಈ ಗುಂಡಿನ ಮೇಲಿರುವ ವಿಜಯನಗರ ಕಾಲದ ಶಾಸನದನ್ವಯ "ಪ್ರತಾಪ ಕೊತ್ತಳ" ಎಂದು ಕರೆದು ಇದನ್ನು ಸೈನಿಕರ ಕಾವಲು ಗೋಪುರವನ್ನಾಗಿ ಉಪಯೋಗಿಸಿ ಕೊಳ್ಳಲಾಗಿದೆ.

ಶ್ರೀ ಪ್ರತಾಪ ಕೊತ್ತಳ

ಈ ಶಾಸನ ಗುಂಡಿನ ದಕ್ಷಿಣ ಭಾಗದಲ್ಲಿರುವ ಗುಂಡಿನ ಮೇಲೆ ಇದೇ ಹೆಸರಿನ ಶಾಸನವು ೧೯೮೩ರಲ್ಲಿ ಇಲಾಖೆಯಿಂದ ಸಂಶೋಧನೆಯಾಗಿದೆ. ಒಟ್ಟಾರೆ ಈಗಾಗಲೇ ಇರುವ ೧೩ ಕೊತ್ತಳಗಳ ಸಂಖ್ಯೆಗೆ ಇದೊಂದು ಹೊಸ ಕೊತ್ತಳದ ಶಾಸನ ಸೇರ್ಪಡೆಯಾಗಿ ೧೪ಕೊತ್ತಳಗಳು ಆಗುತ್ತವೆ. ಈ ಶಾಸನದ ಮೇಲ್ಭಾಗದಲ್ಲಿ ಮತ್ತೊಂದು ಕೊತ್ತಳವನ್ನು ಉಲ್ಲೇಖಿಸುವ ಶಾಸನವೂ ಇರುವುದು. ಇದನ್ನು ತೆಪ್ಪದ ತಿಪ್ಪಣ್ಣನ ಕೊತ್ತಳವೆಂದು ಕರೆಯಲಾಗಿದೆ. ಅಕ್ಕ ತಂಗಿಯರ ಗುಂಡಿನ ಬಳಿ ಮೂರು ಕೊತ್ತಳಗಳು

ಇವೆ ಎಂದರೆ ಇದರ ಮಹತ್ವದ ಬಗ್ಗೆ ಯೋಚಿಸ ಬೇಕಾದ ಅಂಶವನ್ನು ಮರೆಯುವಂತಿಲ್ಲ. ಪಶ್ಚಿಮ ಭಾಗದಲ್ಲಿರುವ ಕೋಟಿ ಶಂಕರ ದೇವರ ಬಾಗಿಲು ಹಾಗು ಇದರ ಅತ್ಯಂತ ಸಮೀಪದಲ್ಲಿರುವ ಅರಮನೆಗಳ ಆವರಣದ ಭದ್ರತೆಯ ದೃಷ್ಟಿಯಿಂದ ಇಲ್ಲಿ ಮೂರು ಕೊತ್ತಳಗಳನ್ನು ಸ್ಥಾಪಿಸಿರುವುದು ಮುಖ್ಯವಾದ ಅಂಶವಾಗಿದೆ. ಕೊತ್ತಳಗಳು ಸೈನಿಕ ಕಾರ್ಯಾಚರಣೆಯಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ದೂರದಲ್ಲಿ ಬರುವ-ಹೋಗುವ ಜನರ ಹಾಗೂ ವೈರಿಪಡೆಗಳ ಸಕಲ ವೀಕ್ಷಣೆ ಈ ಸ್ಥಳದಿಂದಲೇ ಸಾಧ್ಯವಾಗುತ್ತಿತ್ತು. ಆದ್ದರಿಂದ ಎತ್ತರ ಸ್ಥಳವನ್ನು ಆಯ್ಕೆ ಮಾಡಿ ಕೊತ್ತಗಳೆಂದು ಕರೆಯುತ್ತಿದ್ದರು. ಉದಾಹರಣೆಗೆ. ಆನೆಗೊಂದಿ ಕೊತ್ತಳ, ಸೋಮಯ್ಯದೇವರ ಕೊತ್ತಳ, ಮೀಸರಗಂಡನ ಕೊತ್ತಳ, ಮದನ ಕೊತ್ತಳ, ಹನುಮನಕೊತ್ತಳ, ಸಂಖರ ದೇವರ ಕೊತ್ತಳ, ಸ್ವಾಮಿ ದ್ರೋಹರ ಗಂಡನ ಕೊತ್ತಳ, ಹಂಪೆಯ ಕೊತ್ತಳ, ಮತಂಗದೇವರ ಕೊತ್ತಳ, ಮಳಲವಿನಾಯಕನ ಕೊತ್ತಳ - ಹೀಗೆ ಈ ಕೊತ್ತಳಗಳು ಸಂಗಮ ವಂಶದ ಶ್ರೀಬುಕ್ಕರಾಯ ಮಹಾರಾಯನ ಕಾಲದಿಂದಲೇ ಬೆಳಕಿಗೆ ಬಂದಿರುವುದನ್ನು ಶಾಸನಗಳು ಉಲ್ಲೇಖಿಸುತ್ತವೆ. ಶ್ರೀವೀರ ಬುಕ್ಕರಾಯನ ವಿಜಯ ನಗರ ಪಟ್ಟಣದ, ಸಿಂಘಾರದ ಹೆಬ್ಬಾಗಿಲ ಬಡಗಣ ಅರೆಯ ಮೇಲಣ ಆನೆಗೊಂದಿಯ ಕೊತ್ತಳಕ್ಕೆ ಮಂಗಳ ಮಹಾ ಎಂದು ಹಾಗೂ ಸೋಮವಾರದ ಬಾಗಿಲು ಮತ್ತು ಸೋಮಯದೇವರ ಕೊತ್ತಳ ಎಂಬ ಶಾಸನಗಳು ಬಹುಮುಖ್ಯ ಆಧಾರಗಳು ಈ ಕೊತ್ತಳಗಳ ಇತಿಹಾಸವನ್ನು ಹಾಗೂ ವಿಜಯನಗರ ಸ್ಥಾಪನೆಯನ್ನು ತಿಳಿಸುವ ಮೂಲ ಆಕರಗಳಾಗಿವೆ.

ಎರಡನೆಯದಾಗಿ ಇದೇ ಅಕ್ಕ ತಂಗಿಯರ ಗುಂಡಿನ ದಕ್ಷಿಣ ಭಾಗದಲ್ಲಿ ಕಡೆರಾಮ ಪುರದ ದಾರಿಯಲ್ಲಿ ಕೋಟಿ ಶಂಕರ ದೇವರ ಬಾಗಿಲ ಬಳಿ ಪೂರ್ವಕ್ಕೆ ಬಂಡೆಯ ಮೇಲೆ ಇರುವ ಚಿಕ್ಕ ಶಾಸನ "ಶ್ರೀಮಾರಪ" ಎಂದು ಉಲ್ಲೇಖಿಸುತ್ತದೆ.

ಶ್ರೀಮಾರಪ

ಶ್ರೀಮಾರಪನ ಕುರಿತಾದ ಶಾಸನವೊಂದು ಈಗಾಗಲೇ ಹೇಮಕೂಟ ಪರ್ವತದಲ್ಲಿದೆ. ಹೇಮಕೂಟದ ಶಾಸನದನ್ವಯ ಹರಿಯಪ್ಪ, ಮಾರಪ್ಪ, ಬುಕ್ಕಣ್ಣ, ಮುದ್ದಣ್ಣ .... ಮುಂತಾಗಿ ಹೆಸರುಗಳು ಸೂಚಿತವಾಗಿವೆ. ಈ ಮಾರಪ್ಪನು ಸಂಗಮದೇವನ ಐದು ಜನ ಮಕ್ಕಳಲ್ಲಿ ಒಬ್ಬಾತನು. ಈ ಶಾಸನದಲ್ಲಿ ಉಲ್ಲೇಖಿತ ವ್ಯಕ್ತಿ ಸಂಗಮ ವಂಶದನವೆಂದು ಪರಿಗಣಿತವಾಗುತ್ತದೆ.

ಒಟ್ಟಾರೆ ಈ ಎರಡೂ ಶಾಸನಗಳು ಚಿಕ್ಕದಾಗಿದ್ದರೂ ಇವುಗಳ ಹಿನ್ನಲೆ ಐತಿಹಾಸಿಕ ಮಹತ್ವ ಉನ್ನತವಾಗಿರುವ ಅಂಶವನ್ನು ಕಾಣಬಹುದು.

ಉಲ್ಲೇಖ

೧. Vijayanagara progress of Research, 1979-83, 1983-84, 1984-87.

೨. Vijayanagara Inscriptions. Vol - I 1995, C.S.Patil.

೩. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ.೩, ಹಂಪಿ ಶಾಸನಗಳು-೨೦೦೦.

೬. ಗೋವಾದ ಶ್ರೀ ನಾಗೇಶಿ ದೇವಾಲಯದ ಶಿಲಾಶಾಸನ

ಡಾ.ಎಸ್.ಜಿ.ಸಾಮಕ್

ಗೋವಾರಾಜ್ಯದ ಪೊಂಡಾನಗರದಿಂದ ೪ ಕಿ.ಮೀ ದೂರದಲ್ಲಿ ಬಂದೇವಡ, ಇಂದಿನ ಬಂದೊರ ಗ್ರಾಮದಲ್ಲಿರುವ ಶ್ರೀನಾಗೇಶ ದೇವಾಲಯದೆದುರಿಗೆ ಗೋಡೆಯಮೇಲಿರುವ ಈ ಶಾಸನ ವಿಜಯನಗರದಕಾಲದ್ದಾಗಿದ್ದು ಅಪ್ರಕಟಿತ ಶಿಲಾಶಾಸನವಾಗಿದೆ. ಇದರ ಲಿಪಿ ನಾಗರಿ ಹಾಗೂ ಕೊಂಕಣಿ ಭಾಷೆಯಲ್ಲಿ ಬರೆಯಲ್ಪಟ್ಟಿದೆ.

ಶ್ರೀನಾಗೇಶಿ ದೇವಾಲಯ ಕ್ರಿ.ಶ. ೧೪೧೩ರಲ್ಲಿ ಗೋವೆಶೈಲಿಯಲ್ಲಿ ನಿರ್ಮಿತ ವಾಗಿದ್ದು, ಮರಾಠರ ಕಾಲದಲ್ಲಿ ಅಭಿವೃದ್ಧಿಗೊಂಡಿದೆ. ಗರ್ಭಗೃಹದೊಳಗೆ ನಾಗನಾಥ ಶಿವನ ಲಿಂಗವಿದ್ದು, ಗರ್ಭಗುಡಿಯ ಬೆಳ್ಳಿಯ ಬಾಗಿಲದ್ವಾರದ ಇಕ್ಕೆಲೆಗಳಲ್ಲಿ ಎರಡು ಸಣ್ಣ ದೇವಕೋಷ್ಟದೊಳಗೆ ಲಕ್ಷ್ಮೀನಾರಾಯಣ ಹಾಗೂ ಗಣೇಶ ಮೂರ್ತಿಗಳಿವೆ. ಕಂಬಗಳ ಮೇಲೆ ರಾಮಾಯಣದ ಹಲವು ದೃಶ್ಯಗಳನ್ನು ಕಾಣಬಹುದಾಗಿದೆ. ದೇವಾಲಯದ ಎದುರಿನಲ್ಲಿ ಸುಂದರವಾದ ಎತ್ತರದ ದ್ವೀಪಸ್ತಂಭವಿದ್ದು ಮುಂಬದಿಯಲ್ಲಿ ವಿಶಾಲವಾದ ಕೆರೆಯಿದೆ. ಅಘನಾಶಿನಿ ನದಿಯೂ ಸಮೀಪದಲ್ಲೇ ಹರಿಯುತ್ತಿದೆ.

ಗಣಪತಿಯ ವಂದನೆಯೊಂದಿಗೆ ಪ್ರಾರಂಭವಾಗಿರುವ ಈ ಶಾಸನ ಶಾ.ಶಕ.ವರ್ಷ ೧೩೩೫ (ಕ್ರಿ.ಶ.೧೪೧೩) ರಲ್ಲಿ ವಿಜಯನಗರದೊರೆ ಮಹಾರಾಜಾಧಿರಾಜ ಪರಮೇಶ್ವರ ಶ್ರೀ ವೀರಪ್ರತಾಪ ದೇವರಾಯ ಮಹಾರಾಯ ೧೪೦೬-೧೪೨೨ ಸುಖಸತ್ಕಥಾ ಕ್ರೀಡಾವಿನೋದದಿಂದ ಸಕಲ ರಾಜ್ಯದಲ್ಲಿ ಆಳ್ವಿಕೆನಡೆಸುತ್ತಿದ್ದ ಸಮಯದಲ್ಲಿ ಕಾಳಿಕಾಂಬೆಯ ಆಶೀರ್ವಾದದಿಂದ ಗೋವಾ ಸಿಂಹಾಸನವನ್ನು ನಂಜಂಣ ಗೋಸಾವಿ ಅಲಂಕರಿಸಿದ್ದನು. ಈ ಸಮಯದಲ್ಲಿ ವಿಜಯ ಸಂವತ್ಸರ ಪುಷ್ಯ ವ ೩೦ .... ಅರ್ಧೋದಯ ಪುಣ್ಯಕಾಲದಲ್ಲಿ ಶುಕಳಳೀ ಗ್ರಾಮದ ಕೇವಣಯ್ಯನ ತಾಯಿ ಸೇಣ ವಯ್ಯಾಸಿ ಎಂಬುವಳು ಬಂದೇವಡ ಗ್ರಾಮದ ಮಧ್ಯ ಭಾಗದಲ್ಲಿರುವ ನಾಗನಾಥ ದೇವರ ಸನ್ನಿಧಿಯಲ್ಲಿ ಗೋಪಾಲ ಭಟ್ಟನಿಗೆ ಕಾರ್ತೀಕ ಮಾಸದ ದೀಪಮಾಲೆ, ಮುಂತಾದ ವಿವಿಧ ಪೂಜಾಕೈಂಕರ್ಯಗಳಿಗೆ ಆ ಗ್ರಾಮದ ಹಲವು ಜಮೀನುಗಳನ್ನು ಆಚಂದ್ರಾರ್ಕಪರ್ಯಂತ ಉಪಯೋಗಿಸಲು ಹಿರಣ್ಯೋಣದಕಸಹಿತ ನೀಡಿದ ವಿವರ ಈ ಶಾಸನದಲ್ಲಿದೆ.

ಗೋವಾದ ಶ್ರೀ ನಾಗೇಶಿ ದೇವಾಲಯದೆದುರಿಗೆ ಗೋಡೆಯ ಮೇಲಿರುವ ಶಿಲಾಶಾಸನ

ಶಾಸನ ಪಾಠ

೧. ಶ್ರೀ ಗಣೇಶಾಯ ನಮಃ ।
೨. ಸಮಸ್ತುಂಗ ಶಿವ (*ರ) ಶ್ಚುಂಬಿ ಚಂದ್ರಚಾಮರ ಚಾರವೇ ।
೩. ತ್ರೈಲೋಕ್ಯನಗರಾರಂಭಂ ಮೂಲಸ್ತಂಭಯ ಶಂಭವೇ ॥
೪. ಸ್ವಸ್ತಿ ಶ್ರೀ ಸಾಲವಾಹನ ಶಕು ೧೩೩೫ ವರಿಷ ಅದ್ಯ ।
೫. ಮಹಾರಾಜಾಧಿರಾಜ ಪರಮೇಶ್ವರ ಶ್ರೀ ವೀರಪ್ರತಾಪ ದೇವರಾಯ ಮಹಾರಾಯ
೬. ವಿಜಯನಗರೀ ಸುಖಸತ್ಕಥಾಕ್ರೀಡಾವಿನೋದೇ ಸಕಲರಾಜ್ಯ
೭. ಪ್ರತಿಪಾಳಿತ ಅಸತ್ ಕಾಳೀತ್ಯಾಂಚಾ ಪ್ರತಿಹಸ್ತು ಗೋವೆ
೮. ಸಿಂಹಾಸನೀ ಧರ್ಮ ಧರ್ಮವಿಚಾರ ಪಚು ನಂಜಂಣ
೯. ಗೋಸಾವೀ ರಾಜ್ಯಕರಿತೇ ಕಾಲೀ ವಿಜಯ ಸಂವತ್ಸರ
೧೦. ಪುಷ್ಯ ವ ೩೦ ರ... ॥
೧೧. ಪೌ ಅರ್ದೋದಯ ಪುಣ್ಯಕಾಲೀ ಶುಕಳಳೀಗ್ರಾಮೇ ಪುರುಷಕೇಣವಯ್ಯ
೧೨. ಪೂ (ಸೂ*) ತು ಮಾಯಿ ಸೇಣವಯ್ಯಾಸಿ ಬಂದೇವಡ ಗ್ರಾಮೆ
೧೩. ಗ್ರಾಮ ಪುರುಷ ರಾಮನಾಯಕು। ನಾಗಣನಾಯಕು। ರಾಮಪ್ರಭು।
೧೪. ಮಾ೦ ಗೇಪ್ರಭು ॥ ಹೇ ಮುಖ್ಯ ಪ್ರಾಜಾಸಹಿತ ಸಮಾ
೧೫. ದ ಗ್ರಾಮೀಚೆ ನಿದತ್ತ॥ ಧರ್ಮಶಾಸನಾಚಿ ಭಾಸಣಸಿ
೧೬. ಅಮಚ್ಯಾ ಗಾವಾ೦ಭೀತರಿ ಶ್ರೀ ನಾಗನಾಥದೆವಸನ್ನಿಧಿ ಗೋಪಾಳ ಭ
೧೭. ಟ್ಟಾ ಗಾವೇ ವೇದಖಂಡಿಕೇಚೆ ಕುಲಗ್ರಪ್ರಾಕ ಶ್ರೀ ಮಹಾಲಕ್ಷ್ಮೀ
೧೮. ದೇವೀಸ ಅಖಂಡ ಜ್ಯೋತಿಸಿ ವರ್ಷ ಪ್ರತಿವರ್ಷ
೧೯. ತೇಲ ಬಾರಾತಾಂಬಿಯ ವೆಗಳೆ ಕರೂನು ತ್ಯಾ ಉಪರಿ
೨೦. ಗೋಪಾಳ ಭಟಾನ ದ್ಯಾವೆ ಟಾ೦ ೩॥ ತಯಂ ಸೂತು ಕೇಶೋಭಟನಾವೆ ಮೇಳೋ ಕು
೨೧. ಳಾಗ್ರ ಕಟು ಬ್ಯಾಣ ಟಾ ೬ ಪೈಕಿ ಕಾರ್ತಿಕ ೩ ಬಾಂದೆ
೨೨. ಧ್ಯಾವ ಟಾ೦ ಉತ ಉಭಾವಜೆ ಚಾಳೆ ೩॥ ಸಂ ಮಂಧತಯಾ ಮಾಯಿ ಸೆಣವ್ಯೆಯಾ
೨೩. ಹ ಶ್ರೀ ಗ್ರಾಮಾನೆ ರೋಕಡೆ ಟಾ ೨೦ ಘೆವುನು ತಯಚ್ಯಾ
೨೪. ಕುಳಾಗ್ರಾವರೀ ಆಚಂದ್ರಾರ್ಕ್ ಪರ್ಯಂತ ಸಹಿರನ್ಯೋದಕದಾನ ಧಾರಾ ಪೂರ್ವಕ ಕರೂನು ಸರ್ವ ಸಮಸ್ತ ಸರ್ವ ಭಾಧಾ ವಿವರ್ಜಿತ ಕರೂನು

೨೫. ದಿಧಲೆ ತೆಯಾ ಮಾಯಿ ಸೆಣವ್ಯೆಯೆ ಆಪುಲಿಯೆ ಭಕ್ತಿ ಪೂರ್ವಕ
೨೬. ಶ್ರೀ ನಗನಾಥದೇವಾಸಿ ವರ್ಷ ಪ್ರತಿವರ್ಷ ಕಾರ್ತಿಕ ಪುನವೇ ದೀಪಮಾಳಾ
೨೭. ಜಳೂಂಚಿಯ ಭಾಸೆ ಆಚಂದ್ರಾರ್ಕ ಪ
೨೮. ರ್ಯಂತ ತಥಾ ಗೋಪಾಳ ಭಟ್ಟಾನೆತಯಾ ಪುನವೇಚಾ
೨೯. ದೀಸಿಲ ಪರ್ವತೀಚ್ಯಾತಾಂಬಿಯಾ ಯಕಾಪ್ರತಿ ಸೋಳಾಸಿಯಾ ೧೭ ಲೇಖಿ
೩೦. ತೆಲಾ ತಾಂಬಿಯ ಸಂಭಂಧ ಸೂಳಸಿಯಾ ೫೧ ತಿಳೆಲ
೩೧. ನಾಹಿ ತರಿ ನಾರಲೇಲ ಅಥವಾ ತೂಪ ಮೆಜೂನಿ ದೇವುಳಿಧ್ಯಾ
೩೨. ವೆ ತಥಾ ದೀಪಮಾಳೇನಿ ಪಣತಿಯಾ ೪೦೦ ವಾತೀಸಿ ಲಾಗ
೩೩. ತೆತುಕೆ ಸೂತ ಯತುಕ ಗೋಪಾಳ ಭಟಾನೆ ದೇವುನ ದೀಪಮಾಳ
೩೪. ಕರಾವಿ ಶ್ರೀ ನಾಗನಾಥದೇವಾನಿ ರಾತ್ರಿ ಮಹಾಸ್ತ್ರ ಪನ
೩೫. ಗಂಧ ಧೂಪ ದೀಪ ಉಪಹಾರ ತಾಂದುಳಾ ಚೌಥ ತೂಪ ಸೋಳ
೩೬. ಸಿ ೧ ॥ ಪಂಕ್ವಾನ್ನಾವಡೆ ಕಾಂದಾರಿಯಂ ೮ ಶಾಕ ೨ ವಿಡಾ ೧ ದೋಯಿ
ದೇವುಳಿ ಮಂತ್ರ ಅವಸ
೩೭. ರೂ ಕರಾಮಿ ದೀಪಮಾಳೆಚ್ಯಾ ಖಾಂದ್ಯಾಪಾಕಿ ಗಿದಾ ೨
೩೮. ಚ್ಯಾ ನಿವೇದು ಕರಾವಾ ಹೆ ಯಯೆ ತುಕ್ಯಾಸಿ ತಯಾಮಾಯಿ ಶೆಣವ್ಯೆಯೆ
೩೯. ತಯಾ ಗೋಪಾಳ ಭಟಾಸಿ ತಯ್ಯಾಚ್ಯಾ ದೋಕುಳಾಗ್ರೀಚೆ ಟಾಂಕೆ
೪೦. ೩ । ದಿದ್ದಲೆ ಸಂಮಂಧಿ ತ್ಯಾ ಗೋಪಾಳ ಭಟಾಚ್ಯೇ ಜಾತ
೪೧. ಪ್ರಜಾಸತಂತತಿನ ಆಚಂದ್ರಾರ್ಕಪರ್ಯಂತ ಚಾಲವಾವಾ ತಯಾ
೪೨. ದಿನೆ ನಾಗನಾಥ ಧೇವಾಚ್ಯಾ ಉಪಹಾರ ವಾರಿಯೆ ಮಾಳೆ
೪೩. ರ ಉಳಗಿಂದೂವಾಳಿಮರ ತ್ಯಾನ ದೌಂ ವರ್ಗಿ ದೀಪ
೪೪. ಮಾಳಾ ಜಳಾವೀ ತಯಾಚ್ಯ ಜಾತ ಪ್ರಜಾತ ಸಂತತೀನ ದೀಪಮಾಳಾ ಜ -
೪೫. ಲಾವಿ ತಯಾ ಗ್ರಾಮಾನ ತಯಾ ಮಾಯಿ ಸೆಣವಯ್ಯಾಸಿ ಕುರು -
೪೬. ಪಾಂಗುಸಿ ವಾಡೆರುವೋಕು ಪಾಗ್ರ । ನಾಗರ್ಝುರಿ ಮಳೋ ಸೇತ । ದತ್ತ ಭು
೪೭. ಮಿ ದೋನಿದೇತಾಕುಗ್ರಾಚೆ ಮಾಯಿ ಸೆಣವಯ್ಯಾಹಸ್ತೇ ಗ್ರಾಮಾನ
೪೮. ಟಾಕೆ ೫೦ ಘೆವೂನ ಸಹಿರಣ್ಯೋದಕ ದಾನ ಧಾರಾ ಪೂರ್ವಕ ಸರ್ವ
೪೯. ನಮಸ್ಯ ಸರ್ವಭಾದಾವಿವರ್ಜಿತ ಕರೂನು ಗ್ರಾಮಾನಂ ಗ ಮಾಯಿ -
೫೦. ಸೆಣವಯ್ಯಾಸಿ ಆಚಂದ್ರಾರ್ಕಪರ್ಯಂತ ದಿಧಲೆ ॥

೫೧. ತಯಾ ಮಾಯಿಸೆಣವ್ಯೆಪಿ ಆಪುಲೆ ಭಕ್ತಿ ಪೂರ್ವ್ಕ ೧ರೂವೋ ಕು
೫೨. ಳಾಗ್ರ ಶ್ರೀನಾಗನಾಥದೇವಾಸಿ ಪ್ರಾತಃಕಾಲಿ ಆಠವ
೫೩. ಲಿಯೆಚ್ಯಾ ಉಪಹಾರಾಸಿ ಪ್ರತಿದಿವಸಿ ೧೬ ಪಾ ೧ ಕಾ
೫೪. ಸುರೈ ಸಹಿತ ತಾಂದುಳಂಗಿಂದಾ ೧ ಲೇಖೀಂಕರೇಚಿಯ ಭಾಸೆ
೫೫. ತಯಾರುವೂಕುಳಾಗ್ರಾ ಗೋಲಾನಿ ವಾಡೆಲಖಯ ಸೆನವಯ್ಯಾ
೫೬. ಸುನ ವಿಠಲ ಸೆನವ್ಯೆಯಾಸಿ ತಯಾಂಚೆ ಜೀತ ಪ್ರಜಾ
೫೭. ತ ಸಂತತಿಸಿ ಆಚಂದ್ರಾರ್ಕಪರ್ಯಂತ ದಿಧಲೆ ನಾಗರ್ಘೀರ ಮೇಳೋ
೫೮. ಸೇತ ಶ್ರೀ ಮಹಾ ಲಕ್ಷ್ಮೀ ದೇವಿಸಿ ಪ್ರಾತಃಕಾ
೫೯. ಲಿ ಆಠವಲಿರ್ಯಚ್ಯಾ ಉಪಹಾರಾಸಿ ದಿಧಲೆ ಸಂಮಂಧಿ ತಯಾ
೬೦. ದೇವತೇಂಚ್ಯಾ ಪೂಜಾರ್‍ಯನ ತಯಾಂ ಕ್ಷೇತ್ರ ದೇವು
೬೧. ನು ದೇವತೇಸಿ ಅಭಿಷೇಕು ಗಂಧ ಧೂಪ ದೀಪ ಸುರೆ ಸಾಡಿಕ
೬೨. ತಾಂದುಳ ಗಿಂದಾ ೧ ಲೇಖೀ ಉಪಹಾರು ಕರಾವಾ ವಿಡಾ
೬೩. ಮಂತ್ರಾವಸರು ಕರಾವಾ ತಥಾ ಉಪಹಾರು ದೇವಾರುಯಸಿ । ಹಾಕೇಲಾ
೬೪. ಧರ್ಮಗ್ರಾಮಾನ ಚಾಲವಾವಾ ಸಿಂಹಾಸ -
೬೫. ನಿಚ್ಯಾ ರಾಯನ ಅಧಿಕಾರಿಯಾ ವಳೀತಿಯಾನ ಪಾಳೇವಾ ।
೬೬. ಹಾಕೆಲಾ ಧರ್ಮ ಜೋಮೋಡಿ ತೇಣೆ ವಾರಾಣ
೬೭. ಸಿ ಶ್ರೀ ವಿಶ್ವೇಶ್ವರಾ ಸನಿಧಿ ಸೂರ್ಯಗ್ರಣಿ ಆಪುಲೇ ಮಾತಾಪಿ
೬೮. ದಾನ ಪಾಲಿಸಿರ್ಯೋರ್ಮದ್ಯೇ ದಾನಾಸ್ತ್ರ ಪಾಲನಂ । ದಾನ ತ್ಸ್ವಗಮ -
ತಾತಾ ಗಾಯಿ ವಾದಿಲ್ಯಾ ಪಾಪಾಸಿ ಜಾಯಿ
೬೯. ಪದಂ ॥ ಸಮಾನ್ಯೋಯಂ ಧರ್ಮಸೇತುರ್ನಪಾಣಾಂ ಕಾಲೇಕಾಲೇಪಾಲ
ನಿಯೋ ಭಾವಾಬ್ಧಿಃ ।
೭೦. ಸರ್ವಾನೇತಾನ್ಭವೀನಃ ಪ್ರಾರ್ಥವೇಂದ್ರಾ ಭೂಯೋಭೂಯೋಯಾಚತೇ -
ರಾಮಚಂದ್ರಃ ।
೭೧.ಸ್ವದತ್ತಾಂ ಪರದತ್ತಾಂ ವಾಯೋಹರೇಚ್ಛ ವಸುಂಧರಾಂ ಪಷ್ಠಾವರ್ಷ ಸಹಸ್ರಾಣಿ ವಿ
೭೨. ಷ್ಟಾಯಾಂ ಜಾಯತೇ ಕೃಮಿಃ ॥ ತಯಂ ಉಪಹಾರು ಆಣಿತಾ ಪ್ರಾಕಾ ದೇವಾಚೆ ಉ
೭೩. ಲಿಗಾಚೆ ಮಾಣೆಸಿ ಉಲಗ ಕರೂನ ಉಪಹಾರಾ ದ್ಯಾವಾ ।

೭೪. ಶ್ರೀ ಶುಭಂ
ಭುವತು ಶ್ರೀ
(ಮನುಷ್ಯನ ಚಿತ್ರವಿದೆ)

ಸಾರಾಂಶ

ಗಣಪತಿ ವಂದನೆಯೊಂದಿಗೆಪ್ರಾರಂಭವಾಗಿರುವ ಈ ಶಾಸನ ಶಾ.ಶಕ ವರ್ಷ ೧೩೩೫ (ಕ್ರಿ.ಶಕ. ೧೪೧೩) ರಲ್ಲಿ ವಿಜಯನಗರದದೊರೆ ಮಹಾರಾಜಾಧಿರಾಜ ಪರಮೇಶ್ವರ ಶ್ರೀ ವೀರಪ್ರತಾಪ ದೇವರಾಯ ಮಹಾರಾಯ ೧೪೦೬ ೧೪೨೨ ಸುಖ ಸತ್ಕಥಾ ಕ್ರೀಡಾವಿನೋದದಿಂದ ರಾಜ್ಯವನ್ನು ಆಳ್ವಿಕೆನಡೆಸುತ್ತಿದ್ದ ಸಮಯದಲ್ಲಿ ಗೋವಾ ಸಿಂಹಾಸನವನ್ನು ನಂಜಂಣ ಗೋಸಾವಿ ಅಲಂಕರಿಸಿದ್ದನು. ಆ ಸಮಯದಲ್ಲಿ ವಿಜಯ ಸಂತ್ಸವರ ಪುಷ್ಯ ವ ೩೦ ..... ಅರ್ಧೋದಯ ಪುಣ್ಯಕಾಲದಲ್ಲಿ ಶುಕಳಳೀಗ್ರಾಮದ ಕೇಣವಯ್ಯನ ತಾಯಿ ಸೇಣವಯ್ಯಾಸಿ ಎಂಬುವಳು ಬಂದೇವಡೆ ಗ್ರಾಮದ ಪ್ರಮುಖ ರಾದ ರಾಮನಾಯಕ, ನಾಗಂಣನಾಯಕ, ರಾಮಪ್ರಭು ಮುಂತಾದವರ ಎದುರಿನಲ್ಲಿ ಗ್ರಾಮದ ಮಧ್ಯ ಭಾಗದಲ್ಲಿರುವ ನಾಗನಾಥ ದೇವರ ಸನ್ನಿಧಿಯಲ್ಲಿ ಮಹಾಲಕ್ಷ್ಮೀ ಉಪಾಸಕ, ಪ್ರಕಾಂಡ ಜ್ಯೋತಿಷಿ ಗೋಪಾಲ ಭಟ್ಟನ ಮಗ ಕೇಶವ ಭಟ್ಟನಿಗೆ ಕಾರ್ತಿಕ ಮಾಸದಲ್ಲಿ ಶ್ರೀನಾಗನಾಥ ದೇವರಿಗೆ ದೀಪೋತ್ಸವ (ದೀಪಮಾಲೆ) ಸೇವೆಯನ್ನು ಹಾಗೂ ಆ ಸಂದರ್ಭದಲ್ಲಿ ನೈವೇದ್ಯ ಮುಂತಾದ ವಿವಿಧ ಪೂಜಾಕೈಂಕರ್ಯಗಳಿಗೆ ಆ ಗ್ರಾಮದ ಹಲವು ಜಮೀನುಗಳನ್ನು ಆಚಂದ್ರಾರ್ಕಪರ್ಯಂತ ಉಪಯೋಗಿಸಲು ಹಿರಣ್ಯೋದಕ ಸಹಿತ ದಾನ ನೀಡಿದ ವಿವರ ಈ ಶಾಸನದಲ್ಲಿದೆ. ದೀಪಾರಾಧನೆಗೆ ೧೨ ತಂಬಿಗೆ (ಕೊಡ) ಎಳ್ಳು ಅಥವಾ ತೆಂಗಿನ ಎಣ್ಣೆ ಅಥವಾ ತುಪ್ಪವನ್ನೇ ಉಪಯೋಗಿಸಬೇಕೆಂದೂ ಹಾಗೂ ೪೦೦ ದೀಪದ ಹಣತೆಗಳನ್ನು ಹಚ್ಚಬೇಕೆಂಬ ಕರಾರಿದೆ. ಹಾಗೂ ನೈವೇದ್ಯಕ್ಕೆ ಪಕ್ವಾನ್ನ, ವಡೆ, ಬಿಡಾ ಮುಂತಾದವು ಗಳನ್ನು ನೀಡಬೇಕೆಂಬ ವಿವರ ಸಹಾ ಇದ್ದು ಅದಕ್ಕೆ ಸಾಕಷ್ಟು ಹಣವನ್ನೂ ನೀಡಲಾಗಿದೆ.

ಶ್ರೀನಾಗೇಶಿ ದೇವಾಲಯ ಕ್ರಿ.ಶಕ. ೧೪೧೩ಗೋವೆ ಶೈಲಿಯಲ್ಲಿ ನಿರ್ಮಿತವಾಗಿದ್ದು, ಮರಾಠರ ಕಾಲದಲ್ಲಿ ಅಭಿವೃದ್ಧಿಗೊಂಡಿದೆ. ಗರ್ಭಗೃಹದೊಳೆಗೆ ನಾಗನಾಥ ಶಿವನ ಲಿಂಗವಿದ್ದು, ಗರ್ಭಗುಡಿಯ ಬೆಳ್ಳಿಯ ಬಾಗಿಲದ್ವಾರದ ಇಕ್ಕೆಲೆಗಳಲ್ಲಿ ಎರಡು ಸಣ್ಣ ದೇವಕೋಷ್ಟದೊಳಗೆ ಲಕ್ಷ್ಮೀನಾರಾಯಣ ಹಾಗೂ ಗಣೇಶ ಮೂರ್ತಿಗಳಿವೆ. ಮರದ ಕಂಭಗಳ ಮೇಲೆ ರಾಮಾಯಣದ ಹಲವು ದೃಶ್ಯಗಳನ್ನು ಕಾಣಬಹುದಾಗಿದೆ. ದೇವಾ ಲಯದ ಎದುರಿನಲ್ಲಿ ದೀಪ ಸ್ತಂಭವಿದೆ. ಹಾಗೂ ಪ್ರಾಕಾರದ ಮುಂಭಾಗದಲ್ಲಿ ಸುಂದರವಾದ ಪುಷ್ಕರಣಿ ಇದೆ. ನಾಗೇಶಿ ದೇವಾಲಯ ಗೋವಾ ರಾಜ್ಯದಲ್ಲಿರುವ ಪುರಾತನ ದೇವಾಲಯಗಳಲ್ಲಿ ಒಂದಾಗಿದ್ದು ಪೋರ್ಚುಗೀಸರ ಆಕ್ರಮಣದಿಂದ ತಪ್ಪಿಸಿಕೊಂಡು ಇಂದಿಗೂ ತನ್ನ ತನವನ್ನು ಉಳಿಸಿಕೊಂಡಿದ್ದು ಹಲವಾರು ಗೌಡ ಸಾರಸ್ವತರಿಗೆ ಮನೆ ದೇವರಾಗಿದೆ.

ಈ ಶಾಸನದ ರೀತಿಯಲ್ಲಿ ಗೋವಾದಲ್ಲಿ ಹಲವಾರು ಶಾಸನಗಳು ಬೆಳಕನ್ನು ಕಾಣದೇ ಎಲೆಮರೆಯಕಾಯಿಯಂತಿವೆ. ಅವುಗಳ ವ್ಯವಸ್ಥಿತ ಅಧ್ಯಯನ ನಡೆದರೆ ವಿಜಯನಗರ ಇತಿಹಾಸದ ಬಗ್ಗೆ ಹಾಗೂ ಗೋವಾ ಕರ್ನಾಟಕದ ನಡುವಿನ ಗತಕಾಲದ ರಾಜಕೀಯ, ಸಾಂಸ್ಕೃತಿಕ ಹಾಗೂ ಧಾರ್ಮಿಕ ವಿಷಯಗಳ ಬಗ್ಗೆ ಹೊಸಬೆಳಕನ್ನು ಚೆಲ್ಲಬಹುದಾಗಿದೆ.

ಪ್ರಸ್ತುತ ಶಾಸನವನ್ನು ಅಧ್ಯಯನಕ್ಕೆ ನೀಡಿ ಸೂಕ್ತ ಮಾರ್ಗದರ್ಶನ ನೀಡಿರುವ ಕೆಳದಿ ಶ್ರೀ ಗುಂಡಾಜೋಯಿಸರಿಗೆ ಹಾಗೂ ಈ ಶಾಸನದ ಪಾಠವನ್ನು ಅರ್ಥೈಸಲು ಸಹಕರಿಸಿದ ಶಿವಮೊಗ್ಗದ ಶ್ರೀ ಭಂಡಾರ್ಕರ್, ವಿವೇಕ ರಾವ್ ಮುಂತಾದವರಿಗೆ ಅನಂತಧನ್ಯವಾದಗಳು.

೭. ಆನೆಗೊಂದಿ ರೂಢಾಚಾರ್ಯರ ಮಠದ ತಾಮ್ರಶಾಸನ

ಡಾ.ವಾಸುದೇವ ಬಡಿಗೇರ

ಹಂಪಿ ಆನೆಗೊಂದಿ ಪ್ರದೇಶ ವಿಜಯನಗರ ಪೂರ್ವದಲ್ಲಿ ಪ್ರಮುಖ ಧಾರ್ಮಿಕ ಕೇಂದ್ರವಾಗಿತ್ತು. ವಿಜಯನಗರ ಸ್ಥಾಪನೆಯ ನಂತರ ರಾಜಧಾನಿ ಪಟ್ಟಣವಾಗಿ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮುಂತಾದ ಕ್ಷೇತ್ರಗಳಲ್ಲಿ ವಿಸ್ತಾರ ರೂಪ ಪಡೆಯುತ್ತ ಬಂತು. ಆರಂಭದಿಂದಲೂ ಇದೊಂದು ಧಾರ್ಮಿಕ ಕೇಂದ್ರವಾಗಿದ್ದರಿಂದ ಅನೇಕ ಮಠ ಪರಂಪರೆಗಳು ಬೆಳೆದು ಬರಲು ಕಾರಣವಾಯಿತು. ವಿಜಯನಗರ ರಾಜ್ಯ ಸ್ಥಾಪನೆಯ ನಂತರ ಇವು ಆರ್ಥಿಕವಾಗಿ ಸದೃಢವಾದವು. ಇವುಗಳಲ್ಲಿ ಆನೆಗೊಂದಿಯಲ್ಲಿದ್ದ ಸರಸ್ವತಿ ಮಠ ರೂಢಾಚಾರ್ಯರಾದಿಯಾಗಿ ಗುರುಪರಂಪರೆಯನ್ನು ಹೊಂದಿತ್ತು. ಇದರ ಶಾಖೆ ಕರ್ನಾಟಕದಾದ್ಯಂತ ಹರಡಿದ್ದವು. ವಿಜಯನಗರ ಸಾಮ್ರಾಜ್ಯ ಪತನಾನಂತರ ಆಂಧ್ರ ಪ್ರದೇಶ ಮತ್ತು ಕರ್ನಾಟಕದಲ್ಲಿ ಈ ಪರಂಪರೆಯ ಶಾಖಾ ಮಠಗಳ ಸಂಖ್ಯೆ ಹೆಚ್ಚಾದವು. ಇಂದಿಗೂ ಆನೆಗುಂದಿಯ ಉತ್ತರ ಭಾಗದಲ್ಲಿ ಬೆಟ್ಟದ ಅಡಿಯಲ್ಲಿರುವ ಒಂದು ಮಠವನ್ನು ಮೇಲಿನಮಠ ಇಲ್ಲವೆ ಸರಸ್ವತಿ ಮಠವೆಂದು ಸ್ಥಳೀಯರು ಕರೆಯುತ್ತಾರೆ.

ವಿಜಯನಗರ ಕಾಲದಲ್ಲಿ ಈ ಪ್ರದೇಶದಲ್ಲಿದ್ದ ಮಠಗಳಿಗೆ, ಜನಾಂಗಕ್ಕೆ ಸಾಮಾಜಿಕವಾಗಿ ಜಾತ್ರೆ ಉತ್ಸವಗಳಲ್ಲಿ ಕೆಲವು ಸ್ಥಾನ ಮಾನಗಳಿದ್ದವು. ಅವು ಇಂದಿಗೂ ಮುಂದುವರೆದುಕೊಂಡು ಬಂದಿರುವುದನ್ನು ಕಾಣುತ್ತೇವೆ. ಹಂಪಿ ಅದರ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಾಸಮಾಡಿಕೊಂಡಿರುವ ಕುರುಬರು, ಬೇಡರು, ಬೆಸ್ತರು ಬ್ರಾಹ್ಮಣರು ವಿರೂಪಾಕ್ಷನ ಉತ್ಸವದಲ್ಲಿ ಕೆಲವು ಹಕ್ಕುಭಾಧ್ಯತೆಗಳನ್ನು ಪಡೆದುಕೊಂಡಿದ್ದಾರೆ.

ರೂಢಾಚಾರ್ಯ (ಸರಸ್ವತಿ) ಮಠ

ಪ್ರಸ್ತುತ ಶಾಸನ ಉಲ್ಲೇಖಿಸುವಂತೆ ಈ ಮಠದ ಸ್ಥಾಪಕರಿಗೆ ಆಹಾರ, ವ್ಯವಹಾರ, ಪಾಪಪ್ರಾಯಶ್ಚಿತ ಮಾಡುವುದಕ್ಕೆ ಬಾದ್ಯಸ್ಥರಾಗಿದ್ದರು. ಈ ಪರಂಪರೆಯಲ್ಲಿ ರೂಢಾಚಾರ್ಯರು ಅಥವಾ ಕಾಳಹಸ್ತಾಚಾರ್ಯರು ತಮ್ಮ ವಂಶಸ್ಥರೆಂದು ಹೇಳಿಕೊಂಡಿದ್ದಾರೆ. ಅಲ್ಲದೆ ಅವರು ಹಂಪಿ, ಹಸ್ತಿನಾವತಿ, ಶಿರಶೃಂಗಿ, ಕಾಶಿ, ಕಾಳಹಸ್ತಿಯನ್ನೊಳಗೊಂಡ ಪಂಚಸಿಂಹಾಸನಾಧಿಪತಿಗಳಾಗಿದ್ದರು.

ಈ ತಾಮ್ರಶಾಸನ ಅಂತರವಳ್ಳಿ ಹಾಗೂ ಆನೆಗುಂದಿ ಮಠಗಳ ಮಧ್ಯನಡೆದ ವ್ಯಾಜ್ಯವನ್ನು ತಿಳಿಸುತ್ತದೆ. ಇದರ ಕಾಲ ಶಕವರುಷ ೧೪೪೨ ಅಂದರೆ ಕ್ರಿ.ಶ. ೧೫೨೦.

ವಿದ್ಯಾನಗರ ಸಿಂಹಾಸನದ ಕಾಳಹಸ್ತಾಚಾರ್ಯ ಹೆಸರಿನ ಸದ್ಯೋಜಾತ ಸ್ವಾಮಿಗೆ ವಿಜಯನಗರ ಅರಸ ಶ್ರಿಕೃಷ್ಣದೇವರಾಯ, ಮಹಾಮಂಡಳೇಶ್ವರ ದಳವಾಯಿ ತಿಮ್ಮ ರಾಜು ಮತ್ತು ತ್ರಿಮತಸ್ಥ ಬ್ರಾಹ್ಮಣರು ಜಯರೇಖೆಯನ್ನು ಬರೆದುಕೊಟ್ಟ ವಿಷಯ ವಿದೆ.

ವ್ಯಾಜ್ಯಕ್ಕೆ ಕಾರಣ

ಆನೆಗುಂದಿಯಲ್ಲಿ ರೂಢಾಚಾರ್ಯರ ಮಠವಿತ್ತು. ಅಂತರವಳ್ಳಿಯ ನಿರಂಜನಯ್ಯ ಹಾಗೂ ಮೂರು ಜಾವದಯ್ಯ ಎಂಬುವರು ಶ್ರೀ ವಿರೂಪಾಕ್ಷದೇವರ ರಥೋತ್ಸವಕ್ಕೆ ಬರುತ್ತಾರೆ. ಈ ಉತ್ಸವದಲ್ಲಿ ಆನೆಗುಂದಿ ಪೀಠ ತಮ್ಮದು, ಅದರ ಮೂಲ ಪರಂಪರೆಗೆ ಸಂಬಂಧಿಸಿದಂತೆ ಸಾಕಷ್ಟು ದಾಖಲೆಗಳು ತಮ್ಮಲ್ಲಿವೆಯೆಂದು ವಾದಿಸುತ್ತಾರೆ.

ಈ ಹಿನ್ನೆಲೆಯಾಗಿ ತ್ರಿಮತಸ್ಥ ಬ್ರಾಹ್ಮಣರ ಸಮ್ಮುಖದಲ್ಲಿ ಸಭೆ ನಡೆಯುತ್ತದೆ. ಎರಡೂ ಮಠಗಳ ದಾಖಲೆಗಳನ್ನು ಸಭಾಧ್ಯಕ್ಷರು ಪರೀಶೀಲಿಸುತ್ತಾರೆ. ಅಂತರವಳ್ಳಿಯ ನಿರಂಜನಯ್ಯ ಮೂರುಜಾವದಯ್ಯ ಇವರಿಬ್ಬರು ಸಲ್ಲಿಸಿದ ದಾಖಲೆಗಳನ್ನು ಅಲ್ಲಗಳೆ ಯುತ್ತಾರೆ. ಶ್ರೀ ರೂಢಾಚಾರ್ಯರ ವಂಶೋದ್ಭವರಾದ ಸದ್ಯೋಜಾತಸ್ವಾಮಿಗಳು ಇದರ ಹಕ್ಕುದಾರರೆಂದು ಸಭೆ ತೀರ್ಮಾಸುತ್ತದೆ. ಆಗ ನಿರಂಜನಯ್ಯ ಹಾಗೂ ಮೂರು ಜಾವದಯ್ಯ ಅವರು ಆನೆಗುಂದಿಯೇ ಮೂಲ ಪೀಠ, ಈ ಮೊದಲು ತಮ್ಮ ಮಠ ದವರು ರೂಢಾಚಾರ್ಯರ ಮಠಕ್ಕೆ ಕಪ್ಪ-ಕಾಣಿಕೆಗಳನ್ನು ಕೊಡುತ್ತಿದ್ದುದಾಗಿ ಒಪ್ಪಿ ಕೊಂಡು, ತಾವು ಮಾಡಿದ ತಪ್ಪಿಗೆ ೩೦೦ ಗದ್ಯಾಣ ದಂಡ ಕಟ್ಟುತ್ತಾರೆ.

ಶಾಸನ ವಿಮರ್ಶೆ

ಪ್ರಸ್ತುತ ಶಾಸನದಲ್ಲಿ ಕೃಷ್ಣದೇವರಾಯನ ಹೆಸರು ಮತ್ತು ಕಾಲ ದಾಖಲೆಯಾಗಿದೆ. ಲಿಪಿಭಾಷೆಯನ್ನು ಗಮನಿಸಿದರೆ. ಡಾ.ದೇವರ ಕೊಂಡಾರೆಡ್ಡಿಯವರ ಅಭಿಪ್ರಾಯದಂತೆ ಸು.೧೮ನೇ ಶತಮಾನಕ್ಕೆ ಸೇರುತ್ತದೆ.

ಪ್ರಸ್ತುತ ಬ್ರಾಹ್ಮಣರ ೨೪ ಹೆಸರುಗಳು ಇದರಲ್ಲಿ ನಮೂದಾಗಿವೆ. ಅವುಗಳಲ್ಲಿ ಬಿ.ಅಪ್ಪಾಜಿರಾವು ಮುನ್ಸಿ ಹುಜೂರು ಎನ್ನುವುದು ೧೫ನೆಯ ಶತಮಾನದ ಶಾಸನಗಳಲ್ಲಿ ಬರುವ ಹೆಸರುಗಳಿಗೆ ಭಿನ್ನವಾಗಿ ಕಾಣುತ್ತದೆ. ಕೃಷ್ಣದೇವರಾಯ, ಆತನ ದಂಡನಾಯಕ, ತಿಮ್ಮರಾಜು ದಳವಾಯಿಯ ಹೆಸರುಗಳನ್ನು ಉಲ್ಲೇಖಿಸುವ ಈ ಶಾಸನದಲ್ಲಿ ತ್ರಿಮತಸ್ಥ ಬ್ರಾಹ್ಮಣರು ಮಾತ್ರ ವ್ಯಾಜ್ಯಬಗೆ ಹರಿಸುವಲ್ಲಿ ಕಾಣಿಸಿಕೊಂಡಿ ರುವುದು ಸ್ಪಷ್ಟವಾಗು ವುದಿಲ್ಲ.

ಇದರಲ್ಲಿ ರೂಢಾಚಾರ್ಯರನ್ನು ಹಂಪಿ, ಹಸ್ತಿನಾವತಿ, ಶಿರಶೃಂಗಿ, ಕಾಶಿ, ಕಾಳಹಸ್ತಿ ಪಂಚಸಿಂಹಾಸ್ವಾಸನ ಪೂಜಿತ ರಾಜಗುರು ಎಂದು ಕರೆಯಲಾಗಿದೆ. ಹಂಪಿ ಹಸ್ತಿನಾವತಿ ಗಳನ್ನುಳಿದು, ಸಿಂಹಾಸನಗಳನ್ನು ಹೊಂದಿದ ಈ ಎಲ್ಲಾ ಪೀಠಗಳು ಪ್ರಾದೇಶಿಕ ವಿಸ್ತಾರತೆ ಯನ್ನು ಪಡೆದುಕೊಂಡಿವೆ. ಹಸ್ತಿನಾವತಿಯೂ ಆನೆಗೊಂದಿ ಆಗುವುದಾದರೆ, ಪಕ್ಕದಲ್ಲಿ

ರುವ ಹಂಪಿಯಲ್ಲೂ ಒಂದು ಪೀಠವಿತ್ತೇ ಎಂಬುವುದನ್ನು ಶೋಧಿಸಬೇಕಾಗಿದೆ. ಸರಸ್ವತಿ ಮಠ ಪರಂಪರೆಯ ದಾಖಲೆಗಳನ್ನು ಗಮನಿಸಿದಾಗ, ಪಂಚ ಸಿಂಹಾಸನ ಶ್ರೀ ಮತ್ಕಾಶಿ, ಕಂಚಿ, ಕಾಳಹಸ್ತಿ, ವಿದ್ಯಾನಗರ (ಕೆಲವು ಸಲ ಹಸ್ತಿನಾವತಿ) ಶಿರಶೃಂಗಿ ಎಂದು ಉಲ್ಲೇಖವಾಗಿವೆ.

ಈಗ ಆನೆಗುಂದಿಯಲ್ಲಿರುವ ಮಠ ಈ ಪರಂಪರೆಗೆ ಸೇರಿದುದೆಂಬುವುದಕ್ಕೆ ಹೆಚ್ಚಿನ ಆಧಾರಗಳು ಬೇಕಾಗುತ್ತವೆ. ಆನೆಗುಂದಿಯಿಂದ ಉತ್ತರಕ್ಕೆ ಬೆಟ್ಟ ಸಾಲುಗಳಲ್ಲಿ ಚಿಕ್ಕ ಗುಡ್ಡದ ಮೇಲೆ ಪ್ರಸ್ತುತಮಠವಿದೆ. ಗರ್ಭಗೃಹ, ಮುಂಭಾಗ ಸುತ್ತಲೂ ಜಗತಿ, ಮಧ್ಯ ವಿಶಾಲವಾದ ಸಭಾಮಂಟಪ ಪಕ್ಕದಲ್ಲಿ ಅಡಿಗೆ ಕೊಠಡಿ, ಇಕ್ಕೆಲಗಳಲ್ಲಿ ಜಗತಿ ಗಳನ್ನು ಹೊಂದಿದ ಮುಖಮಂಟಪ ಹಾಗೂ ವಿಶಾಲವಾದ ಆವರಣಗಳಿಂದ ಕೂಡಿದೆ. ಗರ್ಭಗೃಹದ ಮುಂಭಾಗ ಬಲಗೋಡೆಯಮೇಲೆ ೧೭ನೆಯ ಶತಮಾನಕ್ಕೆ ಸೇರಿದ ಶ್ರೀ...ರಾಜು....(ಶಾ) ರದಾಂಬೆಯ.... ಎಂದು ಅಸ್ಪಷ್ಟವಾಗಿ ಕಾಣುವ ಕಪ್ಪು ಬಣ್ಣದ ಆಕ್ಷರಗಳಿವೆ. ಉಳಿದಂತೆ ಗೋಡೆ-ಬೋಧಿಗೆಗಳ ಮೇಲೂ ಬಣ್ಣಗಳಿಂದ ಬರೆಯ ಲಾಗಿದೆ. ಆವರಣದಲ್ಲಿರುವ ಮಂಟಪದಲ್ಲಿ ಬೃಹದಾಕಾರದ ಪೀಠವಿದೆ. ಅದರ ಎರಡು ಮಗ್ಗುಲಲ್ಲಿ ಸಿಂಹಗಳು, ಇನ್ನೊಂದು ಮಗ್ಗಲಲ್ಲಿ ರುಂಡದ ಚಿತ್ರಗಳಿವೆ. ಈ ಉಬ್ಬು ಶಿಲ್ಪಗಳು ಶಕ್ತಿ ಪೀಠದ ಲಕ್ಷಣಗಳನ್ನು ಸೂಚಿಸುತ್ತದೆ.

ಕಂಚಿ ಮತ್ತು ಶೃಂಗೇರಿ ಪ್ರಮುಖಶಾಕ್ತ ಪೀಠಗಳು. ಅದರಲ್ಲೂ ಕಂಚಿಯ ಮಠದ ಪೀಠಾಧೀಶ್ವರರು ಸರಸ್ವತಿಯ ನಾಮಾಂಕಿತದಿಂದ ಗುರುತಿಸಿಕೊಳ್ಳುತ್ತಾರೆ. ರೂಢಾ ಚಾರ್ಯರ ಮಠಪರಂಪರೆಯವರು ಅಲ್ಲಿಯ ಕಾಮಾಕ್ಷಿಯನ್ನು ಕಂಚಿಯ ಕಾಳಮ್ಮ ನೆಂದು ಕರೆಯುತ್ತಾರೆ. ಈ ಕಾಮಾಕ್ಷಿಗೆ ಕಾಳಿ ಕಂಚಿಯ ಕಾಳಮ್ಮನೆಂದು ಕರೆಯುತ್ತಾರೆ. ಈ ಕಾಮಾಕ್ಷಿಗೆ ಸಿರಸಂಗಿ ಕಾಳಮ್ಮನುತ್ಸವದಲ್ಲಿ ಮೇಲಕ್ಕೆಸೆಯುವ ಐದು ಹಿಟ್ಟಿನ ಉಂಡೆ (ರಾಕ್ಷಸರರುಂಡ ಸಂಕೇತ) ಗಳಲ್ಲಿ ಒಂದು ಕಂಚಿ ಕಾಳಮ್ಮನಿಗೆ ಸೇರಿದುದೆಂದು ಇವರ ನಂಬಿಕೆ.

ಪೂರಕ ಮಾಹಿತಿಗಳ ಪ್ರಕಾರ ವಿಜಯನಗರ ಸಾಮ್ರಾಜ್ಯದ ಪತನಾನಂತರ ಆನೆಗುಂದಿ ಪೀಠ ಭಾಗವಾಗಿ ಹೀರಾಳ, ಶಹಪುರ, ಮುದ್ದಾಬಳ್ಳಿ, ಬೆಲಗೂರು, ಕನಕಗಿರಿ, ಶಾಡ್ಲ ಗೇರಿಗಳಿಗೆ ಸ್ಥಳಾಂತರಗೊಂಡು ಹೊಸಮಠಗಳು ಸ್ಥಾಪನೆಗೊಂಡವು. ಟಿಪ್ಪುಸುಲ್ತಾನನ ದಾಳಿಯಿಂದಾಗಿ ಕನಕಗಿರಿ ಮಠ ಗಿಣಿಗೆರಾ ಹಾಗೂ ಲೇಬಗಿರಿಗಳಲ್ಲಿ ನೆಲೆಗೊಂಡವು. ಆನೆಗುಂದಿಯಿಂದ ನೇರವಾಗಿ ಹೀರಾಳಕ್ಕೆ ಸ್ಥಳಾಂತರಿಸಿದ ಇದು ಪೂರ್ವದ ಮಠವೆಂದು ಉಳಿದವರ ಅಭಿಪ್ರಾಯ. ಪ್ರಸ್ತುತ ಶಾಸನವನ್ನು ಮೂಲ ದಾಖಲೆಯಿಂದ ನಕಲು ಮಾಡಿಕೊಳ್ಳಲಾಗಿಯೆಂದು ಹೇಳುತ್ತಾರೆ. ಬಳ್ಳಾರಿ ಹತ್ತಿರದಲ್ಲಿ ರುವ ಹೀರಾಳ ಮಠದಲ್ಲಿ ಛತ್ರಿ-ಚಾಮರ ಪತ್ರ ವ್ಯವಹಾರಕ್ಕೆ ಬಳಸಿಕೊಳ್ಳುತ್ತಿದ್ದ ಎರಡು ನಾಗರಿ ಲಿಪಿಯ ಸೀಲುಗಳಿವೆ. ಒಂದರಲ್ಲಿ ಶ್ರೀಮದ್ ಆನೆಗುಂದಿ ಪೀಠವೆಂದೂ, ಇನ್ನೊಂದರಲ್ಲಿ ಮಹಾಸ್ವಾಮಿ ಸನ್ನಿಧಾನವೆಂದು ಬರೆಯಲಾಗಿದೆ.

ಉಳಿದ ದಾಖಲೆಗಳನ್ನು ತೋರಿಸಲು ಹಿಂಜರಿದ ಕಾರಣ ಅಸಹಾಯಕನಾಗಿ ಮರಳಿಬರಬೇಕಾಯಿತು. ಮಠದ ದಾಖಲೆಗಳನ್ನು ದೊಡ್ಡ ದೊಡ್ಡ ಪೆಟ್ಟಿಗೆಗಳಲ್ಲಿ ಇಟ್ಟಿರುವುದನ್ನು ಗಮನಿಸಿದರೆ ಇನ್ನು ಹೆಚ್ಚಿನ ಆಧಾರ ಗಳು ಸಿಗಬಹುದು.

ಶಾಸನದ ಮಹತ್ವ

ಈ ತಾಮ್ರ ಶಾಸನ ಕೆಲವು ಪ್ರಮುಖ ಚಾರಿತ್ರಿಕ ಅಂಶಗಳಿಗೆ ಪೂರಕ ಆಧಾರಗಳನ್ನು ಒದಗಿಸುತ್ತದೆ. ಅಂತರವಳ್ಳಿಯ ಮೂರುಜಾವ ಪಂಡಿತರ ಉಲ್ಲೇಖ ಕ್ರಿ.ಶ.೧೧-೧೨ನೆಯ ಶತಮಾನದ ಶಾಸನಗಳಲ್ಲಿ ಬರುತ್ತದೆ. ಶಾಂತನಿರಂಜನ ಪಂಡಿತ ಬರೆದಿರುವ ಅಬ್ಬಲೂರು ಚರಿತ್ರೆಯಲ್ಲೂ ಇದರ ಪ್ರಸ್ತಾಪವಿದೆ.ವರ ಚಿಕ್ಕೇಶ್ವರ (ಮೂರುಜಾವ ಪಂಡಿತ) ನನ್ನು ಹದಿನೆಂಟು ಪೀಠಸ್ಥಿತನೆಂದು ಕರೆಯಲಾಗಿದೆ. ಈಗಲೂ ಮೂರುಜಾವ ಪೀಠಕ್ಕೆ ಸೇರಿದ ೧೮ಮಠಗಳು ಕರ್ನಾಟಕದಲ್ಲಿವೆ. ಮುಂದುವರೆದು ತಪಸ್ಸು, ಮಂತ್ರನ್ಯಾಸ, ಯಜ್ಞಸೂತ್ರ, ಶಿಖಿ, ಉಪದೇಶ, ಪಂಚಬ್ರಹ್ಮರಿಗೆ ಸಫಲ ಸನ್ಮಾರ್ಗ ದೋರಿದ ರೂಢಾಚಾರ್ಯನ ಕೃಪೆಯಿಂದ ರಚಿಪೆನೀಕೃತಿಯ ಎಂದೂ, ಮೂರುಜಾವ ಪಂಡಿತನನ್ನು ಕಾಪಾಲಿಯ ರೂಪಾಂತರ ಶಿವಭಕ್ತನೆಂದು ಕರೆಯಲಾಗಿದೆ.

ಈ ರೂಢಾಚಾರ್ಯರ ಹೆಸರು ಅಬ್ಬಲೂರು ಚರಿತ್ರೆಯಲ್ಲಿ ಪ್ರಸ್ತಾಪವಾಗಿರುವುದರಿಂದ ಅಂತರವಳ್ಳಿಯ ಪೀಠವೂ ಇದೇ ಪರಂಪರೆಗೆ ಸೇರಿದ್ದೆಂದು ತಿಳಿಯುತ್ತದೆ. ಇದು ನಿರಂಜನಯ್ಯ ಹಾಗೂ ಮೂರುಜಾವದಯ್ಯರು ಹಂಪಿ ರಥೋತ್ಸವಕ್ಕೆ ಬಂದು ಆನೆಗುಂದಿ ಪೀಠ ತಮ್ಮದೆಂದು ವಾದಿಸಲು ಕಾರಣವಾಗಿರಬೇಕು.

ಕ್ರಿ.ಶ.೧೧-೧೨ನೆಯ ಶತಮಾನದ ಶಾಸನಗಳು ಮೂರುಜಾವ ಪಂಡಿತ ಕಾಳಾಮುಖ ಪರಂಪರೆಗೆ ಸೇರಿದವನೆಂದು ಉಲ್ಲೇಖಿಸುತ್ತದೆ. ಈ ರೂಢಾಚಾರ್ಯರ ಮೂಲ ಪರಂಪರೆಯೇ ಕರ್ನಾಟಕದಲ್ಲಿ ಕಾಳಾಮುಖ ಶಾಖೆಯ ವಿಸ್ತಾರಕ್ಕೆ ಕಾರಣವಾಗಿರಲೂ ಬಹುದು. ಸ್ಥಪತಿಗಳಾಗಿದ್ದ ಕಾಳತ್ರಯ ದೇವರಾಶಿ, ರುದ್ರಶಕ್ತಿ ಪಂಡಿತ, ಶಿವಶಕ್ತಿ ಮತ್ತು ಮಹಾದೇವಜೀಯ, ವಾಮಶಕ್ತಿ ಮುನಿ, ಲಕ್ಷ್ಮೇಶ್ವರದ ಬಲ್ಲಾಳೇಶ್ವರದ ಆಚಾರಿ ಲಕ್ಕೋಜನ ಮಗ ಬ್ರಹ್ಮಪಂಡಿತ, ಕಡ್ಲೆವಾಡದ ಸೋಮರಾಶಿ ಪಂಡಿತರ ಮಗ ಸೋಮನಾಥ ಮೊದಲಾದವರು ಕಾಳಾಮುಖ ಪರಂಪರೆಯಲ್ಲಿ ಗುರುತಿಸಿಕೊಂಡಿದ್ದಾರೆ.

ಈ ಹಿನ್ನೆಲೆಯಲ್ಲಿ ಕಾಳಾಮುಖ ಪರಂಪರೆಯ ಬಗೆಗೆ ಸೂಕ್ಷ್ಮ ಅಧ್ಯಯನಗಳು ಅವಶ್ಯವೆಂದೂ ಗೋಚರಿಸುತ್ತದೆ. ಆನೆಗುಂದಿಯ ರೂಢಾಚಾರ್ಯರ ಮಠದ ಈ ಶಾಸನವು ಆ ಪರಂಪರೆಯ ವಿಸ್ತೃತ ಅಧ್ಯಯನಕ್ಕೆ ಮೂಲ ಮಾಹಿತಿಯನ್ನು ಒದಗಿಸಿ ಕೊಡುತ್ತದೆ.

ಆಧಾರ ಗ್ರಂಥಗಳು

೧. ಸೌ.ಇಂ.ಇ. ಸಂಪುಟಗಳು

೨. ಎ.ಕ.ಸಂಪುಟಗಳು


೩. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೩

೪. ಕುಮಾರಸ್ವಾಮಿ ಕೆ.ಎಸ್.೧೯೯೬, ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಚಾರಿಯರು, ಬೆಂಗಳೂರು


೫. ದೀಕ್ಷಿತ ವ್ಹಿ.ಜಿ.ಜ್ಞಾನಾನಂದ ಜಿ.೧೯೯೨, ಮೂರಜಾವಿ ದೇವರ ಚರಿತ್ರೆ-ಕೆ.ಜಿ.ಎಫ್.

೬. ಶಾಂತನಿರಂಜನ ವಿರಚಿತ ಅಬ್ಬಲೂರು ಚರಿತ್ರೆ, ಬಸವಾರಾಧ್ಯ ಎನ್. (ಸಂ) ೧೯೭೩-ಮೈಸೂರು.

೭. ವಿಶ್ವಕರ್ಮ ಕಲಾ (ಪತ್ರಿಕೆ) ಬೆಂಗಳೂರು.



ಕಾಳಾಮುಖ ಪಂಡಿತ ಮೂರು ಜಾವಿದೇವ ಆಂತರವಳ್ಳಿ, ರಾಣೆಬೆನ್ನೂರು ತಾ, ಹಾವೇರಿ ಜಿಲ್ಲೆ.



ರೂಢಾ ಚಾರ್ಯರ ಸರಸ್ವತಿ ಮಠ, ಆನೆಗೊಂದಿ



ಸರಸ್ವತಿ ಮಠದ ಆವರಣದಲ್ಲಿರುವ ಮಂಟಪ ಮತ್ತು ಶಕ್ತಿದೇವತಿಯ ಪೀಠ, ಆನೆಗೊಂದಿ

೮. ಮನಮಿಡಿಸಿದ ವಿಜಯನಗರ ಶಾಸನವೊಂದು

ತಿರುಮಲೆ ರಂಗಾಚಾರ್ಯ

ಈ ಲೇಖನ ಹೊಸ ಅನ್ವೇಷಣೆಯಲ್ಲ ; ಇತಿಹಾಸ ಸತ್ಯಶೋಧನೆ. ಅದು ನಿರ್ಜೀವ ಪ್ರಕ್ರಿಯೆಯಲ್ಲ; ಅದು ಜೀವಂತ ಜೀವನ ಪ್ರಕ್ರಿಯೆ. ಇಲ್ಲಿ ಬುದ್ಧಿಗಿಂತ ಮಿಗಿಲಾಗಿ ಮನಸ್ಸು ಹೃದಯಗಳ ಮಿಡಿತ ಮೌಲಿಕ ಸಗೋಚರಾದದ್ದು ವಸ್ತು-ಜೀವನ. ಅದರ ಹಿಂದಿರುವ ಅಗೋಚರ ಸತ್ಯವನ್ನು ಕಾಣಲು ಮನಸ್ಸು ಹೃದಯಗಳೇ ಅಗತ್ಯ. ಇಲ್ಲಿ ನಾವುಕಾಣುವುದು ಕವಿಯನ್ನಲ್ಲ, ಕವಿ ಹೃದಯವನ್ನ ಅವನ ಮನೋ ನೈರ್ಮಲ್ಯವನ್ನು.

ಭಾರತೀಯ ಇತಿಹಾಸದಲ್ಲಿ ವಿಖ್ಯಾತವಾಗಿ ತಮ್ಮ ಸಾಧನೆಗಳಿಂದ ಭಾರತೀಯರ ಹೃದಯದಲ್ಲಿ ಶಾಶ್ವತ ಸ್ಥಾನವನ್ನು ಗಳಿಸಿಕೊಂಡಿರುವ ಅತಿಶಯದ ಸ್ಥಾನವುಂಟು. ಅತಿ ಸನಿಹಪೂರ್ವದಲ್ಲಿ ಭಾರತದ ರಾಜಕೀಯ-ಸಾಮಾಜಿಕ-ವಾಣಿಜ್ಯ ಸ್ಥಿತಿಗತಿಗಳ ನೆಲೆಯಲ್ಲಿ ಎಂತಹ ಸನ್ನಿವೇಶಕ್ಕೆ ಈ ಸಾಮ್ರಾಜ್ಯದ ಹುಟ್ಟು-ಬಾಳ್ವೆ ನಡೆಯಿತೆಂಬುದು ಗಮನಾರ್ಹವಾಗುತ್ತದೆ. ಐರೋಪ್ಯರು ವ್ಯಾಪಾರದ ನೆಲೆಯಲ್ಲಿ ಭಾರತವನ್ನು ಪ್ರವೇಶಿಸಿದರು. ಉತ್ತರ ಭಾರತದಲ್ಲಿ ಮೊಘಲ್ ಸಾಮ್ರಾಜ್ಯ ಛಿದ್ರತೆಯತ್ತ ಸಾಗುತ್ತಿತ್ತು. ದಕ್ಷಿಣ ಭಾರತದಲ್ಲಿ ಬಹಮನಿ ರಾಜ್ಯಗಳು ಪ್ರಬಲ ಶಕ್ತಿಗಳಾಗಿ ಬೆಳೆದಿದ್ದವು. ಇಸ್ಲಾಂ ತನ್ನ ರಾಜಕೀಯ ಶಕ್ತಿಯನ್ನು ಭಾರತದ ಉದ್ದಗಲಕ್ಕು ಬೆಳೆಸಲು ಪಣತೊಟ್ಟಂತಿತ್ತು. ಈ ಶಕ್ತಿಯ ವಿರುದ್ಧ ಭಾರತೀಯ ಧರ್ಮವನ್ನು ಮತ್ತೆ ಭದ್ರವಾಗಿ ನೆಲೆಗೊಳಿಸುವ ಸಂಕಲ್ಪದಲ್ಲಿ ಜನ್ಮತಾಳಿದ್ದು ವಿಜಯನಗರ ಸಾಮ್ರಾಜ್ಯ.

ವಿಜಯನಗರವೆಂಬುದು ಸಾಮ್ರಾಜ್ಯದ ಹೆಸರು ; ರಾಜಧಾನಿಯ ಹೆಸರು "ವಿಜಯ ನಗರ". ಭಾರತದ ಇತಿಹಾಸದಲ್ಲಿ ಆಗಿಹೋದ ಸಾಮ್ರಾಜ್ಯಗಳೆಲ್ಲ ರಾಜಮನೆತನಗಳ ನೆಲೆಯವು. ಈ ಸಂಪ್ರದಾಯದಿಂದ ಹೊರಬಂದು-ಜನಪದದ ಆಸೆ, ಸುಖ, ಶಾಂತಿ, ಸಮೃದ್ಧಿ, ಸಂತೃಪ್ತಿಗಳ ಸಾಧನೆಯ "ಆದರ್ಶದ" ವಿಜಯ ಸಾಧಿಸುವಲ್ಲಿ ವಿರಕ್ತ ಶಕ್ತಿಯಿಂದ ಸ್ಫೂರ್ತಿಗೊಂಡು, ಅಸ್ತಿತ್ವತಾಳಿದ ಸಾಮ್ರಾಜ್ಯ ಅದು. ವಿದ್ಯಾರಣ್ಯಯತಿಗಳು ಇದರ ಸ್ಥಾಪನಾಚಾರ್ಯರೆಂಬುದು ಜನಜನಿತ ವಿಚಾರ. ಇದರಿಂದಾಗಿ ಅವರು "ವಿಜಯ ವಿದ್ಯಾರಣ್ಯ" ರೆಂದೆನಿಸಿದರು. ಯಾವುದೇ ರಾಜವಂಶ ಗಾದಿ ಏರಿದರೂ ಸಾಮ್ರಾಜ್ಯ ವಿಜಯನಗರವೆಂದೇ ಸಾಗಿ ಬಾಳಿತು. ಇದು ಆ ಸಾಮ್ರಾಜ್ಯದ ಆದರ್ಶದ ನೆಲೆಯಿಂದಾಗಿ ಎಂಬುದು ಸ್ಪಷ್ಟ. ರಾಜಯಾರಾದರೇನು ; ರಾಜ ಮುದ್ರೆಯೊಂದೇ "ಶ್ರೀ ವಿರೂಪಾಕ್ಷ"

ಎಂದು ಹರಿ-ಹರ ಕಲ್ಪನೆಯ ಸಮ್ಯಕ್ ಸ್ವರೂಪವೇ ಈ ಶ್ರೀ ವಿರೂಪಾಕ್ಷ ಇರಬೇಕು. ಧರ್ಮ ಸಮನ್ವಯ ದೈವೀಕಲ್ಪನೆ.

"ವಿಜಯನಗರ" ಎಂದೊಡನೆ ಕನ್ನಡಿಗರಲ್ಲಿ ಒಂದು ವಿದ್ಯುತ್ ಪುಳಕ ಮಿಂಚುತ್ತದೆ. ಇದು ಕೇವಲ ದೈಹಿಕ ವ್ಯಾಪಾರ ಮಾತ್ರವಲ್ಲ ; ಮನಸ್ಸಿನಲ್ಲೂ ಒಂದು ಜಾಗ್ರತೆ ಉಂಟಾಗುತ್ತದೆ. ಕರ್ನಾಟಕದಲ್ಲಿ ಎಷ್ಟೋ ಸಾಮ್ರಾಜ್ಯಗಳು ಹುಟ್ಟಿದವು-ಬಾಳಿದವು-ಅಳಿದವು. ಅವುಗಳ ಹುಟ್ಟು-ಬಾಳು ಸಾಧನೆಗಳಲ್ಲಿ ನಮಗೆ ಪ್ರಿಯ ಅನರ್ಘ್ಯ ಅಭಿಮಾನದ ನಿಧಿಗಳವು. ಆದರೆ ವಿಜಯನಗರವೆಂದೊಡನೆ ಅವನ್ನೆಲ್ಲ ಮೀರಿದ ಮಿಂಚಿದ ಭಾಗ. ಇದಕ್ಕೆ ಕಾರಣ ಈ ಸಾಮ್ರಾಜ್ಯ ಅತಿಸನಿಹದ ಹಿಂದೆ ಬಾಳಿ, ಸಮಕಾಲೀನ ಸಮಾಜದಲ್ಲಿ ಇಂದಿಗೂ ಜೀವಂತವಾಗಿ ತನ್ನ ಜೀವನ ಸಂದೇಶವನ್ನು ನೆಲೆನಿಲ್ಲಿಸಿರುವುದು. ನಾಡಿನ ಧರ್ಮ, ಜಾನಪದ ಜನಜೀವನದಲ್ಲಿ ಕಲೆ-ಸಾಹಿತ್ಯ ಕ್ಷೇತ್ರಗಳಲ್ಲಿ ವಿಜಯನಗರದ ಕೊಡುಗೆ ಇಂದಿಗೂ ಜೀವಂತವಾಗಿದೆ. ಎಳೆಎಳೆಗಳನ್ನು ಬಿಡಿಸಿನೋಡಿದಾಗ ಈ ಸತ್ಯ ಮನಗಾಣುತ್ತದೆ. ಗತ ಸಾಮ್ರಾಜ್ಯಗಳ ಸಾಧನೆಗಳ ಅಡಿಪಾಯದಲ್ಲಿನಾಡ ಪರಂಪರೆಗೆ ಹೊಸತನವನ್ನು ತಂದು, ಇಡೀ ದಕ್ಷಿಣ ಭಾರತವನ್ನು ಒಂದಾಳ್ವಿಕೆಗೆ ತಂದೆ ಕೀರ್ತಿ ಈ ವಿಜಯನಗರ ಸಾಮ್ರಾಜ್ಯದ್ದು. "ಇದು ಪ್ರಾಚೀನ ಭಾರತೀಯ ಪರಂಪರೆ" - ಎಂದು ಗುರುತಿಸಬಹುದಾದ ಆಚಾರ-ವಿಚಾರಗಳನ್ನು ಉಳಿಸಿ, ಮುಂದಿನ ಜನಪದಕ್ಕೆ ಬಳುವಳಿಯಾಗಿ ನೀಡಿದ ಕೀರ್ತಿ ವಿಜಯನಗರಕ್ಕೆ ಸಲ್ಲುತ್ತದೆ. ದಕ್ಷಿಣ ಭಾರತದ ಯಾವುದೇ ಗುಡಿ-ದೇವಾಲಯ ಹೊಕ್ಕರೂ ಅಲ್ಲಿ ವಿಜಯನಗರದ ಒಂದಾನೊಂದು ಸಾಕ್ಷಿಕಣ್ಣಿಗೆ ಬೀಳುತ್ತದೆ. ಸಾಮ್ರಾಜ್ಯದ ರಾಜಧಾನಿ "ಹಾಳು ಹಂಪೆ" ಎನಿಸಿದ್ದರೂ ತನ್ನ ಸತ್ಯ ಸಂಕಲ್ಪವನ್ನು ಶಾಶ್ವತವಾಗಿ ನಾಡಿನ ವಿಸ್ತಾರದಲ್ಲಿ ಅದು ಉಳಿಸಿಬಿಟ್ಟಿದೆ. ಈ ಮಾತು ಭೌತಿಕ ಸಂಗತಿಗಳಿಗೆ ಮಾತ್ರವಲ್ಲ ; ಪಾರಮಾರ್ಥಿಕ ಬೌದ್ಧಿಕ ಸ್ತರದಲ್ಲಿಯೂ ಸತ್ಯದ ಮಾತಾಗಿದೆ. ರಾಜಕಾರಣಕ್ಕೆ ಮಿಗಿಲಾಗಿ ಧರ್ಮ-ಭಾಷೆ-ಸಾಹಿತ್ಯ-ಕಲೆ ಈ ಎಲ್ಲ ಕ್ಷೇತ್ರಗಳಲ್ಲೂ ವಿಜಯನಗರದ ಛಾಪು ನೆಲೆನಿಂತಿದೆ. ವಿಜಯನಗರ ಸಾಮ್ರಾಜ್ಯದ ಮಹತಿ-ವೈಭವಗಳು ಸಮಷ್ಟಿಯವೂ ಹೌದು, ವ್ಯಕ್ತಿಗತವೂ ಹೌದು. ಜೀವನದ ಎಲ್ಲ ರಂಗಗಳ, ಎಲ್ಲಾ ಹಂತಗಳ ಪಾಲಕ-ಸಾಧಕರನ್ನು ನಾವಿಲ್ಲಿನೋಡಬಹುದು. ವಿಜಯನಗರದ ಹುಟ್ಟು, ಬೆಳಕು, ಸಾಧನೆಗಳೆಲ್ಲ ನವ "ಜಯಾಖ್ಯಾ". ಧರ್ಮ, ಆದರ್ಶ, ಸಂಕಲ್ಪ ಸಾಧನೆಗಳ ಒಂದು ಮಹಾಗಣವೇ ನಮ್ಮ ಮುಂದೆ ನಿಲ್ಲುತ್ತದೆ. ಈ ಎಲ್ಲದರ ಹಿಂದೆ ಇರುವುದು ಭಾರತೀಯ ಪ್ರಾಚೀನ ಪರಂಪರಾಗತ ಜೀವನ ಧರ್ಮದ ಪುನರುತ್ಥಾನ-ಪುನಸ್ಥಾಪನೆ ರಕ್ಷಣೆಯ ಏಕೈಕ ಅಪೇಕ್ಷೆ. ಭಾರತದ ಇತಿಹಾಸದಲ್ಲಿ ಸನಾತನ ದರ್ಮೋಜ್ಜೀವನಕ್ಕೆ ತೊಡಗಿದ ಸಾಮ್ರಾಜ್ಯಗಳು ಎರಡು, ಉತ್ತರ ಭಾರತದಲ್ಲಿ ಗುಪ್ತ ಸಾಮ್ರಾಜ್ಯ ಮತ್ತು ಮಧ್ಯ ಮತ್ತು ದಕ್ಷಿಣಾಪಥದಲ್ಲಿ ಶಾತವಾಹನ ಸಾಮ್ರಾಜ್ಯ. ಆಗ ಅವು ಎದುರಿಸಬೇಕಾಗಿ ಬಂದದ್ದೂ ದಕ್ಷಿಣಾ ಪಥದಲ್ಲಿ ತಲೆಎತ್ತಿದ ವಿಜಯನಗರ ಸಾಮ್ರಾಜ್ಯ

ಎದುರಿಸಬೇಕಾಗಿ ಬಂದದ್ದೂ ಅಜಗಜಾಂತರವಾದಂತಹ ಪರಿಸ್ಥಿತಿ. ಅಂದಿನದು ಭಾರತೀಯ ಆಂತರಿಕ ಸಂಘರ್ಷವಾಗಿತ್ತು. ವಿಜಯನಗರದ ಕಾಲಕ್ಕೆ ಅದು ಆಂತರಿಕ-ಬಾಹ್ಯ, ಧಾರ್ಮಿಕ, ಸಾಮಾಜಿಕ, ಆರ್ಥಿಕ ಕ್ಷೇತ್ರಗಳ ಸಂಘರ್ಷರೂಪದ್ದಾಗಿತ್ತು. ಈ ದೃಷ್ಟಿಯಲ್ಲಿ ವಿಜಯನಗರದ ಸಾಹಸ-ಸಾಧನೆ ಮೊದಲೆರಡನ್ನೂ ಮೀರಿಸಿದ್ದು-ಅದಕ್ಕೆ ಪ್ರತ್ಯೇಕವಾದುದ್ದು. ಆಗಿನ ಕಾಲದ ಇತಿಹಾಸ ಸಾಕ್ಷಿ ಮಾಹಿತಿಗಳಿಗೂ ವಿಜಯನಗರ ಕಾಲದ ವಿಪುಲ ಸಮಕಾಲೀನ ಶಾಸನ-ಸಾಹಿತ್ಯ ಕೃತಿಗಳಿಗೂ ಬಾಹುಳ್ಯದ ಅಂತರವಿದೆ. ಸಾಕ್ಷಿಎಂಬುದು ವೈಜ್ಞಾನಿಕ ಇತಿಹಾಸಕ್ಕೆ ; ಸಾಹಿತ್ಯವು ಜೀವನ ಪ್ರವಾಹಕ್ಕೆ, ಹೃದಯಕ್ಕೆ. ಈ ಹಿನ್ನೆಲೆಯಲ್ಲಿ ಈ ಲೇಖನದ ವಸ್ತುವಾದ ಕಮಲಾಪುರ-ಹಂಪೆ ರಸ್ತೆಯಲ್ಲಿರುವ ಕೃಷ್ಣ ದೇವಾಲಯದ ಬಳಿಇರುವ ಇಮ್ಮಡಿ ದೇವರಾಯನ ಕಾಲದ ಶಾಸನ ಒಂದು ಅಪೂರ್ವ ಸಂಚಯವಾಗಿದೆ, ಸಾಕ್ಷಿಯಾಗಿದೆ.

"ಇಡೀ ಶಾಸನವು ಒಂದು ಕಾವ್ಯದಂತಿದೆ. ಎಂದು ಶರ್ಮರು ಹೇಳುತ್ತಾರೆ. ಕಣ್ಣಾರೆಕಂಡದ್ದನ್ನು ಕವಿಯೊಬ್ಬ ಕಲಾತ್ಮಕವಾಗಿ ಪ್ರಮಾಣಿಕವಾಗಿ ನಿರೂಪಿಸಿರುವ ಶಾಸನವಿದೆಂದು ಅವರು ಅಭಿಪ್ರಾಯಪಡುತ್ತಾರೆ. ಎಂದೋ ಬರೆದ ಶಾಸನ ಒಂದನ್ನು ಓದುವಾಗಿನ ಅನುಭವವೇ ಪ್ರತ್ಯೇಕ. ಅದು ಓದುಗನು ಆ ಲೇಖಕನೊಂದಿಗೆ ನಡೆಸುವ ನಿಶ್ಯಬ್ಧ ಸಂಭಾಷಣೆ-ಶ್ರವಣಾ. ಲೇಖಕ, ಕರ್ತೃ ಕವಿಯಾಗಿರಲಿ, ಆಗದಿರಲಿ ; ಕಾದಂಬರಿಕಾರನೋ ಕತೆಗಾರನೋ ಶಾಸ್ತ್ರವ್ಯಾಖ್ಯಾನಕಾರನೋ, ಏನೇ ಆಗಿರಲಿ ಅವನು ಬಿಟ್ಟುಹೋದ ಬರಹದಲ್ಲಿ ಅವನು ಚಿರಂಜೀವಿ; ಅವನೊಂದಿಗೆ ಅವನು ಚಿತ್ರಿಸಿರುವ ಜೀವಿ ನಿರ್ಜೀವಿಗಳೆಲ್ಲ ಚಿರಂಜೀವಿಗಳಾಗುತ್ತಾರೆ.

ಈ ಕಾವ್ಯಶಾಸನ ೧೨೪ ಸಾಲುಗಳ ೬೦ ಪದ್ಯಗಳ ಕೃತಿ. ಇಮ್ಮಡಿ ದೇವರಾಯನ ಕಾಲಕ್ಕೆ ಸಲ್ಲುವ ಈ ಶಾಸನವನ್ನು ಬರೆದವ ಸಮಕಾಲೀನ ಕವಿ ಮಧುರ. ಆ ಕಾಲದ ಪ್ರಸಿದ್ಧ ಕವಿಗಳು ಅನೇಕರು. ಪ್ರಸಿದ್ಧನಲ್ಲದಿದ್ದರೂ ಪ್ರತಿಭಾಸಂಪನ್ನ ಕವಿ ಮಧುರ. ಹುಟ್ಟು ಜೈನನಾದರೇನು ; ಕವಿಕಾಣಬಯಸುವುದು ಸತ್ಯವನ್ನು.

ಕರ್ನಾಟಕ ಕವಿ ಚರಿತ್ರೆಯಲ್ಲಿ ಮಧುರನನ್ನು ಕುರಿತು ಹೀಗಿದೆ :

ಇವನು ಜೈನಕವಿ ವಾಜಿವಂಶಕ್ಕೆ ಸೇರಿದವನು ;
ಭಾರದ್ವಾಜ ಗೋತ್ರದವನು ಇವನ ತಂದೆ ವಿಷ್ಣು ;
ತಾಯಿ ನಾಗಾಂಬಿಕೆ ಪೋಷಕ ಬುಕ್ಕರಾಯನ ಸುತ
ಹರಿಹರರಾಯನ ಪ್ರಧಾನನಾದ ಮುದ್ದದಂಡೇಶ.
"ಭೂನಾಥಸ್ಥಾನ ಚೂಡಾಮಣಿ" ಎಂಬುದರಿಂದ
ಈತನುಹರಿಹರನ ಆಸ್ಥಾನ ಕವಿಯಾಗಿದ್ದಿರಬೆಕು.

ಹರಿಹರನ ಅನಂತರ ಸಿಂಹಾಸನವೇರಿದ ದೇವರಾಯನ ಕಾಲಕ್ಕೂ ಬಾಳಿ, ಅವನ ಪ್ರಧಾನ ಮಂತ್ರಿಯ ಅಶ್ರಯವನ್ನು ಹೊಂದಿ ತನ್ನ ಕವಿ ಜೀವನವನ್ನು ಸಾರ್ಥಕಗೊಳಿಸಿ

ಕೊಂಡ ಮಧುರ. ತನ್ನೊಂದಿಗೆ ಪ್ರಭುವನ್ನೂ, ಪೋಷಕ ಮಹಾಮಂತ್ರಿಯನ್ನೂ ಶಾಶ್ವತ ಗೊಳಿಸಿದ ಈ ಶಾಸನಕಾವ್ಯದಲ್ಲಿ. ಇತಿಹಾಸವನ್ನೂ, ಭಾಷಾ ಸಾಹಿತ್ಯವನ್ನು ಶ್ರೀಮಂತ ಗೊಳಿಸಿದ. ತನ್ನ ಕವಿಪ್ರತಿಭಾ ಸಂಪನ್ನತೆಯ ಬಗೆಗೆ ಆತ್ಮವಿಶ್ವಾಸದಿಂದ ತನ್ನ ಬಗ್ಗೆ ಹೇಳಿಕೊಂಡಿರುವಹಲವು ಪದ್ಯಗಳನ್ನು ಕವಿಚರಿತ್ರೆಯು ಉದ್ಧರಿಸಿದೆ. ಈ ಎರಡು ಅಂಶಗಳು ಗಮನಾರ್ಹವಾಗಿದೆ.

ಕವಿ ಮಧುರನ ಮಾತುಗಳೇಂ ।
ಸವಿಯೋ ಮದಪವ್ಯಕ್ಕೆ ಮೊರೆವ ಮಱಿ ದುಂಬಿಗಳಂ ॥
ತವೆ ತೊಲಗಿಸಿ ತನ್ನಯ ಮೊಱ
ಗಿವಿಯಿಂ ಮೊಗೆ ಮೊಗೆದು ಸುಮುಖನಾ ಸ್ವಾದಿಸುವಂ ॥
ಗಣಿದಂಗೊಳ್ವೊಡೆ ಮಿಕ್ಕಿನಕ್ಕರದ ಮಾತಂತಿರ್ಕೆ ತನ್ನಾಣೆಗೋ ।
ಸಣೆ ಸಲ್ಗುಂ ಸುಕವೀಂದ್ರ ವೃಂದಸಭೆಯೋಳ್ ತಾನೆಂದೊಡಮ್ಮಮ್ಮ ಧಾ ॥
ರಿಣಿಯೊಳ್ ಕೇಳ್ದಱಿಯಾ ಜಡಾ ಮಧುರನಂ ನಿರ್ಣೀತ ಕರ್ಣಾಟಲ ।
ಕ್ಷಣ ಭಾಷಾಕವಿರಾಜನಂ ಪ್ರವಿಲ ಸಾದ್ವಾಣೀ ಮುಖಾಂಭೋಜನಂ ॥

ಪ್ರಸ್ತುತ ಶಾಸನದಲ್ಲಿ

"ಪಿಂಗಡೆ ಲಕ್ಷ್ಮೀಧರ ಸಚಿ
ವಂಗಾಚಂದ್ರಾರ್ಕಮೊದವಿದಾಯಂ ಶ್ರೀಯುಂ
ಸಂಗತಿವಡೆದಿರೆ ಬರೆದಂ
ಮಂಗಳಮಯವಾಗೆ ಮಧುರ ನೀ ಶಾಸನಮಂ" ॥

ಕವಿಚರಿತ್ರೆಯ ಕವಿ ಮಧುರನೂ, ಶಾಸನವನ್ನು ಬರೆದ ಕವಿ ಮಧುರನೂ ಒಬ್ಬಾತನೇ ಎಂಬುದನ್ನು ಶಾಸನದ ಕಡೆಯಲ್ಲಿ ಗಣಿದಂಗೋಳ್ವೊಡೆ ಮಿಕ್ಕಿ ನಕ್ಕರದ ಮಾತಿಂತಿರ್ಕೆ ತನ್ನಾಣೆ ಗೋ ।

ಕ್ಷಣ ಸಲ್ಗುಂ ಸುಕವೀಂದ್ರ ವೃಂದ ಸಭೆಯೊಳ್ತಾನೆಂದೊಡಮಂಮ ದಾ
ರಿನಿಯೋಳ್ಕೇಳ್ದರಿಯಾ ಜಡಾ ಮದುರನಂ ನಿರ್ಣೀತ ಕರ್ಣಾಟಲ
ಕ್ಷಣ ಪಾದ ಸರೋಜನಂ ಪ್ರವಿಲಸದ್ಧಾತ್ರಿ ಮುಖಾಂಭೋಜನಂ ॥

ಈ ಪದ್ಯವನ್ನು ಗಮನಿಸಬೇಕು. ಕವಿಚರಿತ್ರೆಯಲ್ಲಿಯ ಪದ್ಯಕ್ಕೂ ಶಾಸನದ ಈ ಪದ್ಯಕ್ಕೂ ವ್ಯತ್ಯಾಸವೇ ಇಲ್ಲ. "ವಾಣಿ ಮುಖಾಭೋಗಜಂ" ಎಂಬುದಿಲ್ಲದೆ "ದಾತ್ರಿ ಮುಖಾಭೋಜಂ" ಎಂದಾಗಿದೆ. ಇದು ಕವಿಯ ಪ್ರತಿಭೆ ಚಾತುರ್ಯ. ಕಲಾಕೌಶಲ್ಯ ವಲ್ಲದೆ ಮತ್ತೇನು? ಅಷ್ಟೇ ಅಲ್ಲ. ಈ ಶಾಸನ ಕವಿ ಬೇರೊಬ್ಬನಲ್ಲ ; ಕವಿ ಚರಿತೆ ಉಲ್ಲೇಖಿಸಿರುವಾತನೇ ; ಸಂದೇಹವೇ ಇಲ್ಲವೆಂದು ಶರ್ಮರ ಮಾತು.ಪ್ರಾಚೀನ

ಭಾರತೀಯ ಶಾಸನಗಳ ವಸ್ತು-ಸ್ವರೂಪ ಬಹುಪಾಲು ಖಚಿತ ; ಅದು ದಾನ, ಧರ್ಮ, ದೇವಾಲಯ ಇಲ್ಲವೇ ಕೆರೆ ಕಟ್ಟೆಗಳ ನಿರ್ಮಾಣ ; ಭಾರತೀಯ ಜೀವನ ಧರ್ಮ ಸಂದೇಶಗಳೇ ಅವು. ವ್ಯಕ್ತಿಗತ ಸಾಧನೆಗಳೂ, ಸಾಹಾಸಗಳೂ ಈ ಆವರಣದಲ್ಲೇ ನೆಲೆಗಾಣುತ್ತವೆ. ಇದರಿಂದ ಹೊರತಾದಂಥ ಶಾಸನಗಳು ಅಪರೂಪ.

ಪ್ರಸ್ತುತ ಶಾಸನವೂ ಈ ಧರ್ಮದ ನೆಲೆಯದೇ. ಲಕ್ಷ್ಮೀಧರ ಆಮಾತ್ಯ ಒಮ್ಮೆ ಮಾಲ್ಯಪರ್ವತದಲ್ಲಿ ಸಹಜ ಗುಹೆಯನ್ನು ಕಂಡಾಗ ಆತನಿಗೆ ಅಲ್ಲಿ ವಿಘ್ನನಿವಾರಕನಾದ ಗಣಪತಿಗೆ ಮಂದಿರವನ್ನೇಕೆ ನಿರ್ಮಿಸಬಾರದೆನ್ನಿಸಿರಬೇಕು. ಅದನ್ನು ಕಾರ್ಯಗತ ಮಾಡಿ ಆ ಮಂದಿರದ ನಿರ್ಮಾಣಕ್ಕೆ ಬೇಕಾದ್ದನ್ನೆಲ್ಲ ನೀಡಿದ. ಈ ಸತ್ಕಾರ್ಯವನ್ನು-ತನ್ನ ಆಶ್ರಯ ದಾತನಾದ ಕವಿ ಮಧುರ ಶಾಸನ ಕಾವ್ಯರಚಿಸಿ, ತನ್ನ ಕೃತಜ್ಞತೆಯನ್ನು ಸೂಚಿಸಿದ; ಮಾತ್ರವಲ್ಲ ಆ ಲಕ್ಷ್ಮೀಧರಾಮಾತ್ಯನ ವ್ಯಕ್ತಿತ್ವವನ್ನುಮುಂದಿನ ಜನಪದ ಕ್ಕಾಗಿ ಶಾಶ್ವತಗೊಳಿಸಿದ ಈ ಸಂದರ್ಭದಲ್ಲಿ ನಾಡೊಡೆಯನನ್ನು ಮರೆಯಲಿಲ್ಲ. ವಿಜಯನಗರದ ದೊರೆ ಇಮ್ಮಡಿ ದೇವರಾಯನ ಪ್ರಭುತ್ವದ ಹಿರಿಮೆ ಹೆಗ್ಗಳಿಕೆಗಳನ್ನು ತನ್ನ ಕಾವ್ಯಶಾಸನದಲ್ಲಿ ನಿರೂಪಿಸಿದ.

ಆ ಭೂಮಿಪಾಲ ಪುಣ್ಯಂಕುರಮದು ಪುರುಷಾಕಾರದಾ ಪುಟ್ಟಿದಂತಾ
ಶಾಭಾಗ ಪ್ರಸ್ಪುರತ್ಪಾವನ ಯಶನಶನಿ ಪೌಢಬಾಹು ಪ್ರಾತಾಪಂ
ಸೌಭಾಗ್ಯ ಶ್ರೀನಿವಾಸಂ ಜನಿಯಿಸಿ ಸಕಲಕ್ಷತ್ರ ಚುಡಾಧಿ ರೂಢಾ
ಜ್ಞಾಭಾರಂ ಸಾರ್ವಭೌಮೋನ್ನತಿಯೊಳೆಸಗಿದಂ ದೇವರಾಜಾವನೀಂದ್ರಂ ॥

ಭೂಗರ್ಭ ನಿರ್ಭೇದದಿಂದಲ್ಲ, ಪ್ರಕೃತಿಯ ಸಹಜ ಸ್ಥಿತಿ ಸಂಪದದ ರಕ್ಷಣೆ, ಅದೇ ಪಾಲನೆ ಇದು ಭಾರತವು ಕಾಲಾನುಕಾಲದಿಂದ ನಂಬಿದ್ದು. ಗೋಸಂಪದ-ಸಸ್ಯಸಂಪದ ಒಕ್ಕಲುತನದ ಅನಿವಾರ್ಯತೆಗಳನ್ನು ಮನಗಂಡ ದೇವರಾಯ ಮಹಾರಾಯ ಕೈಗೊಂಡಿದ್ದು ಇದನ್ನೇ.

"ಸಲೆ ನಾನಾ ಸಸ್ಯ ಸಂಪತ್ತಿನಯ ನೊದವಿಸಿ ಸಂತುಷ್ಟಿಯಂ ದಾನ ಧಾರ
ಜಲದಿಂದ ಸಂತಾಪಮಂ ತಳ್ಗಿಸಿ ವಿತತಸಿತ ಚ್ಛತ್ರಸುಚ್ಛಾಯೆ ಗೊಯ್ದು
ಜ್ವಲಿಪಾಜ್ಞಾದಾಮದೋಳ್ನಿಯಮಿಸಿ ಭುಜಸ್ತಂಭದೊಳ್ಕಟ್ಟಿ, ಗೋಮಂ
ಡಲಮಂ ಸತ್ಕೀರ್ತಿ ದುಗ್ಧಂ ಗರದನರಕೆಯಿಂ ದೇವರಾಜವನೀಂದ್ರಂ"

ತನ್ನ ಆಶ್ರಯದಾತನಾದ ಲಕ್ಷ್ಮೀಧರನನ್ನು ಕುರಿತು ಮಧುರೆ ಆತನ ಕುಲಗೋತ್ರಗಳ ಕುರಿತು ಹೇಳುವುದೇನು

ಕೆರೆಯ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸ ।
ಜ್ಜೆರೆಯೊಳ್ ಸಿಲ್ಕದನಾಥರಂ ಬಿಡಿಸು ಮಿತ್ರರ್ಗಿಂಬುಕೆಯ್ ನಂಬಿದ

ರ್ಗ್ರೆರೆವೆಟ್ಟಾಗಿರು ಶಿಷ್ಟರಂ ಪೊರೆಯೆನುತ್ತಿಂತೆಲ್ಲಮಂ ಪಿಂದೆ ತಾ
ಯೆರೆದಳ್ ಪಾಲೆರೆವಂದು ತೊಟ್ಟುಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ ॥

ಶರ್ಮರು ಕರ್ನಾಟಕ ಜನಪದದ ಜೀವನಾಡಿ ಏನಾಗಿತ್ತು, ಏಕಾಯಿತು ಎಂಬುದನ್ನು ಈ ಪದ್ಯವನ್ನು ಹೇಳಿ ಕರ್ನಾಟಕದ ಜೀವನ ಧರ್ಮದ ಸಂದೇಶ ಸಾರವಿದು ಎಂದು ಹೇಳುತ್ತಿದ್ದುದು ನೆನಪಾಗುತ್ತದೆ.

ಲಕ್ಷ್ಮೀಧರಾಮಾತ್ಯನಿಗೆ ಈ ಆದರ್ಶ ಮಂತ್ರೋಪದೇಶಮಾಡಿದ ಆ ತಾಯಿ ಬೇರೆಯಾರೋ ಅಲ್ಲ ; ಆಕೆ ವಿಜಯನಗರ ಸ್ಥಾಪನಾಚಾರ್ಯರಾದ ವಿಜಯವಿದ್ಯಾರಣ್ಯರ ಪರಂಪರೆಯ ಸಾಯಣ-ಮಾಧವರ ತಂಗಿ. ತಮ್ಮ ವೇದ ಭಾಷ್ಯಗ್ರಂಥಗಳಿಂದ ಸುಪ್ರಸಿದ್ಧರಾದ ಈ ಅಣ್ಣ ತಮ್ಮಂದಿರು ವೇದಾಂತ ಚಿಂತನೆ ಮಾತ್ರವಲ್ಲ. ರಾಜ್ಯದ ಚಿಂತನೆಯಲ್ಲೂ ತಮ್ಮನ್ನು ತೊಡಗಿಸಿಕೊಂಡು ವಿಜಯನಗರ ಸಾಮ್ರಾಜ್ಯದ ಪ್ರಧಾನರಾಗಿ ಸೇವೆಸಲ್ಲಿಸಿದವರು. ಇವರು ತಂಗಿ ಸಿಂಗಲೆಯೇ ಲಕ್ಷ್ಮೀಧರನ ತಾಯಿ. ಪರಂಪರಾನುಗನತ ಪಾಂಡಿತ್ಯ, ಪ್ರತಿಭೆ, ಸತ್ಯನಿಷ್ಠೆಗಳಲ್ಲಿ ಲಕ್ಷ್ಮೀಧರ ಅಸಾಮಾನ್ಯನಾದುದರಲ್ಲಿ ಆಶ್ಚರ್ಯವೇನು? ಲಕ್ಷ್ಮೀಧರನ ಈ ವಂಶವೈಶಿಷ್ಟ್ಯವನ್ನು ಬಯಲು ಮಾಡಿದವ ಕವಿ ಮಧುರ. ಈ ಶಾಸನದಲ್ಲಿ ಲಕ್ಷ್ಮೀಧರ ತನ್ನ ಮಂತ್ರಿತ್ವದ ಹೊಣೆಗಾರಿಕೆಯಲ್ಲಿ ತೋರಿದ ಅಪ್ರತಿಮ ಸಾಹಸವನ್ನು ವರ್ಣಿಸುವಲ್ಲಿ ರಾಜಕಾರಣದಲ್ಲಿ ನಡೆದ ದೇವರಾಯ ಮಹಾರಾಯನ ಕೊಲೆಯ ಸಂಚನ್ನು ಹೇಗೆ ನಿರರ್ಥಕಗೊಳಿಸಿ ರಕ್ಷಿಸಿದನೆಂಬುದನ್ನು ನಿವೇದಿಸುತ್ತಾನೆ.

ಸ್ವಾಮಿ ದ್ರೋಹಕ್ಕೆಲಂಬಮ್ಮಸಗಿ ಮಸೆದ ಬಾಳ್ಗೊಂಡು ಚಂಡಪ್ರತಾಪೋ
ದ್ದಾಮ ಶ್ರೀದೇವ ಭೂವಲ್ಲಭನ ಗೃಹದ್ವಾರಮಂ ಮುತ್ತಿ ಮತ್ತಿಂ
ನೇಮಾತೀಮಾತಿನಂ ಮುಂನುರುಬಿತರುಬೆ ನೂರಂಕಮಂ ಸ್ವಾಮಿ ಕಾರ್ಯ
ಕ್ಕಾಮೆಂದು ರ್ವೇಳ್ವರಬ್ಜಾಹ ಮನದಲ್ಲಲದಂ ಲೋಕದೋಳ್ ಲಕ್ಷ್ಮಣಾಂಕಂ ॥
ಕೆಲಬಲನಂ ವಿಚಾರಿಸದೆ ಬಂದ ಭಟ್ಟಬ್ಬಲವಂತರೆಂದೆನು
ತ್ತಲಸದೆ ನಿಂದು ತನ ಪತಿ ಕಾರ್ಯ್ಯಮನುತ್ತ ಪೊಣ್ಬುಮೆಯ್
ಗಲಿ ತಲೆಮಟ್ಟವೀರ್ವಡೆದ ಮುಂದಲೆಯೊಂದೆ ಜಗಜ್ಜನಕ್ಕೆ ಮೂ
ದಲೆಯೆನಿಸಿತ್ತದೇವೆರಗೊ ಲಕ್ಷ್ಮಣ ಮಂತ್ರಿಯ ಸಂದ ಸಾಹಸಂ ॥

ಇದೊಂದು ಅಪೂರ್ವ ಶಾಸನ ಕಾವ್ಯ ಕೃತಿ ಎಂಬುದರಲ್ಲಿ ಎರಡನೆಯ ಮಾತಿಲ್ಲ. ಘಟಿತ ಘಟನಾ ಸಾಕ್ಷಿಯಾಗಿ ನಿಲ್ಲಬಲ್ಲ ಸಮಕಾಲೀನ ಸಮಾಜದ ಚಿತ್ರವನ್ನು ಪ್ರಾಮಾಣಿಕವಾಗಿ ಕಣ್ಮುಂದೆ ನಿಲ್ಲಿಸಿರುವ ಶಾಸನವಿದು. ಇದರ ಅಧ್ಯಯನದಿಂದ ತ್ರಿಪಥಗೆಯ ಸ್ನಾನ ಭಾಗ್ಯಲಭ್ಯ.

ಜೈನಕವಿಯೊಬ್ಬ ಇಲ್ಲಿ ಕಾಣಿಸಿರುವ ಮಹಾ ಸಂಯಮ ಔದಾರ್ಯ ಸಮದರ್ಶಿತ್ವಗಳು ಕರ್ನಾಟಕದ ಧರ್ಮ ಸಮನ್ವಯ ದೃಷ್ಟಿಯ ಸಾಕ್ಷಿಯಾಗಿ ಇಲ್ಲಿ ಕಾವ್ಯಗಂಗೆಯಾಗಿ ನಮ್ಮ ಮುಂದೆ ಇದೆ.

ಇತಿಹಾಸ ಶುದ್ಧವಿಜ್ಞಾನವಾಗಬೇಕಾಗಿಲ್ಲ ; ಅದರಲ್ಲಿ ಪ್ರಕೃತಿ ಸಹಜ ಮೌಲ್ಯಗಳನ್ನು ಗುರುತಿಸಿಕೊಳ್ಳಬೇಕಾದ ಹೃದಯ-ಚಿತ್ತವೃತ್ತಿಗಳು ಅಗತ್ಯವೆನಿಸುತ್ತದೆ. ಈನೆಲೆಯಲ್ಲಿ ಮಧುರ ಕವಿಯ ಈ ಶಾಸನ ಕರ್ನಾಟಕದ ಇತಿಹಾಸ-ಸಂಸ್ಕೃತಿ ಸಂಪದಗಳ ಅಧ್ಯಯನಕ್ಕೆ ಅನಿವಾರ್ಯವಸ್ತುವಾಗಿದೆ.

ವಿಜಯನಗರದ ಶಾಶ್ವತ ನೆನೆಪಿಗೆ-ಸಾರ್ಥಕ ಕೃಷಿಗೆ ನನಗೆ ಅವಕಾಶವೊದಗಿಸಿದ ಕರ್ನಾಟಕ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ ನಿರ್ದೇಶಕರಿಗೆ ನಾನು ಆಭಾರಿ.

೯. ವಿಜಯನಗರ ಅರಸರ ಕಾಲದ ತುಮಕೂರು ಜಿಲ್ಲೆಯ ಶಾಸನೋಕ್ತ ವೈಶಿಷ್ಟ್ಯಗಳು

ಎಂ.ಜಿ.ನಾಗರಾಜ್

ತಾನು ಬಾಳಿದ ಕಾಲದ ಸಮಗ್ರ ಹಿನ್ನೆಲೆ, ಮುನ್ನೆಲೆಗೆ ಸಾಂಸ್ಕೃತಿಕ ಇಚ್ಛಾಶಕ್ತಿಯಿಂದ ಸುವರ್ಣಸೇತುವಾಗಿ ರೂಪುಗೊಂಡದ್ದು ವಿಜಯನಗರ. ಕರ್ನಾಟಕದ ಯಾವುದೇ ಭಾಗವನ್ನು, ಸಂದರ್ಭವನ್ನು ವಿಜಯನಗರ ಕಾಲದ ಪರಿಧಿಗೆ ತಂದು ನೋಡುವಲ್ಲಿ ರಾಜಕೀಯ, ಇತಿಹಾಸಕ್ಕೆ ಆದ್ಯ ನೀಡುವ ಪರಿಪಾಠವಿದೆ. ಅದು ಪಾಳೆಯಪಟ್ಟಿಗಳ ಮೂಲಕ ವಿಕೇಂದ್ರೀಕರಣಗೊಂಡಿತ್ತೆನ್ನುವುದಾದರೂ ಆಡಳಿತ ಕೇಂದ್ರದ ಸಾರ್ವಭೌಮ ತೀರ್ಮಾನ ವಿಜಯನಗರ ರಾಜಧಾನಿಯದೇ ಸಹಜವಾಗಿ ಆಗಿತ್ತು. ಇತಿಹಾಸದ ದೃಷ್ಟಿಯಿಂದ ಸಾಮ್ರಾಜ್ಯದ ಅಸ್ತಿತ್ವಕ್ಕೆ ಈ ಪಾಳೆಯಪಟ್ಟುಗಳು ಅಸ್ತಿಭಾರಶಿಲೆ ಗಳಂತೆಯೇ ಇದ್ದುವು ದಿಟ. ಕೃಷ್ಣದೇವರಾಯನ ಕಾಲಕ್ಕೆ ಸಾಮ್ರಾಜ್ಯ ಸೇನೆಯನ್ನು ಪ್ರತ್ಯೇಕವಾಗಿ ರೂಪಿಸಲಾಯಿತು. ಆದರೂ ಪಾಳೆಪಟ್ಟಿನ ಅಮರನಾಯಕರ ನೆರವನ್ನು ಅವನು ನಿರ್ಲಕ್ಷಿಸಲಾಗಲಿಲ್ಲ. ಹೀಗಾಗಿ ಪಾಳೆಯಪಟ್ಟುಗಳ ರಾಜಕೀಯ ಸಾಂಗತ್ಯವನ್ನು ಸಾಕ್ಷ್ಯವಾಗಿ ತೋರಿದ್ದು ಪ್ರಧಾನವಾಗಿ ಶಾಸನಗಳು ; ಅಲ್ಲದೆ ಸಾಂಸ್ಕೃತಿಕ ಹುರುಳನ್ನು ಅವುಗಳು ದಟ್ಟವಾಗಿ ತೋರಿವೆ. ಇದಕ್ಕೆ ಪೋಷಕವಾಗಿ ಕಾವ್ಯ, ದಾಖಲೆಗಳೂ ಮೂಡಿಬಂದುವು. ಶಾಸನಗಳ ಭಾಷೆ, ಬಿಗಿಕಟ್ಟು ವಸ್ತುವೈವಿಧ್ಯ, ವಿಜಯನಗರದ ಕೊನೆ ಕೊನೆಗೆ ಶೈಥಿಲ್ಯಗೊಂಡುವೆನಿಸಿದರೂ, ಇಡಿಯಾಗಿ ವೈಶಿಷ್ಟ್ಯಗಳಿಂದ ಹೊರತಾಗ ಲಿಲ್ಲ. ಅಲ್ಲದೆ ರಾಜಕೀಯ ವಿಷಯಗಳು ಜನಜೀವನದ ಮೇಲೆ ಪರಿಣಾಮ ಬೀರಿ ಇತಿಹಾಸ ಸೃಷ್ಟಿಸಿದಂತೆ, ಸಾಂಸ್ಕೃತಿಕ ವಿಷಯಗಳು ಅವುಗಳಿಗೆ ಸಂಸ್ಕಾರ ಕೊಟ್ಟ ಬಗೆ ಯಾವುದು ಎಂಬುದರ ಚಿಂತನೆಯೂ ಅಗತ್ಯವಾಗುತ್ತದೆ.

ಸಾಮ್ರಾಜ್ಯದ ಎಲ್ಲ ಸಂಗತಿಗಳಿಗೂ ಶಾಸನ ಹಾಗೂ ಶಾಸನೇತರ ವಿವಿಧ ಮಾಧ್ಯಮ ಗಳಲ್ಲಿ ದಾಖಲಿಸುವ ಅವಕಾಶವಿರುತ್ತಿತ್ತು. ಅದೇ ಸಾಮ್ರಾಜ್ಯದ ಬೆನ್ನೆಲುಬೂ ಆಗಿದ್ದು, ಪ್ರಾದೇಶಿಕ ವಿಭಾಗಗಳು, ಸೀಮೆಗಳು, ಊರುಗಳು, ಅಲ್ಲಿಯ ಜನ ಜೀವನ ಇತ್ಯಾದಿ ಗಳಿಗೆ ಅಲ್ಲಲ್ಲಿ ಹಾಕಿಸಿದ ಶಾಸನಗಳೇ ಆಧಾರ ; ಅವು ವೈಶಿಷ್ಟ್ಯಪೂರ್ಣವಾಗಿ ವಿಜಯ ನಗರ ಕಾಲದ ವಿಷಯಗಳನ್ನು ಇತಿಮಿತಿ ಸೂಚ್ಯವಾಗಿ ತೋರಿವೆ. ಈ ಹಿನ್ನೆಲೆಯಲ್ಲಿ ತುಮಕೂರು ಜಿಲ್ಲೆಯ ರಾಜಕೀಯ ಹಾಗೂ ಸಾಂಸ್ಕೃತಿಕ ವೈಶಿಷ್ಟ್ಯಗಳಿಗೆ ವಿಜಯ

ನಗರ ಕಾಲದಲ್ಲಿ ತೆರೆದುಕೊಂಡಿದ್ದ ಬಗೆಯನ್ನು ಸದ್ಯ ಶಾಸನೋಕ್ತವಾದವುಗಳಿಂದ ಪರಿಶೀಲಿಸಲಾಗಿದೆ.

ಹಳೆ ಶಿಲಾಯುಗ, ಸೂಕ್ಷ್ಮಶಿಲಾಯುಗ, ನವಶಿಲಾಯುಗ ಬೃಹತ್‌ಶಿಲಾಯುಗ ಹೀಗೆ ವಿವಿಧ ಹಂತಗಳ ಜೀವನಕ್ರಮ ಈ ಜಿಲ್ಲೆಯದು. ಆದಿಮಾನವನ ವಾಸ್ತವ್ಯದ ನಾಲ್ಕು ಸಾವಿರ ವರ್ಷದ ಹಿಂದಿನಿಂದಲ್ಲಿನ ಪ್ರಾಗ್ಯೈತಿಹಾಸಿಕದಿಂದಲೂ ಜೀವನ ವಿಕಾಸಕ್ರಮವನ್ನು ಇಲ್ಲಿ ಗುರುತಿಸುವಲ್ಲಿ ಮುಂದೆ ಇತಿಹಾಸಕಾಲಕ್ಕೆ ಅಂದರೆ ಕ್ರಿ.ಶ. ಸುಮಾರು ೭೬೫ ರ ಗಂಗ ಶ್ರೀಪುರುಷ, ಶಿವಮಾರರ ಕಾಲದ ಸಿಯೆಗೆಲ್ಲ ವಂಶದವರಾಳ್ವಿಕೆ, ಅವರ ಮನೆಮಗ ಕುರಕಾರದನ್ನು, ಮನಾಳಿಯರಸ, ರಣಾಲಿಯರಸರನ್ನೆದುರಿಸಿ ವೀರಮರಣ ಅಪ್ಪಿದ ಸಂಗತಿಯನ್ನು ಇಲ್ಲಿನ ಶಾಸನಗಳು (ತು.ಮ.೮೯-೯೪) ಉಕ್ತ ಮಾಡಿದೆ.[೧] ಹಾಗೂ ಗಂಗರಾಜ ಕ್ರಿ.ಶ.೯೭೦ರಲ್ಲಿ ಊರನ್ನು ಕಟ್ಟಿದ ಎಂದು ಹೇಳಿದ್ದರೂ ಕ್ರಿ.ಶ.೯೫೫ರ ತುಮಕೂರು ಸೋಮೇಶ್ವರ ದೇಗುಲ ಶಾಸನದಲ್ಲಿ "ತುಮ್ಮೆಗೂರು" ಎಂಬುದು "ಶಕ ವರ್ಷ ೮೭೭....ದುಳ್ತುಮ್ಮೆಗೂರ ಕೆಟೆಯವೊಳೆದೂ ..." ಎಂದು ಹೇಳಿದೆ.

ಈ ಶಾಸನೋಕ್ತ ಸಾಲಿನ ಮೂಲಕ ತುಮಕೂರಿನ ಪ್ರಾಚೀನ ಹೆಸರು ಗಮನಕ್ಕೆ ಬರುತ್ತದೆ. ಜನಪದದಲ್ಲಿ, ತುಂಬೆಗೂರು, ತುಮ್ಮೇಗೂರು, ತುಮ್ಮೇನಹಳ್ಳಿ ಎಂದು ವಾಡಿಕೆಯಾಗಿ ಬಂದುದರಲ್ಲಿ, ನಿಸರ್ಗವಾಚಿ-ಯಾ ಸಸ್ಯವಾಚಿ ಮೂಲದ ಸುಳುಹೂ ಕಾಣುವಂತಿದೆ. ಬಿಳಿ ಜಾಲಿ ಬಗೆಯ ತುಂಬೆಮರಗಳಿದ್ದ ಕಾರಣವೋ ಅವುಗಳ ಬದಿಗಿದ್ದ ತುಂಬಿತುಳುಕುತ್ತಿದ್ದ ಕೆರೆಯ ಕಾರಣವೋ ತುಮಕು (=ತುಳುಕು) ಅಂದರೆ ತುಮೆನಹಳ್ಳಿಯಾಗಿ, ಸ್ಥಳನಾಮ ರೂಢಿಯಾಯಿತೇ ಎಂಬುದೂ ಪರಿಶೀಲನಾರ್ಹವಾಗುತ್ತದೆ. ಈ ಕಾಲಕ್ಕೆ ಮುನ್ನವೇ ಕ್ರಿ.ಶ.೭೫೦ ರಲ್ಲಿಯೇ ಗಂಗರ ಶ್ರೀಪುರುಷ ಹಾಗೂ ಚೋಳ ಧನಂಜಯನು ಆಲವಾಡಿ ಆರುನೂರನ್ನು ಆಳ್ವಿಕೆ ಮಾಡುತ್ತಿದ್ದ ಬಗ್ಗೆ ಈ ಜಿಲ್ಲೆಯ ಮಿಡಿಗೇಶಿ ಹೋಬಳಿ ಶ್ರವಣಗುಡಿ ಗ್ರಾಮದ ಶಾಸನಗಳು (ಮಧುಗಿರಿ-೯೬-೧೦೧) ತಿಳಿಸುತ್ತವೆ. ಬುದ್ಧಸತ್ವನ ಪ್ರಸ್ತಾಪದ ಮೆಳೆಕೋಟೆ ಮರಳೂರಿನ ಕ್ರಿ.ಶ.ಸು.೪೦೦ರ ಗಂಗಮಾಧವನ ತಾಮ್ರಶಾಸನದ (ತುಮ.೭೮) ವಿಷಯ ತುಮಕೂರಿನ ತದ್ವತ್ ಸಾಕ್ಷಿಯ ಸ್ಥಳವೊಂದಕ್ಕೆ, ಕೋಲಾರದ ಸ್ಥಳವೊಂದಕ್ಕೆ ಅನ್ವಯ ಎಂಬುದು ಖಚಿತವಾಗುವರಿವಿಗೆ ಅದು ಈ ಪ್ರದೇಶದ ಪ್ರಾಚೀನತೆಗೆ ಸೇರುವ ಬಗ್ಗೆ, ವಲಸೆಯಶಾಸನವಿರಬಹುದಾದ ಅನುಮಾನ ಅಡ್ಡವಾಗುತ್ತದೆ. ಈ ಹಿನ್ನೆಲೆಯ ಸಾಂಸ್ಕೃತಿಕ ವಿಕಾಸಗಳು ಹೊಯ್ಸಳರವರೆಗಿನ-ಗಂಗ, ರಾಷ್ಟ್ರಕೂಟ, ನೊಳಂಬ, ಪಲ್ಲವ, ಚೋಳ ಆಳ್ವಿಕೆಯಲ್ಲಿ ಕಂಡುಬರುವಲ್ಲಿ ವಿಜಯನಗರದ ಅವಧಿಯವರೆಗೆ ಸದ್ಯ ವಿಶೇಷ ಗಮನ.

ವಿಜಯನಗರದ ಒಂದನೇ ಬುಕ್ಕನ ಕಾಲದ ಕ್ರಿ.ಶ.೧೩೫೪ರ ಪೋತಗಾನಹಳ್ಳಿ (ತೆಲುಗು) ತಾಮ್ರ ಶಾಸನದಲ್ಲಿ[೨] ಕುಂಚಕಾಪು ಲಿಂಗ್ಗನಗೌಡ (ಕುಂಚಕಾಪುಲಿಂಗನ ಗೌನಿಕಿ) ನಿಗೆ ಕುಂದರಿಪಿ ರಾಜ್ಯದಕನ್ಯಲಕುರಿಕಿಯ ಅಚ್ಚುತ ಭದ್ರಂಪಲ್ಲೆ ಗ್ರಾಮವನ್ನು

ಗ್ರಾಮಗೌಡಿಕೆಯಾಗಿ ನೀಡಿ ಹಾಗೂ ಪೋಷಕವಾಗಿ ಇತರಗ್ರಾಮಗಳನ್ನು ಪೆನು ಗೊಂಡೆಯ ಸೋಮೇಶ್ವರ ದೇಗುಲದ ಮುಂದೆ ದೇವ ಸಾಕ್ಷಿಯಾಗಿ ನೀಡಿದ ವಿಷಯ ವಿದೆ. ಕ್ಷೇತ್ರ ವಿವರದದಿಸೆಯಲ್ಲಿ ಗಡಿಯ ವಿವರ, ದೇವಾದಾಯದಿಂದ, ದೇವರಿಗೆ ಪುರೋಹಿತರು ವಿಶ್ವಕರ್ಮರು ಅಗಸಾಲ, ಕಿರಾತರ ಪೈಕಿಯವರ ಸಮಕ್ಷಮದಲ್ಲಿ ಅಚ್ಯುತ ಭದ್ರಂ ಪಳ್ಳಿಯನ್ನು ಕೂತುರ್ಪಮಾನವಾಗಿ ದಾನಕೊಟ್ಟಿರುವ ಸಂಗತಿ ಇದೆ. ಈ ಶಾಸನದಿಂದ ಪೆನುಗೊಂಡೆಗೆ ಇದ್ದಮಹತ್ವ ಹಾಗೂ ಶ್ರೀಸಾಮಾನ್ಯರನ್ನು (ಫಣಕಟ್ಟಿನ ಜನರು:) ಗೌರವದನೆಲೆಯಲ್ಲಿ ಬಾವಣಿಸಿರುವುದು ಕಾಣುವಂತಿದೆ.

ಕ್ರಿ.ಶ. ೧೩೬೬ರ ದೆನ್ನಲಾದ ಪಾವಗಡ ತಾ. ರಾಜ್ಯವಂತಿ ಗ್ರಾಮದ ತಾಮ್ರ ಶಾಸನವು[೨] ಶಕ.೧೨೧೨ ಅಗುದೆಟ ಭಾವನಾಮ ಸಂವತ್ಸರ ಚೈತ್ರ ಶು.ಶಾ ಬುಧವಾರಂ ವಿಜಯಾನಗರಂ ಶ್ರೀ ಬುಕ್ಕ ಭೂಪತಿ ರಾಯ, ಶಂಕರರಾಯಲವಾರು ಗುಡಂರಾಯಲ ವಾರು, ಅಂಬೋಜರಾಯಲವಾರು ಇತ್ಯಾದಿ ದೊರೆಗಳಿದ್ದರು. ಏಳು ಜನ ಗೌಡುಗಳು ಗೊಲ್ಲಗಿರಿ ಪಟ್ಟಣದಲ್ಲಿ ಪಲ್ಲಕ್ಕಿ ಇತ್ಯಾದಿ ಗೌರವ ಹೊಂದಿದ್ದ ಈ ನಾಲ್ವರು ದೊರೆ ಗಳನ್ನು ನೋಡಲು ಬಂಗಾರು ಗೋತ್ರದ ರಾಜದೇವಗೌಡ ಗೊಲ್ಲಗಿರಿ ಪಟ್ಟಣದ ಹೊನ್ನ ಕಳಂಕರಾಯ ನಮಗೆ ಇವರೆಲ್ಲ ಸೈನ್ಯದ ನೆರವಿನೊಡನೆ ಬಂದು ಬಿನ್ನಹವಿಟ್ಟಾಗ ವಿಜಯನಗರದ ದೊರೆಗಳು ಸಂತೋಷಪಟ್ಟು ರಾಜ ಮರ್ಯಾದೆಯ ಚಿಹ್ನೆಗಳನ್ನು ಹೊಂದಿಟ್ಟುಕೊಳ್ಳಲು ಶಿಲಾಶಾಸನ ಮಾಡಿಕೊಟ್ಟರು ಎನ್ನುವಲ್ಲಿ ಕತೆಯನ್ನು ನೇಯ್ದಿರುವಕಾರಣ ಅದು ಕೂಟಶಾಸನವೆಂದು ಪ್ರಥಮತಃ ಗಮನಕ್ಕೆ ಬರುತ್ತದೆ. ಕಾಲ ಸೂಚಿಯು ಕ್ರಿ.ಶ.೧೪೯೦ ಎಂದಾಗುವುದೂ ಅದಕ್ಕೆ ಪೋಷಕವೆ ಆಗಿದೆ. ಅದು ವಿಜಯನಗರದ ಬುಕ್ಕನ ಹೆಸರನ್ನು ಮಾತ್ರ ತಿಳಿದಿದ್ದು ಉಳಿದ ಸೋದರರ ಹೆಸರು ತಿಳಿಯದೆ, ಮುಂದೆ ಯಾವುದೇ ಕಾಲದಲ್ಲಿ ಹಿಂದೆ ಬಹುಶಃ ದತ್ತವಾಗಿದ್ದ ಶಾಸನೋಕ್ತ ದಾನದ ನಕಲು ಮಾಡಿ ತಮಗೆ ಆರೋಪಿಸಿಕೊಂಡ ನಾಯಕರ ಕತೆಯಂತಿದೆ. ಬಹುಶಃ ವಿಜಯನಗರೋತ್ತರ ಅಮರ ನಾಯಕರಲ್ಲಿ ನಿರ್ಮಿತವಾದ ಕೂಟಶಾಸನದಂತಿದೆ. ಆದರೆ ಶಾಸನದ ಕೆಲವು ವಿಷಯಗಳು ಕುತೂಹಲಕಾರಿ ಆಗಿವೆ. ಕಾಕತೀಯ ಪ್ರತಾಪರುದ್ರ, ನಾಗಪುರಿಯ ಅಂಬೋಜಿರಾಯರನ್ನು ದರ್ಶನ ಮಾಡಿ ಏಳುಕೊಡೆ ಗಳನ್ನು ಪಡೆದದು, ಗಂಗಾಭವಾನಿಯಿಂದ ನಿರಂತರ ಜಲಧಾರೆಗೆ ಆಶೀರ್ವದಿತರಾಗಿ ರಂಗಸ್ವಾಮಿಯು ಪ್ರತ್ಯಕ್ಷವಾಗಿ ಕೃಪೆಯಾಯಿತೆಂಬ ಕತೆಯೂ ನೇಯ್ದು ಬಂದಿದೆ. ರಾಜುದೇವಗೌಡನು ೭೦೦ ಕಾರ್ಮಿಕರ ನೆರವಿನಿಂದ ತಿರುಮಲಾಪುರಿಯನ್ನು ಸ್ಥಾಪಿಸಿದನಂತೆ. ಇವರಲ್ಲಿ ದಲಿತ ವರ್ಗದ ಛಲವಾದಿಗಳ ಬಗ್ಗೆ ಹಾಗೂ ವಿಜಯ ನಗರದ ಬುಕ್ಕನು, ಶ್ರೀಭದ್ರ ಕಾಳಿಕಾಪೂಜಾ ವಿಧೇಯ ಸಾರ್ವಭೌಮ ಎಂದು ಉಕ್ತ ವಾಗಿರುವುದು ಗಮನಾರ್ಹವಾಗಿದೆ. ಇದರಿಂದ ವಿಜಯನಗರೋತ್ತರ ಅಮರನಾಯಕರ ವಂಶಕರೊಬ್ಬರು, ತಮ್ಮ ವಂಶದ ಹಿರಿಮೆಯನ್ನು ಹೇಳಿಕೊಳ್ಳಲು ಈ ಸಾಧನವನ್ನು ರೂಪಿಸಿದಂತಿದೆ ಗಮನಾರ್ಹವಾಗಿ ಕುಂಚಿಟಿಗ ಶಿವಾಚಾರದವರಲ್ಲಿಯ ಪಟ್ಟಕು

ಗೋತ್ರ, ನೆಲ್ಲೂರ್‌ಗೋತ್ರ, ಕಾಸಿಗೋತ್ರ, ಮಟಲಿಗೋತ್ರ ಇತ್ಯಾದಿ ಗೋತ್ರಗಳಿದ್ದ ವಿವರ ನೀಡಿದೆ. ಶ್ರೀರಾಮಾಯನಮಃ ಎಂದು ಆರಂಭಿಸಿ ಶಿವಪರವಾದ 'ನಮಸ್ತುಂಗಶಿರಃ ಶಾಂಬಿತೆ' ಎಂಬ ಶ್ಲೋಕೋದ್ಧರಣ ಮಾಡಿರುವಲ್ಲಿ ಹರಿಹರ ಸಮನ್ವಯದ ಬದುಕಿನ ಚಿತ್ರವೂ ಕಾಣುತ್ತದೆ. ಮದುಗಿರಿ ತಾ. ಶ್ರಾವಂಡನಹಳ್ಳಿ ತಾಮ್ರಶಾಸನವು[೫] ಬುಕ್ಕ ಭೂಪತಿ, ಪೆನುಗೊಂಡೆ ಗುಂಚಿ (ಗುತ್ತಿ!) ರಾಯಲವಾರು, ಔಬಲಿರಾಯಲುವಾರು (ಅಹೋಬಲ್ಲ!) ಎಂದೆಲ್ಲ ಹೇಳಿ ಲಿಂಗಧಾರಣ ಚೇಸಿನ ಶ್ರಾವಂಡವಾಂಡ್ಲು ಮಲ್ಲನ ಗವುಡು, ಎಂದು ನುಡಿದಿರುವುದು ಅಲ್ಲಿದ್ದ ವೀರಶೈವ ಪ್ರಭವಾದ ಕುರಿತು ಹೇಳಿದಂತಾಗಿದೆ. ಮದುಗಿರಿ ತಾ.ಮಿಡಿಗೇಶಿ ತಾಮ್ರಶಾಸನವು[೬] ಶ್ರೀ ಮಿಡಿಗೇಶಿ ಮಲ್ಲೇಶ್ವರನವರದಿಂದ ಉತ್ಪನ್ನರಾದ ಹಿರಿಯರು (ಶೆಟ್ಟಿನೋರು) ದೊಡ್ಡಮಲ್ಲಶೆಟ್ಟಿ ಮಲ್ಲೇಶ್ವರ ಸ್ವಾಮಿ ದೇಗುಲಕಟ್ಟಿದ್ದು, ಹೆಣ್ಣುಮಗಳು ಚಿಕ್ಕಮಲ್ಲಕನು ಅಗ್ನಿ ಪ್ರವೇಶ ಮಾಡಿದ್ದು, ಆನೆಗೊಂದಿ ಸಂಸ್ಥಾನದವರೇ ಅವರ ಮೂಲ ಗುರುಗಳು ಎಂದೆಲ್ಲ ಹೇಳಿದೆ. ಈ ಶಾಸನದ ಕಾಲ ಕ್ರಿ.ಶ.೧೬೧೨ ಎಂದಿದೆ.

ಇನ್ನು ಮಧುಗಿರಿಯ ಗುರಮ್ಮನ ಮಠದ ಬಳಿಯ ಬೆಟ್ಟದ ಗವಿಯ ಚಾವಣಿ ಬಂಡೆಯ ಮೇಲಿನ ಶಾಸನವು (ಕ್ರಿ.ಶ.೧೬೦೬) 'ಶ್ರೀವೃಷಭೇಶ್ವರಾಯ....... ಶ್ರೀಮನ್ಮಹಾನಾಡಪ್ರಭು ಬಿಜಾವರದ ಮುಂಮಡಿ ಚಿಕ್ಕಪ್ಪಗೌಡನ ಪುಂಣ್ಯ ಸ್ತ್ರಿ ಹಿರಿಯಂಮನು ಭಕ್ತಿಯಿಂದ ಶಿವಧರ್ಮವಾಗಿ ಕಟ್ಟಿಸಿದ ವಿರಕ್ತ ಮಠದ ಗುರುವಿರಕಸ್ತ ಮೂರ್ತಿಗಳಿಗೆ... ಗದಿಗೆ ಶುಭಮಸ್ತು...' ಎಂದಿರುವಲ್ಲಿ[೭] ಮಹಾನಾಡಪ್ರಭು (ಮುಮ್ಮಡಿಪಟ್ಟಣದ ವಂಶಿಕ) ಮುಂಮಡಿ ಚಿಕ್ಕಪ್ಪಗೌಡನು ಈ ವೇಳೆಗೆ ಮಧುಗಿರಿಗೆ ರಾಜಧಾನಿಯನ್ನು ಬದಲಾಯಿಸಿದ್ದರೂ, 'ಬಿಜಾವರದ' ಎಂಬ ಹಿಂದಿನ ರಾಜಧಾನಿಯ ಹೆಸರಿನ ನಮೂದು ಅವನಿಗೆ ಶಾಸನೋಕ್ತವಾಗಿ ಅಂಟಿದೆ. ಅಂದರೆ ಬಿಜಾಪುರದ ಕುರಿತಾದ ಅವನ ಆತ್ಮೀಯ ಸ್ಥಳ ಕಾಳಜಿ ಹಾಗೂ ಅದರ ಪ್ರಸಿದ್ಧಿ ಪ್ರಾಚಲಿತ್ಯದ ಕಲ್ಪನೆ ಒದಗುತ್ತದೆ. ಆತನ ರಾಣಿಯು ಕಟ್ಟಿಸಿದ ವಿರಕ್ತಮಠ ಹಾಗೂ ಗುದ್ದುಗೆಯ ಕಾರಣ ಅವರ ವೀರಶೈವ ನಿಷ್ಠೆ ತಿಳಿಯುತ್ತದೆ ; ಗುರುವಿರಕ್ತ ಸಮನ್ವಯವೆಂಬಂತೆ ಗುರು ಹಾಗೂ ವಿರಕ್ತ ಮೂರ್ತಿಗಳಿಗೆ ವಿರಕ್ತಮಠದಲ್ಲಿ ಗದ್ದುಗೆನೆಲೆ ಮಾಡಿರುವುದು ಗಮನಾರ್ಹ. ಇಂಥ ಉದಾಹರಣೆ ಹೊನ್ನಾಳಿಯ ಹಿರೇಕಲ್ಮಠ (ಗುರು ಸ್ಥಲದ ಪಟ್ಟದ ಮಠ) ದಲ್ಲಿ ವಿರಕ್ತ ಸಂಪ್ರದಾಯದ ಬೆಕ್ಕಿನ ಕಲ್ಮಠದ ಗುರುಗಳ ಗದ್ದುಗೆ ಇರುವುದರಲ್ಲಿ ಕಾಣಬರುತ್ತದೆ. ಇದಲ್ಲದೆ ಕುಂಚಟಿಗೆ ಶಿವಾಚಾರದವರ 'ಬಳಿ' ಯ ಹೆಸರುಗಳೂ ಯುಕ್ತವಾಗಿವೆ. ಈ ಮೇಲಿನ ಕೂಟ ಹಾಗೂ ನೈಜ ಶಾಸನಗಳಲ್ಲಿಯ, ಕತೆ, ಚಾರಿತ್ರಿಕ ಅಂಶಗಳನ್ನು ಅನ್ಯ ಆಕರಗಳೊಂದಿಗೆ ಹೋಲಿಸಿ ಹೇಳಿದರೆ ಮುಂದಿನ ಸಾಲುಗಳಲ್ಲಿ ಚಾರಿತ್ರಿಕಾಂಶಗಳಿಗೆ ಒತ್ತು ಕೊಟ್ಟು ಬರೆದಿರುವುದು ಹೀಗಿದೆ :

ನೊಳಂಬ ಪಲ್ಲವ ವಂಶ ಮೂಲದಿಂದ ಬಂದ ಮಹಾನಾಡ ಪ್ರಭುಗಳು ೧೪ನೇ ಶತಮಾನದಲ್ಲಿ ವಿಜಯನಗರದ ೧ನೇ ಹರಿಹರನಿಂದ ಯುದ್ಧವೊಂದರಲ್ಲಿ ತೋರಿದ

ಶೌರ್ಯಕ್ಕಾಗಿ ಮಾನಿತರಾದವರು. ಮಾರೇಗೌಡ ಹಾಗೂ ಅವನ ಆರು ಜನ ಸೋದರರು ಮಹಾನಾಡು ಕಟ್ಟಲು ಹರಿಹರನಿಂದ ಆದೇಶಿತರಾದವರು. ತುಮಕೂರು ಪ್ರದೇಶದ ಕೋರಾಗ್ರಾಮದಲ್ಲಿ (ಕ್ರಿ.ಶ.೧೩೪೬) ಕೋಟೆಕಟ್ಟಿ ರಾಜ್ಯಸ್ಥಾಪಿಸಿದ ಮೇಲೆ ಅಲ್ಲಿ ಕಾಳಣ್ಣಗೌಡ, ತೆರೆಯೂರಿನಲ್ಲಿ ಚನ್ನಪ್ಪಗೌಡ, ಚೇಳೂರಿನಲ್ಲಿ ಸಂಗಪ್ಪಗೌಡ, ಗುಬ್ಬಿ ಹೊಸಳ್ಳಿಯಲ್ಲಿ ಕಾಳ ಚಿಕ್ಕಪ್ಪಗೌಡ, ಎಣ್ಣೆಗೆರೆಯಲ್ಲಿ ರಾಮಪ್ಪಗೌಡ, ಬಿದಿರೆಯಲ್ಲಿ ಚಿಕ್ಕಪ್ಪ ಗೌಡನನ್ನು ಪ್ರತಿಷ್ಠಾಪಿಸಲಾಯಿತು.. ಮಾರೇಗೌಡನು ಕ್ರಿ.ಶ.೧೪೪೯ರ ವರೆಗೆ ಜಯಮಂಗಲಿ ನದಿತೀರದಲ್ಲಿ ಮುಮ್ಮಡಿ ಪಟ್ಟಣ ಕಟ್ಟಿ ನೊಣಬೇಶ್ವರ ದೇಗುಲ ಸ್ಥಾಪಿಸಿದ. ಈ ಪಟ್ಟಣವು ೧೮ ಮೈಲಿ ವಿಸ್ತಾರದಲ್ಲಿ ವಿವಿಧ ಗ್ರಾಮಗಳನ್ನು ಒಳ ಗೊಂಡಿತ್ತು. 'ಮಧುಗಿರಿ ಚರಿತ್ರೆ', 'ಇಮ್ಮಡಿ ಚಿಕ್ಕಭೂಪಾಲನ' ಸಾಂಗತ್ಯ ಇತ್ಯಾದಿ ಕೃತಿಗಳು ಕ್ರಿ.ಶ.೧೪೪೯ರಲ್ಲಿ ಸ್ಥಾಪನೆಯಾದ ಮುಮ್ಮಡಿ ಪಟ್ಟಣವನ್ನು ಮಾರೇಗೌಡನ ಮಗ ದೊಡ್ಡೇಗೌಡನು ಅಭಿವೃದ್ಧಿಗೊಳಿಸಿದ. ಆದರೆ ಯುದ್ಧವೊಂದರಲ್ಲಿ ವಿಜಾಪುರದ ಆದಿಲ್‌ಶಹನಿಂದ ಇವನು ಹತನಾದ. ಇವನ ಮಗ ಹಿರೇ ಚಿಕ್ಕಪ್ಪಗೌಡ ತುಂಗವಟಿ ಯಲ್ಲಿ ಬೆಳೆದು ದೊಡ್ಡವನಾದ ಮೇಲೆ ಮುಮ್ಮಡಿ ಪಟ್ಟಣವನ್ನು ಜೀರ್ಣೋದ್ಧಾರ ಮಾಡಿದ. ಬಿಜ್ಜ ಮಹಾದೇವಿಯ ಆದೇಶದಂತೆ ವಿಜಯನಗರದರಸು ಕೃಷ್ಣದೇವ ರಾಯನ ಅಪ್ಪಣೆ ಪಡೆದು ಕ್ರಿ.ಶ.ಸು.೧೫೨೪ರಲ್ಲಿ ಮುಮ್ಮಡಿ ಪಟ್ಟಣದಿಂದ ಪಶ್ಚಿಮಕ್ಕೆ ಬಿಜ್ಜಾವರ ಗ್ರಾಮಕಟ್ಟಿ ರಾಜಧಾನಿಯನ್ನು ಬದಲಾಯಿಸಿದ. ಮುಂದೆ ರಾಜಗುರು ಬೋಳ ಬಸವೇಶ್ವರರಿಂದ ಪಟ್ಟಾಬಿಷಿಕ್ತನಾದ ಸಿಪ್ಪೇಗೌಡನು ಮುಮ್ಮಡಿ ಚಿಕ್ಕಪ್ಪಗೌಡ ಎಂದು ಅಭಿಧಾನಗೊಂಡ. ಇವನು ಕ್ರಿ.ಶ.೧೪೫೮ರಲ್ಲಿ ರಾಜಧಾನಿಯನ್ನು ಬಿಜ್ಜಾವರದಿಂದ ಮದ್ದಗಿರಿಗೆ ವರ್ಗಾಯಿಸಿದ. ಈ ಮುಮ್ಮಡಿ ಪಟ್ಟಣದ ಸ್ಥಾಪಕರು ಸೊನ್ನಲಿಗೆ ಸಿದ್ಧರಾಮನ ವಂಶ ಪಾರಂಪರ್ಯ ಭಕ್ತರು. ತೋಂಟದ ಸಿದ್ದಲಿಂಗೇಶ್ವರ ರಿಂದಲೂ ಆಶೀರ್ವದಿತರಾದರು ಎಂದೆಲ್ಲ ಹೇಳಿವೆ.[೮] ಇವರು ಅಮರನಾಯಕರಾಗಿ ಪಾಳೆಪಟ್ಟುಗಳನ್ನು, ಮಹಾನಾಡ ಪ್ರಭುಗಳೆನಿಸಿ, ಎಳು ನೆಲೆಗಳಲ್ಲಿ ಆಭಿವೃದ್ಧಿಗೊಳಿಸಿದ ಬಗ್ಗೆ ಸಾಂಸ್ಕೃತಿಕವಾಗಿ ನೇರ್ಪುಗೊಳಿಸಿದ ಬಗ್ಗೆ ತುಮಕೂರು ಜಿಲ್ಲೆಯ ವಿವಿಧ ಶಾಸನಗಳೂ ತಿಳಿಸಿವೆ. ಇವರು ಕ್ರಿ.ಶ.೧೪೪೯ರಲ್ಲಿ ಜಯಮಂಗಲಿ ನದಿ ಮತ್ತು ಕೊಂಡ ವಾಡಿ-ಹುಣಸವಾಡಿ ನಡುವೆ ಕಟ್ಟಿದ ಮುಮ್ಮಡಿ ಪಟ್ಟಣದ ಕೋಟೆಯ ನೆಲಗಟ್ಟಿನ ಅವಶೇಷಗಳು ಮಾತ್ರ ಒಂದೆರೆಡು ಕಡೆ ಇಂದು ಕಾಣುತ್ತವೆ. ಉಳಿದುದೆಲ್ಲ ಬಟ್ಟಬಯ ಲಾಗಿದೆ.

ಸದ್ಯ ಲಭ್ಯವಾದ ಇನ್ನೊಂದು ಅಪ್ರಕಟಿತ ಶಾಸನವು ಹುಣಸವಾಡಿಯ ತಾಮ್ರಶಾಸನ ವಾಗಿದ್ದು, ಕುಂಚಟಿಗ ಶಿವಾಚಾರದವರ ಸಾಂಸ್ಕೃತಿಕ ಚರಿತ್ರೆಯನ್ನು ವಿಶದೀಕರಿಸುತ್ತದೆ. ಅದರ ರೀತ್ಯಾ ವಿಜಯನಗರದ ಬುಕ್ಕರಾಯನಲ್ಲಿಗೆ ಶಿವಾಚಾರದ ಬಡವನೊರು ಕುಂಚಟಿಗ ಕುಲದ ರಾಮಲಿಂಗಗೌಡ ಹಾಗು ಸೋದರರು ಹೋಗಿ ಆರುಬಂಡಿ ದ್ರವ್ಯವನ್ನು ಅರ್ಪಿಸಿದರು. ಅವನ ಅಪ್ಪಣೆ ಪಡೆದು ಕಲ್ಯಾಣ ಪಟ್ಟಣಕ್ಕೆ ಹೋಗಿ,

ಜಂಗಮ ಪಾದಕಾಣಿಕೆ ಇಟ್ಟು ಕೊಂಡಮನಾಯಿಡುವಿನ ಅಂಕೆಗಿದ್ದ ಪ್ರದೇಶದಲ್ಲಿ ಪಟ್ಟಣವೊಂದನ್ನು ಸ್ಥಾಪಿಸಲು ಅಪ್ಪಣೆ ಪಡೆದು ಮುಂಮಡಿ ಪಟ್ಟಣಸ್ಥಾಪಕರು ಪರಿವಾರ ಸಮೇತ ಬಂದರು. ಜಯಮಂಗಲ ನದಿತೀರದಲ್ಲಿ ಮುಂಮಡಿ ಪಟ್ಟಣವನ್ನು (ವಿಜಯ ನಾಗರಪಟ್ಟಣ) ಕಟ್ಟಿದರು. ಇವರು ಶಿವಾಚಾರಸ್ಥರಾಗಿ ವೀರಶೈವವನ್ನು ಅನುಸರಿಸಿ ದರೂ ಕಾಲಾಂತರದಲ್ಲಿ ಕೆಲವು ಕುಟುಂಬಗಳು ವೈಷ್ಣವ ಪರಂಪರೆಯನ್ನು ಅನುಸರಿಸಿ ದವು. ಮುಮ್ಮಡಿ ಪಟ್ಟಣದ ೧೮ ಮೈಲಿ ವಿಸ್ತಾರದಲ್ಲಿದ್ದ ಬಿಸಿಲುಪಲ್ಲಿ ಗ್ರಾಮದಲ್ಲಿ ಬಿಸಿಲು ಮಲ್ಲೇಶ್ವರ, ಕೊಳದ ಮಲ್ಲೇಶ್ವರ, ಚೆನ್ನಮಲ್ಲೇಶ್ವರ ಗುಡಿಗಳನ್ನು ಸ್ಥಾಪಿಸಿ ಹಾಗೂ ಮಠವನ್ನ ನಿರ್ಮಿಸಿ ಅಲ್ಲಿನ ವೀರಶೈವ ಗುರುಗಳಿಗೆ ನಡೆದುಕೊಂಡರು. ಆ ಪ್ರದೇಶ ಕೊಂಡವಾಡಿಗೆ. ಮುಸಲ್ಮಾನರ ಹಾವಳಿಯಿಂದಾಗಿ ಮುಮ್ಮಡಿ ಪಟ್ಟಣದಿಂದ ವಲಸೆ ಬಂದು, ರಾಮಲಿಂಗೇಶ್ವರ ಗುಡಿ ಹಾಗೂ ಬನಶಂಕರಿ (ಚೌಡೇಶ್ವರಿ) ಗುಡಿ ಯನ್ನು ನಿರ್ಮಿಸಿ ಆರಾಧಿಸತೊಡಗಿದರು. ಬಹುಶಃ ಕೊಳದ ಮಲ್ಲೇಗೌಡ (ಸ್ಥಾನಿಕ) ನಿಗೆ ಮಾನ್ಯ ಹಾಗೂ ಇತರರಿಗೆ ದೇವಮಾನ್ಯ, ಚಟುಮಾನ್ಯ ಕೊಟ್ಟು ಪಾರಂಪರ್ಯ ಅನುಭವಿಸಿಕೊಂಡಿರಲು ಹೇಳಿದೆ. ಇಲ್ಲಿರುವ ವಿಷಯಗಳು ವಿಜಯನಗರ ಕಾಲದ ಐತಿಹ್ಯಗಳನ್ನು ಸೇರಿಸಿಕೊಂಡು ಬೆಳೆದರೂ ಶಾಸನದಲ್ಲಿ[೯] ಹೇಳಿರುವ ಕೊಳದ ಮಲೆ ಗೌಡುವಾರು ಶಿವಾಚಾರಂ ॥ ವಾರಿಕುಲಂ ಬಡವನೊರುಕುಲಂ ಕುಂಚಿಟಿಗವಾರು.... ಮುಂಮಡಿ ಚಿಕಪ್‌ಗಾನಿ ತೋಡುಕೊನಿ....ವೂಣೆಸಿವಾಡಿ... ಅಸುರಾಯುನಿಗುಡಿ... ಆಯಿಗಾಂಡ್ಲು, ವಷಿತಮು ಪಲುಮ್ಮೆರೆ ರಾಳ್ಳುಲ್ಲಿಂಗಮುದ್ರೆ...ಕೊಳದಮಲೆಗೌನಿಕ ಯಿಚಿರ್‍ರಿ, 'ರಾಮಲ್ಲಿಂಗುಡು ಬಿಸುಲು ಮಲ್ಲೇಶ್ವರಡು । ಕೊಳದ ಮಲ್ಲೇಶ್ವರುಡು..... ಇತ್ಯಾದಿ ಸಾಲುಗಳು ಇತಿಹಾಸ ಮಗ್ಗುಲುಗಳನ್ನು ಸೇರಿಸಿಕೊಂಡಿವೆ. ಈ ಶಾಸನದಲ್ಲಿ ಶಕ ೧೨೧೨ ಎಂದು ನಮೂದು ಇದ್ದು ಕೂಟಶಾಸನವೆನಿಸಿದೆ. ಇದನ್ನು ಉಳಿದ ಇತರ ಶಾಸನಗಳೊಡನೆ ಹೋಲಿಸಿ ಹೇಳಿದರೆ ಕ್ರಿ.ಶ.೧೬೦೦ರ ಸುಮಾರಿನಲ್ಲಿ ರಚಿತ ವಾಗಿದ್ದು, ಇದನ್ನು ಬರೆದ ವ್ಯಕ್ತಿ ತಾನು ಕೇಳಿದ ವಿಷಯವನ್ನು ಕಾಲ ಸರಿಯಾಗಿ ತಿಳಿಯದೆ, ಕತೆಗಳನ್ನೆಲ್ಲ ಸೇರಿಸಿ ರೂಪಿಸಿದ ಶಾಸನವಿದಾಗಿದೆ. ಆದರೂ ಗಮನಿಸ ಬೇಕಾದ ಕೆಲವಾರು ಇತಿಹಾಸದ ಸಂಗತಿಗಳೂ ಇದರಲ್ಲಿವೆ. ಉಕ್ತವಾಗಿರುವ ಗುಡಿಗಳು, ಗೋತ್ರದ ಮನೆತನದವರೂ ಇಂದಿಗೂ ಶಾಸನ ದೊರಕಿದ ಪ್ರದೇಶದಲ್ಲಿ ಇದ್ದಾರೆ. ಅಂದರೆ ರಾಮಲಿಂಗೇಶ್ವರಗುಡಿ ಬನಶಂಕರಿ ಎನಿಸಿರುವ ಚೌಡಮ್ಮನ ಗುಡಿ (ಅಸುರಾ ಯಿನಿ!) ಕೊಂಡವಾಡಿ ಗ್ರಾಮದೊಳಗಿವೆ. ಈ ಗ್ರಾಮದಾಚೆ ಬೇಚಿರಾಕ್ ಬಿಸಿಲುಪಲ್ಲಿ ಯಲ್ಲಿ, ಬಿಸಿಲು ಮಲ್ಲೇಶ್ವರ, ಕೊಳದ ಮಲ್ಲೇಶ್ವರ (ಶಾಸನೋಕ್ತ ಚನ್ನಮಲ್ಲಸ್ವಾಮಿ), ಲಿಂಗಗಳು ಹಾಗೂ ಬಸವಶಿಲ್ಪಗಳು ಗೋಡೆ ಬಿದ್ದುಹೋದ ಶಿಥಿಲಗುಡಿಯಲ್ಲಿವೆ. ಮೊದಲಿದ್ದ ಗುರುಮಠದ ಚಹರೆಗಳು ಸ್ಪಷ್ಟವಿಲ್ಲ.

ಇನ್ನು ಕ್ರಿ.ಶ.೧೫೫೮ರದ್ದೆನ್ನಲಾದ ತುಮಕೂರು ತಾ.ಶಾಸನವೊಂದು[೧೦] ಬಿಜ್ಜಾವರದ (ಬಿಡ್ಯಾವರದ) ಮಹಾನಾಡುಪ್ರಭು ಮುಮ್ಮಡಿ ಚಿಕ್ಕಪ್ಪಗೌಡನು, ಕೆರೆಯಪ್ಪಗೌಡ

ಹಾಗೂ ಹೆಣ್ಣು ಮಗಳೊಬ್ಬಳಿಗೆ ಕರಿಕೆರೆ ಎಂಬ ಗ್ರಾಮವನ್ನು (ಕೋರ ಮಾಗಣೆಗೆ ಸೇರಿದ) ಉಂಬಳಿ ಗ್ರಾಮವಾಗಿ ಕೊಟ್ಟ ಬಗ್ಗೆ ಹೇಳಿದೆ. ಕೋರ ಮಾಗಣೆ ಎಂಬುದು ಕ್ರಿ.ಶ.೧೩೪೬ರಲ್ಲಿಯೆ ಮಹಾನಾಡ ಪ್ರಭುಗಳ ಮೊದಲ ಸ್ಥಾಪಕನೆಲೆ. ಬಿಜ್ಜಾವರದ ಮುಮ್ಮಡಿ ಚಿಕ್ಕಪ್ಪಗೌಡನು ಈ ಮಾಗಣೆಗೆ ಸೇರಿದ ಗ್ರಾಮದಾನ ಮಾಡಿದನೆಂದರೆ ಮಹಾನಾಡ ಪ್ರಭುಗಳ ಪೈಕಿಯ ಕಾಳಣ್ಣ ಗೌಡನವಂಶ ವಿಭಾಗವಿಲ್ಲದೆ ಮುಮ್ಮಡಿ ಪಟ್ಟಣದ ಮಾರೇಗೌಡನ ವಂಶಿಕ ಶಾಖೆಯ ದೊರೆಗಳಿಗೆ ಆ ಪ್ರದೇಶವು ೧೬ನೇ ಶತಮಾನದ ವೇಳೆಗೆ ಸೇರಿಹೋಗಿತ್ತು ಎಂದಾಗುತ್ತದೆ. ಇನ್ನೊಂದು ಗಮನಾರ್ಹ ಸಂಗತಿಯಾಗಿ ಹೆಣ್ಣುಮಗಳೊಬ್ಬಳಿಗೆ ಗ್ರಾಮ ದಾನ ಮಾಡಿದ ವಿಷಯಪ್ರಸ್ತಾಪಿತ ವಾಗಿದೆ. ಈ ಘಟನೆಗಳು ಬಿಜ್ಜಾವರದಿಂದ ಮದ್ಧಗಿರಿಗೆ ರಾಜಧಾನಿಯನ್ನು ವರ್ಗಾ ಯಿಸುವ ಮುನ್ನ ನಡೆದಂತಿವೆ.

ಮಧುಗಿರಿ ತಾ ಕ್ರಿ.ಶ.೧೫೯೩ರ ಸಿದ್ದಾಪುರ ಶಾಸನವು,[೧೧] ಮಹಾನಾಡಪ್ರಭು ಬಿಜ್ಜಾವರದ (ಇಮ್ಮಡಿ) ಚಿಕ್ಕಪ್ಪಗೌಡನ ಮಗನಾದ (ಮುಮ್ಮಡಿ) ಚಿಕ್ಕಪ್ಪಗೌಡನು ವಿಘ್ನೇಶ್ವರ, ವೀರಭದ್ರ, ಭೈರವ ಇತ್ಯಾದಿ ಪಂಚದೇವತಾ ದೇಗುಲಗಳನ್ನು ಮಾಲೂರು ನಾಡಿನಲ್ಲಿ ನಿರ್ಮಿಸಿ, ಕೋಟೆಯನ್ನು ಕಟ್ಟಿದ ಸಂಗತಿಯನ್ನು ಹೇಳುವಲ್ಲಿ, ಮಹಾನಾಡ ಪ್ರಭುಗಳ ರಾಜ್ಯ ರಕ್ಷಣೆ ಹಾಗೂ ಸಾಂಸ್ಕೃತಿಕ ನಿಷ್ಠೆಯ ಚಿತ್ರ ದೊರೆಯುತ್ತದೆ.

ಕ್ರಿ.ಶ.೧೪೪೭ರ ತುಮಕೂರು ತಾ. ಕೋಳಾಲ ಗ್ರಾಮದ ತೆಲುಗು ಶಾಸನವೊಂದು[೧೨] ಮಾಯಿಕೊಳ್ಳಾಪುರ ದೇಶಾಯಿಯು ಪೆದ್ದಚಂಗಪ್ಪರೆಡ್ಡಿಗೆ ಮಹಾಮಂಡಲೇಶ್ವರ ಪ್ರತಾಪರಾಯನು ಶೇವಕಮಾನ ನಿರೂಪ (Service Manya) ನೀಡುವಲ್ಲಿ ಹೇಳಿರುವ ಮಾತು. ಕುದುರೆಗಳಿಗೆ ಹುಲ್ಲು ಒದಗಿಸಿದ ಕಾರಣ 'ಸಮುದ್ರ ಕುಲಾಚಾರ' ದ ಜನರು ಹೊಂದಿರುವ ಜಮೀನು ಸುಂಕವನ್ನು ಸರ್ವಮಾನ್ಯ ಮಾಡಿದೆ. ನಿಮ್ಮ... ಸ್ಥಳಗಳಲ್ಲಿ ಭೂಮಿ ಸಾಗುವಳಿ ಪುತ್ರಪೌತ್ರ ಪಾರಂಪರ್ಯವಾಗಿ ನಿರುಪಾಧಿಕವಾಗಿ ನಡೆಸಿ ಎಂದಿದೆ. ಇಲ್ಲಿ ಸಮುದ್ರ ಕುಲಾಚಾರ ಎಂದರೆ ಬೆಸ್ತರ ಮೀನು ಬಲೆಗಾರಿಕೆ, ಎಂದು ಮೇಲ್ನೋ ಟದ ಊಹೆಯಾಗಿ ಬಿಡಬಹುದು. ಸಮುದ್ರ ಎಂದರೆ ಜ್ಯೋತಿ ಎಂಬ ಅರ್ಥವೂ ಇರುವಲ್ಲಿ ಸಮುದ್ರ ಕುಲಾಚಾರವು ಜ್ಯೊತಿಪಣದವರಿಗೂ ಅನ್ವಯವಾಗಿ ಸಮುದ್ರ ವ್ಯಾಪಾರಿಗಳು (ನಾವಿಕರು!) ಎಂಬರ್ಥವೂ ಒದಗಬಹುದು. ಶಿವನನ್ನು ಆಚರಿಸು ವವರು (ಆರಾಧನೆ ಸಹಿತ) ಶಿವಾಚಾರದವರು ಎನ್ನುವಂತೆ ಸಮುದ್ರ ಕುಲ ಎಂದರೆ ಗಂಗಾಕುಲ ಎಂದಾಗಬಹುದು. ಸಮುದ್ರ ರಾಜನ ಪತ್ನಿ ಗಂಗೆ. ಭಗೀರಥನು ಸಗರ ಪುತ್ರರ ಹಿತಕ್ಕಾಗಿ ತಂದ ಗಂಗೆಯಿಂದ ಸಮುದ್ರ ತುಂಬಿ ಬಂತು. ಇಂತೆಲ್ಲ ಪೌರಾಣಿಕ ಹಿನ್ನೆಲೆ ಇರುವಲ್ಲಿ ಈ ಸಮುದ್ರಕುಲದವರು ಜ್ಯೋತಿಪಣ ವ್ಯಾಪಾರಿಗಳಾಗಿ, ನಾವಿಕ ರಾಗಿ ಕುದುರೆ ಹಾಗೂ ಹುಲ್ಲು ವ್ಯಾಪಾರವನ್ನು ಜ್ಯೋತಿಪಣದವರಂತ ನಡೆಸುತ್ತಿದ್ದು, ವಿಜಯನಗರ ಅರಸರಿಗೆ ಕುದುರೆ ಮತ್ತು ಹುಲ್ಲುವದಗಿಸುತ್ತಿದ್ದರೆನ್ನ ಬೇಕು. ಮಾಯಿಕೊಲ್ಲಾಪುರದ ದೇಸಾಯಿ ಆಗಿದ್ದ ಪೆದ್ದಚೆನ್ನಪ್ಪರೆಡ್ಡಿಯ ವಂಶಿಕ ರೈತರಾಗಿ

ಬದುಕು ನಡೆಸುತ್ತಿದ್ದರು. ಇವರು ಸಲ್ಲಿಸಿದ ಹುಲ್ಲು ಸರಬರಾಜು ಸೇವೆಗಾಗಿ ಸರ್ವಮಾನ್ಯಕೊಟ್ಟು ಎಲ್ಲಿ ಬೇಕಾದರೂ ಬೇಸಾಯದ ಬದುಕು ನಡೆಸುವಂಥ ಅವಕಾಶವನ್ನು ಪೆದ್ದಚನ್ನಪ್ಪ ರೆಡ್ಡಿಯ ಮೂಲಕ ನಿರೂಪ ನೀಡಿ ಹೇಳಲಾಗಿದೆ. ಆದರೆ ಕ್ರಿ.ಶ.೧೫೧೬ರ ಅದೇ ರೀತಿಯ ಇನ್ನೊಂದು ತೆಲುಗು ಶಾಸನದ ರೀತ್ಯ[೧೩] ಮಹಾ ಮಂಡಲೇಶ್ವರ ವೆಂಕಟಪತಿರಾಯನ ಕಾಲದಲ್ಲಿ ಪೆದ್ದ ಚೆನ್ನಪ್ಪ ರೆಡ್ಡಿಯ ಮೂಲಕವೆ ಸಮುದ್ರ ಕುಲಾಚಾರ ಪಾಲಿಸುವ ರೈತಾಪಿ ಕುಟುಂಬಗಳು ನೀಡಬೇಕಾದ ಮದುವೆದೆರೆ ತಪ್ಪುಕಾಣಿಕೆ ಇತ್ಯಾದಿಗಳು ಮಾಯಿ ಕೊಲ್ಲಾಪುರದ ದೇವತೆ ಬೆಟ್ಟರಾಯನ ಸೇವಾರ್ಥ ಗಳಿಗೆ ನೀಡಬೇಕೆಂದು ಹೇಳಿದೆ. ಇದರಿಂದ ಬೆಟ್ಟೆರಾಯ ದೇವತೆ ಆರಾಧಕರಾಗಿಯೂ ಸಮುದ್ರ ಕುಲಾಚಾರದವರಿದ್ದರು ಎಂದಾಗುತ್ತದೆ. ಬೆಟ್ಟ ಎಂದರೆ ಅಡಿಕೆಗೆ ಅನ್ವಯ ಅರ್ಥದಲ್ಲಿದೆ. ಅಡಿಕೆಯು ಕರಾವಳಿ ಪ್ರದೇಶದ ಸೊಪ್ಪಿನ ಬೆಟ್ಟ (ಎಲೆ ಸೊಪ್ಪಿನ ಸಾವಯವ ಗೊಬ್ಬರ) ಪ್ರದೇಶದಲ್ಲಿ ಬೆಳೆಯುವ ವಿಷಯದ ಹಿನ್ನಲೆಯಲ್ಲಿ ಅದು ಭೈರವ ದೇವರಿಗೆ ಉತ್ತರ ಕನ್ನಡದ ಸಮುದ್ರ ತೀರದಲ್ಲಿ ಒಂದು ಕಾಲದ ಬಳಕೆಗಿದ್ದ ದೇವರಿಗೆ (ನಾಥ ಸಂಪ್ರದಾಯ ಬೆಟ್ಟರಾಯನಿಗೆ) ಅನ್ವಯಿಸುವಂತಿದೆ. (ಒಕ್ಕಳ ಸಸ್ಯೋದ್ಯಾನದ ಸನಿಹದ ಸತ್ಯನಾಥ ದೇವರಂತ ಇವನೂ ಇರಬಹುದು).

ಈ ಸಂದರ್ಭದಲ್ಲಿ ಸಮುದ್ರ ಕುಲಾಚಾರದವರಿಗೆ ೧೪೧೬ನೇ ಶತಮಾನದಲ್ಲಿ ಕುದುರೆ ಸರಬರಾಜು, ಸಾಕಾಣಿಕೆ, ಹುಲ್ಲು ಸರಬರಾಜು ಮಾಡುವಲ್ಲಿ, ನಾವಿಕರಾಗಿ, ವ್ಯಾಪಾರಿಗಳಾಗಿ ಕೆಲಸ ನಿರ್ವಹಿಸುತ್ತಿದ್ದ ಮುಖ್ಯ ಕಸುಬು ಇತ್ತು. ಮೀನುಗಾರಿಕೆ ವ್ಯಾಪಾರಗಳಾಗಿ ತಾತ್ಕಾಲಿಕ ಉಪಕಸುಬಾಗಿತ್ತು. ಬೇಸಾಯ ಕಾರ್ಯ ಮಾಡುವ ರೈತರೂ ಅವರಲ್ಲಿದ್ದರು ಎಂದು ತಿಳಿಯುವಂತಾಗುತ್ತದೆ. ಪೆದ್ದಚೆನ್ನಪ್ಪರೆಡ್ಡಿ ದೇಸಾಯಿ ವಂಶಿಕರಾಗಿ ಇವರ ಅಸ್ತಿತ್ವ ಮುಂದುವರಿದಿತ್ತು. ಕ್ರಿ.ಶ.೧೫೧೬ರಲ್ಲಿಯೂ ಸಮುದ್ರ ಕುಲಾಚಾರ ಮನೆತನದಲ್ಲಿ ಪೆದ್ದಚನ್ನಪ್ಪರಡ್ಡಿ ಎಂಬಹೆಸರು ಮುಂದುವರಿದಿದ್ದು ಬಹುಶಃ ಕ್ರಿ.ಶ.೧೪೪೭ರ ಪೆದ್ದಚನ್ನಪ್ಪರೆಡ್ಡಿಯ ಮೊಮ್ಮಗನಿಗೆ ಕ್ರಿ.ಶ.೧೫೧೬ರಲ್ಲಿ ಆ ಹೆಸರು ಅನ್ವಯವಾಗಿರುವಂತಿದೆ. ಅಲ್ಲದೆ ಬೆಟ್ಟರಾಯ ದೇವತೆಯ ಸ್ಥಾನಿಕನಾಗಿ ಇವನು ಇದ್ದಂತೆ ತೋರುತ್ತದೆ. ಕೋಳಾಲ ಗ್ರಾಮಕ್ಕೆ ಈ ವಂಶೀಕರು ವಲಸೆ ಬಂದಿರುವ ಸೂಚನೆಯನ್ನು ಈ ಶಾಸನವು ತೋರುವಂತಿದೆ. ವಿಜಯನಗರದ ಕಾಲದಲ್ಲಿ ಕುದುರೆಗಳನ್ನು ಸಮುದ್ರ ಮಾರ್ಗದಿಂದ ಅನ್ಯದೇಶಗಳಿಂದ ತರಿಸಿಕೊಳ್ಳುತ್ತಿದ್ದ ಸೂಚನೆ, ಹಾಗೂ ವಿಶೇಷ ಬಗೆಯ ಹುಲ್ಲನ್ನು ತರಿಸಿಕೊಳ್ಳುತ್ತಿದ್ದ ಸೂಚನೆಯೂ ಇಲ್ಲಿ ದೊರಕುತ್ತದೆ.

ಕ್ರಿ.ಶ.೧೫೩೩ರ ತುರುವೇಕೆರೆ ಕಸಬಾ ತಾಮ್ರಶಾಸನವು[೧೪] ತ್ರೈಲಿಂಗ ಪಾಲಕ ಯಾ ಶ್ರೀನಿವಾಸಪುರಿ ಹೆಸರನ್ನು ಪ್ರಸ್ತಾಪಿಸಿದೆ. ತಾಮ್ರ ಪಟದ ನಾಲ್ಕನೇ ಹಲಗೆಯಲ್ಲಿ, ನಳಿನಾವತಿ, ಭೈರವಾದ್ರಿ ಹಾಗೂ ದಕ್ಷಿಣ ಭಾಗದಲ್ಲಿ ಶ್ರೀನಿವಾಸಪುರಿ ಇದೆ. ಪೂರ್ವಕ್ಕೆ ಹೂಜಿಗಲ್ಲು ಇದೆ. ಇವೆಲ್ಲಕ್ಕಿಂತ ಮುಖ್ಯವಾಗಿ ಆಗ್ನೇಯಕ್ಕೆ 'ಬೌದ್ಧವಾಸಮಹಾಪುರಿ'

ಎನಿಸಿದ 'ಕಲವತಿ' ಪಟ್ಟಣವಿದೆ. ಎಂದು ಉಕ್ತವಾಗಿದೆ. ಈ ಕಲವತಿ ಮಾಗಡಿಗೆ (ಬೆಂಗಳೂರು ಜಿಲ್ಲೆ) ೮ ಕಿ.ಮೀ. ದೂರದಲ್ಲಿರುವ ಇಂದಿನ ಕಲ್ಯವೇ ಆಗಿದೆ. ಶಾಸನದಲ್ಲಿ ಕಲಾವತಿ ಎಂದಿಲ್ಲದೆ ಕ ಲ ವ ತೀ ಎಂದಿರುವುದು ಗಮನಾರ್ಹ.

ತಾಮ್ರಪಟದ ನಾಲ್ಕನೆ ಹಲಗೆ ಹಿಂಬದಿಯಲ್ಲಿನ ಶಾಸನ ಪಾಠದ ಸಾಲುಗಳು

೧೨೫ ....ಅವಸನ್ನ

೧೨೬ ಗರೀಮೇನಾಂ ನಳಿನಾವತಿ ಸಂಜ್ಞಿತಾಂತ

೧೨೭ ಸ್ಯೌಶ್ಚ ಪೂರ್ವಾ ದಿಗ್ಭಾಗೇ ಭೈರವಾದ್ರಿರಿತಿ ಸ್ಥಿ

೧೨೮ ತಃ ತಸ್ಯೌದ್ರೇ ರ್ದಕ್ಷಿಣೇ ಭಾಗೇ ನಾಮ್ನಾತ್ರೇ ಲಿಂ

೧೨೯ ಗ ಪಾಲಕಾ ಶ್ರೀನಿವಾ [ಸ] ಪುರೀ ಚೇತಿ ಪ್ರ

೧೩೦ ತಿ ನಾಮ್ನಾ ಚ ವಿಶ್ರುತಾ । ತಸ್ಯಾಗ್ನೇಯ ದಿ

೧೩೧ ಗ್ಭಾಗೇ ಬೌದ್ಧವಾಸಾ ಮಹಾಪುರೀ । ಕಲವತೀ

೧೩೨ ತಿ ವಿಖ್ಯಾತಾ ತೊತ್ತರೇ ಹರಿಣಾಟವೀ ಏವಂ ವಿ

೧೩೩. ರಾಜಿತ ಗ್ರಾಮರತ್ನೇ ಸಸ್ಯಮನೋಹರೇ ನವಭ್ಯೋ

ಇಲ್ಲಿರುವ 'ಕಲವತಿ' ಶಬ್ದದಮೂಲರೂಪವು 'ಕಲ್ಯ' ಎಂಬ ರೂಪಾಂತರಕ್ಕೆ ಎಡೆಗೊಟ್ಟಿರುವಂತಿದೆ. ಕಲವ > *ಕಲ್ಲವ > ಕಲ್ಲೆವ > ಕಲ್ಲೆಹ (= ಮಡಕೆ,ಘಟ) > ಕಲ್ಯ ಎಂಬ ರೂಪವು ಒದಗಿ ಬಂದಿರುವಂತಿದೆ. ಕೆಲವ ಅಥವಾ ಕಲ್ಯ ಎಂಬ ಸ್ಥಳನಾಮವನ್ನು 'ಕಲಾವತಿ' ಎಂದು ಕರೆದಿರುವುದು ಜನಪದ ಸ್ಥಳನಾಮ ರೂಪವನ್ನು ಸಂಸ್ಕೃತಾನುರೂಪಮಾಡಿರುವ ಫಲವೆನಿಸುತ್ತದೆ.

'ಕಲವತಿ'ಯನ್ನು 'ಬೌದ್ಧವಾಸಾ ಮಹಾಪುರೀ' ಎಂದು ಕರೆದಿರುವುದರಲ್ಲಿಯೇ ಅದು ಒಂದು ಕಾಲದ ಬೌದ್ಧರ ವಾಸ್ತವ್ಯದ ಕೇಂದ್ರವಾಗಿತ್ತೆಂಬುದರ ಸೂಚನೆಸಿಗು ತ್ತದೆ. ಹೀಗಾಗಿ ಮಡಕೆ ಅಥವಾ ಘಟ ಸಂಬಂಧದವಳಾದ ಬೌದ್ಧರ (ವಜ್ರಯಾನ) ತಾರಾಭಗವತಿಯ ಕುರಿತ ಐತಿಹ್ಯವೇ ಕಲ್ಯದ ಕಲ್ಲೇಶ್ವರ ದೇಗುಲದ ಮುಂದೆ ಹರವಿಯನ್ನು (ಕುಂಬಳಕಾಯಿ ಹೊತ್ತ ಗುಳ್ಳೆಕಾಯಿ ಅಜ್ಜಿ ಎನಿಸಿದೆ) ಭುಜವೆತ್ತಿ ಹೊತ್ತಿರುವ ಸ್ತ್ರೀ ಮೊಗವಿರುವಂತೆ ಸ್ತಂಭದ ಮೇಲೆ ಕೆತ್ತಲು ಕಾರಣವಾಗಿರಬೇಕು. ಇದಲ್ಲದೆ 'ಅರಮನೆ ತುಂಡು' (ಅರಮನೆ ಇದ್ದಜಾಗ) ದಾಟಿ ಹೋದರೆ ಅಲ್ಲಿ 'ಏಳುಮಂದಮ್ಮನ ಕಲ್ಲು' ಶಿಲಾಫಲಕವಿದೆ. ಈ ಸಾಲು ಮಡಕೆಯ ಶಿಲಾಫಲಕ, ತಾರಾಭವಗತಿ ಪೂಜಾ ಪರಂಪರೆಯ ಪ್ರತೀಕವಾಗಿ ಸಪ್ತ ಮಾತೃಕಾ ಗೌರಿ ಪೂಜೆಯ ನಂಟನ್ನು ಕಾಲಾಂತರದಲ್ಲಿ ಒದಗಿಸಿಕೊಂಡು ಮುಂದುವರಿದಂತಿದೆ. (ರಾಮನಗರ ತಾ. ಸುಗ್ಗನಹಳ್ಳಿ, ಗೌರಿ ತೊಟ್ಟಿಲು ಪೂಜೆ ಇಲ್ಲಿಗೆ ಸಂಬಂಧಗೊಂಡಿತ್ತು). ತಾರಾತ್ವಂ ಸುಗತಾಮೇ ಭಗವತೀ ಗೌರಿ ಶೈವಾಗಮೇ - ಎಂಬ ಸ್ತೋತ್ರದಲ್ಲಿ ಬೌದ್ಧರಲ್ಲಿನ 'ತಾರಾ', ಶೈವಾಗಮದ 'ಗೌರೀ'

ಎಂದಿರುವಲ್ಲಿ ಮೇಲಿನ ನಂಟಿಗೆ ಮೌಲ್ಯ ಒದಗುತ್ತದೆ. ಅದಾಗಿ 'ಕಲ್ಯ' ದ ಸ್ಥಳ ನಾಮವು ಬೌದ್ಧ ಮೂಲದ ದೇವತೆಯ ಕಾರಣ, ವಸ್ತು-ಘಟನಾವಾಚಿಯಾಗಿ ರೂಪುಗೊಂಡು, ಜನಪದ ರೂಪದಲ್ಲಿ ಬಳಕೆಗೊಂಡಿದೆ ; ಪಂಡಿತ ನಿಷ್ಪತ್ತಿಗೂ ತೆರೆದುಕೊಂಡಿದೆ.

ಶಾಸನದಲ್ಲಿ ಬರುವ 'ಕಲವತೀತ' ವಿಖ್ಯಾತಾತೂತ್ತರೇ ಹರಿಣಾಟವೀ ಎಂದಿರುವುದು ಕಲ್ಯದ ಉತ್ತರ ಭಾಗದಲ್ಲಿ ಹರಿಣಾಟವಿ ಹುಲ್ಲೆಗಳ ಕಾಡು ; ಹುಲ್ಲೆಗಳ ಅರೆ ಇತ್ತೆನ್ನುವುದನ್ನು ಸ್ಪಷ್ಟಪಡಿಸುತ್ತದೆ. ಕಲವತಿ 'ಕಲ್ಯ'ಯ ಉತ್ತರಕ್ಕೆ 'ಹುಲ್ಲೆಲಿಂಗನ' ಅರೆ ಎಂದು ಇಂದಿಗೂ ಕರೆಯುವ ಗುಡ್ಡದ ನೆರೆ ಇದೆ. ಈ ವಿಶಾಲ ಬಂಡೆಗಲ್ಲಿನ ಉತ್ತರ ಪಾರ್ಶ್ವದಲ್ಲಿ ವೀರಪ್ರತಾಪ ಬುಕ್ಕರಾಯನ ಕಾಲದಿಂದಲೂ ಅವನ ಬಂಟ ನೆನಿಸಿದ್ದ ವಿಠಲನಾಥನು ಕ್ರಿ.ಶ.೧೩೮೮ರಲ್ಲಿ ಧರ್ಮಾರ್ಥವಾಗಿ ಕಟ್ಟಿಸಿದ ಕೆರೆ ಕಾಲುವೆ ಕುರಿತಾದ ಶಾಸನವು ದೀರ್ಘಸಾಲಿನ ಅಗಲವಾದ ಅಕ್ಷರಗಳಿಂದ ಕೂಡಿದ ಶಾಸನವು ಆಕರ್ಷಕವಾಗಿದೆ.[೧೫] ಸುಮಾರು ೧೫ ಅಡಿ ಉದ್ದಕ್ಕೆ ಪ್ರತಿಯೊಂದು ಸಾಲು ಚಾಚಿರುವ ಮೂರು ಸಾಲುಗಳ ಶಾಸನದ ಬರೆಹದ ರೀತಿಯೆ ಆ ಪರಿಸರದ ಗಾಂಭಿರ್ಯಕ್ಕೆ ತಕ್ಕಂತಿದೆ. ಒಟ್ಟಿನಲ್ಲಿ ತುರುವೇಕೆರೆಯ ತಾಮ್ರ ಶಾಸನವು ಮಾಹಿತಿ ನೀಡುವಲ್ಲಿ, ನಮ್ಮ ಈ ಚಿಂತನೆಗೆ ಗ್ರಾಸವಿಟ್ಟು, ಪ್ರಾಚೀನ ಮೆಲುಕುಗಲಿಗೆ ತೆರೆದುಕೊಂಡಿದೆ. ತುಮಕೂರು ಜಿಲ್ಲೆಯಲ್ಲಿ ಮಾಗಡಿ ತಾ.ಕಲ್ಯದ ಇತಿಹಾಸದ ಎಳೆಗಳನ್ನು ಬಿಡಿಸಲು ನೆರವಾಗಿದೆ.

ಕ್ರಿ.ಶ.೧೩೦೪ ರಿಂದ ಕ್ರಿ.ಶ.೧೩೧೬ ರ ನಡುವೆ ಕರ್ನಾಟಕದ ಕೆಲಭಾಗಗಳು ಕಾಕತೀಯ ಪ್ರತಾಪ ರುದ್ರನ ವಶಕ್ಕೆ ಬಂದು ಕ್ರಿ.ಶ.೧೩೨೩ರವರೆಗೂ ಆ ಭಾಗಗಳ ಆಳ್ವಿಕೆಯನ್ನು ನಿಯಂತ್ರಿಸುವಲ್ಲಿ ಅಲ್ಲಿನ ನಾಯಕರನ್ನು ಒಲಿಸಿಕೊಂಡು ಅಧಿಕಾರಿಗಳ ನ್ನಾಗಿ ಮಾಡಿಕೊಂಡು ಆಳಿರಬೇಕು. ಎಂ.ವಿ.ಕೃಷ್ಣರಾವ್ ಅವರು ಹೇಳುವಂತೆ ಕ್ರಿ.ಶ.೧೨ನೇ ಶತಮಾನದಲ್ಲಿ ಚೋಳರಿಂದ ವಶಪಡಿಸಿಕೊಂಡ ಮಾಗಡಿ ಪ್ರದೇಶವನ್ನು ಹೊಯ್ಸಳರು ಆಳುತ್ತಿದ್ದರು, ಅವರಿಂದ ಓರಂಗಲ್ಲಿನ ಪ್ರತಾಪರುದ್ರನು ಮಾಗಡಿ ಪ್ರದೇಶವನ್ನು ವಶಪಡಿಸಿಕೊಂಡು ಕೆಲಕಾಲ ಆಳಿದ[೧೬] ಕಾಕತೀಯರ ಈ ಆಳ್ವಿಕೆಯನ್ನು ತುಮಕೂರು ತಾ.ಮುಳಕುಂಟೆ ತಾಮ್ರಶಾಸನವು ಪರೋಕ್ಷವಾಗಿ ಬೆಂಬಲಿಸುವ ಮಾಹಿತಿಯನ್ನು ಹೊಂದಿದೆ.

ರೈಸರು ಶಾಸನದ ಕಾಲದ ಬಗ್ಗೆ ಅನುಮಾನ ಸೂಚಿಸಿ ಕ್ರಿ.ಶ.೧೨೩೪ರ ಮುಳುಕುಂಟೆ ಶಾಸನವೆಂದಿದ್ದಾರೆ. ಆದರೆ ಶಾಸನ[೧೭] ಪಠ್ಯದಲ್ಲಿ ಕಾಕತೀಯ ಮಹಾದೇವ ಮುಮ್ಮ ಡಾಂಬೆಯರ ಸುತನಾದ ಪ್ರತ್ತಾಪರುದ್ರರಾಜನಿದ್ದ. ಅವನು ಮಹಾರಾಷ್ಟ್ರ, ಕಳಿಂಗ, ಸೌರಾಷ್ಟ್ರ, ಗುರ್ಜರ, ಕರ್ನಾಟಕ, ದ್ರಾವಿಡ, ತೌಳವ ದೇಶಗಳನ್ನು ಮಣಿಸಿ ಅಂಕೆಗೆ ತೆಗೆದುಕೊಂಡು ತೀರ್ಥಯಾತ್ರೆ ಮಾಡುತ್ತ ಕಕುದ್ಗಿರಿಗೆ (ಶಿವಗಂಗೆ) ಬಂದು ಮಾಡಿದ ಮಣಿಹದ ವರ್ಣನೆ ಹೀಗಿದೆ.

ಕಾಕತೀಯ ಮಹಾರಾಜ ವಂಶ ದುಗ್ಧಾ ಚಂದ್ರಮಾಃ ॥ ೬ ॥

ಸ ಏಕದಾ ತೀರ್ಥಯಾತ್ರಾ ಮಟನ್ ಕ್ಷೇತ್ರ ಕಕುದ್ಗಿರಿಂ ।

ಅಗತ್ಯ ಸಬಲಃ ಶ್ರೀಮಾನ್ ಸಾಮಾತ್ಯಃ ಸ ಪುರೋಹಿತಃ ।

ತದ್ಗಿರೇ ಮೂರ್ಧ್ನಿ ಸುಭೂತಾಂ ಗಂಗಾಂ ಮಕರಗೇರ ವೌ ।

ದೃಷ್ಟ್ವಾ ಗಂಗಾಧರೇಶಾಯ ವಿಭುರ್ವಿಪ್ರೈರ್ವಿಧಾನತಃ ॥ ೧೯ ॥

ಕಾರಯಾ ಮಾಸ ಗಿರಿಜಾ ಕಲ್ಯಾಣ ಸುಮಹೋತ್ಸವಂ ।

ತದ್ಗಿರೇ... ದೃಷ್ಟ್ವಾರಾಮೇಶ್ವರಂತ ಲಿಂಗಂ ಹನುಮಂತಮನುತ್ತಮಂ ।....

....ಇತಿ ಶ್ರೀಮನಂ ಪುರ ಅಗ್ರಹಾರ ಪ್ರದಾತ ಗಜಪತಿ ವೀರಪ್ರತಾಪರುದ್ರ ಕೃತ ಶಾಶನ ಪ್ರತಿಲೇಖನ ನೈರಂತರ್ಯ ಶುಭಕರಮಸ್ತು. ಸೈನ್ಯ, ಸಚಿವ, ಪುರೋಹಿತರೊಡ ಗೂಡಿ ಬಂದು ಗಿರಿಯ ಮೇಲೆ ಮಕರ ಸಂಕ್ರಾತಿಯ ದಿನ ಗಂಗೋದ್ಭವವನ್ನು ಕಂಡು ಗಂಗಾಧರೇಶನಿಗೆ ಉತ್ಸವ ಮಾಡಿಸಿದ; 'ಗಿರಿಜಾಕಲ್ಯಾಣ' ಮಹೋತ್ಸವವನ್ನು ಮಾಡಿಸಿದ ; ಗಿರಿಯಲ್ಲಿ ರಾಮೇಶ್ವರ ಹಾಗೂ ಹನುಮರನ್ನು ಪೂಜಿಸಿದ ಅನಂತಪುರ ಎಂಬ ಗ್ರಾಮವನ್ನು ಗಿರಿಯಿಂದ ಮೂರು ಕ್ರೋಶ ದೂರದಲ್ಲಿ ನಿರ್ಮಿಸಿ ಕೆರೆ ಕಟ್ಟಿಸಿ ತಾಮ್ರ ಶಾಸನ ಹಾಕಿ ಕೊಟ್ಟದ್ದನ್ನು ಪ್ರತಿಲೇಖನ ಮಾಡಿದೆ ಎಂದು ಶಾಸನ ಹೇಳಿದೆ.

ಶಾಸನದಲ್ಲಿ ಉಕ್ತವಾದ ಗಜಪತಿ ಪ್ರತಾಪರುದ್ರನು ಒರಿಸ್ಸವನ್ನು ಆಳಿದ ಪ್ರತಾಪ ರುದ್ರ ಗಜಪತಿಯಲ್ಲ, (ಕ್ರಿ.ಶ.೧೪೬೭-೧೫೧೬) ಅಥವಾ ೧ನೇ ಪ್ರತಾಪ ರುದ್ರನೂ ಅಲ್ಲ. ಬದಲು ಕ್ರಿ.ಶ.೧೨೬೧-೯೫ರ ರುದ್ರದೇವಿಯ ಮಗಳು ಮುಮ್ಮ ಡಾಂಬ, ಕಾಕತೀಯ ಮಹಾದೇವ ದಂಪತಿಗಳ (ಶಾಸನೋಕ್ತ) ಮಗನಾದ ೨ನೇ ಪ್ರತಾಪರುದ್ರ. ಹೀಗಾಗಿ ಶಾಸನದ ಕಾಲವನ್ನು (ಕೆಲವು ಉತ್ಪ್ರೇಕ್ಷಿತ ಸಂಗತಿಗಳಿದ್ದರೂ) ಕ್ರಿ.ಶ. ೧೨೯೫-೧೩೨೩ ನಡುವಣ ಅವಧಿಗೇ ಅನ್ವಯಿಸಿಕೊಳ್ಳ ಬೇಕಾಗುತ್ತದೆ. ಈ ಹಿನ್ನಲೆಯಲ್ಲಿಯೇ, ಪಾಲ್ಕುರಿಕೆಸೋಮನಾಥನ ಕಾಲ ಕ್ರಿ.ಶ.೧೩೦೫ ಎಂದು ಹೊಸ ಶೋಧವಾಗಿರುವಲ್ಲಿ[೮] ಕಾಕತೀಯ ಪ್ರತಾಪರುದ್ರನ ಇಲ್ಲಿನ ಆಳ್ವಿಕೆಯ ಸಮಯ ದಲ್ಲಿಯೇ ಕಲ್ಯಕ್ಕೆ ೬೪ ಶೀಲದ ಚೆನ್ನಮ್ಮನ ದರ್ಶನಕ್ಕೆ ಬಂದು, ಅಲ್ಲಿಯೆ ನಿಂತು ತನ್ನ ಧಾರ್ಮಿಕ ಚಟುವಟಿಕೆ ಗಳಲ್ಲಿ ತೊಡಗಿದ ಸಂಗತಿಗೂ ಪೋಷಣೆ ದೊರೆಯುತ್ತದೆ. ಹೀಗೆ ಈ ತುಮಕೂರು ತಾ. ಮುಳುಕುಂಟೆ ತಾಮ್ರ ಶಾಸನದ ನಕಲುಕೂಡ ಚಾರಿತ್ರಿಕ, ಸಾಂಸ್ಕೃತಿಕ ವಿಷಯಗಳನ್ನ ಲ್ಲದೆ, ರಾಜಕೀಯ ಸ್ಥಿತ್ಯಂತರಗಳನ್ನು ತಿಳಿಯುವಲ್ಲಿ ನೆರವಾಗುತ್ತದೆ. ಇಲ್ಲಿ ಗಮನಕ್ಕೆ ಬರುವ ಮುಖ್ಯ ಅಂಶವೆಂದರೆ, ವಿಜಯನಗರ ಸಂಸ್ಥಾಪಕರಾದ ಹಕ್ಕ ಬುಕ್ಕರು, ಹಾಗೂ ಭಟ್ರಾಜು (ಗೆಜ್ಜಗಾರಗುಪ್ಪೆ) ಗಳ ಸಂಪರ್ಕವು ಪೂರ್ವಭಾವಿಯಾಗಿ ಕಾಕತೀಯ ಪ್ರತಾಪರುದ್ರನಿಗೆ ಮಾಗಡಿಯ ಆಳ್ವಿಕೆಯ ಕಾಲದಲ್ಲಿ ಒದಗಲಾಗಿ ಓರುಂಗಲ್ಲಿಗೆ ಹಕ್ಕ ಬುಕ್ಕರು ಶ್ರೀಭಂಡಾರಿಗಳಾಗಿ, ಭಟ್ರಾಜುಗಳು ಪರಾಕುದಾರರಾಗಿ ಹೋಗಲು ಅನುಕೂಲವಾದ ಸನ್ನಿವೇಶವಾಯಿತು ಎಂಬ ಈ ಹಿಂದೆ ನಡೆದಿರುವ ಪ್ರತಿಪಾದನೆ,

ಮುಳುಕೋಟೆ ಶಾಸನವು ಕಾಕತೀಯ ಪ್ರತಾಪರುದ್ರನ ಕುರಿತು ಮಾಡಿರುವ ಪ್ರಸ್ತಾಪವು ಪೂರಕಾಂಶಗಳನ್ನು ಒದಗಿಸಿದೆ ಎಂಬುದಾಗಿದೆ.

ಹಾಗಲವಾಡಿ ಗುಬ್ಬಿ ತಾಲೂಕಿನ ಹೋಬಳಿಯಾಗಿ, ಚಿಕ್ಕನಾಯಕನಹಳ್ಳಿ ಪಾಳೇಗಾರರಿಗೆ ರಾಜಧಾನಿಯಾಗಿ ಪ್ರಸಿದ್ಧಿಕೊಟ್ಟ ನೆಲೆ. ಈ ಪಾಳೆಯಗಾರರು ಕ್ರಿ.ಶ.೧೪೭೮ರಿಂದ ೧೭೬೫ರವರೆಗೆ ಹಾಗಲವಾಡಿಯಿಂದ ಆಳಿದವರು. ಹೊಯ್ಸಳರ ಕಾಲದಲ್ಲಿಯೆ ತುಮ್ಮಳ ಸಂಸ್ಥಾನದ ಪಾಳೆಯಗಾರರೆನಿಸಿದ್ದವರು. ಕ್ರಿ.ಶ.೧೪೭೮ರಲ್ಲಿ ಎರಿಮಾದನಾಯಕನು ಸ್ಥಾಪಿಸಿದ ಈ ಪಾಳೆಯಪಟ್ಟನ್ನು ಅವನ ಹಿರಿಯಮಗ ಸಾಲಿನಾಯಕ (ಕ್ರಿ.ಶ.೧೫೦೮-೪೪) ಭದ್ರಗೊಳಿಸಿದ ವಿಜಯನಗರದರಸರಿಗೆ ಯುದ್ಧದಲ್ಲಿ ನೆರವಾಗಿ ಮಾನಿತನಾದವ. ಈ ಸಾಲಿ ನಾಯಕನ ಮಗ ಕ್ರಿ.ಶ. ೧೫೪೪ರಿಂದ ೧೫೭೮ರವರೆಗೆ ಆಳಿ ರಾಜ್ಯವನ್ನು ವಿಸ್ತರಿಸಿದ. ರಾಜಧಾನಿಯನ್ನು ಚಿಕ್ಕನಾಯಕನಹಳ್ಳಿಗೆ ವರ್ಗಾಯಿಸಿದ. ಇವನು ವೀರಶೈವ ಧರ್ಮವನ್ನು ಅವಲಂಬಿಸಿದ. ಈ ಹಿನ್ನೆಲೆಯಲ್ಲಿ ಮುಂದಿನ ಶಾಸನಗಳ ವಿವೇಚನೆ. ಚಿಕ್ಕನಾಯಕನ ಹಳ್ಳಿ ಹೋಬಳಿ ಜೋಗಿಹಳ್ಳಿಯ ದಳವಾಯಿ ಮಠದ ಶಾಸನವು[೧೯] ಕ್ರಿ.ಶ. ೧೬೨೩ರ ಮುದಿಯಪ್ಪನಾಯಕನು ಹೊಯ್ಸಳ ಸೀಮೆಯ ಚಿಕ್ಕನಾಯಕನಹಳ್ಳಿಯನ್ನು ಆಳುತ್ತಿದ್ದಾಗ, ಅವನ ಬಲ ತೋಳಿನಂತಿದ್ದವ, ವೀರ ಮಾಹೇಶ್ವರರಾಧಕನಾಗಿದ್ದವ ಶೀಲವಂತ ದಳವಾಯಿ ಪರಮಪ್ಪ. ಅವನು ಸಜ್ಜನಶುದ್ಧ ಶಿವಾಚಾರ ಸಂಪನ್ನರು ದೇವಾಪ್ರಥ್ವೀ ಮಹಾಮಹತ್ತಿನೊಳಗಾದವರು ಆದ ನಂದೀಶ್ವರ ಸ್ವಾಮಿಗಳಿಗೆ, ಮಠ, ತೋಟ, ಕೆರೆ ನಿರ್ಮಿಸಿ ಕೊಟ್ಟ. ಈ ಮಠವು ಸಮಸ್ತ ಪದಾರ್ಥವನ್ನು ಶಿವಾರ್ಪಣ ಮಾಡುವಂಥದು ಸತ್ಪುರುಷರಾದ ಮಾಹೇಶ್ವರರು ಮಾತ್ರ ಇರುವಂಥವದು. ಇದನ್ನು ಕೆಡಿಸುವಂಥವರು ಲಂಡುಪುಂಡರು ಇದ್ದರೆ ಅಂಥವರನ್ನು ವೀರಮಾಹೇಶ್ವರರು, ವೊಡೆಯರು ಹಾಗು ಭಕ್ತರು ಅವರನ್ನು ಓಡಿಸಿ ಸತ್ಪುರುಷರನ್ನು ಇರಿಸುವುದು ಎಂದೆಲ್ಲ ಶಾಸನವು ವಿವರಿಸಿದೆ. ಈ ಶಾಸನವು ಒಂದು ವೀರಶೈವ ಮಠವಿರಬೇಕಾದ ಪರಿಸರ ಆ ಮಠದಲ್ಲಿರಬೇಕಾದ ಜಂಗಮವರ್ಗ ಗುರುವರ್ಗದ ಕುರಿತೆಲ್ಲ ಹೇಳಿದೆ. ವೀರಶೈವದ ಪಂಚಾಚಾರಗಳಾದ, ಸದಾಚಾರ, ಶಿವಾಚಾರ, ಭೃತ್ಯಾಚಾರ, ಗಣಾಚಾರದ ಸಂಗತಿಗಳನ್ನು ಅನ್ವಯಾರ್ಥವಾಗಿ ಇಲ್ಲಿ ಮಂಡಿಸಲಾಗಿದೆ. ಮಾಹೇಶ್ವರರು ತಮ್ಮ ಆಚಾರ ವಿಚಾರಕ್ಕೆ ಧಕ್ಕೆ ಬಂದಾಗ, ವೀರಮಹೇಶ್ವರರಾಗಿ ಗಣಾಚಾರ ಪಾಲಿಸುವ ಸಂದರ್ಭವನ್ನು ತಿಳಿಸಿದೆ. ಇದರಲ್ಲಿ ಭಕ್ತರು ಗುರುಗಳೂ ಸಹ ಪಾಲುದಾರರು ಎಂದು ಸೂಚಿಸಲಾಗಿದೆ. ಹಾಗಲವಾಡಿ ನಾಯಕರು ಹಾಗು ಅಧಿಕಾರಿ ವರ್ಗದ ವೀರಶೈವ ನಿಷ್ಠೆಯನ್ನು ಈ ಶಾಸನವು ತೋರಿಸಿದೆ. ಗಮನಾರ್ಹವಾಗಿ 'ಮಹೇಶ್ವರರು' ಮಠದೊಳಗಣ ವೀರಶೈವ ನಿಷ್ಠರು ಎಂದು ಸೂಚಿಸಲಾಗಿದೆ.

ಕ್ರಿ.ಶ.೧೫೨೫ರ ಕೃಷ್ಣದೇವರಾಯನ ಕಾಲದ ಬೂದಿಹಾಳು ಗ್ರಾಮದ ತಾಮ್ರ ಶಾಸನದಲ್ಲಿ[೨೦] ಕಂಚಿ, ಶ್ರೀಶೈಲ, ಶೋಣಾಚಲ, ಕನಕಸಭಾ ವೆಂಕಟಾದ್ರಿ ಹಾಗೂ ಇತರ ದೇಗುಲಗಳ ಪವಿತ್ರ ನೆಲೆಗಳ ಕನಕ ತುಲಪುರುಷ, ದಾನವನ್ನು ಆ ದೊರೆ ನೀಡಿದ

ಬಗ್ಗೆ ಹೇಳಿದೆ. ಈ ದಾನವು ಷೋಡಷ ಮಹಾದಾನಗಳಲ್ಲಿ ಒಂದಾಗಿದೆ. ಅಂದರೆ ತನ್ನ ಶರೀರದ ತೂಕದಷ್ಟು ಚಿನ್ನವನ್ನು ದಾನ ಮಾಡುವ ವ್ರತವೂ ಇದಾಗಿದೆ. ಕ್ರಿ.ಶ.೧೧೪೭ರ ಕಲ್ಯಾಣಿ ಚಾಲುಕ್ಯರ ಜಗದೇಕಮಲ್ಲನೂ ಇಂತಹ ದಾನಗಳನ್ನು ನೀಡಿದ್ದುದು ಶಾಸನೋಕ್ತ. ಆ ಪರಂಪರೆ ವಿಜಯನಗರದರಸರಲ್ಲೂ ಮುಂದುವರಿದುದಕ್ಕೆ ಬೂದಿಹಾಳು ತಾಮ್ರ ಶಾಸನವೂ ಒಂದ ಸಾಕ್ಷಿ ಆಗಿದೆ. ಈ ಸಂಸ್ಕೃತ ಶಾಸನದಲ್ಲಿ ದಾನವಾದ ಗ್ರಾಮದ ಗಡಿ ವಿವರಗಳನ್ನು ಮಾತ್ರ ಎಂದಿನಂತೆ ಕನ್ನಡದಲ್ಲಿ ಹೇಳುವ ಪದ್ಧತಿಯ ಜೊತೆಗೆ, ವಿಜಯನಗರದ ಆರಂಭದ ಸಂಗಮರಲ್ಲಿ ಪ್ರಚಲಿತವಿದ್ದ ಕನ್ನಡ ಶಾಸನಗಳಲ್ಲಿ ಕಾಣಿಸಿಕೊಳ್ಳುವ ಅರಸರ ಬಿರುದು 'ಭಾಷೆಗೆ ತಪ್ಪುವರಾಯರ ಗಂಡ' 'ಮೂರು ರಾಯರ ಗಂಡ' ಎಂಬುವನ್ನು ಕನ್ನಡದಲ್ಲಿಯೇ ಬಳಸಿ ಪಾರಿಭಾಷಿಕ ಸ್ವರೂಪವನ್ನು, ಬಿರುದಿಗೆ ತಂದಿರುವುದು ಗಮನಾರ್ಹವಾಗಿದೆ.

ಕ್ರಿ.ಶ. ೧೫೩೫ರ ಕಂದಿಕೆರೆ ಶಾಸನದಲ್ಲಿ[೨೧], ಅಚ್ಯುತದೇವರಾಯನ ಅರಮನೆ ಕೋಶಾಧಿಕಾರಿ ಬಯಕಾರ ರಾಮಪ್ಪನು ಕಂದಿಕೆರೆ ಸೀಮೆಯಲ್ಲಿ ಪಾಲಿಸಿದ ಮದುವೆಯ ಸುಂಕ, ಅದರ ಜೊತೆಗೆ ಗೌಡ, ತಳವಾರ, ಅಕ್ಕಸಾಲೆ, ಕೆರೆ (ಹೂಳೆತ್ತುವ,) ಎತ್ತಿನ ಬಂಡಿ ಸಂಬಂಧದ ಆದಾಯ ಸುಂಕವನ್ನು ಶಿವರಾತ್ರಿಯಂದು ೧೮ ಫಣಕಟ್ಟುಗಳ ಪರವಾಗಿ ತುಂಗಭದ್ರಾ ತೀರದಲ್ಲಿ ವಿರೂಪಾಕ್ಷಸನ್ನಿಧಿಯಲ್ಲಿ, ಅಚ್ಯುತದೇವರಾಯನ ಯಶೋ ಭಿವೃದ್ಧಿಗಾಗಿ ದಾನಕೊಟ್ಟ ಸಂಗತಿ ಇದೆ. ಇಲ್ಲಿ ಸುಂಕದ ಬಗೆಗಳು ಹಾಗೂ ವಿನಿಯೋಗದ ಒಂದು ಬಗೆಯನ್ನು ಕುರಿತು ಮಾಹಿತಿಯೂ ಇದೆ. ಆ ಕಾಲದ ಆರ್ಥಿಕ ವಹಿವಾಟು, ತೆರಿಗೆ ವ್ಯವಸ್ಥೆ, ರಾಜನ ಕ್ಷೇಮಕ್ಕೆ ಅಧಿಕಾರಿಗಳ ಕಾಳಜಿ (ಇದು ಆಡಳಿತಾತ್ಮಕವಾಗಿ ರಾಜಕೃಪೆಗಾಗಿ ತೋರುವ ಚರ್ಯೆಯೂ ಆಗಿರಬಹುದು), ದೇವರಿಗೆ ಸಲ್ಲಿಸುವ ಪಾಲಿನ ಸ್ವರೂಪದ ಚಿತ್ರವೂ ಇಲ್ಲಿದೆ, ಒಂದು ಸಾಂಸ್ಕೃತಿಕ ಜೀವನ ಕ್ರಮದ ಚಿತ್ರಣವೂ ಇಲ್ಲಿದೆ.

ಕ್ರಿ.ಶ.೧೫೭೩ರ ಬೂದಿಹಾಳು ಶಾಸನವು[೨೨] ಶ್ರೀರಂಗದೇವರಾಯನ ಪೆನುಗೊಂಡ ಆಳ್ವಿಕೆಯನ್ನು ಉಕ್ತಮಾಡಿ ಬೂದಿಹಾಳು ಸೀಮೆಯ ಪಾಂಚಾಳದಿಂದ ಆಯಿದು ಕೈವಾಡದವರಿಗೆ ಅವರು (ಅಕ್ಕಸಾಲೆ, ಕಮ್ಮಾರ, ಬಡಿಗ ಮುಂತಾದವರು ಕೊಡವ ಕುಟ್ಟುವ ಬಡಿಗಲ್ಲು ಸುಂಕ) ತೆರುತ್ತಿದ್ದ ಅಡೆವಣವನ್ನು ಮಹಾಮಂಡಲೇಶ್ವರ ಶ್ರೀಪತಿರಾಜ ವಲ್ಲಭರಾಜಯ್ಯ ದೇವನ ಅಮರನಾಯಕತನಕ್ಕೆ ಸಲ್ಲುವ ಬೂದಿಹಾಳು ಸೀಮೆಯಿಂದ ಪಡೆಯುತ್ತಿದ್ದುದಾಗಿದ್ದು ಅವನ ತಂದೆ ರಂಗರಾಜಯ್ಯನವರಿಗೆ ಪುಣ್ಯವಾಗಲೆಂದು ಬಿಟ್ಟುಕೊಟ್ಟ ಸಂಗತಿಯನ್ನು ಹೇಳಿದೆ. ಇದೊಂದು ರೀತಿ ಧರ್ಮೋ-ಸಾಂಸ್ಕೃತಿಕ ಚರ್ಯೆಯಾಗಿ ಕಾಣುತ್ತದೆ. ನಾಡಿನ ಕರಕುಶಲ ಕೆಲಸಗಾರರು, ಕಸಬು ಕುಶಲ ಕೆಲಸಗಾರರಿಗೆ, ಸಾಮಾನ್ಯವರ್ಗದವರಿಗೆ ಪುಣ್ಯಸಾಧನೆಯ ಹೆಸರಿನಲ್ಲಿ ನೀಡುತ್ತಿದ್ದ ವೃತ್ತಿ ಉತ್ತೇಜನವಾಗಿಯೂ ಕಾಣುತ್ತದೆ. ಅಮರ ನಾಯಕವರ್ಗದವರು ಮಹಾಮಂಡಲೇಶ್ವರರಾಗಿದ್ದ ಉದಾಹರಣೆಯೂ ಕಾಣುತ್ತದೆ.

ದೊಡ್ಡತೇಕಲವಟ್ಟೆಯ ಕ್ರಿ.ಶ.೧೩೮೪ರ ವೀರಗಲ್ ಶಾಸನವೊಂದು[೨೩] ಇಮ್ಮಡಿ ಹರಿಹರನ ಮಗವೀರ ಬುಕ್ಕರಾಯನ ಒರುಗಲ್ಲು (ಓರುಂಗಲ್ಲು-ಆಂಧ್ರ) ಪ್ರದೇಶಕ್ಕೆ ದಂಡನ್ನು ತೆಗೆದುಕೊಂಡು ಹೋದ ಸಮಯ. ಆಗ ಕೊತ್ತಕೊಂಡಕ್ಕೆ ತುರುಕರು ಬಂದು ಧಾಳಿ ಮಾಡುತ್ತಿದ್ದರು. ವೀರ ಹರಿಹರರಾಯನ ಮನೆಯ (ಅರಮನೆ) ನಾಯಕಾಚಾರ್ಯನಾಗಿದ್ದ ಕಂಪಣನ ಮೇಲೆ ತುರುಕಗುದುರೆ ಯೇಟಿ ಬರಲು, ಕಾವೇರಿ ತೀರದ ವೀರಕ್ಷೇತ್ರವಾದ ತಲಕಾಡಿನವನೂ, ತುರುಕದಳಕ್ಕೆ ಭಯಂಕರನೂ ಆದ ಸಾಳುವೆಯ ರಾಮದೇವನು ವೀರಕಾಳಗಕೊಟ್ಟು, ಜಯತಂದು, ವೀರಸ್ವರ್ಗವೇರಿದ ವಿಷಯವನ್ನು ಹೇಳುತ್ತದೆ. ಇದರಿಂದ ವಿಜಯನಗರದ ಪ್ರಾಬಲ್ಯಕಾಲದಲ್ಲಿಯೂ ತುರುಕರ ಹಾವಳಿ ಕಾಣಬರುತ್ತಿದ್ದು, ಅದನ್ನು ಹತ್ತಿಕ್ಕಲು ಇದ್ದ ವೀರರ ಪಡೆಯ ಚಿತ್ರಸಿಗುತ್ತದೆ. ಕಂಪಣನ ಶೌರ್‍ಯದ ವ್ಯಕ್ತಿತ್ವವನ್ನು ವರ್ಣಿಸುವಲ್ಲಿ, ವೇಶ್ಯೆಯರ ಬಳುಕುವ ನಡು, ಮೊಗದ ಸೌಂದರ್‍ಯ, ವೈಯಾರದ ಕಣ್ನೋಟಗಳಿಗೆ ವಿಚಲಿತರಾಗಿ ಮನಗುಂದುತ್ತಿದ್ದ ನಾಯಕರಿಗೆ ಮಾರರಾಹುತನಂತಿದ್ದ ಎಂದು ಕಾವ್ಯಮಯವಾಗಿ ಈ ವೀರಗಲ್ ಶಾಸನವು ವರ್ಣಿಸಿದೆ. ಹೀಗೆಯೇ ಸಾಳುವೆಯ ರಾಮದೇವನನ್ನು ವರ್ಣಿಸಿದೆ. ರಾಜಕೀಯ ಆಡಳಿತದಲ್ಲಿ ಮಹಾನಾಯಕಾಚಾರ್‍ಯ ಎಂಬ ಅಮರನಾಯಕರ ೨ನೇ ವರ್ಗವು ಇದ್ದಂತೆ, ಅರಮನೆಯ ಒಳಾಡಳಿತ ನೋಡಿಕೊಳ್ಳುವ ಗೃಹಸಚಿವನಂತೆ, ಅರಮನೆ ಸಚಿವನಾಗಿ 'ಮನೆಯ' ನಾಯಣಾಚಾರ್‍ಯನೂ ಇರುತ್ತಿದ್ದ ಸೂಚನೆಯನ್ನು ಈ ಶಾಸನ ನೀಡುತ್ತದೆ.

ಕ್ರಿ.ಶ.೧೫೪೯ರ ತಿರುಮಲಾಪುರದ ತಾಮ್ರಶಾಸನವು (ಚಿ.ನಾ.೩೯) ವೆಂಕಟಾದ್ರಿಯ ದಾನಶಾಸನವನ್ನು ಸಂಸ್ಕೃತದಲ್ಲಿ ಬರೆದ 'ಕೃಷ್ಣಕವಿಕಾಮ ಕೋಟೆ' ಎಂಬ ಈ ಪ್ರದೇಶದ ಕವಿಯನ್ನು ಪರಿಚಯಿಸುತ್ತದೆ.

ಕ್ರಿ.ಶ.೧೫೨೮ರ ಹುಳಿಯಾರು ಗ್ರಾಮದ ಮಲ್ಲೇಶ್ವರ ದೇಗುಲ ಶಾಸನವು (ಚಿ.ನಾ.೩೭) ಕೃಷ್ಣದೇವರಾಯನ 'ಪ್ರಿಯಕುಮಾರ', ಸಿಂಗಪನಾಯಕನು ಹುಳಿಯೆಟಿ ಮಲ್ಲಿಕಾರ್ಜುನದೇವರು, ವಿಗ್ನೇಶ್ವರ ದೇವರು, ಭೀಮೇಶ್ವರ ದೇವರಿಗೆ, ಸೂರ್ಯೋಪರಾಗ ಪುಣ್ಯಕಾಲದಲ್ಲಿ (ಗ್ರಹಣ) ಹಿಂದೆ ಕೊಟ್ಟಿದ್ದ ಗದ್ದೆಯ ಎಲ್ಲಾ ಭೂಸುಂಕಗಳಾದ ಸಿದ್ಧಾಯ ಕಾಣಿಕೆ, ಬಿರಾಡ ಬೀಜವರಿ ಇತ್ಯಾದಿಗಳನ್ನು ದೇವಸೇವೆ ಗಾಗಿ ಬಿಟ್ಟ ವಿಷಯವನ್ನು ಹೇಳಿದೆ. ಹಾಗೆಯೇ ಈ ದೇವತೆಗಳ ಪೂಜಾರಿಗಳಾದ ತಮ್ಮಡಿಗಳಿಗಿರುವ ದಾನ ತಿಂದರೆ ಕತ್ತೆಯ ಉಚ್ಚಿಷ್ಟ ತಿಂದಂತೆ ಎಂಬ ಶಾಪಾಶಯವನ್ನು, ದಾನ ಕೆಡಿಸಿದವರಿಗೆ ಅಸಹ್ಯಹುಟ್ಟಲು ಹೇಳಿದೆ. ಈ ಶಾಸನದಿಂದ ಮನೆಮಗ ನಿರಬಹುದಾದ ಸಿಂಗಪನಾಯಕ, ಹುಳಿಯಾರು ಗ್ರಾಮದ ಪ್ರಾಚೀನ ಸ್ಥಳನಾಮ ಹಾಗೂ ಈ ಪ್ರದೇಶದ ತಮ್ಮಡಿಗಳ ಅಸ್ತಿತ್ವ ಹಾಗೂ ಸ್ಥಿತಿಗತಿಯ ಚಿತ್ರವೂ ದೊರಕುತ್ತದೆ.

ಕ್ರಿ.ಶ.೧೫೭೯ರ ಹೆಗ್ಗಡೆ ಗ್ರಾಮದ ಶಾಸನವು ಚಿ.ನಾ,೨೨, ಮಹಾಮಂಡಳೇಶ್ವರ ಶ್ರೀಪತಿರಾಜನ ಮಗ ರಾಜ್ಯಯ್ಯದೇವ ಮಹಾಅರಸುವಿನ ಮಗನಾದ ವಲ್ಲಭದೇವ

ಮಗರನಾಡ ಅರಸುವು ಮಗನಾದ ಹೊಯ್ಸಳ ರಾಜ್ಯಕ್ಕೆ ಸಲುವ ಬೂದಿಹಾಳು ಸೀಮೆಯಲ್ಲಿನ ಜಿನ ಬಸದಿಗೆ, ಹೆಗ್ಗೆಟ್ಟೆಯ ಬಸ್ತಿಗಿದ್ದ ಮಾನ್ಯದ ಜೀರ್ಣೋದ್ಧಾರ ಕ್ರಮವಾಗಿ ಭೂದಾನ ನೀಡಿದ ವಿಷಯ ಹೇಳುತ್ತದೆ. ಈ ಬಗ್ಗೆ ಗುತ್ತಿಗೆ ಹರಿಹರ ಸೂರಯ್ಯನ ಮಗ ಚಿಂನವರದ ಗೋವಿಂದಸೆಟ್ಟಿ, ಹೆಗ್ಗಟೊ ಬಸ್ತಿಯ ದೇವರ ಮಾನ್ಯವನ್ನು ಪಾಲಿಸಬೇಕೆಂದು ಬಿನ್ನಹ ಮಾಡಿಕೊಂಡಿದ್ದ. ಆ ಬಿನ್ನಹವನ್ನು ತಮಗೂ ಅನೇಕ ಧರ್ಮ್ಮಾಭಿವೃದ್ಧಿಯಾಗ ಬೇಕೆಂದು ೧೫ ಕೊಳಗ ಗದ್ದೆಯನ್ನು ದೇವರಾಯ ಮಾನ್ಯವಾಗಿ ನೀರ ಸರದಿಯಲ್ಲಿ (annual rotation of water at the time of crop) ಒದಗುವಂತೆ ಭೂದಾನವನ್ನು ವಲ್ಲಭದೇವ ಮಹಾ ಅರಸು ನೀಡಿದ ಬಗ್ಗೆ ಹೇಳಲಾಗಿದೆ. ಈ ಅಂಶಗಳಿಂದ ಆ ಕಾಲದ ಜಿನಧರ್ಮದಸ್ಥಿತಿಯನ್ನು ತೋರಿದರೂ, ಜಿನಧರ್ಮಿಯಲ್ಲದ ಅಮರನಾಯಕನೊಬ್ಬ, ಧರ್ಮಸಮನ್ವಯವಾಗಿ ತೋರಿದ ನಡೆ ಇಲ್ಲಿದೆ. ಅನ್ಯಧರ್ಮಿ ಸಾಮಾನ್ಯರಿಗೂ ರಾಜಧರ್ಮ ಪಾಲಿಸಿದ ಸಂಗತಿ ಕಾಣುತ್ತದೆ. ಜಿನನೇ ದೈವ ಎಂಬ ಅಬ್ಬಲೂರು ಏಕಾಂತ ರಾಮಯ್ಯನ ಶಾಸನದ ಹಠಮಾರಿ ಜೈನ ತಂಡದವರಂತಲ್ಲದೆ ಈ ವಲ್ಲಭದೇವ ಜಿನನೂ ದೈವ ಎಂಬ ವೈಶಾಲ್ಯ ಸ್ವೀಕರಣ ತೋರಿದವನಂತೆ ಕಾಣುತ್ತದೆ. ವಿಜಯನಗರ ಸಾಂಸ್ಕೃತಿಕ ಪರಂಪರೆಯ ಚಾಲ್ತಿಯೂ ಕಾಣಬರುತ್ತದೆ. ಅಮರನಾಯಕರು ಇದನ್ನು ಪಾಲಿಸುತ್ತಿದ್ದ ಬಗ್ಗೆಯೂ ಕಾಣುತ್ತದೆ. ಬೇಸಾಯದಲ್ಲಿ ನೀರು ಹಂಚಾಣೆಯ ಬಗೆ, ನೀರೂಒದಗಿಸುವ ಸಮಯಪಾಲನೆಯ ಬಗ್ಗೆಯೂ ತಿಳಿಯುತ್ತದೆ. ೧೬ನೇ ಶತಮಾನದಲ್ಲಿಯೂ ವಿಜಯನಗರದ ಅಮರನಾಯಕರು ಹೊಯ್ಸಳ ರಾಜ್ಯವನ್ನು ನೆನೆಸುತ್ತಿದ್ದ ದ್ಯೋತಕವಾಗಿ ಶಾಸನದಸಾಲು ಇರುವುದು ಗಮನಾರ್ಹ.

ತುಮಕೂರು ತಾ. ಹರಳೂರು ಒಂದು ಪ್ರಸಿದ್ಧ ವೀರಭದ್ರ ಕ್ಷೇತ್ರ. ಇಲ್ಲಿನ ವೀರಭದ್ರ ಜಾನಪದ ವೈಭವದಾಚರಣೆಗಳನ್ನು ಹೊಂದಿರುವುದಲ್ಲದೆ ಶಾಸನ ಸಂಬಂಧಗಳೂ ಕೂಡಿ ಚಾರಿತ್ರಿಕ ಶಿಲ್ಪವಾಗಿ ಕಾಣಬರುತ್ತಾನೆ. ಕ್ರಿ.ಸ.೧೫೩೫ರ ಪಾಲಸಂದ್ರದ ಶಾಸನವು ೨ಳ ಅಚ್ಯುತದೇವರಾಯನ ಕಾಲದ್ದು. ವೀರಭದ್ರ ಸಂಬಂಧೀ ದಾನವೊಂದು ಮುಂದಿನಂತೆ ಶಾಸನೋಕ್ತವಾಗಿದೆ.

ಸ್ವಸ್ತೀ ಶ್ರಿ ಜಯಭ್ಯುದಯ ಶಾಲಿವಾಹನ ಶಕ ವರ್ಷಗಳು

೧೪೫೭ನೆಯ ಮನ್ಮ ! ಥ ಸಂವತ್ಸರದ ಆಶ್ವಯುಜ ಶುದ್ಧ ೧೫ ಲು

ಶ್ರೀಮತು ಅಚ್ಯುತರಾಯ ಮಹಾರಾಯರು ...ಗೂಳೂರು ಶ್ರೀಮನುಧರ್ಮ

ಶ್ರೀ ಮುಕುಂದನ ಹಳಿಯ ವೀರಭದ್ರದೇವರ । ಮಕ್ಕಳು... ವೀರಭದ್ರದೇವರು ಪ್ರೀತಿಯಾಗಿ । ... ನೆರೆದು ಕೊಟ್ಟೆವಾಗಿ ಯಿ ಧರ್ಮವನ್ನು

ಪಾಲಸಂದ್ರವು, ಹರಳೂರಿಗೆ ಬಹಳ ಹತ್ತಿರವಿರುವ ಗ್ರಾಮ. ವೀರಭದ್ರ (ಹರ ಳೂರು) ಪ್ರಭಾವ ಇರುವ ನೆಲೆ, ಆ ಗ್ರಾಮೀಣರು ಈ ವೀರಭದ್ರನಿಗೆ ಪರಂಪರೆಯಿಂದ

ನಡೆದುಕೊಂಡು ಬಂದವರು. ಪಾಲ ಸಂದ್ರ ಅಥವಾ ಪಾಲಸಮುದ್ರವು ಹಾಲಿನ ಕರಾವಿಗೆ ಒಂದು ಕಾಲಕ್ಕೆ ಪ್ರಸಿದ್ಧವಿದ್ದ ಗ್ರಾಮ. ಈ ಹೆಸರು ಬಹುತೇಕ ಗೋವಿನ ಸಂಬಂದಿ ಹೆಸರಾದ ಮುಕುಂದನಹಳ್ಳಿ ಎಂಬ ಪ್ರತಿನಾಮದೇಯ ಹೊಂದಿದ್ದಂಥಾಗಿದ್ದು ಶಾಸನದ ರೂಢಿಗೆ ಬಂದಿದ್ದಿರಬಹುದು. ಆದರೆ ಗ್ರಾಮೀಣರು, ಗ್ರಾಮದ ಪಾರಂಪರಿಕ ಹಳೆಯ ಸ್ಥಳ ನಾಮವನ್ನೇ ಉಳಿಸಿಕೊಂಡಂತೆ ಕಾಣುತ್ತದೆ. (ಇಂಥ ಬದಲಾವಣೆಗೆ ಒಪ್ಪದ ಗ್ರಾಮೀಣರು, ಬೆಂಗಳೂರು ಜಿಲ್ಲೆ ಹೊಸಕೋಟೆ ಹಾದಿಯ ಮುಗುಬಾಳಕ್ಕೆ ವೀರಭದ್ರಪುರ, ಕೊಡಗು ಜಿಲ್ಲೆ ಕುಮಾರನಹಳ್ಳಿಗೆ ಭೀಮಾಪುರ ಎಂದು ಹೆಸರಿಟ್ಟರೂ ಹಳೆ ಹೆಸರನ್ನೇ ಶಾಸನೋಕ್ತ ಹೊಸಹೆಸರು ಬಿಟ್ಟು ಮುಂದುವರಿಸಿದ್ದಾರೆ.) ಬಹಶಃ ಅಚ್ಯುತದೇವರಾಯನ ಕಾಲದಲ್ಲಿ ಗೂಳೂರು ಹೋಬಳಿಗೆ ಸೇರಿದ ಮುಕುಂದನಹಳ್ಳಿ ವೀರಭದ್ರದೇವರ ಮಕ್ಕಳು ವೀರಭದ್ರದೇವರ ಪ್ರೀತಿಯಾಗಿ ಧಾರೆಯನೆರೆದು ಕೊಟ್ಟ ಧರ್ಮ ಎಂಬ ಅರ್ಥ ಇಲ್ಲಿದೆ. ಭೂದಾನ ಅಥವಾ ಗದ್ದೆಯ ಉತ್ಪನ್ನವನ್ನು ವೀರ ಭದ್ರದೇವರ ಸೇವೆಗಾಗಿ ಕೊಟ್ಟ ಸೂಚನೆ ಇಲ್ಲಿದೆ. ಅರ್ಥಾತ್ ವೀರಭದ್ರದೇಗುಲದ ಸ್ಥಾನಿಕ ಗುರುಗಳಿಗೆ ದಾನಕೊಟ್ಟ ಸಂದರ್ಭದ ಸೂಚನೆ ಆಗುತ್ತದೆ. ವೀರಭದ್ರದೇವರ ಮಕ್ಕಳು ಎಂದಾಗ ಒಬ್ಬ ವ್ಯಕ್ತಿಯ ಕುಟುಂಬದವರು ಎಂಬ ಅರ್ಥ ಬಂದರೂ. ಈ ಶಾಸನದ ಸಂದರ್ಭದಲ್ಲಿ ವೀರಭದ್ರನ ಒಕ್ಕಲು ಎಂಬ ಅರ್ಥದ ಸಾಧ್ಯತೆಯೂ ಇದೆ. ಪಾಲಸಂದ್ರಕ್ಕೆ ಹರಳೂರು ವೀರಭದ್ರನನ್ನು ಬಿಟ್ಟರೆ ಹಾಗೆ ನಿಕಟವಾಗಿ ಬೇರೆ ವೀರಭದ್ರಗುಡಿ ಇಲ್ಲದ ಕಾರಣ, ಹರಳೂರು ವೀರಭದ್ರನೆ ಪಾಲಸಂದ್ರ ಶಾಸನೋಕ್ತ ವೀರಭದ್ರನಾಗಿರಬೇಕು. ಇಂದಿಗೂ ಈ ದೇಗುಲದ ಬದಿಗೆ ಪ್ರಾಚೀನ ವೀರಶೈವ ಮಠವಿದ್ದು ಪಾಳುಬಿದ್ದಿದ್ದು, ಈಚೆಗೆ ಜೀರ್ಣೋದ್ಧಾರದ ಪ್ರಯತ್ನಗಳಾಗಿವೆ. ಕ್ರಿ.ಶ.೧೫೩೬ರಲ್ಲಿ ಹರಳೂರು ವೀರಭದ್ರದೇವರಿಗೆ ಮುಕುಂದನ ಹಳ್ಳಿಯವರಿಂದ ದಾನಕೊಡಲಾಯಿತೆಂದರೆ ಆ ಮುನ್ನವೇ ಹರಳೂರಿನ ವೀರಭದ್ರದೇವರು ಇದ್ದ ಸೂಚನೆ ದೊರೆಯುತ್ತದೆ. ಈ ಹರಳೂರು ವೀರಭದ್ರನ ಮುಡಿಯ ಹೆಣೆದ ಜಡೆಯ ಶಿಲ್ಪ ಅತ್ಯಂತ ಕಲಾತ್ಮಕವಾಗಿದೆ. ಕರ್ನಾಟಕದ ವೀರಭದ್ರರ ಅನೇಕ ಹೆರಳಿನ ಶಿಲ್ಪಗಳಲ್ಲಿ ಇಲ್ಲಿಯದು ವಿಶಿಷ್ಟವೆನಿಸುತ್ತದೆ. ಈ ವೀರಭದ್ರನಿಗೆ ಅಕ್ಕಿ ಉಂಡೆಯ ಹಾರದ ಬಾಗಿಲುವಾಡ ತಿರುಗಣೆ ಉತ್ಸವ (ಕೀಲುಕುದುರೆ) ಇತ್ಯಾದಿಗಳು ಜಾನಪದೀಯ ಕಲಾತ್ಮಕ ಆಚರಣೆಗಳಾಗಿವೆ.

ಗುಬ್ಬಿ ತಾಲೂಕಿನ ಕ್ರಿ.ಶ.೧೪೭೦ರ ಶಾಸನ[೨೫] ವಿಜಯನಗರದ ವಿರೂಪಾಕ್ಷ ಮಹಾರಾಯನನ್ನು ಉಕ್ತ ಮಾಡಿದೆ. ಆರಂಭಕ್ಕೆ ಕಪಿಲಸಿದ್ದ ಮಲ್ಲಿಕಾರ್ಜುನನ್ನು ಸ್ಮರಿಸಿದೆ. ವಿರೂಪಾಕ್ಷ ಮಹಾರಾಯನ ದಂಡನಾಯಕನಾದ ಸಿಂಗಪದಂಡನಾಯಕನು ಶ್ರೀರಾಜ್ಯವನ್ನು ಆಳುತ್ತಿದ್ದ ಸಮಯದಲ್ಲಿ ಅವನ ಮಹಾಸಾಮಂತನೊಬ್ಬನ ಕಲಶ ನಾಯಕನ ಪತ್ನಿಯಾದ ಕಲ್ಲರಸಿಯಮ್ಮನು ಸಿದ್ಧಮಲ್ಲಿಕಾರ್ಜುನ ಗುಡಿಯನ್ನು ಖಂಡಸ್ಫುಟಿತ ಜೀರ್ಣೋದ್ಧಾರಗೈದಳು ; ಭೋಗಮಂಟಪವನ್ನು ನಿರ್ಮಿಸಿ, ೩೦

ಪಾತ್ರೆಗಳು, ಗಾಯಕರು ತಂಬೂರಿ ನುಡಿಸುವವರು ಮುಂತಾದವರನ್ನು ನೇಮಿಸಿದಳು, ಹಿಂದೆ ಈ ದೇವರಿಗೆ ದಾನವಾಗಿದ್ದ ಭೂಮಿಯು ಅನ್ಯಾಕ್ರಾಂತವಾಗಿದ್ದುದನ್ನು ಬಿಡಿಸಿ ಪುನರ್ವಶಕ್ಕೆ ತಂದಳು. ಗೋಪುರ ಹಾಗೂ ಸಭಾಂಗಣವನ್ನು ಕಟ್ಟಿಸಿ ಅಮೃತಪಡಿಗಾಗಿ ಭೂದಾನವನ್ನು ಮಾಡಿದಳು; ಆಕೆಯ ಕುಟುಂಬವಾದ ಕಲಶನಾಯಕನು ಕೋಟ್ಯಾಧಿಪತಿಯೂ ಆಗಬೇಕೆಂಬ ಹರಕೆಯೂ ಈ ಮಣಿಹದಲ್ಲಿತ್ತು. ಗಾಯಕಿ ಮಹಾದೇವಿ, ತಾಳದ ಕನ್ನೆ ಮಾಕಜ್ಜಿ ಎಂಬುವರು ದೇವರ ಬಸವಿಯರಾಗಿದ್ದರು ಎಂದೆಲ್ಲ ಹೇಳಿದೆ.

ಈ ಅಂಶಗಳಿಂದ ಸಿದ್ಧರಾಮನ ಅಂಕಿತೇಶ್ವರನಾದ ಕಪಿಲಸಿದ್ದ ಮಲ್ಲಿಕಾರ್ಜುನನ ಭಕ್ತಳಾದ ಕಲ್ಲರಸಿಯಮ್ಮ ಶರಣ ಸಿದ್ಧರಾಮನ ಅನುಯಾಯಿಯಾಗಿದ್ದಳು. ಅಂದರೆ ಸಿದ್ಧ ರಾಮನು ಆಕೆಯ ಆರಾಧ್ಯಶರಣನಾಗಿದ್ದ ಎಂಬ ಸೂಚನೆ, ದೊರೆಯುತ್ತದೆ. ದೇಗುಲವೊಂದು ಕಲೆ ಮತ್ತು ಸಂಗೀತಕ್ಕೆ ಪ್ರಸಿದ್ಧ ನೆಲೆಯಾಗಿದ್ದ ಬಗ್ಗೆ ಹಾಗೂ ಅದಕ್ಕೆ ಒದಗಿದ ದಾನದ ವೈವಿಧ್ಯವೂ ತಿಳಿಯುತ್ತದೆ. ಪೂರ್ವಜರಿಗೆ ತೋರಿದ ಗೌರವದ ಬಗ್ಗೆ ದೇವರ ಬಸವಿಯರು ಕಲಾವಿದೆಯರಾಗಿದ್ದ ಸಂಗತಿಯೂ ಇಲ್ಲಿ ತಿಳಿಯುತ್ತದೆ. ಕಲ್ಲರಸಿಯಮ್ಮನ ಕುಟುಂಬದವರು ಅನುಸರಿಸುತ್ತಿದ್ದ ಧರ್ಮದ ಸೂಚನೆಯು ಸಿಗುತ್ತದೆ.

ತುಮಕೂರು ತಾ.ದೇವರಾಯನ ದುರ್ಗ ಪ್ರದೇಶವನ್ನು ಕ್ರಿ.ಶ.೧೩೮೭ರ ಇಮ್ಮಡಿ ಹರಿಹರನ ಕಾಲದಲ್ಲಿ ಆನೆ ಬಿದ್ದ ಸಟೆ (ತುಮ.೩೯ : ಆನೆಬಿದ್ದನ ಸಟೆ ಮೇ ಗೋಟೆಯ ಜಾವುದ ಗೊಂದಿಯ) ಎಂದು ಕರೆಯುತ್ತಿದ್ದು ಮೇಲೆ ಕೋಟೆಯೂ ಇದ್ದ ಸೂಚನೆಯು ಶಾಸನದಿಂದ ಲಭ್ಯವಾಗುತ್ತದೆ. ಹೊಯ್ಸಳ ವೀರಬಲ್ಲಾಳನ ಕಾಲಕ್ಕೆ (ಕ್ರಿ.ಶ.೧೩೧೪) 'ಅನೆಬಿದ್ದಸರಿ' ಎಂದಿರುವ ಶಾಸನೋಕ್ತಿ[೨೯] ಹೊಯ್ಸಳ ರಾಮನಾಥನ ದಂಡೆಯಾತ್ರೆಯ ಕಾಲದಲ್ಲಿ ಅವನ ಗಜಸೈನ್ಯದ ಆನೆಯೊಂದು ಜಾರಿ ಬೀಳಲು ಆನೆಬಿದ್ದಸರಿ ಎಂಬ ಘಟನಾವಾಚಿ ಸ್ಥಳನಾಮವು ಬಂದ ಐತಿಹ್ಯ ; ಆ ರಾಮನಾಥ ಹೊಯಿಸಣನ ಗಂಧವಾರಣ ಹೊಂನಮಾರ ಗೌಡನ ಮಗ ಬೀಚಗೌಡ ನಾಡಪ್ರಭು ವಾಗಿದ್ದ ಸಂಗತಿ (ತುಮ.೨೯ : ಹರಳೂರು ಕ್ರಿ.ಶ.೧೨೮೭) ಇವೆಲ್ಲವುಗಳಿಂದ ರಾಮನಾಥನ ಕಾಲದಲ್ಲಿ ಗಜಸೈನ್ಯದ ಮುಖ್ಯನಾಗಿ ಗಜಗಂಧ, ಭೈಚೆಗೌಡ ಇದ್ದದ್ದು, 'ಆ ಕಾಲಕ್ಕೆ ಐತಿಹಾಸಿಕವಾಗಿಯೂ ಆನೆ ಜಾರಿಬಿದ್ದ ಘಟನೆ ನಡೆದು ಆನೆಬಿದ್ದ ಸರಿ ಎಂಬ ಹೆಸರು ಬಂದಿರಬೇಕು ಹಾಗೂ ಆ ಹೆಸರಿನಲ್ಲಿ ಗಿರಿಯ ಮೇಲೆ ಹೊಯ್ಸಳ ದಂಡನಾಯಕನು ಆಯಕಟ್ಟಿನ ನೆಲೆ ಎಂದು ಮೇಗೋಟೆಯನ್ನು ಊರು ಸಹಿತವಾಗಿ ಕಟ್ಟಿರಬೇಕು. ಹೀಗಾಗಿ ಇಮ್ಮಡಿ ಹರಿಹರನ ಕಾಲಕ್ಕೂ 'ಆನೆ ಜಾರಿ ಬಿದ್ದ ಸರಿ' ಎಂಬ ಹೆಸರು ಮುಂದುವರೆಯಿತು. ಜೊತೆಗೆ ಅವನ ಕಾಲದಲ್ಲಿ ಕಟ್ಟಿಸಿದ ಬುಕ್ಕರಾಯನ ಸಮುದ್ರ ಎಂಬ ದೊಣೆಯೂ ಇದೆ. ಕ್ರಿ.ಶ.೧೩೮೭ ರಲ್ಲಿಯೇ ಅಲ್ಲಿ 'ಮೇಗೋಟೆ' ಇರಬೇಕಾದರೆ ಅದೊಂದು ವನದುರ್ಗವಾಗಿರ ಬೇಕೆನಿಸುತ್ತದೆ. ಗುಬ್ಬಿ ತಾ.ಅಳಲು ಗಟ್ಟದ ಕ್ರಿ.ಶ.೧೫೭೩ರ ಶಾಸನದಲ್ಲಿ ; ಪೆನುಗೊಂಡೆ ರಾಜ್ಯದ ಆನೆಬಿದ್ದ ಜರೆ ಹಾಗೂ

ತುಮಕೂರು ತಾ.ಶಾಸನವೊಂದರಲ್ಲಿ (ತುಮ.೧ ಕ್ರಿ.ಶ.೧೫೭೧) 'ಆನೆಬಿದ್ದ' ಜಾರಿ ಸ್ಥಾನದ ಪ್ರಸಿದ್ಧ ಗೂಳೂರು ಸೀಮೆ ಎಂದಿರುವಲ್ಲಿ ಅದರ ವ್ಯಾಪ್ತಿ ಶಿವಗಂಗೆಯವರೆಗೂ ಇದ್ದ ಬಗ್ಗೆ ಸೂಚನೆ ದೊರೆಯುತ್ತದೆ. ಇವೆಲ್ಲ ಮರುಗಲನಾಡು'ವಿಗೆ ಸೇರಿದ್ದ ನೆಲೆ ಎಂದು ೧೭ನೇ ಶತಮಾನದಲ್ಲಿಯೂ ಬಳಕೆ ಇದ್ದುದ್ದು ಶಾಸನಗಳಿಂದ ಗಮನಕ್ಕೆ ಬರುತ್ತದೆ. ಈ ನಡುವೆ ಜಡಕನ ದುರ್ಗ ಎಂಬ ಹೆಸರಿಟ್ಟು : ದೇವರಾಯದುರ್ಗ (ಚಿಕ್ಕದೇವರಾಯದುರ್ಗ) ಎಂಬ ಹೆಸರಿನಲ್ಲಿ ಮುಂದುವರೆದಿದೆ.

ದೇವರಾಯದುರ್ಗದ ಭೋಗನರಸಿಂಹನ ಗುಡಿಯ ಪೂರ್ವದ ಹಾದಿಯಿಂದ ಬೆಟ್ಟವಿಳಿದು ಪೆನುಗೊಂಡೆ ಬಾಗಿಲು, ಅರಮನೆಕೋಟೆ, ತಳಪಾಯದ ಅವಶೇಷಗಳನ್ನು ದಾಟಿ ೭ನೇ ಕೋಟೆಯ ನಂತರ ಸಾಗಿದರೆ ವಿಜಯನಗರ ಕಾಲದಲ್ಲಿ ನಿರ್ಮಿತವಾದ ಕಲ್ಯಾಣಿಯೊಂದು ಕಾಣಬರುತ್ತದೆ. ಈ ಕಲ್ಯಾಣಿಯ ಪ್ರವೇಶ ದ್ವಾರದ ಮೇಲು ಚಪ್ಪಡಿಯ ಪೂರ್ವಕ್ಕೆ ಮೂರು ಸಾಲಿನ ಹೊಸ ಶಾಸನವಿದೆ.[೨೮]

೧. ಶೋಭಕ್ರತ್ ಸಂವತ್ಸರದ ಭಾದ್ರಪದ ಬ ೧೦ ಲ್ಲೂ .

೨. ಶ್ರೀಮಂನ್ಮಹಾಪ್ರಧಾನಂ ಯಿರುಗಪ ದಂಡಾಯಕ ಒ

೩. (ಡೆ) ಯರಿಗೆ ಧರ್ಮವಾಗೆ ಶ್ರೀರಂಗಧಾಮರಸರು ಕಟ್ಟಿದ ಬಾವಿ.

ಮಹಾಪ್ರಧಾನ ದಂಡನಾಯಕ ಇರುಗಪ್ಪ ಒಡೆಯನಿಗೆ ದರ್ಮವಾಗಲಿ ಎಂದು ಶ್ರೀರಂಗ ಧಾಮರಸನು ಬಾವಿ ಕಟ್ಟಿಸಿದ ಬಗ್ಗೆ ಹೇಳಲಾಗಿದೆ. ಇದರ ಕಾಲ ಕ್ರಿ.ಶ.೧೪೨೩ರ ಹೊತ್ತಿಗೆ ಹೊಂದಿಕೊಳ್ಳುತ್ತದೆ. ಕ್ರಿ.ಶ. ೧೩೮೬ರ ಸಮಯದಲ್ಲಿ ಇಮ್ಮಡಿ ಹರಿಹರನಲ್ಲಿ ದಂಡನಾಯಕನಾಗಿದ್ದ ಇರುಗಪ್ಪನು ವಿಜಯನಗರದಲ್ಲಿ ೧೩೮೬ರಲ್ಲಿ ಕಂಥು ಜಿನಾಲಯವನ್ನು (ಗಾಣಿಗಿತಿದೇಗುಲ) ಕಟ್ಟಿಸಿದ. ಈ ಕಲ್ಯಾಣಿಯಿಂದ ತುಸು ದೂರದಲ್ಲಿ ಕಂಥು ಜಿನಾಲಯದ ಕದಂಬನಾಗರ ಶೈಲಿಯನ್ನು ಹೋಲುವ ವೋದೇಶ್ವರ ವೈದ್ಯೇಶ್ವರ ದೇಗುಲವನ್ನು ಕಟ್ಟಲಾಗಿದೆ. ಅದರ ಪೂರ್ವಕ್ಕೆ ಅರ್ಧ ಕಿ.ಮೀ. ದೂರದಲ್ಲಿ ಬಹುಶಃ ಹರ-ಜಿನ (ಬಹಶಃ ಯಕ್ಕೋಟಿ ಸಮಯವನ್ನು ಪಾಲಿಸಿದವನಾದ ಕಾರಣ) ಸಮನ್ವಯವಾಗಿ ಇವೆರಡೂ ಆಲಯವನ್ನು ಕಟ್ಟಿಸಿದನೆಂದು ತೋರುತ್ತದೆ. ವೈದ್ಯೇಶ್ವರ ಗುಡಿಯನ್ನು ಆರೋಗ್ಯಕ್ಕೆ ಹಾರಯಿಸಿ ಕಟ್ಟಲಾಗಿತ್ತೆಂದು ತೋರುತ್ತದೆ. ಕ್ರಿ.ಶ.೧೪೨೨ರ ಶ್ರವಣಬೆಳಗೊಳ ಶಾಸನದಿಂದ[೨೯] ಆವರೆಗೆ ಅವನು ಬದುಕಿದ್ದ ಬಗ್ಗೆಯೂ ತಿಳಿಯುತ್ತದೆ. ಸದ್ಯದ ದೇವರಾಯನ ದುರ್ಗದ ಕಲ್ಯಾಣಿ ಶಾಸನದಲ್ಲಿ 'ಧರ್ಮವಾಗೆ' ಕಲ್ಯಾಣಿ ಕಟ್ಟಿಸಿರುವುದನ್ನು ನೋಡಿದರೆ ಕ್ರಿ.ಶ.೧೪೨೩ರ ವೇಳೆಗೆ ಅವನು ತೀರಿರಬಹುದೆಂದು ತಿಳಿಯುತ್ತದೆ. ಈ ಕಲ್ಯಾಣಿಯನ್ನು 'ವೋದೇಶ್ವರ' ನಿಗಾಗಿ ಕಟ್ಟಿದ್ದು ವೋದೇಶ್ವರ ಲಿಂಗವನ್ನು ಅದರಲ್ಲಿ ಹಾಕಲಾಗಿದೆ ಎಂಬುದು ಜನಪದದಲ್ಲಿದೆ. ಆದರೆ ಟಿ.ವಿ.ಎಸ್.ಕಂಪನಿಯವರು ಈ ಕಲ್ಯಾಣಿಯ ಹೂಳು ತೆಗೆದು ಜೀರ್ಣೋದ್ಧಾರ ಮಾಡಿದಾಗ ಯಾವ ಲಿಂಗವೂ ಅಲ್ಲಿರಲಿಲ್ಲವೆನ್ನಲಾಗಿದೆ. ಹೀಗೆಯೇ

ಈ ದುರ್ಗದ ಪೆನುಗೊಂಡೆ ಬಾಗಿಲ ಬದಿಯ ಶಿಲಾಭಿತ್ತಿ ಮೇಲೆ ಬಹುಶಃ ಕ್ರಿ.ಶ. ೧೪೧೧ರ ಅಸ್ಪಷ್ಟ ಶಾಸನವೊಂದಿದ್ದು ದಾನಸಂಬಂಧಿಯಾದದ್ದು ಎಂದು ಸೂಚಿಸುವಂತಿದೆ.[೩೦]

ಕ್ರಿ.ಶ.೧೫೪೧ರ ಬ್ಯಾಡನಕಟ್ಟೆ ಶಾಸನವು (ಗುಬ್ಬಿ ೪೯) ವಿಜಯನಗರದ ಅಚ್ಯುತರಾಯನು ಚೇಳೂರ ಗಲುಡಗಳಿಗೆ ಬ್ಯಾಡನಕಟ್ಟೆ ಗ್ರಾಮವನ್ನು ಕೆಟೆಯ ಬದಲು 'ಹಸಲುಂಬಳಿ'ಗಾಗಿ (Free grazing land - ಗೋಮೇವಿಗೆ ಗೋಮಾಳಕ್ಕೆ) ದಯಪಾಲಿಸಿದ್ದನ್ನು ತಿಳಿಸುತ್ತದೆ. ಇಲ್ಲಿ ಗೋಸಂಪತ್ತು ವಿಪುಲವಾಗಿದ್ದುದರಿಂದ ಚೇಳೂರಿನ ಗಲುಡಗಳು 'ಹಸಲುಂಬಳಿ'ಯನ್ನು ಮೇವಿಗಾಗಿ ಕೇಳಿಕೊಂಡಿರುವುದು ಸ್ಪಷ್ಟ. ಇಲ್ಲಿನ ವೃಷ್ಟೇಶ್ವರ ಗುಡಿಯ ಲಿಂಗದ ಮೇಲಿನ ಹೂಮಾಲೆಯನ್ನು ವಿಜಯನಗರದ ರಾಮರಾಯ ಬಂದಾಗ ಅರ್ಚಕ ಹೂ ಪ್ರಸಾದವಾಗಿ ಕೊಟ್ಟಾಗ ಅದರಲ್ಲಿ ನೀಳ ಕೂದಲು ಕಂಡುಬಂದು ಆರೋಪ ಆರ್ಚಕನ ಮೇಲೆ ಬಂತು. ಆಗ ಅರ್ಚಕ ಅದು ಲಿಂಗಜಟೆಯ ಕೂದಲು ಎಂದಾಗ ಪರೀಕ್ಷೆಯಾದದ್ದು ಹಾಗೂ ಶಿವ ಕರುಣೆಯಿಂದ ಲಿಂಗದ ಜಟೆಯು ಮಾರನೆ ದಿನ ನೋಡಿದಾಗ ಗುಡಿ ತುಂಬ ಹರಡಿದ ಕತೆ ಜನಪದದಲ್ಲಿದೆ.

ಚೇಳೂರ ಬಾವಿಯನ್ನು (ವಿಜಯನಗರ ಶೈಲಿ) ಕಟ್ಟಿಸಿದವಳು ಸೂಳೆಯೊಬ್ಬಳಂತೆ. 'ಸೂಳೆಕೆರೆ' ಎಂಬ ಕೆರೆಯೂ ಚೇಳೂರಿಗೆ ಸುಮಾರು ೫ ಕಿ.ಮೀ ದೂರದಲ್ಲಿದೆ. ಕ್ರಿ.ಶ.೧೫೬೦ರಲ್ಲಿ ವಿಜಯನಗರದ ಅಳಿಯ ರಾಮರಾಯನು ಚೇಳುರು ಗಲುಡಗಳಿಗೆ ಚಂನಸಮುದ್ರ ಎಂಬ ಗ್ರಾಮವನ್ನು ದಾನವಾಗಿ ನೀಡಿದ (ಗುಬ್ಬಿ೪೭- ಚೇಳೂರು). ಈ ಕತೆ ಹಾಗೂ ಶಾಸನದ ಸಂಗತಿಯನ್ನು ಕೂಡಿಸಿ ನೋಡಿದರೆ ಬಹುಶಃ ವಿಜಯನಗರ ಕಾಲದಲ್ಲಿ ಆರ್ಚಕನೊಬ್ಬ ದೇವದಾಸಿ ಸಂಬಂಧ ಹೊಂದಿದ್ದ ಕತೆಗೆ ಸೂಚನೆಯಾಗುವಂತಿದೆ. ಇಲ್ಲಿ ಬರವ ಚೇಳೂರು ಗವುಡುಗಳು ಅಮರನಾಯಕರಾಗಿದ್ದಿರ ಬೇಕು. ಕ್ರಿ.ಶ.೧೩೪೯ರ ನಂತರದಲ್ಲಿ ಮಹಾನಾಡಪ್ರಭುಗಳ ಪೈಕಿಯ ಮಾರೇ ಗೌಡನು ತನ್ನ ಸೋದರರಲ್ಲಿ ಒಬ್ಬನಾದ ಸಂಗಪ್ಪಗೌಡನನ್ನು ಚೇಳೂರಿನಲ್ಲಿ ಪ್ರತಿಷ್ಠಾಪಿಸಿದನಷ್ಟೆ. ಬಹುಶಃ ಅವನ ವಂಶಿಕರು ಮಹಾ ನಾಡು ಪ್ರಭುಗಳ ಪೈಕಿಯ ಚೇಳೂರು ವಿಭಾಗದವರಾಗಿ ರಾಮರಾಯನಕಾಲದಲ್ಲಿ, ಅಚ್ಯುತದೇವರಾಯನ ಕಾಲದಲ್ಲಿ ಅಮರ ಗ್ರಾಮಗಳನ್ನು, ಭೂದಾನಗಳನ್ನು ಪಡೆದ ಸಂಗತಿಯನ್ನು ಈ ಮೇಲಿನ ಶಾಸನಗಳು ಮಂಡಿಸಿರುವಂತಿದೆ.

ಕುಣಿಗಲ್ ತಾ. ಕಾಳೇನಹಳ್ಳಿ ಕ್ರಿ.ಶ.೧೩೮೦ರ ತಾಮ್ರಶಾಸನವು (ಕುಗ.೪೩) ವಿಜಯನಗರದರಸ ಇಮ್ಮಡಿ ಹರಿಹರನ ಒಡಹುಟ್ಟಿನ ಸೋದರ ವೀರ ಮಲ್ಲಪ್ಪ ಒಡೆಯರನ್ನು ಉಕ್ತಮಾಡಿದೆ ; ಈ ಒಡೆಯರ ಕುಮಾರ ಚಿಂತಪನು ಆಕ್ರಮಿತವಾಗಿದ್ದ ಅದವಾನಿ ದುರ್ಗವನ್ನು ಗೆದ್ದುಕೊಟ್ಟ ಸಂಗತಿಯನ್ನು ತಿಳಿಸುತ್ತದೆ. ಶಾಸನದಲ್ಲಿ ಶ್ರೀ ವೀರಚನ್ನಪ್ಪ ಒಡೆಯರ ಶ್ರೀ ಹಸ್ತ ಶ್ರೀ ತ್ರಿಯಂಬಕ ವಿರೂಪಾಕ್ಷ ಎಂದು ಒಪ್ಪ

ಹಾಕಿ ತನ್ನ ಆಳಿಕೆಯ ಹೆರೂರು ಸ್ಥಳದ ಸೀಗೆಮಾವಿನಹಳ್ಳಿಯನ್ನು ಅಗ್ರಹಾರವಾಗಿ ವಿದ್ಯಾಭೂಷಣ ದೀಕ್ಷಿತನಿಗೆ, ತನಗೆ ಒಳಿತಾಗಲೆಂದು ದಾನ ಕೊಟ್ಟ ವಿಷಯವಿದೆ. ಇಲ್ಲಿ ಒಪ್ಪವನ್ನು ಕುಲಗುರು ಕಾಶಿವಿಲಾಸ ಕ್ರಿಯಾಶಕ್ತಿಯ ಒಪ್ಪ (ಶ್ರೀತ್ರಿಯಂಬಕ) ಕೂಡಿದಂತೆ ಹಾಕಿರುವುದು ವಿಶೇಷ. ಶಾಸನವು ಸಂಸ್ಕೃತ ಹಾಗೂ ಕನ್ನಡದಲ್ಲಿದೆ. ಈ ಒಪ್ಪದ ಮೂಲಕ ಕುಲಗುರುವಿನ ಸ್ಮರಣೆ ಗಮನಾರ್ಹವಾಗಿದೆ. ಆದರೆ ಇಮ್ಮಡಿ ಹರಿಹರನ ಪುತ್ರ ೧ನೇ ದೇವರಾಯನಿಗೆ ವೀರಮಲ್ಲಪ್ಪ ಒಡೆಯ ಎಂಬ ಪುತ್ರನಿದ್ದ ಬಗ್ಗೆ ಚರಿತ್ರೆಯು[೩೧] ಹೇಳಿದೆಯೆ ವಿನಾ ಇಮ್ಮಡಿ ಹರಿಹರನಿಗಲ್ಲ. ಹೀಗಾಗಿ ವಾವೆಯಲ್ಲಿ ಅವನಿಗೆ ಮೊಮ್ಮಗನೇ ಆಗುವಲ್ಲಿ ಶಾಸನದ ನೈಜತೆಯ ಬಗ್ಗೆ ಅನುಮಾನವಾಗುತ್ತದೆ. ಕಾಲ ಹಾಗೂ ಇತರ ಸಂಗತಿಗಳು ಇತಿಹಾಸಕ್ಕೆ ತಾಳೆ ಆಗುತ್ತವೆ. ಇಮ್ಮಡಿ ಹರಿಹರನ ಸೋದರನ ಹೆಸರನ್ನು ಶಾಸನವು ತಪ್ಪಾಗಿ ಉಕ್ತ ಮಾಡಿಲ್ಲ. ಕಾರಣ ಕಾನಕಾನಹಳ್ಳಿ ತಾ.ಸಾತನೂರು ಕಸಬಾದ ಕ್ರಿ.ಶ.೧೩೭೦ರ ಶಾಸನವು [೩೨], ಶ್ರೀವೀರಬುಕ್ಕಂಣೊಡೆಯರ ಕುಮಾರ ಶ್ರೀವೀರಮಲ್ಲಪ್ಪ ಒಡೆಯರು ಪ್ರಿಥ್ವೀರಾಜ್ಯಂಗೆವುತ್ತ ಮಿರಲು ಎಂದು ಸ್ಪಷ್ಟವಾಗಿ ಉಕ್ತವಾಗಿದೆ. ಹೀಗಾಗಿ ಕಾಳೇನಹಳ್ಳಿ ಶಾಸನವು ೧ನೇ ಬುಕ್ಕನಿಗೆ ವಿರುಪಣ್ಣನಲ್ಲದೆ ಮತ್ತೊಬ್ಬ ಪುತ್ರ ಹಾಗೂ ಅವನ ಇನ್ನೊಬ್ಬ ಮೊಮ್ಮಗನಿದ್ದ ವಿಷಯವನ್ನು ದೃಢೀಕರಿಸುತ್ತದೆ. ೧೫ನೇ ಶತಮಾನದ ದೇವರಾಯನಿಗೆ ವೀರಮಲ್ಲಪ್ಪ ಒಡೆಯ ಎಂಬ ಮಗನಿದ್ದುದು ನಿಜವೆಂದರೆ, ಬಹುಶಃ ತನ್ನ ಹಿರಿಯನೊಬ್ಬನ ಹೆಸರಿನ ಸ್ಮರಣೆಗಾಗಿ ಆ ಹೆಸರನ್ನು ಇಟ್ಟಿರಬಹುದೆನಿಸುತ್ತದೆ.

ಕ್ರಿ.ಶ.೧೪೮೦ರ ಎಡೆಯೂರು (ಕೊಡಿಗೇನಹಳ್ಳಿ) ಸಿದ್ದಲಿಂಗೇಶ್ವರ ದೇಗುಲ ಶಿಲಾಶಾಸನವು (ಕುಣಿಗಲ್),[೪೯] ಸಿದ್ಧಲಿಂಗೇಶ್ವರರ ಅನುಭಾವದ ವರ್ಣನೆಯನ್ನು ಮಾಡಿದೆ, ಅದಕ್ಕೆ ಪೋಷಕವಾದ ವೀರಶೈವ ಆಚಾರ, ವಿಚಾರಗಳನ್ನು ಹೇಳಿದೆ. ಸಿದ್ಧಲಿಂಗೇಶ್ವರರ ಶಿವ ವ್ಯಕ್ತಿತ್ವವನ್ನು ಮನಸ್ಸಿಗೆ ಅಚ್ಚೊತ್ತುವಂತೆ ವಿವರಿಸಿದೆ. ಭಕ್ತನ ಹೃದಯದಲ್ಲಿ ಜಂಗಮ ಅಡಗಿರುವಂತೆ, ಜಂಗಮ ಮಕುಟದಲ್ಲಿ ಶೂನ್ಯಲಿಂಗ ಬೆಳಕಾಗಿ ಅಡಗಿರುತ್ತದೆ. ಈ ಬೆಳಕು ಶಕ್ತಿಯೆ ಚಿದಂಬರ ಶಕ್ತಿ ಎನ್ನಲಾಗಿದೆ. ಸಿದ್ಧಲಿಂಗೇಶ್ವರರು ಭಕ್ತನ ಪ್ರಾಣಕಳಾ ಚೈತನ್ಯವಾಗಿದ್ದಾರೆ ಅಂದರೆ ಚೈತನ್ಯಶೀಲತೆ, ಕ್ರಿಯಾಶೀಲತೆಯಿಂದ ಭಕ್ತನಲ್ಲಿ ಅರವಿನ ಬೆಳಕು ಬೆಳೆಯುತ್ತದೆ ಎಂದಾಗಿದೆ. ಇಂಥ ಗುರುವಾದರೋ ಜ್ಞಾನಕ್ರಿಯಾ ಸ್ವರೂಪಿ, ಷಟ್‌ಸ್ಥಲಜ್ಞಾನಿ, ಅಷ್ಟಾವಣಾಲಂಕರಣ, ಸರ್ವಾಚಾರ ಸಂಪನ್ನ, ಪಾದೋದಕ ಪ್ರಸಾದ ಪ್ರತಿಷ್ಠಾಚಾರ್ಯ, ಭಕ್ತ ಮಾಹೇಶ್ವರರ್ಗೆ ವಿಕಾಸ ಶೀಲ ಅನುಭಾವಿಕ ಷಟ್‌ಸ್ಥಲ ಜ್ಞಾನವನ್ನು ತಿಳಿಸಿದವರು. ಲಿಂಗಾಂಗ ಸಾಮರಸ್ಯವನ್ನು ಬೋಧಿಸಿದವರು-ಇಂಥವರು ಇಲ್ಲಿ ಶಿವಯೋಗ ಸಮಾಧಿ ಪಡೆದರು ಎಂಬ ಚಾರಿತ್ರಿಕ ಸಂಗತಿಯೂ ಇಲ್ಲಿದೆ. ಇಂಥ ಕಡೆ ಚಿಟ್ಟಿಗದೇವನು ದಾಸೋಹವನ್ನು 'ಎಡೆಯೂರು' ಎಂಬ ಹೆಸರಿನನ್ವಯ ಕ್ರಿ.ಶ. ೧೪೮೦ರಿಂದಲೂ ನಡೆಸುತ್ತ ಬಂದ ವಿಷಯ ಶಾಸನೋಕ್ತ ವಿದೆ. ಗುರು ವಿರಕ್ತ ಸಮನ್ವಯವನ್ನು ಆಚರಿಸಿದ ಸಿದ್ದಲಿಂಗೇಶ್ವರರ ಈ ಮಠವು

ಪುರವರ್ಗದ ಮಠವಾಗಿತ್ತು. ಈ ಎಲ್ಲ ಕಾರಣವೆ ಕೊಡಗೇನಹಳ್ಳಿಯನ್ನು ದಾನವಾಗಿ ಪಡೆದು ದಾಸೋಹ ನಡೆಸುತ್ತ ಬಂದಕಾರಣ ಎಡೆಯೂರು ಎಂಬ ಹೆಸರೂ ಬರಲೂ ಕಾರಣವಾಯಿತೆನ್ನಬೇಕು. ಸಿದ್ಧಲಿಂಗೇಶ್ವರರ ಗದ್ದುಗೆ ಎದುರು ಬಸವಣ್ಣನ ಬಳಿ ವೀರಭದ್ರನ ಶಿಲಾಫಲಕವಿದ್ದು, ವೀರಭದ್ರನು ಗೋತ್ರ ಪುರುಷನಾಗಿರುವ ಶ್ರೀಮದ್ರಂಭಾ ಪುರಿ ಪೀಠದ ಇಲ್ಲಿಯ ಖಾಸಾ ಶಾಖಾ ಮಠದ ಗುರುಗಳು ದೈನಂದಿನ ಗದ್ದುಗೆ ಪೂಜಾ ವೇಳೆಯಲ್ಲಿ ಹಾಜರಿರುವುದು ಪಾರಂಪರಿಕ ಗುರು ವಿರಕ್ತ ಸಾಮರಸ್ಯದ ಸಂಕೇತವಾಗಿದೆ. ಶಾಸನೋಕ್ತ ಸಿದ್ದಲಿಂಗೇಶ್ವರರು ವಿರಕ್ತ ಸಂಪ್ರದಾಯಿಗಳಾಗಿದ್ದು ಬಳಸಿರುವ ಪಾರಿಭಾಷಿಕ ಶಬ್ದ ಪುಂಜಗಳು ವಿವರಣೆಗಳು, ವೀರಶೈವದ ತಾತ್ತ್ವಿಕ ಗಾಂಭೀರ್ಯವನ್ನು ಕಟ್ಟಿಕೊಟ್ಟಿವೆ. ತಾತ್ತ್ವಿಕ ಪರಿಸರವನ್ನು ನಿರ್ಮಿಸಿವೆ.

ಕ್ರಿ.ಶ.೧೪೯೪ರ ಚೌಡಾರೆಹಳ್ಳಿ ಶಾಸನವು[೨೨] ಚೆನ್ನಪಟ್ಟಣದ ಅಂಗಡಿ ವೀರಭದ್ರ ದೇವರಿಗೆ ಕಠಾರಿ ಸಾಳುವನ ಕುಮಾರ ಸುಳ್ಳಿರಿಯ ದೇವಪ್ಪನಾಯಕನು ಚಉಡೆಪುರವನ್ನು ಅಂಗರಂಗ ಭೋಗಕ್ಕೆ ನೀಡಿದ ವಿಷಯವಿದೆ. ಈ ದೇವಪ್ಪನಾಯಕನು ಕಠಾರಿ ಸಾಳುವ ಇಮ್ಮಡಿರಾಯ ಮಹಾರಾಯನ ಮಗ ಮಹಾಮಂಡಲೇಶ್ವರನೂ ಆಗಿದ್ದ ಎಂದಿದೆ. ಈ ಚೌಡಾರೆಹಳ್ಳಿ ಹುಲಿಯೂರು ದುರ್ಗ ಹೋಬಳಿಗೆ ಸೇರಿದ್ದು, ಇದರ ಮೊದಲ ಸ್ಥಳ ನಾಮರೂಪ ಚ ಉ ಡಡೆ ಪುರ ಎಂಬುದು ಶಾಸನಸ್ಪಷ್ಟ. ಕಠಾರಿ ಸಾಳುವ ಇಮ್ಮಡಿರಾಯ ಯಾರು ? ಸುಳ್ಳರಿಯ ದೇವಪ್ಪ ನಾಯಕ ಯಾರು ? ಎಂಬುದರ ವಿವರಣೆ ಇಲ್ಲಿ ಗಮನಾರ್ಹವಾಗಿದೆ. ಇವರು ಉಮ್ಮತ್ತೂರಿನ ಸಂಬಂಧದವರೆ ? ಎಂಬ ಅನುಮಾನ ಮೈಸೂರು ಜಿಲ್ಲೆಯ ಶಾಸನಗಳನ್ನು ಗಮನಿಸಿದರೆ ಒದಗುತ್ತದೆ. ಹಾಗೆಯೇ ವಿಜಯನಗರದ ಇವರ ಸಂಬಂಧದ ಬಗ್ಗೆಯೂ ಕುತೂಹಲ ಹುಟ್ಟುತ್ತದೆ. ಹಂಪಿ ಕ.ವಿ.ವಿ.ದ 'ಕರ್ನಾಟಕ' ಚರಿತ್ರೆಯೂ ತೆರಕಣಾಂಬಿ ಪರಿಸರದ ಉಮ್ಮತ್ತೂರು ಒಡೆಯರು ಸ್ಥಳೀಯವಾಗಿ ಗಣ್ಯರಾಗಿದ್ದವರೋ, ವಿಜಯನಗರ ಚಕ್ರವರ್ತಿಗಳ ಸಮೀಪ ಬಂಧುಗಳೋ ಆಗಿರಬಹುದು ಎಂದಿದೆ. ಇವರ ಮುಖ್ಯ ಕೋಟೆ ಶಿವನ ಸಮುದ್ರ ದಲ್ಲಿದ್ದು, ಕುಲದೈವ ಸೋಮೇಶ್ವರ ಎಂದು ಶಾಸನಾಧಾರದ ಮೇಲೆ ಹೇಳಿದೆ.[೩೪] ಮೇಲ್ಸೂಚಿತ ಉಮ್ಮತ್ತೂರು ಹಾಗೂ ವಿಜಯನಗರ ಸಂಬಂಧ ಇವರಿಗಿದ್ದ ಬಗ್ಗೆ ಶಾಸನಗಳಿಂದ ಹೆಕ್ಕಬಹುದಾಗಿದೆ. ಉಮ್ಮ ತ್ತೂರು ಚಾಮರಾಜನಗರ, ಗುಂಡ್ಲುಪೇಟೆ ತಾಲೂಕುಗಳಿಗೆ ಸನಿಹದ ಗ್ರಾಮವಾಗಿ ಉಮ್ಮತ್ತೂರು ಒಡೆಯರ್ ಶಾಸನಗಳು ಅಲ್ಲಿರುವಲ್ಲಿ ಹಾಗೂ ಕಠಾರಿ ಸಾಳುವ ಬಿರುದು, ವಿಜಯನಗರದ ಸಾಳುವ ನರಸಿಂಹನಿಗಿದ್ದಂತೆ, ಇವರಲ್ಲಿಯೂ ಕಾಣಬರುವುರಿಂದ ಉಭಯ ಸಂಬಂಧಗಳು ನಿಜವೂ ಆಗಿರಬಹುದು ಕೃಷ್ಣದೇವರಾಯನಿಗೂ 'ಕಠಾರಿ ಸಾಳುವ' ಎಂಬ ಬಿರುದು ಅಂಟಿದೆ. ಶಾಸನಗಳ ದೃಷ್ಟಿಯಿಂದ ಉಮ್ಮತ್ತೂರು ಒಡೆಯರ ವಂಶ ಕ್ರಿ.ಶ.೧೪೧೮ರ ಚಿಕ್ಕರಾಯನಿಂದ (ಚೆನ್ನರಾಜ ಚಾ.ನ೪೧೦) ಆರಂಭವಾಗುತ್ತದೆ.

ವಿಜಯನಗರ ಸಾಳುವರ ವಂಶ ಗುಂಡದೇವನಿಂದ ಆರಂಭವಾಗುತ್ತದೆ (ಹೇ.ಕೋ. ೮೯). ಈ ಕಠಾರಿ ಸಾಳುವ ಬಿರುದು ಬಂದ ಬಗೆ ಹೀಗಿದೆ. ಕ್ರಿ.ಶ.೧೪೯೩ರ ಸರಗೂರು ತಾಮ್ರಶಾಸನದಲ್ಲಿ[೩೫], (ಸಾಳುವ ಇಮ್ಮಡಿ ನಾರಸಿಂಹನ ಶಾಸನ ಗುಂಡದೇವನಿಂದ ಗುಂಡಬೊಮ್ಮ .... ಸಾಳುವ ಸಾವಿತ್ರಿ, ಮಂಗಿದೇವ, ಗೌತಮ ಗುಂಡಯ - ಈ ಕ್ರಮದಲ್ಲಿ ಬಂದ ದೊರೆಗಳಿದ್ದರು ಎಂದು ಪೌರಾಣಿಕ ಸ್ಪರ್ಶದಲ್ಲಿ ಹೇಳಲಾಗಿದೆ. ಇವರಲ್ಲಿ ಪ್ರಸಿದ್ಧನಾದ ಮಂಗಿದೇವನೇ ಕಠಾರಿ ಸಾಳುವ ಎಂದು ಖ್ಯಾತಿಗೊಂಡ ;... ಸಮಿತ್ಕಂ ಡೂಲ ಬಾಹುನಾ । ಸತ್ರಾಸ ಶಸ್ತ್ರಾಸ್ತ್ರಿ ಕೃತ್ವಾಯೋ ಗ್ರಹಿತ್ಕಠಾರಿಕಾಂ । ಕಠಾರಿ ಸಾಳುವ ಇತಿ ಖ್ಯಾತಿರ್ಯಸ್ಯಾಥ್ ಪ್ರಪಥೇ।'- ವೀರನೊಡನೆ ಹೋರಾಡುವಲ್ಲಿ ಅವನಿಂದ ಕಠಾರಿಯನ್ನು ಸೆಳೆದುಕೊಂಡ ಕಾರಣ ಈ ಬಿರುದು ಬಂತು. ಇವನಿಗೆ ಗುಂಡಯ ಎಂಬ ಪುತ್ರನು ಜನಿಸಿದ. ಇದಲ್ಲದೆ ಸಾಳುವ ಪಕ್ಷಿ ಎಂಬ ಬಿರುದು ವಂಶಕ್ಕೆ ಬರಲು, ಗುಂಡಯನು ಚುರುಕುಗತಿಯಲ್ಲಿ ಸೈನ್ಯವನ್ನು ಸಂಚಲಿಸಿ ಧಾಳಿ ಮಾಡುತ್ತಿದ್ದ ಕಾರಣವೇ ಆಗಿತ್ತು. ಗುಂಡಯನಿಗೆ ಹಿರಿಯ ವಯಸ್ಸಿನಲ್ಲಿ ರಂಗ ಮಾಂಬೆಯಿಂದ ಇಮ್ಮಡಿ ನಾರಸಿಂಹ ಹುಟ್ಟಿದ. ಗುಂಡಯ್ಯನು ಶತ್ರುಗಳ ಮೀಸೆ ಮುರಿಯುವಂತೆ ಶೌರ್ಯ ತೋರುತ್ತಿದ್ದವನಾದ ಕಾರಣ 'ಮೇದಿನಿ ಮೀಸರಗಂಡ' ಎಂದು ಹೆಸರಾದ.

ಈ ಹಿನ್ನೆಲೆಯಲ್ಲಿ ವಂಶಿಕ ಬಿರುದುಗಳಾದ 'ಕಠಾರಿ ಸಾಳುವ' ಎಂಬುವು ಸರಗೂರು ಶಾಸನದಲ್ಲಿ ಮಂಗಿದೇವನಿಗೆ, ಮೇದಿನೀಮೀಸರ ಗಂಡ ಎಂಬುದು ಗುಂಡಯನಿಗೆ ಇವರೆಡೂ ಸೇರಿದಂತೆ ಶ್ರೀಮನ್ಮಹಾಮೇದಿನಿ ಮೀಸೆಯರಗಂಡ ಕಠಾರಿ ಸಾಳುವ ಎಂಬುವು ಕ್ರಿ.ಶ. ೧೪೯೭ರ ಉಯ್ಯಂಬಳ್ಳಿ ಶಾಸನದಲ್ಲಿ[೩೬] ಇಮ್ಮಡಿ ಸಾಳುವ ನರಸಿಂಹನಿಗೆ.

ಹಂಪಿ.ಕ.ವಿ.ವಿದ ಕರ್ನಾಟಕ ಚರಿತ್ರೆಯು ಪು.೧೯೯ ಪೆಸಾಣೆ ಹನುಮಂತನೇ ಉಮ್ಮತ್ತೂರು ವಂಶಸ್ಥಾಪಕರ ಕ್ರಿ.ಶ.೧೩೪೦ರ ಕೆಂಬಾರಿ ಶಾಸನದಲ್ಲಿ ಪೆಸಾಣೆ ಹನುಮಂತ ಚೌಧರಿ ಎಂಬ ಹೆಸರಿರುವ ಬಗ್ಗೆಯೂ ಗಮನಿಸಬೇಕು ಎಂದಿದೆ.

ಕ್ರಿ.ಶ.೧೫೧೪ರ ತೆಗರಪುರ ಶಾಸನದಲ್ಲಿಯೂ ಇಮ್ಮಡಿ ಸಾಳುವ ನರಸಿಂಹನಿಗೆ ಕ್ರಿ.ಶ. ೧೫೧೪ರ ಕಾಹಳ್ಳಿ ಶಾಸನದಲ್ಲಿ[೩೮] ಕೃಷ್ಣರಾಯ-ಕೃಷ್ಣವರ್ಮ ಕ್ರಿ.ಶ.೧೫೧೩ರ ರಂಗಾಪುರ ಶಾಸನದಲ್ಲಿ[೩೯] ಕೃಷ್ಣವರ್ಮ ಮಹಾರಾಜ ಕ್ರಿ.ಶ.೧೫೧೨ರ ರಾಮಶೆಟ್ಟಿಪುರ ಶಾಸನದಲ್ಲಿ[೪೦] ಕೃಷ್ಣವರ್ಮ ಮಹಾರಾಜ ಕ್ರಿ.ಶ.೧೫೨೨ರ ಸೋಗಳ್ಳಿ ಶಾಸನದಲ್ಲಿ[೪೧] (ಶ್ರೀವೀರ ಕೃಷ್ಣರಾಯ) ಕ್ರಿ.ಶ.೧೫೨೭ರ ಅಂಕುಸಯ್ಯನಪುರ ಶಾಸನದಲ್ಲಿ[೪೨] (ಶ್ರೀಪ್ರತಾಪ ಕೃಷ್ಣದೇವರಾಯ) ಈ ಶಾಸನಗಳಲ್ಲಿನ ಬಿರುದು ವಿಜಯನಗರದ ಕೃಷ್ಣದೇವರಾಯನಿಗೆ ಅನ್ವಯ ಎನ್ನಲಾಗಿದೆ. ಕ್ರಿ.ಶ.೧೫೧೨ ರ ರಾಮಶೆಟ್ಟಿಪುರ ನಂ.ಗೂ ೩೦೨ ಹಾಗೂ ಕ್ರಿ.ಶ.೧೫೧೩ ಆಕ್ಟೋಬರ್ ೪ರ ತ್ರಿಯಂಬಕಪುರ ಶಾಸನ ಗು.ಪೇ೧೩೭ದ ಕೆಲವು ಅಂಶಗಳನ್ನು ಹಿನ್ನಲೆಗಿಟ್ಟುಕೊಂಡು ಎ.ಕ.ಸಂ.೧೦ (ಹೊಸತು) ಪು.೧೧೭ರ ಪ್ರಸ್ತಾವನೆ

ಯಲ್ಲಿ, ಈ ಮೇಲ್ಸೂಚಿತ ದಿನಾಂಕದ ವೇಳಗೆ ಕೃಷ್ಣದೇವರಾಯನು ಉಮ್ಮತ್ತೂರು ನಾಯಕನನ್ನು ಸೋಲಿಸಿ, ಸಾಳುವ ಗೋವಿಂದರಾಯನನ್ನು ನಾಯಕತನಕ್ಕೆ ಸಲ್ಲಿಸಿದ ಎಂದು ಊಹಿಸಿದೆ. ಕ್ರಿ.ಶ.೧೫೦೪ರ ಸುಮಾರಿನಲ್ಲಿ ಉಮ್ಮತ್ತೂರಿನ ನಾಯಕ ನಂಜರಾಜನೆಂದು ಶಾಸನಗಳಲ್ಲಿ ಕಂಡು ಬಂದರೆ ಸಾಹಿತ್ಯಿಕ ಮೂಲಗಳು ಗಂಗರಾಜನೆಂದು ಹೇಳಿ, ಕೃಷ್ಣದೇವರಾಯನಿಂದ ಪತನವಾದವನು ಅವನೇ ಎಂದು ಹೇಳಲಾಗಿದೆ. ಇದು ವಿಜಯನಗರದ ಸಾಳುವ ವಂಶದ ಬಿರುದುಗಳ ಹಿನ್ನೆಲೆಯಲ್ಲಿ, ಸಾಳುವ ನರಸಿಂಹನಿಂದ ಮುಂದುವರಿಕೆಯಾಗಿ ಕೃಷ್ಣದೇವರಾಯನಿಗೆ ಆ ಬಿರುದುಗಳು ಅಂಟಿದುವೇ ಅಥವಾ ಉಮ್ಮತ್ತೂರುನಾಯಕರನ್ನು ಜಯಿಸಿದ ಕಾರಣ ಬಿರುದು ಅಂಟಿತೇ ಅಥವಾ ಕೃಷ್ಣದೇವರಾಯನದು ತುಳುವ ವಂಶವೆಂದಿದ್ದರೂ ಮೂಲತಃ ಸಾಳುವ ವಂಶ ಮೂಲವೂ ಅವನಿಗಿದ್ದರಬಹುದೇ ಎಂಬುದೂ ವಿವೇಚನಾರ್ಹ ವಾಗುತ್ತದೆ. ಇದನ್ನು ಉಮ್ಮತ್ತೂರು ವಂಶದಿಂದಲೇ ಗಮನಿಸಬೇಕಾಗುತ್ತದೆ.

ಕ್ರಿ.ಶ.೧೪೧೮ ರಿಂದ ೧೫೨೯ರ ಸುಮಾರಿನವರೆಗೆ ಗುಂಡ್ಲುಪೇಟೆ, ಚಾಮರಾಜನಗರ ಯಳಂದೂರ, ನಂಜನಗೂಡು ತಾಲೂಕು ಶಾಸನಗಳನ್ನು ಗಮನಿಸಿದರೆ[೪೩] ಉಮ್ಮತ್ತೂರು ನಾಯಕರ ಬಿರುದುಗಳು ಸಾಮಾನ್ಯವಾಗಿ ಗಜಬೇಂಟೆಕಾರ, ಜವಾದಿ-ಕೋಳಾಹಳ, ಹೊಯಿಸಣದೇಶಾಧಿಪತಿ, ಹೊಯಿಸಣ ರಾಜ್ಯಧಿಪತಿ, ಹೊಯಿಸಳ ರಾಜ್ಯಾಧೀಶ್ವರ ಎಂದು ಕಾಣಬರುತ್ತವೆ. ಈ ನಾಯಕರ ಪೈಕಿ ಸದ್ಯ ಗಮನಿಸಬೇಕಾದವರಲ್ಲಿ ಕ್ರಿ.ಶ.೧೪೮೫ರ ಹರದನಹಳ್ಳಿ ಶಾಸನೋಕ್ತ ಶ್ರಿಮನ್ಮಹಾಮಾಂಡಲೇಶ್ವರ ಶ್ರೀವೀರಆನೆಯ ಬೇಂಟೆಯ ಇಂಮಡಿರಾಯವೊಡೆಯರ ಕುಮಾರ ದೇಪಂಣವೊಡೆಯರು ಪೃಥ್ವೀರಾಜ್ಯ ಕ್ರಿ.ಶ.೧೪೮೮ರ ಶೆಟ್ಟಹಳ್ಳಿ ಶಾಸನೋಕ್ತ ಗಜಬೇಂಟೆಕಾರರಾದ ವೀರಹನುಮಪ್ಪ ಒಡೆಯರ ಕುಮಾರ ಇಮಡಿರಾಯರ ಕುಮಾರರು ದೇವಂಣ ಒಡೆಯರ ತಂಮ..., ಕ್ರಿ.ಶ. ೧೪೭೬ರ ಸೋಮಹಳ್ಳಿ ಶಾಸನೋಕ್ತ, ... ಶ್ರೀ ವೀರ ಯಿಂಮಡಿರಾಯ ವಡೆಯರ ಮಕ್ಕಳು ದೇವಂಣ ವಡೆಯರು, ಕ್ರಿ.ಸ.೧೪೯೯ರ ತೆರಕಣಾಂಬಿ ಶಾಸನದ ಹಾಗೂ ಕ್ರಿ.ಶ ೧೪೯೦ ತಗಡೂರು ಶಾಸನದ ೬ ಯಿಂಮಡಿ ರಾಯ ಒಡೆಯರ ಕುಮಾರ ವೀರನಂಜರಾಜ ಒಡೆಯರು ಪ್ರಥ್ವಿರಾಜ್ಯ, ಇವರುಗಳು[೪೪] ಮುಖ್ಯರಾಗಿದ್ದಾರೆ. ಕಾರಣ ಸದ್ಯ ಪ್ರಸ್ತಾಪಿಸಿರುವ ಕುಣಿಗಲ್ ತಾ. ಚೌಡಾರೆಹಳ್ಳಿ ಶಾಸನದಲ್ಲಿ ಈ ನಾಯಕರ ಹೆಸರು ಬಂದಿದೆ. ಮೈಸೂರು ಜಿಲ್ಲೆಯ ಈ ನಾಯಕರ ಹೆಸರು ತುಮಕೂರು ಜಿಲ್ಲೆಯ ಶಾಸನದಲ್ಲಿ ಬೆಂಗಳೂರು ಜಿಲ್ಲೆಯ ಚೆನ್ನಪಟ್ಟಣ ತಾಲೂಕಿನ ಸಂಬಂಧವನ್ನು ತೋರಿಸಿಕೊಂಡಿದೆ. ಮುಖ್ಯವಾಗಿ ಕ್ರಿ.ಶ.೧೪೯೪ರ ಆ ಶಾಸನದಲ್ಲಿ ಶ್ರೀಮನ್ಮಹಾಮಾಂಡಲೇಶ್ವರ ಶ್ರೀಮನ್ಮಹಾಮೇದಿನಿ ಮೀಸೆಯರ ಗಂಡ ಕಡಾರಿ ಸಾಳುವ ಇಮ್ಮಡಿರಾಯ ಮಹಾರಾಯರ ಕುಮಾರ ಸುಳ್ಳಿರಿ ದೇವಪ್ಪನಾಯಕ ಎಂದಿದ್ದು ಇವನು ಚೆಂನಪಠಣದ ಅಂಗಡಿ ವೀರಭದ್ರದೇವರಿಗೆ ಹುಲಿಯೂರು

ದುರ್ಗದ ಹೋಬಳಿ ಚಲುಡಡೆಪುರವನ್ನು ಅಂಗರಂಗಭೋಗಕ್ಕೆ ದಾನ ನೀಡಿದ ಬಗ್ಗೆ ಶಾಸನವು ಹೇಳಿದೆ.

ಈ ಉಮ್ಮತ್ತೂರು ನಾಯಕರಲ್ಲಿ ಕ್ರಿ.ಶ.೧೪೯೪ರಲ್ಲಿ ಸಾಳುವ ಬಿರುದುಗಳು ಬಂದಕಾರಣವೇನು ? ಮೊದಲನೆಯದಾಗಿ ವಿಜಯನಗರ ಚಕ್ರವರ್ತಿಗಳನ್ನು ಸೋಲಿಸಿರಬೇಕು. ಇಲ್ಲವೆ ಆ ಚಕ್ರವರ್ತಿಗಳ ನಿಕಟ ಸಂಬಂಧಿಗಳಾಗಿ ಒಂದನೇ ವರ್ಗದ ಅಮರನಾಯಕರಾಗಿ ಉಮ್ಮತ್ತೂರು ಆಳ್ವಿಕೆ ನಡೆಸ ತೊಡಗಿರಬೇಕು. ಇದು ದೇವಪ್ಪ ನಾಯಕ ಒಡೆಯನ ಕಾಲದಲ್ಲಿ ಸಾಧ್ಯವಾಗಿರಬೇಕು ಎಂಬ ವಿಚಾರ ಮುಂದೆ ನಿಲ್ಲುತ್ತದೆ.

ನರಸನಾಯಕನ ಮರಣ (ಕ್ರಿ.ಶ.೧೫೦೩) ಮತ್ತು ತುಳುವ ವೀರನರಸಿಂಹ ಬಂದರೂ ದಂಗೆ ಅಡಗಿಸಲಾಗದೆ ಸೋತು ಹಿಂದಿರುಗಿದ. ಹೀಗೆ ವಿಜಯನಗರ ಚಕ್ರವರ್ತಿ ಸೈನ್ಯವು ಸೋತಕಾರಣ ಈ ಇಮ್ಮಡಿ ದೇವರಾಜ (ದೇಪಣ್ಣ ಒಡೆಯ) ಒಡೆಯನ ಎರಡನೆಯ ಮಗ ನಂಜರಾಜನು ಕೇಂದ್ರ ಪ್ರಭುತ್ವವನ್ನು ಒಪ್ಪದೆ ಸಾಳುವ ಬಿರುದುಗಳನ್ನು ಧರಿಸಿದ ದುರ್ಬಲದೊರೆ ವೀರನರಸಿಂಹ ಬಹುಶಃ ಉಮ್ಮತ್ತೂರಿನ ರಾಜನನ್ನು ಗೌರವಿಸಿ ಯುವ ರಾಜ ಪದವೀಗೇರಿಸಿದ ಎಂದು ಕರ್ನಾಟಕ ಚರಿತ್ರೆ ವಿವಿಧ ಮೂಲಗಳನ್ನು ಉದ್ಧೃತ ಮಾಡಿ ಹೇಳಿದೆ.[೪೫] ಆದರೆ ಈ ನಂಜರಾಜನು ಕ್ರಿ.ಶ. ೧೫೧೨ರ ವರೆಗೆ ಇದ್ದವನೆಂದರೂ ಹಾಗೂ ಈ ಕರ್ನಾಟಕ ಚರಿತ್ರೆಯನ್ನು ಅನುಸರಿಸಿ ಹೇಳಿದರೆ ಈ ಬಿರುದುಧಾರಣೆ ಕ್ರಿ.ಶ.೧೫೦೫-೦೯ರ ಅವಧಿಯಲ್ಲಿಯೇ ಆಗಿರಬೇಕು. ಹಾಗಾದರೆ ಕ್ರಿ.ಶ.೧೪೯೪ರ ಚೌಡಾರೆ ಹಳ್ಳಿಯಶಾಸನದಲ್ಲಿಯೇ ಸುಳ್ಳರಿ ದೇವಪ್ಪ ನಾಯಕನಿಗೆ ಬಿರುದು ಅಂಟಿರುವ ಕಾರಣವೇನು?

ಉಮ್ಮತ್ತೂರು ಪ್ರಭುಗಳು ಕ್ರಿ.ಶ.೧೪೯೧ರಲ್ಲಿ ರಾಜತ್ವದ ಬಿರುದನ್ನು ಧರಿಸಿ ಸ್ವತಂತ್ರರಾದರು. ಇಮ್ಮಡಿ ರಾಯ ಒಡೆಯನ ಮಗ ದೇಪಂಣ ಒಡೆಯರ್ (ಕ್ರಿ.ಶ೧೪೪೮ ರಿಂದ ೧೫೦೪) ವಿಜಯನಗರದ ಅಧಿಕಾರವನ್ನು ನಿರಾಕರಿಸಿ ಕಪ್ಪ ಕೊಡುವುದನ್ನು ನಿಲ್ಲಿಸಿದ. ಈ ದಂಗೆಕೋರ ಪ್ರವೃತ್ತಿ ನಿಲ್ಲಿಸಲು ನರಸನಾಯಕ ದಳಪತಿ ಸೇನಾಸಮೇತ ಹೋದ. ದೇಪಣ್ಣ ಒಡೆಯರ್ (ದೇವಪ್ಪರಾಜ ದೇವರಾಜ) ಶರಣಾಗತನಾದ[೪೬]. ಆದರೆ ವೀರರನರಸಿಂಹನ ಕಾಲದಲ್ಲಿ ಹಿಮ್ಮೆಟ್ಟಿ ಕೃಷ್ಣದೇವರಾಯನ ಕಾಲದಲ್ಲಿ ವಿಜಯೋತ್ಸವ ಆಚರಿಸಿತು.

ಈ ಅಂಶಗಳನ್ನು ವಿವೇಚಿಸಿದರೆ ದೇಪಣ್ಣ ಒಡೆಯರ್ ಸ್ವತಂತ್ರನಾದಾಗ ಧರಿಸಿದ ರಾಜತ್ವ ಹಾಗೂ ಸಾಳುವ ವಂಶಿಕ ಬಿರುದು ಕ್ರಿ.ಶ.೧೪೯೪ರ ಕುಣಿಗಲ್ ತಾ.ಚೌಡರ ಹಳ್ಳಿ ಶಾಸನದಲ್ಲಿ ಬಿಂಬಿತಗೊಂಡಿದೆ. ನರಸನಾಯಕನಿಂದ ಶರಣಾಗತನಾದಾಗ ಈ ಬಿರುದಿನ ಹೆಚ್ಚಳ ತಗ್ಗಿತ್ತು. ವೀರನರಸಿಂಹನ ಕಾಲದಲ್ಲಿ ಬಿರುದುಗಳು ಹೊಸದನ್ನು ಸೇರಿಸಿಕೊಂಡವು. ಇದಕ್ಕೆಲ್ಲ ಕೃಷ್ಣದೇವರಾಯ ಉಮ್ಮತ್ತೂರು ವಿಜಯದಿಂದ ಮುಕ್ತಾಯಬಂದು, ಕೃಷ್ಣದೇವರಾಯನಿಗೆ ಸಾಳುವ ಬಿರುದುಗಳು ಅಂಟಿಕೊಂಡವು, ಎಂದೆಲ್ಲ ಗಮನಕ್ಕೆ ಬರುತ್ತದೆ. ಆದರೂ ಉಮ್ಮತ್ತೂರು ಮತ್ತು ಕೃಷ್ಣದೇವರಾಯನಲ್ಲಿ

ಸಾಳುವ ವಂಶದ ಬಿರುದುಗಳಾಗಿ ಆ ವಂಶದ ಮಂಗಿರಾಜ ಮತ್ತು ಗುಂಡಯನ ಧಾರಣ ಬಂದವುಗಳನ್ನೇ ಬಳಸಿಕೊಳ್ಳಲು ಕಾರಣವಿರಬೇಕು. ಇದಲ್ಲದೆ ಕೃಷ್ಣದೇವರಾಯ ಉಮ್ಮತ್ತೂರು ವಂಶದ ಗಂಗರಾಜನ ಮಗ ವೀರಪ್ಪ ಒಡೆಯನಿಗೆ ತಾನೇ ಗೆದ್ದ ರಾಜ್ಯವನ್ನು ಹಿಂದಿರುಗಿಸಿ ಅವನ ಮಗಳನ್ನೇ ತನ್ನ ಮುಖ್ಯರಾಣಿಯರಲೊಬ್ಬಳನ್ನಾಗಿ ಮಾಡಿಕೊಂಡ.[೪೭] ಬಹಶಃ ಸಾಳುವ ವಂಶದ ಶಾಖೆಗಳಿಂದ ಬಂದವರೆನ್ನುವ ಸೂಚನೆಗೆ ಮೇಲಿನ ಅಂಶಗಳು ಹಾದಿಮಾಡಿಕೊಡುತ್ತವೆ ಎನ್ನಬೇಕು.

ಚೌಡರೆಹಳ್ಳಿ ಶಾಸನದ ರೀತ್ಯಾ ಚೆನ್ನಪಟ್ಟಣದ ಅಂಗಡಿ ವೀರಭದ್ರ ದೇವರಿಗೆ ಸುಳ್ಳಿರಿಯ ದೇವಪ್ಪನಾಯಕನು, ಆ ಹಳ್ಳಿಯನ್ನು ದಾನ ನೀಡಿದ ಸಂಗತಿ ಇದೆ. ಈ ದೇವಪ್ಪ ನಾಯಕನ ತಮ್ಮನಾದ ವೀರನಂಜರಾಜ ಒಡೆಯನು ತೆರಕಣಾಂಬಿಯ ಅಂಗಡಿ ವೀರಭದ್ರದೇವರಿಗೆ <u>ಮಂಗಳವಾರದ ನಯಿವೇದ್ಯಕ್ಕೆ</u> ವಾರ್ಷಿಕವಾಗಿ ೨೭ ಹೊಂನ್ನು ಹಾಗೂ ಗ್ರಾಮ ದಾನ ನೀಡಿದ ಬಗ್ಗೆ ಕ್ರಿ.ಶ.೧೪೮೨ರ ಚಿಕ್ಕಣಾಪುರ ಶಾಸನ (ಗು.ಪೇ.೮೧) ತಿಳಿಸುತ್ತದೆ. ಸುಳ್ಳರಿ, ಬೆಂಗಳೂರು ಜಿಲ್ಲೆ ಚೆನ್ನಪಟ್ಟಣಕ್ಕೆ ಸನಿಹದ ಗ್ರಾಮವಾದ ಇಂದಿನ ಸುಳ್ಳೇರಿ.

ಚೆನ್ನಪಟ್ಟದಲ್ಲಿ ಇಂದಿಗೂ ಅಂಗಡಿ ವೀರಭದ್ರಗುಡಿ ಇದೆ. ಇದರಿಂದ ದೇಪ್ಪ ನಾಯಕನ ತಾಯಿ ಸುಳ್ಳರಿ ಗ್ರಾಮದವಳಾಗಿದ್ದು ಅವನ ಹುಟ್ಟೂರಿನ ಹೆಸರು ಶಾಸನೋಕ್ತವಾಗಿರುವಂತಿದೆ. ದೇಪಣ್ಣ ಒಡೆಯ ಸ್ವತಂತ್ರನಾದ ಸಂದರ್ಭದಲ್ಲಿ ತುಮಕೂರು ಜಿಲ್ಲೆ ಹುಲಿಯೂರುದುರ್ಗವನ್ನು ಕೆಲಕಾಲ ತನ್ನ ವಶಕ್ಕೆ ತೆಗೆದುಕೊಂಡಿದ್ದಿರಬಹುದು. ಆಗ ಆ ಹೋಬಳಿಯ ಗ್ರಾಮವನ್ನು, ಹುಟ್ಟೂರು ಬಳಿ ಸ್ಥಾಪಿಸಿದ ಚೆಂನ್ನಪಟ್ಟಣದ ಅಂಗಡಿ ವೀರಭದ್ರನಿಗೆ ದಾನ ನೀಡರಬೇಕು. ಇದೊಂದು ತೆರಕಣಾಂಬಿ ಅಂಗಡಿ ವೀರಭದ್ರನ ಸಾಕ್ಷಿ ದೇಗುಲ (ಪ್ರತೀಕ) ವಾಗಿರಬೇಕು. ಆ ವೀರಭದ್ರನ ಒಕ್ಕಲಾಗಿ ಈ ಕಾರ್ಯಮಾಡಿರಬೇಕು. ಕ್ರಿ.ಶ.೧೪೬೯ರ ಶಿವಪುರ ಶಾಸನ (ಗುಂಪೇ. ೧೨೬) ಮತ್ತು ತ್ರಿಯಂಬಕಪುರ ಶಾಸನ (ಗುಂ.ಪೇ ೧೫೧) ಗಳು ಶಿವಾಚಾರ್ ಸಂಪನ್ನರುಮಪ ಶ್ರೀ ಗುರುರುದ್ರಾಕ್ಷಿ ಒಡೆಯರ ಪಾದಪದ್ಮಾರಾಧಕರಾಗಿ ಶರಣಾರ್ತಿಯನ್ನು ಈ ವಂಶದ ಇಮ್ಮಡಿ ರಾಯ ಒಡೆಯ ವೀರಸೋಮರಾಯ ಸಲ್ಲಿಸಿದ್ದಾನೆ. ಹಿನ್ನಲೆಯಲ್ಲೂ ಸೀತಾರಾಮ್ ಜಾಗೀರ್ ದಾರರು, ಪ್ರಾಯಶಃ ಕ್ರಿ.ಶ.೧೪೬೩ರ ಎಡಬಲದಲ್ಲಿ ವೀರಶೈವ ಧರ್ಮಕ್ಕೆ ಪರಿವರ್ತನೆ ಹೊಂದಲು ಕಾರಣ ವಾಗಿದೆ ಈ ಅರಸರಿಗೆ ಎಂದಿದ್ದಾರೆ.[೮೫] ಈ ಅಂಶವೂ ದೇಪಣ್ಣ ಒಡೆಯನು ವೀರಭದ್ರನ ಒಕ್ಕಲಾಗಿದ್ದುದಕ್ಕೆ ಸಮರ್ಥನೆ ಆಗುತ್ತದೆ. ಒಟ್ಟಿನಲ್ಲಿ ತುಮಕೂರು ಜಿಲ್ಲೆಯ ಚೌಡಾರೆಹಳ್ಳಿಯ ಕ್ರಿ.ಶ. ೧೪೯೪ರ ಈ ಶಾಸನ, ಸಾಳುವವಂಶ, ಉಮ್ಮತ್ತೂರು ನಾಯಕರು ವಿಜಯನಗರದ ಅರಸರು ಹಾಗು ವೀರಭದ್ರ ಪ್ರತಿಷ್ಠೆ ಇತ್ಯಾದಿ ವಿಷಯಗಳ ವಿಸ್ತೃತಿ ವಿವೇಚನೆಗೆ ಅವಕಾಶ ಮಾಡಿಕೊಟ್ಟಿದ್ದು ಮುಖ್ಯ ವೆನಿಸುತ್ತದೆ. ವಿಶಿಷ್ಟವೆನಿಸುತ್ತದೆ. ತುಮಕೂರು ಜಿಲ್ಲೆಯಲ್ಲೂ ಉಮ್ಮತ್ತೂರು ನಾಯಕರ ಶಾಸನವೊಂದು

ಬೆಂಗಳೂರು ಜಿಲ್ಲೆ ಚೆನ್ನಪಟ್ಟಣ ತಾಲೂಕಿನ ಸಂಬಂಧದೊಡನೆ ಲಭ್ಯವಿರುವುದು ವಿಶೇಷ.

ಸಿರಾ ತಾಲೂಕಿನ ಕ್ರಿ.ಶ.೧೪೦೫ರ ಇಮ್ಮಡಿ ಹರಿಹರನ ಶೀಬಿ ಅಗ್ರಹಾರ (ಸಿ.ತಾ.೯೬) ಸಂಗಮವಂಶದ ಮೂಲವನ್ನು ಹೆಕ್ಕಿದೆ.

ಅಂಶಿಭೂತೋ ಮಹಾವಿಷ್ಣೋರ್ವಂಶೇ ವಸ್ಮಿ ನ್ಮಹಾ ಯಶಾಃ

ಜಾತಃ ಸ್ತಸ್ಯಾಭವದ್ಭೂಮೇರ್ಭೂಷಣಂ ಬುಕ್ಕ ಭೂಪತಿಃ

ಪಯೋಧೇರಿವ ಮಂದಾರೋ ಮುಂದರಾಸ್ಯೇವ ಮಂಜರೀ

ತಸ್ಮಾದಜನಿ ರಾಜರ್ಷಿ ಶ್ರೀಮನ್ ಹರಿಹರಾಭಿದಃ

ಇಲ್ಲಿ ಸಂಗಮವಂಶದ ಯಾದವ ಮೂಲ, ಸಂಗಮ ಭೂಪಾಲನ ಪುತ್ರ ಬುಕ್ಕ ಭೂಪತಿ, ಜಂಗಮಾಚಾರದ ಸೂಚನೆ, ಸಂಗಮನೂ ಒಬ್ಬ ದೊರೆಯಾಗಿದ್ದ ಭುಪಾಲೋ ಎಂಬ ಅಂಶ, ಇಮ್ಮಡಿ ಹರಿಹರನ ರಾಜರ್ಷಿಗುರುಗಳು ಇತ್ಯಾದಿಗಳನ್ನು ಶಾಸನ ಮಂದಾರ ಮರವನ್ನು ಕಾವ್ಯ ಸ್ಪರ್ಶವಿಟ್ಟು ವರ್ಣಿಸಿದೆ.

ಸಿರಿದೊಡವು ಗ್ರಾಮದಲ್ಲಿ ಗುಜು ನೊಡಹಿನ ಪರ್ವತಾರಾಧ್ಯರ ವೀರಶೈವ ಮಠವಿತ್ತು. ಇದು ಒಂದು ಪುತ್ರವರ್ಗದ ಪ್ರಸಿದ್ಧ ಮಠವಾಗಿ, ಮುಖ್ಯಸ್ಥರಾಗಿ ವೀರಣವೊಡೆಯರು ಇದ್ದರು. ಈ ಮಠಕ್ಕೆ ಶಿಷ್ಯರು ಗೌಡ ಸೇನಬೋವರ ಅಧಿಕೃತ ಸಮ್ಮತಿಯೊಡನೆ, ದಾನಾದಿಗಳನ್ನು ಕೊಟ್ಟ ಬಗ್ಗೆ, ಸಿರಾ ತಾಲೂಕಿನ ಐದು ಶಾಸನಗಳು (ಕ್ರಿ.ಶ ೧೫೧೦-೧೨) ಹಾಗೂ ಮಧುಗಿರಿಯ ಶಾಸನವೂ ಮಠಕ್ಕೆ ಮಾಂನ್ಯವನ್ನು ಕೊಟ್ಟ ಬಗ್ಗೆ ಹೇಳಿದೆ.[೪೯] ಇದೆಲ್ಲ ಈ ಮಠದ ಜನಪ್ರಿಯತೆಯ ವಿಸ್ತಾರವನ್ನು ತಿಳಿಸುವಂತಿದೆ.

ಕ್ರಿ.ಶ.೧೫೪೩ರ ಸಿದ್ದಾಪುರ ಶಾಸನವು (ಮಧು.೨೧) ಮಹಾನಾಡಪ್ರಭು ಬಿಜಾವರದ ಚಿಕ್ಕಪ್ಪಗವುಡನ ವೀರಭದ್ರದೇವರ ಬಗೆಗಿನ ಭಕ್ತಿ ಹಾಗು ಪಂಚದೇಗುಲಗಳ ಪ್ರಭಾವ ಕುರಿತು ಹೇಳಿದೆ. ಇದು ಮುಮ್ಮಡಿ ಪಟ್ಟಣ ಸ್ಥಾಪಿಸಿದ ಮಹಾನಾಡು ಪ್ರಭುಗಳ ಶಾಖೆಯವನಾದ ಮುಮ್ಮಡಿ ಚಿಕ್ಕಪ್ಪಗೌಡನು, ಮಧುಗಿರಿಗೆ ರಾಜಧಾನಿಯನ್ನು ಬಿಜ್ಜಾವರದಿಂದ ವರ್ಗಾಯಿಸುವ ಮೊದಲೇ ಮಾಡಿದ ಸಾಂಸ್ಕೃತಿಕ ಕಾರ್ಯವಾಗಿದೆ. ಮತೀಯ ಹಂಗುಗಳನ್ನು ಮೀರಿ ಮಾಡಿದ ಧರ್ಮಕಾರ್ಯವಾಗಿದೆ.

ಪಾವಗಡ ತಾ. ಕನ್ನಮೇಡಿಯ ಶಾಸನವು (ಪಾ.ಗ.೨೨) ಲಿಂಗದ ವೀರನೊಬ್ಬನ ಪ್ರಸ್ತಾಪವನ್ನು; ತಾ ನಡೆಪ ಹೇಳಿಕೊಂಡು...ಗ್ರಾಮದಲ್ಲಿ ವರುಷ ವರುಷಕೆ ೨ ವರಹಾನು ಸಲ್ಲಿಸಿಕೊಂಡ ಇಹದು ಯಾವನೊಬ ಲಿಂಗದವೀರ...' ಎಂದು ಮಾಡಿದೆ ಇದು ವೀರಬದ್ರ ಖಡ್ಗ ಹೇಳುವಲ್ಲಿ ವರುಷಗಾಣಿಕೆ ಪಡೆಯುತ್ತಿದ್ದ ಲಿಂಗದವೀರೆ, ತನ್ನ ಈ ವರ್ತನೆಯಿಂದ ಬರುತ್ತಿದ್ದ ಆದಾಯದಲ್ಲಿ ಎರಡು ವರಹಗಳನ್ನು ವೀರಭದ್ರಗುಡಿಗೆ ಸಲ್ಲಿಸಬೇಕಿದ್ದ ಸೂಚನೆ ಇದಾಗಿದೆ. ಧಾರ್ಮಿಕ ಆದಾಯವೂ, ವೃತ್ತಿ ತೆರಿಗೆಯ ರೂಪದಲ್ಲಿ ದೇವರಿಗೆ ನೀಡಬೇಕಿದ್ದ ಪದ್ಧತಿಯ ಸೂಚನೆ ಇದಾಗಿದೆ.

ಕ್ರಿ.ಶ.೧೫೨೨ರ ತಿಪಟೂರು. ತಾ ಶಾಸನವು (ತಿಪ.೫೦) ಕೃಷ್ಣದೇವರಾಯನ ಸೇವೆಯಲ್ಲಿದ್ದ ಮಾರಪ್ಪನಾಯಕ ಒಡೆಯನು ಹಾಗೂ ಅವನ ಸೇವಕನಾದ (ತ.ಗಟಪ) ನಾಯಕನು ನೊಡವಿನಕೆರೆಯ ಗೋಪಿನಾಥ ಮತ್ತು ತಿರುಮಲದೇವರಿಗೆ ನೊಣಬಿನ ಕೆರೆ ಸೀಮೆಯ ಶಕಟಸ್ಥಳವಾದ ಕೈದಾಳ ಗ್ರಾಮವನ್ನು ಸರ್ವಮಾನ್ಯವಾಗಿ ಕೊಟ್ಟ ಬಗ್ಗೆ ಹೇಳಿದೆ. ನಿಂಘಟಿನ ಅರ್ಥಗಮನಿಸಿ ಹೇಳಿದರೆ ಐದು ನಕ್ಷತ್ರಗಳನ್ನು ಒಳಗೊಂಡ ಗಾಡಿ ಆಕಾರದ ರೊಹಿಣಿ ನಕ್ಷತ್ರ ಸಂಭವದಲ್ಲಿ ಸೂರ್ಯಕಿರಣಗಳು ದೇವಪಾದದ ಮೇಲೆ ಬೀಳುವ ಸ್ಥಳ ಕೈದಾಳವಾಗಿತ್ತು. ಬಹುಶಃ ವೈರಧ್ಯಯೋಗಫಲ ನಿವಾರಣೆ, ಕೆಡಕು ಪರಿಹಾರಕ್ಕಾಗಿ ದೇವದಾನವಾಗಿದ್ದಿರಬೇಕು. ಕೊಡಗಿನ ಹುತ್ತರಿ ಹಬ್ಬ ಹೊಸ ಅಕ್ಕಿ ಕದಿರನ್ನು ಮನೆಗೆ ತರುವ, ಆಸ್ತಿಗೆ ಪೂಜೆ ಕದಿರನ್ನು ಇಡುವ ಹಬ್ಬವಾಗಿ ಇರಬಹುದು. ವೃಶ್ಚಿಕಾ ಪೌರ್ಣಮಿಯ ಕೃತ್ತಿಕಾ-ರೊಹಿಣಿ ನಕ್ಷತ್ರದಲ್ಲಿಯೇ ಎಂಬುದು ಇಲ್ಲಿ ಗಮನಾರ್ಹ ಎಂಬ ಸಂಕೇತವನ್ನು ಸೂಚಿಸುವ ಕಾರಣ, ಕೈದಾಳದ ದೇವಪಾದದ ಮೇಲೆ ಈ ನಕ್ಷತ್ರ ಸಮಯದಲ್ಲಿ ಸೂರ್ಯಕಿರಣಗಳು ಬೀಳುವಂಥ ವಸ್ತುರಚನೆ ಇದ್ದಿರುವ ಸಾಧ್ಯತೆಯನ್ನು ಊಹಿಸಬಹುದು. ಕ್ರಾಂತಿಪಥವು ಈ ಗ್ರಾಮದ ಮೂಲಕ ಹಾದು ಹೋಗುವ ಸಮಯವೂ ಆದಾಗಿರಬಹುದು. ಗೂಳೂರು ಸನಿಹದ ಕೈದಾಳದ ಚೆನ್ನಕೇಶವ ಪಾದದ ಮೇಲೆ ಹಾಗು ಚೇಳೂರು ದೃಷ್ಟೇಶ್ವರಲಿಂಗ ಪೀಠದ ಮೇಲೆ ಬೀಳುತ್ತಿದ್ದ ಸೂರ್ಯಕಿರಣ ಸಂದರ್ಭವನ್ನು ಈ ಸಂದರ್ಭವನ್ನು ಈ ಸಂದರ್ಭದಲ್ಲಿ ನೆನೆಯ ಬಹುದೆನ್ನಿಸುತ್ತದೆ. ಹೀಗಾಗಿ ಶಕಟಸ್ಥಳ ಕೈದಾಳ ಶಾಸನೋಕ್ತ ವೈಶಿಷ್ಟ್ಯವಿರುವಂತಿದೆ. ಕ್ರಿ.ಶ.೧೪೪೪ರ ಕೋಟೆ ನಾಯಕನಹಳ್ಳಿ ಬನಶಂಕರಿ ದೇಗುಲ ಶಾಸನವು (ತಿ.ಪ.೮೬) ಬಾಳು ತಪ್ಪಿದ ಹೆಣ್ಣುಗಳು ೪೦ ವರಹ ತಪ್ಪುಕಾಣಿಕೆ ಕಟ್ಟಿದರೆ ಕುಲಕ್ಕೆ ತೆಗೆದು ಕೊಳ್ಳಬಹುದು. ತಪ್ಪು ಕಾಣಿಕೆ ಕೊಡದಿದ್ದರೆ ಸಹ ಭೋಜನಕ್ಕೆ ಹೊರಗಾಗುತ್ತಾರೆ ಎಂದಿದೆ. ಅದೇ ಕ್ರಿ.ಶ.೧೬೦೦ರ ಹೊನ್ನವಳ್ಳಿ ಲಕ್ಷ್ಮೀಕಾಂತ ದೇಗುಲ ಶಾಸನವು (ತಿ.೧೩೦), ಬಾಳು ತಪ್ಪಿದವಳ ಮಕ್ಕಳು ದೇಗುಲದ ಪೂಜಾರಿಗಳ ಮನೆತನದವರಲ್ಲದಿದ್ದರೆ ಅಂಥ ಮಕ್ಕಳು ಪೂಜಾರಿಗಳಿಗೆ ಅರ್ಹರಲ್ಲ. ಅದಕ್ಕೆ ತಪ್ಪಿದರೆ ಶಿವಮಯಕ್ಕೆ, ಹರಿಸಮಯಕ್ಕೆ ಹೊರಗು ಎಂದಿದೆ ; ದೇವಾಂಗ ಅಗಸ, ಕುಂಬಾರ ಮುಖ್ಯಸ್ಥರು ಸೇರಿ ಇಂಥ ನಿಯಮಗಳನ್ನು ರೂಪಿಸಿಕೊಂಡಿದ್ದ ಬಗ್ಗೆ ಅದು ಹೇಳಿದೆ. ಬನಶಂಕರಿ ದೇಗುಲದ್ದು, ಅನೇಕ ಶೆಟ್ಟಿಗಳು ಸೇರಿ ರೂಪಿಸಿದ್ದ ಕಟ್ಟು ಕಟ್ಟಳೆಯಾಗಿತ್ತು. ಎರಡೂ ದೇಗುಲಸಾಕ್ಷಿಯಾಗಿ ರೂಪುಗೊಂಡಿರುವುದು ಸಾಮಾಜಿಕ ಸಂಪ್ರದಾಯಕ್ಕೆ ಧಾರ್ಮಿಕ ಬಂಧವನ್ನು ನೀಡಿದಂತಿದೆ. ಒಂದರಲ್ಲಿ ತಪ್ಪುಕಾಣಿಕೆ ಕೊಟ್ಟರೆ ಸಾಕು. ಬಹಿಷ್ಕಾರವಿಲ್ಲ. ಇನ್ನೊಂದರಲ್ಲಿ ದೈವ ದ್ರೋಹದ ಭಯವನ್ನು ಮುಂದಿರಿಸಲಾಗಿದೆ. ಸಂಪ್ರದಾಯಕ್ಕೆಜಡತೆ ಮಾನವೀಯ ಸಂದರ್ಭಗಳನ್ನು ಮುಂಕುಗೊಳಿಸಿರುವ ಬಗೆಯಾಗಿ ಕಾಣುತ್ತದೆ. ಆದರೆ ಸಾಮಾಜಿಕರು ಯಾರೇ ಇರಲಿ ಮದುವೆಯಂಥ ಸಾಂಸ್ಕೃತಿಕ ಹೊಣೆಯನ್ನು, ಆಚಾರ ವಿಚಾರವನ್ನು ನಿಷ್ಠೆಯಿಂದ ಹೊತ್ತು ಪಾಲಿಸಬೇಕೆಂಬ ಎಚ್ಚರಿಕೆ ಇಲ್ಲಿದ್ದರೂ ಸಂಪ್ರದಾಯ ಮೇಲಾಳಸ್ತನ ನಡೆಸಿದೆ ಎಂಬುದು ಗಮನಕ್ಕೆ ಬರುತ್ತದೆ.

ಒಟ್ಟಾರೆ ವಿಜಯನಗರ ಅರಸರ ಕಾಲದ ಈ ಜಿಲ್ಲೆಯ ಶಾಸನಗಳಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಹಿನ್ನೆಲೆಗಳು, ಕಾಕತೀಯ ಅರಸರು, ಅಮರ ನಾಯಕ ವರ್ಗದ ಮಹಾನಾಡ ಪ್ರಭುಗಳು, ಹಾಗಲವಾಡಿ ನಾಯಕರು, ಉಮ್ಮತ್ತೂರು ನಾಯಕರು ಮುಂತಾದವರ ರಾಜಕೀಯ ನಡಾವಳಿಗಳ ಚಿತ್ರ ಸಿಗುತ್ತದೆ. ಧಾರ್ಮಿಕ ನೆಲೆಗಳ ವೈಶಿಷ್ಟ್ಯಗಳು ತಿಳಿಯುತ್ತವೆ. ಸಾಮಾಜಿಕ ಜೀವನ ಚಿತ್ರಣ ಕಾಣುತ್ತದೆ. ಸಾಂಸ್ಕೃತಿಕ ವೈವಿಧ್ಯತೆಗಳೂ ಕಾಣಬರುತ್ತವೆ. ಬೇರೆ ಜಿಲ್ಲೆ ಸಾಂಸ್ಕೃತಿಕ ಹಾಗೂ ರಾಜಕೀಯ ವಿವೇಚನೆಗೆ ಈ ಜಿಲ್ಲೆಯ ಶಾಸನಗಳು ತೆರೆದುಕೊಂಡಿರುವ ಬಗೆಯೂ ಬಹಳ ವಿಶಿಷ್ಟ ವಾಗಿ ಕಾಣುತ್ತದೆ. ವಿವೇಚನೆಗೆ ವಿಸ್ತೃತವಾಗಿ ತೆರೆದುಕೊಳ್ಳುವ ಬಗೆಯೂ ವಿಶೇಷವೆನಿಸುತ್ತದೆ.

ಆಧಾರ ಸೂಚಿ

೧. ಎ.ಕ.ಸಂ ೧೨ (ಹೊಸ ಆವೃತ್ತಿ)., ೧೯೦೪, ತುಮಕೂರು ಜಿಲ್ಲೆ, ಹಿರೇಗುಂಡಗಲ್ ಇತ್ಯಾದಿ ಗ್ರಾಮಗಳ ಶಾಸನಗಳು : ಸಂಖ್ಯೆ ೮೯-೯೪, ಕ್ರಿ.ಶ.ಸು.೭೬೫.

೨. ಅದೇ, ಮಧುಗಿರಿ ೯೨-೧೦೧.

೩. ಅದೇ, ಪಾವುಗಡ ೭೪ (ರೈಸರ ರೀತ್ಯಾ ಕ್ರಿ.ಶ.೧೩೫೪)

೪. ಅದೇ, ಪಾವುಗಡ ೧೮ (ರೈಸರು ಕ್ರಿ.ಶ. ೧೩೭೬ ? ಎಂದಿದ್ದಾರೆ)

೫. ಅದೇ, ಮಧುಗಿರಿ ೭೪ (ರೈಸರು ಕ್ರಿ.ಶ. ೧೩೭೦ ? ಎಂದಿದ್ದಾರೆ)

೬. ಎ.ಕ.ಸಂ.೧೬ ಅನುಬಂಧ ಸಂಪುಟ, (ಸಂ.ಕೆ.ಎ.ನೀಲಕಂಠಶಾಸ್ತ್ರಿ,೧೯೫೫) ಮಧುಗಿರಿ ೧೧೭, ಮಿಡಿಗೇ ಕ್ರಿ.ಶ.೧೬೧೨

೭. ಅದೇ, ಮಧುಗಿರಿ ೧೧೧, ಕ್ರಿ.ಸ.೧೬೦೬.

೮. ಡಾ.ಚೆನ್ನಕ್ಕಪಾವಟೆ., ಮಹಾನಾಡ ಪ್ರಭುಗಳು ಸಾರಂಗಶ್ರೀ, ೧೯೯೪ (ಸಂ) ಡಾ.ಎಂ.ಎಂ.ಕಲಬುರ್ಗಿ, ಸಾರಂಗಮಠ, ಸಿಂದಗಿ, ಪು.೧೩೬-೩೭.

೯. ಎಂ.ಜಿ.ನಾಗರಾಜ್., 'ಕೊಡಗು ಜಿಲ್ಲೆ, ಬೆಂಗಳೂರು ಜಿಲ್ಲೆ, ತುಮಕೂರು ಜಿಲ್ಲೆ ಕೆಲವು ಅಪ್ರಕಟಿತ ಶಾಸನಗಳು' ಇತಿಹಾಸದರ್ಶನ, ಕರ್ನಾಟಕ ಇತಿಹಾಸ ಅಕಾಡೆಮಿ, ಸಂ.೨೦/ ೨೦೦೫, ಪು.೧೨೮.

೧೦. ಎ.ಕ.ಸಂ.೧೨ (ರೈಸ್)., ಅದೇ, ತುಮ.೬೬ ; ಕ್ರಿ.ಶ. ೧೫೫೮ ?

೧೧. ಅದೇ, ಮಧು ೨೧ (ಸಿದ್ಧಾಪುರ ; ಕ್ರಿ.ಶ.೧೫೫೩)

೧೨-೧೩, ಎ.ಕ.ಸಂ.೧೨ ಅದೇ, ತುಮ. ೫೨ (ಕ್ರಿ.ಶ.೧೪೪೭) ; ತುಮ ೫೧ (ಕ್ರಿ.ಶ.೧೫೧೬)

೧೪. ಅದೇ, ತಿಪ. ೧ (ಕ್ರಿ.ಶ.೧೫೩೩)

೧೫. ಎ.ಕ.ಸಂ.೯ ರೈಸ್., ೧೯೦೫ ಬೆಂಗಳೂರು ಜಿಲ್ಲೆ, ಮಾಗಡಿ ೨೦.

೧೬. ಎಂ.ವಿ.ಕೃಷ್ಣರಾವ್., ೧೯೬೪, ಬೆಂಗಳೂರು ಕೆಂಪೇಗೌಡ, ಬೆಂಗಳೂರು. ಪು.೭೧.

೧೭. i. ಎ.ಕ.ಸಂ.೧೨ (ರೈಸ್), ತುಮಕೂರು ಜಿಲ್ಲೆ, ತುಮಕೂರು ೧೪ (ಮುಳುಕುಂಟೆ ತಾಮ್ರ ಶಾಸನದ ನಕಲು) ; ಕ್ರಿ.ಶ. ೧೨೩೪ ?

ii. ಎಂ.ಜಿ.ನಾಗರಾಜ್., 'ವಿಜಯನಗರ ಸಂಬಂಧದ ಎರಡು ವಿಷಯಗಳು : ತಮ್ಮಡಿಗಳು, ರಾಮನಗರ ಪರಿಸರದಲ್ಲಿ ಸಂಗಮರು, **ವಿಜಯನಗರ ಅಧ್ಯಯನ ಸಂಪುಟ-೮**, ೨೦೦೩, (ಸಂ) ಕೆ.ಆರ್.ರಾಮಕೃಷ್ಣ, ಡಾ.ಆರ್.ಗೋಪಾಲ್, ಟಿ.ಎಸ್.ಗಂಗಾಧರ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ಪು.೯೫-೯೬.

೧೮. ಎಸ್.ಶಿವಣ್ಣ., ೨೦೦೪, ಬಿಡಿಮುತ್ತು (ಸಂಶೋಧನ ಲೇಖನಗಳು,) ಕನ್ನಡ ಸಾಹಿತ್ಯ ಪರಿಷತ್ತು, ಪು.೨೬೫.

೧೯. ಎ.ಕ.ನಂ.೧೨ ಅನುಬಂಧ, ಚಿಕ್ಕ.ನಾ.ಹಳ್ಳಿ.೧ ; ಕ್ರಿ.ಶ.೧೬೨೩.

೨೦. ಎ.ಕ.ಸಂ.೧೨ (ರೈಸ್) ಅದೇ, ಚಿ.ನಾ.ಹಳ್ಳಿ, ೧೦ ; ಕ್ರಿ.ಸ.೧೫೨೫ (ಬೂದಿಹಾಳು)

೨೧. ಅದೇ, ಚಿ.ನಾ.ಹಳ್ಳಿ ೪೪ (ಕಂದಿಕೆರೆ ; ಕ್ರಿ.ಸ.೧೫೩೫)

೨೨. ಅದೇ, ಚಿ.ನಾ.ಹಳ್ಳಿ ೮ (ಬೂದಿಹಾಳು ; ಕ್ರಿ.ಸ.೧೫೭೩)

೨೩. ಎ.ಕ.೧೨ (ರೈಸ್)., ಅದೇ ಚಿ,ನಾ.೧೩ (ದೊಡ್ಡಕಲವಟ್ಟೆ ; ಕ್ರಿ.ಸ.೧೩೮೪)

೨೪. ಅದೇ., ತುಮ ೩೦, ೩೧ (ಪಾಲಸಂದ್ರ ; ಕ್ರಿ.ಶ.೧೫೩೫)

೨೫. ಅದೇ., ಗುಬ್ಬಿ ೨೯ ; ಕ್ರಿ.ಶ.೧೪೭೦

೨೬. ಎ.ಕ.೧೨, ಅನುಬಂಧ, ಅದೇ, ತುಮ ೭೯ (ಮೆಳೆಕೋಟೆ ; ಕ್ರಿ.ಶ.೧೩೧೪)

೨೭. ಎಂ.ಜಿ.ನಾಗರಾಜ್., ದೇವಾರಾಯನ ದುರ್ಗ-ಚೇಳೂರು ಪ್ರಾಚ್ಯವಸ್ತುಗಳು, ಹೊಸಶಾಸನಗಳು ; **ಇತಿಹಾಸ ದರ್ಶನ**. ೧೮/೨೦೦೩, ಪು.೧೦೩-೧೦೮.

೨೮. ಅದೇ., ಪು ೧೦೫-೧೦೬.

೨೯. ಎ.ಕ.ಸಂ.೨ (ಹೊಸತು)., ೧೯೭೩, **ಶ್ರವಣ ಬೆಳಗೊಳ ಸಂಪುಟ**, ಮೈ.ವಿ.ವಿ. (ಶ್ರ.ಬೆ.೩೫೭, ಕ್ರಿ.ಶ.೧೪೨೨)

೩೦. ಎಂ.ಜಿ.ನಾಗರಾಜ್., ಅದೇ, **ಇತಿಹಾಸದರ್ಶನ**, ಸಂ. ೧೮/೨೦೦೩, ಪು. ೧೦೭.

೩೧. **ಕರ್ನಾಟಕ ಚರಿತ್ರೆ ಸಂಪುಟ ೩**., ೧೯೯೭, (ಪ್ರ.ಸಂ) ಪ್ರೊ. ಬಿ.ಷೇಕ್‌ಅಲಿ. (ಸಂ) ಪ್ರೊ.ಕೆ.ಎಸ್.ಶಿವಣ್ಣ, ಕನ್ನಡ ವಿಶ್ವವಿದ್ಯಾಲಯ,ಹಂಪಿ, ಪು.೨೮.

೩೨. ಎ.ಕ.ಸಂ.೯ (ಅನುಬಂಧ) ಕಾ.ಹ.೧೨೪

೩೩. ಎ.ಕ ಸಂ.೧೨ (ರೈಸ್)., ಅದೇ, ಕುಣಿಗಲ್ ೨೬ ; ಕ್ರಿ.ಸ.೧೪೯೪.

೩೪. **ಕರ್ನಾಟಕ ಚರಿತ್ರೆ**, ಸಂಪುಟ ೩., ಅದೇ ಪು.೪೫೪

೩೫. i. ಎ.ಕ.೩ (ಹೊಸತು)., ೧೯೭೪, ಹೆ.ಕೋ ೮೯ (ಸರಗೂರು ; ಕ್ರಿ.ಶ.೧೪೯೩), ಮೈಸೂರು ಜಿಲ್ಲೆ, ಮೈ.ವಿ.ವಿ.

ii. Mangideva - He it was who in hand - to - fight snatched away a sword a (Kathari) from a warrior. He was therefore called kathari saluva see, Rice trln.

೩೬-೪೨. ಎ.ಕ.೩ (ಹೊಸತು)., ಅದೇ, ಹೆ.ಕೋಟೆ ೧೩೩ (ಉಯ್ಯಂಬಳ್ಳಿ ; ಕ್ರಿ.ಸ.೧೪೯೭).

ಎ.ಕೆ.೪ (ಹೊಸತು)., ೧೯೨೫, ಕೊಳ್ಳೆಗಾಲ ೧೧ (ತಗರಪುರ ; ಕ್ರಿ.ಶ.೧೫೧೪)

ಎ.ಕ. (ಹೊಸತು)., ಅದೇ, ನಂಜ.೨೪೮ (ಕಾಹಳ್ಳಿ ; ಕ್ರಿ.ಶ.೧೫೧೪ - the record is not beyond doubt ಎಂದಿದೆ.) ; ನಂಜ. ೨೮೫ (ರಂಗಾಪುರ ; ಕ್ರಿ.ಶ. ೧೫೧೩) ನಂಜ.೩೦೨, (ರಾಮಶೆಟ್ಟಿಪುರ ; ಕ್ರಿ.ಶ.೧೫೧೨) ಹೆ.ಕೋ ೧೩೪ (ಅಂಕುಸಯ್ಯನಪುರ ; ಕ್ರಿ.ಶ.೧೫೨೬)

೪೩. ಎ.ಕ.೨ (ಹೊಸತು)., ಅದೇ., ಗು.ಪೇ ೨೪ (ಕ್ರಿ.ಶ.೧೪೩೦) ೨೨ (ಕ್ರಿ.ಶ.೧೪೭೬) ೮೧ (ಕ್ರಿ.ಶ.೧೪೮೨) ೧೨೫ (ಕ್ರಿ.ಶ.೧೪೯೦) ೧೨೦ (ಕ್ರಿ.ಶ,೧೪೮೯) ೧೨೮ (ಕ್ರಿ.ಶ.೧೮೮) ಎ.ಕ.೪೬ (ಹೊಸತು)., ಅದೇ., ನಂಗೂ ೧೮೧ (ಕ್ರಿ.ಶ.೧೪೬೭) ಜ.ನ.೨೭೪ (ಕ್ರಿ.ಶ.೧೪೮೫) ೩೨೬ (ಕ್ರಿ.ಶ.೧೪೯೨) ೩೯೦ (ಕ್ರಿ.ಶ.೧೪೮೬) ೨೩೧ (ಕ್ರಿ.ಶ.೧೫೧೨) ೪೦೫ (ಕ್ರಿ.ಶ.೧೫೪೯) ನಂ.ಗೂ.೩೩೫ (ಕ್ರಿ.ಶ.೧೪೮೬) ೨೩೧ (ಕ್ರಿ.ಶ.೧೫೧೨) ೪೦೫ (ಕ್ರಿ.ಶ.೧೫೪೯) ನಂ.ಗೂ.೩೩೫ (ಕ್ರಿ.ಶ.೧೪೯೫) ಇತ್ಯಾದಿ.

೪೪. ಎ.ಕ.೪ (ಹೊಸತು)., ಅದೇ., ಜೌ.ನ್.೨೭೪ (ಕ್ರಿ.ಶ.೧೪೮೫), ಗುಂಡ್ಲುಪೇಟೆ ೧೭೮ (ಕ್ರಿ.ಶ.೧೪೮೮), ಗುಂ.ಪೇ,೭೭ (ಕ್ರಿ.ಶ.೧೪೭೯), ಗುಂ.ಪೇ೧೨೦ (ಕ್ರಿ.ಶ.೧೪೮೯), ನಂ.ಗೂ.೨೪೯ (ಕ್ರಿ.ಶ.೧೪೯೦)

೪೫. **ಕರ್ನಾಟಕ ಚರಿತ್ರೆ**, ಕ.ವಿ.ವಿ.ಹಂಪಿ.ವಿದ್ಯಾರಣ್ಯ., ಅದೇ, ಪು೪೫೫-೫೬

೪೬. ಅದೇ., ಪು.೧೨೦, ೪೫೫

೪೭. ಅದೇ., ಪು.೪೫೬

೪೮. ಸೀತಾರಾಮ ಜಾಗಿರ್‌ದಾರ್, 'ಉಮ್ಮತ್ತೂರು ಅರಸು ಮನೆತನ', **ಸಾರಂಗಶ್ರೀ**, ೧೯೯೫ ಸಂ ಡಾ.ಎಂ.ಎಂ.ಕಲಬುರ್ಗಿ, ಸಿಂದಗಿ ಸಾರಂಗ ಮಠ, ಪು.೨೧೭

೪೯. ಎ.ಕ.೧೨ (ರೈಸ್), ಅದೇ, ಸಿರಾ,೧೧೯, ಸಿರಾ ೧೧೧ (ಕ್ರಿ.ಶ.೧೫೧೦), ಸಿರಾ (ಕ್ರಿ.ಶ.೧೫೧೨), ಮಧು ೮೨ (ಯಲೂರು), ಪಾವು ೬೨ (ಎಕಮ್ಮನಹಳ್ಳಿ, ಜನಮನ್‌ಗುಟ್ಟು)

೧೦. ಹಂಪೆಯ ಶಾಸನಗಳಲ್ಲಿ ಶಿವಶರಣರು

ಡಾ.ಟಿ.ಎಂ.ಮಂಜುನಾಥಯ್ಯ

ವಿಜಯನಗರ ಪಟ್ಟಣ ಹಂಪೆಯ ಪರಿಸರದಲ್ಲಿನ ಶಾಸನಗಳು ಮಧ್ಯಕಾಲೀನ ಇತಿಹಾಸದಲ್ಲಿ ರಾಜಕೀಯ ಆಡಳಿತ, ಸೈನಿಕ ವಾಸ್ತು ಕಲೆ, ವ್ಯಾಪಾರ, ವಾಣಿಜ್ಯ, ವಿದೇಶಿಯ ವ್ಯಾಪಾರ ಸಂಬಂಧಗಳು, ಕೃಷಿ, ಸಾಹಿತ್ಯ ಹಾಗೂ ಧಾರ್ಮಿಕ ಹಿನ್ನೆಲೆಯನ್ನು ತಿಳಿಸುವುವು. ಈ ಅಂಶಗಳನ್ನು ಅವಲೋಕಿಸಿದಾಗ ಐತಿಹಾಸಿಕ ಪರಂಪರೆಯ ಖಜಾನೆ ಯಂತೆ ಸಂಶೋಧಕರಿಗೆ ಮಾಹಿತಿಯನ್ನು ಒದಗಿಸುವಲ್ಲಿ ಸಹಕಾರಿಯಾಗಿವೆ. ಸಾಹಿತಿಕ ಅಂಶಕ್ಕೆ ಸಂಬಂಧಿಸಿದಂತೆ ಹರಿಹರ ಮತ್ತು ರಾಘವಾಂಕ ಕವಿಗಳ ಜನ್ಮಸ್ಥಳವೂ ಇದು ಆಗಿರುವುದು. ಅವರು ರಚಿಸಿದ ಕೃತಿಗಳು ಇತಿಹಾಸದಂತೆ ನೈಜ ಮಾಹಿತಿಯನ್ನು ನೀಡಿವೆ. ಹರಿಹರ ನನ್ನು ವಾಸ್ತವಿಕ ಕವಿ ಎಂದು ೧೬ನೇ ಶತಮಾನದಲ್ಲಿದ್ದ ನಂಜುಂಡ ಕವಿಯು ಹೊಗಳಿದ್ದಾನೆ.

ರಗಳೆಯ ಕವಿ ಎಂದು
ತೆಗಳೆವಾದಿಗಳೆಲ್ಲ
ವಸ್ತುಕವಿ ಹರಿಯಣ್ಣ
ನೊಲುಮೆ ಎನ್ನಗಿರಲಿ

ಈತನು ರಗಳೆಗಳ ರೂಪದಲ್ಲಿ ಪ್ರಥಮವಾಗಿ ಪುರಾತನ ಶಿವಶರಣರು ಹಾಗೂ ಬಸವಾದಿ ಪ್ರಮಥರ ಇತಿಹಾಸವನ್ನು ರಚಿಸಿರುವ ಮಹತ್ವ ಪೂರ್ಣ ಹಾಗೂ ಸರಳವಾದ ಭಾಷಾ ಶೈಲಿಯೂ ಸಾಮಾನ್ಯ ಜನರು ಅರ್ಥೈಸಬಹುದಾದ್ದರಿಂದ ಈತನಿಗೆ "ಸರಳ ಕವಿ" ಎಂದು ಇನ್ನೊಂದು ಹೆಸರಿನಿಂದಲೂ ಕರೆಯುತ್ತಿದ್ದರು. ಈ ವಿಷಯಕ್ಕೆ ಸಂಬಂಧಿಸಿದಂತೆ ಸಾಹಿತ್ಯಕವಾಗಿ ಶರಣರ ಮಹತ್ವವನ್ನು ರಗಳೆಗಳಿಂದಲೇ ಪ್ರಥಮವಾಗಿ ಬರಹರೂಪದಲ್ಲಿ ಲಭ್ಯವಾದವುಗಳು. ಶಾಸನಗಳಲ್ಲಿ ಉಲ್ಲೇಖಗೊಂಡಂತೆ, ವಿಜಯ ನಗರ ಸಾಮ್ರಾಜ್ಯದ ಸ್ಥಾಪನೆಗಿಂತ ಸ್ವಲ್ಪ ಮೊದಲು ಹಂಪೆಯ ಪರಿಸರವನ್ನು ಸಂರಕ್ಷಿಸಿದ ಸಿಂಗೆಯ ನಾಯಕ, ಕಂಪಿಲರಾಯ ಮತ್ತು ಕುಮಾರರಾಮನಾಥರು, ಪ್ರಮುಖರೆನಿಸಿದ್ದು ಇವರು ದೇವಗಿರಿಯ ಸೇವುಣ ವಂಶದ ಅರಸು ರಾಮಚಂದ್ರ ಮಹಾರಾಯರ ಸಾಮಂತರಾಗಿದ್ದರು. ಪ್ರಥಮ ಬಾರಿಗೆ ಶಾಸನಗಳಲ್ಲಿ ಶಿವಶರಣರ ವೀರಣ್ಣೊಡೆಯರ ಮಟ, ಮಹಾಲಿಂಗ ವೊಡೆಯರ ಮಟ, ಪರಮೇಶ್ವರ ಮಟ,

ಹೀಗೆ ಅನೇಕ ಮಟಗಳು ಮತ್ತು ಶಿವರಶರಣರನ್ನು ಉಲ್ಲೇಖಿಸುವ ಶಾಸನಗಳು, ಮಟ ಮಂಟಪಗಳು ಇದ್ದು, ಆಂದಿನಕಾಲದ ಮಠಗಳ ಗತ ಇತಿಹಾಸದ ಮೇಲೆ ನೈಜ ಬೆಳಕನ್ನು ಚೆಲ್ಲುತ್ತವೆ.

ಗುರು ಗುಹೇಶ್ವರನ ಆಶ್ರಮ, ಸಂಗನ ಬಸವ ಸಂಗಮೇಶ್ವರ ದೇವರು, ಅಕ್ಕ ಮಹಾದೇವಿಯರ ಬಾವಿ, ಶ್ರೀಶೈಲ ಮಲ್ಲಿಕಾರ್ಜುನ, ಸಿದ್ದರಾಮ ವೊಡೆಯ, ಬೊಮ್ಮದೇವರ ಗವಿ, ಸಿವಯೋಗಿ ದೇವರಗವಿ, ರೇವಣ ಸಿದ್ದ ದೇವರ ಪಾದ, ಸೋಮಯ ದೇವರು ಪಂಡಿತಾ ರಾದ್ಯ ಅರಸರು, ಮರುಳ ಸಿದ್ದ ದೇವರು, ಚೆನ್ನ ಮಲ್ಲಮ್ಮ, ಗೋರಕನಾಥ' ಬಸವರಾಜದೇವರು, ಗುರುಬಸವರು ಗುಂಡ ಬೊಮ್ಮಯ್ಯರು, ಶಂಕರ ದಾಶಿಮಯ್ಯ ಮಡಿವಾಳ ಮಾಚಯ್ಯ ಹೀಗೆ ಹಂಪೆಯ ಶಾಸನಗಳಲ್ಲಿ ಶಿವಶರಣರ ಉಲ್ಲೇಖಗಳಿರುವುದರ ಸೂಕ್ಮತೆಯನ್ನು ಶಾಸನ ಮತ್ತು ಮಟಗಳಿಂದ ಅರಿಯಬಹುದಾಗಿದೆ. ಸಾಹಿತ್ಯಿಕ ಗ್ರಂಥಗಳಲ್ಲಿ ಸಾಕಷ್ಟು ಮಾಹಿತಿ ಈ ಕುರಿತಾಗಿ ಲಭ್ಯವಿದ್ದರೂ ಶಿಲಾಶಾಸನಗಳಲ್ಲಿ ದೊರೆಯುವುದು ವಿರಳ. ಆದರೂ ಈ ಮೇಲಿನ ಅಂಶಗಳನ್ನು ಕುರಿತು, ಈ ದಿಶೆಯಲ್ಲಿ ಪ್ರಯತ್ನ ಮಾಡಲಾಗಿದೆ.

ಬಸವಾದಿ ಪ್ರಮಥರಂತೆ, ಕಾಳಾಮುಖಶೈವ ಆಚರಣೆ ಯತಿಗಳು ಇರುವುದು ಮುಖ್ಯವಾದ ಅಂಶ. ಕಾಳಾ ಮುಖ ಪಂಥದ ಚತುರಾಚಾರ್ಯರ ಹೆಸರುಗಳನ್ನು ಉಲ್ಲೇಖಿಸುವ ಶಾಸನಗಳೂ ಇರುವವು. ಅವುಗಳಲ್ಲಿ ಪ್ರಮುಖರಾದವರು ರೇವಣ ಸಿದ್ದರು, ಸೋಮನಾಥದೇವರು, ಮರುಳಸಿದ್ದ ಮಲ್ಲಿಕಾರ್ಜುನ, ಪಂಡತಾರಾದ್ಯರು. ಹೀಗೆ ವೀರಶೈವ ಪಂಥ ಬೆಳೆದು ಬಂದ ರೀತಿಯನ್ನು ಬಸವೇಶ್ವರರಿಗೆ ದೀಕ್ಷೆಯನ್ನು ನೀಡಿದವರು ಕಾಳಾಮುಖ ಶೈವ ಪಂಥದ ಜಾತವೇದ ಮುನಿಗಳು ಆಗಿರುವರು. ಇವರನ್ನು ಶಾಸನಗಳಲ್ಲಿ ಉಲ್ಲೇಖಿಸಿದ ಕೀರ್ತಿ ಇವರಿಗೆ ಸಲ್ಲುವುದು. ಕಲ್ಲೇದೇವರಪುರ ಹಾಗೂ ಮರಡಿಪುರದ ಶಾಸನಗಳಲ್ಲಿ ಬಸವಾದಿ ಪ್ರಮಥರ ಹೆಸರುಗಳಿವೆ. ಈ ಅಂಶವನ್ನು ದಿವಂಗತ ಗೋವಿಂದ ಪೈ ಅವರು; ಹುಲ್ಲೂರು ಶ್ರಿನಿವಾಸ ಜೋಯಿಸ್ ರವರು ತಮ್ಮ ಉಪನ್ಯಾಸದ ಮಾಲಿಕೆಗಳಲ್ಲಿ ಪ್ರಕಟಿಸಿರುವರು. ಇದರಿಂದ ಕ್ರಿ.ಶ. ೧೨ನೇ ಶತಮಾನದಲ್ಲಿ ನಡೆದ ಸಾಮಾಜಿಕ ಚಟುವಟಿಕೆಗಳು ಹಾಗೂ ಶಿವಶರಣರ ವಚನಾಮೃತದ ಸಾರವು ಮುಂದಿನ ರಾಜಕೀಯ, ಸಾಮಾಜಿಕ, ಧಾರ್ಮಿಕ ಬೆಳವಣಿಗೆಗೆ ಮಾರ್ಗ ದರ್ಶನವಾಯಿತು. ಕಂಪಿಲರಾಯನು ಶಾಸನದಲ್ಲಿ ತನ್ನನ್ನು 'ಶ್ರೀ ಸಂಗಮೇಶ್ವರ ದೇವರ ದಿವ್ಯ ಪಾದ ಪದ್ಮಾರಾಧಕ' ನೆಂದು ನೆನೆದುದನ್ನು ಗಮನಿಸಿದರೆ ಇವರು ಬಸವಾದಿ ಪ್ರಮಥರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಡೆದು ನಾಡಿನ ಸೇವೆಗಾಗಿ ತಮ್ಮ ಅಮೂಲ್ಯ ಜೀವನವನ್ನು ಮುಡುಪಾಗಿಸಿದ್ದರೆಂಬ ಅಂಶ ವ್ಯಕ್ತವಾಗುತ್ತದೆ. ಈತನನ್ನು ಸಂಗಮೇಶ್ವರನೆಂಬ ಹೆಸರಿನಿಂದ ಕರೆಯುತ್ತಿದ್ದುದನ್ನು ಅರುವನಹಳ್ಳಿಯ ಶಾಸನ ಪುಷ್ಠೀಕರಿಸುತ್ತದೆ. ಹಂಪೆಯ ಪರಿಸರದ ಶಾಸನಗಳಲ್ಲಿ ಉಲ್ಲೇಖಿಸಲಾಗಿರುವ ಶಿವಶರಣರನ್ನು ಇಲ್ಲಿ ವಿವೇಚಿಸಲಾಗಿದೆ.

೧. ಅಲ್ಲಮಪ್ರಭುವಿನ ಆಶ್ರಮ

ಶ್ರೀಗುರುಗುಹೇಶ್ವರಾಶ್ರಮ ವೀ ಗುರುಗಿರಿ ಯಿದ ರೋಳಿರ್ಪ ದೈವದ್ಯಾನೋದ್ಯೋಗ ದೊಳಿದರ್ಪ್ಪಗ್ಗೈದುವ ವಾಗಳ್ದ ಮಾರ್ಥ ಕಾಮ ಮೋಕ್ಷ ಫಲುಂಗಳ್ ಎಂದಿದೆ. ಇದರಿಂದ ಈ ಸ್ಥಳವೇ ಅಲ್ಲಮ ಪ್ರಭುವಿನ ಆಶ್ರಮವೆಂದು ಆರ್ಥೈಸ ಬಹುದಾಗಿದೆ. ಗುಹೆಯಲ್ಲಿ (ವಿಪಿಆರ್ ೧೯೮೩-೮೪. ನಂ ೩೧) ಮೂರು ಲಿಂಗಗಳು ಇರುವುವು, ಸಮೀಪದಲ್ಲಿ ವೀರಭದ್ರ ದೇವಾಲಯ ವಿದ್ದು ವೀರಭದ್ರ ಮತ್ತು ನಂದಿ ಶಿಲ್ಪಗಳಿವೆ.

೨. ಸಂಗನ ಬಸವ

ಗುರುಗುಹೇಶ್ವರನ ಆಶ್ರಮದ ಉತ್ತರಕ್ಕೆ ಸ್ವಲ್ಪಕೆಳಭಾಗದಲ್ಲಿ ಹುಟ್ಟುಗುಂಡಿನ ಮೇಲೆ ಶ್ರೀಸಂಗನ ಬಸವ ಎಂಬ ಶಾಸನವಿದೆ. ಶಾಸನದ ಬಳಿ ಲಿಂಗ ಮತ್ತು ನಂದಿ ಶಿಲ್ಪಗಳಿರುವುವು. ವಿಪಿಆರ್. ೧೯೮೩--೮೪ ನಂ ೩೧, ವಿ.ಶಾ. ೧೯೯೬. ನಂ ೨೯೯.

೩. ಶ್ರೀ ಸಂಗಮೇಶ್ವರ ದೇವರು

ಶ್ರೀಸಂಗನ ಬಸವ ಶಾಸನದ ಗುಂಡಿನ ಪೂರ್ವಭಾಗದಲ್ಲಿ ಶ್ರೀ ಸಂಗಮೇಶ್ವರ ದೇವರು ಎಂಬ ಶಾಸನದ ಉಲ್ಲೇಖದ ಜೊತೆಗೆ ಲಿಂಗದ ಮೇಲೆ ಲಿಂಗವಿರುವ ಶಿಲ್ಪ ಮತ್ತು ನಂದಿಯ ಶಿಲ್ಪಗಳಿವೆ. ಇವುಗಳನ್ನು ಈ ರೀತಿಯಲ್ಲಿ ಲಿಂಗದ ಮೇಲೆ ಲಿಂಗ ವಿದ್ದರೆ ಯೋಗಾಂಗ ಲಿಂಗವೆಂದು ತಜ್ಞರು ಅಭಿಪ್ರಾಯಪಡುತ್ತಾರೆ.

ವಿಜಯನಗರ ಅಧ್ಯಯನ ೨೦೦೧ ಸಂಖ್ಯೆ ೬. ಉದ್ದಾನ ವೀರಭದ್ರ (ಮುದು ವೀರಭದ್ರ) ದೇವಾಲಯದ ದೀಪಸ್ತಂಭದ ಮೇಲೆ ಈ ರೀತಿಯ ಯೋಗಾಂಗ ಲಿಂಗ ವಿರುವುದನ್ನು ಶ್ರೀ ಸಿ ಟಿ.ಎಂ ಕೊಟ್ರಯ್ಯ ಇವರು, ಯೋಗಾಂಗ ಲಿಂಗವೆಂದು ಗುರುತಿಸಿದ್ದಾರೆ.

ಸಿ ಟಿ.ಎಂ. ಕೊಟ್ರಯ್ಯ, ವಿಜಯನಗರ ಅಧ್ಯಯನ-೧ ೧೯೯೬.

೪. ಶ್ರೀ ಸಿದ್ದರಾಮ ವೊಡೆಯ

ಮತಂಗ ಪರ್ವತದ ದಕ್ಷಿಣ ದಿಕ್ಕಿನ ದಾರಿಯ ಬಳಿ ಇರುವ ಮಲ್ಲಿಕಾರ್ಜುನ ದೇವಾಲಯದಲ್ಲಿರುವ ಶಾಸನದಲ್ಲಿ ಶ್ರೀ ಸಿದ್ದರಾಮ ವೊಡೆಯರ ಉಲ್ಲೇಖವಿದೆ.

ವಿಪಿಆರ್.೧೯೮೩-೮೪.

೫. ಅಕ್ಕಮಹಾದೇವಿಯವರ ಬಾವಿ

ಹಂಪೆಯ ಶ್ರಿ ವಿರೂಪಾಕ್ಷ ದೇವಾಲಯದ ತೇರು ಬೀದಿಯ ಪೂರ್ವ ದಕ್ಕಿನಲ್ಲಿ ಮತಂಗ ಪರ್ವತಕ್ಕೆ ಹೋಗುವಾಗ ದಾರಿ ಪೂರ್ವಕ್ಕೆ ಇರುವ ಗುಹಾಬಾವಿಯಲ್ಲಿ ಗುಂಡಿನ ಮೇಲೆ ಶಿವಶರಣ "ಅಕ್ಕ ಮಹಾದೇವಿಯರ ಬಾವಿ" ಎಂದು ಉಲ್ಲೇಖವಿದೆ. ಈ ಶಾಸನದಲ್ಲಿ ಅಕ್ಕಮಹಾದೇವಿಯರ ಬಾವಿ, ಗುಂಡಿನ ಕೆಳಭಾಗದಲ್ಲಿ ಬಾವಿ ಮುಂದಿದ್ದು ಇದನ್ನು ಕೆಳಬಾವಿ ಎಂದು ಕರೆಯಲಾಗಿದೆ.

ವಿಪಿಆರ್, ನಂ ೨೪೪.

೬. ಬೊಮ್ಮದೇವರ ಗವಿ

ಕೋಟಿ ತೀರ್ಥದ (ಕೋಟಿಲಿಂಗ) ಎಡದಂಡೆಯಲ್ಲಿ ಗವಿಯೊಂದಿದ್ದು ಈ ಗವಿಯ ಗುಂಡಿನ ಮೇಲೆ ಶ್ರೀ ಬೊಮ್ಮದೇವರಗವಿ ಎಂದು ಶಾಸನವಿದೆ. ಗುಂಡು ಬೊಮ್ಮಯರ ಸ್ಮಾರಕವಾಗಿ ಈ ಶಾಸನವನ್ನು ನಿರ್ಮಾಣ ಮಾಡಿರಬಹುದಾಗಿದೆ.

ವಿಪಿಆರ್ ೧೯೮೪-೮೭ ನಂ ೩೯.

೭. ಶ್ರೀ ಶಿವಯೋಗಿದೇವರ ಗವಿ

ಕಮಲಾಪುರದ ಗಾಣಗಿತ್ತಿ ಜಿನಾಲಯದ ಪೂರ್ವ ದಿಕ್ಕಿನಲ್ಲಿರುವ ಚಿಕ್ಕ ಬೆಟ್ಟದ ಮೇಲೆ ಪ್ರಾಕೃತಿಕವಾಗಿ ನಿರ್ಮಿತವಾದ ಗವಿಯೊಂದಿದ್ದು ಗವಿಯ ಮುಂಭಾಗದಲ್ಲಿ ಶ್ರೀಶಿವಯೊಗಿ ದೇವರಗವಿ ಎಂದು ಶಾಸನವಿದೆ. ಬಸವಾದಿ ಪ್ರಮಥರಲ್ಲಿದ್ದ ರೇವಣ ಸಿದ್ದ ದೇವರನ್ನು ಶ್ರೀ ಶಿವಯೋಗಿ ಎಂಬ ನಾಮದಿಂದ ಹರಿಹರ ಕವಿ ತನ್ನ ರೇವಣಸಿದ್ದ ರಗಳೆಯಲ್ಲಿ ಉಲ್ಲೇಖಿಸಿದ್ದಾನೆ.

ವಿಪಿಆರ್. ೧೯೮೩-೮೪ ನಂ. ೫೪, ವಿಶಾ. ೧೯೯೬ ನಂ ३೮४.

೮. ಶ್ರೀರೇವಣಸಿದ್ದ ದೇವರ ಪಾದ ಮತ್ತು ಸೋಮಯ ದೇವರು

ಶ್ರೀಶಿವಯೋಗಿ ದೇವರಗವಿ ಸಮೀಪದಲ್ಲಿರುವ ಎತ್ತರವಾದ ಗುಂಡಿನ ಮೇಲೆ ಶ್ರೀ ರೇವಣಸಿದ್ದ ದೇವರ ಪಾದ ಬೈರವ ದೇವರ ಪ್ರತಿಷ್ಠೆ ಎಂದಿರುವ ಶಾಸನ ಹಾಗೂ ಚಿಕ್ಕ ಗುಡಿಯೊಂದಿದೆ. ಈ ಶಾಸನದ ಈಶಾನ್ಯ ದಿಕ್ಕಿನಲ್ಲಿ ಸೋಮಯ್ಯ ದೇವರು ಎಂಬ ಶಾಸನ ಹಾಗೂ ಎರಡು ಲಿಂಗಗಳಿವೆ. ಈ ಸ್ಥಳದ ಬಳಿ ಪಶ್ಚಿಮಕ್ಕೆ ಇರುವ ದೇವಾಲಯಬ ಗರ್ಭಗುಡಿಯಲ್ಲಿ ವೀರಭದ್ರದೇವರ ಶಿಲ್ಪವಿದ್ದು ಶಿಲ್ಪದ ಕೆಳ ಭಾಗದಲ್ಲಿ ಗಡ್ಡದಾರಿಯಾದ ವ್ಯಕ್ತಿ ಹಾಗೂ ಪುತ್ರನ ಶಿಲ್ಪವೂ ಇರುವುದು. ಇದು ಶ್ರೀಗುರು ರೇವಣಸಿದ್ದರು ಹಾಗೂ ಅವರ ಮಗ ರುದ್ರಮುನಿ ದೇವರಶಿಲ್ಪಗಳಿರಬಹುದಾಗಿದೆ. ಈ ಪರಿಸರದಲ್ಲಿ ಶಾಸನಗಳು ಹಾಗೂ ಸ್ಮಾರಕಗಳ ಆಧಾರದ ಮೇಲೆ ನಿರ್ಧರಿಸಬಹುದು.

ವಿಪಿಆರ್, ೧೯೮೪-೮೭ ನಂ ೧೧೧, ೧೧೨, ವಿ.ಶಾ ೧೯೯೬, ನಂ ३೮೮.

೯. ಶ್ರೀಮರುಳ ಸಿದ್ಧ ದೇವರು

ಹಂಪೆಯ ತೇರುಬೀದಿಯ ಪೂರ್ವದಲ್ಲಿರುವ ಎದುರು ಬಸವಣ್ಣನ ದೇವಾಲಯದ ಹಿಂಬದಿಯಲ್ಲಿರುವ ಗುಹೆಯಲ್ಲಿ ಶ್ರೀಮರುಳು ಸಿದ್ದ ದೇವರನ್ನು ಉಲ್ಲೇಖಿಸುವ ಶಾಸನವಿದೆ. ಶಾಸನ ಮತ್ತು ಶಿವಲಿಂಗವನ್ನು ಕೆಮ್ಮಣ್ಣಿನಿಂದ ಬರೆಯಲಾಗಿದೆ. (ವಿಜಯನಗರ ಅಧ್ಯಯನ : ನಂ.೬, ಸಂಖ್ಯೆ ೬, ೨೦೦೨.)

೧೦. ಶ್ರೀಶೈಲಲಿಂಗ ಹಾಗೂ ಚೆಂಚರ ಮಲ್ಲಿಕಾರ್ಜುನ

ಈ ಶಾಸನ ಹಂಪೆಯ ಪಶ್ಚಿಮ ದಿಕ್ಕಿನಲ್ಲಿರುವ ಕಡೆರಾಮಾಪುರದ ಬಳಿಯ ಬೆಟ್ಟದ ಮೇಲಿದೆ. ಈ ಬೆಟ್ಟವನ್ನು ನೆಳಲ ಹುಣಸೆಯಗಿರಿ ಎಂದು ಶಾಸನ ಉಲ್ಲೇಖ ವಿದೆ. ಮೂಲತಃ ಈ ಪರಿಸರದಲ್ಲಿ (ಅಗ್ರಹಾರ) ವಿದ್ಯಾಕೇಂದ್ರವು ಇತ್ತು. ಇಲ್ಲಿ ಗುಹೆಯೊಳಗೆ ಇರುವ ಶಾಸನದಲ್ಲಿ ಪಾತಾಳ ಗಂಗೆ ಗೌರಿಯಗಂಡ ಶ್ರೀಶೈಲಲಿಂಗನು ಗಂಟೆಯ ಜಂಗಮ ಬೈರವ ಮೂರ್ತಿ ಅಯ್ಯನಕನಸಿನ (ಸ್ವಪ್ನ) ಲ್ಲಿ ಗಂಟೆಯ ಬೇಂಟೆಯನಾಕನಾಗಿ ಬಂದು ಈ ಕ್ಷೇತ್ರವನ್ನು ರಚಿಸಲು ಹೇಳಿದನೆಂದಿದೆ. ಹಾಗೂ ಚೆಂಚರ ಮಲ್ಲಿಕಾರ್ಜುನ ಶಾಸನ ಉಲ್ಲೇಖಿಸುವಂತೆ, ಮೃಗ ಪುರುಷನ ಶಿಲ್ಪ ಹಾಗೂ ಶಿವಲಿಂಗ ವಿದೆ. ಇಲ್ಲಿ ಶ್ರೀ ಶೈಲ ಮಲ್ಲಿಕಾರ್ಜುನವೆಂಬ ಅಂಕಿತವನ್ನು ಶರಣೆ ಅಕ್ಕಮಹಾದೇವಿಯವರು ತಮ್ಮ ವಚನದಲ್ಲಿ ಬಳಸಿರುವುದನ್ನು ತಿಳಿಯಬಹುದಾಗಿದೆ.

ವಿಪಿಆರ್ ೧೯೮೪-೮೭ ನಂ.೧೪೭, ೧೪೮, ವಿಶಾ ೧೯೯೬ ನಂ ೧೬೭, ೧೬೮. ಕವಿ ಶಾಸಂ ನಂ. ೨೩೨, ೨೩೩.

೧೧. ಚೆನ್ನಮಲ್ಲಮ್ಮ

ಮಾಲ್ಯವಂತ ಪರ್ವತದ ಈ ಶಾನ್ಯದಿಕ್ಕಿನಲ್ಲಿರುವ ಈ ಶಾಸನ ಚನಮಲಮ ಎಂಬುವರನ್ನು ಉಲ್ಲೇಖಿಸುವುದು. ಈ ಶಾಸನದ ಬದಿಗಳಲ್ಲಿ ಶಿವಲಿಂಗ ಹಾಗು ನಂದಿ ಶಿಲ್ಪಗಳಿವೆ. ಇವರೂ ಒಬ್ಬ ಶಿವಶರಣರಾಗಿರುವ ಸಾಧ್ಯತೆಗಳಿವೆ.

ವಿಪಿಆರ್.೧೯೮೪-೮೭ ನಂ. ೧೩೬.

ವಿಸಾ ೧೯೯೬ ನಂ. ೩೬, ಕವಿಶಾನಂ. ೩೬೪.

೧೨. ಮಡಿವಾಳ ಮಾಚಯ್ಯ

ಶಿವಶರಣ ಮಡಿವಾಳ ಮಾಚಯ್ಯನ ಹೆಸರನ್ನು ಉಲ್ಲೇಖಿಸುವ ಶಾಸನ ಹೇಮಕೂಟ ಪರ್ವತದಲ್ಲಿದ್ದು, ಈತನನ್ನು ಹಂಪೆಯ ಅಸಗರ ಮಾಂಚಯ್ಯನೆಂಬ ಹೆಸರಿನಿಂದ ಕರೆಯಲಾಗಿದೆ.

ವಿಪಿಆರ್ ೧೯೮೪-೮೭ ನಂ ೨೮,

ವಿಶಾ ೧೯೯೬ ನಂ.೨೧೮., ಕವಿಶಾಸಂ ನಂ ೬೪.

ಗೋರಕನಾಥ ಸಂತನಾಥ ಸಿದ್ದನಾಥ ಮತ್ತು ಆನಂದ ಸಿದ್ದ ದೇವ

ಗೋರಕ್ಷನು ಬಸವಾದಿ ಪ್ರಮಥರಲ್ಲಿ ಒಬ್ಬನಾಗಿದ್ದು ಅಲ್ಲಮ ಪ್ರಭುವಿನೊಡನೆ ಸಂವಾದ ಮಾಡಿ ಜ್ಞಾನ ದೀಕ್ಷೆಯನ್ನು ಪಡೆದವನು. ಈತನ ಹೆಸರು ಹಾಗೂ ವಾಸಿಸುತ್ತಿದ್ದ ಗುಹೆಯು ಆನೆಗೊಂದಿಯ ಪಶ್ಚಿಮ ದಿಕ್ಕಿನಲ್ಲಿರುವ ಕಲ್ಲಗಸೆಯ ಬಳಿ ಇರುವುದು. ಸಿದ್ದನಾಥನ (ಆನಂದಸಿದ್ದ) ಭಕ್ತಿಗೆ ಮೆಚ್ಚಿ ಶಿವನು ಈತನಿದ್ದಲ್ಲಿಗೆ ನಿತ್ಯವು ಬಂದು ಪೂಜೆಗೊಳ್ಳುತ್ತಿದ್ದನೆಂಬ ಅಂಶ ಇಲ್ಲಿರುವ ಶಾಸನದಲ್ಲಿ ಉಕ್ತವಾಗಿದೆ.

ನಾಥ ಸಂಪ್ರದಾಯದ ಕೇಂದ್ರಗಳು ಹಂಪೆಯ ಪರಿಸರದಲ್ಲಿಯೂ ಇದ್ದವು.

ವಿಪಿಆರ್ ೧೯೮೪-೮೭, ನಂ ೧೭೫, ವಿಶಾ ೧೯೯೬ ನಂ ೧೬.

ವಿಜಯನಗರ ಅಧ್ಯಯನ. ಸಂಪುಟ ೭, ೨೦೦೨ ನಾಥ ಸಂಪ್ರದಾಯ.

ಬಸವರಾಜ ದೇವರು

ಹಜಾರ ರಾಮ ದೇವಾಲಯದ ಮುಂದೆ ಇರುವ ಚಿಕ್ಕ ದೇವಾಲಯದಲ್ಲಿರುವ ಕಪ್ಪುಕಲ್ಲಿನ ನಂದಿ ವಿಗ್ರಹದ ಪೀಠದ ಮೇಲಿರುವ ಶಾಸನದಲ್ಲಿ ಬಸವರಾಜ ದೇವರ ಉಲ್ಲೇಖವಿದೆ. ಸಂಕಜೀಯನ ಮಗ ಲಖ್ಖಿದೇವಣ್ಣ ಬಸವರಾಜ ದೇವರ ಪ್ರತಿಷ್ಠೆಯನ್ನು ಮಾಡಿಸಿದರೆಂದಿದೆ. ಈ ಶಾಸನ ಕ್ರಿ.ಶ. ೧೨ನೇ ಶತಮಾನದ ಕೊನೆಯ ಭಾಗಕ್ಕೆ ಸೇರಿದುದಾಗಿದೆ. ಬಸವೇಶ್ವರನ ನೆನಪಿಗಾಗಿ ಈ ಬಸಣ್ಣನ ವಿಗ್ರಹವನ್ನು ಸ್ಥಾಪಿಸಿರಬಹುದಾಗಿದೆ.

ವಿಶಾಸಂ-೨೭೬.

ಗುಂಡಬೊಮ್ಮಯ್ಯರು

ಆನೆಗೊಂದಿಯಲ್ಲಿ ದೊರೆತ ತಾಮ್ರ ಶಾಸನದಲ್ಲಿ ಗುಂಡ ಬೊಮ್ಮಯರು ರಚಿಸಿದ, ಅಮೃತ ಮಥನ, ಕಾಮದಹನ ಹಾಗೂ ಗಿರಿಜಾ ಕಲ್ಯಾಣವೆಂಬ ಸಮಯ ಪುರಾಣಗಳಿವೆ. ಆದರೂ ಇವರು ತಮ್ಮನ್ನು ಕುಲಹೀನರೆಂದು ಕರೆದುಕೊಂಡಿದ್ದಾರೆ. ಇವರ ಶಿಲ್ಪಗಳು ಬುಕ್ಕಸಾಗರದ ವೀರಭದ್ರ ದೇವಾಲಯ ಹಾಗೂ ಬಳ್ಳಾರಿಯ ಕೋಟೆ ಮಲ್ಲೇಶ್ವರ ದೇವಾಲಯಗಳಲ್ಲಿವೆ.

ವಿಪಿಆರ್ ೧೯೮೭-೮೮.

ಶಂಕರ ದಾಸಿಮಯ್ಯ

ಶಂಕರದಾಸಿಮಯ್ಯನ ದೇವರ ಜೆಡೆಯ ಶಂಕರರ ಹೆಸರಿನಲ್ಲಿರುವ ದೇವಾಲಯ ಹಾಗೂ ಕೋಟೆಯ ಬಾಗಿಲಿಗೆ ಈ ದೇವರ ಹೆಸರನ್ನು ಸೂಚಿಸಲಾಗಿದೆ. ಕೊಪ್ಪಳ ಜಿಲ್ಲೆಯ ನವಿಲೆ ಗ್ರಾಮದಲ್ಲಿಯೂ ಜೆಡೆಯಶಂಕರ ದೇವಾಲಯವಿದೆ.

AR No. 501, 1907, SII XXII No 501.

ವಿಶಾ. ೨೦೯. ಕವಿಶಾಸಂ. ೫೭.ವಿಜಯನಗರ ಅಧ್ಯಯನ ೨೦೦೨.

ಪಂಡಿತಾರಾಧ್ಯರಸರು :

ಪಂಡಿತಾರಾಧ್ಯ ಅರಸರು ರೇವಣ್ಣಸಿದ್ದದೇವರ ಶಾಸನದ ಪೂರ್ವ ದಿಕ್ಕಿನಲ್ಲಿ, ಮಾಲ್ಯವಂತ ಪರ್ವತದ ದಕ್ಷಿಣ ದಿಕ್ಕಿನಲ್ಲಿರುವ ಬೆಟ್ಟದ ಮೇಲೆ ಇರುವ ಮಂಟಪದ ಗುಂಡಿನ ಮೇಲಿನ ಶಾಸನದಲ್ಲಿ ಪಂಡಿತಾರಾಧ್ಯರ ಹೆಸರು ಉಲ್ಲೇಖಿತವಾಗಿದೆ. ಇವರನ್ನು ಸದಾಶಿವ ಮಹಾಯೋಗಿ ಎಂದು ಕರೆಯಲಾಗಿದೆ. ಇವರು ಕಾಳಾಮುಖ ಶೈವ ಪಂಥದಯತಿಗಳು.

ಎಪಿಆರ್ ೧೯೮೩-೮೪, ನಂ ೫೫., ಕವಿಶಾಸಂ. ನಂ ೩೬೩. ವಿಶಾ.ನಂ ೩೬.

ಗುರುಬಸವರು

ಈ ಶಾಸನ ಕಮಲಮಹಲಿನ ಉತ್ತರ ದಿಕ್ಕಿನಲ್ಲಿರುವ ಮದನ ಕೊತ್ತಳ ಮಂಟಪದ ಕೆಳಭಾಗದಲ್ಲಿದೆ. ಶ್ರೀಗುರುಬಸವರು ಎಂದು ಉಲ್ಲೇಖವಿದೆ. ಬಸವರಾಜದೇವ, ಗುರುಬಸವ, ಬಸವಣ್ಣವೊಡೆಯ ಎಂಬ ಶಾಸನಗಳು ಈ ಪರಿಸರದಲ್ಲಿದೆ.

ನಿರಾಸಿಮಟ

ನಿರಾಸಿಮಟವನ್ನು ಉಲ್ಲೇಖಿಸುವ ಮೂರು ಶಾಸನಗಳು ಈ ಪರಿಸರದಲ್ಲಿವೆ. ನಿರಾಸಿಮಟವು ಮೂಲತಃ ಓರಂಗಲ್ಲಿನ ಬಳಿ ಪಶ್ಚಿಮಕ್ಕೆ ಇರುವ ಮಠ. ಈ ಮಠವು ಗುಂಡ ಬೊಮ್ಮಯ್ಯರಕಾಲದಲ್ಲಿ ಸ್ಥಾಪಿತವಾದದ್ದೆಂದು ಪ್ರತೀತಿ ಇದೆ. ಕುಮಾರ ರಾಮನಾಥನು ದಿವ್ಯಾಶ್ವವನ್ನು ಪಡೆಯಲು ಓರಂಗಲ್ಲಿಗೆ ಹೋದ ಸಮಯದಲ್ಲಿ ಒಂದು ರಾತ್ರಿಯನ್ನು ಈ ನಿರಾಸಿ ಮಠದಲ್ಲಿ ಕಳೆದನೆಂದು ತನ್ನ ಸ್ವಪ್ನದಲ್ಲಿ ಗುಂಡ ಬೊಮ್ಮಯರು ಬಂದು ಆಶೀರ್ವದಿಸಿದರೆಂದು ರಾಮನಾಥ ಚರಿತದಲ್ಲಿ ಉಲ್ಲೇಖಿಸಲ್ಪಟ್ಟಿದೆ. ವಿಜಯನಗರ ಕಾಲದಲ್ಲಿ ನಿರಾಸಿಮಠದ ಅಧ್ಯಕ್ಷರಾಗಿದ್ದ ನಂಜೆಯದೇವರಿಗೆ ದಾನದತ್ತಿಗಳನ್ನು ನೀಡಲಾಗಿದೆ.

ವಿಪಿಆರ್. ೧೯೮೪ ೮೭ ನಂ.೯೮. ಕವಿವಿ ಶಾ.ಸಂ.೩೪೨, ವಿಶಾ ಸಂ. ೨೭೬.

ವಿಜಯನಗರ ಅಧ್ಯಯನ ಸಂ.೬. ೨೦೦೧.

ಬಸವರಾಜದೇವರ ಮಠ

ತಳವಾರ ಘಟ್ಟದ ಬಳಿಯಲ್ಲಿರುವ ಮಂಟಪ, ಬಸವಣ್ಣನ ದೇವಾಲಯದ ಮುಂದಿರದ ಶಾಸನವು ಬಸವರಾಜ ದೇವರ ಹೆಸರಿನಲ್ಲಿರುವ ಮಠವನ್ನು ಉಲ್ಲೇಖಿಸುತ್ತದೆ.

ಗ್ರಂಥ ಋಣ

೧. ಕಲಬುರ್ಗಿ ಎಂ.ಎಂ., ೧೯೯೯ ಹರಿಹರನ ರಗಳೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪೆ.

೨. ದೇವೀರಪ್ಪ ಹೆಚ್. ನಂಜುಂಡ ಕವಿ ವಿರಚಿತ ರಾಮನಾಥ ಚರಿತೆ.

೩. ನಾಗರಾಜರಾವ್ ಎಂ.ಎಸ್. ೧೯೮೫, ವಿಜಯನಗರ ಪ್ರೋಗ್ರೆಸ್ ಆಫ್ ರೀಸರ್ಚ್ ೧೯೮೩-೮೪, ಡೈರಕ್ಟರೇಟ್ ಆಫ್ ಆರ್ಕಿಯಾಲಜಿ ಅಂಡ್ ಮ್ಯೂಜಿಯಂಸ್ ಮೈಸೂರು.

೪. ದೇವರಾಜ ಡಿ.ವಿ. ಚೆನ್ನಬಸಪ್ಪ ಎಸ್ ಪಾಟೀಲ ೧೯೯೧. ವಿಜಯನಗರ, ಪ್ರೋಗ್ರೆಸ್ ಆಫ್ ರಿಸರ್ಚ್ ೧೯೮೪-೮೭, ೧೯೮೭-೮೮.

೫. ಚೆನ್ನ ಬಸಪ್ಪ ಎಸ್. ಪಾಟೀಲ ಮತ್ತು ವಿನೋದ ಪಾಟೀಲ ೧೯೯೬, ವಿಜಯನಗರ ಶಾಸನಗಳು.

೬. ದೇವರ ಕೊಂಡಾರೆಡ್ಡಿ, ಭಟ್‌ಸೂರಿ ಕೆ.ಜಿ., ಕಲವೀರ ಮನ್ನಾಚಾರ್, ಪರಮಶಿವ ಮೂರ್ತಿ ಡಿ.ವಿ., ೨೦೦೦, ಹಂಪಿ ಶಾಸನಗಳು ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೩. ಕನ್ನಡ ವಿಶ್ವವಿದ್ಯಾಲಯ ಹಂಪೆ.

೭. ಸೌತ್ ಇಂಡಿಯನ್ ಇನ್ಸ್ ಕ್ರಿಪ್‌ಷನ್ಸ್.

೮. ಕೊಟ್ರಯ್ಯ ಸಿ ಟಿ.ಎಂ., ೧೯೯೬, ವಿಜಯನಗರ ಅಧ್ಯಯನ ಸಂಪುಟ-೧

೯. ಮಂಜುನಾಥಯ್ಯ ಟಿ.ಎಂ., ೨೦೦೧ರ ಹಂಪೆಯ ಪರಿಸರದಲ್ಲಿ ನವಶೋಧಿತ ಶಾಸನಗಳು, ವಿಜಯನಗರ ಅಧ್ಯಯನ ಸಂ-೬.

೧೦. ಬಸವಲಿಂಗ ಸೊಪ್ಪಿನ ಮಠ, ಕಾಳಾಮುಖ ಚತುರಾಚಾರ್ಯರು 'ಸಾಧನೆ', ಸಂಪುಟ-೨೪. ಸಂಚಿಕೆ ೩-೪, ೧೯೯೫, ಬೆಂಗಳೂರು ವಿಶ್ವವಿದ್ಯಾಲಯ ಪು. ೭೨-೭೮.

೧೧. ಹಂಪಿ ಶಾಸನೋಕ್ತ ವೀರಶೈವ ಮಠಗಳು

ಎಸ್.ಎಸ್. ಭಗವತಿ
ಎಚ್.ಎಸ್.ಮೇಲಿನಮನಿ

ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ವಿಶಿಷ್ಟಸ್ಥಾನ ಪಡೆದಿರುವ ಮಠಗಳ ಅರ್ಥದ ಬಗ್ಗೆ ಈಗಾಗಲೇ ಅನೇಕ ವ್ಯಾಖ್ಯಾನಗಳು ಪ್ರಕಟಗೊಂಡಿದ್ದು, ಛಾತ್ರಾದಿಗಳ ನಿಲಯವನ್ನು 'ಮಠ' ಎಂದು ಅಮರ ಸಿಂಹನ ಅಮರಕೋಶ[೧] ಹೇಳುತ್ತದೆ. 'ಛಾತ್ರ' ಎಂದರೆ ಶಿಷ್ಯ ಅಥವಾ ವಿದ್ಯಾರ್ಥಿ ಎಂದರ್ಥ. ಅಮರ ಸಿಂಹನ ಪ್ರಕಾರ ಛಾತ್ರಾದಿಗಳು ವಾಸಿಸುವ ನಿಲಯಗಳೇ ಮಠಗಳು. ಸಂಸ್ಕೃತ ಶಬ್ದಕೋಶದಲ್ಲಿ[೨] ಮಠಗಳೆಂದರೆ, ಸನ್ಯಾಸಿಗಳಾದವರು ಶಿಷ್ಯರಿಗೆ ಜ್ಞಾನಬೋಧೆ ಮಾಡುತ್ತಾ ವಾಸಿಸುವ ಸ್ಥಳಗಳೆಂದು ಹೇಳಿದೆ. (ರೆ.ಎಫ್.ಕಿಟಲ್ ಕನ್ನಡ ಇಂಗ್ಲಿಷ್ ನಿಘಂಟು[೩] ಮಠ ಎಂದರೆ A Residence of a Company of ascetics ಎಂದು ಹೇಳುತ್ತದೆ.) ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು[೪] ಮಠವನ್ನು ಧಾರ್ಮಿಕ ಬೋಧನೆ, ಪ್ರಸಾರ ಹಾಗೂ ವಿದ್ಯೆಯ ಬೋಧನೆ, ಪ್ರಸಾರಗಳನ್ನು ನಡೆಸುವ ಆಧ್ಯಾತ್ಮಿಕ ಸಂಸ್ಥೆ ಅಥವಾ ವಿದ್ಯಾಕೇಂದ್ರ ; ವಿದ್ಯೆ, ಜ್ಞಾನ, ಮತ ಧರ್ಮಗಳ ಪ್ರಸಾರ ಕಾರ್ಯಗಳನ್ನು ನಡೆಸುವ ಕೇಂದ್ರ ಎಂದು ಹೇಳಿದೆ. ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾಕೋಶ[೫]ವು 'ಮಠ' ಯತಿಗಳ ವಾಸಕ್ಕಾಗಿ ಇದ್ದ ಸ್ಥಳ. ದೇವಾಲಯಕ್ಕೆ ಸೇರಿದ, ಧಾರ್ಮಿಕ ಮತ್ತು ಶೈಕ್ಷಣಿಕ ಕಾರ್ಯಗಳಲ್ಲಿ ತೊಡಗಿದ ಸಂಸ್ಥೆ ಎಂದು ಹೇಳಿ, ಇಲ್ಲಿ ಹೆಚ್ಚಾಗಿ ಚಿಕ್ಕಮಕ್ಕಳು ಅಕ್ಷರಾಭ್ಯಾಸ ನಡೆಸುತ್ತಿದ್ದರೂ ವಿಶಿಷ್ಟ ಮಠಗಳಲ್ಲಿ ಶಾಸ್ತ್ರಾಭ್ಯಾಸವೂ ನಡೆಯುತ್ತಿತ್ತು. ಈ ಎಲ್ಲಾ ಅಂಶಗಳಿಂದ ಮಠಗಳೆಂದರೆ ಓದಿಸುವ ಕಾರ್ಯವನ್ನು ಬಹುಮುಖ್ಯವಾಗಿ ನೆರವೇರಿಸುವ ಕೇಂದ್ರಗಳೆಂಬುದು ಸ್ಪಷ್ಟವಾಗುತ್ತದೆ. ಪ್ರಪಂಚದ ಪ್ರಮುಖ ಮತ ಧರ್ಮಗಳ ಆಗು ಹೋಗುಗಳನ್ನು ರೂಪಿಸುವಲ್ಲಿ ಆಯಾ ಮತ ಧರ್ಮಗಳ ಮಠಗಳು ನಿರ್ವಹಿಸಿರುವ ಪಾತ್ರ ಗಮನಾರ್ಹವಾದುದು.[೬] ಈ ಹಿನ್ನೆಲೆಯನ್ನು ಗಮನಿಸಿದಾಗ ಹಂಪೆ ಚರಿತ್ರೆಯ ಉದ್ದಕ್ಕೂ ಒಂದು ಧಾರ್ಮಿಕ ಹಾಗೂ ವಿದ್ಯಾಕೇಂದ್ರವಾಗಿ ಕಾಲಕಾಲಕ್ಕೆ ಅಭಿವೃದ್ಧಿ ಹೊಂದಿತು. ಪ್ರೌಢದೇವರಾಯನ ಕಾಲದಲ್ಲಿದ್ದ ೧೦೧ ವಿರಕ್ತರು ಹಂಪೆಯಲ್ಲಿ ಒಂದೊಂದು ಮಠವನ್ನು ಹೊಂದಿದ್ದರೆಂದು ತಿಳಿದು ಬರುತ್ತದೆ.[೭] ಹಂಪೆಯ ಶಾಸನಗಳನ್ನು ಗಮನಿಸಿದರೆ ಈ ಮಾತಿಗೆ ಇನ್ನಷ್ಟು ಪುಷ್ಟಿ ಬರುತ್ತದೆ. ವಿರೂಪಾಕ್ಷ ತೇರುಬೀದಿಯ ದಕ್ಷಿಣಕ್ಕೆ ಕರಿಸಿದ್ಧಪ್ಪನ ಮಠದ ಉತ್ತರಕ್ಕಿರುವ ಕಲ್ಲಿನ ಮೇಲಿನ

ಶಾಸನ[೮] 'ಕರಿಸಿದ್ಧಪ್ಪನ ಮಟ'ವನ್ನು ಉಲ್ಲೇಖಿಸಿದರೆ, ವಿರೂಪಾಕ್ಷಪೇಟೆ ಮತ್ತು ಕಮಲಾಪುರ, ಹೊಸಪೇಟೆದಾರಿ ಸಂಧಿಸುವ ಸ್ಥಳದ ಬಳಿ ಉತ್ತರಕ್ಕೆ ಇರುವ ಮಂಟಪದ ಎದುರು ನೆಟ್ಟಿರುವ ಕಲ್ಲಿನ ಮೇಲಿನ ಶಾಸನ[೯] 'ಮಹಮಂತಿನ ಮಟವನ್ನು' ಸೂಚಿಸುತ್ತದೆ. ಹಾಗೆಯೆ ರಾಣಿವಾಸದ ಆವರಣದ ಉತ್ತರಕ್ಕೆ ಬೆಟ್ಟದ ಮೇಲೆ ಮೂರು ಚಿಕ್ಕ ದೇವಾಲಯಗಳ ಹತ್ತಿರದ ಗುಂಡಿನ ಮೇಲಿರುವ ಶಾಸನ[೧೦] 'ಪರಮೇಶ್ವರನ ಮಟ'ವನ್ನು ಅಹಮದ್ ಖಾನ್ ಧರ್ಮಶಾಲೆಯ ಪಶ್ಚಿಮಕ್ಕೆ ಬೆಟ್ಟದ ಮೆಲೆ ಬಾವಿಯ ಪಕ್ಕದ ಬಂಡೆಯ ಮೇಲಿರುವ ಶಾಸನ[೧೧] 'ನಿರಾಸಿ ಮಠ'ವನ್ನು, ಬುಕ್ಕಸಾರದ ವಿರೂಪಾಕ್ಷಗೌಡರ ಬಳಿಯಿರುವ ತಾಮ್ರಶಾಸನ[೧೨] 'ಪಂಚಮಠ'ಮತ್ತು 'ಹಂಪೆ ಮಠ' ವನ್ನು ಉಲ್ಲೇಖಿಸುತ್ತದೆ. ಇದಲ್ಲದೆ ಮಹಾನವಮಿ ದಿಬ್ಬದ ಮುಂದೆ ಹಾಸಿದ ಕಲ್ಲಿನ ಮೇಲಿನ ಶಾಸನ[೧೩] ತಳವಾರಘಟ್ಟ-ಕಂಪ್ಲಿ-ಹೊಸಪೇಟೆ ರಸ್ತೆಗಳು ಕೂಡುವ ಸ್ಥಳದ ಹತ್ತಿರ ಬೆಟ್ಟದ ಮೇಲೆ ಕಲ್ಲಿನ ಆಸರೆಯ ಗುಂಡಿನ ಮೇಲಿನ ಶಾಸನ[೧೪],ಗಳು ಕೇವಲ 'ಮಟ', 'ಮಠ' ಎಂದು ಉಲ್ಲೇಖಿಸುತ್ತವೆ.

ಕರಿಸಿದ್ದಪ್ಪನ ಮಠ : ಅಥವಾ ಕಾಶೀಮಠ

ಕರಿಸಿದ್ದಪ್ಪನ ಮಠ ಹಂಪೆಯ ತೇರು ಬೀದಿಯ ಬಲಗಡೆಯ ಭಾಗದಲ್ಲಿ ಕಾಣುವ ಸಾಲು ಕಟ್ಟಡಗಳಲ್ಲಿ ಒಂದು[೧೫].ಇದೊಂದು ಕಾಶೀಮಠದ ಶಾಖಾ ಮಠವಾಗಿದ್ದು, ಈಗ ಗುರುಕರಿಸಿದ್ದೇಶ್ವರ ಸಂಸ್ಥಾನಮಠ ಎಂದು ಕರೆಯಲ್ಪಡುತ್ತದೆ.[೧೬] ಈ ಮಠ ಹಂಪೆಯಲ್ಲಿ ಯಾವಾಗ ಸ್ಥಾಪಿತವಾಯಿತೆಂದು ನಿರ್ಧರಿಸಲು ಖಚಿತವಾದ ಆಧಾರಗಳು ಬೇಕೆನಿಸುತ್ತವೆ. ವಿರೂಪಾಕ್ಷ ತೇರುಬೀದಿಯ ದಕ್ಷಿಣಕ್ಕೆ ಕರಿಸಿದ್ದಪ್ಪನ ಮಠದ ಉತ್ತರಕ್ಕಿರುವ ಕಲ್ಲಿನ ಮೇಲಿನ ಶಾಸನ ಕೇವಲ ಕರಿಸಿದ್ದಪ್ಪನ ಮಟದ ಮಾನ್ಯ (ಭೂಮಿ) ವನ್ನು ಸೂಚಿಸುತ್ತದೆ. ಅದೇ ರೀತಿ ಕ್ರಿ.ಶ. ೧೬೧೨ರ ಕನ್ನಡ ಮತ್ತು ಸಂಸ್ಕೃತ ತಾಮ್ರ ಶಾಸನ[೧೭]ವು ಕರಿಸಿದ್ದಪ್ಪನ ಮಠಕ್ಕೆ ನೀಡಿದ ದಾನದ ಬಗೆಗೆ ವಿವರ ನೀಡುತ್ತದೆ. ಈ ಶಾಸನದ ಪ್ರಕಾರ ಈ ಮಠವು ಅರವೀಡು ವಂಶದ ಅರಸನಾದ ಮೊದಲನೆಯ ವೆಂಕಟಪತಿರಾಯನ ಉದಾರ ಪ್ರೋತ್ಸಾಹವನ್ನು ಪಡೆಯುವಂಥ ಸ್ಥಾನವನ್ನು ಪ್ರಭಾವ ವನ್ನು ಹೊಂದಿದ್ದುದಾಗಿ ತಿಳಿದುಬರುತ್ತದೆ. ಆ ದಾಖಲೆಯು ವೆಂಕಟಪತಿರಾಯನು ಸಿದ್ದ ಬಸವರಾಜ ದೇವರೆಂಬ ವೀರಶೈವ ಮಠಾಧೀಶನಿಗೆ ಗ್ರಾಮಗಳನ್ನು ದಾನವಾಗಿ ನೀಡುತ್ತಾನೆ. ಆ ದಾನದ ವಿವರ ಮೂಲ ಪಾಠದಲ್ಲಿ ಹೀಗಿದೆ. "... ಹಂಪೆಯ ಸಿಂಹಾಸನದ ಪ(ಂ) ಚಮಠ ಪಂಚಗೃಹದೊಳಗಾದ ಬುಕ್ಕಸಾಗರ ಹಂಪೆಮಠಕ್ಕೆ ಕರ್ತಾರಾದಂಥ ಸಿದ್ದ ಬಸವರಾಜದೇವರಿಂಗಂ/ಗಂಗಾವತಿ ಸೀಮೆಯೊಳಗಣ ಭಟ್ಟರ ಹಂಚಿನ ಹಾಳಿಗೆ ಮೂಡಲಾದ/ ಮಲಲಿಗೆ ದಕ್ಷಿಣವಾದ/ ಮಲ್ಲಾಪುರಕ್ಕೆ ಪಡುವಲಾದ/ ಹಿರೀಜಂತೆಗಲ್ಲಿಗೆ ಪುತ್ತರವಾದ/ ಕಲ್ಲು ಗುಡಿಯೆಂಬ ಪುರವರ್ಗವನು/ ಜಂಗಮಾರ್ಚನೆ ಅಂನ್ನ ದಾನಕ್ಕೆ/ ನಿಧಿ ನಿಕ್ಷೇಪ ಜಲ ಪಾಷಾಣ ಆಕ್ಷೀಣಿ ಆಗಾಮಿ ಸಿದ್ಧಸಾಧ್ಯ ಅಷ್ಟ ಭೋಗ ತೇಜ ಸ್ವಾಮ್ಯಂಗಳು ವಾಪೀಕೂಪಿ ತಟಾಕಗಳು ಪಾರಂಪರ್ಯವಾಗಿ ಆ

ಚಂದ್ರಾರ್ಕಸ್ಥಾಯಿಯಾಗಿ ಶ್ರೀವೀರವೆಂಕಟಪತಿ ಮಹಾರಾಯ ಮಹೀಪತಿ ಸಹಿರಣ್ಯ ಪಯೋಧಾರಾಪೂರ್ವ ಕಂ..........." ಎಂದು ಶಾಸನ ಮುಂದುವರೆದಿದೆ. ಈ ಶಾಸನದಲ್ಲಿ ಬರುವ ಬುಕ್ಕಸಾಗರದ ವೀರಶೈವಮಠದ ಆಚಾರ್ಯರಾಗಿದ್ದ ಕರಿಸಿದ್ಧ ದೇವರನ್ನು ಕುರಿತು ಬಹುಶಃ ಅವರಿಗೆ ಸಮಕಾಲೀನನಾಗಿದ್ದ ವಿರೂಪಾಕ್ಷ ಪಂಡಿತ (ಕ್ರಿ.ಶ.೧೫೮೫) ತನ್ನ ಚನ್ನ ಬಸವ ಪುರಾಣದಲ್ಲಿ

ವೀರಶೈವಾಚಾರಪಟ್ಟಸ್ಥಲಬ್ರಹ್ಮಿಸ
ಚ್ಚಾರುಚರಮೂರ್ತಿ ಯತಿಕುಲತಿಲಕನೆಂದೆನಿಪ
ಕೋರಾನ್ನದಾರ್ಯನೆಡೆವಿಡದೆ ಘನಚರಕೆ ಮೃಷ್ಟಾನ್ನಮಂ ನೀಡಿಸುವನು
ಧಾರುಣಿಯೊಳಸೆವುತಿಹ ಬುಕ್ಕಸಾಗರ ಘನ
ಚಾರಿತ್ರಮಹಿಮನಾ ಕರಿಯ ಸಿದ್ಧೇಶ್ವರನ
ವಾರಿಯಿಂಬಂದ ಜಂಗಮಕೆ ಮೃಷ್ಟಾನ್ನಮಂ ನೀಡಿಸುವನತಿ ಮುದದೊಳು.೧೯

ಎಂದು ಬಣ್ಣಿಸಿದ್ದಾನೆ. ಈ ಶಾಸನವು ಕೂಡ ಕಲ್ಲುಗುಡಿ ಎಂಬ ಗ್ರಾಮವನ್ನು ದಾನವಾಗಿ ನೀಡಿರುವುದನ್ನು ಹೇಳುತ್ತಾ ಹಾಗೆಯೆ ದಾನ ಪಡೆದ ಗ್ರಾಮದಿಂದ ಬಂದ ಆದಾಯವನ್ನು ವೀರಶೈವ ಜಂಗಮಾರ್ಚನೆಗೆ ಮತ್ತು ಅನ್ನ ದಾಸೋಹಕ್ಕೆ ಉಪಯೋಗಿಸಬೇಕೆಂದು ಸೂಚಿಸುತ್ತದೆ.

ಕಾಶೀ ಮಠಾಧಿಪತಿಯಾಗಿದ್ದ ಕರಿಸಿದ್ದದೇವರ ಹೆಸರನ್ನು ಹಂಪೆಯ ಹಿರೇಮಠದ ಅಧಿಪತಿಯಾಗಿದ್ದ ವಿರೂಪಾಕ್ಷ ಪಂಡಿತ ತನ್ನ ಚೆನ್ನಬಸವ ಪುರಾಣ ದಲ್ಲಿ ಹೇಳಿರುವುದರಿಂದ ಆ ಕಾಶೀಮಠವು ತನ್ನ ಧಾರ್ಮಿಕ ಮೊದಲಾದ ಕಾರ್ಯ ಚಟುವಟಿಕೆಗಳಿಂದಾಗಿ ಮೊದಲಿನಿಂದಲೇ ಪ್ರಸಿದ್ಧವಾದ ಒಂದು ವೀರಶೈವ ಸಂಸ್ಥೆಯಾಗಿತ್ತೆಂದು ಊಹಿಸಬಹುದು.

ಈ ಮಠದ ಮೂಲ ಕಟ್ಟಡ ಈಗ ಕಾಣಲು ಸಿಗುವುದಿಲ್ಲ. ಅದರ ನಿವೇಶನದಲ್ಲಿ ಪುನರ್ ನಿರ್ಮಿತವಾದ ಆದುನಿಕ ಕಟ್ಟಡ ಕಂಡು ಬರುತ್ತದೆ. ಆದರೂ, ಅದು ಹಿಂದೆ ವೀರಶೈವರ ಮಠವಾಗಿತ್ತೆಂಬುದನ್ನು ಗುರುತಿಸುವುದಕ್ಕಾಗಿ, ಆ ಮಠದ ನಿವೇಶನದ ನಾಲ್ಕು ಮೂಲೆಗಳಲ್ಲಿ ಈಚೆಗೆ ತಯಾರಿಸಲಾದ ನಾಲ್ಕು ಲಿಂಗ ಮುದ್ರೆ ಕಲ್ಲುಗಳನ್ನು ನೆಟ್ಟಿರುವುದನ್ನು ಗಮನಿಸಬಹುದು. ಈಲಿಂಗ ಮುದ್ರೆ ಕಲ್ಲುಗಳನ್ನು ಎಲ್ಲ ವಿಧದಲ್ಲೂ ಪೂರ್ವದ ಮಾದರಿಗಳನ್ನೇ ಹೋಲುವಂತೆ ಕೆತ್ತಲಾಗಿದೆ. ಈ ಕಾಶೀಮಠಕ್ಕೆ ಸಂಬಂಧಿಸಿದ ಕಾರ್ಯಚಟುವಟಿಕೆಗಳು ಈಗ ಬುಕ್ಕಸಾಗರ ಗ್ರಾಮದಲ್ಲಿರುವ ಮಠದಲ್ಲಿ ನಿರಂತರವಾಗಿ ನಡೆಯುತ್ತಲಿವೆ.[೨೦]

ಪಂಚಮಠ ಮತ್ತು ಹಂಪೆ ಮಠ

ಮೇಲೆ ಹೇಳಿದ ಶಾಸನ ಪಂಚಮಠ ಮತ್ತು ಹಂಪೆ ಮಠಗಳನ್ನು ಉಲ್ಲೇಖಿಸುತ್ತದೆ. ಇಲ್ಲಿ ಬರುವ ಸಿದ್ಧ ಬಸವರಾಜದೇವರು ಹಂಪೆ ಮಠಕ್ಕೆ ಕರ್ತರಾಗಿದ್ದರು. ಇದು

ಬುಕ್ಕಸಾಗರದಲ್ಲಿತ್ತೆಂದು ಶಾಸನ ಹೇಳುತ್ತದೆ. ಕರಿಸಿದ್ದೇವರು ಮತ್ತು ಚಿಕ್ಕ ಕರಿಸಿದ್ದೇವರು ಸಿದ್ಧ ಬಸವರಾಜನ ಗುರುಗಳಾಗಿದ್ದರು. ಇವರೀರ್ವರು ಸಿದ್ಧಬಸವರಾಜನಿಗೆ ಜಂಗಮಾರ್ಚನೆ, ಅನ್ನ ದಾನಕ್ಕಾಗಿ ಗ್ರಾಮ, ಕೆರೆಗಳನ್ನು ದಾನವಾಗಿ ನೀಡಿರುವುದನ್ನು ಶಾಸನ ಹೇಳುತ್ತದೆ. ಈ ಶಾಸನದಲ್ಲಿ ಗಮನಿಸಬೇಕಾದ ಬಹು ಮುಖ್ಯವಾದ ವಿಷಯವೆಂದರೆ 'ಪಂಚಮಠ'. ಇದು ಹಂಪೆಯಲ್ಲಿ 'ವೀರಶೈವ ಸಿಂಹಾಸನ ಮಠ' ಎಂದು ಹೆಸರು ಪಡೆದಿತ್ತು. ಇದು ಐದು ಶಾಖಾ ಮಠಗಳನ್ನು ಹೊಂದಿತ್ತು. ಆ ಶಾಖಾ ಮಠಗಳಲ್ಲಿ ಒಂದು ಹಂಪೆಮಠ, ಬುಕ್ಕಸಾಗರ ಎಂಬ ಗ್ರಾಮದಲ್ಲಿ ಸ್ಥಾಪಿತವಾದುದಾಗಿತ್ತು. ಆ ವಿಷಯವನ್ನು ಶಾಸನ ಹೀಗೆ ನಿರೂಪಿಸುತ್ತವೆ. '....... ಮಹಾಮಹತ್ತಿಗೊಳಗಾದ ಹಂಪೆಯ ಸಿಂಹ್ಮಾಸನದ ಪ(ಂ)ಚಮಠದ ಪಂಚಗೃಹದೊಳಗಾದ ಬುಕ್ಕಸಾಗರ ಕರಿಸಿದ್ದೇವರ.......' ಎಂದಿದೆ. ಇಲ್ಲಿ ಉಲ್ಲೇಖಿತವಾದ 'ಬುಕ್ಕಸಾಗರ' ಗ್ರಾಮ ಹಂಪೆಯಿಂದ ೧೦ ಕಿ.ಮೀ ದೂರದಲ್ಲಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಬುಕ್ಕಸಾಗರದಲ್ಲಿ ಹಲವು ವೀರಶೈವ ಶರಣರ ಕುರುಹುಗಳು ಕಾಣಬರುತ್ತವೆ.[೨೧]

ಕರ್ನಾಟಕದ ಅನೇಕ[೨೨] ಶಾಸನಗಳಲ್ಲಿ ಈ ಪಂಚಮಠ ಮತ್ತೆ ಮತ್ತೆ ಬಳಕೆಗೊಂಡಿದೆ. ದಾನ ಪ್ರಸಂಗದಲ್ಲಿ ಪಂಚಮಠದ ಸನ್ನಿಧಿಯನ್ನು ಶಾಸನಗಳು ಒತ್ತಿ ಹೇಳುತ್ತವೆ. ಈ ಪಂಚಮಠದ ಬಗೆಗೆ ಡಾ.ಷ.ಶೆಟ್ಟರ್ ಅವರು ಹೀಗೆ ಹೇಳಿದ್ದಾರೆ. ಬಹಳಷ್ಟು ದಾನಶಾಸನಗಳಲ್ಲಿ ಸಾಕ್ಷಿಯಾಗಿದ್ದ ಸಂಘ, ಸಂಸ್ಥೆ, ಅಧಿಕಾರಗಳ ಸಾಲಿನಲ್ಲಿ ಪಂಚಮಠ ಎಂಬುದು ನಾಮ ಮಾತ್ರ ಉಲ್ಲೇಖಗೊಂಡಿದೆ. ಬಹುಶಃ ಆ ಗ್ರಾಮದಲ್ಲಿ ಪಂಚಮಠ ಅಸ್ತಿತ್ವದಲ್ಲಿಲ್ಲದಿದ್ದರೂ ಒಂದು ಸಂಪ್ರದಾಯವೆಂಬಂತೆ ಈ ಶಬ್ದವನ್ನು ಶಾಸನಗಳು ಹೆಸರಿಸುತ್ತವೆ. ಇಂಥವುಗಳಿಂದ ಹೊಸ ವಿವರಣೆಯನ್ನು ಏನು ಅಪೇಕ್ಷಿಸುವಂತಿಲ್ಲ. ಕೆಲವು ಅದರಲ್ಲೂ ಬಳ್ಳಿಗಾವಿ ಪ್ರದೇಶವು ಮಾತ್ರ ಒಂದಿಷ್ಟು ಮಾಹಿತಿ ಒದಗಿಸುತ್ತವೆ. ಪಂಚಮಠಕ್ಕೆ ಕಾಳಾಮುಖಶೈವರೇ ಆಚಾರ್ಯರಾಗಿದ್ದಾರೆ. ಸಾಮಾನ್ಯವಾಗಿ ಎಲ್ಲ ದತ್ತಿಗಳಿಗೆ ಸಾಕ್ಷಿಯಾಗಿರುವ ಇವರು ಜೈನ ದತ್ತಿಗೆ ಸಾಕ್ಷಿಯಾಗಿರುವ ಉಲ್ಲೇಖವಿಲ್ಲ.[೨೩] ಎನ್ನುತ್ತಾರೆ. ಅಲ್ಲಮಪ್ರಭುದೇವರ ಒಂದು ವಚನದಲ್ಲಿ ಈ 'ಪಂಚಮಠ' ಪದ ಬಳಕೆಗೊಂಡಿದೆ.

ಆ ವಚನ ಹೀಗಿದೆ.

ಸಟೆ ದಿಟವಾದಲ್ಲಿ ಮುಟ್ಟಿಯು ಮಟ್ಟದೆ ಇರಬೇಕು.
ಅತಿರತಿಗತಿಮತಿಗೆ ಮಂದವಾಯಿತ್ತು,
ಎಂಟು ಹಿಟ್ಟು ಪಂಚಮಠವುಂಟು ಧರೆಯ ಮೇಲೆ.
ನರಸುರಾದಿಗಳೆಲ್ಲ ಸುಭಾರವ ಹೊತ್ತು ಬಂದೈದಾರೆ.
ಹಿಟ್ಟುನಷ್ಟ, ಮಟ ಹಾಳು, ಊರಿಗುಪಟಳ,
ಪಂಚಮಠವ ಸುಟ್ಟು ಗುಹೇಶ್ವರ ಬೀದಿಗರುವಾದ.[೨೪]

೧೨ನೆಯ ಶತಮಾನದಷ್ಟು ಪೂರ್ವದಲ್ಲಿ ಪಂಚಮಠ ಶಬ್ದವನ್ನು ದಾಖಲಿಸಿದ ಏಕೈಕ ಸಾಹಿತ್ಯಿಕ ಆಕರವೆಂಬ ಕೀರ್ತಿ ಈ ವಚಕ್ಕೆ ಸಲ್ಲುತ್ತದೆ.[೨೫] ಈ ವಚನದ ಪ್ರಕಾರ 'ಪಂಚಮಠ' ವೆಂದರೆ ಉತ್ಪಾದನೆ, ಮಾರಾಟ, ವೃತ್ತಿಗೆ ಸಂಬಂಧಿಸಿದ ಐದು ಬಗೆಯ (ಶಿವೋಪಾಸಕ) (ಶ್ರಮಿಕ ವರ್ಗ) "ಎಂಟು ಹಿಟ್ಟು"ಯೆಂದರೆ ಇವರಿಗೆ ನೆರ ವಾಗುವ ಬಡಿಗೆ, ಕಮ್ಮಾರ ಇತ್ಯಾದಿ ಆಯಾಗಾರ ವರ್ಗವೆಂದು ಹೇಳಬೇಕೆನಿಸುತ್ತದೆ.[೨೬]

ಕಾಲದೃಷ್ಟಿಯಿಂದ ಪಂಚಮಠವು ಕೊನಲುಪಾಕ[೨೭]ದಲ್ಲಿ ಮೊದಲು ಬುಕ್ಕಸಾಗರ ಶಾಸನ[೨೮] ದಲ್ಲಿ ಕೊನೆಗೆ ಉಲ್ಲೇಖಗೊಂಡಿದೆ. ಈ ನಡುವೆ ೧೨ ಮತ್ತು ೧೩ನೆಯ ಶತಮಾನದಲ್ಲಿ ವಿಶೇಷವಾಗಿ ಬಳಕೆಯಾಗಿದೆ. ಶಾಸನೋಕ್ತ ಪಂಚಮಠಗಳಿಗೆ ಲಾಕುಳ ಶೈವರೇ ಆಚಾರ್ಯರಾಗಿರುವುದರಿಂದ ಈ ಪಂಚಮಠ ಈಗ ವೀರಶೈವದಲ್ಲಿ ಲೀನವಾಗಿರುವ ಸಾಧ್ಯತೆ ಇದೆ.[೨೯]

ನಿರಾಸಿ ಮಠ

ಅಹಮದ್ ಖಾನ್ ಧರ್ಮಶಾಲೆಯ ಪಶ್ಚಿಮಕ್ಕೆ ಬೆಟ್ಟದ ಮೇಲೆ ಬಾವಿಯ ಪಕ್ಕದ ಬಂಡೆಯ ಮೇಲಿರುವ ಶಾಸನ 'ನಿರಾಸಿ ಮಠ' ವನ್ನು ಉಲ್ಲೇಖಿಸಿದೆ. ಕ್ರಿ.ಶ. ೧೫೩೯ರ ಈ ಶಾಸನ ತೆಲುಗು ಭಾಷೆಯಲ್ಲಿದೆ. ಈ ಶಾಸನವು ದೇವರಿಪಲ್ಲಿಯ ಮುಮುಡಿಸೆಟ್ಟಿ ಎಂಬುವವನಿಗೆ ಪುಣ್ಯವಾಗಲಿಯೆಂದು ಬಾವಿ ಮತ್ತು ತೋಟವನ್ನು ತಮ್ಮಡಿನಂಜೆ ದೇವರ ನಿರಾಸಿಮಠಕ್ಕೆ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ತಮ್ಮಡಿ ನಂಜೇ ದೇವರು ನಿರಾಸಿಮಠದ ಆಚಾರ್ಯರಾಗಿರಬಹುದು.

ಈ ಮೇಲ್ಕಾಣಿಸಿದ ಮಠಗಳಲ್ಲದೆ ಮಹಂತಿನ ಮಠ, ಪರಮೇಶ್ವರ ಮಠಗಳ ಉಲ್ಲೇಖ ಹಂಪೆ ಶಾಸನಗಳಲ್ಲಿ ಬಂದಿದೆ. ಅಲ್ಲದೆ, ಕೇವಲ ಮಠಗಳ ಉಲ್ಲೇಖಗಳು ಶಾಸನಗಳಲ್ಲಿ ಕಂಡು ಬಂದಿವೆ. ಮಹಂತಿನ ಮಠ, ಪರಮೇಶ್ವರ ಮಠಗಳು ಹಿಂದೆ ಅಸ್ತಿತ್ವದಲ್ಲಿ ಇದ್ದಿರಬೇಕು. ಕಾಲಾಂತರದಲ್ಲಿ ಇವು ನಶಿಸಿಹೋಗಿರುಬೇಕು.

ಒಟ್ಟಿನಲ್ಲಿ ವೀರಶೈವ ಮಠಗಳು ಧಾರ್ಮಿಕ ಹಿನ್ನಲೆಯಲ್ಲಿ ಆತ್ಮೋದ್ಧಾರ ಮತ್ತು ಸಮಾಜೋದ್ಧಾರದ ಕೆಲಸವನ್ನು ನಡೆಸುವ ಕೇಂದ್ರಗಳಾಗಿವೆ. ಇಲ್ಲಿನ ಕೇಂದ್ರ ವ್ಯಕ್ತಿ ಇಷ್ಟಲಿಂಗ ಪೂಜೆಯಿಂದ ಆತ್ಮೋದ್ಧಾರ ಹೊಂದಿ ಆ ಮೂಲಕ ಧರ್ಮ, ದಾಸೋಹ ಹಾಗೂ ಕಾಯಕದ ಬಗ್ಗೆ ಬೋಧನೆ ನೀಡುತ್ತ ಸಮಾಜವನ್ನು ತಿದ್ದುವ ಕಾರ್ಯದಲ್ಲಿ ನಿರತನಾಗಿರುತ್ತಾನೆ. ಈ ರೀತಿ ಆತ್ಮೋದ್ಧಾರ ಮತ್ತು ಸಮಾಜೋದ್ಧಾರದ ಅರ್ಥ ದೊಂದಿಗೆ ಬೆಳೆದ ವೀರಶೈವ ಮಠಗಳು ಹಂಪೆಯಲ್ಲಿ ಅಭಿವೃದ್ಧಿ ಪೂರಕವಾಗಿ ಬೆಳೆದು ಬಂದವು. ಇವು ಧಾರ್ಮಿಕ ಕಾರ್ಯವನ್ನು ಮಾಡುತ್ತಾ ರಥ ಬೀದಿಯಲ್ಲಿ ತಮ್ಮ ಅಸ್ತಿತ್ವವನ್ನು ಪಡೆದುಕೊಂಡವು. ಈಗಲೂ ರಥ ಬೀದಿಯಲ್ಲಿ ವೀರಶೈವ ಮಠಗಳ ಕಟ್ಟಡ ಹಾಗೂ ಅವುಗಳ ಪಳಿಯುಳಿಕೆಗಳು ನೋಡಲು ದೊರೆಯುತ್ತವೆ.

ಗ್ರಂಥ ಋಣ

೧. ಲುಯಿ ರೈಸ್ (ಸಂ) ಅಮರಸಿಂಹನ : ಅಮರಕೋಶ ಎಂಬನಾಮ ಲಿಂಗಾನುಶಾಸನ ಪುಟ. ೧೦೨ ಶ್ಲೋಕ ೪೧೪-೪೧೬.

"........ ಗುರೋಸ್ತುಯಃ

ಲಬ್ದಾನುಜ್ಞ ಸ್ಸಮಾಮೃತಃಸುತ್ವಾ ತ್ವಭಿಷವೇಕೃತೀ

ಛಾತ್ರಾಂತೇವಾಸಿನೌ ಶಿಷ್ಯಶೈಕ್ಷಃಪ್ರಾಥಮಕಲಿಕ್ಷಃ

(ಏಕಬ್ರಹ್ಮವ್ರತಾಚಾರಮಿಥ) ಸ್ಸ. ಬ್ರಹ್ಮಚಾರಿಣಃ......."

೨. ಎಸ್.ವಿ.ಹಂಜಿ (ಸಂ) ಸಂಸ್ಕೃತಿ-ಕನ್ನಡ ಶಬ್ದಕೋಶ. ಪುಟ : ೧೮೧.

೩. Rev. F. Kittel : A Kannada English Dictionary .P.1189.

೪. ಎನ್.ಬಸವರಾಧ್ಯ (ಪ್ರ.ಸಂ) : ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು. ಏಳನೆಯ ಸಂಪುಟ ಪು. ೬೮೬೧.

೫. ಶ್ರೀನಿವಾಸ ರಿತ್ತಿ (ಸಂ) ಪ್ರಾಚೀನ ಕರ್ನಾಟಕದ ಆಡಳಿತದ ಪರಿಭಾಷಾಕೋಶ. ಪುಟ ೧೨೦.

"... Place for the residence of the ascetics. An institution attached to the temple for religious and educational activities. Though mainly it was meant for primary education, sastras were taught in many maths."

೬. ಬಿ.ವ್ಹಿ.ಮಲ್ಲಾಪುರ ಸುಧಾರ್ಣವ ೧ ಪುಟ ೮೪.

೭. ಬಸವರಾಜ ಮಲಶೆಟ್ಟಿ (ಸಂ) : ಎನಗಿಂತ ಕಿರಯರಿಲ್ಲ. ಪುಟ : ೨೮೮.

೮. ದೇವರಕೊಂಡಾರೆಡ್ಡಿ (ಸಂ) : ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ :೩: ಹಂಪಿ ಶಾಸನಗಳು. ಪುಟ :೯೦: ಶಾಸನ ಸಂಖ್ಯೆ:೯೯.

೯. ಅದೇ ಪುಟ ೯೬: ಶಾಸನ ಸಂಖ್ಯೆ : ೧೦೩.

೧೦. ಅದೇ ಪುಟ ೨೪೫ : ಶಾಸನ ಸಂಖ್ಯೆ : ೩೩೨.

೧೧. ಅದೇ ಪುಟ.೨೪೯ : ಶಾಸನ ಸಂಖ್ಯೆ : ೩೪೨.

೧೨. ಅದೇ ಪುಟ. ೨೮೦ : ಶಾಸನ ಸಂಖ್ಯೆ : ೩೯೬.

೧೩. ಅದ ಪುಟ ೧೯೬ : ಶಾಸನ ಸಂಖ್ಯೆ : ೨೫೫.

೧೪. ಅದೇ ಪುಟ ೨೬೦ : ಶಾಸನ ಸಂಖ್ಯೆ : ೩೬೦.

೧೫. ಸಿ.ಟಿ.ಎಂ.ಕೊಟ್ರಯ್ಯ ಹಂಪೆ ಮೂರು ಲೇಖನಗಳು. ಪು : ೧೫.

೧೬. ಚಂದ್ರಶೇಖರ ನಾರಣಾಪುರ, ಕರ್ನಾಟಕದ ವೀರಶೈವ ಮಠಗಳು. ಪುಟ ೬೧೬.೧೮. ದೇವರಕೊಂಡಾರೆಡ್ಡಿ (ಸಂ) ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೩ ಹಂಪಿ ಶಾಸನಗಳು ಪುಟ- ೨೮೦. ಶಾಸನ ಸಂಖ್ಯೆ : ೩೯೬.

೧೯. ಎಂ.ಚಂದ್ರಶೇಖರ (ಗದ್ಯಾನುವಾದ) : ವಿರೂಪಾಕ್ಷ ಪಂಡಿತಕೃತ ಚೆನ್ನಬಸವ ಪುರಾಣ : ಪುಟ ೪೬೭. ೬೩ನೆಯ ಸಂಧಿ. ಪದ್ಯ : ೫೩.

೨೦. ಬಸವರಾಜ ಮಲಶೆಟ್ಟಿ ಸಂ ಎನಗಿಂತ ಕಿರಿಯರಿಲ್ಲ. ಪುಟ. ೨೯೬.

ಸಿ.ಟಿ.ಎಂ.ಕೊಟ್ರಯ್ಯ ಹಂಪೆಯಲ್ಲಿ ವೀರಶೈವ ಪ್ರಾಚೀನ ಕುರುಹುಗಳು - ಲೇಖನ.

೨೧. ಬಸವರಾಜ ಮಲಶೆಟ್ಟಿ ಸಂ ಎನಗಿಂತ ಕಿರಿಯರಿಲ್ಲ.ಪುಟ ೨೯೬.

೨೨. * ಎ.ಕ. VII ಶಿಕಾರಿಪುರ ಶಾಸನ ಸಂಖ್ಯೆ ೧೩೩. ಬಳ್ಳಿಗಾವಿ.

(ಈರ್ವ್ವರು ಸೆಟಿಗಳುಂ ನಗರ ಪಂಚಮಠಗಳಲ್ಲಿ.......)

* ಎ.ಕ. VII ಶಿಕಾರಿಪುರ ಶಾಸನ ಸಂಖ್ಯೆ ೧೬೦. ಬಳ್ಳಿಗಾವಿ.

(ಬಳ್ಳಿಗಾವಿಯ ನಗರ ಪಂಚಮಠ ಸ್ಥಾನದೊಳಗಾಗಿ.....)

* ಎ.ಕ. VII ಶಿಕಾರಿಪುರ ಶಾಸನ ಸಂಖ್ಯೆ ೯೯. ಬಳ್ಳಿಗಾವಿ.

(ಅನಿತುಂ ಪಂಚಮಠ ಸ್ಥಾನ ನಗರ ಮುಂ.......)

* ಎ.ಕ. VII ಶಿಕಾರಿಪುರ ಶಾಸನ ಸಂಖ್ಯೆ ೧೨೩. ಬಳ್ಳಿಗಾವಿ

(ಪ್ರಮುಖನಗರ ಪಂಚಮಠ ....)

* ಕೆ.ಆರ್.ಗಣೇಶ ಆರ್.ಶೇಷಶಾಸ್ತ್ರಿ (ಸಂ) ಆಂಧ್ರಪ್ರದೇಶದ ಕನ್ನಡ ಶಾಸನಗಳು ಭಾಗ - II

ಶಾಸನ ಸಂಖ್ಯೆ : ೩೯೫ ಮೇಮುಲವಾಡ : ೧೦೮೩.ಪುಟ.೪೧.

ಅರಸಂನಗರ ಪಂಚಮಠ ಸ್ಥಾನಮುಂ........

* ಕೆ.ಆರ್.ಗಣೇಶ ಆರ್.ಶೇಷಶಾಸ್ತ್ರಿ (ಸಂ) ಆಂಧ್ರಪ್ರದೇಶದ ಕನ್ನಡ ಶಾಸನಗಳು ಭಾಗ - II

(ಈ ಧರ್ಮಕ್ಕೆ ಪ್ರಭು ಪಂಚಮಟಸ್ಥಾನ.......)

* ಸೌ.ಇಂ.ಇಂ.

ಶಾಸನ ಸಂಖ್ಯೆ ೧೦೮ ಲಕ್ಷ್ಮೇಶ್ವರ ೧೧೩೮.

ಪುರಿಗೆರೆಯ ನಗರ ಮಹಾಜನಂ, ಪಂಚಮಠ ಸ್ಥಾನಂಗಳ......

* ಸೌ.ಇಂ.ಇಂ. XVIII ಶಾಸನ ಸಂಖ್ಯೆ : ೧೦೮ ಲಕ್ಷ್ಮೇಶ್ವರ ೧೨೬೩.

(ಯಂಟುಹಿಟ್ಟು ಪಂಚಮಠ ....)

೨೩. ಷ.ಶೆಟ್ಟರ್ (ಮೂಲ), ರಾಜಾರಾಮ ಹೆಗಡೆ (ಅನು) : ಬಳ್ಳಿಗಾವೆ : ಮಧ್ಯಕಾಲೀನ ನಗರವೊಂದರಲ್ಲಿ ಮತ ವೈವಿಧ್ಯತೆಯ ವಿನ್ಯಾಸ. ಕನ್ನಡ ಅಧ್ಯಯನ. ಸಂಪುಟ : ೯. ಸಂಚಿಕೆ : ೪.

೨೪. ಬಿ.ವ್ಹಿ. ಮಲ್ಲಾಪುರ (ಸಂ) : ಅಲ್ಲಮ ಪ್ರಭುದೇವರ ವಚನ ಸಂಪುಟ : ಪುಟ. ೧೧೪ ಶರಣಸ್ಥಲ, ವಚನ : ೩೯೮.

೨೫. ಎಂ.ಎಂ.ಕಲಬುಗಿ ಮಾರ್ಗ-೪ ಪುಟ : ೨೮೭.

೨೬. ಅದೇ. ಪುಟ : ೨೯೧.

೨೭. ಕೆ.ಆರ್ ಗಣೇಶ, ಆರ್ ಶಾಸ್ತ್ರಿ, (ಸಂ) : ಆಂಧ್ರಪ್ರದೇಶದ ಕನ್ನಡ ಶಾಸನಗಳು ಭಾಗ ॥
ಶಾಸನ ಸಂಖ್ಯೆ : ೭೧. ಕೊನಲು ಪಾಕ. ೧೦೫೬. ಪುಟ-೨೫೮.

೨೮. ದೇವರಕೊಂಡಾರೆಡ್ಡಿ, (ಸಂ) ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೩ ಹಂಪಿ ಶಾಸನಗಳು,
ಶಾಸನ ಸಂಖ್ಯೆ : ೩೯೬, ಬುಕ್ಕಸಾಗರ. ೧೬೧೨.

೨೯. ಎಂ.ಎಂ.ಕಲಬುರ್ಗಿ ಮಾರ್ಗ-೪, ಪುಟ. ೨೮೭.

೧೨. ಹಂಪಿಯಲ್ಲಿನ ಶಿವನ ದಕ್ಷಿಣಾಮೂರ್ತಿ ಶಿಲ್ಪಗಳು

ಡಾ.ಕೆ.ಎಂ.ಸುರೇಶ್

ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕಿನಲ್ಲಿ ತುಂಗಭದ್ರ ನದಿಯ ದಕ್ಷಿಣ ದಂಡೆಯ ಮೇಲೆ ಉತ್ತರ ಅಕ್ಷಾಂಶ ೧೫ : ೩೦ ಮತ್ತು ಪೂರ್ವ ರೇಖಾಂಶ ೭೦ : ೩೦ ಯಲ್ಲಿರುವ ಹಂಪಿಯು ಈಗ ಒಂದು ಸಣ್ಣ ಗ್ರಾಮವಾಗಿದೆ.[೧] ಹಂಪೆ ಅಥವಾ ಹಂಪಿ ಎನ್ನುವುದು ಪುರಾತನ ಪಂಪಾ ಎನ್ನುವ ಪದದ ಈಗಿನ ಕನ್ನಡ ರೂಪವಾಗಿದೆ. ಮಧ್ಯಯುಗ ಕಾಲದಲ್ಲಿ ಇದು ಪಂಪಾಕ್ಷೇತ್ರ[೨] ಭಾಸ್ಕರ ಕ್ಷೇತ್ರ[೩] ಪಂಪಾತೀರ್ಥ[೪] ರಾಮಾಯಣ ಪ್ರಸಿದ್ಧ, "ಪಂಪಾ" ಮೊದಲಾದ ಹೆಸರುಗಳಿಂದ ಪ್ರಸಿದ್ಧವಾಗಿತ್ತು. ಶಾಸನಗಳು, ತಾಮ್ರಫಲಗಳು, ದತ್ತಿಗಳು ಮತ್ತು ಸಾಹಿತ್ಯಿಕ ಕೃತಿಗಳಲ್ಲಿ ಈ ಕ್ಷೇತ್ರದ ಅನೇಕ ಉಲ್ಲೇಖಗಳು ದೊರೆಯುತ್ತವೆ. ಕಾವ್ಯವೊಂದರಲ್ಲಿ ವರ್ಣಿತವಾಗಿರುವಂತೆ ಹೇಮಕೂಟವೇ ಇದರ ಕಾಪು ದಿಬ್ಬವಾಗಿತ್ತು. ತುಂಗಾಭದ್ರೆಯೆ ಇದರ ನೀರಗಳ್ತೆ (ಕಂದಕ)ಯಾಗಿತ್ತು. ಜಗದ್ರಕ್ಷಕನಾದ ವಿರುಪಾಕ್ಷನೇ ಇದರ ಪೋಷಕನಾಗಿದ್ದ. ರಾಜರ ರಾಜನಾಗಿದ್ದ ಹರಿಹರನೇ ಇದರ ದೊರೆಯಾಗಿದ್ದನು.[೫] ವಿಜಯನಗರ ಸ್ಥಾಪನೆ ಮತ್ತು ಬಲಿಷ್ಠ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗುವ ಪೂರ್ವದಲ್ಲಿ-ಇತಿಹಾಸ ಪೂರ್ವಕಾಲದಿಂದಲೂ ಇದು, ಮಾನವ ಜನಾಂಗದ ಚಟುವಟಿಕೆಗಳ ಕೇಂದ್ರವಾಗಿದ್ದು ನಂತರ ಬನವಾಸಿಯ ಕದಂಬ, ಬಾದಾಮಿಯ ಚಾಲುಕ್ಯ, ಮಾಳಖೇಡ ರಾಷ್ಟ್ರಕೂಟ, ಕಲ್ಯಾಣದ ಚಾಲುಕ್ಯ, ದ್ವಾರಸಮುದ್ರದ ಹೊಯ್ಸಳರು, ಕಲಚೂರಿಗಳು ಮತ್ತು ಯಾದವರ ಸಾಮ್ರಾಜ್ಯಗಳ ಭಾಗವಾಗಿತ್ತು. ಕ್ರಿ.ಶ.೧ ಮತ್ತು ೨ನೆಯ ಶತಮಾನದ ಬ್ರಾಹ್ಮೀಲಿಪಿಯಲ್ಲಿರುವ **"ಉತ್ತರಸ್ ಪುಟಸ್ ದೇನಮ್"** ಎಂದಿರುವ ದತ್ತಿಯೊಂದು ಈ ಸ್ಥಳದ ಬಗೆಗಿನ ಅತಿ ಪೂರಾತನ ದಾಖಲೆಯಾಗಿದೆ. ಚಾಲುಕ್ಯ ರಾಜ ವಿನಯಾದಿತ್ಯನ ತಾಮ್ರ ಫಲಕದ ದಾಖಲೆಯು (ಕ್ರಿ.ಶ.೬೮೯) ಪಂಪಾತೀರ್ಥವೆಂದಿದ್ದ ಸ್ಥಳವೇ ರಾಜನ ಬಿಡಾರ ಸ್ಥಳವಾಗಿತ್ತೆಂದು ಉಲ್ಲೇಖಿಸುತ್ತದೆ. ಈ ಕ್ಷೇತ್ರವು ಶೈಕ್ಷಣಿಕ ಹಾಗೂ ಧಾರ್ಮಿಕ ಕೇಂದ್ರವಾಗಿಯೂ ಪ್ರಮುಖ ಪಾತ್ರವನ್ನುವಹಿಸಿದೆ. ಮಹಾಪ್ರಧಾನದಂಡನಾಯಕ ಭಟ್ಟೋಪಾಧ್ಯಾಯ ಸೋಮೇಶ್ವರನಿಂದ ಪ್ರತಿ ವರ್ಷವೂ ಅಧ್ಯಾಪಕರಿಗೆಂದು ಎಂಭತ್ತು ಲೊಕ್ಕಿ ಗದ್ಯಾಣಗಳ ದಾನವನ್ನು ಕ್ರಿ.ಶ. ೧೦೭೬ ರ ಶಾಸನವೊಂದು ದಾಖಲಿಸುತ್ತದೆ. ಈ ಅಧ್ಯಾಪಕರುಗಳು ಮಠಗಳಲ್ಲಿ ಪುರಾಣ ಪ್ರವಚಗಳಲ್ಲಿ ತೊಡಗಿರುತ್ತಿದ್ದರು. ಕ್ರಿ.ಶ. ೧೧೬೩ರ ಮತ್ತೊಂದು ಶಾಸನವು [೬], ಕಲಚೂರಿ

ದೊರೆಯಾದ ಬಿಜ್ಜಳನು ಹಂಪೆಯ ವಿರೂಪಾಕ್ಷನ ಸನ್ನಿಧಿಯಲ್ಲಿ ಮಹಾದಾನಗಳನ್ನು ಮಾಡುತ್ತಿದ್ದನೆಂದು ಸಾರುತ್ತದೆ. ವಿರುಪಾಕ್ಷನ ಸನ್ನಿಧಿಯಲ್ಲಿ ಮಾಡುವ ದಾನಗಳು ಶ್ರೇಷ್ಠವೆಂದು ಭಾವಿಸಿದ್ದರಿಂದ ಈ ಕ್ಷೇತ್ರವು ಅತಿ ದೊಡ್ಡ ಧಾರ್ಮಿಕ ಕೇಂದ್ರವಾಗಿತ್ತೆಂದೂ ಇದು ತೋರಿಸುತ್ತದೆ. ಎಂಟನೆಯ ಶತಮಾನದ ವೇಳೆಗೆ ಪೂರ್ವರೂಪದಲ್ಲಿ ವಿರುಪಾಕ್ಷನ ದೇವಾಲಯವು ನಿರ್ಮಿಸಲ್ಪಟ್ಟಿದ್ದು ಅನಂತರ ಹಂಪಿಯ ಅನೇಕ ದೇವಾಲಯಗಳು ನಿರ್ಮಾಣಗೊಂಡವು. ಹನ್ನೆರಡನೆಯ ಶತಮಾನದಲ್ಲಿ ಇನ್ನೂ ಆನೇಕ ದೇವಾ ಲಯಗಳ ಸೇರ್ಪಡೆಯೊಂದಿಗೆ ಈ ಕ್ಷೇತ್ರವು ಬಹು ಪ್ರಮುಖವಾಯಿತು. ಮನ್ಮಥ ಹೊಂಡದ ದಡದ ಮೇಲಿರುವ ಕ್ರಿ.ಶ.೧೧೯೯ರ ಶಾಸನವು ಕುರುಗೋಡು ಪ್ರದೇಶದಿಂದ ಆಳುತ್ತಿದ್ದ ಕಾಳಿದೇವರಸ, [ಕಲಿದೇವರಸ] ಎಂಬ ಮಾಂಡಲೀಕನು ವಿರುಪಾಕ್ಷ, ಹಂಪಾದೇವಿ ಭೈರವದೇವ, ರಾಚಮಲ್ಲೇಶ್ವರ ಮೊದಲಾದ ದೇವರುಗಳಿಗೆ ದಾನ ಭೂಮಿಯನ್ನು ಕೊಟ್ಟದಾಖಲೆಯನ್ನು ಸೂಚಿಸುತ್ತದೆ. ೧೩ ಮತ್ತು ೧೪ನೆಯ ಶತಮಾನದ ಪೂರ್ವದಲ್ಲಿ ಹಂಪಿಯು ವಿಸ್ತೃತಗೊಂಡು ೩ನೆಯ ಹೊಯ್ಸಳ ಬಲ್ಲಾಳನ ಉಪ ರಾಜಧಾನಿಯಾಗಿದ್ದು ವಿಜಯ ವಿರುಪಾಕ್ಷ ಹೊಸ ಪಟ್ಟಣ [೧೦]ವೆಂಬ ಹೆಸರನ್ನು ಪಡೆದಿತ್ತು. ಬಲ್ಲಾಳರ ಕೊನೆಯ ರಾಜನು ವಿರುಪಾಕ್ಷ ಬಲ್ಲಾಳನೆಂಬ ಹೆಸರು ಪಡೆದ ನಲ್ಲದೆ ತನ್ನನ್ನು ತಾನು ಹಂಪಿಯ ಒಡೆಯ ಎಂದು ಕರೆದುಕೊಂಡನು. [೧೧] ಹೊಸಮಲೆ ದುರ್ಗ ಮತ್ತು ಕುಮ್ಮಟನಾಯಕನಾಗಿದ್ದ ಮುಮ್ಮಡಿ ಸಿಂಗೇಯನಾಯಕನ ಮಗ ಕಂಪಿಲದೇವರಾಯನಿಂದ ೧೪ನೆಯ ಶತಮಾನದಲ್ಲಿ ಅನೇಕ ಹೊಸ ದೇವಾಲಯಗಳು ನಿರ್ಮಾಣಗೊಂಡು ಹೇಮಕೂಟದ ಬೆಟ್ಟದ ಮೇಲೆ ತ್ರಿಕೂಟ ಶಿವದೇವಾಲಯವು ಮೂರು ಲಿಂಗಗಳ ಪ್ರತಿಷ್ಠಾಪನೆಯೊಂದಿಗೆ ನಿರ್ಮಾಣವಾಯಿತು.[೧೨]

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯೊಂದಿಗೆ ಹಂಪೆಯು ಮಧ್ಯಯುಗದ ಅತಿ ಪ್ರಮುಖ ರಾಜಕೀಯ ಮಹತ್ವದ ಕೇಂದ್ರವಾಗಿ ಮತ್ತು ಪ್ರಮುಖ ಪಟ್ಟಣಗಳಲ್ಲೊಂದಾಯಿತು. ವಿರುಪಾಕ್ಷ, ಹಂಪೆ, ಹೊಸ ಪಟ್ಟಣ, ವಿದ್ಯಾನಗರ ಮತ್ತು ವಿಜಯನಗರ ಎನ್ನುವ ಹೆಸರುಗಳನ್ನು ಹೊಂದಿದ್ದ ಉಲ್ಲೇಖಗಳಿವೆ. ಇಲ್ಲಿಗೆ ಭೇಟಿ ನೀಡಿದ್ದ ಪೋರ್ಚುಗೀಸ್ ಯಾತ್ರಿಕ ಇದನ್ನು ಬೀಜ್‌ನುಗ್ಗೂರ್ ಎಂದು ಕರೆದಿದ್ದಾರೆ.

ಶಿವನು ತ್ರಿಮೂರ್ತಿಗಳಲ್ಲಿ ಒಬ್ಬನಾದ ದೇವನು. ಆತಿ ಸನಾತನ ಹಾಗೂ ಪವಿತ್ರವಾದ ಹಿಂದು ಕೃತಿಗಳಲ್ಲಿ ಒಂದಾದ ಋಗ್ವೇದ, ತನ್ನ ಮಂತ್ರಗಳಲ್ಲಿ ಶಿವನ ಸಾನ್ನಿಧ್ಯವನ್ನು ಪ್ರಾರ್ಥಿಸುತ್ತದೆ. ವೈದಿಕ ಪುರಾಣಗಳು ಮತ್ತು ಆಚರಣೆಗಳು ಕಾಲದ ಆದಿಯಿಂದಲೂ ಇರುವ ಅವನ ಅಸ್ತಿತ್ವವನ್ನು ಪ್ರತಿಪಾದಿಸುತ್ತವೆ. ಶಿವನು ಪ್ರಧಾನವಾಗಿ ಸಂಹಾರ ಕಾರ್ಯವನ್ನು ನಿರ್ವಹಿಸುವುದಿದ್ದರೂ ಬ್ರಹ್ಮ ವಿಷ್ಣುಗಳ ಸೃಷ್ಟಿ ಮತ್ತು ಸ್ಥಿತಿಯ ಕಾರ್ಯದಲ್ಲಿಯೂ ಸಹಕಾರಿಯಾಗಿದ್ದಾನೆ. ಅವನು ಅನುಗ್ರಹ ಸಂಪನ್ನನಾದಂತೆ, ಗೋಪ್ಯತೆಯ, ಅವ್ಯಕ್ತತೆಯ ಸಂಪನ್ನತೆಯನ್ನು ಹೊಂದಿದ್ದಾನೆ. ಶಿವನನ್ನು ಸಕಲ ಜೀವರಾಶಿಗಳ ಒಡೆಯ, ಈಶನೆಂದು ಸ್ವೀಕರಿಸಿದ್ದು ಪಶುಪತಿ, ಭೂಪತಿ ಮತ್ತು

ಭೂತನಾಥನೆಂದು ವರ್ಣಿತನಾಗಿದ್ದಾನೆ. ದೇವತೆಗಳಲ್ಲಿ ಅವನೇ ಈಶ್ವರನಾಗಿದ್ದು ಮಹೇಶ್ವರ, ಮಹಾದೇವ, ಮಾದೇವ ಎನಿಸಿಕೊಂಡು "ಮಾಯೆ" ಯ ಮೂಲಾಧಾರಕನಾಗಿದ್ದಾನೆ. ಪೂರ್ವ ಹಾಗೂ ಮಧ್ಯಕಾಲೀನ ವೈದಿಕ ಸಾಹಿತ್ಯದಲ್ಲಿ ಶಿವನು ಯೋಗ ವ್ಯಾಖ್ಯಾನ, ಶಾಸ್ತ್ರ, ಸಂಗೀತ ನೃತ್ಯ ಮೊದಲಾದ ಕಲೆ ಮತ್ತು ಪಾಂಡಿತ್ಯಗಳ ಮೂಲ ಕತೃವಾಗಿದ್ದಾನೆ.

ಸಾಮಾನ್ಯವಾಗಿ ದಕ್ಷಿಣಭಾರತೀಯ ದೇವಾಲಯಗಳಲ್ಲಿರುವಂತೆ ಶಿವನ ಇಪ್ಪತ್ನಾಲ್ಕು ಲೀಲಾಪರೂಪಗಳನ್ನು ಶೈವಾಗಮಗಳು ಉಲ್ಲೇಖಿಸುತ್ತವೆ. ಶಿವ ದೇವಾಲಯಗಳ ಕೇಂದ್ರ ಆರಾಧನಾ ಸ್ಥಳದ ದಕ್ಷಿಣಗೋಡೆಯಲ್ಲಿ ಮೂಡಿರುವ ಗೂಡಿನಲ್ಲಿ ಪ್ರತಿಷ್ಠೆಗೊಳ್ಳುವ ದಕ್ಷಿಣಾಮೂರ್ತಿಯ ರೂಪವು ಇವುಗಳಲ್ಲಿ ಮುಖ್ಯವಾದುದು. ಶಿವನು ಯೋಗ, ವೀಣಾ, ಜ್ಞಾನ ಮತ್ತು ವ್ಯಾಖ್ಯಾನಗಳಲ್ಲಿ ಶ್ರೇಷ್ಠ ಗುರುವಾದ್ದರಿಂದ ಯೋಗ ದಕ್ಷಿಣಾಮೂರ್ತಿ, ವೀಣಾಧರ ದಕ್ಷಿಣಾಮೂರ್ತಿ ಮತ್ತು ವ್ಯಾಖ್ಯಾನ ದಕ್ಷಿಣಾಮೂರ್ತಿ ಶಿಲ್ಪವು ಸಾಮಾನ್ಯವಾಗಿ ಶೈವ, ವೈಷ್ಣವ ದೇವಾಲಯಗಳೆರಡರ ದಕ್ಷಿಣಗೋಡೆಗಳ ಗೂಡಿನಲ್ಲಿಯೂ ಕಾಣಬಹುದು. ಕೆಲವು ಪಠ್ಯಗಳ ಆಧಾರದ ಮೇಲೆ ಗೋಪಿನಾಥರಾವ್ ಅವರು ದಕ್ಷಿಣಾ ಎನ್ನುವ ಪದದ ವ್ಯುತ್ಪತ್ತಿಯನ್ನು ವಿವರಿಸಿದ್ದಾರೆ. ಶಿವನು ದಕ್ಷಿಣಾಭಿಮುಖನಾಗಿ ಕುಳಿತು ಋಷಿಗಳಿಗೆ ಯೋಗ ಮತ್ತು ಜ್ಞಾನಗಳನ್ನು ಬೋಧಿಸಿದ್ದರಿಂದ ಅವನು ದಕ್ಷಿಣಾಮೂರ್ತಿ ಎಂದೆನಿಸಿಕೊಂಡ. ಶಿವನ ಈ ರೂಪವನ್ನು ಕಲೆ ಮತ್ತು ವಿಜ್ಞಾನ ವಿದ್ಯಾರ್ಥಿಗಳು ಪ್ರಾರ್ಥಿಸುತ್ತಾರೆ.

ಅ. ವ್ಯಾಖ್ಯಾನ ದಕ್ಷಿಣಾಮೂರ್ತಿ

ಶಿವನು ವ್ಯಾಖ್ಯಾನ ದಕ್ಷಿಣಾಮೂರ್ತಿ ಭಂಗಿಯಲ್ಲಿ ಅವನ ಬಲಗಾಲು ಮೊಣಕಾಲು ಬಳಿಯಿಂದ ಲಂಬವಾಗಿ ಬಾಗಿದ್ದು, ಶಿಲ್ಪ ಸಂಗ್ರಹದಲ್ಲಿ ವಿವರಿಸಿರುವಂತೆ ಅಪಸ್ಮಾರ ಪುರುಷ ಎನ್ನುವ ಕರಾಳ ರಾಕ್ಷಸನ ಮೇಲೆ ಊರಲಾಗಿದೆ. ಎಡಗಾಲು ಬಲತೊಡೆಯ ಮೇಲೆ ನೆಲೆಗೊಂಡಂತೆ ಬಾಗಿದ್ದು, ಇದನ್ನು ಲಲಿತಾಸನ ಅಥವಾ ವೀರಾಸನ ಎನ್ನಲಾಗಿದೆ. ತನ್ನೊಳಗಿನ ಪೂರ್ಣಶಾಂತಿಯನ್ನು ಬಿಂಬಿಸುವ ಶಾಂತ ಮುಖ ಭಾವವನ್ನು ರೂಪಿಸಲಾಗಿದೆ. ಅವನ ಜಡೆಗಟ್ಟಿದ ಕೂದಲು ಹರಡಿದಂತೆ ಅಥವಾ ಸರ್ಪದಿಂದ ಬಿಗಿದ ಜಟಾಮುಕುಟದಂತಿದೆ.[೧೫] ಅವನ ಶರೀರ ವಿಭೂತಿ ಲೇಪಿತವಾಗಿದ್ದು ಅವನ ನಂದಿ ಎಲ್ಲಾ ಆಭರಣಗಳಿಂದ ಅಲಂಕೃತನಾಗಿದ್ದಾನೆ. ಅವನ ಬಲ ಮುಂಗೈ ಜ್ಞಾನ ಮುದ್ರೆ ಅಥವಾ ವ್ಯಾಖ್ಯಾನ ಮುದ್ರೆಯನ್ನು ತೋರುತ್ತಿದೆ; ಬಲ ಹಿಂಗೈಯಲ್ಲಿ ಜಪಮಾಲೆ ಅಥವಾ ಸರ್ಪವನ್ನು ಹಿಡಿದಿರುತ್ತಾನೆ. ಎಡ ಮುಂದಿನ ಕೈ ವರದ ಮುದ್ರೆಯನ್ನು ಎಡ ಹಿಂದಿನ ಕೈಯಲ್ಲಿ ಅಗ್ನಿ, ಕಲಶ, ಜಿಂಕೆ ಅಥವಾ ಡಮರುಗವನ್ನು ಹಿಡಿದಿರುವುದು ಕಂಡುಬರುತ್ತದೆ. ಎಲ್ಲಾ ಆಭರಣಗಳು ಬಟ್ಟೆಯ ಅಥವಾ ಹುಲಿ ಚರ್ಮದ ಉಡುಗೆಗಳು ಮತ್ತು ಯಜ್ಞೋಪವೀತ ಮೊದಲಾದವುಗಳಿಂದ ಅಲಂಕೃತಗೊಂಡಿದ್ದಾನೆ. ಎಡ ಕಿವಿಯಲ್ಲಿ ಶಂಖ ಪತ್ರ ಮತ್ತು ಬಲ ಕಿವಿಯಲ್ಲಿ ಮರಕ ಕುಂಡಲ

ಅಥವ ನಾಗಕುಂಡಲವನ್ನು ಧರಿಸಿರುತ್ತಾನೆ. ನಾರದ, ಜಮದಗ್ನಿ, ವಶಿಷ್ಠ, ಭೃಗು, ಭಾರಧ್ವಜ, ಶಂಖ ಮತ್ತು ಅಗಸ್ತ್ಯ ಈ ಏಳು ಜನ ಋಷಿಗಳಿಗೆ ಧರ್ಮವನ್ನು ಬೋಧಿಸುವ ಆಕಾರವನ್ನು ಶಿಲ್ಪಶಾಸ್ತ್ರವು ಹೇಳುತ್ತದೆ. ಈ ಋಷಿಗಳು ಜಟಾಮುಕುಟರಾಗಿ ರುದ್ರಾಕ್ಷಿಮಾಲೆಯನ್ನು ಧರಿಸಿ ಯಜ್ಞೋಪವೀತವನ್ನು ಧಾರಣೆ ಮಾಡಿರುತ್ತಾರೆ. ಈ ದಕ್ಷಿಣಾಮೂರ್ತಿಯು ಕಿನ್ನರರು, ದೇವತೆಗಳು ಮತ್ತಿತರರಿಂದ ಸ್ತುತಿಸಲ್ಪಡುತ್ತಾನೆ.

ಉಪನಿಷತ್ತು ಮತ್ತು ಸೂತಸಂಹಿತೆ[೧೬] ಗೆ ಅನುಸಾರವಾಗಿ ದಕ್ಷಿಣಾಮೂರ್ತಿಯು ಪರಮದೇವನಾಗಿದ್ದು ಕಲ್ಪಾಂತದಲ್ಲಿ ಜಗತ್ತನ್ನು ತನ್ನಲ್ಲಿ ಲೀನಗೊಳಿಸಿಕೊಂಡು ಆನಂದದಲ್ಲಿ ತಲ್ಲೀನನಾಗಿರುತ್ತಾನೆ. ಜ್ಞಾನವನ್ನು ದಕ್ಷಿಣ ಎಂದುಕರೆಯಲಾಗಿದ್ದು ದಕ್ಷಿಣದಕ್ಕಿನತ್ತ ಅವನು ಮುಖ ಮಾಡಿ ದೃಷ್ಟಿಸುತ್ತಿರುವುದರಿಂದ ಅವನನ್ನು ದಕ್ಷಿಣಾ ಮೂರ್ತಿಯೆಂದು ಕರೆಯಲಾಗಿದೆ. ಅಪಸ್ಮಾರ ಪುರುಷ ಎಂಬುದು ಜನತೆಯಲ್ಲಿನ ಅಜ್ಞಾನದ ಮೂರ್ತರೂಪವಾಗಿದ್ದು ಅದನ್ನು ಪಾದದ ತುಳಿತದ ಮೂಲಕ ತನ್ನನ್ನು ನಿಗ್ರಹದಲ್ಲಿಟ್ಟುಕೊಂಡಿದ್ದಾನೆ. ಅವನ ಕೈಯಲ್ಲಿರುವ ಗ್ರಂಥವು ಜಗತ್ತಿನ ಎಲ್ಲಾ ಜ್ಞಾನವನ್ನೊಳಗೊಂಡಿದ್ದು ಎಲ್ಲಾ ಆತ್ಮಗಳನ್ನು ಬೆಳಗಿಸುವ ಸಂಕೇತವಾಗಿದೆ. ಅವನ ಕೈಯಲ್ಲಿರುವ ಅಕ್ಷರಮಾಲೆಯು ತತ್ವಗಳ ಪ್ರಾತಿನಿಧಿಕ ರೂಪಗಳಾಗಿವೆ. ಅವನ ಶರೀರದ ಬಣ್ಣವು ಚಿರ ಆನಂದ ಹಾಗೂ ಶಕ್ತಿಯನ್ನು ಪ್ರತಿನಿಧಿಸುತ್ತದೆ. ಗಾಢವಾದ ನೆರಳನ್ನು ಹರಡಿ ವಿಶಾಲವಾಗಿ ಚಾಚಿಕೊಂಡಿರುವ ಆಲದ ಮರವು ಮಾಯೆಯ ಸಂಕೇತವಾಗಿದ್ದು ಶಿವನ ವೃಷಭವು ಧರ್ಮದ ಸಂಕೇತವಾಗಿದೆ. ವೇದ ಮತ್ತು ಆತ್ಮ ವಿದ್ಯೆಗಳಲ್ಲಿ ನಿಷ್ಣಾತರಾಗಿರುವ ಋಷಿಗಳಿಗೆ ಶಿವನು ಬೋಧಿಸುತ್ತಿದ್ದು ಅವರನ್ನು ಸಂಸಾರ ಬಂಧನದಿಂದ ಮುಕ್ತಗೊಳಿಸುತ್ತಾನೆ. ಶಿವನ ಜನನ ಮರಣಗಳಿಂದ ಮುಕ್ತನಾಗಿ, ನಾಶರಹಿತನಾಗಿದ್ದು ಅವನ ಅಸನವಾದ ಕಮಲವು ಪವಿತ್ರ ಓಂ ಸಂಕೇತ ವಾಗಿದೆ.

ಆ. ಶಿವನ ವೀಣಾಧರ ದಕ್ಷಿಣಾಮೂರ್ತಿ ರೂಪ

ಗಾಯನ ವಾದನಗಳೆರಡರಲ್ಲೂ ನಿಷ್ಣಾತನಾದ ಸಂಗೀತಜ್ಞ ಶಿವನನ್ನು ವೀಣಾಧರ ದಕ್ಷಿಣಾಮೂರ್ತಿಯಾಗಿ ಪೂಜಿಸಲಾಗುತ್ತದೆ. ಅಂಶುಮದ್ಭೇದಾಗಮದಂತೆ [೧೭] ಈ ಮೂರ್ತಿಯ ಎಡಗಾಲು ಉತ್ಕಟಿಕ ಭಂಗಿಯಲ್ಲಿದ್ದು ಮುಂದಿನ ಎರಡು ಕೈಗಳಲ್ಲಿ ವೀಣೆಯನ್ನು ಹಿಡಿದಿದ್ದು ಹಿಂದಿನ ಕೈಗಳು ಜಪಮಾಲೆ ಮತ್ತು ಅಗ್ನಿ ಕಲಶ ಅಥವಾ ಹಾವನ್ನು (ಸರ್ಪ) ಹಿಡಿದಿವೆ. ವೀಣಾಧರಮೂರ್ತಿಯ ಸುತ್ತಲೂ ಅನೇಕ ವಿಧವಾದ ಪ್ರಾಣಿಗಳು, ಸರೀಸೃಪಗಳು, ಋಷಿಗಳು ಮತ್ತು ತಪಸ್ವಿಗಳ ಚಿತ್ರವಿವೆ. ವೀಣಾಧರ ದಕ್ಷಿಣಾಮೂರ್ತಿಯ ಶಿಲ್ಪವು ಕುಳಿತ ಅಥವಾ ನಿಂತ ಭಂಗಿಯಲ್ಲಿರುತ್ತದೆ.

ಹಿಂದು ಪ್ರತಿಮಾಶಾಸ್ತ್ರದ ಕೃತಿಯಲ್ಲಿ ದಕ್ಷಿಣಾ ಮೂರ್ತಿಯ ವಿವಿಧ ರೂಪಗಳನ್ನು ಛಾಯಾಚಿತ್ರಗಳ ಮೂಲಕ ಶ್ರೀಗೋಪಿನಾಥ್‌ರಾವ್ ಅವರು ಚಿತ್ರಿಸಿದ್ದಾರೆ.[೧೮]

ಶಿವನ ವ್ಯಾಖ್ಯಾನ ದಕ್ಷಿಣಾ ಮೂರ್ತಿರೂಪದ ಶಿಲ್ಪವು ಕಮಲಾಪುರದ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿಸಲಾಗಿದೆ. (ಪಿ.ಐ.ಸಂ.೦೧) ಇಲ್ಲಿ ಶಿವನನ್ನು ವ್ಯಾಖ್ಯಾನ ದಕ್ಷಿಣಾಮೂರ್ತಿಯಾಗಿ ಕೈಲಾಸ ಪರ್ವತದ ಮೇಲೆ ಲಲಿತಾಸನದಲ್ಲಿ ಕುಳಿತಂತೆ ಕೆತ್ತಲಾಗಿದೆ. ಅವನಿಗೆ ನಾಲ್ಕು ಕೈಗಳಿದ್ದು ಮೇಲಿನ ಬಲಗೈಯಲ್ಲಿ ಹಾವನ್ನು ಎಡಗೈ ಯಲ್ಲಿ ಅಗ್ನಿಕಲಶವನ್ನು ಹಿಡಿದಿದ್ದಾನೆ. ಕೆಳಗಿನ ಎರಡೂ ಕೈಗಳು ನಾಶಗೊಂಡಿದ್ದು ಬಹುಶಃ ವ್ಯಾಖ್ಯಾನ ಮುದ್ರೆ ಮತ್ತು ವರದ ಮುದ್ರೆಯ ಭಂಗಿಗಳಿದ್ದಿರಬಹುದು. ಅವನ ಕೇಶವು ಕೆದರಿದ್ದುಕೇಶ ಬಂಧನದಿಂದ ಮಧ್ಯದ ಶಿಖೆಯು ಕಟ್ಟಲ್ಪಟ್ಟಿದೆ. ಇಕ್ಕೆಲಗಳಲ್ಲಿಯೂ ಮುಂಗುರುಗಳು ಇಳಿಬಿದ್ದಿದೆ. ಎಡಗಿವಿಯಲ್ಲಿ ಪತ್ರಕುಂಡಲವನ್ನು ಧರಿಸಿದ್ದು ಬಲಗಿವಿಯಲ್ಲಿ ನಾಗಕುಂಡಲವನ್ನು, ಹಾರ, ವಕ್ಷಬಂಧ, ನಡುಪಟ್ಟಿ, ಕಾಲ್ಗಡಗ, ಯಜ್ಞೋಪವೀತ ಮೊದಲಾದವುಗಳನ್ನು ಧರಿಸಿದ್ದಾನೆ. ಅವನ ಬಲಗಾಲು ರಾಕ್ಷಸನ ಮೇಲಿಟ್ಟಿದ್ದಾನೆ. ಕೆಳಗಿನ ಎರಡೂ ಕೈಗಳು, ಎಡಗಾಲು, ಬಲಮೊಳಕಾಲು ಕೆತ್ತಿ ಕಳಚಿದ್ದು ನಾಶಗೊಂಡಿದೆ. ಇಕ್ಕೆಲಗಳಲ್ಲಿ ಒಬ್ಬೊಬ್ಬ ಋಷಿಯು ಅಂಜಲಿ ಮುದ್ರೆಯಲ್ಲಿ ಕುಳಿತಿರುವಂತೆ ಕೆತ್ತಲಾಗಿದೆ. ಹಂಪಿಯಲ್ಲಿ ಗುರುತಿಸಲಾಗಿರುವ ಈ ವ್ಯಾಖ್ಯಾನ ದಕ್ಷಿಣಾಮೂರ್ತಿಯ ವಿಗ್ರಹವು ಶಿಥಲವಾಗಿರುವ ಒಂದೇ ವಿಗ್ರಹವಾಗಿ ಉಳಿದಿದೆ.

ಶಿವನ ವ್ಯಾಖ್ಯಾನ ದಕ್ಷಿಣಾಮೂರ್ತಿಯ ಮತ್ತೊಂದುವಿಗ್ರಹವು ಹಂಪೆಯ ಕೋಟಿಲಿಂಗದ ಬಳಿಯ ಒಂದು ಬಂಡೆಯ ಮೇಲೆ ಕೆತ್ತಲಾಗಿದೆ. (ಪಿ.ಐ.ಸಂ.೦೨) ಇದರಲ್ಲಿ ಶಿವನು ವೀರಾಸನದಲ್ಲಿ ಹಿಮಾಲಯ ಪರ್ವತದಲ್ಲಿ ಒಂದು ಆಲದ ಮರದ ಕೆಳಗೆ ಕುಳಿತಂತೆ ರೂಪಿಸಲಾಗಿದೆ. ಬಲಗಾಲು ಅಪಸ್ಮಾರ ಪುರುಷನ ಮೇಲಿದ್ದು ಎಡಗಾಲನ್ನು ಬಲತೊಡೆಯ ಮೇಲೆ ಅಡ್ಡಲಾಗಿಟ್ಟುಕೊಂಡಿದ್ದಾನೆ. ಅವನಿಗೆ ಮೂರು ಕಣ್ಣುಗಳಿದ್ದು ನಾಲ್ಕು ಕೈಗಳನ್ನು ಹೊಂದಿದ್ದಾನೆ. ಕೆಳಗಿನ ಬಲಗೈಯಲ್ಲಿ ವ್ಯಾಖ್ಯಾನ ಮುದ್ರೆಯಲ್ಲಿ ಅಕ್ಷ ಮಾಲೆಯನ್ನು ಹಿಡಿದಿದ್ದು ಮೇಲಿನ ಬಲಗೈಯಲ್ಲಿ ಹಾವನ್ನು ಮೇಲಿನ ಎಡಗೈಯಲ್ಲಿ ಅಗ್ನಿಕಲಶವನ್ನು ಹಿಡಿದಿದ್ದಾನೆ. ಕೆಳಗಿನ ಎಡಗೈ ದಂಡಭಂಗಿಯಲ್ಲಿದೆ. ಮೊಳಕೈ ಎಡೆಮೊಣಕಾಲಿನ ಮೇಲೆ ಊರಿದೆ. ಯೋಗ ಪಟ್ಟಿಯು ಶರೀರವನ್ನು ಬಳಸಿ ಎಡ ಮೊಳಕಾಲನ್ನು ಸುತ್ತಿದೆ. ಜಟಾಮುಕಟಧಾರಿಯಾಗಿದ್ದು ಎರಡೂ ಕಡೆಗೂ ಮುಂಗುರುಳು ಕೆಳಮುಖವಾಗಿ ಇಳಿಬಿದ್ದಿದೆ. ಕರ್ಣಕುಂಡಲ, ಕಂಠಾಹಾರ, ಹಾರ, ಚೆನ್ನವೀರ, ಯಜ್ಞೋಪವೀತ, ನಡುಪಟ್ಟಿ (ಕಟಿಬಂಧ), ಭೂಜಕವಚ, ಕಡಗ ಮತ್ತು ಸರಿಕಡಗಗಳಿಂದ ಶಿವನು ಅಲಂಕೃತನಾಗಿದ್ದಾನೆ.

ಎರಡೂ ಕಡೆಗಳಲ್ಲೂ ಋಷಿಗಳು ಅಂಜಲೀ ಬದ್ಧರಾಗಿ ನಿಂತಿದ್ದಾರೆ. ಎಡಗಡೆ ನಿಂತಿರುವ ಋಷಿಗಳು ದ್ವಿಭಂಗ ಮುದ್ರೆಯಲ್ಲಿ ಅಂಜಲೀಬದ್ಧರಾಗಿ ನಿಂತಿದ್ದಾರೆ. ಮೇಲೆಕ್ಕೆತ್ತಿ ಕಟ್ಟಿದ ಶಿಖೆ ಮತ್ತು ಚೂಪಾದ ಗಡ್ಡವನ್ನು ಕೆತ್ತಲಾಗಿದೆ. ರುದ್ರಾಕ್ಷಿಮಾಲೆ ಯಜ್ಞೋಪವೀತ ಮತ್ತಿತರ ಮಣಿಖಚಿತ ಆಭರಣಗಳೊಂದಿಗೆ ಅಲಂಕೃತನಾಗಿದ್ದಾನೆ.

ಅಪಸ್ಮಾರ ಪುರುಷನು ಶಿವನ ಬಲಗಾಲ ಕೆಳಗಿದ್ದು ಎಡಗೈಯಲ್ಲಿ ಒಂದು ನಾಗರಹಾವನ್ನು ಹಿಡಿದಿದ್ದಾನೆ. ಮಲಗಿ ತಲೆಯೆತ್ತಿಕೊಂಡಿರುವ ನಂದಿಯು ಪೀಠದ ಮೇಲೆ ಬಲಕ್ಕೆತಿರುವಿ ಕುಳಿತಿದೆ. ಆಲದ ಮರದ ಮೇಲೆ ಕೋತಿಯಂತಹ ಪ್ರಾಣಿಗಳು ಹಂಸದಂತಹ ಪಕ್ಷಿಗಳು ಕಂಡುಬರುತ್ತದೆ. ವಿಶಾಲವಾದ ಆಲದ ಮರದ ನೆರಳು ಗಾಢವಾಗಿ ಶಿವನ ತಲೆಯ ಮೇಲ್ಭಾಗದಲ್ಲಿ ಹರಡಿದೆ. ಈ ಶಿಲ್ಪವನ್ನು ಒಂದು ಗ್ರ್ಯಾನೈಟ್ ಶಿಲೆಯ ಮೇಲೆ ಸುಂದರವಾಗಿ ಕೆತ್ತಲಾಗಿದೆ.

ಮೂಲ ವಿರುಪಾಕ್ಷ ದೇವಸ್ಥಾನ ಎಂದು ಕರೆಯಲಾಗುವ ಭೂತಳ ಶಿವದೇವಾಲಯದ ಕಂಭದ ಮೇಲೆ ವೀಣಾಧರ ದಕ್ಷಿಣಾಮೂರ್ತಿಯ ಮತ್ತೊಂದು ಶಿಲ್ಪವನ್ನು (ಪಿ.ಐ.ಸಂ.೦೩) ಕೆತ್ತಲಾಗಿದೆ. ಪೀಠವೊಂದರ ಮೇಲೆ ಲಲಿತಾಸನದಲ್ಲಿ ವೀಣಾಧರನಾಗಿ ಶಿವನು ಕುಳಿತಂತೆ ಚಿತ್ರಿಸಲಾಗಿದೆ. ಅವನಿಗೆ ನಾಲ್ಕು ಕೈಗಳಿದ್ದು ಕೆಳಗಿನ ಎರಡು ಕೈಗಳಲ್ಲಿ ಶರೀರಕ್ಕೆ ಅಡ್ಡಲಾಗಿ ವೀಣೆಯನ್ನು ಬಾರಿಸುತ್ತಿದ್ದಾನೆ. ಮೇಲಿನ ಬಲಗೈಯಲ್ಲಿ ಬಹುಶ ಅಗ್ನಿಕಲಶವನ್ನು ಹಿಡಿದು ಮೇಲಿನ ಎಡಗೈಯಲ್ಲಿ ಹಾವನ್ನು ಹಿಡಿದಿದ್ದಾನೆ. ಕಿರೀಟ ಮುಕುಟ, ಕಿವಿಯುಂಗರ, ವಕ್ಷಕವಚ, ಯಜ್ಞೋಪವೀತ ನಡುಪಟ್ಟಿ, ಕಡಗ, ಎರಡು ತೋಳಬಂಧಿ ಮತ್ತು ಉದ್ದನೆಯ ವನಮಾಲೆಯನ್ನು ಧರಿಸಿದ್ದಾನೆ. ಪ್ರಧಾನ 'ವಾಗಿ ಎದ್ದು ಕಾಣುವ ಮೂರನೆಯ ಕಣ್ಣನ್ನು ಆವನು ಹೊಂದಿದ್ದಾನೆ. ವೀಣಾ ವಾದನದ ಮೂಲಕವೇ ಜ್ಞಾನವನ್ನು ಹೊರಸೂಸುವ ತನ್ಮಯತೆಯ ಅಭಿವ್ಯಕ್ತಿಯ ಭಾವವನ್ನು ವ್ಯಕ್ತಪಡಿಸುತ್ತದೆ. ವಿಗ್ರಹದ ಹಿಂದೆ ಪ್ರಭಾವಳಿ ಇದ್ದು ಇದರ ಮಧ್ಯ ಭಾಗದಲ್ಲಿ ಕಿರೀಟಮುಖವನ್ನು ಹೊಂದಿದೆ.

ಗ್ರಂಥ ಋಣ

೧. ದೇವಕುಂಜರಿ.ಡಿ. ಹಂಪಿ, ಎ.ಎಸ್.ಐ. ನವದೆಹಲಿ ೧೯೮೩ ಪುನರ್ಮುದ್ರಣ ಪು-೧.

೨. ಕೆಡದಿ ನೃಪವಿಜಯ, ಪು-೧೪,೧೬, ನೀಲಕಂಠಶಾಸ್ತ್ರಿ, ಕೆ.ಎ.ಮತ್ತುವೆಂಕಟರಮಣಯ್ಯ.ಎನ್ ಫರ್ದರ್‌ಸೋರ್ಸ್‌ಸ್ ಆಫ್ ವಿಜಯನಗರ ಹಿಸ್ಟರಿ, ಸಂಪುಟ-೨, ಪು-೧೦. ಎಫ್.ಎಸ್.ವಿ.ಹೆಚ್.

೩. ಎಸ್.ಐ.ಪಿ. ಸಂಪುಟ-೯, ನಂ-೨೭೧, ಪು-೬೮.

೪. ಅದೇ ನಂ-೨೬೦, ಪು-೫೭.

೫. ಎಫ್.ಎಸ್.ವಿ.ಎಚ್. ಸಂಪುಟ-೨, ಪು-೧೦೬.

೬. ದೇವಕುಂಜರಿ ಡಿ. ಪು-೩.

೭. ಎ.ಆರ್.ಎಸ್.ಪಿ.ಈ. ೧೯೭೫, ೭೬, ನಂ-ಬಿ.೯೫.

೮. ದೇಸಾಯಿ ಪಿ.ಬಿ. ಶಾಸನ ಪರಿಚಯ, ಧಾರವಾಡ ೧೯೫೬, ಸಂ-೪೯, ಪು-೬೬.

೯. ಎಸ್.ಐ.ಪಿ. ಸಂ-೪, ನಂ-೨೬೦.

೧೦. ವಸುಂಧರ, ಫಿಲಿಯೋಜಾ, ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ಬೆಂಗಳೂರು, ೧೯೮೦, ಪು-೪೫.

೧೧. ಅದೇ ಪು-೪೬.

೧೨. ಎ.ಆರ್.ಎಸ್.ಪಿ.ಈ. ೧೯೩೫, ನಂ ೩೫೩, ವಿಜಯನಗರ ಪ್ರೋಗ್ರೆಸ್ ರಿಪೋರ್ಟ್ ೧೯೮೩-೮೪, ಮೈಸೂರು, ಪು-೨೧.

೧೩. ಋಗ್ವೇದ, ೧-೧೧೪,೨, ಸಂ. ಮ್ಯಾಕ್ಸ್‌ಮುಲ್ಲರ್, ೧೮೯೦. ೯೨ ವೈದಿಕ ಸಂಶೋಧನೆ.

೧೪. ಡಿ.ಹೆಚ್.ಐ.ಪು. ೪೪೬.

೧೫. ಕೃಷ್ಣಶಾಸ್ತ್ರಿ. ಹೆಚ್.ಎಸ್.ಐ.ಐ.ಜಿ. ಮತ್ತು ಜಿ., ಚಿತ್ರ-೫೪.

೧೬. ಈ.ಹೆಚ್.ಐ.ಪು೨೭೭,೨೭೮.

೧೭. ಅದೇ ಪು-೨೮೯.

೧೮. ಅದೇ ಪಿ.ಎಲ.ಎಸ್. LXXII-ಚಿತ್ರ ೧ ೨ LXXIII, LXXVII ಚಿತ್ರ ೧.೨.LXXVI, LXXXI.

೧೩. ವಿಜಯನಗರ ಕಾಲದ ದಶಾವತಾರ ಶಿಲ್ಪಗಳಲ್ಲಿ ವಿಷ್ಣುಮೂರ್ತಿ ಪರಂಪರೆಯ ಪ್ರಾಚೀನತೆ

ಅ.ಸುಂದರ

ಎರಡು ವರ್ಷಗಳ ಹಿಂದೆ ವಿಜಯನಗರ ಉತ್ಸವದ ಅಂಗವಾಗಿ ಈ ಇಲಾಖೆಯು ನಡೆಸಿದ ವಿಚಾರ ಸಂಕಿರಣದಲ್ಲಿ ಹಂಪಿಯಲ್ಲಿಯ ವಿಜಯನಗರ ಕಾಲದ "ವಿಷ್ಣು ದಶಾವತಾರ ಶಿಲ್ಪ ಪಟ್ಟಿಕೆ" ಯ ಬಗ್ಗೆ ಒಂದು ಪ್ರಬಂಧವನ್ನು ಮಂಡಿಸಿದ್ದೇನೆ. ಹಿಂದೆ ಬೇರೆಡೆಗಳಲ್ಲಿ ಮತ್ತು ಈಚೆಗೆ ಆಕಸ್ಮಿಕವಾಗಿ ನನ್ನ ಗಮನಕ್ಕೆ ಬಂದ ಕೆಲವು ಇಂಥ ಶಿಲ್ಪಗಳನ್ನು ಈಗಿನ ಪ್ರಬಂಧದಲ್ಲಿ ವಿವೇಚಿಸಲಾಗಿದೆ.

ಅವು ವಾಸನ (ನರಗುಂದ ತಾ. ಧಾರವಾಡ ಜಿಲ್ಲೆ) ದ ೧೧ನೆ ಶತಮಾನದ ವಿಷ್ಣು ರೂಪದಲ್ಲಿಯ ಜಿನ,: ಪಂಡ (ಮಧ್ಯ ಪ್ರದೇಶದ ಭೋಪಾಲಿನ ಹತ್ತಿರ) ಸು. ೧೨ನೆ ಶತಮಾನದ ವಿಷ್ಣು ಷಡಾವತಾರ ಶಿಲ್ಪ ಸಹಿತ ತೀರ್ಥಂಕರ : ದೇಗಾಂವ್ ದಲ್ಲಿಯ ಪಾಟೇಶ್ವರ (ಮಹಾರಾಷ್ಟ್ರದ ಸಾತಾರದ ಹತ್ತಿರ) ದ ಗವಿಯಲ್ಲಿಯ ಬುದ್ಧ ಮತ್ತು ತೀರ್ಥಂಕರ ಸಹಿತ ದ್ವಾದಶಾವತಾರ ಶಿಲ್ಪ ಪಟ್ಟಿಕೆಗಳು ಭೀಮಕಟ್ಟೆ ದೂರ್ವಾಸುಪುರದ ವಿಜಯನಗರ ಕಾಲದ ಗಂಗಾಧರೇಶ್ವರ ದೇವಾಲಯದ ಗೋಡೆಯ ಮೇಲಿನ ದೊಡ್ಡ ದಾಗಿರುವ ದಶಾವತಾರ ಶಿಲ್ಪಗಳು ಮತ್ತು ಹೊಸನಗರದಿಂದ (ಶಿವಮೊಗ್ಗ ಜಿ) ೫.ಕಿ.ಮಿ. ದಕ್ಷಿಣಕ್ಕಿರುವ ಜಯನಗರ (ಈಗಿನ ಹೆಸರು) ದಲ್ಲಿರುವ ಶರಾವತಿ ದಂಡೆಯ ಮೇಲಿನ ಕೆಳದಿ ಅರಸುಮನೆತನ ಕಾಲದ ಶಿವ ದೇವಾಲಯದ ಗೋಡೆಯಮೇಲಿನ ದಶಾವತಾರ ಶಿಲ್ಪಗಳು.

೪೦ ವರ್ಷಗಳ ಹಿಂದೆ ನಾನು ಪರಿಶೀಲಿಸಿದ ವಾಸನದ (ಚಿತ್ರ-೧) ಪದ್ಮಾಸನದಲ್ಲಿ ರುವ ಚತುರ್ಭುಜ ತೀರ್ಥಂಕರ ಶಿಲ್ಪದ ಹಿಂದಿನ ಬಲ ಮತ್ತು ಎಡ ಕೈಗಳಲ್ಲಿ ಚಕ್ರ ಮತ್ತು ಶಂಖಗಳಿವೆ. ಸುಮಾರು ೭-೮ ತಿಂಗಳುಗಳ ಹಿಂದೆ ವಿಜಯ ಕರ್ನಾಟಕ ವೃತ್ತ ಪ್ರತಿಕೆಯಲ್ಲಿ ಪ್ರಕಟವಾದ ಆಕಸ್ಮಿಕವಾಗಿ ದೊರೆತ ಪಂಡದ ತೀರ್ಥಂಕರ ಶಿಲ್ಪವು (ಚಿತ್ರ-೨) ಕುಳಿತ ಭಂಗಿ ಮತ್ತು ಲಕ್ಷಣಗಳಲ್ಲಿ ವಾಸನ ಶಿಲ್ಪದಂತಿದೆ. ಆದರೆ ಇದರ ವೈಶಿಷ್ಟ್ಯ ಶಿಲ್ಪದ ಎಡ ಮತ್ತು ಬಲ ಬದಿಗಳಲ್ಲಿ ಮೂರು ಮೂರು ಒಟ್ಟು ಆರು ವಿಷ್ಣು ವಿನ ಅವತಾರಗಳ ಶಿಲ್ಪಗಳಿರುವುದು. ಅವುಗಳಲ್ಲಿ ತೀರ್ಥಂಕರನ ಅಕ್ಕ-ಪಕ್ಕದಲ್ಲಿರುವ ಶಿಲ್ಪಗಳು ಭೂ ವರಾಹ ಮತ್ತು ಉಗ್ರ ನರಸಿಂಹ ಎಂದು ನಿಸ್ಸಂಶಯವಾಗಿ ಗುರುತಿಸಬಹುದು.


೧೯೮೫-೮೬ ರಲ್ಲಿ ಡಾ. ಉಷಾ ಭೆಂಡೆಯವರು ಶೋಧಿಸಿದ ಪಾಟೇಶ್ವರದ ಸು. ೧೩-೧೪ನೆ ಶತಮಾನದ ನಾಲ್ಕು ಶಿಲಾ ಪಟ್ಟಿಕೆಗಳಲ್ಲಿ (ಚಿತ್ರಗಳು ೩-೪) ವಿಷ್ಣುವಿನ ೧೨ ಅವತಾರದ ಉಬ್ಬು ಶಿಲ್ಪಗಳಿವೆ. ಆವು ಕ್ರಮವಾಗಿ ಪೂರ್ಣ ಪ್ರಾಣಿ ರೂಪಗಳಲ್ಲಿ ರುವ ಮತ್ಸ್ಯ, ಕೂರ್ಮ, ವರಾಹ, ನಿಂತ ಭಂಗಿಯಲ್ಲಿಯ ನರ-ಸಿಂಹ, ಛತ್ರಿಧಾರಿ ವಾಮನ, ಕೋದಂಡ ರಾಮ, ಪರಶುಧಾರಿ ರಾಮ(?), ಹಲಧಾರಿ ಬಲರಾಮ ಸಿದ್ಧಾಸನದಲ್ಲಿರುವ ಯೋಗಿ ಬುದ್ಧ, ಆಶ್ವಾರೋಹಿ ಕಲ್ಕಿ, ವೇಣುಗೋಪಾಲನ ಕೃಷ್ಣ ಮತ್ತು ಚಕ್ರ ಮತ್ತು ಶಂಖ ಸಹಿತ ಸಿದ್ಧಾಸನದಲ್ಲಿರವ ತೀರ್ಥಂಕರ. ವಿಷ್ಣುವಿನ ಈ ಅವತಾರ ಪಟ್ಟಿಕೆಗಳಲ್ಲಿ ಬುದ್ಧ ಮತ್ತು ತೀರ್ಥಂಕರರಿಬ್ಬರನ್ನೂ ರೂಪಿಸಿರುವುದು ಬಹುಮಟ್ಟಿಗೆ ಅದ್ವಿತೀಯ ವೆಂದೇ ಹೇಳಬಹುದು.

ಸುಮಾರು ೨೫ ವರ್ಷಗಳ ಹಿಂದೆ ನಾನು ಪರಿಶೀಲಿಸಿದ ಭೀಮನಕಟ್ಟೆ- ದೂರ್ವಾಸ ಪುರದ ಸು.೧೬ನೆ ಶತಮಾನದ ಕೊನೆಯ ಕಾಲದ ಐದು ದೇವಾಲಯಗಳಲ್ಲಿ ಒಂದಾದ ಗಂಗಾಧರೇಶ್ವರ ದೇವಾಲಯದ ಗೋಡೆಗಳ ಮೇಲಿನ ಒಂದೊಂದು ಬದಿಯಲ್ಲಿ ಮೂರು ನಾಲ್ಕರಂತೆ ಸರಳ ದಶಾವತಾರ ಶಿಲ್ಪಗಳು. ಈ ಉಬ್ಬು ಶಿಲ್ಪಗಳು ಬೃಹತ್ ಪ್ರಮಾಣ ದಲ್ಲಿರುವುದು ಗಮನಾರ್ಹ.

ಸುಮಾರು ೧೦ ವರ್ಷಗಳ ಹಿಂದೆ ಪರಿಶೀಲಿಸಿದ ಜಯನಗರ (ಈಗಿನ ಹೆಸರು. ಇದು ಕೆಳದಿ ಆರಸು ಇಮ್ಮಡಿ ಸೋಮೇಶೇಖರನ ಕಾಲದಲ್ಲಿ ಸ್ಥಾಪಿತವಾದ ನಾಗ ಪಟ್ಟಣವಾಗಿರುಬಹುದೆ?)ದ ಶರಾವತಿ ನದಿ ದಂಡೆಯ ಮೇಲಿರುವ ಪ್ರಾಯಶಃ ಸು ೧೮ನೆ ಶತಮಾನದ ಆದಿಭಾಗದ ಶಿವದೇವಾಲಯದ ಗೋಡೆಗಳ ಮೇಲಿನ ದಶಾವತಾರ ಶಿಲ್ಪಗಳಲ್ಲಿ ಒಂಬತ್ತನೆಯ ಅವತಾರದ ಕಿರೀಟಧಾರಿ ಸಾಲಂಕೃತ ಶಿಲ್ಪವು ತೀರ್ಥಂಕರ ನಾಗಿರದೆ, ಜೀವಂಧರ ಸ್ವಾಮಿಯಾಗಿರಬಹುದೆಂದು ನನ್ನ ಅನುಮಾನ. ಇವರ ಕಥೆ ಗುಣಭದ್ರನ ಉತ್ತರ ಪುರಾಣ ಪುಷ್ಪದಂತನ ಅಪ್ರಭ್ರಂಶ ಪುರಾಣ, ಜಡೆಯದೇವ ವಾದೀಭ ಸಿಂಹನ ಗದ್ಯ ಚಿಂತಾಮಣಿ ಹಾಗೂ ಕ್ಷತ್ರ ಚಿಂತಾಮಣಿ ಮತ್ತು ಹರಿಚಂದ್ರನ ಜೀವಂಧರ ಚಂಪೂ (ಸು.೧೦ನೆ ಶತಮಾನ) ಕಾವ್ಯದಲ್ಲಿದೆ. ಪ್ರಾಯಶಃ ರಾಜಾಸ್ಥಾನದ ಒಂದು ಪ್ರದೇಶದ ಸುಮಾರು ೫ನೆ ಶತಮಾನದ ಜೀವಂಧರಸ್ವಾಮಿಯ ಕಂಚಿನ ಮೂರ್ತಿಯು ದೊರೆತಿದೆ. ಇವೆಲ್ಲವನ್ನು ಕೂಲಂಕುಷವಾಗಿ ಪರಿಶೀಲಿಸಬೇಕಾಗಿದೆ.

ಮೇಲೆ ಉಲ್ಲೇಖಿಸಿದ ನನ್ನ ಹಿಂದಿನ ಪ್ರಬಂಧದಲ್ಲಿ ವಿಜಯನಗರ ಕಾಲ ವಿಷ್ಣುವಿನ ದಶಾವತಾರ ಶಿಲ್ಪಗಳಲ್ಲಿ ಸಾಮಾನ್ಯವಾಗಿ ಬುದ್ಧನ ಬದಲು ತೀರ್ಥಂಕರ ಶಿಲ್ಪವಿರುವು ದನ್ನು ವಿವೇಚಿಸಲಾಗಿದೆಯಷ್ಟೆ. ನನ್ನ ಈಗಿನ ಪ್ರಬಂಧದಲ್ಲಿ ವಿವೇಚಿಸಲಾದ ಶಿಲ್ಪ ಗಳಿಂದ ಸಧ್ಯಕ್ಕೆ ಕೆಲವು ಅಂಶಗಳು ಸ್ಪಷ್ಟವಾಗುತ್ತದೆ. ವಿಜಯನಗರ ಕಾಲದ ದಶಾವತಾರ ಶಿಲ್ಪ ಮಾದರಿಯ ಪರಿಕಲ್ಪನೆ ಇದ್ದಕಿದ್ದ ಹಾಗೆ ಆ ಕಾಲದಲ್ಲಿ ಬರದೆ ಅದಕ್ಕೊಂದು ದೀರ್ಘ ಕಾಲದ ಪರಂಪರೆಯಿದೆ. ಎರಡನೆಯದಾಗಿ ಅದು ವ್ಯಾಪಕವಾಗಿ ಪ್ರಚಲಿತ ದಲ್ಲಿತ್ತು. ಮೂರನೆಯದಾಗಿ ಸಾಮಾನ್ಯವಾಗಿ ವಿಷ್ಣು ಶಿಲ್ಪದಲ್ಲಿರುವಂತೆ, ಪಂಡದ

ಶಿಲ್ಪದಲ್ಲಿ (ಜಿನ) ತೀರ್ಥಂಕರ ಶಿಲ್ಪವೇ ಪ್ರಧಾನವಾಗಿ ಕೇಂದ್ರದಲ್ಲಿದ್ದು ಅಕ್ಕ ಪಕ್ಕದಲ್ಲಿ ಷಡಾವತಾರಗಳನ್ನು ವಿಷ್ಣುವೆ ತೀರ್ಥಂಕರರ ಅವತಾರವೆಂಬಂತೆ ರೂಪಿಸಿರು ವುದು ಅತಿ ವಿಶಿಷ್ಟವಾದುದು. ಇದನ್ನು ಕೂಲಂಕುಷವಾಗಿ ಪರಿಶೀಲಿಸಬೇಕಾಗಿದೆ. ನಾಲ್ಕನೆಯ ದಾಗಿ ಪಾಟೇಶ್ವರದ ಶಿಲ್ಪ ಪಟ್ಟಿಕೆಗಳಲ್ಲಿ ಬುದ್ಧ ಮತ್ತು ವಿಷ್ಣು ಶಿಲ್ಪದ ಮುಖ್ಯ ಲಕ್ಷಣ ಶಂಖ ಮತ್ತು ಚಕ್ರ ಸಹಿತ ಜಿನ ಮೂರ್ತಿಯೂ ಇರುವುದು ಬೇರೆಡೆ ಗಳಲ್ಲಿ ಪ್ರಚಲಿತ ಎರಡು ಮಾದರಿಗಳ ಸೂಚನೆಯೂ ಇರಬಹುದೆ? ನಿಜ ಈ ಪ್ರಕಾರದ ಶಿಲ್ಪ ರೂಪಣಕ್ಕೆ ಆ ಪ್ರದೇಶದಲ್ಲಿ ಆಗ ಪ್ರಚಲಿತವಿದ್ದ ಬೌದ್ಧ-ಜೈನ ಮತೀಯ ಪ್ರಭಾವವೂ ಕಾರಣವಾಗಿರಬಹುದು. ಇವೆಲ್ಲನ್ನೂ ಪರಿಶೀಲಿಸಬೇಕಾಗಿದೆ. ಜಯನಗರದ ಶಿಲ್ಪ ಪಟ್ಟಿಕೆಯಲ್ಲಿ ಮೇಲೆ ಅನುಮಾನಸಿದಂತೆ ಜೀವಂಧರಸ್ವಾಮಿಯೆ ಆಗಿದ್ದಲ್ಲಿ ಜಿನ ತೀರ್ಥಂಕರ ಮೂರ್ತಿಯ ಬದಲು ಹಾಗೆ ರೂಪಿಸಿರುವ ಔಚಿತ್ಯವನ್ನು ಪರಿಶೀಲಿಸ ಬೇಕಾಗಿದೆ. ಒಟ್ಟಿನಲ್ಲಿ ವಿಜಯನಗರ ಕಾಲದ ಜಿನ ಮೂರ್ತಿ ಸಹಿತ ದಶಾವತಾರ ಶಿಲ್ಪಗಳ ವ್ಯಾಪಕ ಮತ್ತು ಆಳವಾದ ಅಧ್ಯಯನಕ್ಕೆ ಅವಕಾಶವೂ ಮತ್ತು ಅವಶ್ಯ ಕತೆಯೂ ಇದೆ.



ಬೆಣ್ಣೂರು ಭಾರತೀರಮಣ ಮುಖ್ಯಪ್ರಾಣದೇವರು



ಮಹಾವಿಷ್ಣುವಿನ ವಿಶ್ವಸ್ವರೂಪ, ಬಸವಕಲ್ಯಾಣ ಜಗದಂಬಾ ದೇವಾಲಯ



ಪಂಚಮುಖಿ ಆಂಜನೇಯ ಹಳೇನಗರ,




ಹಳೇನಗರ, ಪಂಚಮುಖಿ ಆಂಜನೇಯ ದೇವಾಲಯ.



ಹೂಲಿ ಅಂಧಾಸುರ ದೇವಾಲಯ

ಹಿರೆ ಜಂತಕಲ್ಲಿನ ಒಂದು ಅಪೂರ್ವ ಪರಿಕಲ್ಪನೆಯ
(ಭಾರತಿ ರಮಣ ಮುಖ್ಯ ಪ್ರಾಣ ?) ದೇವರ ರೇಖಾ ಚಿತ್ರ





ಹಂಪೆಯ ಸಮೀಪದ ಗಂಗಾವತಿ ನಗರ ಕೊಪ್ಪಳ ಜಿಲ್ಲೆಗೆ ಹೊಂದಿಕೊಂಡಿರುವ ಹಿರೇಜಂತಕಲ ಗ್ರಾಮದ ಪಕ್ಕದಲ್ಲಿಯೆ ಒಂದು ಕಲ್ಲು ಗುಡ್ಡವಿದೆ. ೧೯೭೩ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ಸಂಶೋಧನೆ ಸಂಸ್ಥೆಯ ಶಾಸನಗಳ ಅನ್ವೇಷಣೆ ಕಾರ್ಯಕ್ರಮದಡಿಯಲ್ಲಿ ಗಂಗಾವತಿ ತಾಲೂಕಿನಲ್ಲಿ ಕ್ಷೇತ್ರ ಕಾರ್ಯವನ್ನು ನಡೆಸುತ್ತಿರುವಾಗ ಈ ಗುಡ್ಡದ ತಪ್ಪಲಿನಲ್ಲಿ ಒಂದು ನೂತನ ಶಿಲಾಯುಗ ಜನ ವಾಸ್ತವ್ಯ ನೆಲೆಯನ್ನು[೧], ಗುಡ್ಡದ ಮೇಲಿನ ಬಂಡೆಗಳ ಮೇಲೆ ವಿಜಯನಗರ ಕಲಾದ ಕೆಲವು ರೇಖಾ ಚಿತ್ರಗಳನ್ನು ಮತ್ತು ಶಿಲ್ಪಗಳನ್ನು ಪರಿಶೀಲಿಸಿದ್ದೆ. ಉಳಿಯಿಂದ ಬಿಡಿಸಿದ ರೇಖಾ ಚಿತ್ರಗಳಲ್ಲಿ ಪ್ರಸ್ತುತಪಡಿಸುತ್ತಿರುವ ದೇವರ ಆಕೃತಿಯು ತುಲನಾತ್ಮಕವಾಗಿ ಅಪೂರ್ವ ವಾದುದು.

ವಿಜಯನಗರ ಕಾಲದ ಈ ರೇಖಾಚಿತ್ರವು ಸಮಭಂಗದಲ್ಲಿರುವ ದೇವರ ರೇಖಾ ಕೃತಿಯು ಅಲ್ಲಲ್ಲಿ ಅಸ್ಪಷ್ಟವಾಗಿದೆ. (ಛಾಯಾಚಿತ್ರ ೧ ಮತ್ತು ರೇಖಾ ಚಿತ್ರ). ಐದು ಮುಖಗಳಿರುವಂತೆ ಕಾಣುತ್ತದೆ. ಮುಂಬದಿಯು ರೇಖಾಕೃತಿಯಾದುದರಿಂದ ಮುಂದಿನ ಮತ್ತು ಬಲ-ಎಡ ಮುಖಗಳು ಮಾತ್ರ ತಕ್ಕಮಟ್ಟಿಗೆ ಸ್ಪಷ್ಟವಾಗಿವೆ. ಬಲ, ಎಡ ಮತ್ತು ಮುಂಬದಿಯವುಗಳು ಕ್ರಮವಾಗಿ ಬಹುಮಟ್ಟಿಗೆ ಆಂಜನೇಯ, ಗರುಡ ಮತ್ತು ನರಸಿಂಹನೆಂದು ಮತ್ತು ಮುಂಡವನ್ನು ಗುರುತಿಸಬಹುದು. ೨೦ ಕೈಗಳಲ್ಲಿ ಶಂಖ ಚಕ್ರ ಗದೆ, ತ್ರಿಶೂಲ ಮೊದಲಾದ ನಾನಾ ವಿಧದ ಶಸ್ತ್ರಗಳಿವೆ. ಮುಂದಿನ ಎರಡು ಕೈಗಳಲ್ಲಿ ಕೆಳಮುಖವಾಗಿ ಹಿಡಿದಿರುವ ಉದ್ದನೆಯ ಕತ್ತಿಗಳಿವೆ. ಮುಂಡದ ಕೆಳಗೆ ಎದುರು ಬದುರಾಗಿ ಬಾಲವೆತ್ತಿ ನಿಂತಿರುವ ಎರಡು ಸಿಂಹಗಳ ತಲೆಗಳ ಭಾಗದಿಂದ ಮುಂಡ ಮತ್ತು ಸಿಂಹದ ತಲೆ ಉದ್ಭವಿಸಿರುವುದು ಮತ್ತು ಸಿಂಹಗಳ ಮುಂದಿನ ಕಾಲುಗಳು ದೇವರ ಕಾಲುಗಳಾಗಿರುವುದು ಏಕಮೇವಾದ್ವಿತೀಯ. ದೇವರ ಎಡಬದಿಯಲ್ಲಿ ಪಗಡಿ ಪೇಟವನ್ನು ಧರಿಸಿದ ಕೈ ಮುಗಿದು ನಿಂತ ಒಬ್ಬ ಗಣ್ಯ ಭಕ್ತನ ಚಿತ್ರವಿದೆ. ಒಟ್ಟಿನಲ್ಲಿ ಇದೊಂದು ದೇವರ ಅತ್ಯಂತ ಅಪರೂಪದ ಪರಿಕಲ್ಪನೆ ರೇಖಾ ಚಿತ್ರ.

ಇದೇ ತಾಲೂಕಿನ ಬೆಣ್ಣೂರು ಗ್ರಾಮದಲ್ಲಿ ಕರಿಶಿಲೆಯ ದೇವಿ ಸಹಿತ ಸವ್ಯ ಲಲಿತಾಸನದಲ್ಲಿ ಆದಿಶೇಷನ ಮೇಲೆ ಪಂಚಮುಖಿ ಆಂಜನೇಯನಂತೆ ಕಾಣುವ ಮಧ್ವ ಸಂಪ್ರದಾಯದ ಭಾರತಿ ರಮಣ ಮುಖ್ಯಪ್ರಾಣ ದೇವರ ಶಿಲ್ಪವನ್ನು (ಛಾಯಾ ಚಿತ್ರ ೨)[೨] ಈ ಅನ್ವೇಷಣೆಯ ಕಾಲದಲ್ಲಿ ಶೋಧಿಸಿದ್ದೆ. ಸುಮಾರಾಗಿ ಇದೇ ಸಮಯದಲ್ಲಿ (ಹಳೆ ನಗರ ಹೊಸ ನಗರ ತಾಲೂಕು, ಶಿವಮೊಗ್ಗ ಜಿಲ್ಲೆ) ಕೆಳದಿ ಅರಸುಮನೆತನ ಕಾಲದ ಪಂಚಮುಖಿ ಆಂಜನೇಯ ದೇವರ ದೇವಾಲಯ (ಛಾಯಾ ಚಿತ್ರ ೩ ಮತ್ತು ೪) ವನ್ನು ಶೋಧಿಸಿದ್ದೆ[೩]. ಇದರಲ್ಲಿ ನಿಂತ ಭಂಗಿಯ ಸುಂದರ ಆಂಜನೇಯ ಮೂರ್ತಿಗೆ ಐದು ಮುಖಗಳು : ಮಧ್ಯ ಮತ್ತು ಎಡ-ಬಲಕ್ಕೆ ಕ್ರಮವಾಗಿ ವರಾಹ ಮತ್ತು ನರಸಿಂಹ ಮುಖಗಳಿವೆ. ಮುಂದಿನದು ಕಪಿಮುಖ. ಮಂತ್ರಾಲಯ ಕ್ಷೇತ್ರದ ಸಮೀಪ ಘಾಣದಾಳದ ಪಂಚಮುಖಿ ಮುಖ್ಯಪ್ರಾಣದೇವರ ದೇವಾಲಯವು

ಪ್ರಸಿದ್ಧ. ಇಲ್ಲಿ ನಿಂತ ಭಂಗಿಯಲ್ಲಿರುವ ಮೂರ್ತಿಯಲ್ಲಿ ಒಂದೊಂದು ದಿಕ್ಕಿಗೆ ಮುಂದಿನಿಂದ ಪ್ರದಕ್ಷಿಣಾಪೂರ್ವಕವಾಗಿ ವಿಷ್ಣು, ನರಸಿಂಹ ಆಂಜನೇಯ ಮತ್ತು ಗರುಡ, ಮೇಲೆ ಹಯಗ್ರೀವ ಮುಖಗಳಿವೆ. ಆದರೆ ಬೆಣ್ಣೂರಿನಲ್ಲಿ ಐದೂ ಕಪಿಮುಖ ಗಳೆ ಇರುವ ಮೂರ್ತಿಯು ಆದಿಶೇಷನ ಮೇಲೆ ಸವ್ಯ ಲಲಿತಾಸನದ ಭಂಗಿಯಲ್ಲಿದೆ. ಕಿರೀಟದಮೇಲೆ ಆದಿಶೇಷನ ಏಳು ಹೆಡೆಗಳು ಛತ್ರಿಯಂತೆ ಬಿಚ್ಚಿವೆ. ಮೇಲಕ್ಕೆತ್ತಲ್ಪಟ್ಟ ಬಾಲವು ಕಿರೀಟದ ಮೇಲೆ ಸುರುಳಿಯಾಗಿದೆ. ಎಡ ತೊಡೆಯ ಮೇಲೆ ವಾಮ ಲಲಿತಾಸನ ಭಂಗಿಯಲ್ಲಿ (ಭಾರತಿ) ದೇವಿಯ ಮೂರ್ತಿಯಿದೆ. ಈ ಮೂರ್ತಿಯ ಛಾಯಾಚಿತ್ರವನ್ನು ಧಾರವಾಡದ ಸುಪ್ರಸಿದ್ಧ ಘನ ವಿದ್ವಾಸಂರೂ, ಶ್ರೋತ್ರೀಯ ಮಾಧ್ವ ಬ್ರಾಹ್ಮಣರೂ ಆದ ಶ್ರೀ ಜಾಲಿಹಾಳ ಆಚಾರ್ಯರಿಗೆ ತೋರಿಸಿ ವಿಚಾರಿಸಿದಾಗ ಅವರು ಚಿತ್ರವನ್ನು ಪರಿಶೀಲಿಸಿ ಅದು ಬಹುಶಃ ಮಧ್ವ ಸಿದ್ಧಾಂತದ ಪ್ರಕಾರ ದೇವ-ದೇವತೆಗಳ ಸ್ಥಾನಗಳಲ್ಲಿ ಮೂರನೆಯದಲ್ಲಿರುವ ಭಾರತೀ ರಮಣ ಮುಖ್ಯಪ್ರಾಣ ದೇವರೆಂದು ಅಭಿಪ್ರಾಯ ಪಟ್ಟರು. ಮಧ್ವ ಸಂಪ್ರದಾಯದ ಪ್ರಕಾರ ಎಲ್ಲ ಧಾರ್ಮಿಕ ಕಾರ್ಯಗಳನ್ನು ಈ ದೇವರ ಮೂಲಕವೇ ಸರ್ವೋತ್ತಮನಾದ ಲಕ್ಷ್ಮೀ-ನಾರಾಯಣ ದೇವರಿಗೆ ಅರ್ಪಿಸಲಾಗು ವುದು. "(ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಶ್ರೀ ಲಕ್ಷ್ಮೀರಮಣಃ ಪ್ರಿಯತಾಂ")

ಈ ಮೂರ್ತಿಗಳ ರೂಪವು ಕ್ರಿ.ಶ.೧೧-೧೨ನೆ ಶತಮಾನದಲ್ಲಿ ಅಪರೂಪವಾಗಿ ಕಾಣಬರುವ ವಿಶ್ವರೂಪ ವಿಷ್ಣು ಮೂರ್ತಿಗಳನ್ನು[೪] ನೆನಪಿಗೆ ತರುತ್ತದೆ. ಉದಾಹರಣೆಗೆ ಬಸವ ಕಲ್ಯಾಣದ ಜಗದಂಬಾ ದೇವಾಲಯದಲ್ಲಿರುವ ಔತ್ತರೇಯ ಶೈಲಿಯ ಗರುಡಾ ರೂಢ ತ್ರಿಮುಖ ಲಕ್ಷ್ಮೀನಾರಾಯಣ (ಚಿತ್ರ-೫) ಮತ್ತು ಹೂಲಿಯ ಅಂಧಾಸುರ ದೇವಾಲಯದಲ್ಲಿಯ ಮಕರ ತೋರಣದಲ್ಲಿರುವ ಸವ್ಯ ಲಲಿತಾಸನದಲ್ಲಿರುವ ತ್ರಿಮುಖ ವಿಷ್ಣು (ಚಿತ್ರ ೬). ಇವೆರಡರಲ್ಲಿಯೂ ಮುಂದಿನ ಮುಖ ವಿಷ್ಣು, ಬಲ ಮತ್ತು ಎಡ ಬದಿಯದು ಕ್ರಮಾವಾಗಿ ನರಸಿಂಹ ಮತ್ತು ವರಾಹ ಪರಮಾತ್ಮನ ವಿಶ್ವರೂಪವನ್ನು ಸಾಂಕೇತಿಕವಾಗಿ ತೋರಿಸುತ್ತವೆ. ಸಂಕ್ಷಿಪ್ತ ಸ್ವರೂಪದ ಈ ಪ್ರಕಾರದ ಶಿಲ್ಪಗಳಲ್ಲಿ ಗರುಡ ಆಂಜನೇಯನನ್ನಾಗಲಿ ತೋರಿಸಿರುವುದಿಲ್ಲ.


ಇವೆಲ್ಲವನ್ನು ಗಮನಿಸಿದಾಗ ಬಹುಮಟ್ಟಿಗೆ ಮೇಲೆ ವಿವರಿಸಿದ ಮಧ್ವ ಸಂಪ್ರ ದಾಯದ ಶಿಲ್ಪ ಪರಂಪರೆಗೆ ಪ್ರಸ್ತುತ ಪಡಿಸಿದ ರೇಖಾಕೃತಿಯೂ ಸೇರಿದ್ದಾಗಿರಬಹು ದಾಗಿದೆ. ತುಲನಾತ್ಮಕವಾಗಿ ಇದರಲ್ಲಿ ಕೆಲವೊಂದು ವಿಶಿಷ್ಟ ಲಕ್ಷಣಗಳಿದ್ದು ಇದು ಅಪರೂಪದ್ದಾಗಿದೆ. ಮೊದಲನೆಯದಾಗಿ ಇದು ಬಯಲು ಬಂಡೆಯಮೇಲಿರುವುದು. ಎರಡನೆಯದಾಗಿ ಇದೊಂದು ರೇಖಾ ಚಿತ್ರ. ಮೂರನೆಯದಾಗಿ ೨೪ ಬಾಹುಗಳಿರು ವುದು. ನಾಲ್ಕನೆಯದಾಗಿ ಕಾಲುಗಳ ಬದಿಯಲ್ಲಿ ಸಿಂಹವಿರುವುದು ಮತ್ತು ಐದನೆಯ ದಾಗಿ ಎಡಕ್ಕೆ ಒಬ್ಬ ಭಕ್ತನು ಕೈಮುಗಿದು ನಿಂತುಕೊಂಡಿರುವುದು.

ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿ ಕೃಷ್ಣದೇವರಾಯನ ಕಾಲ (೧೫೦೯-೨೯)ದಲ್ಲಿ ಸೊಂದಾ ಮಧ್ವ ಮಠದ ಶ್ರೀ ವ್ಯಾಸರಾಯರು ಕೆಲವು ಕಾಲ ಹಂಪಿಯಲ್ಲಿ


ವಾಸ್ತವ್ಯವಿದ್ದ ಕಾಲದಲ್ಲಿ ಚಕ್ರವರ್ತಿಗೆ ಸ್ವಲ್ಪ ಕಾಲ ಒದಗಿದ್ದ "ಕುಹು" ಯೋಗದ ಅನಿಷ್ಟವನ್ನು ಪರಿಹರಿಸಿದರೆಂಬ ಪ್ರತೀತಿಯಿದೆ. ದಾಸವರೇಣ್ಯರಾದ ಶ್ರೀ ಪುರಂದರ ದಾಸರು ಈ ಕಾಲದವರೆ. ಇವರ ಕಾಲದಿಂದ ಮಧ್ವ ಸಂಪ್ರದಾಯವು ಹೆಚ್ಚು ವ್ಯಾಪಕ ವಾಗಿ ಜನಪ್ರಿಯವಾಯಿತೆಂದು ತೋರುವುದು. ಆನೆಗೊಂದಿಯ ತುಂಗಾಭದ್ರ ನದಿಯ ನಡುಗಡ್ಡೆಯಲ್ಲಿರುವ ಮಧ್ವ ಯತಿಗಳ ಬೃಂದಾವನಗಳು, ಹಂಪಿ ಶ್ರೀ ಸೀತಾ ರಾಮ ಚಂದ್ರ ಮತ್ತು ಯಂತ್ರೋದ್ಧಾರಕ ಶ್ರೀ ಹನುಮಂತದೇವರ ದೇವಾಲಯಗಳು ಸ್ವಲ್ಪ ಹೆಚ್ಚು ಕಡಿಮೆ ಈ ಕಾಲದ ಅವಧಿಗೆ ಸೇರಿದವು. ಹೀಗೆ ಮದ್ವಸಿದ್ಧಾಂತ ಮತ್ತು ಸಂಪ್ರದಾಯದ ಪ್ರಭಾವದಿಂದ ಹೊಸ ಮೂರ್ತಿ ಶಿಲ್ಪ ಪರಿಕಲ್ಪನೆಗಳಿಗೆ ಎಡೆಯಾಗಿ ಹೊಸ ಹೊಸ ಮೂರ್ತಿ ಶಿಲ್ಪಗಳನ್ನು ಆರಾಧನೆಗೆ ರೂಪಿಸಲಾಯಿತು. ಮೇಲೆ ಪರಿಶೀಲಿಸಿದ ಪಂಚಮುಖಿ ಆಂಜನೇಯ (ಅಥವಾ ಭಾರತೀ ರಮಣ ಮುಖ್ಯಪ್ರಾಣ) ದೇವರ ಮೂರ್ತಿಗಳು ಶೈಲಿಯಿಂದ ವಿಜಯನಗರ ಉತ್ತರ ಕಾಲೀನ ಹಾಗೂ ಅನಂತರ ಕಾಲದವಾಗಿದ್ದು ಈ ಸಂಪ್ರದಾಯದಕ್ಕೆ ಸೇರಿದವೆಂದು ಹೇಳಬಹುದು. ಪ್ರಪ್ರಥಮ ಬಾರಿಗೆ ಕಾಣಿಸಿಕೊಳ್ಳುವ ವಿವಿಧ ಪ್ರಕಾರಗಳ ಈ ಮೂರ್ತಿಗಳು ವಿಜಯನಗರ ಕಾಲದ ಮೂರ್ತಿ ಶಿಲ್ಪ ಪರಂಪರೆಗೆ ವಿಶಿಷ್ಟ ಕಾಣಿಕೆಯಾಗಿದೆ.



ಚಕ್ರ ಮತ್ತು ಶಂಖ ಸಹಿತ
ಚತುರ್ಭುಜ ಜಿನ, ವಾಸನ.



ಜಿನ, ಅಕ್ಕ-ಪಕ್ಕ ಭೂವರಾಹ ಉಗ್ರನರಸಿಂಹ
ಸಹಿತ ಷಡಾವತಾರಗಳು, ಘಂಡ.
ಭೂಪಾಲಹತ್ತಿರ.



ಮತ್ಸ್ಯ, ಕೂರ್ಮ ಮತ್ತು ವರಾಹ, ಪಾಟೇಶ್ವರ.



ನರಸಿಂಹ, ವಾಮನ, ಮತ್ತು ಕೋದಂಡರಾಮ, ಪಾಟೇಶ್ವರ.



ಪರಶುರಾಮ, ಬಲರಾಮಮತ್ತು ಬುದ್ಧ, ಪಾಟೇಶ್ವರ.



ಕಲ್ಕಿ, ಮುರಳೀಧರ, ಕೃಷ್ಣ ಮತ್ತು ಜಿನ, ಪಾಟೇಶ್ವರ.

ಗ್ರಂಥ ಋಣ

೧. ಸುಂದರ ಅ .: ೧೯೭೩-"ಗಂಗಾವತಿ ತಾಲೂಕಿನ ಪುರಾತತ್ವ ಅವಶೇಷಗಳು" **ಕರ್ನಾಟಕ ಭಾರತಿ** ಸಂಪುಟ-೬, ಸಂಚಿಕೆ೧, ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ.

೨. ಸುಂದರ ಅ .: ೧೯೭೪. "ಎ ರೇರ್ ಭಾರತಿ ರಮಣ ಮುಖ್ಯಪ್ರಾಣ (ವಾಯು ದೇವ) ಇಮೇಜ್ ಫ್ರಮ್ ಬೆಣ್ಣೂರ್" **ಸ್ಟಡಿಸ್ ಇನ್ ಇಂಡಾಲಜಿ ಆಂಡ್ ಮೆಡಿಯೆವಲ್ ಹಿಸ್ಟ್ರಿ**, (ಜಿ.ಹೆಚ.ಖರೆ ಫೆಲಿಸಿಟೇಶನ್ ವಾಲ್ಯೂಮ್) ಜೋಶಿ ಆಂಡ ಲೋಖಂಡೆ ಪ್ರಕಾಶನ, ಪುಣೆ.

೩. ಸುಂದರ ಅ .: ೧೯೭೯. "ಸಮ್ ಆಸ್ಪೆಕ್ಟ್ಸ ಆಫ್ ನಿಯೋಲಿಥಿಕ್ ಸೈಟ್ಸ್ ಇನ್ ದಿ ಮಲ್ನಾಡ್ ಏರಿಯ" **ಕ್ವಾರ್ಟರ್ಲಿ ಜರ್ನಲ್ ಆಫ್ ಮಿಥಿಕ್ ಸೋಸೈಟಿ**, ಬೆಂಗಳೂರು.

೪. ಸುಂದರ ಅ .: "ಸಮ್ ವಿಷ್ಣು ಸ್ಕಲ್ಪ್ಚರ್ಸ್ ಆಫ್ ದಿ ಅರ್ಲಿ ಕದಂಬ ಆಂಡ್ ಮಾಧವ ವಿಶ್ವರೂಪ ಫಾರ್ಮ್ಸ್ ಆಫ್ ದಿ ಮೆಡಿಯೆವಲ್ ಪೀರಿಯಡ್" **ವಿಷ್ಣು ಇನ್ ಆರ್ಟ್, ಥಾಟ್ ಆಂಡ್ ಲಿಟರೇಚರ್**, ಬಿರ್ಲ ಆರ್ಕಿಯಾಲಾಜಿಕಲ್ ಆಂಡ್ ಕಲ್ಚರಲ್ ರಿಸರ್ಚ್ ಇನ್ಸ್ಟಿಟ್ಯೂಟ್ ಹೈದರಾಬಾದ್.

೧೪. ಶ್ರೀ ವಿರೂಪಾಕ್ಷೇಶ್ವರ ದೇವಾಲಯದಲ್ಲಿನ ಶಿಷ್ಟಾಚಾರದ ಮಾರ್ಗ ಸೂಚಿ ಸಂಜ್ಞೆಗಳು

ಚಂದ್ರಶೇಖರ ದಾವಣಗೇರಿ

ಮಾನವ ನಿರ್ಮಿತ "ದೇವಾಲಯಗಳು" ಭೂಲೋಕದಲ್ಲೇ ಅತ್ಯಂತ ಹಿರಿಮೆಯನ್ನು ಪಡೆದಿವೆ. ಈ ದೇವಾಲಯಗಳು ಕೇವಲ ನಮ್ಮ ಸಂಸ್ಕೃತಿಯ ಉಗ್ರಾಣಗಳಾಗಿರದೆ, ಧಾರ್ಮಿಕ ಅಚರಣೆ, ರೂಢಿ, ಪದ್ಧತಿ, ಸಂಪ್ರದಾಯಗಳ ರಕ್ಷಿತ ಭದ್ರಕೋಟೆಗಳಾಗಿವೆ. ಪಾರಂಪರಿಕವಾಗಿ ಧರ್ಮದ ಆಚರಣೆಯ ಪಾವಿತ್ರತೆಯನ್ನು ಕಾಪಾಡಿಕೊಂಡು ಬಂದಿವೆ.

ಹಂಪಿ ಶ್ರೀ ವಿರೂಪಾಕ್ಷೇಶ್ವರ ದೇವಾಲಯ ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನಲೆಯಯುಳ್ಳದ್ದು. ಇವೆರಡರ ಪರಂಪರೆಯನ್ನು ಇಂದಿಗೂ ಉಳಿಸಿ-ಬೆಳಸಿ ಮುಂದು ವರಿಸಿಕೊಂಡು ಬಂದಿರುವ ಜೀವಂತ ದೇವಾಲಯವಾಗಿದೆ.

ಶ್ರೀ ವಿರೂಪಾಕ್ಷೇಶ್ವರ ದೇವಾಲಯದಲ್ಲಿ ಶೈವಾಗಮದ ರೀತಿಯಲ್ಲಿ ಪೂಜಾ ಕಾರ್ಯಗಳು ನಡೆಯುತ್ತಿದ್ದು ಏಕಕಾಲ, ದ್ವಿಕಾಲ, ತ್ರಿಕಾಲ, ಷಟ್‌ಕಾಲಾರ್ಚನ, ಮಹಾ ಶಿವರಾತ್ರಿ, ಪಕ್ಷೋತ್ಸವ, ಮಾಸೋತ್ಸವ ಪಣಿಮಾಸೋತ್ಸವ ಸಂವತ್ಸರೋತ್ಸವ ಗಿರಿ ಪ್ರದಕ್ಷಿಣಾ ಉತ್ಸವ, ತೆಪ್ಪೋತ್ಸವ, ರಥೋತ್ಸವ ಹೀಗೆ ನಿತ್ಯಕಟ್ಟೆ ಹಾಗೂ ಹೆಚ್ಚ ಗಟ್ಟಲೆಯಾಗಿ ಧಾರ್ಮಿಕ ಉತ್ಸವಾಧಿಗಳನ್ನು ಪಾರಂಪರಿಕವಾಗಿ ನಡೆಸಿಕೊಂಡು ಬರಲಾಗು ತ್ತಿದೆ. ಆಗಮಿಕ ಪೂಜಾ ಪರಂಪರೆ ಆಚರಿಸಿಕೊಂಡು ಬಂದಿರುವ ಉತ್ಸವಾದಿಗಳಲ್ಲಿಯ ಪಾವಿತ್ರ್ಯತೆ ಹಾಗೂ ಜೀವಂತಿಕೆಯನ್ನು ಕಾಣುತ್ತೇವೆ.

ಇಂತಹ ಆಚರಣೆಗಳು ಶಾಸ್ತ್ರ ಸಮ್ಮತ ನಿಯಮಗಳಿಗೆ ಬದ್ಧವಾಗಿದ್ದು, ಈ ಆಚರಣೆಯ ಪೌರೋಹಿತ್ಯ ವಹಿಸಿದ್ದ ಧರ್ಮಕರ್ತ, ಪೌರೋಹಿತ ವರ್ಗದವರ, ಪರಿಚಾರಕರು, ಭಾಗವಹಿಸುವ ಭಕ್ತಾಧಿಗಳು, ರಾಜವಂಶಜರು ಕಡ್ಡಾಯವಾಗಿ ದೇವಾ ಲಯದಲ್ಲಿ ಪಾರಂಪರಿಕವಾಗಿ ಶಾಸ್ತ್ರಬದ್ಧವಾದ ರೀತಿ-ರಿವಾಜುಗಳಿಗೆ ಒಳಪಟ್ಟು ನಡೆಯ ಬೇಕಾಗುತ್ತದೆ. ಈ ನಡೆತೆಗೆ ನಾವು "ಶಿಷ್ಟಾಚಾರ ಪಾಲನ" ಎಂದು ಕರೆಯಬಹುದು. ಈ ಶಿಷ್ಟಾಚಾರದ ಪಾಲನೆ ಶಾಸ್ತ್ರಸಮ್ಮತವಾಗಿರಬೇಕು. ಶಾಸ್ತ್ರನಿಷಿದ್ದವಾದ ಶಿಷ್ಟಾ ಚಾರದ ಪಾಲನೆಗಳು "ದೈವಾಪರಾಧ" ಎಂಬ ಅಪರಾದಕ್ಕೆ ಗುರಿಯಾಗುತ್ತವೆ. ಈ ಅಪವಾದದ ಅಪರಾಧಕ್ಕೆ ನಾಗರೀಕ ಕಾನೂನಿನಡಿ ನೀಡುವ ಶಿಕ್ಷೆಗಿಂತ ನಮ್ಮ ಶಾಸ್ತ್ರಗಳು ವಿಧಿಸುವ ೨೮ ತರದ ನರಕಯಾತನೆ ಶಿಕ್ಷೆಗಳು ಅತ್ಯಂತ ಘೋರವಾಗಿವೆ. ಈ

ಭಯಂಕರವಾದ ಶಿಕ್ಷೆಯ ಭಯ ನಮ್ಮನ್ನು ಇಂದಿನ ಕಾಲದಲ್ಲೂ ದೇಹದ ಮತ್ತು ಮನಸ್ಸಿನ ಪರಿಶುದ್ಧತೆಯನ್ನು ಕಾಯ್ದುಕೊಳ್ಳಲು ಹಿನ್ನಲೆಯಾಗಿದೆ. ದೇವರ ದರ್ಶನಕ್ಕಾಗಿ ದೇವಾಲಯಕ್ಕೆ ಹೋದಾಗ ಉತ್ಸವಾದಿಗಳಲ್ಲಿ ಭಾಗವಹಿಸಿದಾಗ ನಮ್ಮ ವರ್ತನೆಯಲ್ಲಿ ನಮ್ರ ಭಾವ, ಸಭ್ಯತೆ, ಶಿಸ್ತು ಪಾಲನೆಗೆ ಬುನಾದಿ ಒದಗಿಸಿದೆ. ಜನಸಾಮಾನ್ಯರಿಗೆ ದೇವಾಲಯಗಳು ಭಕ್ತಿ ಅರಂಭದ ಅಭ್ಯಾಸಕ್ಕಿರುವ ಪ್ರಾಥಮಿಕ ಶಾಲೆಗಳಾಗಿವೆ.

'ಕಲಿಕೆ'ಯ ಸಾಮರ್ಥ್ಯವು ಮಾನವ ಜೀವಿಗೆ ನಿಸರ್ಗದ ವಿಶಿಷ್ಟವಾದ ಕಾಣಿಕೆಯಾಗಿದೆ. ಇದು ಪರಿಸರಕ್ಕೆ ಹೊಂದಿಕೊಂಡು ಬಾಳಲು ನೆರವು ನೀಡುತ್ತದೆ. ಶಕ್ತಿಯ ವ್ಯರ್ಥತೆ ಕಡಿಮೆಯಾಗಿ ನಿಶ್ಚಿತತೆ ಹೆಚ್ಚುತ್ತದೆ. ಶ್ರೀ ವಿರೂಪಾಕ್ಷೇಶ್ವರ ದೇವಾಲಯದಲ್ಲಿ ಧಾರ್ಮಿಕ ಆಚರಣೆಯ ಸಂಜ್ಞೆಗಳು ಸಂಪ್ರದಾಯ, ಲೋಕರೂಢಿ, ನೈತಿಕ ನಿಯಮದ ಆಂತಃ ಪ್ರೇರಣೆಗೆ ಚಾಲನೆ ನೀಡುತ್ತವೆ. ವ್ಯಕ್ತಿತ್ವದ ಸಾಮಾಜಿಕ, ಧಾರ್ಮಿಕ ವಿಕಾಸಕ್ಕೆ ಸೂಚನೆ ನೀಡುತ್ತವೆ. ಆವು ಶಿಷ್ಟಾಚಾರದ ಬೆಳವಣಿಗೆ ಹಾಗೂ ಪಾಲನೆಗೆ ಪ್ರಚೋದಕವಾಗುತ್ತದೆ.

ಸುವಾರು ಐದು ಎಕರೆ ವ್ಯಾಪ್ತಿಯ ಸ್ಥಳದಲ್ಲಿ ನಿರ್ಮಿತವಾದ ಶ್ರೀ ವಿರೂಪಾಕ್ಷೇಶ್ವರ ದೇಗುಲದಲ್ಲಿ ಶಾಸ್ತ್ರ ಸಮ್ಮತವಾದ ಶಿಷ್ಟಾಚಾರದ ಪಾಲನೆಯ ಹಲವಾರು ಸಂಜ್ಞೆಗಳು ನಮ್ಮ ಧಾರ್ಮಿಕ ಅಚಾರ-ವಿಚಾರ ಮೇಲೆ ಬೆಳಕು ಚೆಲ್ಲುತ್ತಿವೆ. ಪ್ರಾಚೀನ ಸಂಪ್ರದಾಯಗಳು ಪೋಷಣೆ ದೃಷ್ಟಿಯಿಂದ ಅತ್ಯಂತ ಮಹತ್ವದ ಸತ್ಯವನ್ನು "ವಿಜಯ ನಗರದ ಸಾಮ್ರಾಜ್ಯ ದಕ್ಷಿಣ ಭಾರತ ಸಂಸ್ಕೃತಿಯ ರೂಪಕ" ಎನ್ನುವ ಬಾರ್ಬೊಸ ಉದ್ಗರಿಸಿದ ಭಾವನೆಯ ಹಿಂದಿರುವ ನಿಗೂಢತೆಯನ್ನು ಅರಿಯಬಹುದು.

ರೇಖಾ ಚಿತ್ರ ಹಾಗೂ ಲೇಖನಗಳು

ಶಾಸ್ತ್ರ ಸಮ್ಮತವಾದ ಪ್ರಾಚೀನ ಪಾರಂಪರಿಕ ಧಾರ್ಮಿಕ ಶಿಷ್ಟಾಚಾರದ ಪಾಲನೆಯಲ್ಲಿ ಶ್ರೀ ವಿರೂಪಾಕ್ಷೇಶ್ವರ ದೇವಾಲಯದಲ್ಲಿ ಹಾಸುಗಲ್ಲಿನ ಮೇಲೆ ಬಿಡಿಸಿದ ಗೆರೆ, ಗೀಟು, ರೇಖೆ, ಲಿಪಿಲೇಖನಗಳು ಸಂಜ್ಞೆಗಳು, ಭಕ್ತ-ಭಜಕರಲ್ಲಿ ಸಂವೇದನಾಶೀಲತೆಯನ್ನು ಜಾಗೃತಗೊಳಿಸುತ್ತಿವೆ. ಈ ಗೆರೆ, ಗೀಟು, ರೇಖಾ (ಲಿಪಿಲೇಖನಗಳ) ಮನುಕುಲದಷ್ಟೇ ಪ್ರಾಚೀನವಾದರೂ, ಈ ಕಲೆಗೆ ಜೀವಂತಿಕೆ ಮತ್ತು ಪರಿಪೂರ್ಣತೆ ಬಂದಿರುವುದು ವಿಜಯನಗರ ಅರಸರ ಕಾಲದಲ್ಲಿ. ಆದರಲ್ಲೂ ಹದಿನೈದನೆಯ ಶತಮಾನದಿಂದೀಚೆಗೆ ಈ ಕಲೆಯಲ್ಲಿ ಮನದಾಳದ ನೈಜ ಭ್ರಾಮಕ ಕಲ್ಪನೆ ಆಭಿವ್ಯಕ್ತಗೊಂಡಿದೆ. ಇಂಥ ರೇಖಾ ಚಿತ್ರಕಲೆಯ ಸುಮಾರು ೧೫೦ಕ್ಕೂ ಹೆಚ್ಚಿನ ಚಿತ್ರಗಳನ್ನು ಶ್ರೀ ವಿರೂಪಾಕ್ಷೇಶ್ವರ ದೇಗುಲವೊಂದರಲ್ಲಿ ಡಾ.ಎಚ್.ಅರ್.ರಘುನಾಥಭಟ್ ಗುರುತಿಸಿದ್ದಾರೆ.

ಈ ರೇಖಾ ಚಿತ್ರಗಳಲ್ಲಿ ವ್ಯಕ್ತಪಡಿಸಿರುವ ಭಾವ-ಭಂಗಿ, ಉಡಿಗೆ, ತೊಡಿಗೆ, ಹಾವ-ಭಾವಗಳಿಂದ ರೇಖಾ ಚಿತ್ರಗಳಲ್ಲಿಯ ವ್ಯಕ್ತಿಗಳು, ಮಹಾರಾಜರು, ರಾಜ ಮನೆತನದವರು, ಅಮಾತ್ಯರು, ಮುನಿ, ಸಾಧು, ಸಂತರು, ದೇವದಾಸಿಯರು---- ಇತ್ಯಾದಿಯಾಗಿ

ಗ್ರಹಿಸಲಾಗುತ್ತಿದೆ. ಈ ರೇಖಾ ಚಿತ್ರದ ಪಕ್ಕದಲ್ಲಿರುವ ಲಿಪಿಯಿಂದಲೂ ಇದರ ಬಗ್ಗೆ ಅಭಿಪ್ರಾಯವನ್ನು ವಿದ್ವಾಂಸರು ವ್ಯಕ್ತಪಡಿಸಿರುವುದನ್ನು ಕಾಣುತ್ತೇವೆ.

ಆದರೆ 'ಮಾನವ ಸ್ವಭಾವದ' ರಹಸ್ಯದ ಬಾಗಿಲನ್ನು ತೆರೆಯಲು ನಿರಂತರ ಪ್ರಯತ್ನಗಳು ಮುಂದುವರಿದ ವ್ಯಕ್ತಿಯ ಮೂಲ ಪ್ರವೃತ್ತಿ, ಅನುಕರಣೆ, ಸೂಚನೆ ಈ ಪ್ರಯತ್ನಗಳಿಗೆ ಪೂರಕವಾಗಿರುತ್ತವೆ. ವ್ಯಕ್ತಿಯ ಸ್ವಭಾವದ ಅಭಿವ್ಯಕ್ತಿಗೆ ಆವನ ಬಾಹ್ಯ ಪರಿಸರ ಮಾತ್ರ ಕಾರಣವಾಗಲಾರದು ಅವನ ಅಂತರಿಕ ಸ್ಥಿತಿಯೂ ಸಹಿತ ಅಂದರೆ ಚಿತ್ರಗಳು ಆಭಿವ್ಯಕ್ತಿಗಳು, ಭಾವನೆಗಳು ಪ್ರಚೋದಕಾದಾಗ ಮಾತ್ರ ಅಂದರೆ ಬಾಹ್ಯ ಮತ್ತು ಆಂತರಿಕ ಎರಡು ಪ್ರೇರಕವಾದ ವ್ಯಕ್ತಿಯ ಆಭಿವ್ಯಕ್ತಿತ್ವವು ಹೊರಹೊಮ್ಮುತ್ತದೆ.

ಈ ಹಿನ್ನೆಲೆಯಲ್ಲಿ ರೇಖಾ ಚಿತ್ರಗಳನ್ನು ಧಾರ್ಮಿಕ ಶಿಷ್ಟಾಚಾರದ ಅಚಾರಾಂಗಕ್ಕಾಗಿ ಬಳಸುವ ಸಂಜ್ಞೆಯನ್ನಾಗಿ ಗುರುತಿಸಿಕೊಂಡಾಗ ಹಲವಾರು ಶಾಸ್ತ್ರ ಸಮ್ಮತವಾದ ಅಚರಣೆಗಳನ್ನು ಈ ರೇಖಾ ಚಿತ್ರದ ಹಿನ್ನೆಲೆಯಾಗಿ ನೋಡಬಹುದು. ಶ್ರೀ ವಿರೂಪಾಕ್ಷೇಶ್ವರ ದೇಗುಲದಿಂದ ವಾಪಸ್ಸಾಗುವವರೆಗೆ ಒಂದಿಲ್ಲೊಂದು ರೀತಿಯಿಂದ ಅಲ್ಲಲ್ಲಿ ರೇಖಾ ಚಿತ್ರಗಳು ಸಂಜ್ಞೆಯನ್ನು ನೀಡುತ್ತವೆ.

ಈ ರೇಖಾ ಚಿತ್ರಗಳು ದೇವಾಲಯದಲ್ಲಿ ನಮ್ಮ ವರ್ತನೆಯನ್ನು ನಿಯಂತ್ರಿಸಿ, ನಿರ್ದೇಶನ ನೀಡುತ್ತವೆ. ನಮ್ಮ ಭಾವ-ಭಕ್ತಿ ಪರವಶತೆ, ನಮ್ರತೆ, ಆಚಾರ-ವಿಚಾರ, ಪರಿಶುದ್ಧತೆ ಪಾದರಕ್ಷೆ ರಹಿತವಾಗಿ ಪ್ರವೇಶಿಸಬಾರದೆಂಬ, ಕೈಯಲ್ಲಿ, ಬೀಸಣಿಕೆ, ಆಯುಧದೊಂದಿಗೆ ದರ್ಶನಕ್ಕೆ ಹೋಗದಿರುವ, ಒಂದೇ ಕೈಯಲ್ಲಿ ನಮಸ್ಕರಿಸದಿರುವ ಮುಂತಾದ ನೈತಿಕ ನಿಯಮ ಸೂಚಿಸುವಲ್ಲಿ ಈ ರೇಖಾ ಚಿತ್ರಗಳು ಸಂಜ್ಞೆಯನ್ನು ನೀಡುತ್ತವೆ.

ದೇವಾಲಯದಲ್ಲಿ ಎಲ್ಲೆಂದರಲ್ಲಿ ಶಿಷ್ಟಾಚಾರ ಪಾಲನೆಗೆ ತೊಡಗದಂತೆ ಗೊಂದಲದ ಪರಿಸ್ಥಿತಿಯಿಂದ ವ್ಯಕ್ತಿಗಳನ್ನು ಬಿಡಿಸಿ ರೇಖಾಚಿತ್ರದ ಸೂಚಿತ ಸ್ಥಳದಲ್ಲಿ ಶಿಷ್ಟಚಾರ ಪಾಲನೆಯಿಂದ ಶಿಷ್ಟಾಚಾರ ಪಾಲನೆದಾರರಿಗೆ ನಿಶ್ಚಿತೆ ನೀಡಿ ಶಾಸ್ತ್ರ ಸಮ್ಮತ ನಿರ್ದೇಶನ ನೀಡುವಲ್ಲಿ ಈ ರೇಖಾ ಚಿತ್ರಗಳು ತುಂಬಾ ಸಹಕಾರಿಯಾಗಿವೆ.

ಯಾಕೆಂದರೆ ಧಾರ್ಮಿಕ ಆಚರಣೆಯಲ್ಲಿಯ ಕೆಲವೊಂದು ಶಿಷ್ಟಾಚಾರಗಳು ದೈವಾಪರಾಧಕ್ಕೆ ಕಾರಣವಾಗುತ್ತಿವೆ. ಈ ರೇಖಾಚಿತ್ರದ ಸ್ಥಳಗಳ ಬಗ್ಗೆ ಮತ್ತು ಅನುಸರಿಸಬೇಕಾಗ ಸಂಜ್ಞೆಗಳ ಬಗ್ಗೆ ಸೂಕ್ಷ್ಮವಾಗಿ ಪರಿಶೀಲಿಸಿದಾಗ ವಿವಿಧ ಭಂಗಿಯ ಸಮಸ್ಕಾರಗಳ ಪದ್ಧತಿಯನ್ನು ಯಾವ ಸ್ಥಳದಲ್ಲಿ ಯಾವ ಪದ್ಧತಿಯಿಂದ ನಮಸ್ಕರಿಸಿದರೆ ಅದು ಶಾಸ್ತ್ರ ಸಮ್ಮತವಾದದ್ದು ಎನ್ನುವ ವಿಚಾರಕ್ಕೆ ಈ ರೇಖಾ ಚಿತ್ರಗಳು ಸ್ಪಷ್ಟವಾದ ಸೂಚನೆಗಳನ್ನು ನೀಡುತ್ತವೆ ಎಂಬುದನ್ನು ದಾರ್ಶನಿಕರು ಒಪ್ಪುತ್ತಾರೆ.

ಶ್ರೀ ವಿರೂಪಾಕ್ಷ ದೇವಾಲಯದ ಆವರಣದಲ್ಲಿ ನಮಸ್ಕರಿಸುವ ರೇಖಾ ಚಿತ್ರಗಳ ಬಗ್ಗೆ ಅವಲೋಕಿಸಿದಾಗ ದಕ್ಷಿಣಕ್ಕೆ ಮುಖಮಾಡಿ ಯಾವ ರೇಖಾ ಚಿತ್ರಗಳೂ ಸಾಷ್ಟಾಂಗ

ನಮಸ್ಕಾರ ಮಾಡುತ್ತಿರುವುದನ್ನು ನಾವು ಕಾಣುವುದಿಲ್ಲ. ಯಾಕೆಂದರೆ ದಕ್ಷಿಣಕ್ಕೆ ಮುಖಮಾಡಿ ಸಾಷ್ಟಾಂಗ ನಮಸ್ಕಾರ ಮಾಡಿದರೆ ಆ ನಮಸ್ಕಾರ ಅಸುರರಿಗೆ ಮಾಡಿದಂತೆ ಎಂಬ ವಿಚಾರ; ದೇವಾಲಯದ ಗರ್ಭಗೃಹದಲ್ಲಿ ದೇವರಿಗೆ ಎದುರಾಗಿ ಇಲ್ಲವೆ ದೇವರ ಹಿಂಭಾಗದಲ್ಲಿ ಇಲ್ಲವೆ ಎಡಪಾರ್ಶ್ವದಲ್ಲಿ ಜಪ-ಹೋಮ ಸಾಷ್ಟಾಂಗ ನಮಸ್ಕಾರ ಮಾಡುವುದು ಶಾಸ್ತ್ರ ನಿಷಿದ್ಧವಾದ ವಿಚಾರ ಹಾಗೆ ಒಂದು ವೇಳೆ ಮಾಡಿದ್ದೇ ಆದರೆ ಹಿಂದೆ ಮಾಡಿದ್ದ ಪುಣ್ಯವು ನಾಶವಾಗುತ್ತದೆ. ಇಂಥ ಸ್ಥಳದಲ್ಲಿ ಶಿರಬಾಗಿ ನಮಸ್ಕಾರ ಮಾಡಿದರೆ ಸಾಕೆಂಬ ಸೂಚನೆಗಳನ್ನು ಈ ರೇಖಾ ಚಿತ್ರಗಳು ನೀಡುತ್ತವೆ.

ರಾಯರ ಗೋಪುರ ದಾಟಿ ದೇವಾಲಯ ಮಧ್ಯ ಆವರಣಕ್ಕೆ ಬಂದಾಗ ಸುಮಾರು ಏಳು ಜನರುಗುಂಪು ಸಾಷ್ಟಾಂಗ ನಮಸ್ಕಾರದಲ್ಲಿ ತೊಡಗಿರುವುದನ್ನು ಕಾಣುತ್ತೇವೆ. ಈ ಚಿತ್ರವೀಕ್ಷಿಸಿದಾಗ ಪಾದಗಳು, ಕೈಗಳು, ಮೊಣಕಾಲು, ಎದೆ, ಶಿರಸ್ಸು, ದೃಷ್ಟಿ, ವಚನ, ಮನಸ್ಸು ಈ ಎಂಟೂ ಸೇರಿ ಸಾಷ್ಟಾಂಗ (ಉದ್ದಂಡ) ನಮಸ್ಕಾರದಲ್ಲಿ ತೊಡಗಿರುವುದನ್ನು ಕಾಣುತ್ತೇವೆ.

ಈ ಸಾಷ್ಟಾಂಗ ನಮಸ್ಕಾರಕ್ಕಾಗಿ ಸೂಚಿಸಿದ ಸ್ಥಳದ ಬಗ್ಗೆ ಪರಾಮರ್ಶಿಸಿದಾಗ ಈ ಪಂಪಾ ಕ್ಷೇತ್ರದ ಅಧಿಪತಿಯಾದ ಶ್ರೀ ವಿರೂಪಾಕ್ಷನ (ಶಿವನ) ವಾಹನ ಶೈವ ದೇವಾಲಯದ ಸಂಕೇತ ಸ್ವರೂಪನಾದ ನಂದಿಯು ಸವ್ಯ ವೃಷಭ, ಮಹಾಶಯ ವೃಷಭ, ಮಹಾಶೃಂಗ ವೃಷಭ, ಮಹಾಬಲ ವೃಷಭ ಎಂಬ ನಾಲ್ಕು ರೂಪಗಳಿಂದ ನೆಲಿನಿಂತ ಸ್ಥಳ ಇದಾಗಿದೆ, ಎಂಬ ಪೌರಾಣಿಕ ಮಹತ್ವವುಳ್ಳ ಸ್ಥಳವಾಗಿದೆ.

ಉದ್ದಂಡ ನಮಸ್ಕಾರದ ಈ ಕ್ರಮ ದೀನತೆಯನ್ನು ಸೂಚಿಸುತ್ತದೆ. ಮರ್ಕಟ ಮನಸ್ಸನ್ನು ಹತೋಟಿಗೆ ತರಲು ಕಲಿಸುತ್ತದೆ. ಈ ನಮಸ್ಕಾರದಲ್ಲಿ ಮಣ್ಣಾಗುತ್ತದೆಂದು ಮೈ ಮುಚ್ಚಿ ಕೊಳ್ಳುವ ಕ್ರಮ ದೈವಾಪರಾಧಕ್ಕೆ ಕಾರಣವಾಗುತ್ತದೆ. ಮೈಮುಚ್ಚಿಕೊಂಟು ಸಾಷ್ಟಾಂಗ ನಮಸ್ಕಾರ ಮಾಡಿದರೆ ಮುಂದಿನ ಜನ್ಮದಲ್ಲಿ ಬಡತನ ಬರುತ್ತದೆಂಬ ಶಾಸ್ತ್ರ ಭಯ. ಈ ನಮಸ್ಕಾರಗಳನ್ನು ಪುರುಷರು ಮಾತ್ರ ಮಾಡಬೇಕು.

ಸ್ತ್ರೀಯು ಸಾಷ್ಟಾಂಗ ನಮಸ್ಕಾರದ ಬದಲು ಪಂಚಾಂಗ ನಮಸ್ಕಾರ ಅಂದರೆ ಕಾಲು ಮಡಚಿ ಮಾಡುವುದು; ತ್ರ್ಯಂಗ ನಮಸ್ಕಾರ ಉಡಿಗೆ ತೊಡಿಗೆಗಳಿಂದ ಮೈಮುಚ್ಚಿಕೊಂಡೇ ನಮಸ್ಕಾರ ಮಾಡಬೇಕು. ಸ್ತ್ರೀಯರು ಸಾಷ್ಟಾಂಗ ನಮಸ್ಕಾರ ಮಾಡುವ ರೇಖಾ ಚಿತ್ರಗಳನ್ನು ವಿರೂಪಾಕ್ಷ ದೇವಾಲಯದಲ್ಲಿ ನಾವು ಕಾಣುವುದಿಲ್ಲ. ಶಿರಬಾಗಿ ನಮಸ್ಕರಿಸುವುದನ್ನು ಕಾಣುತ್ತೇವೆ. ಇಲ್ಲಿ ರೇಖಾ ಚಿತ್ರಗಳು ಧಾರ್ಮಿಕ ಶಿಷ್ಟಾಚಾರದ ಪಾಲನೆಯನ್ನು ಸೂಚಿಸುತ್ತವೆ. ದೇವಾಲಯವನ್ನು ದೇವದೇವನಾದ ವಿರಾಟ್ ಪುರುಷನಿಗೆ ಹೋಲಿಸಿರುವುದು ಒಂದು ಕಾರಣವೆಂದು ಗ್ರಹಿಸಲಾಗುತ್ತದೆ. ತಮಿಳುನಾಡು, ಕೇರಳ ದೇವಾಲಯದಲ್ಲಿ ಸ್ತ್ರೀಯರು ಪಂಚಾಂಗ ನಮಸ್ಕಾರ ಮಾಡುವ ಪದ್ಧತಿಯನ್ನು ಕಾಣುತ್ತೇವೆ. ಅನುಕರಣೀಯ ಕಾರಣದಿಂದ "ಸ್ತ್ರೀ-ಪುರುಷರು", ಸಾಷ್ಟಾಂಗ ನಮಸ್ಕಾರದಲ್ಲಿ ತೊಡಗುವುದನ್ನು ನಾವು ಇಂದು ಕಾಣುತ್ತೇವೆ.

ಶ್ರೀ ವಿರೂಪಾಕ್ಷೇಶ್ವರ ದೇಗುಲದ ಅವರಣದಲ್ಲಿ ಹಾಗೂ ದೇವಾಲಯದ ಪ್ರದಕ್ಷಿಣೆ ಮಾಡುವಾಗ ಶಿರಬಾಗಿ ನಮಸ್ಕರಿಸುವ ಸಾಷ್ಟಾಂಗ ನಮಸ್ಕಾರಗಳು, ಮರ್ಕಟ ಮನಸ್ಸನ್ನು ಹತೋಟಿಗೆ ತರಲು ತರಬೇತು ನೀಡುವಂತಿವೆ. ನಮಸ್ಕಾರ ಮಾಡುವಾಗ ಪರಿವಾರ ದೇವರಿಗೆ ಕಾಲು ತೋರಿಸದಂತೆ ಈ ರೇಖಾ ಚಿತ್ರದ ವಿನ್ಯಾಸದಲ್ಲಿ ಎಚ್ಚರಿಕೆ ವಹಿಸಿರುವುದನ್ನು ಕಾಣುತ್ತೇವೆ. ಇಡೀ ದೇವಾಲಯದ ಪಾವಿತ್ರ್ಯತೆಗೆ ಮಹತ್ವ ನೀಡಲಾಗಿದೆ.

ಶ್ರೀ ವಿರಪಾಕ್ಷೇಶ್ವರ ದೇಗುಲದ ಮುಖ ಮಂಟಪದಲ್ಲಿ ನಡೆಯುವ "ಕಲ್ಯಾಣೋತ್ಸವ", ಡೋಲೋತ್ಸವ, ಪಲ್ಲಕ್ಕಿಉತ್ಸವ, ಬಲಿಹರಣ ಮುಂತಾದ ಸಂದರ್ಭದಲ್ಲಿ ಯಾವ ರೀತಿ ಶಿಷ್ಟಾಚಾರಕ್ಕೆ ಒಳಪಡಿಸಬೇಕೆಂಬ ಸೂಚನೆಯನ್ನು ಮುಖ ಮಂಟಪದಲ್ಲಿ ರೇಖಾ ಚಿತ್ರಗಳು ಸೂಚಿಸುತ್ತವೆ. ಶಿರಬಾಗಿ ನಮಸ್ಕರಿಸುವ ರೇಖಾ ಚಿತ್ರಗಳನ್ನು ಹಾಗೂ ಕೈ ಮೇಲೇತ್ತಿ "ಶಿರಸಾಂಜಲಿ" ರೀತಿಯ ನಮಸ್ಕಾರ ಮಾಡುವುದನ್ನು ಸೂಚಿಸುತ್ತವೆ. ಅಲ್ಲದೇ ರಾಜ-ಮಹಾರಾಜರು ರಾಜ ಪರಿವಾರದವರು ಒಂದೆಡೆ ಗೌರವಯುತ ಸ್ಥಾನದಲ್ಲಿ ನಿಂತು ಧಾರ್ಮಿಕ ಉತ್ಸವಾದಿಗಳನ್ನು ವೀಕ್ಷಿಸುವಂತಹ ಸ್ಥಳ ಕಾಯ್ದಿರಿಸುವ ರೀತಿಯಲ್ಲಿ ರೇಖಾ ಚಿತ್ರಗಳು ಸಂಜ್ಞೆಯನ್ನು ನೀಡುತ್ತವೆ. ಈ ಶಿಷ್ಟಾಚಾರದ ಆಚರಣೆಯಿಂದ ಉತ್ಸವಾದಿಗಳಿಗೆ ಹಾಗೂ ಭಜಕ ಭಕ್ತಾದಿಗಳಿಗೆ ಯಾವ ರೀತಿಯ ತೊಂದರೆಯಾಗದಂತೆ ಈ ರೇಖಾ ಚಿತ್ರಗಳು ರಕ್ಷಕರ ರಕ್ಷಣೆ ತೆರದಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ನೈತಿಕ ನಿಯಮವು ದೇವಾಲಯದ ವಾರ್ಷಿಕ ರಥೋತ್ಸವ, ಫಲಪೂಜಾ, ಸಂಕ್ರಾಂತಿ, ಶಿವರಾತ್ರಿ ಮುಂತಾದ ಹೆಚ್ಚುಗಟ್ಲೆ ಮುಂದುವರೆಯಲು ಪ್ರೇರೇಪಿಸುತ್ತಿವೆ.

ಲಿಪಿ ಲೇಖನಗಳು

ರೇಖಾ ಚತ್ರದಷ್ಟೇ ಮಹತ್ವವನ್ನು ಶ್ರೀವಿರೂಪಾಕ್ಷೇಶ್ವರ ದೇವಾಲಯದ ಅವರದಲ್ಲಿ ಹಾಸುಗಲ್ಲುಗಳ ಮೇಲೆ ಬರೆದಿರುವ ಲಿಪಿ ಲೇಖನಗಳು ಮತ್ತು ಶಿಲಾಶಾಸನಗಳು ಶಿಷ್ಟಾಚಾರ ಪಾಲನೆ ಮಾಡಿದ ಮತ್ತು ಪಾಲಿಸುವ ಬಗ್ಗೆ ನಿರ್ದಿಷ್ಟವಾದ ಮಾಹಿತಿ, ಸೂಚನೆಗಳನ್ನು ನೀಡುತ್ತಿವೆ.. ವಿಜಯನಗರ ಸಾಮ್ರಾಜ್ಯ ಸ್ಥಾಪನಾ ಪೂರ್ವದಲ್ಲಿಯೇ ಹಂಪೆಯು ಧಾರ್ಮಿಕವಾಗಿ ಮತ್ತು ರಾಜಕೀಯವಾಗಿ ಸಾಕಷ್ಟು ಅಭಿವೃದ್ಧಿ ಹೊಂದಿತ್ತು. ಇದಕ್ಕೆ ಮುಖ್ಯವಾದ ಕಾರಣ ಹಂಪೆಯ ಕೇಂದ್ರ ಬಿಂದುವಾದ ಶ್ರೀ ವಿರೂಪಾಕ್ಷ ದೇವರು ಎಂಬುದನ್ನು ವಿಜಯನಗರ ಪೂರ್ವ ಕಾಲದ ಶಾಸನಗಳಿಂದ (ಕ್ರಿ.ಶ. ೬೯೧, ೧೦೧೮, ೧೧೬೩, ೧೧೯೯, ೧೨೩೬, ೧೨೩೮, ೧೩೩೧) ತಿಳಿದು ಬರುತ್ತದೆ. ಕ್ರಿ.ಶ. ೧೧೯೯ರ ಶಾಸನವೊಂದರಲ್ಲಿ ಈ ಪಂಪಾ ಕ್ಷೇತ್ರ ಉತ್ತಮವಾದ ದೇವಾಲಯ ಸಮೂಹದಿಂದ ಮತ್ತು ತಪಸ್ವಿಗಳಿಂದ ಕೂಡಿತ್ತೆಂದು ವಿವರಿಸಿ ಮೈದುನ ಚೌಡಯ್ಯನು ಪಂಪಾದೇವಿಗೆ ಚೆಂಬೊನ್ನಿನ ಕಳಶವನ್ನು ಮಾಡಿಸಿ, ಶ್ರೀ ವಿರೂಪಾಕ್ಷ ಮತ್ತು ಪಂಪಾದೇವಿ ದೇವಾಲಯಗಳಿಗೆ ಸುಣ್ಣವನ್ನು ಬಳಿಸಿ, ಅ ದೇವಾಲಯಗಳಿಗೆ ಘಂಟೆ, ಅಡಿಗೆ, ಆರತಿ, ಧೂಪಪಟ್ಟಿ, ಪರ್ಯಾಣ, ಕಳಸ, ತಿಳಿವಟ್ಟಲು, ಚಂದನ, ಸುಗಂಧದ

ಸಿಪ್ಪು ಮತ್ತು ಆನೇಕ ವಸ್ತ್ರಭೂಷಣಗಳನ್ನು ಕೊಟ್ಟನು. ಅಲ್ಲದೆ ವಿರೂಪಾಕ್ಷ ದೇವರ ಮತ್ತು ಪಂಪಾದೇವಿಯ ನೈವೇದ್ಯಕ್ಕೆ ಆಕ್ಕಿ ಪಡಿ ಮತ್ತು ಭೂಮಿಯನ್ನು ದಾನ ಮಾಡಿದನೆಂದು ಉಲ್ಲೇಖವಿರುವುದನ್ನು ತಿಳಿಯುತ್ತೇವೆ.

ಲಭ್ಯ ಶಾಸನಗಳ ಅವಲೋಕನದಿಂದ ವಿಜಯನಗರೋತ್ತರ ಹಾಗೂ ವಿಜಯ ನಗರದ ಕಾಲಗಳಲ್ಲಿ ಸಾಮ್ರಾಜ್ಯದ ಬೇರೆ ಬೇರೆ ಊರುಗಳಲ್ಲಿ ಆ ಊರುಗಳಲ್ಲಿಯ ಅಥವಾ ಬೇರೆ ಊರುಗಳಲ್ಲಿ ದೇವರಿಗೆ ಅಥವಾ ವ್ಯಕ್ತಿಗಳಿಗ ದಾನ ಕೊಡುವಾಗ ಸಾಮಾನ್ಯವಾಗಿ ತುಂಗಾಭದ್ರ ತೀರದಲ್ಲಿ ಪಂಪಾಕ್ಷೇತ್ರದ ವಿರೂಪಾಕ್ಷನ ಸನ್ನಿಧಿಯಲ್ಲಿ ದಾನ ಕೊಡುವುದು ರೂಢಿಯಲ್ಲಿತ್ತು. ಅದು ವಿಜಯನಗರದ ಅರಸರ ಒಂದನೇ ಬುಕ್ಕ ರಾಯರಿಂದ ಅಚ್ಯುತ ದೇವರಾಯರ ಕಾಲದವರೆಗೆ ಈ ಪದ್ಧತಿ ಮುಂದುವರೆದಿರು ವುದನ್ನು ಕಾಣುತ್ತೇವೆ. ಹೀಗಾಗಿ ವಿರೂಪಾಕ್ಷ ದೇವರ ಸನ್ನಿಧಿ ಹಾಗೂ ದೇವಾಲಯದ ಮಂಟಪಗಳಲ್ಲಿ ಧರ್ಮಾರ್ಥ, ದತ್ತಿ ದಾನ ಉಂಬಳಿ ನೀಡಿರುವುದನ್ನು ಕಾಣುತ್ತೇವೆ. ದೇವಾಲಯದ ಅಭಿವೃದ್ಧಿಗೋಸ್ಕರ ಹಾಗೂ ದೇವರ ದೈನಂದಿನ ಪೂಜಾ ಕೈಂಕರ್ಯ ಕ್ಕಾಗಿ ಹಾಗೂ ಉತ್ಸವಾದಿಗಳ ಆಚರಣೆಗಾಗಿ ರಾಜ ವಂಶಜರು ಪರಿವಾರದವರು, ಅಮಾತ್ಯರು, ಗಣ್ಯರು, ದೇವದಾಸಿಯರು ಸೇವೆಯ ಸ್ಮರಣೆಗಾಗಿ ದೇವಾಲಯದ ಹಾಸುಗಲ್ಲಿನ ಮೇಲೆ ರೇಖಾಚಿತ್ರದ ಜೊತೆಗೆ ಲಿಪಿ ಲೇಖನಗಳನ್ನು ಬರೆಸಿದ್ದಾರೆ. ಅಲ್ಲಲ್ಲಿ ಕಾಣುವ ಲಿಪಿ ಲೇಖನಗಳು ಉದಾಹರಣೆ : ಬಳ್ಳಾರಪ್ಪ, ಗಂಗಮ್ಮ, ಇತ್ಯಾದಿ ಲಿಪಿ ಲೇಖನಗಳನ್ನು ಹಾಗೂ ಅವರಣ ಪರಿವಾರ ದೇವರುಗಳ ಮುಖ್ಯವಾದ ೪೭ ದೇವರನ್ನು ಕ್ರಮಸಂಖ್ಯೆಯೊಂದಿಗೆ ಹೆಸರಿಸಿರುವ ಹಾಸು ಗಲ್ಲಿನ ಲಿಪಿ ಲೇಖನಗಳಿವೆ. ಉದಾಹರಣೆಗಾಗಿ ಪಂಪಾದೇವಿ-೧೨, ಭುವನೇಶ್ವರಿ-೧೩, ರುದ್ರಾಕ್ಷೇಶ್ವರ-೩೩..... ಇತ್ಯಾದಿ.

ಈ 'ಲಿಪಿ ಲೇಖನ' ಗಳಲ್ಲಿ ಶಿಷ್ಟಾಚಾರ ಸಂಜ್ಞೆಯನ್ನು ನೀಡುವ ಅತ್ಯಂತ ಮಹತ್ವದ 'ಶಿಖರ ದರ್ಶನ' ಸೂಚಿಸುವಂತಹುದು ಆಧ್ಯಾತ್ಮಿಕತೆಯ ಭಾವ ಆರಳುವ ಉತ್ತುಂಗತ ಸಂಜ್ಞೆಯಾಗಿದೆ. ಶ್ರೀ ವಿರೂಪಾಕ್ಷ ದೇವಾಲಯಕ್ಕೆ ಐದು ಕಳಸ, ಐದು ಶಿಖರಗಳಿದ್ದು, ಈ ಕಳಸ-ಶಿಖರ ದರ್ಶನಕ್ಕೆ ನಿರ್ದಿಷ್ಟವಾದ ಮಾರ್ಗವನ್ನು ಅನುಸರಿಸಬೇಕಾಗುತ್ತದೆ. ದೇವಾಲಯದ ಅಂದರೆ ರಾಯರಗೋಪುರದಿಂದ ಒಳಗೆ ಹೋದಾಗ ಗೋಪುರ ಪಕ್ಕದಲ್ಲಿ ಸೂರ್ಯ ದೇವಸ್ಥಾನದ ಹತ್ತಿರವಿರುವ 'ಪಂಚ ಶಿಖರ' ಎಂದು ಹಾಸುಗಲ್ಲಿನ ಮೇಲೆ ಬರೆದ ಸ್ಥಳದಲ್ಲಿ ನಿಂತು ದೇವಸ್ಥಾನದ ಗೋಪುರ ವೀಕ್ಷಿಸಿದರೆ ಪಂಚ ಕಳಸಗಳ ಶಿಖರದ ದರ್ಶನ ಭಾಗ್ಯ ಲಭಿಸುತ್ತದೆ. ಸ್ವಲ್ಪ ಸ್ಥಳ ಮತ್ತು ವೀಕ್ಷಣೆಯಲ್ಲಿ ವ್ಯತ್ಯಾಸ ವಾದರೆ ಪಂಚ ಕಳಸ ಹಾಗೂ ಶಿಖರ ದರ್ಶನವಾಗುವುದಿಲ್ಲ. ಇದರಿಂದ ಧಾರ್ಮಿಕ ಭಾವನೆಯ ಅಭಿವ್ಯಕ್ತಿಗೆ ಸಂಜ್ಞೆಯನ್ನು ನೀಡುತ್ತಿದೆ. ವಿರೂಪಾಕ್ಷ ಪಂಚ ಮುಖಗಳಿಂದ ದರ್ಶನ ನೀಡುತ್ತಿದ್ದಾನೆಂಬ ಭಾವನೆ ಪ್ರಾಚೀನವಾಗಿದೆ. ಈ ಸ್ಥಳದಿಂದ ಸೋಮನಾಥೇ ಶ್ವರ, ಮಾತಂಗೇಶ್ವರ, ವಾಣಿಭದ್ರೇಶ್ವರ, ಜಂಬುನಾಥೇಶ್ವರ, ಕಿನ್ನರೇಶ್ವರ - ಈ

ಎಲ್ಲ ಕ್ಷೇತ್ರಗಳ ದರ್ಶನ ಭಾಗ್ಯ ಈ ಪಂಚಕಳಸ-ಶಿಖರ ದರ್ಶನದಲ್ಲಿ ದೊರೆಯುತ್ತದೆಂಬ ಪ್ರತೀತಿ ಈಗಲೂ ಇದೆ. ಶವರಾತ್ರಿ ಅಚರಣೆಯ ಕಾಲಕ್ಕೆ ಈ ಪಂಚ ಕ್ಷೇತ್ರಗಳ ದರ್ಶನವನ್ನು ಮಾಡಿಕೊಂಡು ಶ್ರೀ ವಿರೂಪಾಕ್ಷೇಶ್ವರ ದರ್ಶನ ಪಡೆಯುವುದು ಶ್ರೇಷ್ಠ ಎಂಬ ನಂಬಿಕೆಯಿಂದ ಈ ಕ್ಷೇತ್ರಗಳ ದರ್ಶನವನ್ನು ಭಕ್ತಾದಿಗಳು ಮಾಡಿಕೊಂಡು ಬರುವ ಪದ್ಧತಿಯನ್ನು ಅನುಸರಿಸುತ್ತಾರೆ. ದೇವಾಲಯದ ಮುಖ ಮಂಟಪದಲ್ಲಿ ಶ್ರೀ ವಿರೂಪಾಕ್ಷೇಶ್ವರ ದೇವರಿಗೆ ಮಾಡುವ ಡೋಲೋತ್ಸವ (ಉಯ್ಯಾಲೆ) ಧಾರ್ಮಿಕ ಕಾರ್ಯ ಕ್ರಮದಲ್ಲಿ ಬೆಳ್ಳಿಯ ಪಂಚಾರತಿಯನ್ನು ಬೆಳಗುವ ಪದ್ಧತಿಯಿದ್ದು ಶಿವನ ಪಂಚ ಮುಖಗಳಿಗೆ ಈ ಗೌರವ ಈ ಪಂಚ ಮುಖಗಳನ್ನು ಸದ್ಯೋಜಾತ, ವಾಮದೇವ, ಅಘೋರ, ತತ್ ಪುರುಷ, ಈಶಾನ್ಯ ಎಂದಾಗಿ ಸಹ ಕರೆಯಲಾಗುತ್ತಿದೆ. ಈ ಲಿಪಿ ಲೇಖನದಿಂದ ಐದಾರು ಹೆಜ್ಜೆ ಮುಂದೆ ಸಾಗಿದಾಗ "ಎಕಶಿಖರ, ೨ಶಿಖರಂ," ಎಂಬ ಲಿಪಿ ಲೇಖನದ ಮೇಲೆ ನಿಂತು ನೋಡಿದಾಗ, ಒಂದು ಗೋಪುರ ಕಳಸ ಎರಡನೆಯದರ ಮೇಲೆ ನಿಂತು ನೋಡಿದಾಗ "ಎರಡು ಶಿಖರ" ಎರಡು-ಕಳಸ ಕಾಣುತ್ತವೆ. (ಫೋಟೋ ನಂ ೫,೬,೭,) ಈ ಹಾಸುಗಲ್ಲಿನ ಲಿಪಿ ಲೇಖನ ಭಕ್ತಾದಿಗಳಿಗೆ ಶಿಷ್ಟಾಚಾರದ ಪಾಲನೆಯು ಅತ್ಯಂತ ಮಹತ್ವದ ಸಂಜ್ಞೆಯಾಗಿದೆ.

ಹೀಗೆ ಶ್ರೀ ವಿರೂಪಾಕ್ಷ ದೇವಾಲಯದ ಮಂಟಪ ಹಾಗೂ ಮಹತ್ವದ ಸ್ಥಳದ ಹಾಸುಗಲ್ಲಿನ ಮೇಲಿನ ಹಾಗೂ ಗೋಡೆ, ಶಿಲಾ ಶಾಸನಗಳಿಂದ ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದಲ್ಲಿ ಮಹತ್ವದ ಶಿಷ್ಟಾಚಾರದ ಪಾಲನೆಯ ಸಂಜ್ಞೆಗಳನ್ನು ನಾವು ಪಡೆಯಬಹುದಾಗಿದೆ. ಇಂತಹ ಹಾಸುಗಲ್ಲಿನ ಲಿಪಿ ಲೇಖನಗಳು ದೇವಾ ಲಯದಲ್ಲಿ ೧೦೦ ಗಡಿ ತಲುಪುತ್ತಿವೆ.

ದೇವಾಲಯದ ಅವರಣದಲ್ಲಿಯ ಭೇರಿ ಪೀಠ, ದೀಪಸ್ತಂಭ, ಬ್ರಹ್ಮಬಲಿ, ಧ್ವಜ, ನಂದಿ ಪೀಠಗಳು (ಶೈವ ದೇವಾಲಯ ಲಾಂಛನಗಳು) ಸಹ ಭಕ್ತ ಭಜಕರ ಉತ್ಸವಾದಿಗಳ ಚಾಲನೆಗೆ ಶಿಷ್ಟಾಚಾರದ ಪಾಲನೆಯ ಸಂಜ್ಞೆಗಳನ್ನು ನೀಡುತ್ತಿವೆ. ದೇವಾಲಯ ಶಾಸ್ತ್ರ ಸಮ್ಮತ ಕಾರ್ಯಗಳ ಕೇಂದ್ರಬಿಂದುವಾಗಿದೆ. (ಫೋಟೋ೯)

ರಾಜವಂಶಜರ ಕೊಡುಗೆಯಲ್ಲಿ ಶಿಷ್ಟಾಚಾರಗಳು

ಐತಿಹಾಸಿಕ ಮಹತ್ವ ಹೊಂದಿದ ರಾಜ ಮಹರಾಜರಿಂದ ಬಳುವಳಿಯಾಗಿ ಬಂದಿರುವ ಸಾಂಪ್ರದಾಯಿಕ ಚಿನ್ನಾಭರಣಗಳು, ಉಡಿಗೆ ತೊಡುಗೆಗಳು ಐತಿಹಾಸಿಕ, ಪೌರಾಣಿಕ, ಧಾರ್ಮಿಕ ಶಿಷ್ಟಾಚಾರಗಳು ಪ್ರದರ್ಶನಕ್ಕೆ ಇಂದು ಜೀವಂತಿಕೆಯನ್ನು ತರುತ್ತವೆ. ಗತಕಾಲದ ವೈಭವದ ಕ್ಷಣಗಳನ್ನು ಸ್ಮರಣೆಗೆ ತರುತ್ತವೆ. ರಾಜವಂಶಸ್ಥರು ಅನುಸರಿಸಿಕೊಂಡು ಬಂದಿರುವ ಶಿಷ್ಟಾಚಾರದ ಪಾಲನೆಯು ಇಂದು ನಡೆದುಕೊಂಡು ಬಂದಿರುವುದು. ವಿಜಯನಗರದ ಸಂಸ್ಕೃತಿ, ಸಂಪ್ರದಾಯ, ಶಿಷ್ಟಾಚಾರದ ಕ್ರಮಗಳು ಇಂದಿಗೂ ನಿತ್ಯ ನೂತವಾಗಿವೆ; ಅವುಗಳು ಇಂತಿವೆ.

ವಿಜಯನಗರದ ಅರಸು ಶ್ರೀ ಕೃಷ್ಣದೇವರಾಯನು ಶ್ರೀ ವಿರೂಪಾಕ್ಷೇಶ್ವರ ಸ್ವಾಮಿ ದೇವರಿಗೆ ಸುವರ್ಣ ಮುಖವಾಡ, ಕಲಿ, ತುರಾಯಿ, ಛತ್ರಿಗಳಿಂದ ಅಲಂಕರಿಸುವ ಆಭರಣಗಳನ್ನು ನೀಡಿದ್ದು, ಪ್ರತಿವರ್ಷ ವಿಶೇಷ ಸಂದರ್ಭದಲ್ಲಿ ಅಂದರೆ ವಾರ್ಷಿಕ ರಥೋತ್ಸವ, ಫಲಪೂಜಾ, ಶಿವರಾತ್ರಿ, ಹಂಪಿ ಉತ್ಸವಗಳಂತಹ ಮಹತ್ವದ ದಿನಗಳಲ್ಲಿ ಶ್ರೀ ವಿರೂಪಾಕ್ಷೇಶ್ವರ ಸ್ವಾಮಿಗೆ ಅಲಂಕರಿಸುವ ಪದ್ಧತಿ ಇದ್ದು ಪೌರಾಣಿಕ ಹಿನ್ನೆಲೆಯ ಭಾವನೆಗಳಿಗೆ ಐತಿಹಾಸಿಕ ಮನ್ನಣೆ ನೀಡಿ, ಇಂದು ಭಜಕ ಭಕ್ತಾಧಿಗಳ ನಿತ್ಯಾನಂದ ವನ್ನು ಚಿಮ್ಮುವ ಬುಗ್ಗೆಗಳಾಗಿ, ಜೀವಂತಿಕೆಯ ಚೈತನ್ಯದಲ್ಲಿ ಚಿರಸ್ಮರಣೀಯವಾಗಿ ಉಳಿದಿವೆ.

ವಿಜಯನಗರ ಸಾಮ್ರಾಜ್ಯದ ಪ್ರಪ್ರಥಮ ಅರಸು ಹರಿಹರರಾಯ, ಬುಕ್ಕರಾಯ ವಿಜಯನಗರ ಸ್ಥಾಪನೆಗೆ ಪ್ರೇರಣಾ ಶಕ್ತಿಯಾದ ಶ್ರೀ ವಿದ್ಯಾರಣ್ಯ ಗುರುಗಳಿಗೆ ಭಕ್ತಿ ಪೂರ್ವಕವಾಗಿ ಅರ್ಪಿಸಿದ ನವರತ್ನ ಖಚಿತವಾದ ಕರ್ಣಕುಂಡಲ ಹಾಗೂ ಇತರ ಸಂಪ್ರದಾಯ ಅಭರಣಗಳನ್ನು ಅರ್ಪಿಸಿ ರಾಜಗುರು ಮತ್ತು ಧರ್ಮಗುರುಗಳನ್ನಾಗಿ ಆರಾಧಿಸಿದ್ದಾರೆ. ಹೈದರಾಬಾದಿನ ನಿಜಾಮ ದೊರೆ ಶ್ರೀ ವಿದ್ಯಾರಣ್ಯರಿಗೆ ನೀಡಿದ ಬೆಳ್ಳಿಯ ಕುಸಿರಿ ಕೆಲಸದ ಟೋಪಿ ಹಾಗೂ ನಿಲುವಂಗಿಯನ್ನು ಪ್ರತಿ ವರ್ಷ ಶ್ರೀ ವಿರೂಪಾಕ್ಷೇಶ್ವರ ಬ್ರಹ್ಮ ರಥೋತ್ಸವದಲ್ಲಿ ಇಂದಿಗೂ ಶ್ರೀ ವಿದ್ಯಾರಣ್ಯ ಪೀಠಸ್ಥರು ಧರಿಸುವ ಪದ್ಧತಿ ಇದ್ದು ರಾಜ-ಗುರು-ಧರ್ಮ-ಗುರುಗಳಾದ ಶ್ರೀ ವಿದ್ಯಾರಣ್ಯ ಪೀಠಾಧಿಪತಿಗಳು ಈ ಐತಿಹಾಸಿಕ ಉಡಿಗೆ ಧರಿಸಿ ಬಿರುದಾವಳಿಯೊಂದಿಗೆ ಬರುವ ಸನ್ನಿವೇಶದಲ್ಲಿ ಅನುಸರಿಸುವ ಶಿಷ್ಟಾಚಾರದ ಕ್ರಮ ಚಿರಸ್ಮರಣೆಯವಾಗಿದೆ.

ಇಂದಿಗೂ ಮುಂದುವರೆದ ರಾಜವಂಶದ ಶಿಷ್ಟಾಚಾರ

ಆನೆಗೊಂದಿಯ ರಾಜವಂಶಜರು ರಥೋತ್ಸವ ಕಾಲಕ್ಕೆ ಆಗಮಿಸಿದಾಗ ಅವರು ಹಂಪಿಯಲ್ಲಿರುವ ಸ್ವಂತ ಮಂಟಪದಲ್ಲಿ ಉಳಿದುಕೊಳ್ಳುವರು. ದೇವಸ್ಥಾನದವರು ಮಂಗಳವಾದ್ಯಗಳೊಂದಿಗೆ ಫಲ, ಕುಸುಮಹಾರಗಳನ್ನು ಸಂಪ್ರದಾಯಿಕವಾಗಿ ತೆಗೆದು ಕೊಂಡು ಹೋಗಿ ಅವರಿಗೆ ಅರ್ಪಿಸಿ ರಾಜ ಮರ್ಯಾದೆಯೊಂದಿಗೆ ದೇವಸ್ಥಾನಕ್ಕೆ ಬರಮಾಡಿಕೊಂಡು, ದೇವಸ್ಥಾನದ ಪ್ರದಕ್ಷಿಣೆ ಮಾಡಿಸಿ ಮುಖ್ಯ ಮಂಟಪದೊಳಗೆ ಪ್ರವೇಶಿಸಿ ಪೂರ್ವದ್ವಾರದ ಮುಖಾಂತರ ಒಳಗೆ ಪ್ರವೇಶ ಸಂಪ್ರದಾಯದಂತೆ ಶ್ರೀವಿರೂ ಪಾಕ್ಷೇಶ್ವರ ಸ್ವಾಮಿಗೆ ಪೂಜೆ ಸಲ್ಲಿಸಿ ಮಂಗಳಾರತಿ ಯಲ್ಲಿ ಐದು ರೂಪಾಯಿ ಹಾಕ ಬೇಕು. ರಥೋತ್ಸವ ಕಾಲದಲ್ಲಿ ರಾಜರು ತಮ್ಮ (ಬಿದುದಾವಳಿ) ಬಿರುದುಗಳೊಡನೆ ರಥದ ಮುಂದೆ ಇರಬೇಕು. ರಥೋತ್ಸವ ಕಾಲದಲ್ಲಿ ತಮ್ಮ ಕಡೆಯಿಂದ ರಥೋತ್ಸವ ಮುಗಿಯುವವರೆಗೂ ನಾಲ್ಕು ಮಂದಿ ರಾಜಭಟರನ್ನು ಇಟ್ಟಿರಬೇಕು, ಪ್ರತಿ ಸಂವತ್ಸ ವರವೂ ರಾಜರು ಶಿವರಾತ್ರಿ ಕಾಲದಲ್ಲಿ ಮೂಲ ಸ್ವಾಮಿಗೆ ಹತ್ತು ರೂಪಾಯಿ ಮಂಗಳಾ ರತಿಯಲ್ಲಿ ಸಲ್ಲಿಸಬೇಕು. ರಥೋತ್ಸವ ಕಾಲದಲ್ಲಿ ತೇರು ಜೀರ್ಣೋದ್ಧಾರಕ್ಕೆ, ಅಡಿಗೆ

ಹಂದರಕ್ಕೆ ವಗ್ಯೆರಾಗಳಿಗೆ ಬೇಕಾದ ಎಲ್ಲಾ ಕಟ್ಟಿಗೆಗಳನ್ನು ರಾಜರೇ ದೇವಸ್ಥಾನದವರಿಗೆ ಸರಬರಾಜು ಮಾಡಬೇಕೆಂಬ ಶಿಷ್ಟಾಚಾರಗಳು ಪಾಲನೆಗೊಳಪಟ್ಟಿರುತ್ತದೆ.

ರಾಜಸ್ತ್ರೀಯರು ಮೇನೆಯಲ್ಲಿ ಕುಳಿತು ಉತ್ತರ ದ್ವಾರದ ಮುಖಾಂತರ ಶ್ರೀ ವಿರೂಪಾಕ್ಷ ದೇವಾಲಯ ಪ್ರವೇಶ ಮಾಡಿ ಸ್ವಾಮಿ ದರ್ಶನ ಮಾಡಿಕೊಂಡು ಮೇನೆಯಲ್ಲಿ ಕುಳಿತುಕೊಂಡು ತಮ್ಮ ಬಿಡದಿಗೆ ಹೋಗಬೇಕು. ರಾಜಸ್ತ್ರೀಯರು ದೇವಾಯಲದಲ್ಲಿಯೇ ನಿವಾಸಮಾಡಬೇಕೆಂದು ಅಪೇಕ್ಷೆ ಪಟ್ಟಲ್ಲಿ ಉತ್ತರ ಗೋಪುರದಲ್ಲಿ ಇಳಿದು ಅಡಿಗೆ ಮಾಡಿಕೊಂಡು ಭೋಜನ ಮಾಡಬೇಕೆಂಬ ಶಿಷ್ಟಾಚಾರಗಳಿದ್ದು ಇಂದು ರಾಜ ವಂಶದ ಸ್ತ್ರೀಯರು ದೇವಸ್ಥಾನಕ್ಕೆ ಭೇಟಿ ನೀಡಿದಾಗ ಗೌರವಿಸಲಾಗುತ್ತಿದೆ ಹಾಗೂ ಐತಿಹಾಸಿಕವಾಗಿ ಬಂದಿರುವ ಮೇನೆಯ ಪರಂಪರೆ ಶಿಷ್ಟಾಚಾರಗಳು ಸಧ್ಯ ಪಾಲನೆಯಲ್ಲಿಲ್ಲ.

ಸೊಂಡೂರು ರಾಜರು

ಸೊಂಡೂರು ರಾಜರು ಶ್ರೀ ಪಂಪಾಪತಿ ದೇವಸ್ಥಾನ್ಕಕೆ ಶ್ರೀಗಂಧದ ಚಕ್ಕೆಗಳು, ಕುಮಾರಸ್ವಾಮಿಯ ಬೆಟ್ಟದಲ್ಲಿನ ವಿಭೂತಿಗಳನ್ನು ಯಥೇಚ್ಚವಾಗಿ ಸರಬರಾಜು ಮಾಡಬೇಕು. ಶ್ರೀ ವಿರೂಪಾಕ್ಷೇಶ್ವರ ದೇವಾಲಯಕ್ಕೆ ಭೇಟಿ ನೀಡಿದಾಗ ದೇವಾಲಯದ ಎರಡನೇ ದ್ವಾರ ಪ್ರವೇಶ ಪ್ರದಕ್ಷಿಣೆ ಮಾಡಿ, ಉತ್ತರ ದ್ವಾರದ ಮೂಲಕ ಕಂಚಿನ ಬಸಪ್ಪನ ಬಲಗಡೆಯಿಂದ ದೇವಸ್ಥಾನದೊಳಗೆ ಪ್ರವೇಶ ಮಾಡಿ ಮೂಲ ಸ್ವಾಮಿ ಸನ್ನಿಧಿಗೆಹೋಗಿ ಐದು ರೂಪಾಯಿ ಪಾರ್ವತಿಗೆ ಪಂಪಾದೇವಿಗೆ ಎರಡು ರೂಪಾಯಿ ಭುನೇಶ್ವರಿಗೆ ಒಂದು ರೂಪಾಯಿ ಮಂಗಳಾರತಿ ಕಾಲಕ್ಕೆ ಸಲ್ಲಿಸಬೇಕು. ದೇವಸ್ಥಾನದವರು ಫಲಪುಷ್ಪಗಳನ್ನು ಕೊಟ್ಟು ಕೊರಳಿಗೆ ಹೂವಿನ ಹಾರ ಹಾಕಬೇಕು. ಸೊಂಡೂರು ಆರಸರ ರಾಜ ಸ್ತ್ರೀಯರು ಆನೆಗೊಂದಿ ಆರಸರ ರಾಜಸ್ತ್ರೀಯರು ಆನುಸರಿಸುವ ಶಿಷ್ಟಾಚಾರಗಳನ್ನು ಅನುಸರಿಸಬೇಕೆಂಬ ಶಿಷ್ಟಾಚಾರ ದೇವಾಲಯದ ರಿವಾಜಿನಲ್ಲಿ ಉಲ್ಲೇಖವಾಗಿದೆ.

ರೈತಾಪಿಜನತೆಯ ಶಿಷ್ಟಾಚಾರ

ಅನ್ನದಾತನೆಂದು ಪ್ರಖ್ಯಾತಿ ಹೊಂದಿದ ನಮ್ಮ ರೈತರು ಶ್ರೀ ವಿರೂಪಾಕ್ಷ ದೇವಾಲಯದಲ್ಲಿ ವೈಶಾಖ ಮಾಸದ ಶುದ್ಧ ಪಂಚಮಿಯಿಂದ ಜೇಷ್ಠ ಶುದ್ಧ ಪಂಚಮಿಯವರೆಗೆ (ಮೇ ತಿಂಗಳಲ್ಲಿ) ಶ್ರೀ ವಿರೂಪಾಕ್ಷ ಸ್ವಾಮಿಯ ಉದ್ಭವ ಲಿಂಗಕ್ಕೆ ಅಳವಡಿಸಿದ ಧಾರಾಪಾತ್ರೆಯ ಶಿಷ್ಟಚಾರ ಪಾಲನೆಯಲ್ಲಿ ನಾಳೆಯ ಬದುಕಿನ ಸಂಕಲ್ಪಸಿದ್ಧಯಿದೆ. ಮೇ ತಿಂಗಳಲ್ಲಿ ಬಿಸಿಲಿನ ಪ್ರಕೋಪ ಹೆಚ್ಚಾಗಿರುತ್ತದೆ. ಈ ಕಾಲದಲ್ಲಿ ಶಾಸ್ತ್ರ ಬದ್ಧ ಕ್ರಮದಂತೆ ಲಿಂಗದ ಮೇಲೆ ಸದಾ ಗಂಗಾಧಾರೆ ಹನಿಹನಿಯಾಗಿ ಬೀಳುವಂತೆ ಧಾರಾಪಾತ್ರೆಯ ವ್ಯವಸ್ಥೆ ಮಾಡಲಾಗುತ್ತಿದೆ. ಈ ಪದ್ಧತಿ ಪೂಜಾ ಕ್ರಮಕ್ಕೆ "ಶಿತಬಂಧ" ಎಂದು ಕರೆಯಲಾಗುತ್ತಿದ್ದು ಈ ಧಾರಾಪಾತ್ರೆಯನ್ನು ವೈಶಾಖ ಮಾಸದ ಜೇಷ್ಠ ಶುದ್ಧ

ಪಂಚಮಿಯಿಂದ ತೆಗೆಯಲಾಗುತ್ತದೆ. ಈ ಕಾರ್ಯಕ್ರಮ ಮುಗಿಯುವುದರೊಳಗೆ ಮುಂಗಾರು ಮಳೆ ಪ್ರಾರಂಭವಾಗುತ್ತದೆಂಬ ನಂಬಿಗೆ ಇದ್ದು ರೈತಾಪಿ ಜನತೆಯ ಶಿಷ್ಟಾಚಾರದ ಪಾಲನೆಯಲ್ಲಿ ಈ ಶಿತಬಂಧ ಕಾರ್ಯಕ್ರಮ ಅತ್ಯಂತ ಮಹತ್ವದ್ದಾಗಿದೆ. ಹೀಗೆ ಧಾರ್ಮಿಕ ಕಾರ್ಯಗಳ ಆಚರಣೆ ಹಾಗೂ ಶಿಷ್ಟಾಚಾರದ ಪಾಲನೆಯ ಸಂಜ್ಞೆಗಳು ಅಡಗಿವೆ.

ಹೀಗೆ ಹಲವಾರು ಶಿಷ್ಟಾಚಾರದ ಪಾಲನೆಗೆ ಚಾಲನೆ ನೀಡುವ ಸಂಜ್ಞೆಗಳು ಹೇಮಕೂಟ ಪರ್ವತ ಶ್ರೇಣಿಯಲ್ಲಿ ೧೬೫ ಅಡಿ ಎತ್ತರದ ಹನ್ನೊಂದು ಅಂತಸ್ತಿನೊಂದಿಗೆ ಕಂಗೊಳಿಸುವ ಶ್ರೀ ವಿರೂಪಾಕ್ಷೇಶ್ವೇರ ದೇವಾಲಯದ ಹಿರಿಯ ಗೋಪುರ ಭಕ್ತ ಭಜಕರಿಗೆ ದೂರದಿಂದಲೇ ಭಕ್ತಿ ಜಾಗೃತಿಗೆ ಶಿಷ್ಟಾಚಾರ ಪಾಲನೆಯ ನಿಯಮಗಳಿಗೆ ಬದ್ಧರಾಗಿರುವಂತೆ ಸಂಜ್ಞೆಯನ್ನು ನೀಡುವಂತಿದೆ. ಭಾವನಾತ್ಮಕವಾಗಿ ಹಾಗೂ ಅಧ್ಯಾತ್ಮಿಕವಾಗಿ ಪಂಪಾಕ್ಷತ್ರದೊಂದಿಗೆ ಬೆರೆಯುವಂತೆ ಮಾಡುತ್ತಿದೆ.

ಗ್ರಂಥ ಋಣ

1. ಡಾ.ಪಾಟೀಲ ಚೆನ್ನಬಸಪ್ಪ ಎಸ್ ಮತ್ತು ವಿನೋದಾ ಪಾಟೀಲ್ ವಿಜಯನಗರದ (ಹಂಪೆಯ) ಶಾಸನಗಳು, ಮೈಸೂರು-೧೯೯೬.
2. ಶ್ರೀ ವಿರೂಪಾಕ್ಷ ವಿದ್ಯಾರಣ್ಯರ ಸಂಗ್ರಹ "ಶ್ರೀ ಪಂಪಾಮಹಾತ್ಮೆ" ಹಂಪಿ-೧೯೯೨.
3. ಅಹೋಬಲನ ವಿರೂಪಾಕ್ಷ ವಸಂತೋತ್ಸವ ಚಂಪೂ, ಪ್ರೊ ಕೆ.ಎಸ್.ಕಣ್ಣನ್, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೧.
4. ಕೋಟ ವಾಸುದೇವ ಕಾರಂತ; ದೇವಾಸ್ಥಾನಗಳ ಸದುಪಯೋಗ, ಅನಂತ ಪ್ರಕಾಶನ ಬೆಂಗಳೂರು-೪, ೧೯೮೭.
5. ವಿಷ್ಣುತೀರ್ಥ ಪಿ. ಪಂಪಾಮಹಾತ್ಮೆ ಕನ್ನಡದಲ್ಲಿ ಸಂಗ್ರಹ, ನವವೃಂದಾವನ, ಆನೆಗೊಂದಿ-೧೯೬೩.
6. ಡಾ ಎಚ್.ಆರ್. ರಘುನಾಥ ಭಟ್; ವಿಜಯನಗರದ ಕಾಲದ ರೇಖಾ ಚಿತ್ರ ಕಲೆ ಶೈಲಿ ಒಂದು ಟಿಪ್ಪಣಿ, ವಿಜಯನಗರದ ಅಧ್ಯಯನ ಸಂ.೮-೨೦೦೩
7. ಡಾವಣಗೇರಿ ಚಂದ್ರಶೇಖರ ವಿ.; ಹಂಪಿ ಶ್ರೀ ವಿರೂಪಾಕ್ಷ ದೇವಾಲಯದ ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆ, ವಿಜಯನಗರ ಅಧ್ಯಯನ ಸಂಪುಟ.೮-೨೦೦೩.

೧೫. ವಿಜಯನಗರದ ರಕ್ಷಣಾ ವಾಸ್ತು: ಒಂದು ಪುನರಾವಲೋಕನ

ಡಾ.ಎಸ್.ಕೆ. ಜೋಶಿ

ವಾಸ್ತು ನಾಗರಿಕತೆಯ ಪಡಿಯಚ್ಚು ಎಂದು ಕಲೈತಿಹಾಸಕಾರ ಪರ್ಸಿಬ್ರಾವುನ್ ಹೇಳುತ್ತಾನೆ. (Architectrure is the matrix of civilization). ಮಾನವನ ಬದುಕಿನ ವಸತಿಗಳ, ನಂಬುಗೆಗಳ, ಸಾಮೂಹಿಕ ಪ್ರಾಕೃತಿಕ ಹಾಗೂ ವೈರುಧ್ಯಗಳ ರಕ್ಷಣೆಗಾಗಿ ನಿರ್ಮಿಸಿದ ಮಣ್ಣು ಕಲ್ಲು ಇಟ್ಟಿಗೆ ಗಚ್ಚು ಗಾರೆಗಳ ಕೃತಿಗಳೆ ವಾಸ್ತು ದರ್ಶನದ ಕೃತಿಗಳ ವಾಸ್ತು ಪಡಿಯಚ್ಚುಗಳಾಗುತ್ತವೆ. ಆಯಾ ನಾಗರೀಕತೆಯ ಬದುಕಿನ ವ್ಯವಸ್ಥೆಯ ಚಿತ್ರಣವನ್ನು ಚಿತ್ರಿಸುತ್ತವೆ. (Living system in the from of architrcture). ಈ ತರಹದ ವಾಸ್ತು ಕೃತಿಗಳಲ್ಲಿ (i) ಬಾಳಲು ಆಸೆ ನೀಡುವ ಗ್ರಹವಾಸ್ತು (Domestic architecture) , (ii) ನಂಬುಗೆಗಳ ಅಂದರೆ ಧಾರ್ಮಿಕ ಕ್ರಿಯೆಗಳ ವಾಸ್ತು (Relgious architecture), (iii) ಸಾಮೂಹಿಕ ಅಥವಾ ಸಾಮಾಜಿಕ ಸಂಬಂಧಿತ ವಾಸ್ತು (Social architecture) ಹಾಗೂ ರಕ್ಷಣಾ ವಾಸ್ತು,(Defence architecture) ಲಂಬ ನಾಲ್ಕು ಪ್ರಮುಖ ವಿಭಾಗಗಳನ್ನು ಕಾಣಬಹುದು.

ಈ ನಾಲ್ಕು ಪ್ರಮುಖ ವಾಸ್ತು ವಿಭಾಗಗಳಲ್ಲಿ ಮಾನವನ ಬದುಕಿನ ವ್ಯವಸ್ಥೆಗಳನ್ನು ಕಾಣುತ್ತೇವೆ. ಇರುವಿಗಾಗಿ ಮನೆ ಮಾರುಗಳ ವಾಸ್ತು, ಧಾರ್ಮಚರಣೆಗಳಿಗಾಗಿ ಧಾರ್ಮಿಕ ಕಟ್ಟಡಗಳ ವಾಸ್ತು: ಗುಡಿ, ಮಸೀದಿ ಗುಂಬಝು, ಚರ್ಚುಗಳು, ಮುಂತಾದವು, ಸಾಮೂಹಿಕ ವಾಸ್ತು: ನ್ಯಾಯಲಯಗಳು, ಕೊರ್ಟು ಕಚೇರಿಗಳು ಸಬಾಭವನಗಳು, ಕ್ರೀಡಾಂಗಣಗಳು, ಮನರಂಜನಾ ಭವನಗಳು, ನೆಲೆ ನಾಲೆಗಳು, ಸೇತು ರಸ್ತೆಗಳು, ಬಾಜಾರುಗಳು, ಇತ್ಯಾದಿಗಳು ಹಾಗೂ ರಕ್ಷಣೆಗಾಗಿ ಕೋಟೆ ಕೊತ್ತಲಗಳು, ದಂಡಿನ ನೆಲೆಗಳು, ಸೈನ್ಯ ವಸತಿಗಳು, ಸೈನ್ಯ ತರಬೇತಿ ಕೇಂದ್ರಗಳು; ಇವುಗಳಲ್ಲಿ ಪ್ರಾಚೀನ ಇತಿಹಾಸ ಕಾಲದಿಂದ ಇಂದಿನ ಸಮಕಾಲೀನ ಇತಿಹಾಸದ ಬದುಕಿನ ವರೆಗೆ ಇಂಥ ಪ್ರಬೇಧಗಳನ್ನು ಕಾಣಬಹುದು.

ಇನ್ನು ನಮಗೆ, ಇಲ್ಲಿ ಸಂಬಂಧಿತ ವಿಷಯವಾಗಿ, ರಕ್ಷಣಾವಾಸ್ತು ಬೆಳೆದು ಬಂದ ದಾರಿಯನ್ನು ಇತಿಹಾಸದ ಉದ್ದಕ್ಕೂ, ಅಭ್ಯಸಿಸಿ, ವಿಜಯನಗರ ಕಾಲದ ಮಧ್ಯಯು

ಗೀನ ದಕ್ಷಿಣ ಭಾರತದ ರಕ್ಷಣಾ ವ್ಯವಸ್ಥೆಯ ವಾಸ್ತುವನ್ನು (Defence architecture under the Vijayanagar rulers), ವಿಶೇಷವಾಗಿ ವಿಶ್ಲೇಷಿಸಿ ವಿವರಿಸೋಣ.

ಹಾಗೇ ನೋಡಿದಲ್ಲಿ, ಒಂದೇ ಶಬ್ದದಲ್ಲಿ ಹೇಳುವುದಾದರೆ ರಕ್ಷಣಾ ವಾಸ್ತು ಅಂದರೆ ಕೋಟೆ. ಈ ಕೋಟೆಗಳು ವಿವಿಧತೆಯನ್ನು ಆಯಾ ಕಾಲ, ಮಾನ, ದೇಶ, ಪ್ರಾಕೃತಿಕ ಹರವುಗಳಿಗೆ ತಕ್ಕಂತೆ ನೋಡುತ್ತೇವೆ. ಕೌಟಲ್ಯನ ಅರ್ಥ ಶಾಸ್ತ್ರ, ಮಯಮತ, ಮಾನ ಸಾರಗಳು ಕೋಟೆಗಳ ಚಿಂತನೆ ಮಾಡಿವೆ. ಸ್ಥಲ ದುರ್ಗ, ಗಿರಿದುರ್ಗ, ಜಲದುರ್ಗ ಹಾಗೂ ವನದುರ್ಗಗಳೆಂದು ವಿಶೇಷ ಪ್ರಭೇದಗಳನ್ನೂ ನೀಡಿವೆ. ಆ ಸ್ಥೂಲ ಚಿಂತನೆಗಳಿಗೆ ಅನುಗುಣವಾಗಿ ಐತಿಹಾಸಿಕ ಕಾಲದಲ್ಲಿ-ಪ್ರಾಚೀನ, ಮಧ್ಯಯುಗೀನ ಹಾಗೂ ಆಧುನಿಕ ಯುಗಗಳು-ವಿವಿಧ ವೈವಿಧ್ಯಮಯ, ವಿವಿಧಾಕಾರಗಳ, ವಿವಿಧ ವಸ್ತುಗಳ ಕೋಟೆಗಳು ಕಟ್ಟಲ್ಪಟ್ಟುದನ್ನು ನಮ್ಮ ಈ ದೇಶದ ಉದ್ದಗಲಕ್ಕೂ, ಆದರಂತೆ ಕನ್ನಡ ನಾಡಿನ ಹರವಿನಲ್ಲೂ, ಕಾಣುತ್ತೇವೆ. ಕಾಲಕಾಲಕ್ಕೆ ಯುದ್ಧ ಕಲೆ ಬದಲಾದಂತೆ ಕೋಟೆಗಳ ವಿನ್ಯಾಸದಲ್ಲಿ ಕಟ್ಟಲು ಉಪಯೋಗಿಸಿದ ಪದಾರ್ಥಗಳಲ್ಲೂ (Building Material) ಬದಲಾದಂತೆ ಕಂಡು ಬರುತ್ತದೆ.

ಇನ್ನು ವಿಜಯನಗರ ಇತಿಹಾಸ ಕಾಲವು (ಕ್ರಿ.ಶ.೧೩೩೬-೧೫೬೫) ದಕ್ಷಿಣ ಭಾರತದ ಇತಿಹಾಸದಲ್ಲಿ ವಿಶೇಷ ಉದ್ದೇಶ, ವಿಶೇಷ ಕಾರ್ಯ, ವಿಶೇಷ ರಾಜಸ್ವ, ವಿಶೇಷ ಕಲೆ, ಸಂಗೀತ, ವಿಶೇಷ ಸಾಹಿತ್ಯ ವೈಭವಗಳನ್ನು ನೀಡಿದೆ. ಇಡೀ ದಕ್ಷಿಣ ಭಾರತವನ್ನು ಏಕ ಚಕ್ರಾಧಿಪತ್ಯದಲ್ಲಿ ಕರ್ನಾಟಕ, ಆಂಧ್ರ, ತಮಿಳದೇಶ, ಕೇರಳಗಳನ್ನು ತಂದ ಮಹತ್ವ ವಿಜಯನಗರ ಅರಸರದು. ಉದಾ: ಹಜಾರ ರಾಮ ದೇವಾಲಯ ಸಂಕೀರ್ಣ, ಶ್ರೀ ವಿರೂಪಾಕ್ಷ ದೇವಾಲಯ ಸಂಕುಲ, ವಿಜಯವಿಠ್ಠಲ ದೇವಸ್ಥಾನದ ಸಮೂಹ, ಶ್ರೀ ಬಾಲ ಕೃಷ್ಣ ಮಂದಿರ, ಶ್ರೀ ಅಚ್ಯುತದೇವರಾಯ, ತಿರುನೆಂಗಳನಾಥ ಮಂದಿರ ಗುಂಪು, ಕೋದಂಡ ರಾಮನ ದೇವಾಲಯ ಪರಿಸರ, ಚಕ್ರತೀರ್ಥ ದೇವಸ್ಥಾನಗಳ ನೆಲೆ, ಹೀಗೆ ಹತ್ತು ಹಲವಾರು, ನಗರ ದೇವಾಲಯಗಳೇ (city, temples) ನಿರ್ಮಾಣಗೊಂಡಿವೆ. ಜೊತೆಗೆ ಜಲ ಅಭಿಯಾಂತ್ರಿಕ ನೆಲೆಗಳು, ಕೆರೆ ಕಾಲುವೆಗಳು, ಸೇತುಗಳು ಬೆರಗು ಗೊಳಿಸುವಂಥವು. ಅರಮನೆಗಳು, ರಾಣಿಯರ ಸ್ನಾನಗೃಹಗಳು, ಮಂತ್ರಾಲಯಗಳು, ರಾಜರ ವೈಭವ ಮಂಟಪ, ಮಹಾನವಮಿ ದಿಬ್ಬಗಳಂತಹ ಕೃತಿಗಳು, ವಜ್ರ ವೈಡೂರ್ಯಗಳ ಮಾರಾಟದ ಪೇಟೆ ರಸ್ತೆಗಳು, ಹೂದೋಟಗಳು, ಫಲೋದ್ಯಾನಗಳು, ವಿದ್ವಾಂಸರ, ಸಿರಿವಂತರ, ಪ್ರತಿಷ್ಠಿತರ, ದಂಡನಾಯಕರ, ವಸತಿ ಆವರಣಗಳು ಹಾಗೂ ಇವೆಲ್ಲವುಗಳನ್ನು ತನ್ನ ಕದಂಬಬಾಹುಗಳಲ್ಲಿ ರಕ್ಷಿಸುವ ಚಾಚಿದ ರಕ್ಷಣಾ ಗೋಡೆಗಳು (Defence walls), ಪ್ರವೇಶ ದ್ವಾರಗಳು, ರಕ್ಷಣಾ ಗೋಡೆಗಳ ವೀಕ್ಷಣಾ ಅಟ್ಟಗಳು, ಕಂದಕಗಳು, ಒಂದೇ ಎರಡೇ ಇಡೀ ವಾಸ್ತು ಶಾಸ್ತ್ರದ ಪ್ರಯೋಗಿಕ ಕೃತಿಗಳನ್ನು ಹಂಪಿ ಯಲ್ಲಿ ಹರಡಿಸಿದ್ದಾರೆ. ವಾಸ್ತುಶಾಸ್ತ್ರದ ಅಭ್ಯಾಸಿಗಳಿಗೆ ಇದೊಂದು ಅಭ್ಯಾಸಕೇಂದ್ರ (School of Architectechere) ಆಗಿ ಪರಿಣಮಿಸಿದೆ. ಹೀಗಾಗಿ ವಿಜಯನಗರವು

ವಾಸ್ತುಶಾಸ್ತ್ರದ ವಿವಿಧ ಕೃತಿಗಳ ಆಗರವಾಗಿದೆ. ಪ್ರಯೋಗಾಲಯವಾಗಿದೆ. ಪರಿಪೂರ್ಣವೂ ಆಗಿದೆ. ಅದರ ಅರಸರುಗಳು, ಶಿಲ್ಪಿಗಳು, ಸ್ಥಪತಿಗಳು, ರೂವಾರಿಗಳು, ವಾಸ್ತು ಪರಿಣಿತರು, ಅಭಿಯಂತರರು ಕುಶಲಕರ್ಮಿಗಳು, ಕಾರ್ಮಿಕರು ಹೀಗೆ ನೂರಾರು ಕೈಗಳು, ತಲೆಗಳು ವಿಜಯನಗರದ ಬೆಳವಣಿಗೆಗೆ ತಮ್ಮನ್ನು ತಾವೇ ಸಮರ್ಪಿಸಿ ಕೊಂಡಿದ್ದಾರೆ. ಇಲ್ಲಿ ಅಂತು ಅದ್ಭುತ!

"ಐತಿಹಾಸಿಕ ನಗರಗಳು ಸಾಯುವದಿಲ್ಲ.
ಧರ್ಮಫಲದಿಂದೇರಿ, ಕರ್ಮಫಲದಿಂದಿಳಿದು,
ಮರ್ಮದೊಳು ನೆಡುವಂತೆ ಸಾರುವವು
ಮತಿತಾರ್ಥ ಸತ್ಯವೊಂದು" (ಡಾ.ದ.ರಾ.ಬೇಂದ್ರೆ).

ಹಂಪಿಯನ್ನು ವಿಜಯನಗರ ಸಾಮ್ರಾಜ್ಯದ ರಾಜಧಾನಿಯನ್ನಾಗಿ ಸ್ಥಳಾಯ್ಕೆ ಮಾಡಿದುದರಲ್ಲಿ ಆಯ್ಕೆದಾರರ ಜಾಣತನವಿದೆ. ಪಶ್ಚಿಮದಿಂದ ಹರಿದು ಬರುತ್ತಿರುವ ತುಂಗಭದ್ರೆ, ಚಕ್ರತೀರ್ಥದ ಹತ್ತಿರ ಉತ್ತರವಾಹಿನಿಯಾಗಿ, ತದನಂತರ ಪೂರ್ವವಾಹಿನಿಯಾಗಿ, ವಿಜಯವಿಠ್ಠಲ ದೇವಸ್ಥಾನಗಳ ಸಂಕುಲವನ್ನು ಬಳಸಿ, ಉತ್ತರಕ್ಕೆ ಆನೆಗೊಂದಿ-ಮೂಲ ರಾಜಧಾನಿ-ಯನ್ನು ಆಚೆಯನ್ನಾಗಿಸಿ ಮತ್ತೆ ಪೂರ್ವಕ್ಕೆ ಹರಿಯುತ್ತ 'ವೃಂದಾವನ ನಡುಗಡೆಯನ್ನು ನಿರ್ಮಿಸಿ, ಸುತ್ತುವರಿದು ಆನಂತರ ಮತ್ತೆ ಪೂರ್ವಾಭಿಮುಖಿಯಾಗಿ ಮುಂದುವರೆಯುತ್ತಾಳೆ. ಈ ರೀತಿ ಬಳಸಿ, ಬಳಸಿ ಸುತ್ತಿ ಸುತ್ತಿ ಹರಿಯುವ ಕಲ್ಲು ಬಂಡೆಗಳಲ್ಲಿ ರಭಸದಿಂದ ಓಡುವ ತುಂಗ-ಭದ್ರೆಯ ಈ ಐತಿಹಾಸಿಕ ನೆಲೆಗೆ ಸ್ವಾಭಾವಿಕವಾಗಿ ನೀರಿನ ಹರವಿನಿಂದ ರಕ್ಷಣೆ ನೀಡಿದ್ದಾಳೆ. ಆದಷ್ಟು ಸುಲಭವಾಗಿ ನೀರಿನ ಹರವಿನಿಂದ ರಕ್ಷಣೆ ನೀಡಿದ್ದಾಳೆ. ವೈರಿಗಳು ದಂಡೆತ್ತಿ ಬಂದಲ್ಲ, ಅಷ್ಟು ಸುಲಭವಾಗಿ ದಾಟಲು ಸಾಧ್ಯವಿಲ್ಲ. ಮೇಲಾಗಿ ಎತ್ತರ ಎತ್ತರ ಬಂಡೆಗಲ್ಲುಗಳನ್ನು ಸ್ವಾಭವಿಕವಾಗಿ ಸೇರಿಸಿಕೊಂಡ ಗುಡ್ಡ ಬೆಟ್ಟಗಳ ಉತ್ತುಂಗತೆ ವೈರಿಗಳ ಎದೆಯನ್ನು ಡವ ಡವಗೊಳಿಸುತ್ತದೆ. ಎಷ್ಟಾದರೂ ದಂಡ ಕಾರಣ್ಯದ, ಹನುಮನುದಿಸಿದ ಕಿಷ್ಕಿಂಧೆಯಲ್ಲದೇ ಇದು ಬರುವ ಮುಸ್ಲಿಮರ ಹೆದ್ದೆರೆಯ ದಾಳಿಗಳನ್ನು ತಡೆಗಟ್ಟಲು "ಏಳು ಸಾಯಣ ಕಟ್ಟು ಗ್ರಂಥವ, ಹಾಳು ಗ್ರಂಥಗಳ ನೋಡುದೇತಕೆ ಏಳು ಈಕ್ಷಣ ಮಾತ್ರಕೆ" ಎಂಬ ಕ್ಷಾತ್ರತೇಜದ ವಿದ್ಯಾರಣ್ಯ ಗುರುಮಂತ್ರವು ಸಾಯಣಾಚಾರ್ಯರನ್ನೂ, ಹಕ್ಕು ಬುಕ್ಕ ಯುವ ದ್ವಯ ಪಾತ್ರರನ್ನೂ ಈ ನಾಡಿನ ಜನಸ್ತೋಮವನ್ನೂ ಹಿಂದು ಸಾಮ್ರಾಜ್ಯ ಕಟ್ಟಲು ಅಣಿಗೊಳಿಸಿದುದು ಐತಿಹಾಸಿಕ ಸತ್ಯ.

ಕ್ರಿ.ಶ. ೧೩೩೬ ರಲ್ಲಿ ಸಂಗಮ ಹಕ್ಕ ಬುಕ್ಕರಿಂದ ರಾಜ್ಯ ಸ್ಥಾಪನೆ ಹಿಡಿದು, (Rise of empire) ಸಾಳ್ವ, ತುಳುವ ಹಾಗೂ ಅರವೀಡು ರಾಜವಂಶಗಳಲ್ಲಿ ಹಾಯ್ದು, ಅಂತ್ಯದಲ್ಲಿ ಕೊನೆಯ ಅರಸು ಶ್ರೀರಂಗ (೧೬೪೨-೧೬೪೬) ರವರೆಗೆ ಆಳಿದವರೂ

ಅಳಿದವರೂ ಕೂಡಿ ೪೨ ಅರಸು ವಂಶಜರು ಆಗಿ ಹೋದರು. ಅವರಲ್ಲಿ, ಆಳಿದಂಥ ಪ್ರತಿಯೊಬ್ಬ ಶಕ್ತ ಸಮರ್ಥ ವಿಜಯನಗರದ ಅರಸನು ತನ್ನ ರಾಜಧಾನಿಯ ರಕ್ಷಣೆಗಾಗಿ ಬೇರೆ ಬೇರೆ ರಕ್ಷಣಾಗೋಡೆಗಳನ್ನು ನಿರ್ಮಿಸುತ್ತಲೇ ಬಂದಿದ್ದಾನೆ. ಆ ಗೋಡೆಗಳನ್ನು ಸ್ತರ ಸ್ತರಗಳಲ್ಲಿ ಏರಿಸುವ ಸಮಯದಲ್ಲಿ, ಯಾವುದೇ ಅರಿವಿಲ್ಲದ ದುಷ್ಟ ಮನಸ್ಸು ದೂರದಿಂದಲೇ ಆ ಏರುತ್ತಿರುವ ಸ್ತರಗಳನ್ನು ಕೆಡಿಸುವುದು ಹೇಗೆ?' ಎಂದು ವಿಚಾರ ಮಾಡುತ್ತಿರುತ್ತದೆಯಂತೆ. ಇದನ್ನೇ ಕೌಟಿಲ್ಯನು ತನ್ನ 'ರಾಜನೀತಿ'ಯಲ್ಲಿ ಎಚ್ಚರಿಸಿದ್ದಾನೆ. ಮಾನವನ ದ್ವೇಷ ಅಸೂಯೆ ಮತ್ಸರಗಳು ಆತನ ಗುಣಗಳ ಅಂಗಗಳಾಗಿ ದ್ದವು. ಅಸಹನೆಯಿಂದ ಧ್ವಂಸ ಕೃತ್ಯಕ್ಕೆ ಎಳೆಯುತ್ತವೆ. ಇವುಗಳನ್ನು ಯಾವುದೇ ಕಾಲದ ಮಾನವನಿಗೆ ಜೋಡಿಸಬಹುದು. ಅಂದು, ಇಂದು ಮುಂದೆಂದು ವಿಜಯ ನಗರದ ಐತಿಹಾಸಿಕ ಬದುಕಿನಲ್ಲಿ ಘಟಿಸಿಯೇ ಹೋಯಿತು. ಕ್ರಿ.ಶ.೧೫೬೫ ರಲ್ಲಿ ರಕ್ಕಸ ತಂಗಡಿಗಿ ಘೋರ ಕಾಳಗ, ರಾಮರಾಯನ ವಧೆ, ವಿಜಯನಗರ ಪಟ್ಟಣಕ್ಕೆ ಕೊಳ್ಳಿ ಬೆಂಕಿ. ಅಳಿದುಳಿದ ಹಂಪಿ, ಮರೆತರೂ ಮರೆಯಲಾರದ ಹಂಪಿ. ನಿನ್ನೆ ರಾತ್ರಿ ಲಕ್ಷಾಂತರ ದೀಪಗಳಿಂದ ಝಗಝಗಿಸುವ ಹಂಪಿ, ಇಂದಿನ ಈ ರಾತ್ರಿಯ ಪೂರ್ವ ಸಂಜೆಯಲ್ಲಿ ಬೆಂಕಿ, ಕೊಳ್ಳಿ, ಹೊಗೆ, ಲೂಟಿ, ಚೀತ್ಕಾರಗಳ ಗೊಂದಲದಲ್ಲಿ ಧಗಧಗಿಸಿ ಉರಿಯುತ್ತಿತ್ತು, ಪ್ರತ್ಯಕ್ಷ ದರ್ಶಿ ಇತಿಹಾಸಕಾರ ಅಬ್ದುಲ್ ರಜಾಕನ ಹಂಪಿ ಪತನದ ಭಯಾನಕ ಚಿತ್ರ ದಾಖಲೆ.

ಇನ್ನು ವಿಜಯನಗರ ಹಂಪಿಯ ವೈಭವೋಪೇತ ಸರ್ವಾಂಗೀಣ ರಚನೆಯ ಬಗ್ಗೆ ನೋಡೋಣ. ವಿಜಯನಗರ ಶಬ್ದವೇ ಅರ್ಥೈಸುವಂತೆ (City of Victory) ವಿಜಯ ಸಂಕೇತದ ನಗರ. ಮಧ್ಯಯುಗೀನ ಸಮಕಾಲೀನ ನಗರಗಳಲ್ಲಿ ಏಶಿಯಾ ಖಂಡದಲ್ಲಿಯೇ ಬಹು ವಿಸ್ತೃತ ಹಾಗೂ ಬಹು ಶೃತ ನಗರವಾಗಿತ್ತು. ತುಂಗಭದ್ರೆಯ ಶೀತಲ ಅಲೆಗಳು, ಈ ನಗರದ ಬದಿಗುಂಟ ನಿಸರ್ಗ ನೀಡಿದ ಸಾವಿರಾರು ಬಂಡೆಗಳನ್ನು ಬಳಸಿ ಅಲ್ಲಿ ಬೆಳೆದ ಇತಿಹಾಸವನ್ನು ಕಂಡಿವೆ.

ವಿಜಯನಗರದ ಅರಸರು, ಕೇವಲ ದೇವಾಗಾರಗಳ ವಾಸ್ತು ವಿಶೇಷವನ್ನು ವಿಶೇಷವಾಗಿ ನೀಡಲಿಲ್ಲ, ಜೊತೆಗೆ ರಕ್ಷಣಾ ವಾಸ್ತುವಿನ ಬಗ್ಗೆಯೂ ಸಮರ್ಪಣಾ ಭಾವದಿಂದ ಕೊಡುಗೆ ನೀಡಿದ್ದಾರೆ. ಬಾಹ್ಯ ಗೋಡೆಗಳು (Outer fortitication walls) ವೀಕ್ಷಣಾಲಯಗಳು, ಅರಸು ಆವರಣ (Citadel), ರಕ್ಷಣಾ ಕೋಣೆಗಳು (Gaurd rooms), ವೀಕ್ಷಣಾಲಯಗಳು (Watch towers), ಗಜಾಲಯಗಳು ತರುಗಾಲಯಗಳು (Elephants' stables- horse stables), ದುರ್ಗದ ಪ್ರವೇಶ ದ್ವಾರಗಳು (Entrance gates), ಕಂದಕಗಳು (Moats), ಎತ್ತರವಾದ ಬುರುಜುಗಳು (Bastions), ಮದ್ದು ಗುಂಡುಗಳು ಶೇಖರಣಾ ಕೇಂದ್ರಗಳು (Rooms of arms and ammunition), ಮಂತ್ರಾಲಯ (Hall for secret meetings), ದರಬಾರ್‌ಗಳು (Royal-Audiance Hall), ಸೈನ್ಯ ತರಬೇತಿ ಬೆಯಲುಗಳು (Army Training Groudns), ದಂಡನಾಯಕರ

(ದಣ್ಣಾಯಕರು) ವಸತಿ ಗೃಹಗಳು (Dannayaka's enclosures) ಹೀಗೆ ನಗರದ ಹಾಗೂ ನಾಡಿನ ರಕ್ಷಣೆಗಾಗಿ, ರಕ್ಷಣಾ ವಿವಿಧ ವಾಸ್ತು ಅಂಗಗಳನ್ನೂ ಸದೃಢವಾಗಿ, ಪೂರ್ವಾಲೋಚನೆ ಗೈದು, ನಿರ್ಮಿಸಿದ್ದಾರೆ. ಇವುಗಳೆಲ್ಲವುಗಳ ವಿನ್ಯಾಸ (Plan), ನಿಲುವು, ಹಾಗೂ ರಚನೆಗಳು (Coustruction) ರಕ್ಷಣಾ ವಾಸ್ತುವಿಗೆ ನಿಯಮ ಬದ್ಧವಾಗಿ ಅಳವಡಿಸಿ ಕಟ್ಟಲಾಗಿದೆ.

ಹಾಗೆ ನೋಡಿದಲ್ಲಿ ಪ್ರಾಮುಖ್ಯವಾಗಿ ಅಭೇದ್ಯವಾದ ರಕ್ಷಣಾ ಕಾರ್ಯದ ಪ್ರಕ್ರಿಯೆ ಹಂಪಿಯ ಸುತ್ತಲೂ ಮಹತ್ತರವಾಗಿ ಕೇಂದ್ರೀಕೃತವಾಗಿದೆ. ಏಕೆಂದರೆ ಅದು ಆಡಳಿತಕೇಂದ್ರ ರಾಜ್ಯದ ಹೃದಯ ಭಾಗ. ಇದರ ಸುತ್ತಭದ್ರವಾದ ರಕ್ಷಣಾ ಗೋಡೆಯನ್ನು ರಚಿಸಲಾಗಿದೆ. ತದನಂತರ ಇದನ್ನು ಸುತ್ತು ವರಿದಂತೆ ಒಂದರಹೊರಗೆ ಮತ್ತೊಂದರಂತೆ ಏಳು ಸುತ್ತಿನ ರಕ್ಷಣಾ ಗೋಡೆಗಳು (7 fortification walls) ರಚಿಸಲ್ಪಟ್ಟಿದೆ. ಹಂಪಿಯ ಹತ್ತಿರ ಭಾಗದಲ್ಲಿ ತುಂಗಭದ್ರಾ ನದಿಯು ಸ್ವಾಭಾವಿಕವಾದ ನೀರಿನ ರಕ್ಷಣಾ ಗೋಡೆಯನ್ನು ನಿರ್ಮಿಸಿದೆ. ಅದೊಂದು ದೈವದತ್ತ ನಿಸರ್ಗದತ್ತ ದೇಣಿಗೆ. ಈ ನದಿಯ ಆಚೆಗೆ 'ಆನೆಗೊಂದಿ' ಮೂಲತಃ ವಿಜಯನಗರ ಆಡಳಿತ ಸ್ಥಾನ ಹಾಗೂ ಅರಸುವತ್ತಿಗೆಯ ಕೇಂದ್ರ. ಇಲ್ಲಿ ಕೂಡ ವ್ಯವಸ್ಥಿತವಾಗಿ ಹಾಗೂ ಪ್ರಜ್ಞಾಪೂರ್ವಕವಾಗಿ ಬಹಳ ವಿಸ್ತಾರ ಪ್ರದೇಶಗಳನ್ನೊಳಗೊಂಡು ಕಟ್ಟಲಾಗಿದೆ. ಕೊನೆಯ ರಕ್ಷಣಾ ಗೋಡೆಯ ವ್ಯಾಪ್ತಿಯ ಕಂಪ್ಲಿ, ತೋರಣಗಲ್, ಸೊಂಡೂರು, ಹೊಸಪೇಟೆ ಮತ್ತು ಮಲ್ಲಾಪುರಂಗಳ ವರೆಗೆ ವ್ಯಾಪಿಸಿ ಪೂರ್ವ ದಕ್ಷಿಣಹಾಗೂ ಪಶ್ಚಿಮ ದಿಶೆಗಳಲ್ಲಿ ಹಂಪಿಯನ್ನು ರಕ್ಷಿಸುತ್ತಿತ್ತು ಹಾಗೂ ಈ ತಾಣಗಳು ವಿಜಯನಗರ ರಾಜಧಾನಿಯನ್ನು ಪ್ರವೇಶಿಸುವ ಮಹಾದ್ವಾರಗಳಾಗಿದ್ದವೆಂದು ಹೇಳಬಹುದು.

ಈ ಏಳು ರಕ್ಷಣಾ ಗೋಡೆಗಳು (Defence Walls) ೧೬೪ ಚ.ಮೈಲು ಕ್ಷೇತ್ರವನ್ನು ತನ್ನಲ್ಲಿ ಅಳವಡಿಸಿ ಸುಮಾರು ೫೦೦ ಮೈಲಿ ಉದ್ದಳತೆಯಲ್ಲಿ ಎಲ್ಲವುಗಳನ್ನೂ ಒಟ್ಟು ಗೂಡಿ-ಹಮ್ಮಿಕೊಂಡಿವೆ. ಚೀನದ ಗೋಡೆಯನ್ನು ಹೊರತು ಪಡಿಸಿದರೆ ಇಡೀ ಏಶಿಯಾ ಖಂಡದಲ್ಲಿ ಇಷ್ಟು ವಿಸ್ತಾರವಾದ, ಉದ್ದನೆಯ ರಕ್ಷಣಾ ಗೋಡೆಗಳು ಮತ್ತೆಲ್ಲೂ ಸಿಗಲಾರವು. ಇದು ವಿಜಯನಗರದ ವಿಸ್ತೃತೆಯ ಹೆಮ್ಮೆಯ ವಿಷಯವಾಗಿದೆ. ಏಳನೆಯ ಹಾಗೂ ಆರನೆಯ (From out side in side), ಗೋಡೆಗಳ ಆವರಣಗಳಲ್ಲಿ ಹೂದೋಟಗಳು, ಹಣ್ಣು ಹಂಪಲಗಳ ತೋಟಗಳು, ಮಾವು, ಬಾಳೆ, ತೆಂಗು, ಕಬ್ಬು ವನಗಳು, ಭತ್ತದ ಗದ್ದೆಗಳು, ಇತ್ಯಾದಿ ಹುಟ್ಟುವಳಿಯ ತೋಟಗಳಲ್ಲಿ ಹಸಿರು ಕಣ್ಣಿಗೆ ಹಬ್ಬವನ್ನುಂಟು ಮಾಡಿದ್ದವು, (ಪಾಯೇಸ್, ನ್ಯೂನಿಝ್ ಪೋರ್ಚುಗೀಸರ ಇತಿಹಾಸಕಾರರ ದಾಖಲೆ). ಐದು, ನಾಲ್ಕು ಹಾಗೂ ಮೂರರ ಸುತ್ತುಗಳಲ್ಲಿ, ಗ್ರಾಮ್ಯ ಬದುಕಿನ ಸುತ್ತ ಉಪಯೋಗವಾಗುವ ಕುಶಲ ಕರ್ಮಿಗಳು, ವ್ಯಾಪಾರಿಗಳು, ಉದ್ಯೋಗಿಗಳು, ಕ್ರಿಡಾ ಪಟುಗಳು, ಸಂಗೀತಗಾರರು, ನೃತ್ಯಗಾರರು, ಜ್ಯೋತಿಷ್ಯ ಗಾರರು, ವಾಸವಾಗಿದ್ದರು, ಎರಡನೆಯ ಸುತ್ತಿನಲ್ಲಿ ಸೈನಿಕರು, ವೈದ್ಯರು, ವೈದಿಕರು,

ಐಯ್ಯನವರು, ಪುರೋಹಿತರು ಹಾಗೂ ಇನ್ನುಳಿದ ಸಾಮಾಜಿಕ ಸ್ತರಗಳಲ್ಲಿ ಪ್ರತಿಷ್ಠಿತರು, ಸಮಾಜದ ಒಂದಿಲ್ಲೊಂದು ಕ್ಷೇತ್ರದ ಒಳತಿಗಾಗಿ ಕಾರ್ಯ ತತ್ಪರಾಗಿದ್ದರು. ಈ ಸುತ್ತಿನಲ್ಲಿ ಧಾರ್ಮಿಕ ಹಾಗೂ ಸೆಕ್ಯುಲರ್ ಕಟ್ಟಡಗಳನ್ನು ಅಳವಡಿಸಿದ್ದಾರೆ. ಇಲ್ಲಿ ವಿಶೇಷವಾದ ಸಾಮಾಜಿಕ ಧಾರ್ಮಿಕ ಆಚರಣೆಗಳು ನಡೆಯುತ್ತಿದ್ದ ಹೆಗ್ಗುರುತುಗಳು ಕಂಡು ಬರುತ್ತವೆ. ಶ್ರೀ ವಿರೂಪಾಕ್ಷ ದೇವಸ್ಥಾನ ಆವರಣ, ಹೇಮಕೂಟ, ಗಣೇಶ ದೇವಸ್ಥಾನಗಳು, ಕಡಲೆಕಾಳು ಗಣಪತಿ, ಸಾಸವೆಕಾಳು ಗಣಪತಿ, ಕೃಷ್ಣ ದೇವಾಲಯ, ಸರಸ್ವತಿ ದೇವಸ್ಥಾನ, ಉಗ್ರ (ಈಗ ಲಕ್ಷ್ಮೀ) ನರಸಿಂಹ, ಚಂದ್ರಶೇಖರ ದೇವಸ್ಥಾನ, ಕೋದಂಡರಾಮ ದೇವಸ್ಥಾನ, ರಾಮ, ವಿಠ್ಠಲ ದೇವಸ್ಥಾನ, ಮುಖ್ಯ ಪೇಟೆ (Main bazaar), ಸೂಳೆ ಬಝಾರ್, ಕಿಂಗ್ಸ ಬ್ಯಾಲನ್ಸ್ ಹಾಗೂ ಶ್ರೀ ಅಚ್ಯುತರಾಯ ದೇವಸ್ಥಾನ ಪುರಂದರ ದಾಸರ ಮಂಟಪ, ಇತ್ಯಾದಿಗಳು ಈ ಸುತ್ತಿನಲ್ಲಿ ನೆಲೆಸಿವೆ. ಹೀಗಾಗಿ ಈ ಎರಡನೆಯ ಸುತ್ತು ಸಾಮಾಜಿಕ ಜನಜೀವನದ ಜೇನುಗೂಡಾಗಿತ್ತು, ಎಂದು ಕರೆಯ ಬಹುದು.

ಇನ್ನು, ಮೊದಲ ಸುತ್ತಿನ ಕೊಟೆಯ ಆವರಣದ ಬಗ್ಗೆ ಸಮೀಕ್ಷಿಸುವುದಾದರೆ ಇದರಲ್ಲಿ ಅರಮನೆಯ ವಿಸ್ತಾರಗಳು (Citedal) ಇದ್ದು ಕೊಂಡು, ಇದು ವಿಜಯ ನಗರದ ರಾಜಧಾನಿಯ ಹೃದಯಭಾಗವಾಗಿದೆ. ಈ ಪ್ರದೇಶವು ಕಮಲಾಪುರದಿಂದ ಹಂಪಿಗೆ ಕರೆದೊಯ್ಯುವ ಮಾರ್ಗದಿಂದ ಇಭ್ಭಾಗವಾಗಿ, ಅಲ್ಲಲ್ಲಿ ನಿರ್ಮಿಸಿದ ಮಹಾ ದ್ವಾರಗಳ ಮೂಲಕ ಜೋಡನೆಗೊಂಡಿದೆ. ಈ ಮಹಾ ಪ್ರವೇಶಗಳ ಎಡ ಬದಿಗಳಲ್ಲಿ 'Towers' ಎತ್ತರ ಅಟ್ಟಣಿಗಳಿವೆ. ಮುಂದೆ ಈ ಪ್ರವೇಶ ದ್ವಾರಗಳಿಂದ ಸಾಗಿದಂತೆ, ಹಳೆಯ ಅರಮನೆಗಳ ಅವಶೇಷಗಳು, ಸಿವಿಲ್ ಹಾಗೂ ಆಡಳಿತ ಕಟ್ಟಡಗಳು, ಕ್ವೀನ್ಸ್ ಬಾಥ್, ನೀರಿನ ಶಾಲೆಗಳು ಸ್ನಾನಗೃಹ, ಪಬ್ಲಿಕ್ ಬಾಥ್, ಹೌಸ್ ಆಫ್ ವಿಕ್ಟರಿ, ಮಹಾನವಮಿ ದಿಬ್ಬ(Throne Platform), ರಾಜ ಪ್ರಜಾಭವನ (King's audiance hall), ನಾಣ್ಯ ಮುದ್ರಣ ಶಾಲೆ (Mint), ಧರ್ಮಶಾಲೆ (ಮುಸಾಫಿರ್‌ಖಾನಾ) ಇತ್ಯಾದಿಗಳು ಕಂಡು ಬರುತ್ತವೆ.

ಈ ಅರಮನೆಯ ಭಾಗವು (Citadel) ಅತ್ಯಂತ ಭದ್ರವಾಗಿದ್ದು, ಕೋಟೆ ನಿರ್ಮಾಪಕ ಅಭಿಯಂತರ ಹೆಚ್ಚಾಗಿಗಮನ ಹರಿಸಿದ್ದಾನೆ. ಇಲ್ಲಿಪ್ರತಿಯೊಂದು ಗೋಡೆ ಸ್ತರಗಳಲ್ಲಿ ಅಳವಡಿಸಲಾದ ಕಲ್ಲುಗಳಿಂದ ಹಿಡಿದು ಅವುಗಳ ಜೋಡನಾ ದಿಕ್ಕುಗಳ (Specittying Orintation) ಬಗ್ಗೆಯೂ, ಆಯಕಟ್ಟಿನ ಸ್ಥಳದಲ್ಲಿ ಪ್ರವೇಶದ್ವಾರಗಳ ನಿರ್ಮಾಣ ದವರೆಗೂ ಕಾಳಜಿ ತೆಗೆದುಕೊಳ್ಳಲಾಗಿದೆ. ಇದು ಪೂರ್ವ-ಪಶ್ಚಿಮ ದಿಶೆಗಳಲ್ಲಿ ಬಹಳಷ್ಟು ವಿನ್ಯಾಸಗೊಂಡು ತುಂಗಭದ್ರೆಗೆ ಸಮಾಂತರವಾಗಿ ರಚನಗೊಂಡಿದೆ. ಇಲ್ಲಿ, ಎತ್ತರ ಎತ್ತರವಾದ ಗಿರಿಗಳು (Hillocks) ಹಾಗೂ ಎತ್ತರ ಎತ್ತರವಾದ ಬಂಡೆಗಲ್ಲುಗಳನ್ನು ಅವುಗಳ ಮಧ್ಯಂತರಗಳನ್ನು ಕೋಟೆಯ ಗೋಡೆಗಳಿಂದ ಜೋಡಿಸಲಾಗಿದೆ, (Screen walls), ಹೀಗೆ ಮಾಡುವುದರಿಂದ ಅವುಗಳ ಆವರಣದಲ್ಲಿ ದೊರೆತ ಪ್ರವೇಶಗಳು

ವಸತಿ ಸೌಕರ್ಯಗಳಿಗಾಗಿ ಉಪಯೋಗಿಸಲ್ಪಟ್ಟಿವೆ. ಈ ರೀತಿಯ ಪರದೆ ಗೋಡೆಗಳು ನಿರ್ಮಾಣ ವೆಚ್ಚವನ್ನು ಕಡೆಮೆ ಮಾಡಿದೆ. ಅಲ್ಲದೆ ಈ ತರಹದ ಅಲ್ಲಲ್ಲಿ ನೆಗೆತದ ಹಾಗೂ ಸೂರ್ಯ ಪ್ರಖರದಲ್ಲಿ ಪ್ರತಿಯೊಟ್ಟಿದ ಬಂಡೆಗಲ್ಲುಗಳ ಉಪಯೋಗವನ್ನು (Tossed and tumbled jungle of sunblasted stones and boulders) ಎಷ್ಟೊಂದು ಸಮರ್ಪಕವಾಗಿ ಮಾಡಿದ್ದಾರೆ ಹಾಗೂ ಆ ರೀತಿಗಳಿಸಿದ ಆವರಣವನ್ನು ಇರುವಿಗಾಗಿ ಹೇಗೆ ಉಪಯೋಗಿಸಿದ್ದಾರೆ ಎಂಬ ಗಹನತೆ ಯಾವನೇ ಒಬ್ಬ ಸಾಮಾನ್ಯ ಪ್ರಕ್ಷೇಕನಿಗೆ ತಿಳಿಯಲು ಸಾಕು.

ಈ ತರಹದ ಅನಿಯಮಿತ (irregular) ರಕ್ಷಣಾ ಗೋಡೆಗಳು ನಿರ್ಮಾಣವಾದುದು ಹಾಗೂ ಪ್ರಕೃತಿ ದತ್ತ ಬಂಡೆಗಲ್ಲುಗಳು ದಿಮ್ಮೆಗಳು ಬೇರೆ ಬೇರೆ ದಿಶಾಂತಗಳಲ್ಲಿ ಉದ್ಭವವಾದುದು, ಇವುಗಳೆರಡರ ವಿಶ್ಲೇಷಣೆಯನ್ನು ಮಾಡಿದರೆ, ಪ್ರಕೃತಿ ಎಲ್ಲಿ ಮುಗಿಯುತ್ತದೆಯೋ ಹಾಗೂ ಮಾನವ ಕೃತಿ ಎಲ್ಲಿ ಪ್ರಾರಭವಾಗುತ್ತದೆಯೋ ತಿಳಿಯುವುದು ಕಷ್ಟ (It is difficult to tell where nature leaves off and the work of man begins) ಆದರೂ ಇಷ್ಟನ್ನು ಮಾತ್ರ ಪರಾಮರ್ಶಿಸಬಹುದು, ಎಂದೂ "ದೊಡ್ಡವರು" ದೊಡ್ಡದನ್ನೇ ಮಾಡುವರು ಎಂಬ ಮಾತು ಸುಳ್ಳಲ್ಲ.

ದೂರ ದೂರದವರೆಗೆ, ಮಿತಿಗೊಳ್ಳದ ಎಲ್ಲೆಲ್ಲೊ ಸುತ್ತುವ ಎಲ್ಲೆಲ್ಲೋ ಚಲಿಸುವ ಎಲ್ಲೆಲ್ಲೋ ಗುಡ್ಡ ಕಣಿವೆಗಳನ್ನು ಜೋಡಿಸುವ ರಕ್ಷಣಾ ಗೋಡೆಗಳು ಇವೆಲ್ಲ ಮಾನವ ಕೃತಿಗಳೇ ಎಂದು ಆಶ್ಚರ್ಯಗೊಳಿಸುತ್ತವೆ. ಇಲ್ಲಿ ಹುಟ್ಟಿ ಆಲ್ಲಿ ಕ್ಷಿತಿಜದಲ್ಲಿ ಕೂಡಿಕೊಳ್ಳುವ ಗೋಡೆಗಳ ಉದ್ದಳತೆ ಮಾನವ ನಿರ್ಮಿತವೇ ಎಂಬ ಉದ್ಗಾರ ತರಿಸುತ್ತವೆ. ಮಹಾದ್ವಾರಗಳು ಕೂಡ ಭೀಮಾ ಬಾಗಿಲು, ಪಾನಸುಪಾರಿ ಬೀದಿ, ತಳವಾ ಘಟ್ಟಾ, ಕಮಲಾಪುರ, ಪೆನುಗೊಂಡೆಯ ಹೀಗೆ ಇನ್ನೂ ಹತ್ತು ಹಲವಾರು ದಿವ್ಯ ಹಾಗೂ ಭವ್ಯ ಪ್ರವೇಶ ದ್ವಾರಗಳಿವೆ.

ಈ ತರಹದ ರಕ್ಷಣಾ ವ್ಯೂಹದ ಗೋಡೆಗಳನ್ನು ರಚಿಸಲು ಅವರು ಪಟ್ಟ ಶ್ರಮವೆಷ್ಟು? ನಿಷ್ಠೆ ಎಷ್ಟು? ಪ್ರತಿ ನಾಯಕರು ಪಾಳ್ಯೆಗಾರರು, ಇನ್ನಿತರ ಮುಖ್ಯಸ್ಥರು ರಾಜಸ್ವದ ನಿರ್ದೇಶನದಂತೆ ರಾಜಧಾನಿಯ ಬೇರೆ ಬೇರೆ ಭಾಗಗಳಲ್ಲಿ, ತಾಣಗಳಲ್ಲಿ, ಭಾಗೀಯವಾಗಿ ಗೋಡೆ ನಿರ್ಮಿಸಿ, ಅಂತ್ಯದಲ್ಲಿ ಸಮಗ್ರತೆಗೆ ತಂದು ತಲುಪಿಸಿದ್ದಾರೆ. ರಾಜ್ಯದ ಸಂಪನ್ಮೂಲಗಳು, ಜನ, ಮನ, ಸಾಧನ ಸಲಕರಣೆಗಳು ಇಲ್ಲಿ ಈ ಕೋಟೆ ವಲಯಗಳನ್ನು ಕಟ್ಟಲು ಉಪಯೋಗಿಸಲಾಗಿವೆ.

ವಿಜಯನಗರ ಆಳ್ವಿಕೆಯ ಸಮಕಾಲೀನ, ಅಲ್ಲಿ ಭೇಟಿ ನೀಡಿದ ಕೆಲವು ಪಾಶ್ಚಿಮಾತ್ಯ ಇತಿಹಾಸಕಾರರು, ಫೆರೆಸ್ತಾ, ನುನಿಝ್, ಬಾರ್ಬೋಸಾ, ನಿಕೋಲೋ ಕೊಂಟಿ, ಅಬ್ದುಲ್ ರಝಾಕ್ ಇತ್ಯಾದಿಗಳ ಪ್ರತೇಕ್ಷ ದರ್ಶನವನ್ನು ನೋಡೋಣ. <u>ನಿಕೋಲೋಕೊಂಟಿ</u> (ಇಟ್ಯಾಲಿಯನ್) : 1420 AD : "The great city of Bijenegaria situated near very steep mountains. The Circumtrance of

the city is sixty miles, its walls are carried up to the mountains and enclose the valleys at their foot. In the city there are ninety thousand men to bear arms, fit,"

ಅಬ್ದುಲ್ ರಜಾಕ್ ಪರ್ಶಿಯನ್ : 1443 AD : " One sees more than a thousand elephants in their size resembling mountaions and in their form resembling devils. The troops mount in number to eleven lakhs. One might seek in vain through out the whole of Hindustan to find a more absolute Rai" The eye has never seen a place like it and never existed any thing equal to it in the world." ಈ ರೀತಿ ಇಲ್ಲಿ ಕೆಲವು ಐತಿಹಾಸಿಕ ದಾಖಲೆಗಳು ಮಾತ್ರ.

ಈ ರೀತಿ, ಅಂತಿಮವಾಗಿ ಹೇಳುವುದೇನೆಂದರೆ, ವಿಜಯನಗರದ ಶಾಲೆಗಳಲ್ಲಿ ಮಾನವನ ಧೈರ್ಯ, ಸಾಹಸ, ದೇಶಪ್ರೇಮ, ಧರ್ಮಾಭಿಮಾನ, ಶಾಂತಿ, ಸಂಪದ, ಪ್ರೀತಿ, ಸಹನೆ, ಕಲೆ, ಜೊತೆಗೆ ದ್ವೇಷ ಅಸೂಯೆ ಮತ್ಸರ, ಇನ್ನೂ ಜೊತೆಗೂಡಿದ ಸಾಹಿತ್ಯ, ಸಂಗೀತ, ವಾಸ್ತು, (Prodigalities abnormalities of forms and formless) ಭಾವಪೂರಿತ ಹಾಗೂ ಭಾವದಾಚೆಯ ಇತ್ಯಾದಿ ವಿಷಯಗಳನ್ನು ಇಲ್ಲಿ, ಈ ರಕ್ಷಣಾ ಗೋಡೆಗಳಲ್ಲಿ, ದೇವಾಲಯಗಳಲ್ಲಿ, ಅರಮನೆಗಳಲ್ಲಿ ಕಾಣಬಹುದು. ಇವೆಲ್ಲವೂ ಈ ನಾಡಿನ ಇತಿಹಾಸದ ಅಂಗಗಳು, ಮರೆತರೂ ಮರೆಯಲಾರದ ಹಂಪಿ-ವಿಜಯನಗರ, ಮಧ್ಯಯುಗೀನ ಮಹಾನ್ ಸಾಮ್ರಾಜ್ಯದ ರಾಜಧಾನಿ.

ಆಧಾರ ಗ್ರಂಥಗಳು

1. Robert Sewell : Aforgotten Empire (Vijayanagar) Asian Educational Service. Madras, 1992 (7 th Edn).
2. Jawaharal Nehru : The Discovery of India Maiden Books Ltd. London 1956, (4th Edn)
3. Joshi S.K. : Defence Architecture in Early Karnataka, New Delhi, 1985.

4. Basavaraj K.R. : The Vijayanagar Urbanity
Hospet, 1978.

5. ಡಾ. ಬಸವರಾಜ ಮಲಶೆಟ್ಟಿ : ಹಂಪೆ - ಒಂದು ಪರಿಚಯ.
ಮಹಾಕವಿ ಹರಿಹರ ಸ್ಮಾರಕ
ಸಂಶೋಧನ ಕೇಂದ್ರ
ಹಂಪೆ - ೧೯೮೧.

6. Govt of Mysore : Mysore State Gazetteer,
Bellary Disitrict,
Bangalore, 1972.

7. Diwakar R.R.
Karmarkar D.P.
(Edrs) : Vijayanagara Sexcentenary
Commomerations volume,
1936. Dharwar.

೧೬ ಹಂಪಿ ಕೋಟೆಯ ಪ್ರವೇಶದ್ವಾರಗಳು

ಡಾ.ಎಂ.ಕೊಟ್ರೇಶ್

ಇತಿಹಾಸ ಪ್ರಸಿದ್ಧ ಹಂಪಿಯು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿದ್ದು, ಹೊಸಪೇಟೆಯಿಂದ ಈಶಾನ್ಯದಿಕ್ಕಿಗೆ ಸುಮಾರು ೧೨ ಕಿ.ಮೀ ದೂರದಲ್ಲಿ ತುಂಗಾಭದ್ರಾ ನದಿಯ ದಂಡೆಯ ಮೇಲಿದೆ. ಉತ್ತರ ಅಕ್ಷಾಂಶ ೧೫, ೧೮.೫ ರಿಂದ ೧೫.೨೧ ಮತ್ತು ಪೂರ್ವ ರೇಖಾಂಶ ೭೬.೨೭.೫ ರಿಂದ ೭೬.೩೦ರ ವರೆಗಿನ ಮಧ್ಯದಲ್ಲಿ ಈ ಗ್ರಾಮ ಇರುತ್ತದೆ. ಇದು ಕ್ರಿ.ಶ.೧೪ನೇ ಶತಮಾನದಿಂದ ೧೬ನೇ ಶತಮಾನದವರೆಗೆ ವಿಜಯನಗರದ ಅರಸರ ರಾಜಧಾನಿಯಾಗಿತ್ತು. ಆಗ ಈ ರಾಜಧಾನಿಯು ಸುಮಾರು ೨೫. ಚದರ ಕಿ.ಮೀ ನಷ್ಟು ವಿಸ್ತಾರವನ್ನು ಹೊಂದಿತ್ತು.

ಈ ವಿಶಾಲವಾದ ರಾಜಧಾನಿಯ ರಕ್ಷಣೆಗಾಗಿ ಬಲಾಢ್ಯವಾದ ಕೋಟೆಯನ್ನು ಈ ಅರಸರು ನಿರ್ಮಿಸಿಕೊಂಡಿದ್ದರು. ದೇಶೀಯ ಹಾಗೂ ವಿದೇಶೀಯರ ಸಾಹಿತ್ಯಾಧಾರ ಗಳಲ್ಲಿ ಹಂಪಿಯು ಏಳುಸುತ್ತಿನ ಕೋಟೆಯನ್ನು ಹೊಂದಿರುವ ಬಗ್ಗೆ ಮಾಹಿತಿಗಳಿವೆ. ಪ್ರಸ್ತುತ ನಮಗೆ ಕಂಡುಬರುವುದು ಹರಕು-ಮುರುಕು ನಾಲ್ಕು ಸುತ್ತುಗಳು ಮಾತ್ರ.

ರಾಜಧಾನಿಯನ್ನು ಕಟ್ಟುವಾಗ ಈ ಸ್ಥಳವನ್ನು ಆಯ್ಕೆಮಾಡಲು ಸ್ವಾಭಾವಿಕವಾಗಿ ರಕ್ಷಣೆ ನೀಡುವ ನದಿ ಮತ್ತು ಗುಡ್ಡಗಳನ್ನು ಗಮನದಲ್ಲಿಟ್ಟು ಕೊಳ್ಳಲಾಗಿದೆ. ರಾಜಧಾನಿಯ ಉತ್ತರಕ್ಕೆ ತುಂಗಭದ್ರಾ ನದಿಮತ್ತು ಗುಡ್ಡಗಳ ಸಾಲು ನೈಸರ್ಗಿಕ ರಕ್ಷಣೆಯನ್ನು ನೀಡುತ್ತವೆ. ಪೂರ್ವದಿಕ್ಕಿಗೂ ಅನೇಕ ಗುಡ್ಡಗಳ ಸಾಲುಗಳಿವೆ. ಈ ಗುಡ್ಡಗಳ ಮಧ್ಯದಲ್ಲಿ ಮೇಲೆ ಕೆಲವೆಡೆ ನೆಲಮಟ್ಟದಲ್ಲಿ ಕೋಟೆಯನ್ನು ಕಟ್ಟಲಾಗಿದೆ. ಭದ್ರವಾದ ಕೋಟೆಯು ರಾಜಧಾನಿಯನ್ನು ರಕ್ಷಿಸುತ್ತಿತ್ತು. ಈ ಮೇಲಿನ ಅಂಶಗಳಿಂದ ಇದು ನೆಲ, ಗಿರಿ ಮತ್ತು ಜಲದುರ್ಗದ ಲಕ್ಷಣಗಳನ್ನು ಮೈಗೂಡಿಸಿಕೊಂಡಿತ್ತೆಂದು ಹೇಳಬಹುದು.

ಈ ಕೋಟೆಯ ಪ್ರವೇಶಕ್ಕೆ ಯೋಗ್ಯವಾದ ಹಾಗೂ ಕೆಲವು ಸೂಕ್ಷ್ಮ ಸ್ಥಳಗಳನ್ನು ರಕ್ಷಣೆಗೆ ಯೋಗ್ಯ ರೀತಿಯಲ್ಲಿ ಗುರುತಿಸಿ ಪ್ರವೇಶದ್ವಾರಗಳನ್ನು ನಿರ್ಮಿಸಲಾಗಿದೆ. ಪ್ರತಿ ಮನೆಗೂ ಬಾಗಿಲುಗಳು ಇದ್ದಹಾಗೆ ಪ್ರತಿ ಕೊಟೆಗೂ ಪ್ರವೇಶ ದ್ವಾರಗಳಿರುತ್ತವೆ. ಕೋಟೆಗಳಿರುವ ಬಾಗಿಲುಗಳನ್ನು ಹೆಬ್ಬಾಗಿಲು, ಬಾಗಿಲು, ದಿಡ್ಡಿಬಾಗಿಲು ಎಂದು ಹೆಸರಿಸಲಾಗಿದೆ. "ಪುಲಿಮೊಗ" ಇದು ಕೋಟೆಗೆ ಇರುವ ಹೆಬ್ಬಾಗಿಲನ್ನು ಸೂಚಿಸುತ್ತದೆ.

ಹೆಬ್ಬಾಗಿಲು ಐದು ಕೈಗಳ ಉದ್ದ, ಐದು ಕೈಗಳ ಅಗಲ ಮಾಡಬೇಕು. ಕುದುರೆ ಹತ್ತಿ ಬರುವವನ ಮೇಲೆ ಎರಡು ಕೈಗಳ ಉದ್ದ ಪ್ರಮಾಣವಿರುವ ಹಾಗೆ ಕೋಟೆ ದ್ವಾರವನ್ನು ಮಾಡಬೇಕೆಂದು ಈ ಕೆಳಗಿನ ಶ್ಲೋಕ ಹೇಳುತ್ತದೆ.

ಅಶ್ವಾರೂಢ ಸಮಾಯಾತೇತಸೊ ಪರಿತಥೋಭಯಂ

ಹಸ್ತ ಮಾತ್ರ ಪ್ರಾಮಣೇನದ್ವಾರಂ ಕುರ್ಯಾದ್ವಿಚಕ್ಷಣಃ [೧]

ಕೋಟೆಗೆ ಚೋರಕಿಂಡಿಗಳನ್ನು ಜೋಡಿಸಿರುತ್ತಿದ್ದರು, ಪೂರ್ವಾದಿ ದಿಕ್ಕುಗಳಾಗಲಿ ಆಗ್ನೇಯಾದಿ ಕೋನಗಳಲ್ಲಾಗಲಿ ಕೆಳಗಾಗಲಿ ಲಕ್ಷಣವಿಲ್ಲದೆ ಇರಲಿ ಹೇಗಾದರೂ ರಹಸ್ಯವಾಗಿರುವ ಹಾಗೆ ಆಪತ್ತು ಸಂಭವಿಸಿದಾಗ ಪಲಾಯನವಾಗುವುದಕ್ಕೆ ಯೋಗ್ಯವಾಗಿ ಚೋರಕಿಂಡಿ ದ್ವಾರವನ್ನು ಮಾಡಬೇಕೆಂದು ಹೇಳಿದೆ.

ಮದ್ವಾನೆಯ ಸೊಂಡೆಯ ಸಹಾಯದಿಂದ ನೂಕಿ ಬಂಧಿಸುವಷ್ಟು ಹಿರಿದಾದ ವಜ್ರದ ಅಗುಳಿಯ ಬಾಗಿಲವುಳ್ಳ ಕೋಟೆಯನ್ನು ವರ್ಣಿಸುವುದು ಖ್ಯಾತಕವಿಗಳಿಗೂ ಅಸಾಧ್ಯವಾದುದು ಎಂದು ಮೋಹನ ತರಂಗಣಿ ಗದ್ಯವನ್ನು ಎಸ್.ಎಸ್.ಕೋತಿನ ಅನುವಾದಿಸಿದ್ದಾರೆ.

ಮದಹಸ್ತಿಗಳ ಕೈಯ ನೂಕಿ ಬಂದಿಸುವ ಪೆ

ರ್ಗದ ವಜ್ರಲಾಳ ವಿಂಡಿಗೆಯ

ಅದಟನ ದ್ವಾರಪ್ಪುಕವ ವರ್ಣಿಸುವೊಡೆ ಪದಕವಿ

ಗಳಿ ಗೋಚರವು[೨]

ಮಹತ್ವದ ವಿಜಯನಗರದ ರಾಜಧಾನಿ ಹಂಪಿ ಕೋಟೆಯ ದ್ವಾರಬಾಗಿಲು, ವಿಶೇಷಣೆಯ ಉದ್ದೇಶ ಈ ಪ್ರಬಂಧಕ್ಕಿದೆ. ಮುಖ್ಯವಾದ ಹಂಪಿಕೋಟೆಯ ಪ್ರವೇಶ ದ್ವಾರಗಳಲ್ಲಿ ಸಿಂಘಾರದ ಹೆಬ್ಬಾಗಿಲು, ಬೇಟೆಕಾರರ ಹೆಬ್ಬಾಗಿಲು, ಗುಮ್ಮಟದ ಹೆಬ್ಬಾಗಿಲು, ಕೋಟಿ ಶಂಕರ ದೇವರ ಬಾಗಿಲು, ಭಿಮನ ಹೆಬ್ಬಾಗಿಲು, ಸೋಮವಾರದ ಬಾಗಿಲು, ಉದಯಗಿರಿ ಬಾಗಿಲು, ಹರಶಂಕರ ಬಾಗಿಲು, ಪೆನುಗೋಂಡಬಾಗಿಲು-೧, ೨ನೇ ಪೆನುಗೊಂಡ ಬಾಗಿಲು, ಜಡೆಯ ಶಂಕರ ದೇವರದಿಡ್ಡಿ, ಹಂಪಾದೇವಿ ದಿಡ್ಡಿ, ರೆಮ್ಮದಿಡ್ಡಿ ಮುಖ್ಯವಾಗಿವೆ.

ಕೋಟೆ ಗೋಡೆಗಳಲ್ಲಿರುವ ಬಾಗಿಲುಗಳು ಒಂದೇತೆರನಾಗಿಲ್ಲ. ಪ್ರಾಮುಖ್ಯತೆ ಹಾಗೂ ಗಾತ್ರವನ್ನು ಗಮನದಲ್ಲಿಟ್ಟುಕೊಂಡು ಬಾಗಿಲುಗಳನ್ನು ವಿಜಯನಗರದವರು, ಹೆಬ್ಬಾಗಿಲು, ಬಾಗಿಲು ಮತ್ತು ದಿಡ್ಡಿಗಳೆಂದು ವಿಂಗಡಿಸಿದ್ದುದು ಅಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ.

ಹೆಬ್ಬಾಗಿಲುಗಳು ಅತಿದೊಡ್ಡವು ಇವುಗಳನ್ನು ಮುಖ್ಯಪ್ರವೇಶ ದ್ವಾರಗಳಾಗಿ ಉಪಯೋಗಿಸುತ್ತಿದ್ದರು. ಬಾಗಿಲುಗಳು ಮಧ್ಯಮಗಾತ್ರದವು.. ದಿಡ್ಡಿಗಳು ಚಿಕ್ಕ ಬಾಗಿಲು

ಗಳಾಗಿದ್ದು ಜನರು ತಮ್ಮ ದಿನ ನಿತ್ಯದ ಕೆಲಸಗಳಿಗಾಗಿ ಪಟ್ಟಣದ ಎಲ್ಲಾ ದಿಕ್ಕಿಗೂ ಸುಲಭವಾಗಿ ಹೋಗಲು ಅನುಕೂಲವಾಗುವಂತೆ ನಿರ್ಮಿಸಲ್ಪಟ್ಟಿದೆ. ವಿನ್ಯಾಸವನ್ನು ಯುದ್ಧ ತಂತ್ರದ ದೃಷ್ಟಿಯಿಂದ ಬಹಳ ಎಚ್ಚರಿಕೆಯಿಂದ ಮಾಡಲಾಗಿದೆ. ಕೋಟೆಯೊಳಗೆ ನೇರವಾದ ಪ್ರವೇಶವನ್ನು ಇವು ನೀಡುವುದಿಲ್ಲ. ದೂರದಿಂದ ನೋಡಿದಾಗ ಪ್ರವೇಶ ದ್ವಾರವೇ ಕಾಣುವುದಿಲ್ಲ. ಪ್ರವೇಶದ್ವಾರದ ಎರಡೂ ಪಾರ್ಶ್ವದಲ್ಲಿ ಮತ್ತು ಮುಂಭಾಗ ದಲ್ಲಿ ಅದೇ ರೀತಿಯ ತೆರೆಯ ಗೋಡೆಗಳನ್ನು ಕಟ್ಟಿ ಅದನ್ನು ಮರೆಮಾಡಿ ಗೋಡೆಯಲ್ಲಿ ಎರಡನೆಯ ಪ್ರವೇಶದ್ವಾರವನ್ನು ಕಲ್ಪಿಸಲಾಗಿದೆ. ಎರಡನೆಯ ದ್ವಾರವು ಪಾರ್ಶ್ವದಲ್ಲಿರು ವುದರಿಂದ ಇದು ಸಹ ದೂರದಿಂದ ಕಾಣುವುದಿಲ್ಲ. ಹೀಗಾಗಿ ಒಳಗೆ ಬರುವ ದಾರಿ ಅಂಕು ಡೊಂಕಾಗಿರುವುದು. ಸಾಮಾನ್ಯವಾಗಿ ಬಾಗಿಲುಗಳ ಪಾರ್ಶ್ವದಲ್ಲಿ ಎರಡು ದೊಡ್ಡ ಕೊತ್ತಳಗಳಿವೆ. ಬಾಗಿಲಿನ ಮೂಲಕ ಅಂಕು ಡೊಂಕಾದ ದಾರಿಯಲ್ಲಿ ಒಳ ಪ್ರವೇಶಿಸಲು ಪ್ರಯತ್ನಿಸುವ ವೈರಿ ಸೈನ್ಯವನ್ನು ಕೋಟೆ ಗೋಡೆಯ ಮತ್ತು ಕೊತ್ತಳಗಳ ಮೇಲೆ ಸಂರಕ್ಷಣೆಗಾಗಿ ನಿಂತ ಸೈನಿಕರು ಸುಲಭವಾಗಿ ಸದೆ ಬಡಿಯಲು ಅನುಕೂಲವಾಗು ತ್ತಿತ್ತು. ಬಾಗಿಲುಗಳಲ್ಲಿ ಕಾವಲುಗಾರರಿರುತ್ತಿದ್ದರು. ಇವರು ಖಡ್ಗ, ದೊಣ್ಣೆ ಮತ್ತು ಚಾವಟಿಗಳನ್ನು ಹಿಡಿದುಕೊಂಡು ನಿಂತಿರುತ್ತಿದ್ದರು. ಇಂತಹ ಕೆಲವು ಶಿಲ್ಪಗಳನ್ನು ಬಾಗಿಲುಗಳ ತೋಳಗಂಬಗಳ ಮೇಲೆ ಕೆತ್ತಲಾಗಿದೆ.

ಪ್ರವೇಶದ್ವಾರಗಳು ಕಂಬ ಮತ್ತು ತೊಲೆಗಳಿಂದ, ಇಟ್ಟಿಗೆ, ಗಾರೆ ಬಳಸದೆ, ಹಿಂದೂ ಶೈಲಿಯಲ್ಲಿ ಕಟ್ಟಲಾಗಿದೆ. ಬಾಗಿಲು ತೋಳುಗಳ ಮೇಲೆ ದ್ವಾರಪಾಲಕರು ಮತ್ತು ಆಲಂಕಾರಿಕ ಶಾಖೆಗಳನ್ನು ಕೆತ್ತಿದೆ. ಪ್ರವೇಶಕ್ಕಿಂತ ಮೊದಲು ದೊಡ್ಡ ಆವರಣವಿದೆ. ಪ್ರವೇಶದ ಇಕ್ಕೆಲಗಳಲ್ಲಿ ಕಂಬಗಳ ಅಂಕಣಗಳುಳ್ಳ ಕಟ್ಟೆಗಳಿವೆ. ಸೈನಿಕರು ಮತ್ತು ಪ್ರವಾಸಿಗರು ವಿಶ್ರಾಂತಿ ಪಡೆಯಲು ಇವು ಅನುಕೂಲವಾಗಿವೆ. ಮುಖ್ಯ ಪ್ರವೇಶದ ಕದಗಳನ್ನು ಹಾಕಿದಾಗ ದಾರಿಯನ್ನು ಪಕ್ಕದಲ್ಲಿ ಅಥವಾ ಆಕಾರದ ಉಪ ಪ್ರವೇಶಗಳನ್ನು ಒದಗಿಸಿವೆ. ಕೆಲವು ಪ್ರವೇಶ ದ್ವಾರಗಳ ರಚನೆಯಲ್ಲಿ ಮುಸ್ಲಿಂ ವಾಸ್ತುವಿನ ಪ್ರಭಾವವು ಕಾಣುತ್ತದೆ. ಗುಮ್ಮಟದ ಬಾಗಿಲೆಂದೆ ಕರೆಯುವ ಪ್ರವೇಶದ್ವಾರದ ಮೇಲಿನ ಗುಮ್ಮಟ ಮತ್ತು ಬೇಟೆಕಾರರ ಹೆಬ್ಬಾಗಿಲು ಮತ್ತು ಅರೆ ಶಂಕರ ಬಾಗಿಲುಗಳ ಮೇಲಿನ ಕಮಾನುಗಳು ಮುಸ್ಲಿಂ ಶೈಲಿಯಲ್ಲಿವೆ. ಕೆಲವು ಬಾಗಿಲುಗಳ ಗೋಡೆಗಳನ್ನು ಶಿಲ್ಪಗಳಿಂದ ಆಲಂಕರಿಸಿದೆ. ಹಾಗೂ ಕೆಲವು ಬಾಗಿಲುಗಳ ಆವರಣದಲ್ಲಿ ದೇವಾಲಯಗಳಿವೆ.

ವಿಜಯನಗರದ ಕೋಟೆಯು ಬಹುದೊಡ್ಡದಿದೆ. ಇದರ ಭಾಗಗಳನ್ನು ವೇಗವಾಗಿ ಪತ್ತೆ ಹಚ್ಚುವುದು ಯುದ್ಧ ಸಮಯದಲ್ಲಿ ಅತ್ಯವಶ್ಯಕವಾಗುತ್ತದೆ. ಕೋಟೆಯ ಯಾವುದಾದರೊಂದು ಭಾಗಕ್ಕೆ ಸೈನಿಕರನ್ನು ಕಳುಹಿಸುವಾಗ ಅವರು ಯಾವುದೇ ಗೊಂದಲಕ್ಕೊಳಪಡದೆ ನೇರವಾಗಿ ವೇಗದಲ್ಲಿ ಹೋಗಿ ಆ ಭಾಗವನ್ನು ಸೇರುವಂತೆ ಕೋಟೆಯ ವಿವಿಧ ಭಾಗಗಳಿಗೆ ಹೆಸರುಗಳನ್ನು ಕೊಟ್ಟು ಗುರುತಿಸುವುದು ಅತಿಮುಖ್ಯ ವಾದ ವಿಷಯ. ಹಂಪಿ ಕೋಟೆಯಲ್ಲಿ ಇಂತಹ ವ್ಯವಸ್ಥೆ ಇದ್ದುದು ಇತ್ತೀಚೆಗಷ್ಟೆ

ಪತ್ತೆ ಮಾಡಿ ಹೊರತಂದ ಹಲವಾರು ಶಾಸನಗಳಿಂದ ಬೆಳಕಿಗೆ ಬಂದಿದೆ. ಕೋಟೆಯ ಬಾಗಿಲುಗಳಿಗೆ ಹಾಗೂ ಕೊತ್ತಳಗಳಿಗೆ ಹೆಸರುಗಳನಿಟ್ಟು ಅವುಗಳನ್ನು ಸುಲಭವಾಗಿ ಗುರುತಿಸಲು ಅನುಕೂಲವಾಗುವಂತೆ ಮಾಡಲಾಗಿದೆ. ಶಾಸನ ಮತ್ತು ಇತರೆ ಆಧಾರದ ಮೇಲೆ ಇದುವರೆಗೆ ಪತ್ತೆ ಹಚ್ಚಿದ ಬಾಗಿಲು ಹಾಗೂ ಕೊತ್ತಳಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

ಸಿಂಘಾರದ ಹೆಬ್ಬಾಗಿಲು : Singhara gateway

ರಾಜಧಾನಿ ಸಿಂಘಾರಪುರಕ್ಕೆ ಈ ಹೆಬ್ಬಾಗಿಲು ಪ್ರವೇಶ ನೀಡುವುದರಿಂದ ಇದನ್ನು ಸಿಂಘಾರದ ಹೆಬ್ಬಾಗಿಲೆಂದು ಕರೆಯಲಾಗಿದೆ. ಆನೆಸಾಲಿನ ಹಿಂಬಾಗದಲ್ಲಿ ಈ ಹೆಬ್ಬಾಗಿಲು ಬರುತ್ತದೆ. ಇದರ ಉಲ್ಲೇಖವು ಸಿಂಘಾರದ ಹೆಬ್ಬಾಗಿಲಿನ ಉತ್ತರಕ್ಕಿರುವ ಚಿಕ್ಕ ಬೆಟ್ಟವೊಂದರ ಬಂಡೆಯ ಮೇಲಿರುವ ಶಾಸನದಲ್ಲಿ ಬರುತ್ತದೆ.[೩] ದೂರದಿಂದ ನೋಡಿದಾಗ ಈ ಹೆಬ್ಬಾಗಿಲು ಕಾಣುವುದಿಲ್ಲ. ಪ್ರವೇಶ ದ್ವಾರದ ಎರಡೂ ಬದಿಗೆ ಬಲಿಷ್ಠವಾದ ಗೋಡೆಗಳಿವೆ. ಮುಂಭಾಗದಲ್ಲಿಯೂ ಇದೇ ರೀತಿಯ ಗೋಡೆಗಳಿವೆ. ಹಾಗಾಗಿ ಒಳಗೆ ಬರುವ ದಾರಿಯು ಅಂಕು ಡೊಂಕಾಗುವುದು. ಮಧ್ಯದಲ್ಲಿ ವಿಶಾಲವಾದ ಆವರಣವಿದೆ. ಈ ಅವರಣದ ಎಡಭಾಗದ ವೇದಿಕೆಯ ಮೇಲೆ ವೈಷ್ಣವ ದೇವಾಲಯ ವಿದೆ. ಉತ್ತರಾಭಿಮುಖವಾಗಿರುವ ಈ ದೇವಾಲಯದಲ್ಲಿ ಗರ್ಭಗೃಹ, ಸಭಾಮಂಟಪ ಗಳಿವೆ. ಗರ್ಭಗೃಹದಲ್ಲಿ ಯಾವುದೇ ಶಿಲ್ಪಗಳಿಲ್ಲ. ಪ್ರವೇಶದ್ವಾರದ ಎರಡೂ ಬದಿಗೆ ಬಾಗಿಲು ತೋಳುಗಳಲ್ಲಿ ವೈಷ್ಣವ ದ್ವಾರಪಾಲಕರ ಉಬ್ಬು ಶಿಲ್ಪಗಳಿವೆ. ಸಭಾಮಂಟಪ ದಲ್ಲಿರುವ ನಾಲ್ಕು ಕಂಬದಲ್ಲಿ ಯಾಳಿ, ಆಂಜನೇಯ ಇತ್ಯಾದಿ ಉಬ್ಬುಗೆತ್ತನೆಗಳಿವೆ. ಆವರಣದ ಪಶ್ಚಿಮದ ಗೋಡೆಯಲ್ಲಿ ಗಣೇಶ, ಸಿಂಗಾರ ಮಾಡಿಕೊಳ್ಳುವ ಸ್ತ್ರೀ, ನಂದಿ, ಆನೆ, ವೀರರ ಉಬ್ಬು ಶಿಲ್ಪಗಳಿವೆ. ಬಾಗಿಲು ತೋಳುಗಳಲ್ಲಿ ಎರಡೂಬದಿಗೆ ದ್ವಾರ ಪಾಲಕರ ಉಬ್ಬು ಶಿಲ್ಪಗಳಿವೆ. ಪ್ರವೇಶದ್ವಾರದ ಉಪಬಾಗಿಲನ್ನು ನಿರ್ಮಿಸಲಾಗಿದೆ. ಈ ದ್ವಾರದ ಮೂಲಕ ಪಶ್ಚಿಮಕ್ಕೆ ಸಾಗಿದರೆ ಸಿಂಘಾರಪುರ ಪ್ರವೇಶಸಿಗುವುದು. ಸಿಂಘಾರಪುರದ ಉಲ್ಲೇಖ ಬರುವ ಶಾಸನವು ವಿಠ್ಠಲ ಸ್ವಾಮಿ ದೇವಾಲಯದ ಮುಂದಿರುವ ಮಂಟಪದ ದಕ್ಷಿಣ ಗೋಡೆಯಲ್ಲಿದೆ.[೪]

ಬೇಟೆಕಾರರ ಹೆಬ್ಬಾಗಿಲು : Hunters gateway

ವಿಜಯನಗರ ಕಾಲದಲ್ಲಿ ಬೇಟೆಗೆ ಪ್ರಧಾನ ಪಾತ್ರವಿತ್ತು ಅಂತೆಯೇ ಅರಸರು ತಮ್ಮ ಮನೋರಂಜನೆಗಾಗಿ ಬೇಟೆಯಾಡುವುದನ್ನು ಅಭ್ಯಾಸ ಮಾಡಿಕೊಂಡಿದ್ದರು. ಅಡವಿಯಲ್ಲಿ ಬೇಟೆಯಾಡಿ ಈ ದ್ವಾರದ ಮೂಲಕ ನಗರದೊಳಕ್ಕೆ ಪ್ರವೇಶ ಮಾಡ ಲಾಗುತ್ತಿತ್ತು. ಹಾಗಾಗಿ ಇದನ್ನು ಬೇಟೆಕಾರರ ಹೆಬ್ಬಾಗಿಲೆಂದು ಕರೆಯಲಾಗಿದೆ. ಮಾಲ್ಯವಂತ ರಘುನಾಥ ದೇವಾಲಯದ ಆಗ್ನೇಯ ದಿಕ್ಕಿಗೆ ಬೇಟೆಕಾರರ ಹೆಬ್ಬಾಗಿಲು ಕಂಡುಬರುತ್ತದೆ. ಹೆಬ್ಬಾಗಿಲಿನ ಪೂರ್ವಕ್ಕಿರುವ ಕಲ್ಲು ಗುಂಡಿನ ಮೇಲಿರುವ ಶಾಸನವು ಈ ಕೆಳಗಿನಂತಿದೆ.

ಶ್ರೀ ಶಕ ವರುಷ ೧೩೧೨ರ ಉದ್ರಿ ಸಂವತ್ಸರದ ಆಶ್ವೀಜ ಸು ರಾ ಗು
ಶ್ರೀ ಮನ್ಮಹಾರಾಹಾಧಿರಾಜ
ರಾಜ ಪರಮೇಶ್ವರ ಶ್ರೀವೀರ ಪ್ರತಾಪ ಹರಿಹರ ಮಹಾರಾಯರರಮ
ನೆಯ ಎಡವಂಕದ ಬೇಟೆಕಾರ ಮಲಗೆಯ ನಾಯ್ಕನ ಮಗ ಬಢ್ಢೆಯನಾಯ್ಕ
ನು "ಬೇಟೆಕಾರರ ಹೆಬ್ಬಾಗಿಲ" ಮೂಡಣ ದಿಕ್ಕಿನ ಒರತೆಯ ಮೈಲಾರದೇವರ ಪು
ತಿಷ್ಟೆ ಆಗ್ನಿ ದಿಸೆಯ ಆಲದ ಅರವೆ ಆ ದೇವರ ಹಿಂದಣ ವಾಯುವ್ಯದ ದಿಕ್ಕಿ[೫]
ನ ಒರತೆಯ್ಯ್ಯ ಕೊಂಡವನು ಮಾಡಿದನು ಮಂಗಳ ಮಹಾ ಶ್ರೀ ಶ್ರೀ ಶ್ರೀ

ಈ ಶಾಸನವು ಬೇಟೆಕಾರರ ಹೆಬ್ಬಾಗಿಲಿನ ಪರಿಚಯವನ್ನು ಸ್ಪಷ್ಟವಾಗಿ ಮಾಡಿಕೊಡುತ್ತದೆ. ಈ ಹೆಬ್ಬಾಗಿಲು ಸಿಂಘಾರದ ಹೆಬ್ಬಾಗಿಲಿನಂತೆ ಪ್ರಧಾನವಾದ ಮಹಾದ್ವಾರವೆನಿಸಿದೆ. ಸಿಂಘಾರದ ಹೆಬ್ಬಾಗಲು ೩ನೆ ಹಂತಕ್ಕೆ ಪೂರ್ವ ದಿಂದಲೇ ನಗರಕ್ಕೆ ಪ್ರವೇಶಕೊಟ್ಟರೆ, ಹೊರ ಕೋಟೆಯ ಬೇಟೆಕಾರರ ಹೆಬ್ಬಾಗಿಲು ಮೊದಲಿಗೆ ಪೂರ್ವದಿಂದಲೇ ನಗರಕ್ಕೆ ಪ್ರವೇಶವನ್ನು ಕೊಡುತ್ತದೆ. ಇದರ ಸುತ್ತಲೂ ಬೆಟ್ಟ-ಗುಡ್ಡ ಮತ್ತು ಕಾಡು ಆವರಿಸಿದೆ. ಎರಡೂ ಬೆಟ್ಟಗಳ ಸಂದನ್ನು (ಕಣಿವೆ) ಉಪಯೋಗಿಸಿ ಬಹು ಜಾಣ್ಮೆಯಿಂದ ಈ ಹೆಬ್ಬಾಗಿಲನ್ನು ಕಟ್ಟಲಾಗಿದೆ. ದೂರದಿಂದ ನೋಡಲು ಕಾಣದಂತೆ ಗೋಡೆಗಳ ಮರೆಯಲ್ಲಿದೆ. ಪ್ರವೇಶದ್ವಾರದ ಪಾರ್ಶ್ವದಲ್ಲಿರುವ ಗೋಡೆಗಳು ವಿಶಾಲ ಆವರಣವನ್ನು ನಿರ್ಮಿಸಿ ಮುಂದೆ ಹಾಗೆಯೇ ಗೋಡೆಗಳನ್ನು ಉತ್ತರಕ್ಕೆ ತಿರುಗಿಸಲಾಗಿದೆ. ಮಧ್ಯದಲ್ಲಿರುವ ವಿಶಾಲವಾದ ಆವರಣದಲ್ಲಿ ದಕ್ಷಿಣಾಭಿಮುಖವಾದ ದೇಗುಲವಿದೆ. ಇದು ಗರ್ಭಗೃಹ, ಸಭಾಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಯಾವುದೇ ಮೂರ್ತಿಗಳಿಲ್ಲ. ಸಭಾಮಂಟಪದಲ್ಲಿ ಆಂಜನೇಯನ ಶಿಲ್ಪವನ್ನು ಪ್ರತಿ ಷ್ಠಾಪಿಸಲಾಗಿದೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಶಿಖರವಿದೆ. ಸಭಾಮಂಟಪದ ಮೇಲೆ ಕೈಪಿಡಿ, ಗೋಡೆಯಲ್ಲಿ ದೇವ ಕೋಷ್ಠಕಗಳಿವೆ.

ಬೇಟೆಕಾರರ ಹೆಬ್ಬಾಗಿಲು ಪೂರ್ಣವಾಗಿ ಗೋಚರಿಸದಿದ್ದರೂ ಇಟ್ಟಿಗೆ-ಗಾರೆ ಕಲ್ಲಿನ ಅವಶೇಷಗಳು ವ್ಯಾಪಕವಾಗಿ ಕಂಡುಬರುತ್ತವೆ. ಬೇಟೆಕಾರರಿಗಾಗಿ ಪ್ರತ್ಯೇಕ ಹೆಬ್ಬಾಗಿಲನ್ನು ನಿರ್ಮಿಸಿರುವ ವಿಜಯನಗರದರಸರು ಬೇಟೆಗೆ ಬಹು ಪ್ರಾಮುಖ್ಯತೆಯನ್ನು ನೀಡಿದ್ದರು. ಅಂತಯೇ ವಿದೇಶಿ ಯಾತ್ರಿಕರಾದ ಆಬ್ದುಲ್ ರಜಾಕ್ ನ್ಯೂನಿಜ್ ಮತ್ತು ಬಾರ್ಬೋಸರು ಬೇಟೆ ಸಂದರ್ಭಗಳನ್ನು ವಿಸ್ತೃತವಾಗಿ ಹೇಳಿದ್ದಾರೆ.[೬]

ಗುಮ್ಮಟದ ಬಾಗಿಲು : Domed gateway

ಕಮಲಾಪುರದ ಈಶಾನ್ಯದಿಕ್ಕಿಗೆ ಸುಮಾರು ೧ ಕಿ.ಮೀ ದೂರದಲ್ಲಿ (ಹೆಚ್.ಪಿ.ಸಿ.ಯ ಬಳಿ) ಈ ಗುಮ್ಮಟದ ಬಾಗಿಲಿದೆ. ಗುಮ್ಮಟದಂತಿರುವದರಿಂದ ಇದನ್ನು ಗುಮ್ಮಟದ ಬಾಗಿಲೆಂದು ಗುರುತಿಸುತ್ತಾರೆ. ಬೃಹದಾಕಾರದ ಹಾಗೂ ಸುಸ್ಥಿತಿಯಲ್ಲಿರುವ ಹೆಬ್ಬಾಗಿಲು ಗಳಲ್ಲಿ ಇದು ಒಂದು. ಪೆನುಗೊಂಡದಿಂದ ಬರುವವರು ಮೊದಲು ಪೆನುಗೊಂಡೆ

ಬಾಗಿಲನ್ನು ಬಳಸಿಕೊಂಡು ಗುಮ್ಮಟ ಹಾಗೂ ಭೀಮನ ಹೆಬ್ಬಾಗಿಲುಗಳ ಮೂಲಕ ನಗರ ಪ್ರವೇಶ ಮಾಡುತ್ತಿದ್ದರು. ಹಿಂದೂ ಮುಸ್ಲಿಮ್ ಶೈಲಿಯಲ್ಲಿ ನಿರ್ಮಾಣವಾಗಿರುವ ಸ್ಮಾರಕಗಳಲ್ಲಿ ಗುಮ್ಮಟದ ಬಾಗಿಲು ಒಂದು.

ಪ್ರವೇಶ ದ್ವಾರದ ಮುಂಭಾಗಕ್ಕೆ ೨೦ ಅಡಿ ಅಗಲ ಅಂತರದಲ್ಲಿ ಅಭಿಮುಖವಾದ ಎರಡು ಗೋಡೆಗಳು ದಕ್ಷಿಣಕ್ಕೆ ಮುಂಚಾಚಿವೆ. ಇವುಗಳ ಮುಂದಿರುವುದೇ ವಿಶಾಲವಾದ ಆವರಣ. ಈ ಆವರಣದ ಪಶ್ಚಿಮ ಗೋಡೆಯಲ್ಲಿ ಉಪಬಾಗಿಲನ್ನು ಜೋಡಿಸಲಾಗಿದೆ. ಈ ಆವರಣವನ್ನು ಸುತ್ತುವರೆದಿರುವ ಗೋಡೆಯು ಪೂರ್ವದಿಕ್ಕಿಗೆ ಸುಮಾರು ೧೦೦ ಅಡಿಗಳಷ್ಟು ಉದ್ದವಾಗಿದೆ. ಇದಕ್ಕೆ ಅಭಿಮುಖವಾದ ಇನ್ನೊಂದು ಗೋಡೆ ಇದೆ. ಇದರಲ್ಲಿ ಮೀನು ಮೊಸಳೆ ಉಬ್ಬುಗೆತ್ತನೆಗಳಿವೆ.

ಇದಕ್ಕೆ ಹೊಂದಿಕೊಂಡು ಆಂಜನೇಯ ಗುಡಿಯನ್ನು ನಿರ್ಮಿಸಲಾಗಿದೆ. ಇದು ಗರ್ಭಗೃಹ ಮಾತ್ರ ಹೊಂದಿದ್ದು ಅದರಲ್ಲಿ ಸುಮಾರು ಆರು ಅಡಿ ಎತ್ತರದ ಆಂಜನೇಯನ ಉಬ್ಬುಶಿಲ್ಪವಿದೆ. ಈ ಗುಡಿಯ ಎದುರಿನ ಗೋಡೆಯಲ್ಲಿ ಇಮ್ಮಡಿ ದೇವರಾಯನನ್ನು ಪ್ರತಿನಿಧಿಸುವ ಉಬ್ಬು ಶಿಲ್ಪವಿದೆ. ಇಲ್ಲಿ ದೊರೆಯು ವಿಜಯನಗರ ಕಾಲದ ಸಂಪ್ರದಾಯಿಕ ಉಡುಗೆಯಲ್ಲಿ ಅಂಜಲಿ ಬದ್ಧನಾಗಿ ಶಿವಲಿಂಗದ ಎದುರು ನಿಂತಿದ್ದಾನೆ. ಇವೆರೆಡು ಶಿಲ್ಪಗಳ ನಡುವೆ ನಂದಿ ವಿಗ್ರಹವಿದೆ. ಪೂರ್ವದಿಂದ ಈ ಬಾಗಲಿನೊಳಗೆ ಮೊದಲು ಪ್ರವೇಶ ಮಾಡುವಾಗ ಇಕ್ಕೆಲಗಳಲ್ಲಿ ಬೃಹದಾಕಾರದ ಗೋಡೆಗಳಿವೆ. ಈ ಗೋಡೆಗಳಲ್ಲಿ ಮೀನು, ವಿಜಯನಗರ ಲಾಂಛನವಾದ ವರಾಹದ ಉಬ್ಬುಗೆತ್ತನೆಗಳಿವೆ. ಈ ಪ್ರದೇಶದ ಮೇಲೆ ಕಮಾನಿನಾಕಾರದ ಗುಮ್ಮಟವಿದೆ. ಇದು ಮೂರು ಸ್ತರಗಳಲ್ಲಿದ್ದು, ಪ್ರಥಮ ಹಂತದಲ್ಲಿ ನಾಲ್ಕುದಿಕ್ಕುಗಳಿಗೆ ಕಮಾನುಗಳಿವೆ. ಇದರ ಮೇಲೆ ಅಡ್ಡಪಟ್ಟಿಕೆ ಹಾಕಲಾಗಿದೆ. ಎರಡನೆಯ ಹಂತದಲ್ಲಿ ಚೌಕಾಕಾರದ ನಾಲ್ಕು ಮೂಲೆಯ ಕಟ್ಟಡವಿದೆ. ಮೂರನೆಯ ಹಂತದಲ್ಲಿ ವೃತ್ತಾಕಾರದ ಗುಮ್ಮಟವಿದೆ. ಗೋಡೆಗೆ ಹಾಗೂ ಬಾಗಿಲಿನ ಪ್ರಥಮ ಹಂತಕ್ಕೆ ಮಧ್ಯಮ ಹಂತಕ್ಕೆ ಮಧ್ಯಮ ಗಾತ್ರದ ಕಲ್ಲು ಹಾಗೂ ಗಾರೆಯನ್ನು ಬಳಸಲಾಗಿದೆ. ಕಮಾನಿನ ಎರಡು ಮತ್ತು ಮೂರನೆಯ ಹಂತದಲ್ಲಿ ಇಟ್ಟಿಗೆ-ಗಾರೆಯನ್ನು ಬಳಕೆ ಮಾಡಿದ್ದಾರೆ.

ಭೀಮನ ಹೆಬ್ಬಾಗಿಲು : Bheema's gateway

ಕಮಲಾಪುರದಿಂದ ಕಂಪ್ಲಿಗೆ ಹೋಗುವ ರಸ್ತೆ ಬದಿಯಲ್ಲಿ ಬರುವ ಗಾಣಗಿತ್ತಿ ದೇವಾಲಯದ ಆಗ್ನೇಯ ದಿಕ್ಕಿಗೆ ಈ ಹೆಬ್ಬಾಗಿಲಿದೆ. ಸುಸ್ಥಿತಿಯಲ್ಲಿರುವ ಬೃಹದಾಕಾರದ ಬಾಗಿಲುಗಳಲ್ಲಿ ಇದು ಒಂದು. ಇದರ ಆಕಾರದ ಕಾರಣದಿಂದಾಗಿಯೇ ಇದಕ್ಕೆ ಭೀಮನ ಹೆಬ್ಬಾಗಿಲೆಂದು ಹೆಸರು ಬಂದಿರಬಹುದು. ಈ ಬಾಗಿಲು ಸುಮಾರು ೨೦ ಅಡಿ ಎತ್ತರ ಹಾಗೂ ೧೫ ಅಡಿ ಅಗಲವಾಗಿದೆ. ಇಳಿಬಿದ್ದ ಪದ್ಮದ ಮೊಗ್ಗುಗಳಿವೆ. ಹೆಬ್ಬಾಗಿಲ ಮುಂಭಾಗದಲ್ಲಿ ವಿಶಾಲವಾದ ಆವರಣವಿದೆ. ಇದು ದಕ್ಷಿಣಕ್ಕೆ ಹೆಚ್ಚು ವಿಸ್ತರಿಸಿದೆ. ಇಲ್ಲಿ ಸುಮಾರು ೮ ಅಡಿ ಎತ್ತರದ ಭೀಮನ ಬಿಡಿ ಶಿಲ್ಪ ಹಾಗೂ ಶಾಸನಗಳಿವೆ.

ಹತ್ತಿರದ ಗೋಡೆಯಲ್ಲಿ ಭೀಮನು ಕೀಚಕನನ್ನು ಸಂಹಾರ ಮಾಡುವ ದೃಶ್ಯವನ್ನು ಕೆತ್ತಲಾಗಿದೆ. ದಕ್ಷಿಣದ ಗೋಡೆಗೆ ಹೊಂದಿಕೊಂಡು ಉತ್ತರಾಭಿಮುಖ ವಾಗಿರುವ ಮೂರು ಗರ್ಭಗೃಹಗಳಿವೆ. ಇವುಗಳಲ್ಲಿ ಯಾವುದೇ ಮೂರ್ತಿ ಶಿಲ್ಪಗಳಿಲ್ಲ. ಪ್ರವೇಶದ ಇಕ್ಕೆಲದ ತೋಳುಗಳಲ್ಲಿ ವೈಷ್ಣವ ದ್ವಾರ ಪಾಲಕರ ಉಬ್ಬುಗೆತ್ತನೆಗಳಿವೆ. ಇದೇ ಗೋಡೆಗೆ ಉಪಬಾಗಿಲನ್ನು ತೆರೆಯಲಾಗಿದೆ. ಈ ಭೀಮನ ಹೆಬ್ಬಾಗಿಲಿಗೆ ಪ್ರವೇಶಮಾಡಲು ಮೊದಲು ಉತ್ತರದಿಂದ ದಕ್ಷಿಣಕ್ಕೆ ಬಂದು ಅಲ್ಲಿಂದ ಪಶ್ಚಿಮಕ್ಕೆ ತಿರುಗಿ ಪೂರ್ವದಿಂದ ಮುಖ್ಯ ಪ್ರವೇಶದ್ವಾರಕ್ಕೆ ಪ್ರವೇಶಿಸಬೇಕಾಗುತ್ತದೆ.

ಸೋಮವಾರದ ಬಾಗಿಲು :

ವಿಜಯನಗರದಲ್ಲಿ ಕೃಷಿ ಪ್ರಧಾನ ಸಂಸ್ಕೃತಿ ಇತ್ತು. ಕೃಷಿಕರಿಗೆ ಸೋಮವಾರ ಬಿಡುವಿನ ದಿನ. ಅಂದು ಬೇಸಾಯಕ್ಕೆ ದನಗಳನ್ನು ಬಳಸುತ್ತಿರಲಿಲ್ಲ. ಆ ಸಂಸ್ಕೃತಿ ಇಂದಿಗೂ ಇದೆ. ಈ ಬಾಗಿಲಿನ ಸುತ್ತಮುತ್ತಲು ವಿಶಾಲವಾದ ಬಯಲು ಜಾಗವಿದೆ. ಇಲ್ಲಿಯೇ ಬೇಸಾಯದ ಹೊಲಗಳು, ತೋಟಗಳು ಇದ್ದವೆಂದು ಅಬ್ದುಲ್ ರಜಾಕ್ ಅಭಿಪ್ರಾಯ ಪಡುತ್ತಾನೆ.[೮] ಈ ಹಿನ್ನೆಲೆಯಲ್ಲಿ ಕೃಷಿಕರಿಗೆ ಶ್ರೇಷ್ಠ ದಿನವಾದ ಸೋಮವಾರವೇ ಬಾಗಿಲಿಗೆ ಈ ನಾಮ ಅನ್ವರ್ಥವಾಗಿರಲು ಸಾಧ್ಯತೆಗಳಿವೆ. ಅಥವಾ 'ಸೋಮಯ್ಯ' ಎನ್ನುವ ದೇವರ ಹೆಸರಿನಿಂದ ಈ ಬಾಗಿಲನ್ನು ಕರೆದಿರಬಹುದು. ಇದಕ್ಕೆ ಪೂರಕವೆಂಬಂತೆ ಈ ಬಾಗಿಲು ಮುಂಭಾಗದಲ್ಲಿ ಶೈವದೇಗುಲವಿದೆ, ಈ ಬಾಗಿಲು ಸಿಂಘಾರದ ಹೆಬ್ಬಾಗಿಲಿನ ದಕ್ಷಿಣಭಾಗದಲ್ಲಿದೆ.

ಇಲ್ಲಿಯೇ ಉತ್ತರದ ಬೆಟ್ಟದ ಮೇಲಿನ ಗುಂಡಿನಲ್ಲಿರುವ ವೀರ ಬುಕ್ಕರಾಯನ ಶಾಸನವು ಸೋಮವಾರದ ಬಾಗಿಲ ಹೆಸರನ್ನು ಉಲ್ಲೇಖಿಸುತ್ತದೆ.[೯] ಈ ಬಾಗಿಲು ಭಾಗಶಃ ಹಾಳಾಗಿದೆ. ಸುಮಾರು ೨೦ ಅಡಿ ಅಗಲ, ೨೦ ಅಡಿ ಎತ್ತರವಾಗಿರುವ ಬಾಗಿಲಿನ ಪಾರ್ಶ್ವದ ಗೋಡೆಗಳಲ್ಲಿ ಆಂಜನೇಯ, ಆನೆ, ಹಂಸ, ಗಣೇಶ, ಬಿಲ್ಲು ಬಾಣಗಳನ್ನು ಹಿಡಿದು ನಿಂತಿರುವ ವೀರನ ಉಬ್ಬುಗೆತ್ತನೆಗಳಿವೆ. ಮುಂಭಾಗದಲ್ಲಿ ದಕ್ಷಿಣಾಭಿಮುಖವಾಗಿರುವ ಶೈವ ದೇಗುಲವಿದೆ. ಇದರಲ್ಲಿ ಗರ್ಭಗೃಹ, ತೆರೆದ ಸಭಾಮಂಟಪಗಳಿವೆ. ಗರ್ಭಗೃಹದ ಪ್ರವೇಶದ ಇಕ್ಕೆಲಗಳಲ್ಲಿ ಶೈವದ್ವಾರ ಪಾಲಕರ ಉಬ್ಬುಗೆತ್ತನೆಗಳಿವೆ. ಸೋಮವಾರದ ಬಾಗಿಲು ಪೂರ್ವಾಭಿಮುಖವಾಗಿದೆ.

***ಉದಯಗಿರಿ ಬಾಗಿಲು* Udayagiri gateway**

ಕಮಲಾಪುರದಿಂದ-ಕಂಪ್ಲಿಗೆ ಹೋಗುವ ರಸ್ತೆಯ ಬದಿಯಲ್ಲಿ, ಈ ಬಾಗಿಲಿದೆ ಇದನ್ನು ಎರಡು ಬೆಟ್ಟಗಳ ನಡುವಿನ ಕಣಿವೆಯನ್ನು ಬಳಸಿ ಕಟ್ಟಲಾಗಿದೆ. ಉದಯಗಿರಿಯಿಂದ ವಿಜಯನಗರಕ್ಕೆ ಬರುವವರು ಈ ಬಾಗಿಲನ್ನು ಬಳಸಿಕೊಂಡೇ ಬರಬೇಕು. ಹಾಗಾಗಿ ಇದಕ್ಕೆ ಉದಯಗಿರಿಯ ಬಾಗಿಲೆಂದೇ ಹೆಸರು ಬಂದಿದೆ. ವಿಠ್ಠಲ ದೇವಾಲಯದ ಗರ್ಭಗೃಹದ ಮುಂದಿನ ಮಂಟಪದಲ್ಲಿರುವ ಶಾಸನವು ಉದಯಗಿರಿ ಬಾಗಿಲನ್ನು ಉಲ್ಲೇಖಿಸುತ್ತದೆ.[೧೦] ಪೂರ್ವಾಭಿಮುಖವಾಗಿರುವ ಈ ಬಾಗಿಲು

ದೂರದಿಂದ ನೋಡಲು ಕಾಣದಂತೆ ಗೋಡೆಗಳನ್ನು ಮರೆಮಾಡಲಾಗಿದೆ. ಇತರೆ ಬಾಗಿಲುಗಳ ಲಕ್ಷಣಗಳನ್ನೇ ಇದು ಹೋಲುತ್ತದೆ. ಇಲ್ಲಿ ದೇವಾಲಯವು ಪಾಳು ಬಿದ್ದಿದೆ.

ಹರೇಶಂಕರ ಬಾಗಿಲು Hareshankara gateway

ಕಮಲಾಪುರದಿಂದ ಆನೆಗೊಂದಿಗೆ ಹೋಗುವಾಗ ದಾರಿಯಲ್ಲಿ (ಸುಮಾರು ೪.ಕಿ.ಮೀ ದೂರದಲ್ಲಿದೆ) ಈ ಬಾಗಲಿದೆ. ದಕ್ಷಿಣಾಭಿಮುಖವಾಗಿರುವ ಇದು ಸಂಪೂರ್ಣ ಹಾಳಾಗಿದೆ. ಇದನ್ನು ತಳವಾರಘಟ್ಟದ ಹೆಬ್ಬಾಗಿಲು (Talari gatha gateway) ಆನೆಗೊಂದಿ ಬಾಗಿಲು ಎಂತಲೂ ಕರೆಯುತ್ತಾರೆ. ಒಳಭಾಗದಲ್ಲಿ ಪೂರ್ವಾಭಿಮುಖ ವಾಗಿರುವ ಆಂಜನೇಯ ದೇಗುಲವಿದೆ. ಕಲ್ಲು ಗೋಡೆ ಹಾಗೂ ಹಿಂದೂ ಮುಸ್ಲಿಂ ಶೈಲಿಯ ಕಿಟಕಿಗಳದ್ದವೆಂದು ತಿಳಿದುಬರುತ್ತದೆ.

ಒಂದನೆಯ ಪೆನುಗೊಂಡ First Penugonda gateway

ಬಾಗಿಲು ಹೊರಬದಿ ಕೋಟೆಯ ಈ ಬಾಗಿಲು ಕಮಲಾಪುರದ ಆಗ್ನೇಯದಿಕ್ಕಿ ಗಿರುವ ಪಟ್ಟಾಭಿರಾಮ ದೇವಾಲಯದ ಹತ್ತಿರದಲ್ಲಿದೆ. ಇದು ಪೆನುಗೊಂಡದಿಂದ ವರದರಾಜಮ್ಮನ ಪಟ್ಟಣಕ್ಕೆ ಪ್ರವೇಶವನ್ನು ಕಲ್ಪಿಸುತ್ತದೆ. ವರದಾದೇವಿ ಶ್ರೀಅಚ್ಯುತ ರಾಯನ ಪಟ್ಟದರಸಿ ಈಕೆಯ ನೆನಪಿಗಾಗಿ ಕಟ್ಟಿಸಿದ ಪಟ್ಟಣವೇ ವರದರಾಜಮ್ಮನ ಪಟ್ಟಣ; ವರದಾದೇವಿ ಪೆನುಗೊಂಡದವಳೆಂದು ಕಾಣುತ್ತದೆ. ಈ ಕಾರಣಗಳಿಂದಾಗಿ ಪೆನುಗೊಂಡೆಯ ಬಾಗಿಲೆಂದು ಕರೆದಿರಬಹುದಾಗಿದೆ.

ಕ್ರಿ.ಶ. ೧೫೪೦ ರ ಅಚ್ಯುತರಾಯನ ಶಾಸನದಲ್ಲಿ ಪೆನುಗೊಂಡ ಬಾಗಿಲು ಹಾಗೂ ಅಲ್ಲಿ ಪ್ರತಿಷ್ಠಾಪಿಸಿದ ರಘುನಾಥದೇವರ ಉಲ್ಲೇಖಗಳಿವೆ. ಪೆನುಗೊಂಡ ಬಾಗಿಲಿಗೆ ಸಣ್ಣಕ್ಕಿಪ್ಪನ ಅಗಸೆಯೆಂದು ಸ್ಥಳೀಯರು ಅಭಿಪ್ರಾಯಿಸುವರು. ಬಾಗಿಲ ಹೊರಬಾಗ ದಲ್ಲಿ ಈಗಲೂ ಸಣ್ಣಕ್ಕಿ ವೀರಭದ್ರ ದೇವಾಲಯ ಇರುವಿಕೆಯನ್ನು ನೋಡಬಹುದು. ಅದರ ಹೆಸರನ್ನೆ ಈ ಬಾಗಿಲಿಗೆ ಅನ್ವಯಿಸಿರುವರು. ಇದರ ಹಿಂಬದಿ ಮುಂಬದಿಗೆ ಸಾಲುಮಂಟಪಗಳು; ಮಧ್ಯದಲ್ಲಿ ಬೀದಿ ಇದೆ. ಇದನ್ನೇ ವರದರಾಜಮ್ಮನ ಬಜಾರು ಎಂದು ಕರೆಯುತ್ತಾರೆ. ಬಾಗಿಲು ಮತ್ತು ಕೋಟೆ ಗೋಡೆಗೆ ಹೊಂದಿಕೊಂಡು ಮೂರು ದೇವಾಲಯಗಳಿವೆ. ಅವುಗಳಲ್ಲಿ ಒಂದನೇ ಅಚ್ಯುತರಾಯನ ಕಾಲದಲ್ಲಿ ಕಟ್ಟಲಾದ ರಘುನಾಥ ದೇವಾಲಯವೆಂದು ಶಾಸನವು ಸ್ಪಷ್ಟವಾಗಿ ಹೇಳಿದರೂ, ಸ್ಥಳೀಯರೂ ಮಾತ್ರ ಕಳ್ಳರ ಗುಡಿಯೆಂದು ಗುರುತಿಸುತ್ತಾರೆ. ಉತ್ತರಾಭಿಮುಖವಾಗಿರುವ ಈ ದೇಗುಲವು ಗರ್ಭಗೃಹಕ್ಕಿಂತ ಕೆಳಮಟ್ಟದಲ್ಲಿ ನಿರ್ಮಿಸಿದ ಪ್ರದಕ್ಷಿಣಾಪಥವಿದೆ. ಎದುರು ಭಾಗದಲ್ಲಿ ಒಂದೇ ದೇವಾಲಯವಿದೆ. ಇದು ದಕ್ಷಿಣಾಭಿಮುಖವಾಗಿದ್ದು ಗರ್ಭಗೃಹ ಹಾಗೂ ತೆರೆದ ಸಭಾ ಮಂಟಪವನ್ನು ಹೊಂದಿದೆ. ಗರ್ಭಗೃಹದ ಬಾಗಿಲು ತೋಳುಗಳಲ್ಲಿರುವ ವೈಷ್ಣವದ್ವಾರ ಪಾಲಕರಿಂದ ಇದು ವೈಷ್ಣವ ದೇವಾಲಯವೆಂದು ದೃಢಪಟ್ಟರೂ ಗರ್ಭಗೃಹ ಖಾಲಿ ಇದೆ. ರಘುನಾಥ ದೇವಾಲಯದ ಬಲಬದಿಗೆ ಕೋಟೆ ಬಾಗಿಲಿಗೆ

ಹೊಂದಿ ಕೊಂಡಿರುವ ಚಿಕ್ಕ ದೇವಾಲಯದ ಗರ್ಭಗೃಹದಲ್ಲಿ ಇಲಿಯನ್ನು ಕಡೆದಿರುವ ಪೀಠದ ಮೇಲೆ ಗಣೇಶನ ಭಗ್ನ ಶಿಲ್ಪವಿದೆ. ಹಾಗಾಗಿ ಇದು ಗಣೇಶನ ಗುಡಿಯೆಂದು ಖಚಿತವಾಗುವುದು. ಬಾಗಿಲಿನ ಮುಂಭಾಗದಲ್ಲಿ ವೀರಭದ್ರದೇವಾಲಯವಿದೆ. ಇದನ್ನು ಸಣ್ಣಕ್ಕಿ ವೀರಭದ್ರನೆಂದು ಕರೆಯುವರು. ಗರ್ಭಗೃಹದಲ್ಲಿ ವೀರಭದ್ರನ ಮೂರ್ತಿಯಿದೆ. ಈ ದೇವಾಲಯಕ್ಕೆ ಕಣಶಿಲೆ, ಶಿಖರ ಹಾಗೂ ಕೈಪಿಡಿ ಗೋಡೆಗಳಿಗೆ ಇಟ್ಟಿಗೆ ಮತ್ತು ಗಾರೆಯನ್ನು ಬಳಸಲಾಗಿದೆ. ಈಗ ಗೋಚರಿಸುವ ಬಾಗಿಲು ಎರಡು ಮಹಡಿಗಳನ್ನು ಹೊಂದಿದೆ. ಪ್ರವೇಶದ ಪಾರ್ಶ್ವದಲ್ಲಿ ಮಂಟಪಗಳಿವೆ. ಗ್ರೀನ್ ಲಾ (A.G. Green law 1856) ಅವರು ೧೫೦ ವರ್ಷಗಳ ಹಿಂದ ತೆಗೆದಿರುವ ಈ ಬಾಗಿಲಿನ ಚಿತ್ರವು ಇತರೆ ಬಾಗಿಲುಗಳಂತೆಯೇ ದೊಡ್ಡ ಪ್ರಮಾಣದಲ್ಲಿರುವುದನ್ನು ತೋರಿಸುತ್ತದೆ. ಒಳಭಾಗದಲ್ಲಿ ಪೂರ್ವಾಭಿಮುಖವಾಗಿರುವ ಆಂಜನೇಯ ದೇಗುಲವಿದೆ. ಕಲ್ಲು ಗೋಡೆ ಹಾಗೂ ಹಿಂದೂ ಮುಸ್ಲಿಂ ಶೈಲಿಯ ಕಿಟಕಿಗಳದ್ದುವೆಂದು ತಿಳಿದುಬರುತ್ತದೆ. (Splendours of the Vijayanagara empire Hampi, P-26.)

ಎರಡನೇ ಪೆನುಗೊಂಡ ಬಾಗಿಲು Second Penugonda gateway

ಇದು ಕಮಲಾಪುರದ ಆಗ್ನೇಯಕ್ಕೆ ಸುಮಾರು ೨ ಕಿ.ಮೀ. ಅಂತರದಲ್ಲಿದೆ. ಪೆನುಗೊಂಡೆಗೂ ವಿಜಯನಗರಕ್ಕೂ ನಿಕಟವಾದ ಸಂಬಂಧಗಳಿವೆ. ಪೆನುಗೊಂಡೆಯಿಂದ ಬರುವವರು ಈ ಮಾರ್ಗವಾಗಿಯೇ ಹೋಗ ಬೇಕಿತ್ತು. ಹಾಗಾಗಿ ಇದನ್ನು ಪೆನುಗೊಂಡೆ ಬಾಗಿಲು ಎಂದು ಗುರುತಿಸಿದ್ದಾರೆ.

ಕಮಲಾಪುರದ ಬಳಿ ಇರುವ ಚಿಕ್ಕ ಹುಡೇ ದೇವಾಲಯದ ದಕ್ಷಿಣಕ್ಕಿರುವ ಶಾಸನವು ಪೆನುಗೊಂಡೆ ಬಾಗಿಲನ್ನು ಹಾಗೂ ಅಲ್ಲಿ ಪ್ರತಿಷ್ಠಾಪಿಸಿದ ರಘುನಾಥ ದೇವರನ್ನು ಉಲ್ಲೇಖಿಸುತ್ತದೆ. ಕಳ್ಳರ ಗುಡಿ ಹತ್ತಿರ ಪೆನುಗೊಂಡ ಬೀದಿ ಇವೆ. ಇದರ ದಕ್ಷಿಣಕ್ಕೆ ಪೆನುಗೊಂಡ ಬಾಗಿಲು ಇರುತ್ತದೆ. ಪೆನುಗೊಂಡೆ ಬೀದಿಯ ಒಂದು ಮಾರ್ಗವು ಗುಮ್ಮಟದ ಬಾಗಿಲಿಗೆ ಹೋಗಿ ಅಲ್ಲಿಂದ ಭೀಮನ ಅಗಸಿ ಮೂಲಕ ವಿಜಯನಗರ ದತ್ತ ಕರೆದೊಯ್ಯುತ್ತದೆ. ಪೆನುಗೊಂಡ ಬಾಗಿಲಿಗೆ ಹೊಂದಿಕೊಂಡ ಗೋಡೆ ಮಲಪನಗುಡಿ ಕೋಟೆ ಗೋಡೆಗೆ ಹತ್ತಿಕೊಂಡಿದೆ ಎಂದು ಡಾ॥ ವಸುಂಧರ ಫಿಲಿಯೋಜ ಅವರು ಅಭಿಪ್ರಾಯ ಪಡುತ್ತಾರೆ.[೨] ಪ್ರಸ್ತುತ ಪೆನುಗೊಂಡ ಬಾಗಿಲಿನಿಂದ ಕಮಲಾಪುರದ ಕೆರೆಯ ಹಿಂಭಾಗದವರೆಗೆ ಕೋಟೆಗೋಡೆ ಗೋಚರಿಸುತ್ತದೆ. ಪೂರ್ವಾಭಿಮುಖವಾಗಿರುವ ಈ ಬಾಗಿಲು ಸುಮಾರು ೧೫ ಅಡಿ ಅಗಲ, ೨೦ ಅಡಿ ಎತ್ತರವಾಗಿದೆ. ಬಾಗಿಲ ತೋಳುಗಳಲ್ಲಿ ದ್ವಾರಪಾಲಕರ ಉಬ್ಬು ಶಿಲ್ಪಗಳು, ಲಲಾಟಬಿಂಬದ ಎರಡೂ ಬದಿಯ ಕೆಳಗೆ ಇಳಿ ಬಿದ್ದ ಮೊಗ್ಗುಗಳಿವೆ. ಎಡ ಭಾಗದಲ್ಲಿ ಉಪಬಾಗಿಲು, ಬಲಭಾಗದ ಗೋಡೆಯಲ್ಲಿ ಶಿವಲಿಂಗ, ನಂದಿ ಅಂಜನ ಮುದ್ರೆಯಲ್ಲಿ ನಿಂತಿರುವ ರಾಜ (ಇತನನ್ನು ಪ್ರೌಢದೇವ ರಾಯನೆಂದು ಕರೆದಿರುವರು) ನ ಉಬ್ಬು ಶಿಲ್ಪಗಳಿವೆ. ಪ್ರವೇಶದ ಎರಡೂ ಬದಿಗೆ ಕಟ್ಟೆಯ ಮೇಲೆ ಮಂಟಪಗಳನ್ನು ನಿರ್ಮಿಸಿರು

ವರು. ಹತ್ತಿರದ (ಒಳಭಾಗದಲ್ಲಿ)ಲ್ಲಿ ಆಂಜನೇಯ, ರಘುನಾಥ ಮತ್ತು ಗಣೇಶನ ದೇವಾಲಯಗಳಿವೆ.

ಕೋಟಿ ಶಂಕರ ದೇವರ ಬಾಗಿಲು ***Koti Shankaradevara gateway***

ಕಮಲಾಪುರ ದಿಂದ ಹಂಪಿಗೆ ಹೋಗುವ ರಸ್ತೆಯ ಬದಿಯಲ್ಲಿರುವ ಅಕ್ಕ-ತಂಗಿಯ (Sister Stone) ರ ಗುಂಡಿನ ಹಿಂಬದಿಗೆ ಕೋಟಿ ಶಂಕರ ದೇವರ ಬಾಗಿಲಿದೆ. ಕೋಟೆಗೆ ಹೊಂದಿಕೊಂಡು ಶಂಕರದೇವರ ಗುಡಿ ಇದೆ. ತುಂಗ-ಭದ್ರಾನದಿಯಕಲ್ಲು ಬಂಡೆಯ ಮೇಲೆ ಲಿಂಗಗಳ ಸಮೂಹವೇ ಇದೆ. ಈ ಹಿನ್ನೆಲೆಯಲ್ಲಿ ಬಾಗಿಲಿಗೆ ಆ ಹೆಸರೇ ರೂಢಿಗತವಾಗಿ ಬಂದಿದೆ. ಪ್ರಸನ್ನ ವಿರೂಪಾಕ್ಷ ದೇವಾಲಯದ ಹತ್ತಿರುವಿರುವ ಗುಂಡಿನ ಮೇಲಿರುವ [೧೩] ಹಾಗೂ ಇದರ ಪಕ್ಕದಲ್ಲಿರುವ ಬಂಡೆಯ ಶಾಸನಗಳಲ್ಲಿ [೧೪] ಕೋಟಿ ಶಂಕರ ದೇವರ ಬಾಗಿಲಿನ ಪ್ರಸ್ತಾಪಗಳಿವೆ.

ಈ ಬಾಗಿಲು ದಕ್ಷಿಣಾಭಿಮುಖವಾಗಿದ್ದು, ಪ್ರವೇಶದ ಆರಂಭದಲ್ಲಿ ಬೃಹದಾಕಾರದ ಬಂಡೆಯ ಮೇಲೆ ಕೆತ್ತನೆಯಿದೆ. ಭಗ್ನಾವಸ್ಥೆಯಲ್ಲಿರುವ ಈ ಬಾಗಿಲು ಸುಮಾರು ೧೦ ಅಡಿ ಅಗಲ ಹಾಗೂ ೨೦ ಅಡಿ ಎತ್ತರವಾಗಿದೆ.

ಹೊದೆಯ ಬಾಗಿಲು ***Odaya gateway***

ಇದು ಉತ್ತರಾಭಿಮುಖವಾಗಿದ್ದು ಅರಮನೆ ಪ್ರದೇಶದಿಂದ ಮಾತಂಗ ಗುಡ್ಡ ಪವರ್ತಕ್ಕೆ ಹೋಗುವದಕ್ಕಾಗಿ ನಿರ್ಮಿಸಿರುವುರು. ಮಾಲ್ಯಾವಂತ ಪರ್ವತದ ಪಶ್ಚಿಮಕ್ಕಿರುವ ಶಾಸನದಲ್ಲಿ "ಹೊದೆಯ ಬಾಗಿಲು ವಿನಾಯಕನಿಗೆ (ವೀರ ಹರಿಹರ ರಾಯನು) ದಾನ ನೀಡಿದಂತೆ ಉಲ್ಲೇಖವಿದೆ." [೧೫]

ಹೂವಿನ ಬಾಗಿಲು ***Flower's gateway***

ಕೋಟೆಯ ನೈರುತ್ಯದಿಕ್ಕಿನಲ್ಲಿ ಹೂವಿನ ಬಾಗಿಲಿದೆ. ದಕ್ಷಿಣಾಭಿಮುಖವಾಗಿರುವ ಇದು ನೇರ ಅಂತಃ ಪುರಕ್ಕೆ ಪ್ರವೇಶವನ್ನು ಕೊಡುತ್ತದೆ. ಸಂಡೂರು ತಾಲೂಕಿನ ಹೊಸಮಲೈದುರ್ಗದ ರಾಮನ ದೇಗುಲದ ಮುಂದಿರುವ ಶಾಸನದಲ್ಲಿ ಹೂವಿನ ಬಾಗಿಲ ವಿಜಯನಗರದ ಆಂಜನೇಯ ದೇವಾಲಯದ ಪೂಜಾರಿಯ ಪ್ರಸ್ತಾಪಗಳಿವೆ.[೧೬] ಇದಕ್ಕೆ ಪೂರಕವೆಂಬಂತೆ ಹೂವಿನ ಬಾಗಿಲ ಮುಂಭಾಗದಲ್ಲಿ ಆಂಜನೇಯ ಗುಡಿ ಇದೆ. ಇದು ವಿಜಯನಗರದ ಅರಸ ಮಲ್ಲಿಕಾರ್ಜುನ (ಕ್ರಿ.ಶ. ೧೪೪೭-೧೪೬೬) ನ ಅವಧಿಯಲ್ಲಿ ನಿರ್ಮಾಣಗೊಂಡಿದೆ.[೧೭]

ದೂರದಿಂದ ಈ ಬಾಗಿಲು ಗೋಚರಿಸುವುದಿಲ್ಲ. ೧೦ ಅಡಿ ಅಗಲ, ೨೦ ಅಡಿ, ಎತ್ತರವಾಗಿರುವ ಇದರ ಲಲಾಟದ ಬಿಂಬದ ಕೆಳಬದಿಗೆ ಇಳಿಬಿದ್ದ ಮೊಗ್ಗುಗಳಿವೆ. ಮುಂಭಗಾದಲ್ಲಿ ವಿಶಾಲವಾದ ಆವರಣವಿದೆ. ಈ ಆವರಣದಿಂದ ಪೂರ್ವಕ್ಕೆ ಆಂಜನೇಯ ಶಿಲ್ಪವಿದೆ. ಸಭಾಮಂಟಪದಲ್ಲಿರುವ ನಾಲ್ಕು ಕಂಬಗಳಲ್ಲಿ ಆನೆ, ಯಾಳಿ, ಆಂಜನೇಯ, ಗಣೇಶ ಇತ್ಯಾದಿ ಉಬ್ಬು ಶಿಲ್ಪಗಳಿವೆ. ಗರ್ಭಗೃಹದ ಮೇಲೆ ಇಟ್ಟಿಗೆ-

ಗಾರೆಯಿಂದ ಶಿಖರವನ್ನು ನಿರ್ಮಿಸಲಾಗಿದೆ. ಸಭಾಮಂಟಪದ ಮೇಲಿರುವ ಕೈಪಿಡಿ ಗೋಡೆಯಲ್ಲಿ ದೇವ ಕೋಷ್ಠಗಳಿವೆ.

ಕೊಠಾರದ ಬಾಗಿಲು

ಕೋಟೆಯ ಈಶಾನ್ಯದಿಕ್ಕಿಗೆ ಈ ಬಾಗಿಲಿದೆ. ಪೂರ್ವಭಿಮುಖವಾಗಿರುವ ಈ ಬಾಗಿಲು ಇಂದು ಪೂರ್ಣ ಭಗ್ನಾವಸ್ಥೆಯಲ್ಲಿದೆ. ಕೋಷ್ಠಾಗಾರ ಎಂದರೆ ಕೊಟ್ಟಗಾರ, ಸಂಗ್ರಹಾಲಯ, ಖಜಾನೆ, ಕಣಜ ಎಂಬರ್ಥಗಳಿವೆ.

ಖಜಾನೆ, ಕಣಜಗಳು ಇದ್ದಿರುವ? ಈ ಕಾರಣವಾಗಿಯೇ ಇದಕ್ಕೆ ಕೋಠಾರದ ಬಾಗಿಲೆಂದು ಕರೆದಿರಬೇಕು. ನಿಂಬಾಪುರದ ಕಪಿಲಾಶ್ರಮದ ಬಳಿಯ ಶಾಸನದಲ್ಲಿ ಈ ಬಾಗಿಲಿನ ಉಲ್ಲೇಖವಿದೆ.[೧೮]

ಜಡೆಯಶಂಕರದೇವರದಿಡ್ಡಿ ***Jadeya shankardevara diddi***

ಇದು ಕಮಲಾಪುರದಿಂದ ಹಂಪೆಗೆ ಹೋಗುವ ರಸ್ತೆಯ ಬದಿಯಲ್ಲಿರುವ ಅಕ್ಕ-ತಂಗಿಯರ ಗುಂಡಿನ ಹಿಂಬದಿಗೆ ಇದೆ. ಶಾಸನದಲ್ಲಿ ಜಡೆಯಶಂಕರದ ದೇವರ ದಿಡ್ಡಿಯ ಸ್ಥಳ ನಿರ್ದೇಶನವನ್ನು ನೀಡುತ್ತದೆ.[೧೯]

ಹಂಪಾದೇವಿಯ ದಿಡ್ಡಿ ***Hampadevi Diddi***

ಜಡೆಯಶಂಕರ ದೇವರ ದಿಡ್ಡಿ ಬಾಗಿಲಿನ ಉತ್ತರಕ್ಕೆ ಸ್ವಲ್ಪ ಅಂತರದಲ್ಲಿಯೇ ಹಂಪಾದೇವಿಯ ದಿಡ್ಡಿ ಬಾಗಿಲಿದೆ. ಈಗ ಪೂರ್ಣ ಭಗ್ನಾವಸ್ಥೆಯಲ್ಲಿದೆ. ಬಂಡೆಯ ಮೆಲಿರುವ ಶಾಸನದಲ್ಲಿ ಹಂಪಾದೇವಿಯ ದಿಡ್ಡಿ ಎಂದಿದೆ.[೨೦]

ರೆಮ್ಮುದಿಡ್ಡಿ ***Remmu Diddi***

ಬೇಟೆಕಾರ ಹಾಗೂ ಹರೆಶಂಕರ ಹೆಬ್ಬಾಗಿಲುಗಳ ಮಧ್ಯದ ಬೆಟ್ಟಗಳ ಕಣಿವೆಯಲ್ಲಿ ರೆಮ್ಮುದಿಡ್ಡಿಬಾಗಿಲಿದೆ. ಪೂರ್ವಾಭಿಮುಖವಾಗಿರುವ ಇದು ಸಂಪೂರ್ಣ ಹಾಳಾಗಿದೆ. ಪ್ರಸ್ತುತ ಎರಡು ಮಂಟಪಗಳು ಮಾತ್ರ ಗೋಚರಿಸುತ್ತವೆ. ಇಲ್ಲಿಯೇ ಇರುವ ಬಂಡೆಯ ಮೇಲಿನ ಶಾಸನದಲ್ಲಿ ಈ ದಿಡ್ಡಿ ಉಲ್ಲೇಖವಿದೆ.[೨೧]

ಉಪರಿಗೆ ಬಾಗಿಲು ಮತ್ತು ಮಾತಂಗೇಶ್ವರ ದೇವರ ದಿಡ್ಡಿ ಬಾಗಿಲುಗಳು ಕೂಡಾ ಮುಖ್ಯವಾಗಿವೆ.

ಸಮಾರೋಪ

ಹದಿನಾಲ್ಕನೆಯ ಶತನಮಾನದಲ್ಲಿ ವಿಜಯನಗರ ಕಾಲದ ಕೋಟೆಯ ರಚನೆಯಲ್ಲಿ ಹಲವು ವ್ಯತ್ಯಾಸಗಳನ್ನು ನೋಡಬಹುದು. ಈ ವ್ಯತ್ಯಾಸವು ಹಂಪಿ ಕೋಟೆಯ ಬಾಗಿಲುಗಳಲ್ಲಿ ಗುರುತಿಸಬಹುದು. ಈ ಕೋಟೆಯ ಬಾಗಿಲುಗಳು ಕಂಬ ತೊಲೆಗಳಿಂದ ರಚಿತವಾದ ಚೌಕಟ್ಟುಗಳನ್ನು ಹೊಂದಿವೆ. ಈ ಚೌಕಟ್ಟು ಮುಟ್ಟುವ ಮೊದಲು ಪ್ರವೇಶವು ಹಲವು ಕೊನೆಗಳಲ್ಲಿ ತಿರುಗಿ ಅಂಕುಡೊಂಕಾಗಿದೆ. ಬಾಗಿಲು ಮುಂದಿನ

ದೊಡ್ಡ ಆವರಣ ಕೋಟೆಯಷ್ಟೇ ಎತ್ತರವಾದ ಗೋಡೆಗಳಿಂದ ಸುತ್ತವರೆ ದಿದೆ. ಚೌಕ ಮತ್ತು ಆಯತಾಕಾರದ ಕೊತ್ತಳಗಳ ಮೇಲೆ ಕಾವಲುಗಾರರ ಮಂಟಪ ತಾಣಗಳಿವೆ. ಭೀಮನ ಹೆಬ್ಬಾಗಿಲು ಸಿಂಘಾರದ ಹೆಬ್ಬಾಗಿಲು, ಹೂವಿನ ಹೆಬ್ಬಾಗಿಲು ಗಳಲ್ಲಿ ಮೇಲಿನ ಕೆಲವು ಲಕ್ಷಣಗಳನ್ನು ನಾವಿಂದು ಕಾಣಬಹುದು. ಬಾಗಿಲುಗಳಿಗೆ ಅಲಂಕರಿಸಲು ಗಾರೆಯ ಕಮಾನು ಮತ್ತು ಗುಮ್ಮಟಗಳನ್ನು ವಿಜಯನಗರ ಕಾಲದ ಮಧ್ಯಾವಧಿಯಲ್ಲಿ ಅಳವಡಿಸಿದೆ. ಇದಕ್ಕೆ ಉದಾಹರಣೆ ಎಂದರೆ ಹರೆಶಂಕರ ಹಾಗೂ ಗುಮ್ಮಟದ ಬಾಗಿಲುಗಳು ಇದರಿಂದ ಹಂಪಿಕೋಟೆಯ ರಚನೆಯಲ್ಲಿ ಮುಸ್ಲಿಂ ಪ್ರಭಾವವನ್ನು ಗುರುತಿಸಬಹುದು. ಬಾಗಿಲುಗಳನ್ನು ಹೆಬ್ಬಾಗಿಲು, ಬಾಗಿಲು,ದಿಡ್ಡಿ ಬಾಗಿಲುಗಳೆಂದು ವಿಂಗಡಿಸಿದುದು ವಿಶೇಷ. ಕ್ರಿ.ಶ. ೧೩೮೫ರ ಹಂಪಿ ಶಾಸನವು ಬೇಟೆಕಾರರ ಬಾಗಿಲನ್ನು ಹೆಬ್ಬಾಗಿಲೆಂದು ಸೂಚಿಸುತ್ತದೆ. ವಿಜಯ ವಿಠ್ಠಲ ದೇವಾಲಯ ಗರ್ಭಗೃಹದ ಮುಂದಿನ ಮಂಟಪದಲ್ಲಿರುವ ಶಾಸನವು ಉದಯಗಿರಿಯ ಪ್ರವೇಶದ್ವಾರವನ್ನು ಬಾಗಿಲೆಂದು ಕರೆದಿದೆ. ಬಹುಪಾಲು ಶಾಸನಗಳು ದಿಡ್ಡಿ ಹಾಗೂ ಕೊತ್ತಳಗಳನ್ನುಹೆಸರಿಸುತ್ತವೆ. ಯುದ್ಧದ ಸಮಯದಲ್ಲಿ ಈ ಬೃಹದಾಕಾರದ ಕೋಟೆಯ ವಿವಿಧ ಭಾಗಗಳನ್ನು ಶೀಘ್ರದಲ್ಲಿ ಗುರುತಿಸುವ ಉದ್ದೇಶದಿಂದಾಗಿ ಹೆಸರುಗಳನ್ನು ಇಟ್ಟಿರಬಹುದು. ಇದೇ ರೀತಿ ವಿಜಯನಗರ ವ್ಯಾಪ್ತಿಯಲ್ಲಿ ಬರುವ ರಾಯಚೂರು, ಮುದುಗಲ್ಲು ಕೋಟೆಯ ಭಾಗಗಳನ್ನು ಗುರುತಿಸುವುದಕ್ಕಾಗಿ ಹೆಸರುಗಳನ್ನು ಇಟ್ಟು ಕೊಂಡಿರುವುದು ಅಲ್ಲಿಯ ಶಾಸನಗಳಿಂದ ತಿಳಿಯುವುದು.

ಟಿಪ್ಪಣಿಗಳು

೧. ಕೊಟ್ರೇಶ ಎಂ. ೨೦೦೨, ಕೋಟೆ, ಕೊತ್ತಳಗಳು ಒಂದು ಅಧ್ಯಯನ (ಅಪ್ರಕಟಿತ ಪಿಹೆಚ್.ಡಿ ಪ್ರೌಢ ಪ್ರಬಂಧ) ಪು.೨೨., ಹಂಪಿ : ಕನ್ನಡ ವಿಶ್ವವಿದ್ಯಾಲಯ್ಯ

೨. ಕೋತಿನ ಎಸ್.ಎಸ್. ೧೯೮೪, (ಅನುವಾದ) ಮೋಹನ ತರಂಗಿಣಿ, ಪು.೨೯೫, ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು.

೩. ದೇವರ ಕೊಂಡಾರೆಡ್ಡಿ ಮತ್ತು ಇತರರು, ೨೦೦೦, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಹಂಪಿ) ೩, ಪು ...ಹಂಪಿ ಕನ್ನಡ ವಿಶ್ವವಿದ್ಯಾಲಯ.

೪. ಅದೇ ಪು.೧೬೪.

೫. ಅದೇ. ಪು. ೧೬೨.

೬. ರಾಮರಾವ್.ಜಿ.ಎನ್. ವಿದೇಶಿಯರು ಕಂಡ ವಿಜಯನಗರ, ಬೆಂಗಳೂರು ಐ.ಬಿ.ಎಚ್. ಪ್ರಕಾಶನ.

೭. ದೀಕ್ಷಿತ್ ಜಿ.ಎಸ್. ಮತ್ತು ವಿಶ್ವೇಶ್ವರಯ್ಯ ಎಂ.ಪಿ. ೧೯೭೧. ಸಂಗಮರಕಾಲದ ವಿಜಯನಗರ, ಪು. ೯೪-೯೫, ಬೆಂಗಳೂರು ಬಿ.ಎಂ.ಶ್ರೀ. ಪ್ರತಿಷ್ಠಾನ.



ಉಪ್ಪರಿಗೆ ಬಾಗಿಲು, ವಿಠ್ಠಲ ದೇವಾಲಯದ ಹತ್ತಿರ, ಹಂಪಿ.



ಕೋಟೆ ಶಂಕರ ದೇವರ ಬಾಗಿಲು,ಅಕ್ಕ ತಂಗಿಯರ ಗುಂಡಿನ ಬಳಿ, ಹಂಪಿ.



ಪೆನಗೊಂಡೆಯ ಬಾಗಿಲು, ಹಂಪಿ.



ಹರೇಶಂಕರ ಬಾಗಿಲು, ಹಂಪಿ.




ಹೂವಿನ ಬಾಗಿಲು, ಹಂಪಿ.



ಸಿಂಘಾರದ ಹೆಬ್ಬಾಗಿಲು, ಹಂಪಿ.



ಉಪಬಾಗಿಲು, ಗಾಣಗಿತ್ತಿಯ ಗುಡಿಯ ಮುಂದೆ. ಹಂಪಿ.



ಸೋಮವಾರದ ಬಾಗಿಲು, ಹಂಪಿ.



೨ನೇ ಪೆನುಗೊಂಡ ಬಾಗಿಲು, ಹಂಪಿ.



ಬೇಟೆಕಾರರ ಹೆಬ್ಬಾಗಿಲು, ಹಂಪಿ.



ರೆಮ್ಮು ದಿಡ್ಡಿ ಬಾಗಿಲು, ಹಂಪಿ.



ಗುಮ್ಮಟದ ಹೆಬ್ಬಾಗಿಲು, ಹಂಪಿ.

೮. ಬಾಲಸುಬ್ರಹ್ಮಣ್ಯಂ, ಅನುವಾದ, ಮರೆಯಲಾಗದ ಮಹಾ ಸಾಮ್ರಾಜ್ಯ, ಪು. ೩೫೦, ಹಂಪಿ. ಕನ್ನಡ ವಿಶ್ವವಿದ್ಯಾಲಯ.

೯. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೩, ಪುರ್ವೋಕ್ತ.ಪು. ೨೪೩.

೧೦. ಅದೇ ಪು. ೧೪೧.

೧೧. ಅದೇ ಪು. ೨೩೮-೩೯.

೧೨. ವಸುಂಧರ ಫಿಲಿಯೋಜಾ, ೧೯೮೨, ಅಳಿದುಳಿದ ಹಂಪೆ, ಪು. ೧೦೪, 'ಬೆಂಗಳೂರು' ಮಾನಸೋಲ್ಲಾಸ ಪ್ರಕಾಶನ.

೧೩. ಕನ್ನಡ ವಿಶ್ವವಿದ್ಯಾಲಯ ಶಾಸನ ಪ್ರಕಾಶನ ಸಂಪುಟ-೩, ಪೂರ್ವೋಕ್ತ ಪು.೧೮೯.

೧೪. ಅದೇ ಪು. ೧೮೯.

೧೫. Supra Ins, No.124, Pp-23-24.

೧೬. ದೇವರ ಕೊಂಡಾ ರೆಡ್ಡಿ ಮತ್ತು ಇತರರು ೧೯೮೮, ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-೧, (ಬಳ್ಳಾರಿ ಜಿಲ್ಲೆ) ಪು.೨೦೩. ಹಂಪಿ:ಕನ್ನಡ ವಿಶ್ವವಿದ್ಯಾಲಯ.

೧೭. ಹೂವಿನ ಬಾಗಿಲು ಮುಂದಿರುವ ಆಂಜನೇಯ ದೇವಾಲಯದ ಗರ್ಭಗೃಹ ಪ್ರವೇಶದ್ವರದ ಪಾರ್ಶ್ವಗಳಲ್ಲಿರುವ ಬಾಗಿಲು ತೋಳಿನ ಮೇಲಿನ ಶಾಸನದಲ್ಲಿ.

೧೮. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೩, (ಹಂಪಿ) ಪುರ್ವೋಕ್ತ, ಪು. ೨೮೨.

೧೯. ಅದೇ, ಪು. ೧೮೮.

೨೦. ಅದೇ, ಪು. ೧೮೬.

೨೧. ಅದೇ, ಪು. ೨೭೦.

೧೭. ಹಂಪೆಯ ಸ್ಮಾರಕಗಳ ಶಿಲೆ ಮತ್ತು ಸಂರಕ್ಷಣೆ

ಡಾ.ಹೆಚ್.ಚಂದ್ರಶೇಖರ

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಹಲವಾರು ಐತಿಹಾಸಿಕ ಅವಶ್ಯಕತೆಗಳನ್ನು ಇತಿಹಾಸಕಾರರು ಹೇಳುತ್ತಾರೆ. ಅವುಗಳಲ್ಲಿ ಪ್ರಮುಖವಾಗಿ ಹಿಂದು ಧರ್ಮದ ಸಂರಕ್ಷಣೆ ಮತ್ತು ಸಂವರ್ಧನೆಯಾಗಿತ್ತು. ಉತ್ತರದಿಂದ ದಾಳಿ ಮಾಡುತ್ತಿದ್ದ ಮುಸ್ಲಿಂ ರಾಜ ಮತ್ತು ಧರ್ಮಾಂತರದ ಪ್ರಕ್ರಿಯೆಗೆ ತಡೆ ಹಾಕುವದು ಈ ಅವಶ್ಯಕತೆಗಳಲ್ಲಿ ಒಂದಾಗಿತ್ತು. ಈ ಗುರಿ ಸಾಧನೆಗೆ ನೈಸರ್ಗಿಕವಾಗಿ ಸಂರಕ್ಷಿತ ಸ್ಥಳದ ಅವಶ್ಯಕತೆ ಇತ್ತು. ಇಂತಹ ಸ್ಥಳ ಹಂಪೆ ಎಂಬುದನ್ನು ಸಂಗಮ ವಂಶದ ಮೊದಲ ಅರಸು ಮೊದಲನೆಯ ಹರಿಹರನು ಗುರ್ತಿಸಿದನು.

ಉತ್ತರದಲ್ಲಿ ತುಂಬಿ ಹರಿಯುತಿದ್ದ ತುಂಗಭದ್ರಾ ನದಿ, ಸುತ್ತಲೂ ಹರಡಿರುವ ಎತ್ತರದ ಕಣ ಶಿಲೆಯ (Granite) ಶೈಲ ಮಾಲೆ ; ಇವು ನೈಸರ್ಗಿಕ ಕಂದಕ ಮತ್ತು ಕೋಟೆಯ ರಕ್ಷಣೆಗಳನ್ನು ನೀಡಿದವು. ಹೀಗೆ ಕಣಶಿಲೆಯು ಹಂಪೆಯಲ್ಲಿ ಸಾಮ್ರಾಜ್ಯ ಸ್ಥಾಪನೆಗೆ ಅಪ್ರತ್ಯಕ್ಷವಾಗಿ ಕಾರಣವಾಯಿತು. ಇದೇ ಶಿಲೆಯ ಇಲ್ಲಿಯ ಬಹು ಪಾಲು ಸಂಖ್ಯೆ ಸ್ಮಾರಕಗಳಿಗೆ (Monuments) ಮಾಧ್ಯಮವಾಯಿತು.

ಹಂಪೆಯಲ್ಲಿರುವ ಸ್ಮಾರಕಗಳ ವರ್ಗೀಕರಣ

ಹಂಪೆಯಲ್ಲಿರುವ ಸ್ಮಾರಕಗಳನ್ನು ಕಾಲಮಾನದ ದೃಷ್ಟಿಯಿಂದ ಎರಡು ವರ್ಗಗಳಲ್ಲಿ ವಿಂಗಡಿಸಬಹುದು. ಒಂದು ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಪೂರ್ವ ಸ್ಮಾರಕಗಳು, ಎರಡು ವಿಜಯನಗರ ಸಾಮ್ರಾಜ್ಯದ ಅವಧಿಯ ಸ್ಮಾರಕಗಳು. ಅಂದರೆ ಮೊದಲನೇ ವರ್ಗದ ಸ್ಮಾರಕಗಳು ಕ್ರಿ.ಶ.೧೩೩೬ ಕ್ಕಿಂತಲೂ ಪೂರ್ವದಲ್ಲಿ ನಿರ್ಮಿಸಲ್ಪಟ್ಟ ಕದಂಬ ನಾಗರ ಅಥವಾ ಕಳಿಂಗ ಶೈಲಿಯ ಸ್ಮಾರಕಗಳು. ಇವು ಪ್ರಮುಖವಾಗಿ ಹೇಮಕೂಟ ಬೆಟ್ಟದ ಮೇಲೆ ಇರುವ ರಚನೆಗಳು (Structures). ವಾಸ್ತು ಶಿಲ್ಪದ ದೃಷ್ಟಿಯಿಂದ ಅಂಥ ಮಹತ್ವದ ಕಟ್ಟಡಗಳಲ್ಲವಾದರೂ ಕರ್ನಾಟಕದಲ್ಲಿರುವ ಕೆಲವೇ ಕೆಲವು ಕಳಿಂಗ ಶೈಲಿ ಕಟ್ಟಡಗಳು ; ಆದ್ದರಿಂದಲೇ ಇವುಗಳನ್ನು ಗಮನಿಸಬೇಕಾಗುತ್ತದೆ. ಎರಡನೇ ವರ್ಗದ ರಚನೆಗಳು ಕರ್ನಾಟಕ ಅಷ್ಟೇ ಅಲ್ಲ. ಭಾರತದ ವಾಸ್ತುಶಿಲ್ಪಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ ವಿಜಯನಗರ ಶೈಲಿಗೆ ಸೇರಿದಂಥ ರಚನೆಗಳು. ಈ ಶೈಲಿಯ ರಚನೆಗಳು ಇಂದಿನ ಹಂಪೆಯ ತುಂಬ ಹರಡಿವೆ. ಆವುಗಳಲ್ಲಿ ವಿರೂಪಾಕ್ಷ ದೇವಾಲಯ, ಹಜಾರರಾಮ ದೇವಾಲಯ, ವಿಜಯವಿಠ್ಠಲ ದೇವಾಲಯ, ಮಹಾನವಮಿ

ದಿಬ್ಬ ಇತ್ಯಾದಿ ಸ್ಮಾರಕಗಳು ಪ್ರಮುಖ ರಚನೆಗಳು. ಉಗ್ರನರಸಿಂಹ (ಲಕ್ಷ್ಮಿನರಸಿಂಹ), ಕಡಲೆಕಾಳು ಗಣಪತಿ, ಸಾಸಿವೆಕಾಳು ಗಣಪತಿ, ಉದ್ದಾನ ವೀರಭದ್ರ ಮತ್ತು ಬಡವಿ ಲಿಂಗ ಇವುಗಳು ಪ್ರಮುಖ ಶಿಲ್ಪಗಳು.

ಮೂರು ಬಗೆಯ ಶಿಲೆಗಳು

ಈ ಎರಡೂ ಶೈಲಿಗಳ ರಚನೆಗಳಿಗೆ ಪ್ರಮುಖ ಶಿಲೆ ಕಣಶಿಲೆ (ಚಿತ್ರ-೧,೧೨, ಮತ್ತು ೨). ಅಪರೂಪವಾಗಿ ಒಡ್ಡು ಶಿಲೆಯನ್ನು(Dykerock) ಬಳಸಲಾಗಿದೆ. ಬಡವಿ ಲಿಂಗವನ್ನು ಒಡ್ಡು ಶಿಲೆಯಲ್ಲಿ ಕಡೆಯಲಾಗಿದೆ (ಚಿತ್ರ ೩). ಹಜಾರ ರಾಮದೇವಾ ಲಯದ ರಂಗ ಮಂಟಪದ ಮಧ್ಯದಲ್ಲಿ ನಿಲ್ಲಿಸಲಾಗಿರುವ ಕಪ್ಪು ಶಿಲೆಯ ಕಂಬಗಳನ್ನು ಒಡ್ಡು ಶಿಲೆಯಲ್ಲಿ ಕಡೆಯಲಾಗಿದೆ.

ಮಹಾನವಮಿ ದಿಬ್ಬದ ಮಧ್ಯಭಾಗದಲ್ಲಿಸೂಕ್ಷ್ಮ ಉಬ್ಬು ಶಿಲ್ಪಗಳಿಗಾಗಿ ಹಸಿರು ಮಿಶ್ರಿತ ಕಪ್ಪು ಬಣ್ಣದ ಶಿಲೆಯ ಫಿಲ್ಲೈಟ್ (Phyllite) ಬಳಸಲಾಗಿದೆ. ಹಾಗೆಯೇ ಇದೇ ಆವರಣದಲ್ಲಿರುವ ಕಲ್ಲಿನ ಪುಷ್ಕರಣಿಯನ್ನು ಕಪ್ಪು ಬಣ್ಣದ ಫಿಲೈಟಿನಲ್ಲಿ ಕಟ್ಟಲಾಗಿದೆ. ಉಗ್ರನರಸಿಂಹ, ಗಣಪತಿ ವಿಗ್ರಹಗಳೂ ಸೇರಿದಂತೆ ಎಲ್ಲಾ ದೇವಾಲಯಗಳ ರಚನೆಗೆ ಕಣಶಿಲೆಯನ್ನು ಬಳಸಲಾಗಿದೆ.

ಹಂಪಿ ದೇವಾಲಯಗಳ ಮಹಾದ್ವಾರಗಳ ಮೇಲೆ ಕಟ್ಟಲಾಗಿರುವ ವಿಮಾನಗಳು, ಕಮಲ ಮಹಲ್ ಮತ್ತು ವಿಜಯನಗರ ಶೈಲಿಯ ವಿಶಿಷ್ಟ ಶಿಲ್ಪಗಳಾದ ಗಾರೆ ಶಿಲ್ಪಗಳನ್ನು ಮಣ್ಣಿನ ಇಟ್ಟಿಗೆ ಮತ್ತು ಸುಣ್ಣದ ಗಚ್ಚಿನಲ್ಲಿ (Lime Mortar) ಕಟ್ಟಲಾಗಿದೆ (ಚಿತ್ರ ೪). ಈ ಗಚ್ಚನ್ನು ಸುಣ್ಣ ಮತ್ತು ಮರಳನ್ನು ಕೆಲ ಅಂಟಿನ ಪದಾರ್ಥಗಳೊಂದಿಗೆ ಮಿಶ್ರಣ ಮಾಡಿ ಗಾಣದಲ್ಲಿ ರುಬ್ಬಿ ಸಿದ್ಧಪಡಿಸಲಾಗುತ್ತಿತ್ತು. ಅನುಭವದ ಮೇಲೆ ಅವುಗಳ ಮಿಶ್ರಣ ಮತ್ತು ರುಬ್ಬುವ ಕಾಲವನ್ನು ನಿರ್ಧರಿಲಾಗುತ್ತಿತ್ತು. ತುಂಗಾಭದ್ರ ನದಿಯಲ್ಲಿ ಸೂಕ್ತವಾದ ಮರಳು ಮತ್ತು ಹಂಪಿಯ ಸುತ್ತ ಮುತ್ತಲ ಪ್ರದೇಶದಲ್ಲಿ ಸುಣ್ಣದ ಉಂಡೆ (Lime Kankar) ಸಿಗುತ್ತದೆ. ಇವುಗಳನ್ನು ಉಪಯೋಗಿಸಿ ತಮಗೆ ಬೇಕಾದ ಗಚ್ಚನ್ನು ಅಂದಿನ ಸ್ಥಪತಿಗಳು ಸ್ಥಳೀಯವಾಗಿ ಸಿದ್ಧಪಡಿಸಿಕೊಳ್ಳುತ್ತಿದ್ದರು.

ವಿಜಯನಗರದ ಅರಸರಗಿಂತ ಪೂರ್ವದಲ್ಲಿ ಕರ್ನಾಟಕವನ್ನಾಳಿದ ಹೊಯ್ಸಳರು ಮತ್ತು ಕಲ್ಯಾಣದ ಚಾಳುಕ್ಯರ ಕಾಲದ ರಚನೆಗಳ ನಿರ್ಮಾಣಕ್ಕೆ ಹೆಚ್ಚಾಗಿ ಬಳಪದ ಕಲ್ಲನ್ನೇ (Soapstone) ಬಳಸಲಾಗಿದೆ. ಬಳ್ಳಾರಿ ಜಿಲ್ಲೆಯ ಹಡಗಲಿ, ಮತ್ತು ಹರಪನ ಹಳ್ಳಿ ತಾಲ್ಲೂಕುಗಳಲ್ಲಿರುವ ಚಾಳುಕ್ಯರ ಹಲವು ದೇವಾಲಯಗಳು (ಬಾಗಳಿ, ನೀಲ ಗುಂದ, ಹಡಗಲಿ, ಕುರುವತ್ತಿ, ಇತ್ಯಾದಿ) ಬಳಪದ ಕಲ್ಲಿನಲ್ಲಿ ನಿರ್ಮಿತವಾದ ಶ್ರೇಷ್ಠ ಮಟ್ಟದ ಕಲಾಕೃತಿಗಳು. ಇವು ಬೃಹತ್ ರಚನೆಗಳಲ್ಲವಾದರೂ ಸೂಕ್ಷ್ಮ ಕೆತ್ತನೆಗೆ ಹೆಸರುವಾಸಿ.

ಸಂಗಮ ವಂಶದ ಅರಸರಿಗೂ ನಂತರ ಬಂದ ಇತರ ವಂಶದ ವಿಜಯನಗರದ ಅರಸರಿಗೂ ಬಹುಶಃ ತಮ್ಮ ಹಿಂದಿನ ವಂಶದ ಅರಸರ ಕಾಲದಲ್ಲಿ ಬೆಳೆದು ಬಂದಂಥ ಶೈಲಿಗಿಂತಲೂ ಭಿನ್ನವಾದ ಶೈಲಿಯಲ್ಲಿ ವಿಶಿಷ್ಟವಾದ ರಚನೆಗಳ ನಿರ್ಮಾಣದಲ್ಲಿ ಆಸಕ್ತಿ ಇದ್ದಂತೆ ಕಾಣುತ್ತದೆ. ಆದೂ ಅಲ್ಲದೆ ಸಂಗಮ ವಂಶದ ಅರಸರಿಗೆ ಬೃಹತ್ ರಚನೆಗಳನ್ನು ರಚಿಸಿ ತಮ್ಮ ವೈಶಿಷ್ಟ್ಯತೆಯನ್ನು ಮೆರೆಸುವಲ್ಲಿ ಐತಿಹಾಸಿಕ ಕಾರಣಗಳಿಂದಾಗಿ ಆಸಕ್ತಿ ಇತ್ತು. ದಕ್ಷಿಣ ಭಾರತದ (ತಮಿಳುನಾಡಿನ) ಸ್ಥಪತಿಗಳನ್ನು ಕರೆಸಿ. ಅವರಿಂದ ದ್ರಾವಿಡ ಶೈಲಿಗೆ ಪ್ರಾಮುಖ್ಯತೆಯನ್ನು ನೀಡಿ ದೇವಾಲಯಗಳನ್ನು ರಚಿಸಲಾಯಿತೆಂದು ಕೆಲ ಇತಿಹಾಸಕಾರರ ಅಭಿಮತ. ಈ ಮಾತು ಚರ್ಚಾಸ್ಪದವೆನಿಸಬಹುದು. ಆದರೆ ಈ ದ್ರಾವಿಡ ಶೈಲಿಯನ್ನು ಅಳವಡಿಸಿಕೊಂಡು ಬೃಹತ್ ರಚನೆಗಳ ನಿರ್ಮಾಣ ಮಾಡಲು ಭೂವೈಜ್ಞಾನಿಕ ಕಾರಣಗಳೇ ಮೂಲ ಎಂಬುದು ನಿರ್ವಿವಾದ.

ಭೂವೈಜ್ಞಾನಿಕ ಕಾರಣಗಳು

ಹಂಪೆಯ ಸುತ್ತುಮುತ್ತಲೂ ಹಾಗೂ ಸಮೀಪದಲ್ಲಿ ಬಳಪದ ಕಲ್ಲಿನ ನಿಕ್ಷೇಪಗಳಿಲ್ಲ. ಅತಿ ಸಮೀಪದ ಬಳಪದ ಕಲ್ಲಿನ ನಿಕ್ಷೇಪವೆಂದರೆ ನೀಲಗುಂದದ ನಿಕ್ಷೇಪ. ಇದು ಹಂಪೆಗೆ ಸುಮಾರು ೧೦೦ ಕಿ.ಮೀ ದೂರದಲ್ಲಿದೆ. ಅದೂ ಅಲ್ಲದೆ ಬಳಪದ ಕಲ್ಲಿನ ನಿಕ್ಷೇಪದ ಪರಿಮಾಣ (Quantity) ಅಲ್ಪ.

ಬಳಪದ ಕಲ್ಲನ್ನು ಗಣಿ ಮಾಡಿ ಹೊರತೆಗೆದು, ಅದರಲ್ಲಿ ಕೆತ್ತನೆಗೆ ಉಪಯುಕ್ತವಾಗಬಹುದಾದಂಥ, ನ್ಯೂನ್ಯತೆಗಳಿಲ್ಲದ (Deffect free) ದಿಮ್ಮಿಗಳನ್ನು (Blocks) ಆರಿಸಬೇಕಾಗುತ್ತದೆ. ಬಳಪದ ಕಲ್ಲಿನಲ್ಲಿ ಉಪಯುಕ್ತ ನ್ಯೂನತೆಗಳಿರುವ ಭಾಗ ಹೆಚ್ಚು. ಅದು ಅಲ್ಲದೆ ಬಳಪದ ಕಲ್ಲು ಅತಿ ಮೃದು ಮೆತ್ತನೆಯ ಶಿಲೆಯಾದುದುರಿಂದ ಅದರಲ್ಲಿರುವ ನೀರಿನ ಅಂಶವನ್ನು ಹೊರಹಾಕಬೇಕಾಗುತ್ತದೆ. ಇಲ್ಲವಾದರೆ ಕಟ್ಟಡ ಬೇಗ ಶಿಥಿಲಗೊಳ್ಳುತ್ತದೆ. ಅದ್ದರಿಂದ ಬೃಹತ್ ರಚನೆಗಳಿಗೆ ಬೇಕಾಗುವಷ್ಟು ಪ್ರಮಾಣದ ಕಲ್ಲು, ಈ ಶಿಲೆಯಲ್ಲಿ ಸಿಗುವದು ಕಷ್ಟ. ಹೀಗೆ ವಿಜಯನಗರದ ಕಾಲದ ಶಿಲ್ಪಿಗಳು ಮತ್ತು ಸ್ಥಪತಿಗಳು ತಮ್ಮ ಹಿಂದಿನ ಕಾಲದಲ್ಲಿ ಬಳಸಲಾದ ಶಿಲೆಯ ಗುಣಾವಗುಣಗಳನ್ನು ಅರಿತಿದ್ದರು.

ಅದರೆ, ಇದಕ್ಕೆ ಬದಲಾಗಿ ಹಂಪೆಯಲ್ಲಿಯೇ ಸಿಗುವ ಅಪಾರ ಪ್ರಮಾಣದ ಕಣ ಶಿಲೆಯನ್ನು ಈ ಸ್ಥಪತಿಗಳು ಸಹಜವಾಗಿಯೇ ಆರಿಸಿಕೊಂಡರು. ಕಣಶಿಲೆಯು ಬೃಹತ್ ರಚನೆಗಳಿಗೆ ಬೇಕಾಗುವ ದಿಮ್ಮಿಗಳನ್ನು ನೀಡಬಲ್ಲದು. ಹಂಪೆಯಲ್ಲಿ ಸಿಗುವ ಶಿಲೆ ಬೂದು (Grey Granite) ಬಣ್ಣದ ಮಧ್ಯಮ ಗಾತ್ರದ ಹರಳುಗಳನ್ನು (Medium grained) ಹೊಂದಿರುವ ಕಣ ಶಿಲೆ (Grey Granite). ಸಮನಾದ ಹರಳುಗಳು ಮತ್ತು ಬೂದು ಬಣ್ಣ, ಸ್ಥಪತಿಗಳನ್ನು ಆಕರ್ಷಿಸಿರಬೇಕು. ಅತಿ ಸೂಕ್ಷ್ಮ ಕೆತ್ತನೆಯ ರಚನೆಗಳನ್ನು (ತುಲನಾತ್ಮಕವಾಗಿ) ಈ ಶಿಲೆಯಲ್ಲಿ ನಿರ್ಮಿಸಲು ಸಾಧ್ಯವಾಗದಿದ್ದರೂ, ಸಮನಾದ ಹರಳು ಮತ್ತು ಕಂದು ಬಣ್ಣದಿಂದಾಗಿ ಈ ಶಿಲೆಯು ಬೃಹತ್, ಭವ್ಯ

ಹಾಗೂ ಕಲಾತ್ಮಕ ರಚನೆಗಳಿಗೆ ಸೂಕ್ತ ಎಂಬುದನ್ನು ಈ ಸ್ಥಪತಿಗಳು ಅರಿತಿದ್ದರು. ಅಲ್ಲದೆ, ಕಣ ಶಿಲೆ ಬಳಪದ ಶಿಲೆಗಿಂತ ತುಂಬಾ ಕಠಿಣ ಹಾಗೂ ಶಕ್ತಿಶಾಲಿ. ಈ ಬಗೆಯ ಕಾರಣಗಳಿಂದಾಗಿ ಸಹಜವಾಗಿಯೇ ಸ್ಥಪತಿಗಳು ಇಲ್ಲಿಯೇ ಲಭ್ಯವಿರುವ ಕಣ ಶಿಲೆಯನ್ನು ಸಾರ್ಥಕವಾಗಿ ಬಳಸಿದರು (ಚಿತ್ರ-೨).

ಶಿಲೆಗಳ ವಿವರಣೆ

ಈ ಕಣಶಿಲೆಯು ಮಧ್ಯಮ ಗಾತ್ರದ ಖನಿಜಗಳ ಹರಳುಗಳುಳ್ಳ (೦.೫ಮಿ.ಮೀ-೨೦ ಮಿ.ಮೀ)ಶಿಲೆ. ಈ ಶಿಲೆಯಲ್ಲಿ ಕ್ವಾಟ್ಸ್(Quartz) ಫೆಲ್‌ಸ್ಪಾರ್ (Felshpar) ಪ್ರಮುಖ ಖನಿಜಗಳು. ಬಯೋಟೈಟ್ (Biotite) ಮತ್ತು ಹಾರ್ನಬ್ಲೆಂಡ್ (Hornblende) ಕಡಿಮೆ ಪ್ರಮಾಣದಲ್ಲಿರುವ ಉಪ ಖನಿಜಗಳು. ಕಣ ಶಿಲೆಯು ಅಗ್ನಿಜನ್ಯ ಶಿಲೆ (Igneous rock). ಈ ಶಿಲೆಯು ಶಿಲಾಪಾಕವು (Magma) ಗಟ್ಟಿಗೊಳ್ಳು ವುದರಿಮದ ಜನಿಸುತ್ತದೆ. ಗಟ್ಟಿಗೊಳ್ಳುವ ಪ್ರಕ್ರಿಯೆಯಲ್ಲಿಯೇ ಈ ಶಿಲೆಯ ಖನಿಜಗಳು ಜನಿಸುವುದರಿಂದ ಒಂದಕ್ಕೊಂದುಸಹಜವಾಗಿಯೇ ಗಟ್ಟಿಯಾಗಿ ಬೆಸೆದುಕೊಂಡಿರುತ್ತವೆ.

ಹಂಪೆಯ ಸ್ಮಾರಕಗಳಲ್ಲಿ ತೀರ ಅಪರೂಪವಾಗಿ ಬಳಸಲಾದ ಶಿಲೆ ಡಾಲೋರೈಟ್ ಒಡ್ಡು ಶಿಲೆ (Dolerite dyke rock). ಇದು ಕಡಿಮೆ ಪ್ರಮಾಣದಲ್ಲಿ ಸಿಗುತ್ತದೆ. ಇದರ ಬಣ್ಣ ಕಪ್ಪು ಅಥವಾ ಹಸಿರು ಮಿಶ್ರಿತ ಕಪ್ಪು. ಇದು ಅತಿ ಸೂಕ್ಷ್ಮ ಕಣಗಳ ಶಿಲೆ. ಇದರಲ್ಲಿರುವ ಖನಿಜಗಳನ್ನು ಸಾಮಾನ್ಯವಾಗಿ ಬರಿಕಣ್ಣಿನಿಂದ ನೋಡಲು ಸಾಧ್ಯ ವಿಲ್ಲ. ಈ ಶಿಲೆಯ ಅತಿ ತೆಳುವಾದ ಸ್ಲೈಡನ್ನು ಸಿದ್ಧಪಡಿಸಿ, ಅ ಸ್ಲೈಡನ್ನು ವಿಶೇಷ ಬಗೆಯ ಸೂಕ್ಷ್ಮ ದರ್ಶಕದಲ್ಲಿ ನೋಡಿದಾಗ ಮಾತ್ರ ಇದರ ಖನಿಜಗಳನ್ನು ನೋಡಲು ಸಾಧ್ಯ. ಪೈರಾಕ್ಸೀನ್ ಗುಂಪಿಗೆ ಸೇರಿದ ಖನಿಜಗಳು ಮತ್ತು ಫೆಲ್‌ಸ್ಪಾರ್ ಖನಿಜಗಳು ಪ್ರಮುಖ ಖನಿಜಗಳು ಉಪಖನಿಜಗಳು. ಬಡವಿಲಿಂಗ ಮತ್ತು ಹಜಾರರಾಮ ದೇವಾಲಯದ ರಂಗಮಂಟಪ ಇವುಗಳನ್ನು ಕಡೆಯಲು ಡಾಲೊರೈಟ್ ಒಡ್ಡು ಶಿಲೆ ಯನ್ನು ಬಳಸಲಾಗಿದೆ. (ಚಿತ್ರ-೩).

ಶಿಲೆಯ ಶಿಥಿಲೀಕರಣ ಪ್ರಕ್ರಿಯೆ

ಯಾವುದೇ ಶಿಲೆಯು, ಎಷ್ಟೇ ಗಟ್ಟಿಯಾದರೂ ನೈಸರ್ಗಿಕ ನಿಯೋಗಿಗಳಾದ (Natural Agents) ಮಳೆ, ಬಿಸಿಲು, ಚಳಿ, ನೀರು ಮತ್ತು ಗಾಳಿಯ ಕ್ರಿಯೆಗಳಿಂದಾಗಿ ಕಾಲಾನುಕ್ರಮದಲ್ಲಿ ಶಿಥಿಲಗೊಳ್ಳುತ್ತದೆ. ಈ ನೈಸರ್ಗಿಕ ನಿಯೋಗಿಗಳ ಶಿಥಿಲೀಕರಣ ಕ್ರಿಯೆ (Weathering process) ಶಿಲೆಯ ಮೇಲೆ ಪರಿಣಾಮಗಳನ್ನು ಸಂಕ್ಷಿಪ್ತದಲ್ಲಿ ನೋಡೋಣ.

೧. ಶಿಲೆಯು ಒಂದು ಬಣ್ಣದಾಗಿದ್ದರೂ ಹೊರಮೈಮೇಲೆ ತಿಳಿ ಕೆಂಪು ಬಣ್ಣದ ಪೊರೆ (Layer) ಬರುತ್ತದೆ.ಶಿಲೆಯಲ್ಲಿರುವ ಕಬ್ಬಿಣಾಂಶವನ್ನು ಹೊಂದಿರುವ ಖನಿಜಗಳು ಶಿಥಿಲಗೊಳ್ಳುವುದರಿಂದ ಈ ಕೆಂಪು ಬಣ್ಣದ ಪೊರೆ ನೈಸರ್ಗಿಕ ಪೊರೆ ಕಟ್ಟಿಕೊಳ್ಳುತ್ತದೆ.

೨. ಶಿಲೆಯಲ್ಲಿರುವ ಛೇದಗಳು (Fractures) ಶೀಥಿಲೀಕರಣ ಕ್ರಿಯೆಯಿಂದ ದೊಡ್ಡದಾಗಿ ಶಿಲೆಯನ್ನು ಅಭದ್ರಗೊಳಿಸುತ್ತದೆ.

೩. ಉಷ್ಣಾಂಶದ ವ್ಯತ್ಯಾಸದಿಂದ ಶಿಲೆಯು ಸಿಪ್ಪೆಯಂತೆ ಸುಲಿಯಲ್ಪಡುತ್ತದೆ (Exfoliation).

೪. ಧೂಳು ಸೇರಿಕೊಂಡು ಶಿಲೆಯ ನೈಸರ್ಗಿಕ ಬಣ್ಣ ಮಸಕಾಗುತ್ತದೆ.

ಈ ಮೇಲ್ಕಾಣಿಸಿದ ಪರಿಣಾಮಗಳನ್ನು ಗುಡ್ಡಗಳಲ್ಲಿರುವ ಶಿಲೆಯ ಮೇಲೆ ಕಂಡಂತೆ, ಈ ಶಿಲೆಗಳನ್ನು ಬಳಸಿದ ಶಿಲ್ಪಗಳ ಮೇಲೂ ಕಾಣಬಹುದು. ದೇವಾಲಯಗಳ ಮೇಲೆ ಮತ್ತು ಶಿಲ್ಪಗಳ ಮೇಲೆ ನೈಸರ್ಗಿಕ ನಿಯೋಗಿಗಳಿಗಿಂತಲೂ ಮಾನವನ ಕೈಗಳು ಮಾಡುವ ದುಷ್ಪರಿಣಾಮಗಳು ಅತ್ಯಂತ ಘೋರ ಹಾಗೂ ಗಂಭೀರ ಎಂಬುದಕ್ಕೆ ಹಂಪೆಯಲ್ಲಿ ಭಗ್ನಗೊಂಡಿರುವ ಮತ್ತು ವಿರೂಪಗೊಂಡಿರುವ ಸ್ಮಾರಕಗಳೇ ಸಾಕ್ಷಿ.

ಸಂರಕ್ಷಣಾ ಕ್ರಮಗಳು

ಯಾವುದೇ ಐತಿಹಾಸಿ ಸ್ಮಾರಕಗಳನ್ನು ನಮ್ಮ ಐತಿಹಾಸಿಕ ಪರಂಪರೆಯನ್ನು ಉಳಿಸಿಕೊಳ್ಳುವದಕ್ಕಾಗಿ ಸಂರಕ್ಷಿಸ ಬೇಕಾಗುತ್ತದೆ. ಹೀಗೆ ಸ್ಮಾರಕಗಳನ್ನು ಸಂರಕ್ಷಿಸುವಾಗ, ಆ ಸ್ಮಾರಕದ ನೈಸರ್ಗಿಕ ರೂಪ ಮತ್ತು ಬಣ್ಣ ಅಂದಗಡೆದಂತೆ ನೋಡಿಕೊಳ್ಳಬೇಕು. ಇದೇ ಸಂರಕ್ಷಣಾ ಕ್ರಮದ ಮೂಲತತ್ವ. ಈ ತತ್ವಕ್ಕೆ ಅನುಗುಣವಾಗಿ ಕೆಲವು ಸಾಮಾನ್ಯ ಕ್ರಮಗಳನ್ನು ಈ ಕೆಳಗೆ ನೀಡಲಾಗಿದೆ.

೧. ಸ್ಮಾರಕಗಳ ಮೇಲೆ ಕೂತಿರುವ ಧೂಳನ್ನು ಒಣ ಆದರೆ ಮೃದುವಾದ ಬಟ್ಟೆಯಿಂದ ಒರೆಸಬೇಕು.

೨. ಅಪರೂಪಕ್ಕೆ ನೀರು ಮತ್ತು ಸಾಬೂನಿನಿಂದ ತೊಳೆಯಬಹುದು. ಆದರೆ ತೊಳೆದ ನಂತರ ತೇವಾಂಶವಿಲ್ಲದಂತೆ ಒರೆಸಬೇಕು.

೩. ತುಕ್ಕು ಹತ್ತಿದಂತೆ ಕಾಣುವ ಪೊರೆಯನ್ನು ದುರ್ಬಲ ಆಮ್ಲದಿಂದ (ಉದಾಹರಣೆ ೨% ಹೈಡ್ರೋಪ್ಲೋರಿಕ್ ಆಮ್ಲ) ತೊಳೆದು ತೆಗೆಯಬಹುದು. ನಂತರ ಪುನಃ ನೀರಿನಿಂದ ತೊಳೆದು ಆಮ್ಲದಂಶ ಸ್ಮಾರಕದ ಮೇಲೆ ಉಳಿಯದಂತೆ ಒರೆಸಬೇಕು.

೪. ದೊಡ್ಡ ಗಾತ್ರದ ಸ್ಮಾರಕದ ಮೇಲೆ, ತುಂಬಾ ಗಟ್ಟಿಯಾದ ಪೊರೆ ಅಥವಾ ಧೂಳು ಕೂತಿದ್ದರೆ ಅದನ್ನು ಮರಳನ್ನು ಬ್ಲಾಸ್ಟ ಮಾಡಿ (Sand blasting) ಅಥವಾ ಒತ್ತಡದಿಂದ ಗಾಳಿಯನ್ನು ಕೊಳವೆ ಮೂಲಕ ಹಾಯಿಸುವುದರಿಂದ ಸ್ವಚ್ಛಗೊಳಿಸಬಹುದು.

೫. ಮಳೆಗಾಲಕ್ಕಿಂತ ಪೂರ್ವದಲ್ಲಿ ಅಥವಾ ಮಸ್ತಕಾಭಿಷೇಕಕ್ಕಿಂತ ಪೂರ್ವದಲ್ಲಿ ಲಿಕ್ವಿಡ್ ಪ್ಯಾರಾಫಿನ್ (Liquid Paraffin) ಲೇಪನ ಮಾಡಬೇಕು. ಆದರೆ ಈ ಪ್ಯಾರಾಫಿನ್ ಲೇಪನಕ್ಕಿಂತ ಮುಂಚೆ ಶಿಲ್ಪದೊಳಗೆ ತೇವಾಂಶವಿರಕೂಡದು.

೬. ಸ್ಮಾರಕಗಳು ಅಥವಾ ಶಿಲ್ಪಗಳು ತುಂಡುಗಳಾಗಿ ಒಡೆದು ಹೋದರೆ ತುಂಡುಗಳನ್ನು ಕೆಲ ವಿಶೇಷ ಬಗೆಯ ರೆಸಿನ್ ಮತ್ತು ಹಾರ್ಡ್‌ನರ್‌ಗಳನ್ನು ಬಳಸಿ ಜೋಡಿಸಿ ಪುನರ್ ರಚಿಸಬೇಕು.

೭. ನಮ್ಮ ಜನರಲ್ಲಿ ಶಿಲ್ಪಗಳಿಗೆ ಮತ್ತು ದೇವಾಲಯಗಳ ಕಂಬಗಳಿಗೆ ಎಣ್ಣೆ ಸುರಿವ ಕೆಟ್ಟ ಪದ್ಧತಿ ಇದೆ. ಇದರಿಂದ ಕೆಲವೇ ವರ್ಷಗಳಲ್ಲಿ ಶಿಲ್ಪದ ಮೇಲೆ ಕಪ್ಪು ಮೇಣದಂಥ ಜಿಡ್ಡಿನ ದಪ್ಪನೆಯ ಪೊರೆ ಬೆಳೆಯುತ್ತದೆ. ಕಲೆ ಕಾಣದೆ, ಅಸಹ್ಯಕರವಾಗಿ ಕಾಣುವ ಒಂದು ಕಪ್ಪು ಮುದ್ದೆಯಂತೆ ಕಾಣುತ್ತದೆ ಸುಂದರ ಶಿಲ್ಪ. ಈ ಪದ್ಧತಿಯನ್ನು ಜನರು ವರ್ಜಿಸಬೇಕು. ಅವಶ್ಯವೆನಿಸಿದರೆ ಕಾನೂನಿನ ರೀತಿ ಕ್ರಮಕೈಗೊಳ್ಳಬೇಕು.

ಕೊನೆಯಲ್ಲಿ ಒಂದು ಮಾತು. ನಾನು ಮೇಲೆ ಹೇಳಿದ ಸಂರಕ್ಷಣಾ ಕ್ರಮಗಳೆಲ್ಲಾ ಸರ್ಕಾರಿ ಇಲಾಖೆ ಅಥವಾ ಒಂದು ಸಂಬಂಧಪಟ್ಟ ಸಂಸ್ಥೆ ತೆಗೆದುಕೊಳ್ಳಬಹುದಾದ ಕ್ರಮಗಳು. ಇದಕ್ಕಿಂತಲೂ ದೊಡ್ಡ ಜವಾಬ್ದಾರಿ ಸಾಮಾನ್ಯ ಜನರ ಮೇಲೆ ಇದೆ. ಸ್ಮಾರಕ ಗಳ ಮೇಲೆ ಹೆಸರನ್ನು ಕೆತ್ತುವದು, ಬಣ್ಣ ಹಚ್ಚುವದು, ತಾರೀಖುಗಳನ್ನು ಕೆತ್ತುವದು ಇತ್ಯಾದಿ ವಿರೂಪಗಳಿಸುವ ಕೆಲಸಗಳನ್ನು ನಮ್ಮ ಜನ ತಿಳಿದೋ ತಿಳಿಯದೆಯೋ ಮಾಡುತ್ತಾರೆ. ಇಂಥ ಕೆಲಸಗಳಿಂದ ನಮ್ಮ ಸ್ಮಾರಕಗಳಿಗೆ ಅಪಾರ ಹಾಗೂ ಪರಿಹರಿಸ ಲಾಗದಂಥ ಹಾನಿ ಉಂಟಗುತ್ತದೆ. ಈ ವಿರೂಪಗೊಳಿಸುವ ದುಷ್ಟ ಕೆಲಸಗಳಿಗೆ ನಾವು ಎಷ್ಟು ಬೇಗ ಪೂರ್ಣ ವಿರಾಮ ಹಾಕುತ್ತೇವೆಯೋ ಅಷ್ಟು ಒಳ್ಳೆಯದು. ಹಂಪೆಯ ಸ್ಮಾರಕಗಳಿಗೂ ಈ ಮಾತು ಅನ್ವಯವಾಗುತ್ತದೆ. ಹಲವಾರು ಚದುರ ಕಿ.ಲೋ ಮೀಟರು ಗಳಷ್ಟು ವಿಸ್ತಾರದವಾದ ಪ್ರದೇಶದಲ್ಲಿರುವ ಹಂಪೆಯ ಸ್ಮಾರಕಗಳು ನಮ್ಮೆಲ್ಲರ ಅಮೂಲ್ಯ ಆಸ್ತಿ. ಇಲ್ಲಿಯ ಸ್ಮಾರಕಗಳು ಕೇವಲ ನಮ್ಮ ಹೆಮ್ಮೆಯ ಆಸ್ತಿಯಲ್ಲ. ಇಡೀ ಮಾನವ ಜನಾಂಗವೇ ಹೆಮ್ಮೆ ಪಡಬಹುದಾದಂಥ ಕಲಾ ಪರಂಪರೆ. ಆದರೆ ಸಂರಕ್ಷಣೆ ನಮ್ಮೆಲ್ಲರ ಹೊಣೆ. ಈ ಅರಿವು ಶ್ರೀಸಾಮಾನ್ಯನಲ್ಲಿ ಮೂಡಿಬರಲಿ ಎಂದು ಹಾರೈಸುತ್ತೇನೆ.

ಛಾಯಾಚಿತ್ರಗಳು

ಚಿತ್ರ-೧ : ಹಂಪೆಯಲ್ಲಿರುವ ಅನಂತ ನಿಕ್ಷೇಪದಂತಿರುವ ಬೂದು ಬಣ್ಣದ ಕಣ ಶಿಲೆಯ ಹೆಬ್ಬಂಡೆ ಅಕ್ಕ-ತಂಗಿಯರ ಗುಂಡುಗಳು.

ಚಿತ್ರ-೧ಎ : ಹೊರಮೈಮೇಲೆ ಕೆಂಪು ಪೊರೆಯನ್ನು ಹೊಂದಿರುವ ಕಂದು ಬಣ್ಣದ ಕಣ ಶಿಲೆಯ ನಿಜವಾದ ಬಣ್ಣವನ್ನು ಗುಂಡುಕಲ್ಲನ್ನು ಒಡೆದಾಗ ಕಾಣಬಹುದು. ಮ್ಯುಜಿಯಂ ಹಿಂಬದಿಯ ಪ್ರದೇಶದಲ್ಲಿ ಒಡೆಯಲಾದ ಕಂದು ಬಣ್ಣದ ಗುಂಡುಗಳು.

ಚಿತ್ರ-೨ : ಬೂದು ಬಣ್ಣದ ಕಣ ಶಿಲೆಯಲ್ಲಿ ಕಡೆಯಲಾದ ಸಾಸಿವೆ ಕಾಳು ಗಣಪನ ವಿಗ್ರಹ.

ಚಿತ್ರ-೩ : ತೀರ ಕಡಿಮೆ ಪ್ರಮಾಣದಲ್ಲಿ ಬಳಸಲಾದ ಡಾಲೋರೈಟ್ ಒಡ್ಡು ಶಿಲೆಯಲ್ಲಿ ಕಡೆಯಲಾದ ವಿಗ್ರಹ.

ಚಿತ್ರ-೪ : ಸುಣ್ಣದ ಗಚ್ಚಿನಿಂದ ನಿರ್ಮಿಸಲ್ಪಟ್ಟ ಕಮಾನೀಯ ಕಮಲಮಹಲ.


ಚಿತ್ರ-೫ : ಬಿಸಿಲು ಮತ್ತು ಮಳೆ ನೀರಿನ ನಗ್ನಿಕರಣ ಕ್ರಿಯೆಗೊಳಪಟ್ಟು ಛಿದ್ರಗೊಂಡಿರುವ ದೇವಾಲಯದ ಗೋಡೆಯ ಸೈಜುಗಲ್ಲುಗಳು. ಸ್ಥಳ : ಚಂದ್ರಶೇಖರ ದೇವಾಲಯ.



ಅನಂತ ನಿಕ್ಷೇಪದಂತಿರುವ ಬೂದು ಬಣ್ಣದ ಕಣಶಿಲೆಯ ಹೆಬ್ಬಂಡೆ, ಅಕ್ಕ ತಂಗಿಯರ ಗುಂಡುಗಳು, ಹಂಪಿ (೧)




ಹೊರ ಮೈಮೇಲೆ ಕೆಂಪು ಪೊರೆಯನ್ನು ಹೊಂದಿರುವ ಕಂದು ಬಣ್ಣದ ಕಣ ಶಿಲೆ. (೧ ಎ)




ಸಾಸಿವೆ ಕಾಳು ಗಣೇಶ, ಹಂಪಿ
ಬೂದು ಬಣ್ಣದ ಕಣ ಶಿಲೆ (೨)



ಬಡವಿ ಲಿಂಗ, ಹಂಪಿ
ಡಾಲೋರೈಡ್ ವಡ್ಡು ಶಿಲೆ. (೩)



ಕಮಲಮಹಲ್, ಹಂಪಿ
ಸುಣ್ಣದ ಗಚ್ಚಿನಿಂದ ನಿರ್ಮಿತವಾಗಿದೆ. (೪)



ಚಂದ್ರಶೇಖರ ದೇವಾಲಯದ ಗೋಡೆ ಕಲ್ಲುಗಳು, ಬಿಸಿಲು ಮಳೆಯಿಂದ ಹಾನಿಗೊಳಗಾಗಿದೆ. (೫)

೧೮. ಶರಾವತಿ ನದಿ ದಂಡೆಯಲ್ಲೊಂದು ವಿಜಯನಗರ ವಾಸ್ತು ಶೈಲಿಯ ಉಮಾಮಹೇಶ್ವರ ದೇವಾಲಯ

ಜಯದೇವಪ್ಪ ಜೈನಕೇರಿ

ಶಿವಮೊಗ್ಗದಿಂದ ಸುಮಾರು ೭೨ ಕಿ.ಮೀ ದೂರದಲ್ಲಿರುವ ಹೊಸನಗರ ತಾಲೂಕು ಕೇಂದ್ರ ದಿಂದ ನಗರ ರಸ್ತೆಯಲ್ಲಿರುವ ಜಯನಗರದಿಂದ ೩ ಕಿ.ಮೀ.ದೂರದಲ್ಲಿರುವ ಸಾಲಗೇರಿ ಗ್ರಾಮದಲ್ಲಿಶರಾವತಿ ನದಿ ದಂಡೆಯಲ್ಲಿ ಒಂದು ಸುಂದರ ದೇವಾಲಯವಿದೆ. ಸುಮಾರು ೧೨ ಅಡಿ ಅಗಲ ಮತ್ತು ೨೫ ಅಡಿ ಉದ್ದವಿರುವ ದೇಗುಲ ಪೂರ್ವಾಭಿ ಮುಖವಾಗಿದೆ. ಉತ್ತರಾಭಿಮುಖವಾಗಿ ಹರಿಯುವ ಶರಾವತಿ ನದಿ ದಂಡೆಯಲ್ಲಿ ಉಮಾ ಮಹೇಶ್ವರ ದೇವಾಲಯವಿದೆ. ಮುಖ ಮಂಟಪ, ಅಂತರಾಳ ಗರ್ಭಗುಡಿ ಗಳಿಂದ ಕೂಡಿದೆ. ಮುಖ ಮಂಟಪದ ಮಹಾದ್ವಾರದ ಮುಂದೆ ಎರಡು ಕಲಾತ್ಮಕ ಸ್ತಂಭಗಳು ಮೇಲ್ಭಾಗದಲ್ಲಿ ನಾಲ್ಕು ಅಡಿ ಎತ್ತರದಲ್ಲಿವೆ. ಕೆಳದಿ ಅರಸರ ಕಾಲದಲ್ಲಿ ನಿರ್ಮಿಸಲಾಗಿರುವ ಈ ಉಮಾಮಹೇಶ್ವರ ದೇವಾಲಯ ಮಲೆನಾಡಿನಲ್ಲೇ ಅಪೂರ್ವ ವಾದ ಶಿಲ್ಪ ಕಲೆಯಿಂದ ಕೂಡಿದ್ದರೂ ಅಷ್ಟಾಗಿ ಗಮನ ಸೆಳೆಯದಿರುವುದು ಅಶ್ಚರ್ಯ ಉಂಟು ಮಾಡುತ್ತದೆ. ಮುಖ ಮಂಟಪದ ಭುವನೇಶ್ವರಿಯು ಅತ್ಯಂತ ಕಲಾತ್ಮಕ ವಾಗಿ ಕುಸುರಿ ಕೆತ್ತನೆಗಳಿಂದ ಕೂಡಿದೆ. ಸುತ್ತಲೂ ಕಮಲದ ಹೂವಿನ ಕೆತ್ತನೆಗಳು; ಒಳಸುತ್ತಿನಲ್ಲಿ ಅಷ್ಟದಿಕ್ಪಾಲಕರ ಸುಂದರ ಮೂರ್ತಿಗಳಿವೆ. ಭುವನೇಶ್ವರಿ ಮಧ್ಯದಲ್ಲಿ ಕೆಳಮುಖವಾಗಿರುವ ಹೂವಿನ ಮೊಗ್ಗಿನ ಆಕಾರದ ಶಿಲ್ಪವಿದೆ. ಚೌಕಾಕಾರದ ಚಪ್ಪಡಿ ಗಳಿಂದ ನಿರ್ಮಿತವಾಗಿದೆ. ಮಹಾದ್ವಾರದ ಎರಡೂ ಪಕ್ಕಗಳಲ್ಲಿ ಸುಂದರ ಶೈವ ದ್ವಾರಪಾಲಕರ ಮೂರ್ತಿಗಳು ಸುಮಾರು ೩ ಅಡಿ ಎತ್ತರವಾಗಿವೆ. ಪ್ರವೇಶದ್ವಾರದ ಪಕ್ಕದಲ್ಲಿ ಮತ್ತು ಮೇಲ್ಭಾಗದ ಲಲಾಟದಲ್ಲಿ ಮೂರ್ತಿಗಳು ಮುತ್ತಿನ ತೆನೆಯ ಕೆತ್ತನೆ ಗಳೂ ಇವೆ. ಮಂಟಪದ ಮೂಲೆಯಸ್ತಂಭದ ಎರಡೂ ಪಕ್ಕಗಳಲ್ಲಿ ಸುಮಾರು ಎರಡುವರೆ ಅಡಿ ಎತ್ತರದ ಜಗಲಿಯ ಮೇಲೆ ೬ ಅಡಿ ಎತ್ತರದ ಹಿಂಗಾಲುಗಳ ಮೇಲೆ ನಿಂತಿರುವ ಸಿಂಹಗಳ (ಯಾಳಿ) ಕಲಾತ್ಮಕ ವಿಗ್ರಹಗಳಿವೆ.

ದೇವಾಲಯದ ಸುತ್ತ ಇರುವ ೯ ಸ್ತಂಭಗಳ ಮೇಲೆಯೂ ಇಂತಹವೇ ನಿಂತ ಭಂಗಿಯ ೧೨ ಸಿಂಹಗಳ (ಯಾಳಿ) ಕೆತ್ತನೆಗಳಿವೆ. ದೇವಾಲಯದ ದಕ್ಷಿಣಕ್ಕೆ ಬಲಭಾಗ ದಿಂದ ಪ್ರಾರಂಭಿಸಿ ದಶಾವತಾರ ಕೆತ್ತನೆಯ ಮೂರ್ತಿಗಳನ್ನು ಕ್ರಮವಾಗಿ ಕೆತ್ತಲಾಗಿದೆ. ಮೊದಲ ಅಂಕಣದಲ್ಲಿ ಸುಮಾರು ೩ ಅಡಿ ಎತ್ತರದ ಮತ್ಸ್ಯ ಮತ್ತು ಕೂರ್ಮಾವತಾರದ

ಶಿಲ್ಪಗಳಿವೆ. ಈ ಶಿಲ್ಪಗಳ ಮೇಲೆ ಕಲಾತ್ಮಕ ಕೆತ್ತನೆಯ ತೋರಣಗಳಿವೆ. ಎರಡನೇ ಹಂತದಲ್ಲಿ ಸುಮಾರು ೬ ಅಡಿ ಎತ್ತರದ ಶಿಲಾ ಫಲಕದ ಮೇಲೆ ಕೆತ್ತಿರುವ ಸುಮಾರು ನಾಲ್ಕು ವರೆ ಅಡಿ ಎತ್ತರದ ವರಾಹ ಮೂರ್ತಿ ಇದೆ. ಮೂರ್ತಿಯ ಸುತ್ತ ಕೆತ್ತನೆಯ ಕಲಾತ್ಮಕ ಬಳ್ಳಿ ಪ್ರಭಾವಳಿ ಇದೆ. ಬಲಭಾಗದಲ್ಲಿ ಕೊನೆಯ ಪಟ್ಟಿಕೆ ಯಲ್ಲಿ ನಿಂತಿರುವ ಭಂಗಿಯ ನರಸಿಂಹ ವಿಗ್ರಹ ಅಂಜಲಿಬದ್ಧವಾಗಿದೆ. ಸುತ್ತಲೂ ಪ್ರಭಾವಳಿ ಇದೆ.

ದೇವಾಲಯದ ಹಿಂದಿನ ಗೋಡೆ ಅಂದರೆ ಪಶ್ಚಿಮ ದಿಕ್ಕಿನ ಎರಡೂ ಮೂಲೆಗಳಲ್ಲಿ ಹಿಂಗಾಲುಗಳ ಮೇಲೆ ನಿಂತಿರುವ ಭಂಗಿಯ ಸಿಂಹಗಳಿವೆ. ನಂತರ ಕ್ರಮವಾಗಿ ತಮ್ಮ ಆಯುಧ ಹಿಡಿದಿರುವ ವಾಮನ ಮತ್ತು ಪರಶುರಾಮರ ನಾಲ್ಕು ವರೆ ಅಡಿ ಎತ್ತರದ ಮೂರ್ತಿಗಳಿವೆ. ಮಧ್ಯದ ಸ್ತಂಭದಲ್ಲಿ ವಾಮನ ಮತ್ತು ಪರಶುರಾಮರ ಕಡೆಗೆ ಮುಖ ಮಾಡಿರುವ ಸುಮಾರು ೪ ಅಡಿ ಎತ್ತರದ ಸ್ತ್ರೀ ವಿಗ್ರಹಗಳು ನೃತ್ಯ ಭಂಗಿಯಲ್ಲಿವೆ. ದೇವಾಲಯ ಎಡಭಾಗದ ಅಂದರೆ ಉತ್ತರ ದಿಕ್ಕಿನಲ್ಲಿ ಮೇಲೆ ಹೇಳಿರುವಂತಹ ಶ್ರೀರಾಮ ಮತ್ತು ಶ್ರೀ ಕೃಷ್ಣಾವತಾರ ಮೂರ್ತಿಗಳೂ ಮಧ್ಯದಲ್ಲಿ ಸಿಂಹವೂ ಇದೆ. ನಂತರ ಕ್ರಮವಾಗಿ ಬುದ್ಧನ ನಗ್ನ ಮೂರ್ತಿಯೂ ಕೊನೆಯಲ್ಲಿ ಕಲ್ಕಿ ಮೂರ್ತಿಯು ಸುಮಾರು ೩ ಅಡಿ ಎತ್ತರವಾಗಿದೆ. ಒಟ್ಟು ದೇವಾಲಯದ ಸುತ್ತ ದಶಾವತಾರ ಶಿಲ್ಪ ಗಳಿವೆ. ಮೇಲ್ಭಾಗದಲ್ಲಿ ಶಿಲೆಯಲ್ಲಿ ಕೆತ್ತಿರುವ ಮುಂಚಾಚಿದ ಭಾಗಗಳೂ ಕಮಲದ ಮೊಗ್ಗು ಮಾದರಿಯ ಭೋದಿಗೆಗಳು ಸುತ್ತಲೂ ಇವೆ. ಮೇಲ್ಭಾವಣಿ ಶಿಲಾಮಯ ವಾಗಿದ್ದರೂ ಇತ್ತೀಚೆಗೆ ಮಂಗಳೂರು ಹೆಂಚು ಹೊದಿಸಿ ರಕ್ಷಣೆ ನೀಡಿದ್ದಾರೆ.

ಸುಮಾರು ೩ ಅಡಿ ಎತ್ತರದ ಅಧಿಷ್ಠಾನದ ಮೇಲಿರುವ ದೇವಾಲಯ ಚಿಕ್ಕದಾದರೂ ವಿಜಯನಗರ ವಾಸ್ತು ಶೈಲಿಯ ಶ್ರೇಷ್ಠ ಕೆತ್ತನೆಯ ಅಪರೂಪದ ಉಮಾ ಮಹೇಶ್ವರ ದೇವಾಲಯ ನೋಡುಗರ ಗಮನ ಸೆಳೆಯುತ್ತದೆ. ದ್ವಾರದ ಒಳಗೆ ಅಂತರಾಳದ ಬಲಭಾಗದಲ್ಲಿ ಗಣಪತಿ ಮೂರ್ತಿಯೂ ಎಡಭಾಗದಲ್ಲಿ ಉಮಾ (ಪಾರ್ವತಿ) ಮೂರ್ತಿ ಇವೆ. ಗರ್ಭ ಗುಡಿಯಲ್ಲಿ ಸುಂದರವಾದ ಶಿವಲಿಂಗವಿದೆ. ಗರ್ಭಗುಡಿಯ ಭುವನೇಶ್ವರಿ ಯಲ್ಲಿ ಕಮಲದ ಕೆತ್ತನೆ ಇದೆ. ಕೆಳದಿ ಅರಸರ ಕಾಲದಲ್ಲಿ ನಿರ್ಮಿತವಾದ ಉಮಾ ಮಹೇಶ್ವರ ದೇವಾಲಯದ ಸುತ್ತ ಇದ್ದ ಪ್ರಾಚೀನ ಕಟ್ಟಡವೆಲ್ಲ ನಾಶವಾಗಿದೆ. ಕೆಲವು ಪಳೆಯುಳಿಕೆಗಳು ಅಲ್ಲಲ್ಲಿ ಚೆಲ್ಲಾಪಿಲ್ಲಿಯಾಗಿಬಿದ್ದಿವೆ. ದೇವಾಲಯದ ಮುಂಭಾಗದಲ್ಲಿ ಇತ್ತೀಚಿನ ನಿರ್ಮಾಣದ ಮಂಟಪವಿದೆ. ಇದರಲ್ಲಿ ಒಂದು ಕಪ್ಪು ಅಸಹಜ ಕೆತ್ತನೆಯ ಬಸವಣ್ಣನ ವಿಗ್ರಹವಿದೆ.

ಈ ರೀತಿಯ ದೇವಾಲಯ (ಸಿಂಹ ಶಿಲ್ಪಗಳ ಮಂಟಪವಿರುವ) ಕನಕಾಚಲ ಗಂಗಾವತಿ ಸಮೀಪ ಕನಕಗಿರಿಯಲ್ಲಿದೆ ಮತ್ತು ಶೃಂಗೇರಿ ಶಾರದಾ ದೇವಸ್ಥಾನದಲ್ಲಿ ರುವ ಮಂಟಪದಲ್ಲಿ ಸಿಂಹಗಳು ಹಿಂಗಾಲಿನ ಮೇಲೆ ನಿಂತಿರುವಂತೆ ನಿರ್ಮಿಸಿರುವ ಮಂಟಪವಿದೆ. ಕವಲೆದುರ್ಗ ಕೋಟೆಯಲ್ಲಿರುವ ಕಾಶಿ ವಿಶ್ವನಾಥ ದೇವಾಲಯದ ಮುಂಭಾಗದ ಮೂಲೆಯಲ್ಲಿ ಸಹ ಇದೇ ರೀತಿಯ ೨ ಸಿಂಹ ಯಾಳಿಗಳ ಮೂರ್ತಿಗಳು


ಸುಮಾರು ಎರಡುವರೆ ಅಡಿ ಎತ್ತರವಾಗಿವೆ. ಆದರೆ ಈ ರೀತಿಯ ಸಿಂಹಗಳನ್ನು ನಿರ್ಮಿಸಿ ದಶಾವತಾರ ಮೂರ್ತಿಗಳನ್ನು ಹೊರಗೋಡೆಯಲ್ಲಿ ಕೆತ್ತಿರುವ ಅಪರೂಪದ ಉಮಾ ಮಹೇಶ್ವರ ದೇವಾಲಯ ಹರಿಹರರಲ್ಲಿ ಭೇಧವಿಲ್ಲವೆಂದು ಹೇಳುವ ಮಾದರಿ ದೇವಾಲಯ ಎನ್ನಬಹುದು.

ಈ ದೇವಾಲಯ ಯಾರಿಂದ ಯಾವ ಕಾಲದಲ್ಲಿ ನಿರ್ಮಾಣವಾಯಿತೆಂಬ ದಾಖಲೆಗಳಾಗಲಿ, ಶಾಸನವಾಗಲಿ ಇದುವರೆಗೆ ದೊರಕಿಲ್ಲ. ಆದರೆ ಇತಿಹಾಸ ದರ್ಶನ ಸಂಪುಟ ೧೮-೨೦೦೩ ಪುಟ೨೫೦ರಲ್ಲಿ ಕೆಳದಿ ಗುಂಡಾಜೋಯಿಸರು ಉಲ್ಲೇಖಿಸಿರು ವಂತೆ ಕ್ರಿ.ಶ. ೧೭೫೮ರ ಈಶ್ವರ ಸಂವತ್ಸರದಲ್ಲಿ ಶೃಂಗೇರಿಯ ಅಂದಿನ ೨೮ನೇ ಜಗದ್ಗುರು ಅಭಿನವ ಸಚ್ಚಿದಾನಂದ ಭಾರತಿ ಸ್ವಾಮಿಗಳು ಮತ್ತು ಉಮಾಮಹೇಶ್ವರ ದೇವಾಲಯದಿಂದ ೬ ಕಿ.ಮೀ ದೂರದಲ್ಲಿರುವ ಶ್ರೀ ರಾಮಚಂದ್ರಾಪುರ ಮಠದ ೨೮ನೇ ಶ್ರೀರಾಘವೇಶ್ವರ ಭಾರತೀ ಶ್ರೀ ಪಾದಂಗಳವರು ಶರಾವತಿ ನದಿ ದಂಡೆಯಲ್ಲಿರುವ ಈಶ್ವರ ದೇವಾಲಯದಲ್ಲಿ ಪರಸ್ಪರ ಭೇಟ್ಟಿಯಾಗಿದ್ದು ಗುರುಪೀಠಗಳ ಸಮಾಗಮ ದಾಖಲೆ ಚರಿತ್ರಾರ್ಹವಾಗಿದ್ದು, ಈ ಪುರಾತನ ಉಮಾಪತಿ ದೇವಾಲಯ ಅಪೂರ್ವ ದಶಾವತಾರವನ್ನೊಳಗೊಂಡ ಶಿಲ್ಪ ಕಲಾತ್ಮಕತೆಯನ್ನೊಳಗೊಂಡು ಕೆಳದಿ ಅರಸರ ಕಾಲದ ಈ ಶಿಲ್ಪಕಲಾಸಂಪತ್ತು ಈವರೆಗೆ ಯಾರ ಗಮನಕ್ಕೂ ಬಂದಿರುವುದಿಲ್ಲವೆಂದು ದಾಖಲಿಸಿದ್ದಾರೆ.


ಮುಂದುವರಿದು ಕ್ರಿ.ಶ. ೧೮೪೧ ರಲ್ಲಿ ಪೇಜಾವರ ಶ್ರೀಗಳು ಶೃಂಗೇರಿ ಶ್ರೀಗಳಿಗೆ ಆಹ್ವಾನವಿತ್ತರು. ಅದ್ವೈತ-ದ್ವೈತ ಸಂಗಮ ಸಂಕೇತವಾಗಿ ಉಭಯ ಗುರುಪೀಠಗಳ ಸಂದರ್ಶನ, ಶ್ರೀ ರಾಮಚಂದ್ರಾಪುರ ಮಠದ ಪತ್ರಾಗರದಲ್ಲಿ ಕಂಡುಬರುವಂತೆ ಶೃಂಗೇರಿ ಹಾಗೂ ಶ್ರೀರಾಮಚಂದ್ರಾಪುರ ಗುರು ಪೀಠಗಳು ಒಟ್ಟಿಗೆ ಸೇರಿ ಕೆಳದಿ ರಾಜಧಾನಿಯ ಸಮೀಪದಲ್ಲಿರುವ ಜಯನಗರ ಉಮಾಪತಿ ದೇವಾಲಯದಲ್ಲಿ ಭಕ್ತರಿಗೆ ನೀಡಿದ ಸಂದರ್ಶನ ಅಸಾಧಾರಣ ಸಂಗತಿಗಳಾಗಿದ್ದು ಮುಂದಿನ ಭವಿಷ್ಯ ಜನಾಂಗಕ್ಕೆ ಧಾರ್ಮಿಕ ಕ್ರಾಂತಿಯುಂಟು ಮಾಡಬಲ್ಲದು. ಹೊಸನಗರಕ್ಕೆ ಕೇವಲ ಹತ್ತು ಕಿ.ಮೀ. ದೂರದಲ್ಲಿರುವ ಈ ದೇವಾಲಯ ಪುರಾತತ್ವ ಕಲಾತ್ಮಕ ದೇಗುಲವಾಗಿದ್ದು ಸರ್ವಧರ್ಮ ಸಮನ್ವಯತೆಗೆ ಸಾಕ್ಷಿಯಾಗಿದೆ ಎಂದು ಉಲ್ಲೇಖಿಸಿದ್ದಾರೆ.

ಕೆಳದಿ ಲಿಂಗಣ ಕವಿ ರಚಿಸಿರುವ ನೃಪತುಂಗ ಗ್ರಂಥದ ಐದನೆಯ ಅಶ್ವಾಸದಲ್ಲಿ ಪುಟ೧೩೩ ರಲ್ಲಿ ಈ ದೇವಾಲಯದ ನಿರ್ಮಾಣ ಕಂಡು ಬರುತ್ತದೆ. ಕೆಳದಿ ಅರಸರು ವೆಂಕಟಪ್ಪನಾಯಕ (ಕ್ರಿ.ಶ.೧೫೮೩- ೧೬೩೦) ಶರಾವತಿ ತೀರದಲ್ಲಿ ಭಾರಾಗಿಯ ಹತ್ತಿರ ತನ್ನ ಪತ್ನಿಯ ಹೆಸರಿನಲ್ಲಿ ಅಭಿನವ ವೀರಂಭಾಪುರವೆಂಬ ಅಗ್ರಹಾರವನ್ನು ಕಟ್ಟಿಸಿ ದನೆಂದೂ, ಅಲ್ಲಿ ವೃತ್ತಿ ಕ್ಷೇತ್ರ ನಿವೇಶನಗಳನ್ನು ಕಟ್ಟಿಸಿ ಬ್ರಾಹ್ಮಣರಿಗೆ ಶಿವಾರ್ಪಿತ ವಾಗಿ ಧಾರೆಯನ್ನೆರೆದು ಸ್ಥಿರವಾದ ಶಾಸನವನ್ನು ಬರೆಸಿದನೆಂದೂ, ಉಲ್ಲೇಖವಿದೆ.


ಈ ಶಾಸನ ದೊರಕಿದರೆ ಈ ವಿಜಯನಗರ ವಾಸ್ತು ಶೈಲಿಯ ಉಮಾಪತಿ ದೇವಾಲಯದ ನಿರ್ಮಾಣ ಕಾಲದ ಮೇಲೆ ಹೆಚ್ಚಿನ ಬೆಳಕು ಬೀರಲು ಸಾಧ್ಯವಾಗಬಹುದು.




ಉಮಾಮಹೇಶ್ವರ ದೇವಾಲಯ, ಜಯನಗರ



ದೇವಾಲಯದ ಭಿತ್ತಿ ಶಿಲ್ಪಗಳು



ಉಮಾಮಹೇಶ್ವರ ದೇವಾಲಯ ದ್ವಾರ, ಜಯನಗರ



ವಾಮನ ಮತ್ತು ಪರಶುರಾಮನ ಭಿತ್ತಿ ಶಿಲ್ಪಗಳು, ಜಯನಗರ



ಸಿಂಹ ಸ್ತಂಭ ಜಯನಗರ



ಕಮಲ, ಉಮಾಮಹೇಶ್ವರ ದೇವಾಲಯ

ಆಕರಗಳು

೧. ಕೆಳದಿಗುಂಡಾ ಜೋಯಿಸ್ ಲಿಂಗಣ್ಣಕವಿ 'ಕೆಳದಿ ನೃಪ ವಿಜಯ' ೧೯೭೩ ಪ್ರ.ಕನ್ನಡ ಸಾಹಿತ್ಯ ಪರಿಷತ್. ಬೆಂಗಳೂರು-೧೮.

೨. ಡಾ. ಎಂ.ಜಿ.ನಾಗರಾಜ್ ಸಂ.ಇತಿಹಾಸದರ್ಶನ ಸಂ.೧೮. ಪ್ರ೨೦೦೩. ಕರ್ನಾಟಕ ಇತಿಹಾಸ ಅಕಾಡೆಮಿ ಬೆಂಗಳೂರು.

೩. ಕೆಳದಿ ವೆಂಕಟೇಶ್ ಜೋಯಿಸ್. ರಾಮಚಂದ್ರಪುರ ಮಠದ ಕಡತಗಳು ದೇವಾಲಯದ ಸ್ಥಳ ವೀಕ್ಷಿಸಿ, ಸ್ಥಳ ಪರಿಶೀಲನೆಗೆ ನೆರವಾದ ಡಾ.ಜಗದೀಶ್ ಮತ್ತು ಅಂಬ್ರಯ್ಯ ಮಠ ಹೊಂಗಡಿ ಅವರಿಗೆ ಧನ್ಯವಾದಗಳು.

೧೯. ಕೃಷ್ಣದೇವರಾಯನ ಕಾಲದಲ್ಲಿ ಪಾಂಡಿಚೆರಿಯಲ್ಲಿ ನಿರ್ಮಾಣವಾದ ಒಂದು ಕೊಳ

ಡಾ.ತಮಿಳ್ ಸೆಲ್ವಿ

ಈ ತಮಿಳು ಶಾಸನ ಪಾಂಡಿಚೆರಿಯ ಭಾರತಿ ಉದ್ಯಾನವನದಲ್ಲಿರುವ ಡೂಪ್ಲೆ ವಿಗ್ರಹದ ಬಳಿ ಇರುವ ಕಾರಂಜಿಯ ಬಳಿ ಇದೆ. ವಾಸ್ತವವಾಗಿ ಈ ಶಾಸನ ರಚನೆಯಾಗಿರುವುದು ೧೯ನೇ ಶತಮಾನದಲ್ಲಿ. ೩ನೇ ನೆಪೋಲಿಯನ್‌ನ ಆಳ್ವಿಕೆಯ ಕಾಲವನ್ನು ಇದು ಉಲ್ಲೇಖಿಸುತ್ತದೆ. (ಕ್ರಿ.ಶ.೧೮೫೨-೭೦). ಇದೇ ಶಾಸನ ಲ್ಯಾಟೀನ್ ಭಾಷೆಯಲ್ಲೂ ಅದೇ ಸ್ಥಳದಲ್ಲಿದೆ. ೧೮೬೨ರ ಕಾಲವನ್ನು ಇವೆರಡು ಶಾಸನಗಳೂ ಉಲ್ಲೇಖಿಸುತ್ತವೆ. ೧೯೩೬-೩೭ರ ಎ.ಆರ್.ಐ.ಇ. ಸಂಪುಟದಲ್ಲಿ ಈ ಶಾನಗಳನ್ನು ದಾಖಲಿಸಲಾಗಿದೆ. ಕೃಷ್ಣದೇವರಾಯನ ಕಾಲದಲ್ಲಿ ನಡೆದ ಕುತೂಹಲಕಾರಿಯಾದ ಘಟನೆಯೊಂದನ್ನು ಈ ಶಾಸನಗಳು ತಿಳಿಸುತ್ತವೆ.

ಕೃಷ್ಣದೇವರಾಯ ತನ್ನ ಅಮಾತ್ಯನಾದ ಅಪ್ಪಾಜಿಯೊಂದಿಗೆ ದೇಶಸಂಚಾರ ಮಾಡಿಕೊಂಡು ಬರುವಾಗ ರಾಯವೇಲೂರಿನಿಂದ ಹೊರಟು, ನಡುವೆ ತನ್ನ ಪರಿವಾರದೊಂದಿಗೆ ಪಾಂಡಿಚೆರಿಯಲ್ಲಿರುವ ವಿಲ್ಲಿಯನೂರಿನಲ್ಲಿ ಬಿಡಾರ ಹೂಡಿದ.

ಆಗ ವಿಲ್ಲಿಯನೂರಿಗೆ ಪಶ್ಚಿಮದಲ್ಲಿರುವ ಉಳವರ್‌ಕರೈ (ಇಂದಿನ ಒಳಗೆರೆ) ಎಂಬಲ್ಲಿ ಉಯ್ಯಗುಂಡ ವಿಶ್ವರಾಯ ಮೊದಲಿಯಾರ್‌ಎಂಬುವವರು ವಾಸಿಸುತ್ತಿದ್ದು ಅವರ ದೇಹದಲ್ಲೊಂದು ವೈಚಿತ್ರ್ಯವಿದೆ ಎಂಬ ಸಂಗತಿ ಅವನಿಗೆ ತಿಳಿಯಿತು. ಆ ವೈಚಿತ್ರ್ಯವೇನೆಂಬುದನ್ನು ಶಾಸನ ಹೇಳುವುದಿಲ್ಲವಾದರೂ ಕ್ಷೇತ್ರಕಾರ್ಯದ ಸಮಯದಲ್ಲಿ ಊರಿನ ಜನ ಆತನ ಅಂಗಾಲಿನಲ್ಲಿ ರೋಮ ಬೆಳೆದಿತ್ತು ಎಂದು ತಿಳಿಸುತ್ತಾರೆ. ಈ ವಿಚಿತ್ರವಾದ ಸುದ್ದಿ ಆ ಪ್ರದೇಶದಾದ್ಯಂತ ಹರಡಿತ್ತು. ವಿಲ್ಲಿಯನೂರಿನಲ್ಲಿ ಬಿಡದಿ ಹೂಡಿದ್ದ ಕೃಷ್ಣದೇವರಾಯನ ಕಿವಿಗೂ ಈ ಸುದ್ದಿ ಬಿತ್ತು. ಕೃಷ್ಣದೇವರಾಯನೂ ಆತನ ಮಂತ್ರಿ ಅಪ್ಪಾಜಿಯೂ ಉಳವರ್‌ಕರೈಗೆ ಹೋಗಿ ಈ ಚೋದ್ಯವನ್ನು ಕಂಡು, ಸಂಜೆಯ ಹೊತ್ತಿಗೆ ಮುತ್ತರೈಯರ್ ಪಾಳ್ಯದ ಮಾರ್ಗವಾಗಿ ಹಿಂದಿರುಗಿ ಹೊರಟರು.

ಮಾರ್ಗ ಮಧ್ಯದಲ್ಲಿ ಉನ್ನತವಾದ ಸೌಧವೊಂದು ಕಣ್ಣಿಗೆ ಬಿತ್ತು. ಅ ಮಹಡಿಯಲ್ಲಿ ಬೆಳಗುತ್ತಿದ್ದ ದೀಪಗಳ ಬೆಳಕು ಆತನನ್ನು ಆಕರ್ಷಿಸಿತು. ಅಲ್ಲಿಂದ ಹೊರಬಂದ ಪರಿಮಳ ರಾಯನ ನಾಸಿಕವನ್ನು ತಟ್ಟಿತು. ದೀಪದ ಬೆಳಕು ಮತ್ತು ಪರಿಮಳ ಆತನಿಗೆ

ಅದು ದೇವಾಲಯವಾಗಿರಬೇಕೆಂಬ ಭ್ರಮೆಯನ್ನು ಉಂಟು ಮಾಡಿತು. ಜೊತೆಯಲ್ಲಿದ್ದ ಅಪ್ಪಾಜಿಗೂ ಅದೇ ಅನುಭವವಾಯಿತು. ಸುಂದರವಾದ ಆ ಭವನ ನೋಡಲು ಆಕರ್ಷಕವಾಗಿತ್ತು. ಇಬ್ಬರೂ ಆ ಸೌಧವನ್ನು ದೇವಾಲಯವೆಂದು ಭ್ರಮಿಸಿ, ಆದಕ್ಕೆ ಕೈಮುಗಿದು ನಮಸ್ಕರಿಸಿದರು.

ಆ ಮಹಡಿ ಗಣಿಕೆಯೊಬ್ಬಳ ಮನೆ. 'ಆಯಿ' ಎಂಬುದು ಅವಳ ಹೆಸರು. ಜೊತೆಯಲ್ಲಿರುವವರು ಈ ಸಂಗತಿಯನ್ನು ಹೇಳಿದ ಕೂಡಲೆ ಅರಸನಿಗೆ ಕೋಪ ಬಂತು. ಗಣಿಕೆಯೊಬ್ಬಳ ಮನೆ ಈ ರೀತಿ ಇರಬಹುದೇ ಎಂದು ಕೋಪಿಸಿಕೊಂಡ ಆತ ಅದನ್ನು ಕೆಡವಲು ಆಜ್ಞಾಪಿಸಿದ.

ಮಾಡದ ಅಪರಾಧಕ್ಕೆ ಆಯಿ ಗುರಿಯಾದಳು. ಅರಸನ ಕೃತ್ಯಕ್ಕೆ ಆಯಿ ಜವಾಬ್ದಾರಳಲ್ಲ. ಆದರೂ ಪ್ರಯೋಜನವೇನು? ರಾಜನಲ್ಲವೇ? ಆದುದರಿಂದ ಆಜ್ಞೆ ಹುಟ್ಟಿತು. ಆ ಸೌಧವನ್ನು ನಾಶಗೊಳಿಸಲು ಅರಸ ಆಜ್ಞಾಪಿಸಿದುದಲ್ಲದೆ ಆ ಸ್ಥಳದಲ್ಲಿ ಒಂದು ಕೊಳವನ್ನೂ, ಬಾವಿಯನ್ನು ತೋಡಲು ಹೇಳಿದ.

ಅರಸನ ಆಜ್ಞೆಯನ್ನು ಕೇಳಿದ ಆ ಹೆಣ್ಣು ಏನು ಮಾಡುವುದೆಂದು ತಿಳಿಯದೆ ಪರಿತಪಿಸಿದಳು. ಆಯಿ ಒಳ್ಳೆಯವಳು. ಅರಸನ ಬಳಿ ಹೋಗಿ ತನ್ನ ಸಂಪತ್ತಿನಿಂದಲೇ ಕೊಳವನ್ನು, ಬಾವಿಯನ್ನೂ ತೋಡಿ ಅರಸನ ಆಜ್ಞೆಯನ್ನು ನೆರವೇರಿಸುವುದಾಗಿ ತಿಳಿಸಿದಳು. ಅರಸನೂ ಮನಃಪರಿವರ್ತನೆಗೊಂಡು ಅವಳ ಬೇಡಿಕೆಗೆ ಮಣಿದ. ಆಕೆ ಮುತ್ತರೈಯರ್ ಪಾಳ್ಯದಲ್ಲಿ ದೊಡ್ಡದಾದ ಕೊಳವೊಂದನ್ನೂ, ಬಾವಿಯೊಂದನ್ನೂ ತೋಡಿಸಿದಳು. ನಂತರ ಆ ಕೊಳಕ್ಕೆ ಆಯಿ ಕೊಳವೆಂದೇ ಹೆಸರಾಯಿತು. ಈ ಘಟನೆ ನಡೆದದ್ದು ಕ್ರಿ.ಶ. ೧೬ನೇ ಶತಮಾನದ ಮೊದಲ ಪೂರ್ವಾರ್ಧದಲ್ಲಿ ಎಂಬುದು ಗಮನಾರ್ಹವಾದುದು.

ಫ್ರಾನ್ಸ್‌ನಲ್ಲಿ ೩ನೇ ನೆಪೋಲಿಯನ್‌ನ ಆಳ್ವಿಕೆಯ ಕಾಲದಲ್ಲಿ (೧೮೫೨-೧೮೭೦), ದಕ್ಷಿಣ ಭಾರತದಲ್ಲಿ ಫ್ರೆಂಚ್ ಗವರ್ನರ್ ಆಗಿ ಪಾಂಡಿಚೇರಿಯಲ್ಲಿ ಇದ್ದವರು ಅಲೆಕ್ಸಾಂಡರ್ ಡ್ಯುರಾಂಡ್ ದುಬ್ರಾಯ್.

ನೆಪೋಲಿಯನ್‌ನೂ, ಗವರ್ನರೂ, ಆಯಿ ಬಗೆಗಿನ ಈ ಎಲ್ಲಾ ವಿಷಯಗಳನ್ನು ಕೇಳಿ, ಅವಳ ಸ್ಮಾರಕವಾಗಿ ಪಾಂಡಿಚೇರಿಯಲ್ಲಿ ಆಗ ಇದ್ದ ಕೋಟೆಯ ಭಾಗದಲ್ಲಿ ಸುಂದರವಾದ ಜಲಮಾಳಿಗೆಯೊಂದನ್ನು ಕಟ್ಟಿದರು. ನೆಪೋಲಿಯನ್‌ನ ಅಪ್ಪಣೆಯ ಮೇರೆಗೆ ಈ ಜಲಮಾಳಿಗೆಯನ್ನು ಮಂಟಪವನ್ನೂ ಕಟ್ಟಿದುದಾಗಿ ಶಾಸನದಲ್ಲಿ ತಿಳಿಸಲಾಗಿದೆ. ಪಾಂಡಿಚೇರಿ ಕಡಲ ತಡಿಯ ಪೂರ್ವ ಭಾಗದಲ್ಲಿ ಈ ಸ್ಮಾರಕವನ್ನು ನಿರ್ಮಿಸಲಾಯಿತು. ಆಯಿಯ ಸುಂದರವಾದ ಭವನವಿದ್ದ ಸ್ಥಳ ಅದೇ ಎಂದು ಹೇಳಲಾಗುತ್ತದೆ. ಜಲಮಾಳಿಗೆ ಇದ್ದ ಸ್ಥಳ ಈಗ ಸುಂದರವಾದ ಒಂದು ಮಂಟಪವಾಗಿದೆ. ಮುನ್ನೂರು ವರ್ಷಗಳ ನಂತರ ಆಯಿಯ ವಿಷಯವನ್ನು ತಿಳಿದ ೩ನೇ ನೆಪೋಲಿಯನ್, ಆಯಿಯ ಸೌಂದರ್ಯ ಪ್ರಜ್ಞೆಯನ್ನು ಮೆಚ್ಚಿ, ಅವಳ ಸ್ಮಾರಕವಾಗಿ ಪಾಂಡಿಚೇರಿಯಲ್ಲಿ

ಈ ಮಂಟಪವನ್ನು ಗ್ರೀಕ್ - ರೋಮನ್‌ಶೈಲಿಯಲ್ಲಿ ನಿರ್ಮಿಸಿದ. ಆ ಮಂಟಪದ ಮೇಲೆ ಆಯಿ ವಿಶ್ರಾಂತಿ ತೆಗೆದುಕೊಳ್ಳುತ್ತಿರುವ ಭಂಗಿಯಲ್ಲಿರುವ ಒಂದು ಶಿಲ್ಪವನ್ನೂ ಕಾಣಬಹುದು.

ಆಯಿಯ ಮುತ್ತುರ್ರೈಯರ್ ಪಾಳ್ಯದಲ್ಲಿ ಕಟ್ಟಲಾದ ಕೊಳದಿಂದ ಕಾಲುವೆಯನ್ನು ನಿರ್ಮಿಸಿ ಏತದ ಮೂಲಕ ನೀರು ತೆಗೆದು ಆ ನೀರನ್ನು ಮೇಲೆ ಹೇಳಲಾದ ಜಲಮಾಳಿಗೆಗೆ ಬಿಡುತ್ತಿದ್ದುದಾಗಿ ತಿಳಿದು ಬಂದಿದೆ. ಫ್ರೆಂಚರ ಕಾಲದಲ್ಲಿ ಈ ಕೆಲಸವನ್ನು ಮಾಡಿ ಮುಗಿಸಿದವರು ಲಮಾರಸ್ ಎನ್ನುವರು.

ತಮಿಳು ಶಾಸನದಲ್ಲಷ್ಟೇ ಅಲ್ಲದೆ ; ಪ್ರಾಧ್ಯಾಪಕರೂ ಇತಿಹಾಸಕಾರರೂ ಆದ ಲುವೋ ಸುಬ್ರಾಯ್ ಅವರಿಂದ ಪ್ರತಿ ಮಾಡಲಾದ, ಕ್ರಿ.ಶ. ೧೮೬೨ರಲ್ಲಿ ಬರೆಯಲಾದ ಲ್ಯಾಟಿನ್ ಭಾಷೆಯ ಶಾಸನದಿಂದಲೂ ನೆಪೋಲಿಯನ್ ಕಾಲದ ಮೇಲ್ಕಂಡ ಘಟನೆಗಳನ್ನು ತಿಳಿದುಕೊಳ್ಳಬಹುದು. ಕಾಂಚಿ ಪಲ್ಲವರು, ಚೋಳರು, ಪಾಂಡ್ಯರು, ವಿಜಯನಗರದ ಅರಸರು, ನಾಯಕ ಅರಸರು, ಮುಂತಾದವರು ತಮ್ಮ ಆಳ್ವಿಕೆಯ ಕಾಲದಲ್ಲಿ ವಿಲ್ಲಿಯನೂರು ಪ್ರಸಿದ್ಧವಾಗಿದ್ದ ಒಂದು ಮುಖ್ಯ ಊರಾಗಿತ್ತು. ಅದರ ಪ್ರಾಚೀನ ಹೆಸರು ವಿಲ್ವನಲ್ಲೂರು. ಆ ಊರು ಫ್ರೆಂಚರ ಆಳ್ವಿಕೆಯಲ್ಲಿ ದಕ್ಷಿಣ ಭಾರತದ ಇತಿಹಾಸದೊಂದಿಗೆ ಸಂಬಂಧ ಹೊಂದಿ ಪ್ರಸಿದ್ಧವಾಗಿತ್ತು ಎಂಬುದನ್ನೂ ಈ ಶಾಸನ ದಿಂದ ತಿಳಿಯಬಹುದು.

ಫ್ರೆಂಚರ ಕಾಲದಲ್ಲಿ ಪಾಂಡಿಚೇರಿ ನಗರ ಭಾಗಕ್ಕೆ ಕುಡಿಯುವ ನೀರನ್ನು ಇಲ್ಲಿಂದ ಸರಬರಾಜು ಮಾಡಲಾಗುತ್ತಿತ್ತು. ೧೬ನೇ ಶತಮಾನದಲ್ಲಿ ನಡೆದ ಘಟನೆಗೆ ಆ ಹೆಣ್ಣಿನ ಕಲಾ ಗುಣಕ್ಕೆ ೩೦೦ ವರ್ಷಗಳ ನಂತರ ನೆಪೋಲಿಯನ್ ಸ್ಮಾರಕವನ್ನು ನಿರ್ಮಿಸಿದ. ಅದೇ ಪಾಂಡಿಚೇರಿಯ ಭಾರತಿ ಉದ್ಯಾನವನದ ನಡುವೆ ಇರುವ ಸುಂದರವಾದ 'ಆಯಿ ಮಂಟಪ'.

ತಮಿಳಿನ ಶಾಸನವನ್ನು ಕಂಡರಿಸಿದವನು ಉಗ್ರಮೂರ್ತಿ.

ಲಿಪ್ಯಂತರ

೧. ಇತ್ತೆನ್ನಾಟ್ಟೈ ಪಾರ್ಕ ಮುನ್ನಾಳಿಲ್ ರಾಯವೇಲೂರಿಲಿರುಂದು ಕೃಷ್ಣರಾಯರುಮ್ ಅವರ್ ಮಂದಿರಿ

೨. ಅಪ್ಪಾಜಿ ಐಯ್ಯರುಮ್ ಸೀಮೆ ಪ್ರತಾಬರಾಯ್ ವರುಂಪೋದು ವಿಲ್ವನಲ್ಲೂರಿಲಿಱಂಗಿನಾರ್‌ಗಳ್ ಅಂಗೇ ದೇಗತ್ತಿಲೋರ್.

೩. ವಿನೋದತ್ತೈಯುಡೈಯ ಉಯ್ಯಗುಂಡ ವಿಶ್ವರಾಯ ಮುದಲಿಯಾರ್ ಎನ್‌ಟೊರುವರ್ ಉಟೊವರ್ ಕರೈಲಿರುಕ್ಕಿರಱದ್ಯೆ

೪. ಕೆಳ್ವಿಪಟ್ಟು ಆಪ್ಪಾಚ್ಚರಿಯತ್ತೈ ಪೋಯ್ ಪಾರ್ತು ಮುತ್ತಿರೈಯರ್ ಪಾಳಯತ್ತು ವಟಿ ಿಯಾಯ್ ಮಾಲೈ ನೇರತ್ತಿಲ್‌ಸೆಲ್ಲುಂಪೋದು

೫. ಅವ್ವಿಡತ್ತಿಲ್ ಆಯಿಯೆನ್ನುಮ ಓರ್ ದಾಸಿಯನ್ ಸಿಱಂದ ಮಾಳಿಗೆಯಿಲ ತೋನ್ಱಿಯ ಅಗಿಲ ದೂಪದೀಪಂಗಳೈ ಕಂಡು ಅದೂರ್

೬. ಆಲಯಮೆನ್ಱೆಣ್ಣಿ ಕರುಂಗವಿತ್ತರ್‌ಗಳ್ ಇದೈ ಕಂಡೋರ್ ಅದು ಓರ್ ದಾಸಿ ವೀಡೆನ್ಱು ೨ ಸೊಲ್ಲವೇ ಅ

೭. ವ್ವಿರುವರುಮ್ ಎನ್ನ ಪಾವಮೆನ್ಱು ಕೋಬಿತ್ತು ಇದಱ್ಕು ವಿಮೋಸಮಾಗ ಅಮ್ಮಾಳಿಗೈಯೈ ಇಡಿತ್ತು ಅವ್ವಿಡತ್ತಿಲ್

೮. ಓರ್ ಕಿನರುಮ್ ಕುಳಮುಮ್ ತೋಂಡವೇಣುಮೆನ್ನ ಇದೈ ಕೇಟ್ಟ ಅಂದ ಆಯಿಯೆನ್ಬವಳ್ ಅವರ್‌ಗಳ್

೯. ಪಾದತ್ತಿಲ್ ವೀೞ್ನ್ದು ತನ್ ಪೊರುಳೈ ಕೊಣ್ಡೇ ಆ ತ್ತಿರುಪ್ಪಣಿಯೈ ನಿಱೈವೇಱ್ ಕೊಳ್ವದಱ್ಕು

೧೦. ಉತ್ತರವು ಪೆಟ್ರು ಅಕ್ಕಿಣತ್ತೈಯುಮ್ ಕುಳತ್ತೈಯುಮ್ ತೋಂಡವಿತ್ತಾಳ್ ಅನ್ನಾಳ್ ಮುದಱ ್ಕೊಂಡದಱ್ಕು

೧೧. ಆಯಿಕುಳಮೆನ ಪೆಯರ್ ವೞಂಗಿ ವರುಗಿನ್ಱದು

೧೨. ಅಮ್ಮೇಲಾನ ಸೆಯ್‌ಗೈಕ್ಕೋರ್ ಸಂಬಾವನೈಯಾಗ ಮಕಾರಾಯರ್ ೩-ವದು ನಪ್ಪೋಲಯೋಮ್

೧೩. ಅವಳಿಂದ ಜಲಮಾಳಿಗೈಯಿಲ್ ಎನ್ನಾಳುವಲ್ ಇಳಪ್ಪಾಟಿವಿಡಂತಂದು ಅರುಳಿನಾರ್

೧೪. ಉಗ್ಗರಮೂರ್ತಿ ಆಚಾರಿ.

ಭಾಷಾಂತರ

೧. ಈ ತೆಂಕಣ ನಾಡನ್ನು ನೋಡಲು ಮುನ್ನ ರಾಯವೇಲೂರಿನಿಂದ ಕೃಷ್ಣರಾಯರೂ ಅವರ ಮಂತ್ರಿ

೨. ಅಪ್ಪಾಜಿ ಐಯ್ಯರೂ ದೇಶಾಟನೆ ಮಾಡಿಕೊಂಡು ಬರುವಾಗ ವಿಲ್ಲನಲ್ಲೂರಿನಲ್ಲಿ ಉಳಿದುಕೊಂಡಿರುವರಲ್ಲಿ ಅಲ್ಲಿ ದೇಹದಲ್ಲೊಂದು

೩. ವಿಚಿತ್ರವನ್ನುಳ್ಳ ಉಯ್ಯಗುಂಡ ವಿಶ್ವರಾಯ ಮುದಲಿಯಾರ್ ಎನ್ನುವವರೊಬ್ಬರು ಉಟಿ ಿವರ್‌ಕರೈಯಲ್ಲಿರುವುದನ್ನು

೪. ಕೇಳಿ ಆ ಅಚ್ಚರಿಯನ್ನು ಹೋಗಿ ನೋಡಿಕೊಂಡು ಮುತ್ತರೈಯರ್ ಪಾಳಯದ ಮಾರ್ಗವಾಗಿ ಸಾಯಂಕಾಲದ ಸಮಯದಲ್ಲಿ ಹೋಗುವಾಗ

೫. ಆವೆಡೆಯಲ್ಲಿ ಆಯಿಯೆನ್ನುವ ಓರ್ವ ದಾಸಿಯ ಭವ್ಯವಾದ ಮಹಡಿಯಲ್ಲಿ ಕಾಣಿಸಿದ ಅಖಿಲ ಧೂಪ ದೀಪಗಳನ್ನು ಕಂಡು ಅದೊಂದು

೬. ಆಲಯವೆಂದು ತಿಳಿದು ಕರಗಳನ್ನು ಮುಗಿಯಲು ಇದನ್ನು ಕಂಡವರು ಅದು ಓರ್ವ ದಾಸಿಯ ಮನೆಯೆಂದು ಹೇಳಲು ಅವ

೭. ರೀರ್ವರೂ ಏನು ಪಾಪವೆಂದು ಕೋಪಿಸಿಕೊಂಡು ಇದಕ್ಕೆ ವಿಮೋಚನೆಯಾಗಿ ಆ ಮಹಡಿಯನ್ನು ಕೆಡವಿ ಆವೆಡೆಯಲ್ಲಿ

೮. ಒಂದು ಬಾವಿಯನ್ನು ಕೊಳವನ್ನು ತೋಡಬೇಕೆನ್ನಲು ಇದನ್ನು ಕೇಳಿದ ಆ ಆಯಿಯೆನ್ನುವವಳು ಅವರುಗಳ

೯. ಪಾದದಲ್ಲಿ ಬಿದ್ದು ತನ್ನ ಅರ್ಥದಿಂದಲೇ ಆ ಶ್ರೀಕಾರ್ಯವನ್ನು ನೆರವೇರಿಸಲು

೧೦. ಅಪ್ಪಣೆ ಪಡೆದು ಆ ಬಾವಿಯನ್ನು ಕೊಳವನ್ನೂ ತೋಡಿಸಿದಳು ಆ ದಿನ ಮೊದಲಾಗಿ ಅದಕ್ಕೆ

೧೧. ಆಯಿಕೊಳವೆಂಬ ಹೆಸರಾಯಿತು.

೧೨. ಆ ಮೇಲಾದ ಕಾರ್ಯಕ್ಕೆ ಒಂದು ಸಂಭಾವನೆಯಾಗಿ ಮಹಾರಾಜರಾದ ೩ನೇ ನೆಪೋಲಿಯನ್

೧೩. ಅವಳು ಈ ಜನಮಾಳಿಗೆಯಲ್ಲಿ ಯಾವತ್ತೂ ವಿಶ್ರಾಂತಿ ಪಡೆಯಲು ಎಡೆಕೊಟ್ಟು ಕರುಣಿಸಿದರು

೧೪. ಉಗ್ರಮೂರ್ತಿ ಆಚಾರಿ.

ಆಕರ ಗ್ರಂಥಗಳು

೧. ತಮಿಳ್ ಮೊಳಿಪೆಯರ್ಪ್ಪು ಕಲ್ವೆಟ್ಟು, ಕ. ಪನ್ನೀರ್ ಸೆಲ್ವಂ, ಆವಣಂ, ಸಂ: ೧೨ ಜುಲೈ ೨೦೦೧, ಪು. ೭೯.

೨. ಎ.ಆರ್.ಐ.ಇ. ೧೯೩೬-೩೭, ಸಂ: ಬಿ.-೧೭೮, ಪು.೨೭ ೧೯೩೮-೩೯, ಸಂ: ೩೧೮, ಪು.೪೨.

೩. ಕಲ್ವೆಟ್ಟುಗಳಿಲ್ ಪುದುವೈ ಪುಗುದಿಗಳ್, ಸು.ಕುಪ್ಪುಸಾಮಿ, ಪುದುವೈ ವರಲಾಟ್ರು ಸಂಗಂ, ೧೯೭೪, ಪು. ೧೫೩-೫೪.

೨೦. ಕೆಳದಿ ನಾಯಕರ ಕಲೆ ಮತ್ತು ವಾಸ್ತು ಶಿಲ್ಪ

ಶ್ರೀಮತಿ ವಿನೋದಾ ಪಾಟೀಲ

ಕೆಳದಿ ನಾಯಕರು ವಿಜಯನಗರ ಅರಸರ ಸಾಮಂತರಾಗಿದ್ದರು. ಇವರ ರಾಜಕೀಯ ಸಂಬಂಧವು ವಿಜಯನಗರ ಸಾಮ್ರಾಜ್ಯದ ಉತ್ಕರ್ಷ ಕಾಲದಲ್ಲಿ ಪ್ರಾರಂಭವಾಗಿ ಅವರ ಅವನತಿಯ ಕಾಲದವರೆಗೂ ನಡೆದು ಬಂದದ್ದು ಶಾಸನ ಮತ್ತು ಸಾಹಿತ್ಯಿಕ ಆಕರಗಳಿಂದ ತಿಳಿಯುತ್ತದೆ. ಇವರ ಸಂಬಂಧದ ಬಗ್ಗೆ ಲಿಂಗಣ್ಣ ಕವಿಯು ರಚಿಸಿದ ಕೆಳದಿ ನೃಪ ವಿಜಯ ಕೆಳದಿಯ ದೊರೆ ಹಿರಿಯ ಬಸಪ್ಪನಾಯಕನು ರಚಿಸಿದ ಶಿವತತ್ವ ರತ್ನಾಕರ, ಕೃಷ್ಣರಾಯ ವಿಜಯಮು ಮುಂತಾದ ಸಾಹಿತ್ಯಕೃತಿಗಳಲ್ಲಿ ಮಾಹಿತಿ ದೊರೆಯುತ್ತದೆ. ವಿಜಯನಗರದಅರಸ ಕೃಷ್ಣದೇವರಾಯನ ಕಾಲದಲ್ಲಿ ಬಹಮನಿ ಸುಲ್ತಾನರ ಮತ್ತು ಪೋರ್ತುಗೀಸರ ಪ್ರಾಬಲ್ಯ ಹೆಚ್ಚಾಗತೊಡಗಿತ್ತು. ಇವರ ಪ್ರಾಬಲ್ಯ ಹತ್ತಿಕ್ಕಲು ದಕ್ಷಿಣ ದಲ್ಲಿ ಸಮರ್ಥ ಪ್ರತಿಸ್ಪರ್ಧಿಗಳ ಅವಶ್ಯಕತೆಯಿತ್ತು. ಈ ಸಮಯದಲ್ಲಿ ಕೆಳದಿಯಲ್ಲಿ ಚೌಡಪ್ಪ ಮತ್ತು ಭದ್ರಪ್ಪನಾಯಕರೆಂಬ ಸಹೋದರರು ತಮ್ಮ ಶೌರ್ಯ, ಸಾಹಸ ಗಳಿಂದ ಪ್ರಸಿದ್ಧರಾಗಿದ್ದರು. ಕೃಷ್ಣದೇವರಾಯನು ಇವರ ಸಹಾಯ ಕೇಳಲು ಅವರು ಕೆಲವು ಪಾಳೆಯಗಾರರನ್ನು ಸೋಲಿಸಿ, ಸೆರೆಹಿಡಿದು ತಂದು ಕೃಷ್ಣದೇವರಾಯನಿಗೆ ಒಪ್ಪಿಸಿದರು. ಇದರಿಂದ ಸಂತೋಷಗೊಂಡ ಕೃಷ್ಣದೇವರಾಯನಿಗೆ ಈ ಸಹೋದರರಿಗೆ 'ನಾಯಕ' ರೆಂಬ ಬಿರುದು ಕೊಟ್ಟು, ಕೆಳದಿ, ಇಕ್ಕೇರಿ ಮುಂತಾದ ಕೆಲವು ಪ್ರದೇಶಗಳ ಆಡಳಿತವನ್ನು ಒಪ್ಪಿಸಿದನು. ಇದೇ ರೀತಿ ನರಸಿಂಗರಾಯನ ಕಾಲದಲ್ಲಿಯೂ ಕೆಳದಿ, ಇಕ್ಕೇರಿ ಮುಂತಾದ ಕೆಲವು ಪ್ರದೇಶಗಳ ಆಡಳಿತವನ್ನು ಒಪ್ಪಿಸಿದನು. ಇದೇ ರೀತಿ ನರಸಿಂಗರಾಯನ ಕಾಲದಲ್ಲಿಯೂ ಕೆಳದಿನಾಯಕರು ಚಿಕ್ಕ ಪಾಳೆಯಗಾರರನ್ನು ಸೋಲಿಸಲು ಸಹಾಯ ಮಾಡಿದ್ದರಿಂದ ಆತನು ಚಂದ್ರಗುತ್ತಿ, ಮೋದೂರು, ಕಲಸೆ ಮುಂತಾದ ಎಂಟು ಮಾಗಣೆಗಳನ್ನು ನಾಯಕರಿಗೆ ಕೊಟ್ಟು, ಅವುಗಳನ್ನು ಅನುಭವಿಸಿ ಕೊಂಡು ವಿಜಯನಗರ ಅರಸರಿಗೆ ಆಧೀನವಾಗಿರಬೇಕೆಂದು ಶಾಸನ ಬರೆಸಿದನೆಂದು ತಿಳಿದು ಬರುತ್ತದೆ. ಕೆಳದಿ ಸಂಸ್ಥಾಪಕನಾದ ಚೌಡಪ್ಪ ನಾಯಕನ ಕಾಲದಿಂದ ಚಿಕ್ಕ ಸಂಕಣ್ಣನ ಕಾಲದವರೆಗೆ ಹೆಚ್ಚಿನ ನಾಯಕರು ವಿಜಯನಗರ ಅರಸರಿಗೆ ವಿಧೇಯರಾಗಿ ಪಾಳೆಯಗಾರಿಕೆ ನಡೆಸಿದ್ದಾರೆ. ಸದಾಶಿವನಾಯಕನ ಕಾಲದಲ್ಲಿ ವಿಜಯನಗರ ಅರಸರ ಜೊತೆಗಿನ ಸಂಬಂಧ ಹೆಚ್ಚು ಪ್ರಾಮುಖ್ಯತೆ ಪಡೆಯಿತು. ಈತನು ಕೃಷ್ಣದೇವರಾಯನ ಸಮಕಾಲೀನನಾಗಿದ್ದ. ಶ್ರೀರಂಗನ ಕಾಲದಲ್ಲಿ ಅವಸಾನದ ಅಂಚಿನಲ್ಲಿದ್ದ ವಿಜಯನಗರ

ಸಾಮ್ರಾಜ್ಯವನ್ನು ಮತ್ತೆ ಪುನರುಜ್ಜೀವನಗೊಳಿಸಿದವನು ಶಿವಪ್ಪನಾಯಕ. ಹೀಗೆ ಕೆಳದಿ ನಾಯಕರು ವಿಜಯನಗರ ಅರಸರ ಸಾಮಂತರಾಗಿದ್ದು ಇವರಿಗೆ ಅನೇಕ ರೀತಿಯಲ್ಲಿ ಸಹಾಯ ಮಾಡಿದ್ದಾರೆ.

ಕೆಳದಿ ನಾಯಕರು ಕೆಳದಿ, ಇಕ್ಕೇರಿ, ಹಳೆನಗರ ಮತ್ತು ಕವಲೆ ದುರ್ಗದಲ್ಲಿ ಕಟ್ಟಿಸಿದ ದೇವಸ್ಥಾನಗಳು ಮತ್ತು ಶಿವಮೊಗ್ಗದಲ್ಲಿ ಕಟ್ಟಿಸಿದ ಅರಮನೆ ವಿಜಯನಗರದ ಶೈಲಿಯಲ್ಲಿವೆ.

ಕೆಳದಿಯಲ್ಲಿರುವ ರಾಮೇಶ್ವರ ದೇವಸ್ಥಾನದಲ್ಲಿ ಗರ್ಭಗೃಹ, ಪ್ರದಕ್ಷಿಣ ಪಥವನ್ನೊಳಗೊಂಡ ಸುಖನಾಸಿ, ನವರಂಗಗಳಿವೆ. ನವರಂಗದಲ್ಲಿ ಎರಡು ಕಂಬಗಳು ಮತ್ತು ಒಂದು ದೊಡ್ಡ ಮಂಟಪಗಳಿವೆ. ಗರ್ಭ ಗೃಹದ ಗೋಡೆಗಳ ಮೇಲೆ ಕಣ್ಣಪ್ಪ, ರಾಮೇಶ್ವರ, ವೀರಭದ್ರ, ಭೈರವ, ತಾಂಡವೇಶ್ವರ, ವೇಣುಗೋಪಾಲ, ಕಾಳಿಂಗ ಮರ್ದನ, ಪಾರ್ವತಿ, ಮೋಹಿನಿ, ಆನೆ, ಒಂಟೆ ಯಾಳಿ ಮುಂತಾದ ಶಿಲ್ಪಗಳಿವೆ. ನವರಂಗದಲ್ಲಿರುವ ದೊಡ್ಡ ಮಂಟಪದ ಕಕ್ಷಾಸನವು ಗೋಡೆಗಂಬಗಳ ಸಾಲಿನಿಂದ ಅಲಂಕೃತಗೊಂಡಿದೆ. ಈ ಮಂಟಪದಲ್ಲಿ ಆರು ದೊಡ್ಡ ಮತ್ತು ಹನ್ನೆರಡು ಸಣ್ಣ ಕಂಬಗಳಿದ್ದು ಇವುಗಳಿಂದ ಹನ್ನೆರಡು ಅಂಕಣಗಳು ರೂಪಗೊಂಡಿವೆ. ಇಲ್ಲಿ ಪಶ್ಚಿಮಕ್ಕೆ ಕೊನೆಯಲ್ಲಿಗೋಪುರಗಳುಳ್ಳ ಎರಡು ಗೂಡುಗಳಲ್ಲಿ ಗಣೇಶ ಮತ್ತು ಮಹಿಷಾಸುರ ಮರ್ಧಿನಿಯರ ವಿಗ್ರಹಗಳಿವೆ. ಮಂಟಪದ ಒಳಮಾಳಿಗೆ ಮಧ್ಯದಲ್ಲಿ ಒಂಬತ್ತು ಕಮಲದ ಹೂಗಳ ಅಲಂಕಾರವಿದೆ. ನವರಂಗದ ಬಾಗಿಲಿನಲ್ಲಿ ಶೈವ ದ್ವಾರಪಾಲಕರಿದ್ದಾರೆ. ಮಧ್ಯದಲ್ಲಿ ಗಣೇಶನ ಶಿಲ್ಪವಿದೆ. ಗರ್ಭಗೃಹಬಾಗಿಲಿನ ಚೌಕಟ್ಟಿನ ಮಧ್ಯದಲ್ಲಿ ಶಿವನ ಶಿಲ್ಪವಿದೆ. ಈ ದೇವಸ್ಥಾನವನ್ನು ಕ್ರಿ.ಶ. ೧೫೧೨ರಲ್ಲಿ ಕಟ್ಟಲಾಗಿದೆ.

ಕ್ರಿ.ಶ. ೧೫೩೦ ಮತ್ತು ೧೫೪೦ರ ಮಧ್ಯ ಕಾಲದಲ್ಲಿ ಕಟ್ಟಿದ ವೀರಭದ್ರ ದೇವಸ್ಥಾನವು ರಾಮೇಶ್ವರ ದೇವಸ್ಥಾನಕ್ಕಿಂತ ಚಿಕ್ಕದಾಗಿದೆ. ಗರ್ಭಗೃಹದ ಅಧಿಷ್ಠಾನವು ಅನೇಕ ಚಿಕ್ಕ ಶಿಲ್ಪಗಳಿಂದ ಮತ್ತು ಗೋಡೆಯು ಅನೇಕ ಗೋಡೆಗಂಬಗಳಿಂದ ಅಲಂಕರಿಸಲ್ಪಟ್ಟಿದೆ. ಪಶ್ಚಿಮದ ಗೋಡೆಯ ಮೇಲೆ ವಾಸ್ತು ಪುರುಷನ ಶಿಲ್ಪವಿದೆ. ವಾಸ್ತು ಪುರುಷನ ಕಾಲುಗಳು ಆನೆಯ ಕಾಲಿನಂತೆ ಮತ್ತು ಕೈಗಳು ಆನೆ ಸೊಂಡಲಿ ನಾಕಾರದಲ್ಲಿವೆ. ಮುಖವು ಸಿಂಹದ ಮುಖದಂತಿದೆ. ಈತನ ಬಲಪಾರ್ಶ್ವದಲ್ಲೂ ಒಬ್ಬ ಮನುಷ್ಯ ಸ್ತ್ರೀ ಮತ್ತು ಮಗುವಿದ್ದಾರೆ. ಎಡ ಪಾರ್ಶ್ವದಲ್ಲಿ ಮೋಹಿನಿ-ಭಸ್ಮಾಸುರರಿದ್ದಾರೆ. ಮಂಟಪದ ಮುಂದೆ ಒಂದು ಚಿಕ್ಕ ಮಂಟಪವಿದೆ. ನವರಂಗದ ಪಶ್ಚಿಮದ ಗೋಡೆಯ ಎದುರಿಗೆ ದಕ್ಷಬ್ರಹ್ಮ ಮತ್ತು ನರಸಿಂಹನ ದೊಡ್ಡ ವಿಗ್ರಹಗಳಿವೆ. ದೊಡ್ಡ ಮಂಟಪದಲ್ಲಿರುವ ಎಂಟು ಕಂಬಗಳಲ್ಲಿ ಆರುಕಂಬಗಳು ಚೌಕಾಕಾರದಲ್ಲಿದ್ದರೆ ಎರಡು ಕಂಬಗಳಲ್ಲಿ ೧೬ ಮುಖಗಳಿವೆ. ಕಂಬಗಳ ಮೇಲೆ ಆನೆಯ ಮುಖವುಳ್ಳ ಹಂಸ, ೬ ಮಂಗಗಳಿಂದ ಸುತ್ತುವರಿಯಲ್ಪಟ್ಟ, ಒಬ್ಬ ಯೊಗಿ ಮತ್ತು ದಾಡಿಯುಳ್ಳ ಮನುಷ್ಯರ ಶಿಲ್ಪಗಳಿವೆ. ಮಂಟಪದ ಒಳ ಮಾಳಿಗೆಯಲ್ಲಿ ಕಮಲದ ಅಲಂಕಾರವಿದೆ. ಮಧ್ಯದಲ್ಲಿ

ಸೂರ್ಯನಿದ್ದು, ಸುತ್ತಲೂ ಜಿಂಕೆ, ಆನೆ ಮತ್ತು ಸಿಂಹಗಳನ್ನೊಳಗೊಂಡ ಗೋಡೆಗಂಭಗಳಿವೆ. ಚೌಕಟ್ಟಿನ ಮಧ್ಯದಲ್ಲಿ ಗಣೇಶನ ಶಿಲ್ಪವಿದೆ. ಗರ್ಭಗೃಹದಲ್ಲಿ ಚಿಕ್ಕ ವೀರಭದ್ರನ ವಿಗ್ರಹವಿದೆ. ಪೂರ್ವಕ್ಕಿರುವ ಮುಖಮಂಟಪದ ಮುದೆ ಕ್ರಿ.ಶ.೧೬೮೧ರಲ್ಲಿ ಸ್ಥಾಪಿಸಿದ ಕಂಬವಿದೆ. ಇದು ಕೆಳಭಾಗದಲ್ಲಿ ಚೌಕಾಕಾರ, ಮಧ್ಯದಲ್ಲಿ ಅಷ್ಟಭುಜಾಕೃತಿ ಮತ್ತು ತುದಿಯಲ್ಲಿ ದುಂಡಾಗಿದೆ. ಕಂಬದ ಚೌಕಾಕಾರದ ಭಾಗದ ಮೇಲೆ ಕೆಲವು ಶಿಲ್ಪಗಳಿವೆ. ಪಶ್ಚಿಮದ ಬದಿಯಲ್ಲಿ ಗಣೇಶ ಮತ್ತು ೫ ಜನರಿದ್ದಾರೆ. ದಕ್ಷಿಣಕ್ಕೆ ನಂದಿ ಮತ್ತು ಶಿವನ ಶಿಲ್ಪಗಳಿವೆ. ಪೂರ್ವಕ್ಕೆ ಪಾರ್ವತಿ, ಉತ್ತರಕ್ಕೆ ಭೈರವರಿದ್ದಾರೆ.

ಇಕ್ಕೇರಿಯಲ್ಲಿರುವ ಅಘೋರೇಶ್ವರ ದೇವಸ್ಥಾನವನ್ನು ಕ್ರಿ.ಶ.೧೫೩೦ರಲ್ಲಿ ಕಟ್ಟಿಸಿದ್ದಾರೆ. ಇದು ಕೆಳದಿ ನಾಯಕರು ಕಟ್ಟಿಸಿದ ದೇವಸ್ಥಾನಗಳಲ್ಲಿಯೇ ಅತೀ ದೊಡ್ಡ ಮತ್ತು ಸುಂದರವಾದ ದೇವಸ್ಥಾನವಾಗಿದೆ. ಇದರಲ್ಲಿ ಹೊಯ್ಸಳ ಮತ್ತು ವಿಜಯನಗರ ಎರಡೂ ಶೈಲಿಯ ಕುರುಹುಗಳನ್ನು ಕಾಣಬಹುದು. ಹೊಯ್ಸಳರ ಶೈಲಿಯ ಎತ್ತರವಾದ ಜಗಲಿ, ಕಲ್ಲಿನ ಗೋಪುರ, ೧೬ ಮುಖಗಳುಳ್ಳ ದುಂಡಗಿನ ಕಂಬಗಳು, ಅಲಂಕಾರವುಳ್ಳ ಭಿತ್ತಿಗಳು, ಗರ್ಭಗೃಹದ ಸುತ್ತಲೂ ಪ್ರದಕ್ಷಿಣ ಪಥ ಮತ್ತು ಎರಡು ಸುಖನಾಸಿಗಳು ಮತ್ತು ಒಂದು ನವರಂಗ ಕಂಡುಬರುತ್ತದೆ. ಎತ್ತರವಾದ ಜಗಲಿಯು ಐದು ಭಾಗಗಳನ್ನು ಹೊಂದಿದ್ದು ಅವುಗಳಲ್ಲಿ ಎರಡರ ಮೇಲೆ ಕೀರ್ತಿಮುಖ ಹಾಗೂ ಹಿಂಗಾಲುಗಳ ಮೇಲೆ ನಿಂತಿರುವ ಸಿಂಹಗಳ ಅಲಂಕಾರವಿದೆ. ಈ ಜಗಲಿಯು ಕೇವಲ ಗರ್ಭಗೃಹಕ್ಕೆ ಮಾತ್ರವಿದೆ. ಗರ್ಭಗೃಹದ ಗೋಡೆಗಳು ಸರಳವಾಗಿದ್ದು ಪ್ರತಿಯೊಂದು ಗೋಡೆಯಲ್ಲಿ ಒಂದು ದೊಡ್ಡ ದೇವಕೋಷ್ಠ ಇದೆ. ದೇವಕೋಷ್ಠಗಳ ಮೇಲೆ ಗೋಪುರವಿದೆ. ಈ ಗೋಪುರವು ಎರಡು ಅಂತಸ್ತುಗಳನ್ನೊಳಗೊಂಡಿದ್ದು ಸಿಂಹಗಳಿಂದ ಅಲಂಕರಿಸಲ್ಪಟ್ಟಿದೆ. ಈ ಕೆಳಗಿನ ಅಂತಸ್ತಿನಲ್ಲಿ ಒಂದು ಬಾಗಿಲು ಇದ್ದು. ಇದರ ಮೂಲಕ ಗೋಪುರದ ಒಳಗಿರುವ ಒಂದು ದೊಡ್ಡ ಕೋಣೆಗೆ ಹೋಗಬಹುದು. ಗೋಪುರದ ಮೇಲಿರುವ ಶಿಖರವು ಗುಮ್ಮಟಾಕಾರದಲ್ಲಿದ್ದು ನಾಲ್ಕು ಬದಿಗಳಲ್ಲಿ ಕೀರ್ತಿಮುಖಗಳಿವೆ. ನವರಂಗದ ಗೋಡೆಯು ಶಿಲ್ಪಗಳ ಆರು ಸಾಲುಗಳಿಂದ ಅಲಂಕರಿಸಲ್ಪಟ್ಟಿದೆ. ಮೊದಲನೆ ಸಾಲಿನಲ್ಲಿ ಹಂಸ, ಸಿಂಹ, ಕೋತಿ ಮುಂತಾದ ಶಿಲ್ಪಗಳಿವೆ. ಎರಡನೆಯ ಸಾಲು ಚೌಕಾಕಾರದ ಗೋಡೆಗಂಬಗಳನ್ನೊಳಗೊಂಡಿದೆ. ಮೂರನೆಯ ಸಾಲಿನಲ್ಲಿ ಕಮಾನಿನಾಕಾರದ ರಂಧ್ರಗಳುಳ್ಳ ಗೂಡುಗಳಿವೆ. ಗೂಡುಗಳ ಮಧ್ಯದಲ್ಲಿ ಅಷ್ಟದಿಕ್ಪಾಲಕರು, ದೇವತೆಗಳು, ನೃತ್ಯಗಾರರು, ಪುರುಷಮೃಗ ಮುಂತಾದ ಶಿಲ್ಪಗಳ ಎರಡು ಸಾಲುಗಳಿವೆ. ೫ನೇ ಸಾಲು ಹೂವುಗಳಿಂದ ಅಲಂಕೃತವಾಗಿದೆ. ಮೇಲ್ಭಾಗದಲ್ಲಿ ಎಲೆಯಾಕಾರದ ಬುರುಜುಗಳಿವೆ.

ಈ ದೇವಸ್ಥಾನದ ದ್ವಾರ ಬಂಧಗಳ ಮೇಲೆ ಸುಂದರವಾದ ಶೈವ ದ್ವಾರಪಾಲಕರು, ಹೂವು ಮತ್ತು ಸುರುಳಿಗಳ ಪಟ್ಟಿಕೆಗಳಿವೆ. ಸುರುಳಿಬಳ್ಳಿಯನ್ನು ಮಕರದ ಮೇಲೆ ನಿಂತಿರುವ ಸ್ತ್ರೀ ಹಿಡಿದಿದ್ದಾಳೆ. ಬಾಗಿಲಿನ ಮಧ್ಯದಲ್ಲಿ ಗಜಲಕ್ಷ್ಮಿಯಿದ್ದಾಳೆ.

ನವರಂಗದಲ್ಲಿ ಚಿಕ್ಕದಾದ ಜಗಲಿಯಿದೆ. ಈ ಜಗಲಿಯ ಮೇಲಿರುವ ೧೪ ಕಂಬಗಳು ಚೌಕಾಕಾರದಲ್ಲಿದ್ದರೆ, ಮಧ್ಯದಲ್ಲಿರುವ ನಾಲ್ಕು ಕಂಬಗಳು ಹೊಯ್ಸಳ ಶೈಲಿಯಲ್ಲಿವೆ. ದಕ್ಷಿಣದ ಗೋಡೆಯ ಎದುರಿಗೆ ಗೋಪುರಗಳುಳ್ಳ ನಾಲ್ಕು ಗೂಡುಗಳಿದ್ದು ಆ ಗೂಡುಗಳಲ್ಲಿ ಷಣ್ಮುಖ, ಗಣೇಶ, ಮಹಿಷಾಸುರಮರ್ಧಿನಿ ಮತ್ತು ಭೈರವರ ವಿಗ್ರಹ ಗಳಿವೆ. ನವರಂಗದ ಮಧ್ಯದ ಒಳಮಾಳಿಗೆ ಮಧ್ಯದಲ್ಲಿ ಕಮಲ ಮತ್ತು ಸುತ್ತಲೂ ನವಿಲುಗಳ ಅಲಂಕಾರವಿದೆ. ಗರ್ಭಗೃಹದಲ್ಲಿ ಚಿಕ್ಕ ಜಗಲಿಯ ಮೆಲೆ ಒಂದು ಚಿಕ್ಕ ಲಿಂಗವಿದೆ. ಈ ಚಿಕ್ಕ ಜಗಲಿಯನ್ನು ದೊಡ್ಡ ಜಗಲಿಯಮೇಲೆ ಇಡಲಾಗಿದೆ. ದೊಡ್ಡ ಜಗಲಿಯ ಮೇಲೆ ಕುಳಿತಿರುವ ೩೨ ದುರ್ಗೆಯರ ಶಿಲ್ಪಗಳಿವೆ. ಮುಖ್ಯ ದೇವಸ್ಥಾನದ ಪಶ್ಚಿಮಕ್ಕೆ ಇದೇ ಶೈಲಿಯಲ್ಲಿ ಕಟ್ಟಿದ ಪಾರ್ವತಿ ದೇವಸ್ಥಾನವಿದೆ. ಎದುರಿಗೆ ನಂದಿ ಮಂಟಪವಿದೆ. ಈ ಮಂಟಪದ ನಾಲ್ಕೂ ಬದಿಗೆ ಕಮಾನಿನ ಪ್ರವೇಶಗಳಿವೆ.

ಕೆಳದಿ ನಾಯಕರು ಶಿವಮೊಗ್ಗದಲ್ಲಿ ಕೆಲವು ಬಸದಿ ಮತ್ತು ದೇವಸ್ಥಾನಗಳ ಜೀರ್ಣೋದ್ಧಾರ ಕೈಗೊಂಡರು. ಇಲ್ಲಿರುವ ಶಿವಪ್ಪನಾಯಕನ ಅರಮನೆಯು ವಾಸ್ತುಶೈಲಿ ಯಲ್ಲಿ ಅತಿ ಸುಂದರವಾಗಿದೆ. ಇದು ವಿಶಾಲವಾದ ಹಜಾರವನ್ನೊಳಗೊಂಡಿದ್ದು ಹಜಾರದ ಎರಡು ಮೂಲೆಗಳಲ್ಲಿ ಒಂದೊಂದು ಕೋಣೆಗಳಿವೆ. ಈ ಕೋಣೆಗಳ ಮೇಲೆ ಇದೇ ರೀತಿಯ ಕೋಣೆಗಳಿದ್ದು ಮಧ್ಯದಲ್ಲಿ ಉಪ್ಪರಿಗೆ ಇದೆ. ಇಲ್ಲಿಯೂ ಮುಂದೆ ಕಂಬಗಳುಳ್ಳ ಕಮಾನುಗಳಿವೆ. ಮೇಲಿನ ಉಪ್ಪರಿಗೆಗೆ ಹೋಗಲು ಕೆಳಗಿನ ಕೋಣೆಗಳ ಪಕ್ಕದಲ್ಲಿ ಮೆಟ್ಟಿಲುಗಳಿವೆ.

ಅರಮನೆಗೆ ಹೋಗಲು ಮುಂಭಾಗದಲ್ಲಿ ಕಲ್ಲಿನ ೫ ಸೋಪಾನಗಳಿವೆ. ಮುಖ ಮಂಟಪದಲ್ಲಿ ಎತ್ತರವಾದ ನಾಲ್ಕು ಮರದ ಕಂಬಗಳಿವೆ. ಹಜಾರದಲ್ಲಿ ಕಂಬಗಳ ಮೂರು ಸಾಲುಗಳಿವೆ. ಮಧ್ಯದ ಸಾಲಿನ ಕಂಬಗಳ ಮೇಲಿರುವ ತೊಲೆಗಳು ಮೇಲಿನ ಮಾಳಿಗೆಯನ್ನು ಎತ್ತಿಹಿಡಿದಿವೆ. ಮೂರು ಮತ್ತು ನಾಲ್ಕನೆಯ ಸಾಲಿನ ಕಂಬಗಳು ಮೇಲಿನ ಉಪ್ಪರಿಗೆಗೆ ಆಧಾರವಾಗಿವೆ. ಮುಖಮಂಟಪ ಮತ್ತು ಎರಡನೆಯ ಸಾಲಿನ ಕಂಬಗಳ ಕೆಳಗಿನ ಭಾಗವನ್ನು ಅಷ್ಟಭುಜಾಕೃತಿಯಲ್ಲಿ ಕೆತ್ತಿದ್ದು ಕಮಲದಂತೆ ಕಾಣು ತ್ತವೆ. ದಿಂಡು ಕೊಳವೆಯಾಕಾರದಲ್ಲಿದ್ದು, ಮೇಲ್ಭಾಗದಲ್ಲಿ ಹೂವಿನ ಅಲಂಕಾರವಿದೆ. ಹಿಂದಿನ ಎರಡು ಸಾಲುಗಳ ಕಂಬಗಳಲ್ಲಿ ಹೆಚ್ಚು ಅಲಂಕಾರವಿದೆ. ಹಿಂದಿನ ಎರಡು ಸಾಲುಗಳ ಕಂಬಗಳು ಹೆಚ್ಚು ಅಲಂಕಾರವಾಗಿಲ್ಲ. ಹಿಂದಿನ ಗೋಡೆಯಲ್ಲಿ ಕಿಟಕಿಗಳು ಮತ್ತು ಒಂದು ದೊಡ್ಡ ಬಾಗಿಲು ಇವೆ. ಬಾಗಿಲಿನ ಎರಡು ಬದಿಗಳಲ್ಲಿ ದೀಪ ಗಳನ್ನಿಡಲು ಸಣ್ಣ ಗೂಡುಗಳಿವೆ. ಈ ಗೂಡುಗಳಿಗೆ ಮೇಲೆ ಜಾಲರಿಯುಳ್ಳ ಕಮಾನು ಗಳಿವೆ. ಮೇಲಿನ ಅಂತಸ್ತು ಆಯತಾಕಾರದಲ್ಲಿದೆ. ಇಲ್ಲಿ ೮ ಕಂಬಗಳ ಎರಡು ಸಾಲು ಗಳಿವೆ. ಉಪ್ಪರಿಗೆ ಮಧ್ಯದಲ್ಲಿ ಮುಂದೆ ಚಾಚಿಕೊಂಡಿದೆ. ಮುಂಭಾಗದ ಕಂಬಗಳ ಮಧ್ಯದಲ್ಲಿ ಮತ್ತು ಮುಂದೆ ಚಾಚಿಕೊಂಡಿರುವ ಉಪ್ಪರಿಗೆ ಕೊನೆಯಲ್ಲಿ ಕಟಾಂಜನ

(ಕಟಕಟೆ) ಇದೆ. ಈ ಅರಮನೆಯು ವಿಜಯನಗರದ ಕೊನೆಯ ಕಾಲದ ಮರದ ಅರಮನೆಯ ಕುರುಹಾಗಿ ಈಗ ಉಳಿದಿದೆ.

ಕವಲೆದುರ್ಗದಲ್ಲಿರುವ ವಿಶ್ವೇಶ್ವರ ದೇವಸ್ಥಾನವು ಒಂದು ಚಿಕ್ಕ ದೇವಸ್ಥಾನ. ಇಲ್ಲಿ ಕಮಾನಿನ ಪ್ರವೇಶವಿದೆ. ಇದೇ ಸ್ಥಳದಲ್ಲಿರುವ ಇನ್ನೊಂದು ಚಿಕ್ಕ ದೇವಸ್ಥಾನ ದಲ್ಲಿಯೂ. ಕಮಾನಿನ ಪ್ರವೇಶ ಮೆರ್ಲಾನ್ (Merlon) ಗಳನ್ನೊಳಗೊಂಡ ಪ್ಯಾರಾಪೆಟ್ ಮತ್ತು ಸಣ್ಣ ಗೋಪುರಗಳಿವೆ. ಈ ಗೋಪುರಗಳು ಮೂಲೆಯಲ್ಲಿವೆ.

ಮೇಲೆ ವಿವರಿಸಿದ ದೇವಸ್ಥಾನಗಳ ವಾಸ್ತುಶೈಲಿಯನ್ನು ಗಮನಿಸಿದಾಗ ಕೆಳದಿ ನಾಯಕರ ವಾಸ್ತು ಶೈಲಿಯಲ್ಲಿ ಮುಸ್ಲಿಮ್ ಶೈಲಿಯ ಕಮಾನುಗಳು. ಗುಮ್ಮಟಗಳು, ಸಣ್ಣಗೋಪುರಗಳು ಕಂಡು ಬರುತ್ತವೆ. ಇದರಿಂದ ಅವರದೇ ಆದ ಒಂದು ಹೊಸ ವಾಸ್ತು ಶೈಲಿಯನ್ನು ಕೆಳದಿ ನಾಯಕರು ಪ್ರಾರಂಭಿಸಿದ್ದುದು ಕಂಡು ಬರುತ್ತದೆ.

ಗ್ರಂಥ ಋಣ

೧. ವಿಜಯನಗರ ಅಧ್ಯಯನ ಸಂಪುಟ-೧, ಸಂ. ಡಾ.ಡಿ.ವಿ.ದೇವರಾಜ್, ಡಾ.ಚೆನ್ನಬಸಪ್ಪಪಾಟೀಲ, ೧೯೯೬, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು ; ಲೇಖನ : ವಿಜಯನಗರ ಚರಿತ್ರೆ ವಿಜಯನಗರ ಚರಿತ್ರೆಯಲ್ಲಿ ಕೆಳದಿ ಅರಸರ, ಲೇಖಕರು ; ಕೆ.ಜಿ. ವೆಂಕಟೇಶ ಜೋಯಿಸ್.

೨. ವಿಜಯನಗರ ಅಧ್ಯಯನ ಸಂಪುಟ-೩, ೧೯೯೮, ಪ್ರಾಚ್ಯವಸ್ತು ಮತ್ತುಸಂಗ್ರಾಹಾಲಯಗಳ ನಿರ್ದೇಶನಾಲಯ, ಮೈಸೂರು., ಲೇಖನ ; ವಿಜಯ ನಗರ ಕೆಳದಿ ರಾಜಕೀಯ ಸಂಬಂಧಗಳು, ಲೇಖಕರು ; ಜಯ ದೇವಪ್ಪ ಜೈನ.

೩. ಆನ್ಯುಯಲ್ ರಿಪೋಟ್ ಆಫ್ ದಿ ಮೈಸೂರ್ ಆರ್ಕಿಯಾಲಜಿಕಲ್ ಡಿರ್ಪಾಮೆಂಟ್ ಫಾರ್ ದಿ ಇಯರ್ ೧೯೩೨.

೪. ಸುಂದರ ಎ ; ೧೯೮೬. ಕೆಳದಿ ಅರಸರ ಕಾಲದ ವಾಸ್ತು ಮತ್ತು ಮೂರ್ತಿ ಶಿಲ್ಪ, ಸಂಪುಟ-೧, ರಾಜಕೀಯ ಮತ್ತು ಸಾಂಸ್ಕೃತಿಕ ಹಿನ್ನಲೆ, ಡೈರೆಕ್ಟರೇಟ್ ಆಫ್ ಆರ್ಕಿಯಾಲಜಿ ಲ್ಯಾಂಡ್ ಮ್ಯೂಸಿಯಂಸ್ ಮೈಸೂರು.

೫. ಸುಂದರ ಎ ೧೯೮೭, ಕೆಳದಿ ನಾಯಕ ಆರ್ಟ್ ಆಂಡ್ ಆರ್ಕಿಟೆಕ್ಚರ್ ವಾಲ್ಯೂಮ್-5. ಪಾರ್ಟ್ - ೨, ದಿ ಶಿವಪ್ಪ ನಾಯಕ ; ಪ್ಯಾಲೆಸ್ ಇನ್ ಶಿವಮೊಗ್ಗ, ಡೈರಕ್ಟೋರೇಟ್ ಆಫ್ ಆರ್ಕಿಯಾಲಜಿ ಅಂಡ್ ಮ್ಯೂಜಿಯಂ, ಮೈಸೂರು.

೨೧. ಹಂಪಿಯ ಪರಿಸರದಲ್ಲಿ ದೊರೆತ ಎರಡು ಜೈನ ಶಿಲ್ಪಗಳು ಒಂದು ಟಿಪ್ಪಣಿ

ಹೆಚ್.ಟಿ.ತಳವಾರ್

ದಕ್ಷಿಣ ಭಾರತದಲ್ಲಿ ಜೈನಧರ್ಮವು ಆದಿಕಾಲದಿಂದ ೧೩ ನೆಯ ಶತಮಾನದ ವರೆಗೆ ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ತನ್ನದೇ ಆದ ಮಹತ್ವವನ್ನು ಹಾಗೂ ಪಾತ್ರವನ್ನು ವಹಿಸಿರುವ ಜೈನದರ್ಮವು ಕರ್ನಾಟಕದಲ್ಲಿ ತನ್ನದೇ ಆದ ಮಹತ್ವವನ್ನು ಪಡೆದಿರುವುದು. ಅಲ್ಲದೆ ಕರ್ನಾಟಕದಲ್ಲಿ ಆಳಿದ ತಲಕಾಡಿನ ಗಂಗರು, ಬಾದಾಮಿಯ ಚಾಲುಕ್ಯರು ರಾಷ್ಟ್ರಕೂಟರು, ಹೊಯ್ಸಳರು, ಸೇವುಣರು ಅಲ್ಲದೆ ಸಾಮಂತ ರಾಜರಾದ ಕೊಲ್ಲಾಪುರದ ಶಿಲಾಹಾರರು, ಸೌದತ್ತಿಯ ರಟ್ಟರು ಹಾಗೂ ವಿಜಯನಗರ ಅರಸರು ಈ ಧರ್ಮಕ್ಕೆ ರಾಜಕೀಯ ಪ್ರಾತಿನಿಧ್ಯತೆಯನ್ನು ಹಾಗು ರಾಜಶ್ರಯವನ್ನು ಕೊಟ್ಟು ಈ ಧರ್ಮವನ್ನು ಪೋಷಿಸಿದರು. ಜೈನದರ್ಮವು ಕರ್ನಾಟಕದ ಶಿಲ್ಪಕಲೆ, ವಾಸ್ತು ಶಿಲ್ಪ ಹಾಗು ಕನ್ನಡ ಸಾಹಿತ್ಯದಲ್ಲಿ ಅಮೋಘವಾದ ಕೊಡುಗೆಯನ್ನು ಕೊಟ್ಟಿದೆ.

ವಿಜಯನಗರ ಕಾಲದಲ್ಲಿ ಜೈನಧರ್ಮವು ಅವನತಿಯನ್ನು ಕಂಡಿರಬಹುದು. ಆದರೆ ಬುಕ್ಕರಾಯ, ದೇವರಾಯ ಹಾಗೂ ಕೃಷ್ಣದೇವರಾಯನ ಕಾಲದಲ್ಲಿ ಜೈನಧರ್ಮಕ್ಕೆ ರಾಜಾಶ್ರಯ ಕೊಟ್ಟು ಜೈನ ಬಸದಿಗಳು ನಿರ್ಮಾಣವಾಗಿರುವುದು ಕಂಡು ಬರುತ್ತದೆ. ಈ ಅವಧಿಯಲ್ಲಿ ಶ್ರವಣಬೆಳಗೊಳ, ಮೂಡಬಿದರೆ ಮತ್ತು ಹುಮ್ಚ ಮುಂತಾದವು ಜೈನಧರ್ಮ ಕ್ಷೇತ್ರಗಳಾಗಿದ್ದವು. ಇತ್ತೀಚಿನ ದಿನಗಳಲ್ಲಿ ಹಂಪಿ ಪರಿಸರದಲ್ಲಿ ಜೈನ ಧರ್ಮದ ಪ್ರಾತಿನಿಧ್ಯದ ಹಾಗೂ ಧರ್ಮದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕೊಡುತ್ತವೆ.

೧. ಶಾಂತಿನಾಥಃ ಮೇಲ್ಭಾಗದ ಶಿಲ್ಪವು ಖಡ್ಗಾಸನದಲ್ಲಿದ್ದು ಉದ್ದನೆಯಾದ ಕಿವಿಯನ್ನು ಹೊಂದಿರುವುದು. ದೇಹವು ನೀಳಾಕಾರವಾಗಿದ್ದು ಅರ್ಧಮುಚ್ಚಿದ ಕಣ್ಣು ಹಾಗೂ ಗುಂಗುರು ಕೂದಲನ್ನು ಹೊಂದಿರುವವನು; ತಲೆಯ ಮೇಲೆ ಮೂರು (ಮುಕ್ಕೊಡೆ) ಛತ್ರಾವಳಿಗಳಿಂದ ಕೂಡಿರುವುದು. ಎರಡು ಬದಿಯ ಮೇಲ್ಭಾಗದಲ್ಲಿ ಎರಡು ಚೌರಿಗಳು ಇರುವುವು. ಶಿಲ್ಪದ ಕೆಳಭಾಗದಲ್ಲಿ ಶಾಸನ ದೇವತೆಗಳಾದ ಗರುಡ ಮತ್ತು ಮಹಾಮಾನಸಿ ಶಿಲ್ಪಗಳು ಇರುವುವು. ಎರಡು ಶಿಲ್ಪಗಳು ಸವ್ಯಲಲಿತಾಸನಲ್ಲಿದ್ದು ಶಂಖ, ಚೌರಿಗಳನ್ನು ಉದ್ದನೆಯ ಕಮಲದ ಹೂ ಮತ್ತು ಹಣ್ಣನ್ನು ಕೈಯಲ್ಲಿ ಹಿಡಿದಿದ್ದರೆ ಕೆಳಗಿನ ಕೈಗಳಲ್ಲಿ ಕಮಲದ ಹೂ ಮತ್ತು ಹಣ್ಣನ್ನು ಹಿಡಿದಿರುವುದು.

ಶಿಲ್ಪದ ಕೆಳಭಾಗದ ಮಧ್ಯದಲ್ಲಿ ಶಾಂತಿನಾಥನ ಜಿಂಕೆ ಗೋಚರವಾಗಿರುವುದು. ಈ ಶಿಲ್ಪವು ಗಟ್ಟಿಶಿಲೆಯಿಂದ ಮಾಡಿದ್ದು ಸುಮಾರು ಕ್ರಿ.ಶ. ಹನ್ನೆರಡನೆಯ ಶತಮಾನಕ್ಕೆ ಸಂಬಂದಪಟ್ಟಿರುವುದು.

೨. ಚೌವೀಸ್ ತೀರ್ಥಂಕರರು (ಮಹಾವೀರ) ಮಹಾವೀರನು ಖಡ್ಗಾಸನದಲ್ಲಿದ್ದು ಅಗಲವಾದ ಎದೆ ನೀಲವಾದ ದೇಹವನ್ನು ಉದ್ದನೆಯ ಕಿವಿಯನ್ನು ಅರ್ಧಮುಚ್ಚಿದ ಕಣ್ಣು, ಗುಂಗುರು ಕೂದಲನ್ನು ಹೊಂದಿರುವನು. ತಲೆಯ ಮೇಲೆ ಮೂರು ಪತ್ರಾವಳಿಗಳಿಂದ ಮುಕ್ಕೊಡೆ ಆವೃತವಾಗಿರುವುದು. ಶಿಲ್ಪದ ಎರಡೂ ಭಾಗದಲ್ಲಿ ಇಪ್ಪತ್ತೂರು ತೀರ್ಥಂಕರರನ್ನು ಕಾಣಬಹುದು. ತೀರ್ಥಂಕರರು, ಪದ್ಮಾಸನದಲ್ಲಿ ಕುಳಿತಿದ್ದ ದಾರಮುದ್ರೆಯಲ್ಲಿದ್ದು ಧ್ಯಾನಾವಸ್ಥೆಯಲ್ಲಿರುವರು, ಅರ್ಧಮುಚ್ಚಿದ ಕಣ್ಣುಹಾಗೂ ಉದ್ದನೆಯ ಕಿವಿಯನ್ನು ಹೊಂದಿರುವರು. ಪಾರ್ಶ್ವನಾಥ ತೀರ್ಥಂಕರರು ಖಡ್ಗಾಸನದಲ್ಲಿದ್ದು ತಲೆಯು ಐದು ಹೆಡೆ ಸರ್ಪದಿಂದ ಆವೃತವಾಗಿದ್ದಾರೆ. ಸುಪಾರ್ಶ್ವನಾಥ ತೀರ್ಥಂಕರ ಶಿಲ್ಪವು ಖಡ್ಗಾಸನದಲ್ಲಿದ್ದು ತಲೆಯು ಏಳು ಸರ್ಪಗಳಿಂದ ಅಲಂಕೃತವಾಗಿರುವುದು. ಕೆಳಗಡೆ ಶಾಸನ ದೇವತೆಗಳಾದ ಧರಣೇಂದ್ರ ಮತ್ತು ಪದ್ಮಾವತಿ ಹಾಗು ಪುಷ್ಪ ಮತ್ತು ಮನೋವೇಗಾರನ್ನು ಕಾಣಬಹುದು. ಇವರೆಲ್ಲರೂ ತಿರುವುಮುರುವಾದ ಕಮಲದ ಮೇಲೆ ಸವ್ಯ ಲಲಿತಾಸನದಲ್ಲಿ ಕುಳಿತಿದ್ದು, ಶಂಖ, ಚಕ್ರವನ್ನು ಮೇಲಿನಕೈಯಲ್ಲಿ ಹಿಡಿದಿದ್ದು, ಕೆಳಗಡೆ ಕೈಯಲ್ಲಿ ಕಮಲದ ಮೊಗ್ಗು ಹಣ್ಣು, ಅದೇ ರೀತಿಯಾಗಿ ಛತ್ರ ಮತ್ತು ಗುರಾಣಿಯನ್ನು ಮೇಲಿನ ಕೈಯಲ್ಲಿ ಖಡ್ಗ ಮತ್ತು ಹಣ್ಣನ್ನು ಕೆಳಗಡೆ ಕೈಯಲ್ಲಿ ಹೊಂದಿರುವರು. ಅಲ್ಲದೆ ಕಿರೀಟ ಮುಕುಟ ಪತ್ರಕುಂಡಲ ಕಂಠಹಾರ ಆಭರಣಗಳನ್ನು ಹೊಂದಿರುವರು. ಈ ಶಿಲ್ಪವು ಕಪ್ಪು ಕಲ್ಲಿನಿಂದ ಮಾಡಿದ್ದು ೧೫ನೇ ಶತಮಾನದ್ದಾಗಿರುವುದು.

ಟಿಪ್ಪಣಿಗಳು

೧. ಹೆಚ್.ಟಿ.ತಳವಾರ್ ೧೯೯೭ ಜೈನ ಆರ್ಟ್ ಆಂಡ್ ಆರ್ಕಿಟೆಕ್ಚರ್ ಆಫ್, ವಿಜಯನಗರ ಹಂಪಿ,

೨. ಎಸ್.ರಾಜಶೇಖರ ಮತ್ತು ಕೆ.ಟಿ.ಈರಣ್ಣ, ೧೯೮೫, ಜೈನ ಬ್ರಾಂಜಸ್ ಇನ್ ಕನ್ನಡ ರೀಸರ್ಚ್ ಇನ್ಸ್ಟ್ಯೂಟ್, ಕರ್ನಾಟಕ ಯುನಿರ್ವಸಿಟಿ, ಧಾರವಾಡ.

೨೨. ವಿಜಯನಗರದಲ್ಲಿ ಪುರಗಳು : ಕೃಷ್ಣಾಪುರ

ಡಾ.ಹೆಚ್.ಎಂ.ಚಂದ್ರಶೇಖರಶಾಸ್ತ್ರಿ

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಮೊದಲೇ ಹಂಪೆ ರಾಜಕೀಯ, ಸಾಂಸ್ಕೃತಿಕ ಮತ್ತು ಧಾರ್ಮಿಕ ಕ್ಷೇತ್ರವಾಗಿ ವಿಶಿಷ್ಟಸ್ಥಾನವನ್ನು ಪಡೆದಿತ್ತು. ಇದರ ಪ್ರಾಮುಖ್ಯತೆ ಹೆಚ್ಚಿದ್ದು ಹೊಯ್ಸಳ ವೀರಬಲ್ಲಾಳನ ಕಾಲದಲ್ಲಿ ಮತ್ತು ವಿಜಯನಗರದ ಸಂಗಮ ಮನೆತನದ ಅರಸರ ಆಳ್ವಿಕೆಯಲ್ಲಿ. ಈ ಮನೆತನದ ಆಳ್ವಿಕೆಯ ಆರಂಭದ ಕಾಲದಲ್ಲಿ ಒಂದು ಚಿಕ್ಕ ಕೇಂದ್ರವಾಗಿದ್ದ ಹಂಪೆ ಮುಂದೆ ರಾಜ್ಯಧಾನಿಯಾಗಿ, ಹಿಂದೂ ಸಾಮ್ರಾಜ್ಯದ ನಿರ್ಮಾಣಕ್ಕೆ ಸ್ಫೂರ್ತಿ ಚೇತನವನ್ನು ಒದಗಿಸಿತ್ತು. ಚರಿತ್ರಾರ್ಹ ವಿಜಯ ನಗರ ಸಾಮ್ರಾಜ್ಯದ ರಾಜ್ಯಧಾನಿಯಾಗಿ ಕ್ರಿ.ಶ.೧೫೩೧ರನಂತರದ ಶಾಸನಗಳಲ್ಲಿ 'ವಿದ್ಯಾ ನಗರ' ಅಥವಾ 'ವಿದ್ಯಾನಗರಿ' ಎಂದು ಕರೆಯಲಾಗಿದೆ.

ರಾಜಧಾನಿ ವಿಜಯನಗರವು ಉತ್ತರದ ಆನೆಗುಂದಿಯಿಂದ ದಕ್ಷಿಣಕ್ಕೆ ಹೊಸಪೇಟೆ ವರೆಗೆ ಪಶ್ಚಿಮದಲ್ಲಿ ಶಿವಪುರದಿಂದ ಪೂರ್ವದಲ್ಲಿ ರಾಮಸಾಗರ ದವರೆಗೆ ಹಬ್ಬಿತ್ತು. ಈ ವಿಶಾಲಗಡಿಗಳ ನಡುವೆ ವಿಜಯನಗರವು ಹಲವು 'ಪುರ' ಗಳಿಂದ ಕೂಡಿತ್ತು. ಆ ಪುರಗಳೆಂದರೆ ವಿರೂಪಾಕ್ಷಪುರ, ಕೃಷ್ಣಾಪುರ, ವಿಠ್ಠಲಾಪುರ, ಅಚ್ಯುತಾಪುರ, ಕಡ್ಡಿರಾಮಾಪುರ, ಕಮಲಾಪುರ, ವರದಾದೇವಿ ಅಮ್ಮನ ಪಟ್ಟಣ. ಇವಲ್ಲದೆ ನಗರದ ಸುತ್ತ ಮುತ್ತಲಿನಲ್ಲಿ ನಿರ್ಮಾಣಗೊಂಡ ಉಪನಗರಗಳಾದ ಮಲಪನಗುಡಿ, ಸಾಲೆ ತಿರುಮಲರಾಯನ ಪಟ್ಟಣ, ನಾಗಲಾದೇವಿಪುರ, ತಿರುಮಲದೇವಿ ಅಮ್ಮನಪಟ್ಟಣ, ಚಿತ್ತವಾಡಿ ಅಥವಾ 'ಚಿಕ್ಕವಾಡಿ' ಗಳಿಂದ ಕೂಡಿತ್ತು. ವಿರೂಪಾಕ್ಷಪುರ, ಅಚ್ಯುತಾಪುರ, ವಿಠ್ಠಲಾಪುರ ಗಳು ತುಂಗಭದ್ರಾ ನದಿಯ ಬಲದಂಡೆಯ ಮೇಲೆ ಬೆಳೆದು ಬಂದರೆ, ಕೃಷ್ಣಾಪುರ, ಕಮಲಾಪುರ, ಕಡ್ಡಿರಾಮಾಪುರ ವರದಾದೇವಿ ಅಮ್ಮನ ಪಟ್ಟಣಗಳು ನದಿ ಯಾಚೆ ಬೆಳೆದು ಬಂದಿವೆ.

ವಿರೂಪಾಕ್ಷಪುರ, ಕೃಷ್ಣಾಪುರ, ವಿಠ್ಠಲಾಪುರ, ಅಚ್ಯುತಾಪುರ, ಕಮಲಾಪುರ, ವರದಾ ದೇವಿ ಅಮ್ಮನ ಪಟ್ಟಣ ಮತ್ತು ವಿಜಯನಗರ ಒಂದಕ್ಕೊಂದು ಹೊಂದಿಕೊಂಡು ಪರ್ವತಗಳು, ಕಾಲುವೆಗಳು ತೋಪುಗಳು, ಇತ್ಯಾದಿ ಎಲ್ಲೆಗೆರೆಗಳಾಗಿದ್ದವು. ಹೇಮ ಕೂಟ, ಮಾತಂಗ, ಕಿಷ್ಕಿಂಧ, ಮಾಲ್ಯವಂತ ಋಷ್ಯಮೂಕ ಪರ್ವತಗಳು ಪ್ರಕೃತಿದತ್ತವಾಗಿ ಸುತ್ತಲೂ ನಿರ್ಮಾಣವಾದ ಬೃಹತ್‌ಕೋಟೆಗಳಂತಿವೆ. ಈ ಎಲ್ಲಾ ಪುರಗಳು ಒಟ್ಟಾಗಿ ಮುಖ್ಯಪಟ್ಟಣ ವಾಯ್ತು. ಇದರ ವಿಸ್ತಾರ ವಿರೂಪಾಕ್ಷ ಪುರದಿಂದ ಪೆನುಗೊಂಡೆ

ದ್ವಾರ (ಬಾಗಿಲು) ದವರೆಗೆ ಮತ್ತು ಕಮಲಾಪುರ ಕೆರೆಯಿಂದ ತಳವಾರ ಘಟ್ಟದವರೆಗೆ ಒಟ್ಟು ೬ ಕಿ.ಮೀ.ಇದೆ. ಉಪನಗರಗಳು ನೈರುತ್ಯಕ್ಕೆ ಕಮಲಾಪುರ-ಹೊಸಪೇಟೆ ರಸ್ತೆಯ ಮೇಲೆ ೬ ಕಿ.ಮೀ ದೂರದಲ್ಲಿದ್ದವು. ವಿಜಯನಗರದ ನಗರ ಯೋಜನ ಕಾರರು ರಾಜಧಾನಿ ವೇಗವಾಗಿ ಬೆಳೆಯುವುದನ್ನು ಗಮನದಲ್ಲಿಟ್ಟು ಕೊಂಡು ಮುಖ್ಯನಗರ ಮತ್ತು ಉಪನಗರಗಳ ನಡುವೆ ಕಾಪು ತಡೆಯಾಗಿ ಜಾಗ ಬಿಟ್ಟಿರಬಹುದು.

ವಿಜಯನಗರದ ಪುರಗಳಲ್ಲೇ ಪ್ರಾಚೀನ ಪ್ರಥಮ ವಿರೂಪಾಕ್ಷಪುರ. ಕೃಷ್ಣದೇವ ರಾಯನ ಕಾಲದಲ್ಲಿ ನಿರ್ಮಾಣಗೊಂಡ ವಿಜಯನಗರ ಎರಡನೇ ಪುರವೇ ಕೃಷ್ಣಾಪುರ. ಕೃಷ್ಣದೇವಾಲಯದ ಸುತ್ತಮುತ್ತಲಿನ ಪ್ರದೇಶವೇ ಕೃಷ್ಣಾಪುರ. ಕೃಷ್ಣದೇವಾಲಯ ಹಂಪಿಯ ಪ್ರಮುಖ ದೇವಾಲಯಗಳಲ್ಲೊಂದು. ಈ ದೇವಾಲಯ ಕಮಲಾಪುರದತ್ತ ಹೋಗುವ ದಾರಿಯಲ್ಲಿ ವಿರೂಪಾಕ್ಷ ಬಜಾರಿನ ದಕ್ಷಿಣದಲ್ಲಿದೆ. ಕ್ರಿ.ಶ.೧೫೧೩ರಿಂದ ಈ ಪ್ರದೇಶಕ್ಕೆ 'ಕೃಷ್ಣಾಪುರ' ವೆಂಬ ಹೆಸರು ಬಂದಿತ್ತು. ಇಲ್ಲಿನ ಬಾಲಕೃಷ್ಣನ ದೇವಾಲಯದ ಪ್ರಕಾರ ಒರಿಸ್ಸಾದ ಗಜಪತಿಯನ್ನು ಸೋಲಿಸಿದ ಕೃಷ್ಣದೇವರಾಯನ ವಿಜಯದ ಸ್ಮಾರಕವಾಗಿ ಉದಯಗಿರಿಯಿಂದ ಬಾಲಕೃಷ್ಣ ವಿಗ್ರಹವನ್ನು ತಂದು ಇಲ್ಲಿ ದೇವಾಲಯ ಕಟ್ಟಿಸಿ ಪ್ರತಿಷ್ಠಾಪನೆ ಮಾಡಿಸಿದ. ಆಗ ಅಲ್ಲಿ ಈ ಕೃಷ್ಣಾಪುರ ಬೆಳೆಯಿತು.

ಕೃಷ್ಣಾಪುರ ಹಂಪಿಯಲ್ಲಿ ಸ್ಥಾಪನೆಗೊಂಡ ಪ್ರಥಮ ವೈಷ್ಣವಪುರ. ವಿರೂಪಾಕ್ಷಪುರಕ್ಕೆ ಸಮಾನಾಂತರವಾಗಿ ಕೃಷ್ಣದೇವರಾಯನ ಕಾಲಕ್ಕೆ ಸ್ಥಾಪಿತವಾದವುಗಳಲ್ಲಿ ಈ ಕೃಷ್ಣಾಪುರ ಮೊದಲಿನದು. ಈ ಪುರದ ಪಾರಂಪರಿಕ ಗಡಿ ಬಲಗಡೆ ಉದ್ದಾನ ವೀರಭದ್ರದೇವಾಲಯ ಮತ್ತು ಎಡಗಡೆ ವಿರೂಪಾಕ್ಷ ಬಜಾರ್. ಶಾಸನವೊಂದರ ಪ್ರಕಾರ ಇಂದಿನ ಉದ್ದಾನ ವೀರಭದ್ರ ದೇವಾಲಯ ಈ ಪ್ರದೇಶಕ್ಕೆ ಸೇರಿತ್ತು ಮತ್ತು ಅಂದು ಆ ದೇವತೆಯ ಹೆಸಗು ಮುದ್ದುವೀರಣ್ಣನೆಂಬುದಾಗಿತ್ತು. ಕೃಷ್ಣದೇವರಾಯನ ಕಾಲದವರೆಗೆ ಹೇಮಕೂಟದ ದಕ್ಷಿಣ ಭಾಗದಲ್ಲಿ ಕಾಲುವೆ ಇದ್ದು ಕೃಷ್ಣಾಪುರ ಪ್ರದೇಶವಾಗಿತ್ತು. ನಂತರ ಕೃಷ್ಣದೇವರಾಯನು ಮಧ್ಯಭಾಗದಲ್ಲಿ ವಿಷ್ಣುದೇವಾಲಯವನ್ನು ನಿರ್ಮಿಸಿ ಸುತ್ತಲ ಪ್ರದೇಶವನ್ನು ಪುರವಾಗಿಸಿದ. ಶ್ರೀ ಬಾಲಕೃಷ್ಣ ವಿಗ್ರಹವನ್ನು ಶುಕ್ರವಾರ, ಫೆಬ್ರವರಿ ೧೬ ಕ್ರಿ.ಶ.೧೫೧೫ರಂದು ಆ ದೇವಾಲಯದ ಈಶಾನ್ಯ ಭಾಗದಲ್ಲಿ ಮಣಿ ಮಂಟಪದಲ್ಲಿ ಪ್ರತಿಷ್ಠಾಪಿಸಿದ.

ಕ್ರಿ.ಶ.೧೫೧೩ ಮತ್ತು ೧೫೩೩ರ ನಡುವೆ ಕೃಷ್ಣಾಪುರ ಪೂರ್ಣಪ್ರಮಾಣದ ಬೆಳವಣಿಗೆ ಕಂಡಿತು. ತುರ್ತುಕಾಲುವೆಯ ಬಳಿ ಪ್ರತಾಪದೇವಾಲಯ ಪುರವೆಂಬ ಅಗ್ರಹಾರ ಬೆಳೆಯಿತು. ಬೇರೆ ಪುರಗಳಲ್ಲಿರುವಂತೆ ಉದ್ದನೆಯ ತೇರುಬೀದಿ ಇದ್ದು. ಅದು ಬಜಾರ್‌ಕೂಡ ಆಗಿತ್ತು. ಕೃಷ್ಣದೇವರಾಯನ ಅವಧಿಯಲ್ಲಿ ಕೃಷ್ಣ ಬಜಾರ್ ಸ್ಥಾಪಿತವಾಯಿತು. ಶಾಸನಗಳಲ್ಲಿ ಈ ಕೃಷ್ಣಬಜಾರನ್ನು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗಿದೆ. ಕೃಷ್ಣಾಪುರ-ಪೇಟೆ, ಬಾಲಕೃಷ್ಣದೇವರ ತೇರುಬೀದಿ' ಇತ್ಯಾದಿ.

'ಮೋಹನ ತರಂಗಿಣಿ' ಯಲ್ಲಿ ಕನಕದಾಸರು ಈ ಪುರವನ್ನು ಈ ಬಜಾರನ್ನು "ಕೃಷ್ಣನಗರಿ" ಎಂದು ಕರೆದಿದ್ದಾರೆ.

ಈ ದೇವಾಲಯದ ಎದುರು ಅನತಿ ದೂರದಲ್ಲಿ ಈಗಿನ ರಸ್ತೆಯಾಚೆ ತೇರು ಬೀದಿಯಿದ್ದು, ಮೆಟ್ಟಿಲುಗಳು ಇಲ್ಲಿ ಎರಡು ಕಡೆಗಳಲ್ಲಿ ಮಂಟಪಗಳಿದ್ದುದನ್ನು ಸೂಚಿಸುತ್ತವೆ. ಇವುಗಳ ಅವಶೇಷಗಳೆಲ್ಲ ಇಂದು ಕಬ್ಬು ಮತ್ತು ಬಾಳೆ ತೋಟಗಳಿಂದ ಮುಚ್ಚಿಹೋಗಿವೆ. ದೇವಾಲಯದಿಂದ ಪೂರ್ವಕ್ಕೆ ಹಬ್ಬಿರುವ ಈ ದಾರಿ ವಿರೂಪಾಕ್ಷ ಬಜಾರ್ ರಸ್ತೆಯಷ್ಟೇ ಅಗಲವಾಗಿದೆ. ಉದ್ದ ೫೭೦ಮೀಟರ್ ಅಗಲ ೪೯.೫ ಮೀಟರ್. ಈ ದಾರಿಯುದ್ದಕ್ಕೂ ಇಕ್ಕೆಲಗಳಲ್ಲಿ ಮೂರಡಿ ಎತ್ತರದ ಕಟ್ಟೆಗಳ ಮೇಲೆ ಮಂಟಪ ಗಳಿವೆ. ಇವೆಲ್ಲ ಎರಡಂಕಣದ ಮಂಟಪಗಳು, ಇವುಗಳಲ್ಲಿ ಕೆಲವು ಕೊಂಚ ದೊಡ್ಡ ದಾಗಿವೆ. ದೊಡ್ಡಮಂಟಪಗಳು ಶ್ರೀವೀರಶೈವರ ಮಠಗಳಿರಬಹುದು. ಬಜಾರಿನ ಎಡಗಡೆಯಲ್ಲಿ ಒಂದು ಕೊಳವಿದೆ. ಅದರ ಮಧ್ಯಭಾಗದಲ್ಲಿ ಗೋಪುರವುಳ್ಳ ಚಿಕ್ಕ ಉತ್ಸವ ಮಂಟಪವೊಂದಿದೆ. ಮಂಟಪಗಳ ಕಂಬಗಳ ಮೇಲೆ ಶ್ರೀವೀರಶೈವ ಚಿಹ್ನೆಗಳು, ಮೂರ್ತಿ ಶಿಲ್ಪಗಳ ಕೆತ್ತನೆ ಇದೆ. ರಸ್ತೆಯ ಬಲಭಾಗದ ಒಂದು ಮಂಟಪ ದೊಡ್ಡ ದಾಗಿದೆ. ವಿಷ್ಣು, ಬಾಲಕೃಷ್ಣ, ಲಕ್ಷ್ಮೀನರಸಿಂಹ ಮತ್ತು ಆಳ್ವಾರರ ಮೂರ್ತಿ ಶಿಲ್ಪಗಳನ್ನು ಈ ಮಂಟಪದ ಮುಂಭಾಗದ ಕಂಬಗಳ ಮೇಲೆ ಗುರುತಿಸಬಹುದು. ಈ ಮಂಟಪ ವಿರೂಪಾಕ್ಷ ಬಜಾರಿನ ಶೈವ ಮಂಟಪವನ್ನು ಹೋಲುತ್ತದೆ. ಶ್ರೀ ವೈಷ್ಣವ ಭಕ್ತರಾದ ಆಳ್ವಾರರು ಇಲ್ಲಿ ವಾಸವಾಗಿದ್ದರು. ಬಾಲಕೃಷ್ಣನ ವಿಗ್ರಹವನ್ನು ತೇರಿನಲ್ಲಿ ಉತ್ಸವ ಮಂಟಪದವರೆಗೆ ಒಯ್ಯುತ್ತಿದ್ದರು. ಆದರೆ ಈಗ ಆ ಮಂಟಪ ಜೀರ್ಣಗೊಂಡು ಅವಶೇಷಗಳು ಮಾತ್ರ ಉಳಿದುಕೊಂಡಿವೆ.

ವಿಜಯನಗರ ಕಾಲದಲ್ಲಿ ಕೃಷ್ಣಬಜಾರ್ ಸಾಂಸ್ಕೃತಿಕ ಮತ್ತು ಧಾರ್ಮಿಕ ಆಚರಣೆ ಗಳ ಕೇಂದ್ರವಷ್ಟೇ ಅಲ್ಲದೆ ಪ್ರಮುಖ ಮಾರುಕಟ್ಟೆ ಮತ್ತು ವಾಣಿಜ್ಯ ಕೇಂದ್ರವಾಗಿತ್ತು. ಒಂದು ಶಿಲಾ ಶಾಸನದಲ್ಲಿ ಬ್ರಾಹ್ಮಣರ ಮನೆಗಳು ದಾರಿಯಲ್ಲಿನ ಅಂಗಡಿಗಳು, ಶ್ರೀ ಬಾಲಕೃಷ್ಣ ತೇರು ಬೀದಿಯ ನಿರ್ವಹಣೆಗೆ ಭೂದಾನ ಮುಂತಾದವು ಗಳ ಪ್ರಸ್ತಾಪವಿದೆ. ಕೃಷ್ಣಾಪುರ ಪೇಟೆಯ ಅಂಗಡಿಗಳಿಂದ ವಸೂಲಿ ಮಾಡಿದ ಶುದ್ಧ ಬಂಗಾರ ೮೦೦ ಗದ್ಯಾಣಗಳನ್ನು ಅಚ್ಯುತದೇವರಾಯ ಗೋದ್ವಾದಶಿಯಂದು ಶ್ರಿ ಬಾಲಕೃಷ್ಣದೇವರಿಗೆ ದಾನವಾಗಿ ನೀಡಿದನೆಂದು ಮತ್ತೊಂದು ಶಾಸನ ವಿವರಗಳನ್ನು ಹೇಳುತ್ತದೆ. ಅಲ್ಲಿ ಅನೇಕ ದವಸ ಧಾನ್ಯದ ಅಂಗಡಿಗಳಿದ್ದವೆಂದೂ, ಆ ವರ್ತಕರು ಅಂಗಡಿಗಳ ಬಳಿಯೇ ವಾಸವಾಗಿದ್ದರೆಂದೂ ಸಹಾ ಆ ಶಾಸನ ಸ್ಪಷ್ಟಪಡಿಸುತ್ತದೆ. ಮುಖ್ಯನಗರ ದೊಡನೆ ಕೃಷ್ಣಾಪುರಕ್ಕೆ ಸಂಪರ್ಕಕಲ್ಪಿಸುವ ರಸ್ತೆಯನ್ನು ಅರ್ಥವತ್ತಾಗಿ ದೇವರ ಬೀದಿ ಎಂದು ಕರೆಯುತ್ತಿದ್ದರು. ಏಕೆಂದರೆ ಅಲ್ಲೆಲ್ಲ ಮುದುವೀರಣ್ಣ, ಗಣೇಶ, ಮಲ್ಲಿಕಾರ್ಜುನ ಮತ್ತು ಪ್ರಸನ್ನ ವಿರೂಪಾಕ್ಷ ಗುಡಿಗಳಿದ್ದವು. ಈಗಲೂ ಈ ದೇವಾಲಯಗಳ ಅವಶೇಷ

ಗಳನ್ನು ಕಾಣಬಹುದು. ಕೃಷ್ಣಾಪುರದ ಮಾರುಕಟ್ಟೆಯಲ್ಲಿ ದವಸ ಧಾನ್ಯಗಳಲ್ಲದೆ ಇತರ ಸರಕು ಸಾಮಾನು ಸರಂಜಾಮುಗಳನ್ನು ಮಾರಾಟ ಮಾಡಲಾಗುತ್ತಿತ್ತು.

ಕೇಂದ್ರ ಪುರಾತತ್ವ ಇಲಾಖೆ ಇತ್ತೀಚಿಗೆ ಬಾಲಕೃಷ್ಣ ದೇವಾಲಯದ ಸುತ್ತ ಮುತ್ತ ನಡೆಸಿದ ಉತ್ಖನನಗಳಲ್ಲಿ ಚೀನಿ ಪಿಂಗಾಣಿ ಪಾತ್ರೆಗಳು, ಚೀನಿ ಅಕ್ಷರಗಳಿರುವ ಮಡಿಕೆಚೂರುಗಳು ಮುಂತಾದವುಗಳು ಇಲ್ಲಿ ಕಂಡು ಬಂದಿವೆ. ಇವೆಲ್ಲಾ ಹೆಚ್ಚು ನೀಲಿ ಬಣ್ಣದಲ್ಲಿವೆ. ಚೀನಾದೊಡನೆ ವಿಜಯನಗರ ವಾಣಿಜ್ಯ ಸಂಪರ್ಕ ಹೊಂದಿತ್ತೆಂದು ಇದರಿಂದ ತಿಳಿಯುತ್ತದೆ. ಇಲ್ಲಿ ಸತತವಾಗಿ ವ್ಯಾಪಾರ ನಡೆಯುತ್ತಿತ್ತೆಂದು ಕೃಷ್ಣ ದೇವರಾಯನ ಕಾಲದಲ್ಲಿ ವಿಜಯನಗರಕ್ಕೆ ಬಂದಿದ್ದ ಯಾತ್ರಿಕ ಬಾರ್ಬೋಸಾ ಸಹಾ ತಿಳಿಸಿದ್ದಾನೆ. ಈ ಮಾರುಕಟ್ಟೆಗೆ ಮುತ್ತು, ರತ್ನ ಮುಂತಾದವುಗಳು ಓರ್ಮುಜ್ ಮತ್ತು ಸಿಲೋನ್ ನಿಂದ ಬರುತ್ತಿದ್ದವು. ರೇಶಿಮೆ, ಜರತಾರಿ ಬಟ್ಟೆ, ಕೆಡುಗೆಂಪು ಬಟ್ಟೆಗಳು, ಹವಳ ಮುಂತಾದವು ಚೀನಾ ಮತ್ತು ಅಲೆಗ್ಸಾಂಡ್ರಿಯದಿಂದ ಬರುತ್ತಿದ್ದವು. ಆಮದು ಮಾರುಕಟ್ಟೆಯಾಗಿ ಕೃಷ್ಣಾಬಜಾರ್ ಸರಕಾರಕ್ಕೆ ಬಹಳಷ್ಟು ಆದಾಯ ತರುತ್ತಿತ್ತು. ಕೃಷ್ಣಾಪುರದ ಆದಾಯ ಒಂದು ಲಕ್ಷ ಚಿನ್ನದ ಪರ್ದಾವ್‌ಗಳೆಂದು ಡೊಮಿಂಗೋ ಪಾಯಿಸ್ ಎನ್ನುವ ಪೋರ್ಚ್‌ಗೀಸ್ ಯಾತ್ರಿಕ ಬರೆದಿದ್ದಾನೆ. ಈ ಆದಾಯ ಶ್ರಿ ಬಾಲಕೃಷ್ಣ ದೇವಾಲಯಕ್ಕೆ ಹೋಗುತ್ತಿತ್ತು. ಅಂಗಡಿ ಮುಂಗಟ್ಟುಗಳ ಮೇಲಲ್ಲದೆ ಚಕಡಿಗಾಡಿಗಳು ಹೇರು ಸಾಮಾನುಗಳ ಮೇಲೂ ಸುಂಕ ವಿಧಿಸಲಾಗುತ್ತಿತ್ತು. ೧೫೪೫ರ ಸದಾಶಿವರಾಯನ ಶಾಸನವೊಂದರ ಪ್ರಕಾರ ಕೃಷ್ಣಾಪುರ ಪೇಟೆಗೆ ಬರುವ ಒಂದು ಎತ್ತಿನ ಗಾಡಿಯ ಹೇರು ಹೊರೆಗೆ ಒಂದು ಕಾಸು ಮತ್ತು ಪ್ರತಿ ಸೋಮವಾರ ದಂದು ಮಾರುಕಟ್ಟೆಯ ಒಂದು ಅಂಗಡಿಗೆ ಒಂದು ಕಾಸು ತೆರಿಗೆ ವಿಧಿಸಲಾಗುತ್ತಿತ್ತು. ಕೃಷ್ಣಾಪುರದಲ್ಲಿ ಸೋಮವಾರ ಸಂತೆಯ ದಿನವಾಗಿತ್ತೆಂದು ಇದರಿಂದ ತಿಳಿದು ಬರುತ್ತದೆ. ಉಳಿದ ದಿನಗಳಲ್ಲಿ ಸಣ್ಣ ಸಂಖ್ಯೆಯ ಅಂಗಡಿಗಳು ತೆರೆದಿರುತ್ತಿದ್ದವೆಂಬುದನ್ನು ಡೊಮಿಂಗೋ ಪಾಯೆಸ್‌ನು ತನ್ನ ವೃತ್ತಾಂತದಲ್ಲಿ ಉಲ್ಲೇಖಿಸಿದ್ದನ್ನು ನೋಡಬಹುದಾಗಿದೆ.

ರಾಜಧಾನಿಯ ಅಭಿವೃದ್ಧಿಯಲ್ಲಿ ಕೃಷ್ಣಾಪುರದ ಬಜಾರ್ ಮಹತ್ವದ ಪಾತ್ರವನ್ನು ನಿರ್ವಹಿಸಿತು. ಕೃಷ್ಣಾಪುರ ಮೊದಲು ವೈಷ್ಣವ ಪುರವಾಗಿದ್ದು, ಅರಸರಿಂದ ಬೆಂಬಲಪಡೆದಿದ್ದರಿಂದ ಪ್ರಮುಖ ಆರ್ಥಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿ ಬೆಳೆಯಿತು.

ವಿಜಯನಗರ ಇದ್ದಕಿದ್ದಂತೆ ಬೆಳೆದು ವಿಸ್ತಾರವಾಗಿ ಹರಡಲಿಲ್ಲ. ಕಾಲಕ್ರಮೇಣ ಇದು ಸ್ವಲ್ಪ ಸ್ವಲ್ಪವಾಗಿ ಬೆಲೆಯಿತು. ಧರ್ಮ, ಭೌಗೋಳಿಕಸ್ಥಿತಿ, ರಾಜಕೀಯ ಘಟನೆಗಳು, ವಾಣಿಜ್ಯ ಚಟುವಟಿಕೆಗಳು ಇದರ ಬೆಳವಣಿಗೆ, ಅಭಿವೃದ್ಧಿಗೆ ಕಾರಣವಾದವು. ಪುರಗಳು, ಉಪನಗರಗಳು ರಾಜಧಾನಿಯ ಭಾಗಗಳಾಗಿದ್ದವು. ಸಂಗಮ ಮತ್ತು ತುಳುವ ಅರಸರ ಕಾಲದಲ್ಲಿ ನಗರ ಬೆಳೆದು ಎಲ್ಲಾ ಹಂತಗಳಲ್ಲಿ ವೈಭವಗಳಿಸಿ ಹಬ್ಬಿತ್ತು.

ಕಾಲಾಂತರದಲ್ಲಿ ಈ ಪುರಗಳ ಮಾರುಕಟ್ಟೆಗಳ ಮೂಲಕವೇ ವಿದೇಶಿ ವ್ಯಾಪಾರ ನಡೆದು ರಾಜ್ಯದ ಸಮಗ್ರ ಸಮೃದ್ಧಿ ಅಭಿವೃದ್ಧಿ ವೈಭವಕ್ಕೆ ಕಾರಣವಾಗಿದ್ದವು.

ಗ್ರಂಥ ಋಣ

1.Saletore, B.A - Social and political life in the Vijayanagar Empire, Vol.I, P-112., SII, Vol.IV, Nos-248,256 etc.

2. S.I.I., Vol-IV, No : 226, PP-59-60.

3. S.I.I., Vol IV, NO : 254, PP 44-46 ( )

4. S.I.I. Vol, IV, No :255.

5. S.I.I. Vol, No : 262.

6. E.I.IV, No : 38, PP-267-268 ; Settar's hampi A Medieval Metropolis, B,lore, P-39.

7. Nagaraja Rao M.S.- V.P.R. 1979-83, Mysore, 1983, P.30.

8. Fillozat Vasundhara -Vijayanagara, N.B.T. Delhi-1999, P-300.

9. Sewell Robert - A Forgotten Empire, P-290.

10. S.I.I. Vol. IV, No : 266.

11. Sewel Robert - AForgotten Empire- New Delhi, 1987, P.256.

೨೩. ರಾಜ ಪ್ರಾಂಗಣದ ದಾರಿಗಳು

ಡಾ.ಬಾಲಸುಬ್ರಮಣ್ಯ

ವಿಜಯನಗರ ಪಟ್ಟಣ ಸುಮಾರು ೨೬ಚ.ಕಿ.ಮೀ.ಗೂ ಮಿಕ್ಕಿದ್ದು, ಅದರಲ್ಲಿ ಅನೇಕ ಬಗೆಯ ಬೀದಿಗಳು ಇದ್ದ ಬಗ್ಗೆ ಶಾಸನಗಳಲ್ಲಿ ಉಲ್ಲೇಖ ದೊರಕುತ್ತದೆ. ಈ ಎಲ್ಲಾ ಬೀದಿಗಳನ್ನು ಸ್ಥಲ ಪರಿವೀಕ್ಷಣೆಯ ಮೂಲಕ ಗುರುತಿಸಬಹುದಾಗಿದೆ. ಪಟ್ಟಣದ ಕೇಂದ್ರ ಭಾಗದಲ್ಲಿ ಅನೇಕ ರೀತಿಯ ಚಟುವಟಿಕೆಗಳಿದ್ದು, ಸಮರ್ಪಕ ಸಂಪರ್ಕಕ್ಕೆ ಬೀದಿಗಳು ಬಹು ಮುಖ್ಯಪಾತ್ರ ವಹಿಸಿದ್ದವು. ಇದರ ಬಗ್ಗೆ ಅರಿಯಲು ವಿಜಯನಗರ ವೈಭವವನ್ನು ಕಣ್ಣಾರೆ ಕಂಡು ವರ್ಣಿಸಿದ ವಿದೇಶಿ ಪ್ರವಾಸಿಗರ ಬರವಣಿಗೆಗಳು ಬಹು ಮುಖ್ಯವಾದವು. ವಿಜಯನಗರವನ್ನು ಸಂದರ್ಶಿಸಿದ ಅಬ್ದುಲ್ ರಜಾಕ್, ಡೊಮಿಂಗೊ ಪಯಾಸ್‌ರು ಇಲ್ಲಿನ ರಸ್ತೆಗಳು, ಬಜಾರುಗಳು ಮತ್ತು ಮಾರಾಟ ಮಾಡು ತ್ತಿದ್ದ ವಸ್ತುಗಳ ದೊಡ್ಡ ಪಟ್ಟಿಯನ್ನು ನೀಡಿದ್ದಾರೆ. ಇತ್ತೀಚೆಗೆ ಇಲ್ಲಿನ ದಾರಿಗಳನ್ನು ಗುರುತಿಸಲಾಗಿದೆ. (Fritz. 1984. P.P. 48-50) ಕೆಲವು ದಾರಿಗಳ ಬಗ್ಗೆ ಮರು ವಿಶ್ಲೇಷಣೆ ಮಾಡಬೇಕಾಗಿದೆ. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಅಬ್ದುಲ್ ರಜಾಕ್ ನೀಡಿರುವ ವಿವರಣೆಯಂತೆ ಇಲ್ಲಿನ ಅರಮನೆಯ ಎದುರು, ಎದರು ಬದಿರಾದ ನಾಲ್ಕು ಅಂಗಡಿ ಬೀದಿಗಳು, ಉಪ್ಪರಿಗೆ, ಕಮಾನುಗಳನ್ನು ಹೊಂದಿದ ಉದ್ದವಾದ ಮತ್ತು ಅಗಲವಾದ ಬೀದಿಗಳಿರಬೇಕು. ಆದರೆ ವಾಸ್ತವದಲ್ಲಿ ಎರಡು ರಸ್ತೆಗಳು ಒಂದನ್ನೊಂದು ಛೇದಿಸಿದಲ್ಲಿ ಆಗ ನಾಲ್ಕು ರಸ್ತೆಗಳಾಗುತ್ತವೆ. (Mator.R.H.1855. P.24)

ರಾಜ ಪ್ರಾಂಗಣ ಎಂದರೆ ಸಾಮಾನ್ಯವಾಗಿ ಅರ್ಥೈಸುವ ಒಂದು ರಾಜರ ಅರಮನೆ ಗಳಿರುವ ಜಾಗ ಮತ್ತು ಅದರ ಪಶ್ಚಿಮಕ್ಕಿರುವ ಟಂಕಶಾಲೆ, ಟಂಕಸಾಲೆಯ ಉತ್ತರಕ್ಕಿ ರುವ ದಂಡನಾಯಕನ ಕೋಟೆ ಮತ್ತು ಈಶಾನ್ಯದಲ್ಲಿರುವ ಜನಾನಾದ ಕೋಟೆ. ಈ ಹೆಸರುಗಳು ಸರಿಸುಮಾರು ಕಳೆದಶತಮಾನದಿಂದ ಚಾಲ್ತಿಯಲ್ಲಿದ್ದು, ಹಾಗೆಯೇ ಇಂದೂ ಸಹ ಕರೆಯಲ್ಪಡುತ್ತದೆ. ಈ ಮೇಲೆ ತಿಳಿಸಿದ ಪ್ರತಿಯೊಂದು ಪ್ರದೇಶವು ತನ್ನದೇ ಆದ ಹೆಗ್ಗುರುತುಗಳು ಮತ್ತು ಕಟ್ಟಡಗಳನ್ನು ಹಾಗು ಇತರ ಸೌಲಭ್ಯಗಳನ್ನು ಹೊಂದಿದೆ. ಅದರ ಸುತ್ತಲೂ ಪ್ರಕಾರ ಗೋಡೆಗಳಿವೆ. ಇಲ್ಲಿನ ಭಾಗಗಳು ಒಂದ ಕ್ಕೊಂದು ಹೊಂದಿಕೊಂಡಿದ್ದು ಕೆಲವು ಸ್ಥಳಗಳ ಸುತ್ತ ಎರಡು ಸುತ್ತಿನ ಕೋಟೆ ಗೋಡೆ ಗಳು ಇರುವ ನಿದರ್ಶನಗಳುಂಟು. ಇದಕ್ಕೆ ಉತ್ತಮ ಉದಾ. ರಾಜ ಪ್ರಾಂಗಣ. ಇಲ್ಲಿ ಪಶ್ಚಿಮ, ಪೂರ್ವ ಹಾಗೂ ದಕ್ಷಿಣ ಭಾಗಕ್ಕೆ ಬೇರೆ ಕೋಟೆಗಳ ಸಾಲುಗಳಿರುವುದರಿಂದ

೨ ಕೋಟೆಗಳ ನಡುವೆ ಸ್ಥಳ ಒಂದು ಬೀದಿಯಾಗಿ ಅಥವಾ ದಾರಿಯಾಗಿ ಕಾರ್ಯ ನಿರ್ವಹಿಸುತ್ತಿದೆ.

ರಾಜ ಪ್ರಾಂಗಣದ ಪಶ್ಚಿಮ ಭಾಗ ಹಾಗೂ ಟಂಕಸಾಲೆಯ ಪೂರ್ವಭಾಗದ ಕೋಟೆ ಗೋಡೆಗಳ ಮಧ್ಯ ದಾರಿಯಿದೆ. ರಾಜ ಪ್ರಾಂಗಣದ ಪಶ್ಚಿಮ ಕೋಟೆ ಗೋಡೆಯಲ್ಲಿರುವ ಬಾಗಿಲಿನಿಂದ ರಾಜ ಪ್ರಮುಖರು ಯಾವುದೇ ಅಡೆತಡೆಯಿಲ್ಲದೆ ನೇರವಾಗಿ ಹಜಾರರಾಮ ದೇವಸ್ಥಾನದ ದಕ್ಷಿಣ ಭಾಗವನ್ನು ಕಿರಿದಾದ ಬಾಗಿಲ ಮೂಲಕ ಪ್ರವೇಶಿಸ ಬಹು ದಾಗಿದೆ. ಹಾಗೆಯೇ ಹಜಾರರಾಮದ ವಾಯುವ್ಯ ಗೋಡೆಯು ಮುಂದು ವರಿದಿದ್ದು ಉತ್ತರದ ತುದಿಯಲ್ಲಿರುವ ದ್ವಾರದ ಮೂಲಕ ಹಜಾರರಾಮ ದೇವಾ ಲಯದ ಹಿಂಭಾಗಕ್ಕೆ ಅಂದರೆ ಪಶ್ಚಿಮ ಭಾಗದಲ್ಲಿರುವ ಮಂಟಪಗಳು ಸನಿಹದಿಂದ ಇನ್ನೆರಡು ದ್ವಾರಗಳ ಮೂಲಕ ದಕ್ಷಿಣಾಭಿಮುಖವಾಗಿ ಬಂದು ಪಶ್ಚಿಮಕ್ಕೆ ಸುಮಾರು ೩೦ ಕಿ.ಮೀ ಚಲಿಸಿ ಪುನಃ ಉತ್ತರಕ್ಕೂ ಅಷ್ಟೇ ಚಲಿಸಿ ಮತ್ತೆ ಪಶ್ಚಿಮಕ್ಕೆ ತಿರುಗಿ ನಂತರ ದಕ್ಷಿಣದ ದ್ವಾರದ ಮೂಲಕ ಟಂಕಸಾಲೆಯ ಮುಖ್ಯ ಅರಮನೆಯ ಪ್ರವೇಶ ವನ್ನು ಸೇರಬಹುದಾಗಿದೆ. ಟಂಕಸಾಲೆಯಲ್ಲಿರುವ ಅರಮನೆಯ ಹಾಗೂ ಅದರ ಪಶ್ಚಿಮಕ್ಕಿರುವ ಎರಡು ಚಿಕ್ಕ ಅರಮನೆಗಳು ಮತ್ತು ಅದಕ್ಕಿರುವ ವ್ಯವಸ್ಥೆ ಇತ್ತೀಚಿನ ಉತ್ಖನನಗಳಿಂದ ಹೊರಬಂದಿದೆ. ಟಂಕಸಾಲೆಯ ದಕ್ಷಿಣದ ಗೋಡೆಯಲ್ಲಿ ೩ ಬಾಗಿಲುಗಳಿದ್ದು ಅವು ದಕ್ಷಿಣಕ್ಕಿರುವ ಮತ್ತೊಂದು ಪ್ರಾಂಗಣಕ್ಕೆ ಹಾದಿಯನ್ನು ಒದಗಿ ಸಿವೆ.

ಈಗಾಗಲೆ ತಿಳಿಸಿರುವ ಹಜಾರರಾಮದ ಉತ್ತರದಲ್ಲಿರುವ ದ್ವಾರದ ಮೂಲಕ ಪಶ್ಚಿಮಾಭಿಮುಖವಾಗಿ ಬಂದು ದಕ್ಷಿಣಕ್ಕೆ ಸುಮಾರು ೩೦ ಮೀ ಗಳಷ್ಟು ನಡೆದು ಪುನಃ ಪಶ್ಚಿಮ-ದಕ್ಷಿಣ, ಪಶ್ಚಿಮ, ಉತ್ತರ -ಪಶ್ಚಿಮದ ಮೂಲಕ ದಂಡನಾಯಕನ ಕೋಟೆಯ ಈಶಾನ್ಯ ದಲ್ಲಿರುವ ದೊಡ್ಡ ಕಟ್ಟಡದ (ಅರಮನೆಯ) ಭಾಗಕ್ಕೆ ಹೋಗ ಬಹುದಾಗಿದೆ. ಈ ಅರಮನೆಯು ಬಹಳಷ್ಟು ರಕ್ಷಣಾ ವ್ಯವಸ್ಥೆಯನ್ನು ಹೊಂದಿರು ವುದರಿಂದ ದಂಡನಾಯಕ ಅಥವಾ ರಾಜರಿಗೆ ಸೇರಿದೆ ಎನ್ನಬಹುದಾಗಿದೆ. ಕೆಲವು ಹಾದಿಗಳು ಬಹಳ ಅಂಕುಡೊಂಕಾಗಿದ್ದು ಕೆಲವು ತಡೆಗಳನ್ನು ದಾಟಿಬರುವುದರಿಂದ ಇದರ ಪ್ರಾಮುಖ್ಯತೆ ಅರಿವಾಗುತ್ತದೆ.

ದಂಡನಾಯಕನ ಕೋಟೆಯ ಮಧ್ಯದಲ್ಲಿ ಉತ್ತರ ದಕ್ಷಿಣವಾಗಿರುವ ಬೃಹತ್ ಗೋಡೆ ದಂಡನಾಯಕನ ಕೋಟೆಯನ್ನು ಎರಡು ಭಾಗಗಳನ್ನಾಗಿ ವಿಂಗಡಿಸಿದೆ. ದಂಡ ನಾಯಕನ ಕೋಟೆ ವಾಯುವ್ಯದಲ್ಲಿರುವ ಅರಮನೆಗೆ ಭದ್ರವಾದ ಕೋಟೆ ಗೋಡೆ ಯನ್ನು ನಾಲ್ಕು ಪಕ್ಕದಲ್ಲಿರುವ ಅರಮನೆಗೆ ಭದ್ರವಾದ ಕೋಟೆಯ ಗೋಡೆಯನ್ನು ನಾಲ್ಕ ಪಕ್ಕದಲ್ಲಿ ಕಾಣಬಹುದು. ಮೇಲೆ ಹೇಳಿದ ಉತ್ತರ ದಕ್ಷಿಣದ ಗೋಡೆ ಈ ಅರಮನೆಗೆ ಪಶ್ಚಿಮ ಭಾಗದಲ್ಲಿದ್ದು ಇದರ ಮಧ್ಯದಲ್ಲಿ ಸಣ್ಣ ಬಾಗಿಲಿರುವುದರಿಂದ ಎರಡೂ ಪಕ್ಕದಲ್ಲಿ ಸಂಚರಿಸಲು ಉತ್ತಮವಾದ ದಾರಿಯನ್ನು ಹೊಂದಿದೆ. ದಂಡ

ನಾಯಕನ ಕೋಟೆಯ ವಾಯುವ್ಯದಲ್ಲಿ ಗುಮ್ಮಟವಿರುವ ಕಾವಲು ಗೋಪುರವಿದೆ. ಇದು ದಂಡನಾಯಕನ ಕೋಟೆಗೆ ಉತ್ತರ ಬಾಗಿಲಿನಿಂದ ಬರುವ ಜನರನ್ನು ನಿಯಂತ್ರಿಸಲು ಅನುಕೂಲವಾಗಿರುತ್ತದೆ. ದಂಡನಾಯಕನ ಕೋಟೆಯ ದಕ್ಷಿಣದ ಭಾಗ ತುದಿಯಲ್ಲಿ ಮತ್ತೊಂದು ಅರಮನೆಯ ಬುನಾದಿಯಿದೆ. ಇದರ ಆಗ್ನೇಯಕ್ಕೆ ಕಾವಲು ಗೋಪುರ ಹಾಗೂ ಇಸ್ಲಾಮಿಕ್ ಶೈಲಿಯ ಕಟ್ಟಡವಿದೆ. ಆದುದರಿಂದ ಇವುಗಳ ಮಧ್ಯೆ ಸಂಚರಿಸಲು ಪೂರ್ವ ಪಶ್ಚಿಮದ ದಾರಿ ಇರಲೇ ಬೇಕು. ಹಾಗೆಯೇ ದಂಡನಾಯಕನ ಕೋಟೆಯ ವಾಯುವ್ಯದಲ್ಲಿರುವ ಬಾಗಿಲಿನಿಂದ ಈ ದಾರಿಗೆ ಸೇರಲು ಮತ್ತೊಂದು ದಾರಿ ಇರಲೇ ಬೇಕು.

ರಾಜ ಪ್ರಾಂಗಣದ ಮೂರು ಭಾಗದಲ್ಲಿ ಅಂದರೆ ಪೂರ್ವ ಪಶ್ಚಿಮ ದಕ್ಷಿಣದಲ್ಲಿ ಸುಗಮವಾಗಿ ಸಂಚರಿಸಲು ದಾರಿಯಿದೆ. ಈ ಮೂರು ಪಕ್ಕದಲ್ಲಿ ಸ್ವತಂತ್ರವಾದ ಆವರಣಗಳಿವೆ. ಈ ಹೊರ ಸುತ್ತಿನ ದಾರಿಯಿಂದ ಮಹಾನವಮಿ ದಿಬ್ಬಕ್ಕೆ ಉತ್ತರ ಮೆಟ್ಟಿಲುಗಳಿಂದ ಏರಿ ದಿಬ್ಬದ ಪಶ್ಚಿಮ ಭಾಗಕ್ಕೆ ಬಂದು ಅಲ್ಲಿಂದ ಮಹಾನವಮಿ ದಿಬ್ಬದ ಮೆಟ್ಟಿಲನ್ನೇರುವ ವ್ಯವಸ್ಥೆ ಇರಬೇಕು. ಮೇಲೆ ಹೇಳಿದ ಪಶ್ಚಿಮದ ಸಮ ತಟ್ಟು ಪ್ರದೇಶದಿಂದ ದಕ್ಷಿಣಕ್ಕೆ ಚಲಿಸಿ ಪೂರ್ವಕ್ಕೆ ತಿರುಗಿ, ಪೂರ್ವದಲ್ಲಿರುವ ಮೆಟ್ಟಿಲುಗಳನ್ನೇರುವ ಇನ್ನೊಂದು ದಾರಿಯೂ ಮಹಾನವಮಿ ದಿಬ್ಬಕ್ಕಿದೆ. ಮಹಾನವಮಿ ದಿಬ್ಬದಿಂದ ದಕ್ಷಿಣಕ್ಕಿರುವ ಕೊಳಕ್ಕೆ ಹಾಗೂ ನೈಋತ್ಯದಲ್ಲಿರುವ ಮಂಟಪಗಳ ಸಾಲಿಗೆ ಹೋಗಲು ದಾರಿ ಇರಬೇಕು. ಮಹಾನವಮಿ ದಿಬ್ಬದಿಂದ ಪಬ್ಲಿಕ್ ಆಡಿಯನ್ಸ್ ಹಾಲ್‌ಗೆ ಹೋಗಲು ಮತ್ತೊಂದು ದಾರಿಯಿದೆ. ಇವು ಡೊಮೆಂಗೋ ಪಯಾಸ್ ತಿಳಿಸಿರುವ ಅರಮನೆಯ ಪ್ರದೇಶದಿಂದ ಹಾದು ಹೋಗುತ್ತದೆ. ಪಬ್ಲಿಕ್ ಆಡಿಯನ್ಸ್ ಹಾಲ್‌ನ ಪೂರ್ವಕ್ಕಿರುವ ಹೆಬ್ಬಾಗಿಲಿನಿಂದ ಹಜಾರರಾಮದ ಮುಂಭಾಗಕ್ಕೆ ಬರಲು ಎರಡು ಹೆಬ್ಬಾಗಿಲುಗಳನ್ನು, ಅಂದರೆ ಎರಡು ಆವರಣಗಳನ್ನು ಹಾಯ್ದು ಬರಬೇಕಾಗುತ್ತದೆ. ಹಜಾರ ರಾಮದಿಂದ ಮುಂದಕ್ಕೆ ಈ ಹಾದಿಯು ಇಂದಿನ ಕ್ಯಾಂಟೀನ್‌ನ ಹಿಂಭಾಗದಲ್ಲಿರುವ ಹಾದಿಗೆ ದಾರಿಯಾಗುತ್ತದೆ. ಇಂದಿನ ಕ್ಯಾಂಟೀನ್ ಭಾಗಕ್ಕೆ ಬರಲು ಈ ಹಾದಿಯ ಸಂಪರ್ಕವಿರಲೇ ಬೇಕು. ಈ ಉತ್ತರ ದಕ್ಷಿಣದ ದಾರಿಗೆ ಪಶ್ಚಿಮದಿಂದ ಇನ್ನೊಂದು ದಾರಿಯೂ ಲಂಬವಾಗಿ ಬಂದು ಸೇರುತ್ತದೆ. ಹೀಗೆ ಸೇರುವ ದಾರಿಯು ದಂಡನಾಯಕನ ಕೋಟೆಯ ಉತ್ತರ ಭಾಗದಿಂದ ಅಂದರೆ ಹೆಚ್ಚು ಕಡಿಮೆ ಇವತ್ತಿನ ದಾರಿಯನ್ನೇ ಅನುಸರಿಸಿ ಹಜಾರರಾಮದ ದಕ್ಷಿಣದ ಪಕ್ಕದಲ್ಲಿ ಅಂದರೆ ಈಗಿರುವ ಬೋರ್‌ವೆಲ್‌ನ ಹತ್ತಿನ ಸೇರಿರಬೇಕು.

ಹಜಾರಾಮ ದೇವಸ್ಥಾನದಿಂದ ಪೂರ್ವಕ್ಕೆ ಪೆದ್ದಂಗಡಿ ಬೀದಿಗೆ ಸೇರುವ ದೊಡ್ಡದಾರಿಯಿದೆ. ಈ ದಾರಿಯು ಹಜಾರರಾಮ ದೇವಸ್ಥಾನದ ಕೊಳದ ಹಿಂಬದಿಯಲ್ಲಿ ಕವಲೊಡೆದು ದಕ್ಷಿಣಕ್ಕೆ ತಿರುಗಿ ಪೂರ್ವದಲ್ಲಿರುವ ಹೆಬ್ಬಾಗಿಲಿನ ಮೂಲಕ ಬಂದು ಆವರಣಕ್ಕೆ ಹೋದರೆ, ಮೊದಲನೇ ದಾರಿಯೂ ಹಾಗೇ ಮುಂದುವರಿದು ರಾಜ

ಪ್ರಾಂಗಣದ ಉತ್ತರದ ಕೋಟೆ ಗೋಡೆಯ ಪಕ್ಕದಲ್ಲಿ ಹೋಗಿ ಮಹಾನವಮಿ ದಿಬ್ಬದ ದಾರಿಗೆ ಸೇರುತ್ತದೆ. ಹಜಾರರಾಮ ದೇವಸ್ಥಾನದ ಮುಂದೆ ಅಡ್ಡಲಾಗಿ ಅಂದರೆ ಉತ್ತರ ದಕ್ಷಿಣ ದಾರಿಯ ಒಂದು ಟಿಸಿಲು ಇಂದಿನ ಈ ಕ್ಯಾಂಟೀನ್ ಆವರಣಕ್ಕೆ ಬರುತ್ತದೆ.

ಇಲ್ಲಿಯ ಅವರಣದ ಈಶಾನ್ಯ ಭಾಗದಲ್ಲಿ ಒಂದು ಸಣ್ಣ ದ್ವಾರದ ಮೂಲಕ ಜನರು ಅವರಣಕ್ಕೆ ಪಶ್ಚಿಮದ ಮೂಲಕ ಸೇರುವ ವ್ಯವಸ್ಥೆಯನ್ನು ಹೊಂದಿರಬೇಕು.

ಜನಾನಾ ಅವರಣಕ್ಕೆ ಪಶ್ಚಿಮದಲ್ಲಿ ಈಗಾಗಲೇ ಹೇಳಿರುವ ಒಂದು ಬಾಗಿಲಿದ್ದರೆ, ಉತ್ತರಕ್ಕೆ ಮೂರು ಬಾಗಿಲುಗಳಿವೆ. ಉತ್ತರದ ೩ ಬಾಗಿಲುಗಳಲ್ಲಿ ಮಧ್ಯದ ಬಾಗಿಲು ಸಾಕಷ್ಟು ದೊಡ್ಡದಿದ್ದು ಕಾವಲುಗಾರರು (ಇದು ಬೃಹತ್) ಸಣ್ಣ ಗೋಪುರದ ಮೂಲಕ ಜನಾನಾ ಅವರಣದಲ್ಲಿರುವ ಅರಮನೆಗೆ ಪ್ರವೇಶವನ್ನು ಒದಗಿಸುತ್ತದೆ. ಹಾಗೆಯೇ ಪಶ್ಚಿಮದ ತುದಿಯಲ್ಲಿರುವ ಬಾಗಿಲಿನಿಂದ ಜನಾನಾದ ಅವರಣದಲ್ಲಿರುವ ಗಾರ್ಡ್ ಕ್ವಾರ್ಟರ್ಸ್‌ಗೂ ಬರಬಹುದಾಗಿದೆ. ಪೂರ್ವದ ತುದಿಯಲ್ಲಿರುವ ಬಾಗಿಲಿನಿಂದ ಆನೆಸಾಲೆ ಎದುರಿನ ಆಯತಾಕಾರದ ಇನ್ನೊಂದು ಆವರಣಕ್ಕೆ ಹೋಗ ಬಹುದಾಗಿದೆ. ಜನಾನಾದ ಉತ್ತರ ಭಾಗದ ಈ ಮೂರು ಬಾಗಿಲುಗಳು ಹಜಾರರಾಮ ದೇವಸ್ಥಾನದಿಂದ ಬರುವ ದಕ್ಷಿಣೋತ್ತರ ದಾರಿಗೆ ಸೇರುತ್ತದೆ.

ಆನೆಯ ಸಾಲೆಯ ಎದುರು ಒಂದು ಹೆಬ್ಬಾಗಿಲಿದ್ದು ಅದರ ಮೂಲಕ ಹೋಗುವ ದಾರಿ ಜನಾನಾದ ಉತ್ತರ ದಿಕ್ಕಿಗಿರುವ ದಾರಿಗೆ ಸೇರಿ ಮುಂದೆ ಹಜಾರರಾಮದ ದಕ್ಷಿಣೋತ್ತರದ ದಾರಿಯನ್ನೇ ಸೇರುತ್ತದೆ.

ಪ್ರತಿಷ್ಠಿತ ವ್ಯಕ್ತಿಗಳ ಅರಮನೆಯ ಪಕ್ಕದಲ್ಲಿ ದಕ್ಷಿಣೋತ್ತರ ದಾರಿಯಿದ್ದು ಇದು ಹಂಪಾದೇವಿ ದಿಡ್ಡಿ ಮೂಲಕ ಹಾಯ್ದು ದಂಡ ನಾಯಕನ ಕೋಟೆಯ ವಾಯುವ್ಯ ಬಜಾರ್, ಗೋರಿಕೆಳಗಣ ಮಾಗಣೆಯ ಹಾದಿ, ಸೋಮವೀಥಿ ಹೀಗೆ ಅನೇಕ ಹೆಸರುಗಳಿವೆ. ಈ ರೀತಿಯ ಹೆಸರುಗಳು ಇಲ್ಲಿಯೂ ಇರಬೇಕು. ಮುಂದಿನ ದಿನಗಳಲ್ಲಿ ಹೆಚ್ಚಿನ ಸಂಶೋಧನೆಯಿಂದ ಇವು ತಿಳಿಯ ಬಹುದಾಗಿದೆ. ಪ್ರಸ್ತುತ ಇಲ್ಲಿರುವ ಆವರಣಗಳಿಗೆ ದಾರಿಗಳಿದ್ದು, ಅವು ಹಿಂದಿನ ದಾರಿಗಳನ್ನು ಕೆಲವೊಮ್ಮೆ ಸಂಧಿಸಿ, ಭಾಗಶಃ ಅವುಗಳ ಮೇಲಿದ್ದ ಕೆಲವೊಮ್ಮೆ ಭಿನ್ನವಾದ ಹೊಸ ದಾರಿಯಾಗಿದೆ. ಇತ್ತೀಚಿನ ಉತ್ಖನನಗಳಿಂದ ಅನೇಕ ಹೆಬ್ಬಾಗಿಲುಗಳು, ಬಾಗಿಲುಗಳು, ದಾರಿ, ದಾರಿಯ ಕೆಲವು ಭಾಗ ದೊರಕಿವೆ. ಇವೆಲ್ಲವನ್ನೂ ಸರಿಯಾಗಿ ಅಧ್ಯಯನ ಮಾಡಿ ಒಂದು ನಕ್ಷೆಯ ಮೇಲೆ ವಿನ್ಯಾಸ ಗೊಳಿಸಿದರೆ, ವಿಜಯನಗರದ ಕಾಲದ ರಾಜಪ್ರಾಂಗಣದ ದಾರಿಗಳು ಹೆಚ್ಚು ಸ್ಫುಟಗೊಳ್ಳುತ್ತವೆ.

ಆಧಾರ ಗ್ರಂಥಗಳು

John Fritz : The royal centre at Vijayanagara

Suryanarayana Rao : A History of Vijayanagara the never to be forgotton empire

Robert Sewell : A Forgtten empire.

ಎಚ್.ಎಲ್. ನಾಗೇಗೌಡ : ಪ್ರವಾಸಿ ಕಂಡ ಇಂಡಿಯಾ, ಭಾಗ-೨.

೨೪. ವಿಜಯನಗರ ಕಾಲದ ಹಾವೇರಿ ಜಿಲ್ಲೆಯ ಸ್ಮಾರಕ ಶಿಲ್ಪಗಳ ಕಲೆ

ಡಾ.ರು.ಮ.ಷಡಕ್ಷರಯ್ಯ

ಹಾವೇರಿ ಜಿಲ್ಲೆಯ ವಿಜಯನಗರ ಕಾಲದ ಸ್ಮಾರಕ ಶಿಲ್ಪಗಳಲ್ಲಿ ಸತಿ ಶಿಲ್ಪಗಳು, ವೀರಗಲ್ಲುಗಳು, ಕೆಲವು ವಿಶಿಷ್ಠ ಶಿಲ್ಪಗಳು ಇರುವುದನ್ನು ಪ್ರಸ್ತುತ ಲೇಖಕರು ತಮ್ಮ ಕ್ಷೇತ್ರಕಾರ್ಯದಿಂದ ತಿಳಿದುಕೊಂಡವರು. ಅವರ ಅನೇಕ ವಿದ್ಯಾರ್ಥಿಗಳೂ ಸಹ ಈ ಭಾಗದ ಈ ಕಾಲದ ಅನೇಕ ಸ್ಮಾರಕ ಶಿಲ್ಪಗಳನ್ನು ಪತ್ತೆ ಮಾಡಿರುವರು. ಈ ಕುರಿತು ಪ್ರಕಟಿತ ಕೃತಿಗಳಲ್ಲಾಗಲೀ ಅಥವಾ ಲೇಖನಗಳಲ್ಲಾಗಲಿ ಇವುಗಳನ್ನ ಕಲಾ ಇತಿಹಾಸದ ಬಗ್ಗೆ ಪ್ರತ್ಯೇಕ ಅಧ್ಯಯನ ಕೈಗೊಂಡಿರುವುದಿಲ್ಲ. ಪ್ರಸ್ತುತ ಲೇಖಕರೂ ಸಹ ಶಾಸನವುಳ್ಳ ಈ ಸ್ಮಾರಕ ಶಿಲ್ಪಗಳನ್ನು ಅಧ್ಯಯನ ಪರಿವಿಧಿಯಲ್ಲಿ ಕೂಡಿಸಿರುವುದಿಲ್ಲ. ಏಕೆಂದರೆ ಈ ಕುರಿತು ಹೆಚ್ಚಿನ ಮಾಹಿತಿಗಳೂ ಈ ಭಾಗದಲ್ಲಿ ಕಾಣಿಸಿಕೊಂಡಿವೆ. ಅದರ ಬಗ್ಗೆ ಪ್ರತ್ಯೇಕ ಒಂದು ಪ್ರಬಂಧದ ರಚನೆ ಮಾಡುಬಹುದಾಗಿದೆ. ಪ್ರಸ್ತುತ ಲೇಖನದಲ್ಲಿ ವೀರಗಲ್ಲು, ಸತಿಗಲ್ಲು ಮತ್ತು ಕೆಲವು ವಿಶಿಷ್ಠ ಸ್ಮಾರಕ ಶಿಲ್ಪಗಳನ್ನು ಪರಿಚಯಿಸಲಾಗಿದೆ. ವೀರಗಲ್ಲುಗಳಲ್ಲಿ ವಿಭಿನ್ನ ದೃಶ್ಯಗಳುಳ್ಳ ಶಿಲ್ಪಗಳು, ಕೇವಲ ವೀರನು ಕತ್ತಿಯನ್ನು ಹಿಡಿದು ನಿಂತವುಗಳು, ಕುಮಾರರಾಮನ ಕುದುರೆ ಶೂರನ ಶಿಲ್ಪಗಳು ಇತ್ಯಾದಿ ಕಾಣಬಹುದು. ಸತಿಕಲ್ಲುಗಳಲ್ಲಿ ಆಳೆತ್ತರದ ಮಹಿಳೆಯ ಶಿಲ್ಪಗಳು, ಬಲತೋಳಗೈಯುಳ್ಳ ಸ್ತಂಭಶಿಲ್ಪಗಳು ಮತ್ತು ಇನ್ನಿತಿರವುಗಳನ್ನು ಕಾಣಬಹುದು.

ವೀರಗಲ್ಲು

ಹಾನಗಲ್ಲು ತಾಲೂಕಿನ ತಿಳುವಳ್ಳಿಯ ಶಾಂತೇಶ್ವರ ದೇವಾಲಯದ ಹೊರಗಡೆಯ ಪೂರ್ವಕ್ಕಿರುವ ಶಾಸನವುಳ್ಳ ವೀರಗಲ್ಲು ಮಹತ್ವದ್ದೆನಿಸಿದೆ. ಅದಕ್ಕೆ ನಾಲ್ಕು ಅಗಲವುಳ್ಳ ಹಂತಗಳು. ಮೊದಲನೆಯ ಹಂತದ ದೃಶ್ಯ ಹೀಗಿದೆ. ವೀರನು ಪೀಠದ ಮೇಲೆ ಕುಳಿತಿದ್ದಾನೆ. ಅತನಿಗೊಬ್ಬ ಸೇವಕ ಬಲಗಡೆಗೆ ಛತ್ರಿ ಹಿಡಿದು ನಿಂತಿದ್ದಾನೆ. ಎಡಗಡೆಗೆ ಒಬ್ಬ ಸೇವಕ ಕೈಮುಗಿದುಕೊಂಡು ನಿಂತಿದ್ದಾನೆ. ಬದಿಗೆ ಅದೇ ಸಾಲಿನಲ್ಲಿ ವೀರ ಪೀಠದ ಮೇಲೆ ಆಸೀನನಾಗಿದ್ದಾನೆ. ಅತನ ಎಡಗಡೆಗೆ ದಾಸನೊಬ್ಬ ತಂಬೂರಿಯನ್ನು ಎಡಗೈಯಲ್ಲಿ ಹಿಡಿದು ತನ್ನ ಹೆಂಡತಿ ಸಮೇತ ಅಲ್ಲಿ ನಿಂತಿರುವುದು ಗಮನೀಯ.

ಈ ದೃಶ್ಯವು ಒಟ್ಟಾರೆ ಒಬ್ಬರು ಮಡಿದ ವೀರರು ಇರುವುದನ್ನು ಕಾಣಬಹುದು. ಎರಡನೆಯ ಹಂತದಲ್ಲಿ ಮಡಿದ ವೀರರಿಬ್ಬರನ್ನು ಒಂದು ಪಲ್ಲಕ್ಕಿಯಲ್ಲಿ ಕೂಡಿಸ ಲಾಗಿದೆ. ಅದನ್ನು ಎತ್ತರ ಪೀಠದ ಮೇಲೆ ಇಡಲಾಗಿದೆ. ಈ ಪಲ್ಲಕ್ಕಿಯ ಮುಂದೆ ತಂಬೂರಿ ಹಿಡಿದುಕೊಂಡು ದಾಸ ನಿಂತಿದ್ದಾನೆ. ಆತನೂ ಪೀಠದ ಮೇಲೆ ನಿಂತಿರುವನು.

ಆತನ ಮುಂದುಗಡೆ ಕುದುರೆ ಸವಾರ ಈಟಿಯನ್ನೆತ್ತಿ ಹಿಡಿದು ಹೊರಟಿದ್ದಾನೆ. ಮುಂದೆ ಸೇವಕ ಛತ್ರಿ ಹಿಡಿದುಕೊಂಡು ನಿಂತಿರುವನು. ಮೂರನೆಯ ಹಂತದಲ್ಲಿ ಈ ಇಬ್ಬರು ವೀರರು ವಿಮಾನದಲ್ಲಿ ಕೈಮುಗಿದುಕೊಂಡು ಕುಳಿತಿರುವರು. ಈ ವಿಮಾನವನ್ನು ಬಲಭಾಗದಲ್ಲಿ ಒಬ್ಬ ಅಪ್ಸರೆ ಹೊತ್ತು ಹಾರುತ್ತಿರುವಳು. ಬಲಭಾಗದಲ್ಲಿ ಒಂದು ತೆಂಗಿನ ಮರವಿರುವುದು ವಿಶೇಷವಾಗಿದೆ.

ನಾಲ್ಕನೆಯ ಹಂತದಲ್ಲಿ ಶಿವಲಿಂಗದ ಮುಂದೆ ದೀಪ ಮತ್ತು ಗಂಟೆಗಳನ್ನು ಹಿಡಿದು ನಿಂತು ಆರಾಧಿಸುವ ಯತಿ ಮತ್ತು ಕುಳಿತ ನಂದಿಯ ಚಿತ್ರಗಳಿವೆ. ಈ ದೃಶ್ಯಕ್ಕೆ ತೋರಣವಿದೆ. ಮೇಲೆ ಹಿಂದೆ ಮುಖವಿದೆ. ತೋರಣದ ಎಡಭಾಗದ ಪಟ್ಟಿಗೆ ಅಲ್ಲಿರುವು ದಿಲ್ಲ. ಹೀಗಾಗಿ ಈ ಶಿಲ್ಪದ ಉಳಿದ ಅರ್ಧ ಭಾಗವು ಅದರ ಎಡಭಾಗದಲ್ಲಿ ಚಿತ್ರಿಸಿರ ಬೇಕು. ಈಗ ಅದು ಅಲ್ಲಿರುವುದಿಲ್ಲ. ಈ ವೀರಗಲ್ಲಿನ ಕಲಾ ಲಕ್ಷಣಗಳ ಶೈಲಿಯು ಸು.ಕ್ರಿ.ಶ. ೧೪ನೇ ಶತಮಾನವನ್ನು ಸೂಚಿಸುತ್ತದೆ.

ಶಾಸನವುಳ್ಳ ಮತ್ತೊಂದು ಶಿಲ್ಪ ಹಿರೆಹಳ್ಳಿಯ ಬ್ಯಾಡಗಿ ತಾ. ಕೋಟೇಶ್ವರ ದೇವಾಲಯದ ಮುಂದೆ ಇದೆ. ಅದರಲ್ಲಿ ಮೂರು ಹಂತಗಳು, ಕೆಳಗಿನ ಹಂತದಲ್ಲಿ ವೀರನು ಪೀಠದ ಮೇಲೆ ಸವ್ಯ ಲಲಿತಾಸನದಲ್ಲಿ ಬಲಗಡೆಗೆ ಮುಖವಾಡಿ ಕುಳಿತಿರುವುದು ವಿಶೇಷ. ಆತನ ಎದುರಿಗೆ ನಿಂತ ಇಬ್ಬರು ವ್ಯಕ್ತಿಗಳಿಗೆ ಅಭಯಹಸ್ತದಿಂದ ಆಶೀರ್ವಾದ ಮಾಡುತ್ತಿರುವನು. ಅತನ ಹಿಂದಿಬ್ಬರು ಸೇವಕರು ನಿಂತಿದ್ದು ಒಬ್ಬನು ಛತ್ರಿಯನ್ನು ಅತನಿಗೆ ಹಿಡಿದಿರುವನು. ಎರಡನೆಯ ಹಂತದಲ್ಲಿ ಯುದ್ಧ ದೃಶ್ಯವಿದೆ. ವೀರನು ಕುದುರೆಯನ್ನೇರಿ ತನ್ನ ಪರಿವಾರದೊಂದಿಗೆ ವೈರಿಯ ವಿರುದ್ಧ ಹೋರಾಡುವ ಭಂಗಿ ಯಲ್ಲಿದ್ದಾನೆ. ಎದುರಿಗೆ ಕತ್ತಿ ಮತ್ತು ಗುರಾಣಿ ಹಿಡಿದು ವೈರಿಯು ಹೋರಾಡುವ ಭಂಗಿಯಲ್ಲಿ ನಿಂತಿದ್ದಾನೆ. ವೀರ ಮತ್ತು ವೈರಿಯರಿಬ್ಬರ ಚಿತ್ರಗಳನ್ನು ದೊಡ್ಡಗಾತ್ರದಲ್ಲೆ ಚಿತ್ರಿಸಿರುವುದು ಗಮನೀಯ.

ವೀರನು ಓಡಿಸುತ್ತಿರುವ ಕುದುರೆಯು ತನ್ನ ಮುಂಗಾಲುಗಳನ್ನು ಮೇಲಕ್ಕೆತ್ತಿದೆ. ವೈರಿಹಿಡಿದ ವೃತ್ತಾಕಾರದ ಗುರಾಣಿಯ ಮೇಲೆ ಅರಳಿದ ಪದ್ಮವಿದೆ. ಮೂರನೆಯ ಹಂತದಲ್ಲಿಬ್ಬರು ಕೈಮುಗಿದು ಕುಳಿತಿದ್ದಾರೆ. ಬದಿಗೆ ಶಿಲಿಂಗವನ್ನು ಒಂದು ಕಡೆ ಯತಿ ಪೂಜಿಸುತ್ತಿದ್ದಾನೆ. ಇನ್ನೊಂದು ಕಡೆ ಕುಳಿತ ನಂದಿಯ ಹಿಂದೆ ಇಬ್ಬರು ಕೈಮುಗಿದು ನಿಂತಿದ್ದಾರೆ.

ಕೇವಲ ವೀರರುಳ್ಳ ಶಿಲ್ಪಗಳು ಅಲ್ಲಲ್ಲಿವೆ. ಹಿರೇಮಾಗೂರಿನ ಶಿಲ್ಪದಲ್ಲಿ ವೀರ ಎಡಗೈಯಲ್ಲಿ ಬಿಲ್ಲನ್ನು ಬಲಗೈಯಲ್ಲಿ ಕತ್ತಿಯನ್ನು ಹಿಡಿದು ನಿಂತಿದ್ದಾನೆ. ಬಾಣಗಳನ್ನು

ಬತ್ತಳಿಕೆಯಲ್ಲಿಟ್ಟು ಬೆನ್ನ ಹಿಂದೆ ಕಟ್ಟಿದ್ದಾನೆ. ಮಿತ ವಸ್ತ್ರಧಾರಿ. ತಲೆಯ ಮೇಲೆ ಸಿಂಹ ಮುಖವಿದೆ. (ಕ್ರಿ.ಶ.೧೪ನೇ ಶತಮಾನ). ಸಾತೇನಹಳ್ಳಿಯ ಸಾಂತೇಶ್ವರ ದೇವಾಲಯದ ಹೊರಗಿನ ವೀರಗಲ್ಲಿನಲ್ಲಿ ವೀರ ಎಡಗೈಯಲ್ಲಿ ಬಿಲ್ಲನ್ನು ಮುಂದಕ್ಕೆ ಹಿಡಿದಿರುವನು. ಕಠಾರಿಯನ್ನು ಸೊಂಟಕ್ಕೆ ಕಟ್ಟಿದ್ದಾನೆ. ಹೆಣೆದ ಉದ್ದ ಜಡೆಯಿದೆ. ಬಿಲ್ಲಿಗೆ ಬಾಣಗಳನ್ನು ಕಟ್ಟಿರುವನು. ಮೇಲ್ಗಡೆ ಸೂರ್ಯ-ಚಂದ್ರರಿದ್ದಾರೆ. ಉಕ್ಕಂದ ಶಿಲ್ಪದಲ್ಲಿ ವೀರನು ಕತ್ತಿ-ಗುರಾಣಿ ಹಿಡಿದು ನಿಂತಿದ್ದಾನೆ. ಅರಳಕಟ್ಟಿ ಶಿಲ್ಪದಲ್ಲಿ ವೀರ ಕತ್ತಿಯನ್ನು ಬಲಗೈಯಲ್ಲಿ ಕಠಾರಿಯನ್ನು ಹಿಡಿದುನಿಂತಿದ್ದಾನೆ. ಅರಳಕಟ್ಟಿ ಶಿಲ್ಪದಲ್ಲಿ ವೀರ ಕತ್ತಿಯನ್ನು ಬಲಗೈಯಲ್ಲಿ ಕಠಾರಿಯನ್ನು ಎಡಗೈಯಲ್ಲಿ ಹಿಡಿದು ನಿಂತಿದ್ದಾನೆ. ಅಲದಗೇರಿ (ಹಿರೇಕೆರೂರು ತಾ.) ಶಿಲ್ಪದಲ್ಲಿ ವೀರ ಕಠಾರಿಯನ್ನು ಹಿಡಿದು ನಿಂತಿದ್ದಾನೆ. ಆತನ ಹೊಟ್ಟೆಯ ಬದಿಗಳಲ್ಲಿ ರಂಧ್ರಗಳಿವೆ. ಮೇಲ್ಗಡೆ ಅಪ್ಸರೆಯರಿಬ್ಬರು ವೀರನಕೈಗಳನ್ನು ತಮ್ಮ ಹೆಗಲ ಮೇಲೆ ಹಾಕಿಕೊಂಡು ನಿಂತಿದ್ದಾರೆ.

ಚಿಕ್ಕೇರೂರು ತಾಲೂಕಿನ ಸೂಡಂಬಿ ಮತ್ತು ಸಾತೇನಹಳ್ಳಿ ಶಿಲ್ಪಗಳು ವಿಶಿಷ್ಟವೆನಿಸಿವೆ. ಸೂಡಂಬಿಯ ಶಿಲ್ಪದಲ್ಲಿ ವೀರನು ಎಡಗೈಯಲ್ಲಿ ಬಿಲ್ಲನ್ನು ಬಲಗೈಯಲ್ಲಿ ಕುದುರೆಯ ಲಾಳ(?)ವನ್ನು ಹಿಡಿದು ನಿಂತಿದ್ದಾನೆ. ಬಲಗಾಲಿನಿಂದ ಓಡುವ ಕುದುರೆಯನ್ನು ಮೆಟ್ಟಿದ್ದಾನೆ. ಈ ಎರಡೂ ಕುದುರೆಗಳಿಗೆ ಝೂಲನ್ನು ಧರಿಸಲಾಗಿದೆ. ಆತ ಹಿಡದು ನಿಂತ ಕುದುರೆಯನ್ನು ಆತನಿಗೆ ಸಮಾನಾಂತರವಾಗಿ ಚಿತ್ರಿಸುರುವುದು ವಿಶೇಷ ಗಮನವನ್ನು ಸೆಳೆಯುತ್ತದೆ. ತಲೆಗೆ ಕೇಶವನ್ನು ಬಿಗಿದಿದ್ದಾರೆ. ಅದರ ತುರುಬುಗಳೆರಡು ತಲೆಯ ಬಲಕ್ಕಿವೆ. ಸೊಂಟಕ್ಕೆ ಕಿರು ಚಡ್ಡಿಯನ್ನು ಕಟ್ಟಿದ್ದಾನೆ. ಮೇಲ್ಗಡೆ ಸೂರ್ಯ ಚಂದ್ರರಿದ್ದಾರೆ. ಸಾತೇನಹಳ್ಳಿಯ ಶಿಲ್ಪದಲ್ಲಿ ಆರೆಗಂಬದ ಮೇಲೆ ದಾಸನೊಬ್ಬ ನಿಂತಿದ್ದಾನೆ. ಬಲಗೈಯಲ್ಲಿ ಆಯತಾಕಾರದ ಗಜ್ಜೆಯ ತಾಳವಿದೆ. ಎಡಗೈಯಲ್ಲಿಹಿಡಿದ ವಸ್ತು ತಿಳಿದಿಲ್ಲ. ಸೊಂಟಕ್ಕೆ ಕಠಾರಿಯನ್ನು, ಕೊರಳಲ್ಲಿ ಸರಗಳನ್ನು ಮತ್ತು ರುದ್ರಗಳುಳ್ಳ ಯಜ್ಞೋಪವೀತವನ್ನು, ಕೈ ತೋಳುಗಳಲ್ಲಿ ಬಳೆಗಳನ್ನು ಕಿವಿಗಳಲ್ಲಿ ಓಲೆಗಳನ್ನು, ಕಾಲುಗಳಲ್ಲಿ ಕಡಗಗಳನ್ನು ಧರಿಸಿರುವಳು. ಸೊಂಟಕ್ಕೆ ಕಟ್ಟಿದ ಸೀರೆಯ ಜೊತೆಗೆ ವಸ್ತ್ರವನ್ನು ಇಳಿಬಿಟ್ಟು ಕಟ್ಟಿರುವಳು. ಅದಕ್ಕೂ ಮಡಿಕೆ ಪಟ್ಟಿಗಳಿವೆ. ಈತನ ಸುತ್ತಲೂ ಪಾದದಿಂದ ತಲೆಯ ಮೇಲಿನವರೆಗೆ ನಾಗ ಸರ್ಪಗಳ ದೇಹಾಂಗ ಇಳಿಬಿದ್ದಿವೆ. ಮೇಲ್ಗಡೆ ಅವುಗಳು ಒಂದಕ್ಕೊಂದು ಗಂಟು ಹಾಕಿಕೊಂಡು ತಮ್ಮ ಹೆಡೆಗಳನ್ನು ಎತ್ತಿನಿಂತಿವೆ. ಈ ಗಂಟಿನ ಬದಿಗಳಲ್ಲಿ ಎರಡು ಸಾಲುಗಳಲ್ಲಿ ಕ್ರಮವಾಗಿ ಶಂಖ ಮತ್ತು ಚಕ್ರಗಳನ್ನು ಮತ್ತು ಚಂದ್ರ ಹಾಗೂ ನಾಮಗಳನ್ನು ಚಿತ್ರಿಸಿರುವುದು ವಿಶೇಷವೆನಿಸಿದೆ. ಈ ಶಿಲ್ಪದಲ್ಲಿ ತೋರಿಸಿದ ಕಠಾರಿ, ಶಂಖ, ರುದ್ರಾಕ್ಷಿ, ಚಕ್ರ, ನಾಮಗಳು ಮತ್ತು ತಾಳದಿಂದ ಈತನೊಬ್ಬ ವೀರ ದಾಸನಿರಬೇಕೆಂದು ಹೇಳಬಹುದು. (ಕ್ರಿ.ಶ.೧೬ನೇ ಶತಮಾನ).

ಚಿಕ್ಕೆ ಅಣಜಿಯಲ್ಲಿ ಹೀರೆಕೆರೂರು ತಾ. ಎರಡು ವೀರಗಲ್ಲುಗಳಿವೆ. ತಲಾ ಒಂದಕ್ಕೆ ಐದು ಹಂತಗಳಿರುವುದು ಗಮನೀಯ. ಅದರ ಮೂರು ಹಂತಗಳಲ್ಲಿ ಹೋರಾಟದ

ದೃಶ್ಯಗಳಿವೆ. ಮೊದಲನೆಯ ಹಂತದಲ್ಲಿ ಮೂವರು ವೀರರು ವೈರಿಗಳ ವಿರುದ್ಧ ಬಾಣ ಪ್ರಯೋಗಿಸುತ್ತ ಹೋರಾಡುತ್ತಿರುವವರು. ವೈರಿಗಳ ಪಡೆಯಲ್ಲಿ ಇಬ್ಬರು ಬಿಲ್ಲುಬಾಣಗಳನ್ನು ಮತ್ತು ಒಬ್ಬ ಕುದುರೆ ಸವಾರಿ ಮಾಡುತ್ತಿರುವುದನ್ನು ಕಾಣಬಹುದು. ಎರಡನೆಯ ಹಂತದಲ್ಲಿ ನಾಲ್ವರು ವೀರರು ವೈರಿ ಪಡೆಯ ವಿರುದ್ಧ ಬಿಲ್ಲನ್ನು ಪ್ರಯೋಗಿಸುತ್ತಿರುವುದನ್ನು ಚಿತ್ರಿಸಲಾಗಿದೆ.

ಮೂರನೆಯ ಹಂತದಲ್ಲಿ ಒಬ್ಬ ವೀರನು ವೈರಿ ಪಡೆಯ ಕುದುರೆ ಸವಾರರನ್ನು ಓಡಿಸುತ್ತಿರುವುದು ಕಾಣುತ್ತದೆ. ನಾಲ್ಕನೆಯ ಹಂತದಲ್ಲಿ ವೀರನು ಕುಳಿತ ಎರಡು ವಿಮಾನಗಳನ್ನು ಅಪ್ಸರೆಯರು ಒಯ್ಯುತ್ತಿರುವುದನ್ನು ಕಾಣಬಹುದು. ಒಂದು ವಿಮಾನದಲ್ಲಿ ಮೂವರು, ಇನ್ನೊಂದು ವಿಮಾನದಲ್ಲಿ ಇಬ್ಬರು ವೀರರು ಕುಳಿತಿದ್ದಾರೆ. ವಿಮಾನ ಬದಿಗಳಲ್ಲಿ ವಾದ್ಯಮೇಳ ಮತ್ತು ಚೌರಿ ಬೀಸುವ ಸೇವಕರು ಇರುವರು.

ಐದನೆಯ ಹಂತದಲ್ಲಿ ಎರಡು ಸಾಲುಗಳಲ್ಲಿ ವೀರರು ಕುಳಿತಿದ್ದಾರೆ. ಮೊದಲನೆಯ ಸಾಲಿನಲ್ಲಿ ದಂಪತಿಗಳು ಕುಳಿತಿರುವರು. ಬದಿಗೆ ಗೂಡಿನಲ್ಲಿ ಯತಿ ಶಿವಲಿಂಗವನ್ನು ಪೂಜಿಸುತ್ತಿರುವನು. ಅವರ ಬದಿಯಲ್ಲಿ ದಂಪತಿಗಳು ಕುಳಿತಿರುವರು. ಈ ಗೂಡಿನ ಶಿಖರದ ಮೇಲೆ ಬರೆಯಲಾಗಿದೆ. ಅಲ್ಲಿ ಇನ್ನೊಂದು ವೀರಗಲ್ಲಿನಲ್ಲಿ ನಾಲ್ಕು ಹಂತಗಳಿವೆ. ಕೆಳಗಿನ ಮೊದಲನೇ ಹಂತದಲ್ಲಿ ನಾಲ್ವರು ವೀರರು ಕುದುರೆ ಸವಾರಿ ಮಾಡುತ್ತ ಎರಡು ಸಾಲುಗಳಲ್ಲಿರುವರು. ಅವರು ನಿಂತ ವೈರಿಗಳ ಸಂಗಡ ಯುದ್ಧ ಮಾಡುತ್ತಿರುವರು. ಎರಡನೆಯ ಹಂತದಲ್ಲಿ ನಾಲ್ವರು ವೀರರು ಕುಳಿತ ವಿಮಾನವನ್ನು ಒಯ್ಯುತ್ತಿರುವರು. ಬದಿಗಳಲ್ಲಿ ವಾದ್ಯಮೇಳದವರಿ ದ್ದಾರೆ. ನಾಲ್ಕನೆಯ ಹಂತದಲ್ಲಿ ಒಂದಂಚಿನಲ್ಲಿ ವೀರ, ಇನ್ನೊಂದು ಅಂಚಿನಲ್ಲಿ ಮಡದಿಯರಿದ್ದಾರೆ. ನಡುವೆ ಒಂದು ಗೂಡಿದ್ದು ಅದರಲ್ಲಿ ಯತಿ ಶಿವಲಿಂಗ ಪೂಜೆ ಮಾಡುತ್ತಿರುವನು. ಬದಿಗೆ ಕುಳಿತ ನಂದಿ ಇದೆ. ಮೇಲ್ಗಡೆ ಸೂರ್ಯ ಚಂದ್ರರ ಶಿಲ್ಪಗಳಿವೆ.

ವೀರಸತಿಯರ ಕಲ್ಲುಗಳು ಯುದ್ಧ ದೃಶ್ಯ

ವರಾಹ ಗ್ರಾಮದ ಶೇಕಪ್ಪ ಗುಡ್ಡಪ್ಪ ನಾಗಣ್ಣನವರ ಗದ್ದೆಯಲ್ಲಿ ವೀರ ಸತಿಯರುಳ್ಳ ಶಿಲ್ಪವಿದೆ. ಅದರಲ್ಲಿ ಮೂರು ಹಂತಗಳಿವೆ. ಮೊದಲನೆಯ ಹಂತದಲ್ಲಿ ಯುದ್ಧದ ದೃಶ್ಯ ಹಾಗೂ ಮೂವರು ಯೋಧರು ಬಿಲ್ಲುಗಳಿಂದ ಎದುರಿನ ಬಾಣವನ್ನು ವೈರಿಗಳಿಗೆ ಪ್ರಯೋಗಿಸುತ್ತ ಎಡಗಡೆಗೆ ಹೋಗುತ್ತಿರುವರು. ಎರಡನೆಯ ಹಂತದಲ್ಲಿ ಒಂದು ಕಡೆಗೆ ಒಂದರ ಮೇಲೆ ಒಂದರಂತೆ ಮೂರು ಅಕಳುಗಳಿವೆ. ಬದಿಯಲ್ಲಿ ವೀರನು, (ಸತಿಯು?) ವೈರಿಗಳ ವಿರುದ್ಧ ಹೋರಾಡುತ್ತಿರುವನು. ವೈರಿಗಳ ಗುಂಪಿನಲ್ಲಿ ಇಬ್ಬರು ಕುದುರೆ ಸವಾರರು ಮತ್ತಿಬ್ಬರು ಯೋಧರರಿವರು. ಅವರ ಬದಿಗೆ ಮಡಿದ ವೀರರನ್ನು ಇಬ್ಬರು ಅಪ್ಸರೆಯರು ಒಯ್ಯುತ್ತಿರುವ ದೃಶ್ಯವಿದೆ. ಮೂರನೆಯ ಹಂತದಲ್ಲಿ ಸತಿ-ಪತಿಯರು ಪೂರ್ಣ ಪ್ರಮಾಣದ ಕಮಂಡಲವನ್ನು ಹಿಡಿದಿರುವಳು. ವೀರ ಎಡಗೈಯಲ್ಲಿ

ಬಿಲ್ಲನ್ನು ಬಲಗೈಯಲ್ಲಿ ಕಠಾರಿಯನ್ನು ಹಿಡಿದು ನಿಂತಿದ್ದಾನೆ. ಮೇಲ್ಗಡೆ ನಂದಿ, ಯತಿ, ಶಿವಲಿಂಗ ದಂಪತಿಗಳನ್ನು ಚಿತ್ರಿಸಲಾಗಿದೆ. ಈ ಶಿಲ್ಪದ ಕಾಲ ಸು.ಕ್ರಿ.ಶ.೧೫ನೇ ಶತಮಾನ. ಗೋವುಗಳನ್ನು ಇಲ್ಲಿ ಚಿತ್ರಿಸಿರುವುದರಿಂದ ಈ ದಂಪತಿಗಳಿ ಬ್ಬರೂ ಗೋವು ಗಳನ್ನು ಕದಿಯಲು ಬಂದ ಕಳ್ಳರ ಸಂಗಡ ಯುದ್ಧಮಾಡಿ ಸತ್ತಿರಬೇಕೆಂದು ತಿಳಿಯು ವುದು.

ಈ ಶಿಲ್ಪದ ಬದಿಯಲ್ಲಿ ಈ ಮಾದರಿಯ ಮತ್ತೊಂದು ಶಿಲ್ಪದಲ್ಲಿ ಮೂರು ಹಂತದಲ್ಲಿ ಚಿತ್ರಗಳಿವೆ. ಮೊದಲನೆಯ ಹಂತದಲ್ಲಿ ವೀರ ಬಾಣವನ್ನು ಎಡಕ್ಕೆ ವೈರಿಗಳ ಮೇಲೆ ಪ್ರಯೋಗಿಸುತ್ತಿರುವನು. ಎರಡು ಆಕಳುಗಳ ಚಿತ್ರಗಳಿವೆ. ಅಲ್ಲಿರುವ ಆಕಳು ಗಳಿಂದ ಈ ವೀರನು ಆಕಳುಗಳನ್ನು ಕದಿಯಲು ಬಂದ ವೈರಿಗಳ ವಿರುದ್ಧ ಯುದ್ಧ ಮಾಡುತ್ತಿರುವುದು ವೇದ್ಯವಾಗುತ್ತದೆ. ಎರಡನೇ ಹಂತದಲ್ಲಿ ಎರಡು ಸ್ತಂಭಗಳ ಮಧ್ಯದಲ್ಲಿ ಒಬ್ಬ ಕುದುರೆ ಸವಾರ ಮತ್ತು ವಿಮಾನದಲ್ಲಿ ವೀರನಿರುವನು. ಮಹತ್ವದ ಸಂಗತಿಯೆಂದರೆ ತಲಾ ಒಂದರ ಈ ಕಂಬಗಳಿಗೆ ಸತಿಹೋದವರ ಬಲ ತೋಳುಳ್ಳ ಕೈಗಳನ್ನು ಇಲ್ಲಿ ಜೋಡಿಸಲಾಗಿದೆ. ಮೂರನೆಯ ಹಂತದಲ್ಲಿ ವೀರನು ತನ್ನ ಇಬ್ಬರು ಸತಿಯರೊಂದಿಗೆ ಕುಳಿತಿರುವನು. ಬದಿಗೆ ಯತಿ, ಶಿವಲಿಂಗ ಮತ್ತು ನಂದಿ ಚಿತ್ರಗಳಿವೆ. ಈ ವೀರನು ಆಕಳು ಕಳ್ಳರೊಂದಿಗೆ ಹೋರಾಡಿ ಸತ್ತ ಬಳಿಕ ತನ್ನಿಬ್ಬರು ಸತಿಯರು ಸತ್ತು ಹೋದರೆಂದು ಈ ಶಿಲ್ಪ ತಿಳಿಸುತ್ತದೆ. ಕಾಲ ಕ್ರಿ.ಶ.೧೬ನೇ ಶತಮಾನ.

ಹಾವೇರಿಯಲ್ಲಿ ಅಗೆಯುವಾಗ ದೊರೆತ ಈ ಮಾದರಿಯ ಶಿಲ್ಪ ವಿಶೇಷವೆನಿಸಿದೆ. ಅದರಲ್ಲಿ ಮೂರು ಹಂತಗಳಿವೆ. ಮೊದಲನೆಯ ಹಂತದಲ್ಲಿ ಯುದ್ಧದ ದೃಶ್ಯವಿದೆ. ಬಲಗಡೆ ವೀರನು ತನ್ನ ಇಬ್ಬರು ಸಹಾಯಕರೊಂದಿಗೆ ವೈರಿಗಳ ವಿರುದ್ಧ ಹೋರಾಡುತ್ತಿ ರುವನು. ತನ್ನ ಸೈನ್ಯ ಪರಿವಾರದಲ್ಲಿಬ್ಬರು ಕ್ರಮವಾಗಿ ಒಬ್ಬರು ಬಾಣವನ್ನು ಬಿಲ್ಲಿನ ಮೂಲಕ ಪ್ರಯೋಗಿಸುತ್ತಿರುವರು. ಇನ್ನೊಬ್ಬರು ಒಂದು ಕೈಯಲ್ಲಿ ನಾಗ ಒನ್ನೊಂದು ಕೈಯ್ಯಲ್ಲಿ ಗುರಾಣಿ ಹಿಡಿದಿರುವನು.

ಆತನ ಗುರಾಣಿಯ ಎದುರು ಉದ್ದವಾದ ಬಿಲ್ಲಿದೆ. ಬದಿಗೆ ವೀರನು ಬಾಕು ಹಿಡಿದು ಎದುರಿನಲ್ಲಿರುವ ವೈರಿಪಡೆಯ ಮುಂದಿನ ಕುದುರೆಗೆ ಇರಿದಿದ್ದಾನೆ. ವೈರಿಪಡೆಯಲ್ಲಿ ಎರಡು ಸಾಲುಗಳಲ್ಲಿ ಸೈನ್ಯವಿದೆ. ಕೆಳಗಿನ ಸಾಲಿನಲ್ಲಿ ಮೂವರು ಕಾಲ್ದಳದವರಿದ್ದು ಅವರಲ್ಲಿ ಒಬ್ಬನು ಕತ್ತಿ-ಗುರಾಣಿಗಳನ್ನು, ಇನ್ನಿಬ್ಬರು ಬಿಲ್ಲುಗಳಿಂದ ಬಾಣ ಪ್ರಯೋಗಿಸುತ್ತಿರುವರು. ಮೇಲಿನ ಸಾಲಿನಲ್ಲಿ ಇಬ್ಬರು ಕುದುರೆ ಸವಾರರಿದ್ದು ಕೈಗಳಲ್ಲಿ ಬೀಸುವ ಈಟಿಗಳು ಮತ್ತು ಕುದುರೆ ಲಾಳಗಳಿವೆ. ಕುದುರೆಯ ದೇಹಾಂಗದ ಲಕ್ಷಣವು ಜನಪದ ಗೊಂಬೆಗಳನ್ನು ಹೋಲುತ್ತವೆ. ಈ ಲಕ್ಷ್ಮಣವುಳ್ಳ ಕುದುರೆಗಳು ಸು.ಕ್ರಿ.ಶ.೧೩ನೇ ಶತಮಾನದ ಹೊಯ್ಸಳರ ಕಾಲದಲ್ಲಿ ಗೋಚರಿಸುತ್ತವೆ. ಎರಡನೇ ಹಂತವನ್ನು ವಿಭಾಗಿಸುವಲ್ಲಿ ಏಕಸಾಲಿನಲ್ಲಿ ಎರಡು ತೋಳುಳ್ಳ ಎತ್ತಿದ ಕೈಗಳನ್ನು ಚಿತ್ರಿಸಲಾಗಿದೆ. ಒಂದು ತೋಳುಳ್ಳ ಎತ್ತಿದ ಕೈಗಳನ್ನು ಬಲ ಅಂಚಿನಲ್ಲಿ ಮತ್ತು

ಇನ್ನೊಂದು ತೋಳುಳ್ಳ ಎತ್ತಿದ ಕೈ ಎಡ ಅಂಚಿನಲ್ಲಿ ನಿರ್ಮಿಸಲಾಗಿದೆ. ಈ ಎರಡು ತೋಳುಗಳು ಜೋಡಿಸಿದ ಭಾಗದಲ್ಲೇ ಎರಡು ಅರಳಿದ ಹೂಗಳಿವೆ. ಎಡಗಡೆಯ ಕೈ ಭಾಗ ಹಾಗೂ ಮೂರನೇ ಹಂತದ ಎಡ ಅರ್ಧ ಶಿಲ್ಪ ಭಾಗ ಮುರಿದು ಹೋಗಿದೆ. ಬಲಕೈಯಲ್ಲಿ ನಿಂಬೆ ಹಣ್ಣಿದೆ. ಈ ಕೈಗಳ ನಡುವೆ ಮತ್ತು ತೋಳುಗಳ ಮೇಲೆ ಮಡಿದ ವೀರನು ತನ್ನಿಬ್ಬರು ಸತಿಯರ ಅಕ್ಕ ಪಕ್ಕದಲ್ಲಿ ಕೈಮುಗಿದು ಕುಳಿತಿರುವನು. ಆತನು ಪೀಠದ ಮೇಲೆ ಕೈಮುಗಿದು ಕುಳಿತಿರುವನು. ಆತನ ತುರುಬು ತಲೆಯ ಎಡಕ್ಕಿದ್ದರೆ ತನ್ನ ಪತ್ನಿಯರ ತಲೆಯ ತುರುಬುಗಳು ಬಲಕ್ಕಿವೆ. ಮೂರನೆಯ ಹಂತದಲ್ಲಿ ನಂದಿಯು ಎಡಕ್ಕೆ ಮುಖ ಮಾಡಿ ಕುಳಿತಿದ್ದು ಅದರ ಪೀಠಕ್ಕೆ ಬಲಕ್ಕೆ ಚಂದ್ರನ ಚಿಹ್ನೆಯಿದೆ. ಈ ಶಿಲ್ಪವು ನೋಡಲು ಧ್ವಜದಂತಿದೆ. ಎತ್ತಿದ ಎಡಬಲಗೈಗಳನ್ನು ಎಡಬಲ ಅಂಚುಗಳಲ್ಲಿ ಚಿತ್ರಿಸಿರುವುದು ಮತ್ತು ಎಡಗೈ ಎತ್ತಿರುವುದನ್ನು ತೋರಿಸಿರುವುದು ವಿಶಿಷ್ಟವೆನಿಸಿದೆ.

ಚಿಕ್ಕೇನೂರಿನ ಶಿಲ್ಪದಲ್ಲಿ ಮೂರು ಹಂತಗಳಿವೆ. ಮೊದಲನೆಯ ಹಂತದಲ್ಲಿ ಯುದ್ಧ ದೃಶ್ಯವಿಲ್ಲ. ಭೂಮಿಯಲ್ಲಿ ಹೂತಿರಬೇಕು. ಅದರೆ ಅಲ್ಲಿ ವೀರ ಕೈ ಮುಗಿದು ಪೀಠದ ಮೇಲೆ ಕುಳಿತಿದ್ದಾನೆ. ಸತಿಹೋದವಳು ಬಲತೋಳಗೈಯನ್ನು ಎತ್ತಿಹಿಡಿದಿರುವಳು. ಅದರಲ್ಲಿ ನಿಂಬೆ ಹಣ್ಣಿದೆ. ಇಳಿಬಿಟ್ಟ ಎಡಗೈಯಲ್ಲಿ ಕಮಂಡಳವಿದೆ. ಸೊಂಟಕ್ಕೆ ಸೀರೆಯನ್ನು ಬಿಗಿದಿರುವಳು. ಆಕೆಯ ಎಡಗಡೆ ಸೇವಕಿ ನಿಂತಿದ್ದಾಳೆ.

ಎರಡನೆಯ ಹಂತದಲ್ಲಿ ಸತಿ-ಪತಿಯರನ್ನು ವಿಮಾನದಲ್ಲಿ ಕೂಡಿಸಲಾಗಿದೆ. ಅಪ್ಸರೆಯರಿಬ್ಬರು ಈ ವಿಮಾನವನ್ನು ಹಿಡಿದು ಒಯ್ಯುವ ರೀತಿಯಲ್ಲಿದ್ದಾರೆ. ಅವರ ಇನ್ನೊಂದು ಕೈಗಳಲ್ಲಿ ಚೂರಿಗಳಿವೆ. ಬದಿಗಳಲ್ಲಿ ವಾದ್ಯ ಮೇಳದವರಿದ್ದಾರೆ. ಮೂರನೆಯ ಹಂತದಲ್ಲಿ ಶಿಲಿಂಗವನ್ನು ಅರಾಧಿಸುವ ಯತಿ ಬದಿಗೆ ಕುಳಿತ ನಂದಿ. ನಂತರ ಕೈಮುಗಿದು ಕುಳಿತ ಸತಿ-ಪತಿಯರು ಎಡಬದಿಗೆ ಕುಳಿತಿರುವರು. ನಂದಿ, ಸತಿ-ಪತಿಯರ ಮೇಲ್ಭಾಗದಲ್ಲಿ ಉದ್ದನೆಯ ಪಟ್ಟಿಕೆಯ ಮೇಲೆ ವಾದ್ಯಮೇಳದವರಿಬ್ಬರು ಇರುವುದು ವಿಶೇಷ. ಈ ಹಂತದ ಪಟ್ಟಿಕೆಯ ಮೇಲೆ ಶಿವಲಿಂಗ ಕೆತ್ತಲಾಗಿದೆ. ಬದಿಗಳಲ್ಲಿ ಸೂರ್ಯ-ಚಂದ್ರರ ಚಿಹ್ನೆಗಳಿವೆ. ಕುಮ್ಮಾರಿನ (ಬ್ಯಾಡಿಗೆ ತಾ.) ಶಿಲ್ಪದಲ್ಲಿ ಒಂದರ ಮೇಲೆ ಒಂದರಂತೆ ಮೂರು ಗುಂಪುಗಳ ಉಬ್ಬು ಶಿಲ್ಪಗಳಿವೆ. ಕೆಳಗಡೆ ಕುದುರೆ ಸವಾರಿ ಮಾಡುವ ವೀರ ಆತನ ಮುಂದೆ ಅವನ ಸೇವಕ ಬಿಲ್ಲನ್ನು ಪ್ರಯೋಗಿಸು ತ್ತಿರುವುದು ಮತ್ತು ಅವನ ಹಿಂದೆ ಸೇವಕ ಛತ್ರಿಯನ್ನುಅವನಿಗೆ ಹಿಡಿದಿರುವುದನ್ನು ತೋರಿಸಲಾಗಿದೆ. ಮೇಲೆ ಮಡಿದ ವೀರ ಕೈಮುಗಿದು ಕುಳಿತಿದ್ದರೆ ಬದಿಗಳಲ್ಲಿ ಸತಿಯರಿಬ್ಬರು ಒಂದು ಕೈಯನ್ನು ಎತ್ತಿಹಿಡಿದು ನಿಂತಿದ್ದಾರೆ.

ಬಲಗಡೆಯಲ್ಲಿರುವ ಸತಿ ತನ್ನ ಎಡಗೈಯನ್ನು ಮತ್ತು ಎಡಗಡೆ ನಿಂತವಳು ತನ್ನ ಬಲಗೈಯನ್ನು ಎತ್ತಿಹಿಡಿದಿರುವರು. ಇನ್ನೊಂದು ಕೈಯಲ್ಲಿ ಕನ್ನಡಿ ಹಿಡಿದಿದ್ದಾರೆ. ಮೇಲ್ಭಾಗದಲ್ಲಿ ಕೈಮುಗಿದು ಮೂವರು ಕುಳಿತಿದ್ದಾರೆ. (ಕ್ರಿ.ಶ.೧೬ನೇ ಶತಮಾನ)

ಮಹಿಳೆರೂಪದ ಸತಿ ಕಲ್ಲುಗಳು

ಹಿರೇಕೆರೂರು ತಾಲೂಕಿನ ವರಾಹ ಗ್ರಾಮದ ವೀರಭದ್ರ ದೇವಾಲಯದ ಸಮೀಪ ಮೂರು ಸತಿಗಲ್ಲುಗಳಿವೆ. ಒಂದು ಮಾತ್ರ ಅಳೆತ್ತರದ ಪೂರ್ಣ ಮಹಿಳೆಯ ರೂಪವುಳ್ಳ ಸತಿಗಲ್ಲು. ಅಕೆ ತನ್ನ ಬಲಗೈಯನ್ನು ಮೇಲೆ ಎತ್ತಿ ಹಿಡಿದಿರುವಳು. ಕಿರುಗಾತ್ರದಲ್ಲಿ ಮೇಲ್ಗಡೆ ದಂಪತಿಗಳು ಶಿವಲಿಂಗದ ಮುಂದೆ ಕೈಮುಗಿದು ಕುಳಿತಿರುವರು. ಬದಿಗೆ ಯತಿ ಮತ್ತು ನಂದಿ ಚಿತ್ರಗಳಿವೆ. (ಕ್ರಿ.ಶ.೧೬ನೇ ಶತಮಾನ). ಈ ಗ್ರಾಮದ ಹೊಲದಲ್ಲಿರುವ ಇದೇ ಕಾಲದ ಮತ್ತೊಂದು ಮಹಿಳೆರೂಪದ ಎತ್ತರ ಸತಿಗಲ್ಲು ಇದೆ. ಅಲ್ಲಿ ಸತಿಯು ಎತ್ತಿ ಹಿಡಿದ ಬಲಗೈಯಲ್ಲಿ ನಿಂಬೆ ಹಣ್ಣಿದ್ದರೆ ಇಳಿಬಿಟ್ಟ ಎಡಗೈಯಲ್ಲಿ ಕಮಂಡಲವಿದೆ. ಅಕೆಯು ವಸ್ತ್ರಾಭರಣ ಧರಿಸಿರುವಳು. ಸೀರೆಯನ್ನು ಪಾದದವರೆಗೆ ಇಳಿಬಿಟ್ಟು ಸೊಂಟಕ್ಕೆ ಕಟ್ಟಿರುವಳು. ತಲೆಗೆ ಅರ್ಧ ವೃತ್ತಾಕಾರದಲ್ಲಿ ಕೇದಿಗೆಯನ್ನು ಧರಿಸಿದ್ದಾಳೆ. ಅಕೆಯ ತಲೆಯ ಮೇಲೆ ಪಟ್ಟಿಕೆ ಅಥವಾ ಛತ್ರಿಯಿದೆ.(?) ಬಲಗೈ ಮೇಲ್ಗಡೆ ಆಕೆಯ ಪತಿ ಕೈಮುಗಿದು ಕುಳಿತಿದ್ದಾನೆ. ಮತ್ತು ಸೂರ್ಯ - ಚಂದ್ರರ ಚಿಹ್ನೆಗಳಿವೆ. ತಲೆಯ ಮೇಲೆ ಕೇದಿಗೆಯ ಮುಡಿ, ತಲೆಯ ಬಲಗಡೆ ಕೇಶದ ತುರುಬು, ರಟ್ಟೆಗಳಿಗೆ ಎರಡು ಬಳೆಗಳು, ಕೈಗೆ ಮೂರು ಬಳೆಗಳು, ಕೊರಳಲ್ಲಿ ಸರ, ಕಿವಿಗಳಲ್ಲಿ ಓಲೆಗಳು, ಸೊಂಟಕ್ಕೆ ಬಿಗಿದ ಸೀರೆ ಪಾದದ ಮೇಲಿನವರೆಗೆ ಅಕೆಯ ಸಿಂಗಾರವನ್ನು ಕಾಣಬಹುದು. ಸೀರೆಯನ್ನು ಲಂಗದಂತೆ ಬಿಟ್ಟಿರುವಳು. ಅದಕ್ಕೆ ಅಡ್ಡವಾದ ಮಡಿಕೆಗಳ ನಡುವೆ ಉದ್ದವಾಗಿ ಇಳಿಬಿಟ್ಟ ಮಡಿಕೆಗಳು ಅದರ ತುದಿಯನ್ನು ಮಡಚಿ ಸೊಂಟದಿಂದ ಸ್ವಲ್ಪ ಕೆಳಗಡೆ ನೆರೆಗಳನ್ನು ಇಳಿ ಬಿಟ್ಟಿರುವಳು. ಮತ್ತೊಂದು ವಸ್ತ್ರವನ್ನು ಸೊಂಟಕ್ಕೆ ಕಟ್ಟಿದ್ದು ಅದರ ತುದಿಗಳೆರಡು ಸೀರೆಬದಿಗಳಲ್ಲಿ ಮೇಲಿಂದ ಕೆಳಗಡೆ ಇಳಿಬಿಟ್ಟು ಕಟ್ಟಿರುವಳು. ಈ ಸಿಂಗಾರ ಆಕೆಯ ಸಾಮಾಜಿಕ ಆರ್ಥಿಕ ಸ್ಥಿತ್ಯಂತರವನ್ನುಅಭಿವ್ಯಕ್ತಗೊಳಿಸುತ್ತವೆ. ಹೊಟ್ಟೆಯ ಬದಿಗಳಲ್ಲಿ ಎರಡು ರಂಧ್ರಗಳನ್ನು ಈ ಶಿಲ್ಪಕ್ಕೆಸೀರೆಯನ್ನು ಉಡಿಸಿ ಆರಾಧಿಸಲು ಮಾಡಲಾಗಿದೆ. ಎತ್ತಿದ ಬಲತೋಳನ್ನು ಮಡಚಲಾಗಿದೆ.

ಸೂಡಂಬಿಯ ಸತಿ ಶಿಲ್ಪದಲ್ಲಿ (ಗ್ರಾಮ ಸೇವಕರ ಮನೆ ಹತ್ತಿರ) ಎತ್ತಿದ ಬಲಗೈ ಯಲ್ಲಿ ಅರಳಿದ ಹೂವಿದೆ. ಅರ್ಧವೃತ್ತಾಕಾರದಲ್ಲಿ ಕೇಶವನ್ನು ಮೂರು ಪದರುಗಳಲ್ಲಿ ತಲೆಯ ಹಿಂಬದಿಯಲ್ಲಿ ಅಲಂಕರಿಸಿರುವಳು. ಮೇಲಿನ ಪದರಿನಲ್ಲಿ ಸೇವಂತಿಕೆ ಹೂವಿನ ದಂಡೆಯಿದೆ. ಮುಂದಿನ ಭಾಗದಲ್ಲಿ ಕೇಶವನ್ನು ಬಾಚಿಕೊಂಡಿರು ವಳು. ಕೊರಳಲ್ಲಿ ಮೂರು ಸರಗಳಲ್ಲಿ ಒಂದು ಮಾತ್ರ ಕುಚಗಳ ಮಧ್ಯದಲ್ಲಿ ಇಳಿಬಿದ್ದಿದೆ. ತಲಾ ಒಂದು ರಟ್ಟೆಯಲ್ಲಿ ಒಂದು ಕೈಯಲ್ಲಿ ಮೂರು ಬಳೆಗಳನ್ನು ಧರಿಸಿರುವಳು. ಆದರೆ ಬಲತೋಳನ್ನು ಕೆಳಗಿಳಿಸಿ ಮಡಚಿಲ್ಲ. ಹಿರೇಕೇರೂರಿನ ಕರೆಯ ದಂಡೆಯ ಮೇಲಿರುವ ಶಿಲ್ಪದಲ್ಲಿ ಸತಿಯು ತನ್ನ ಬಲತೋಳನ್ನು ಕೆಳಗಿಳಿಸಿ ಮಡಚಿದ್ದಾಳೆ ಆದರೆ ಕೈಯನ್ನು ಮಾತ್ರ ಎತ್ತಿಹಿಡಿದಿರುವಳು. ಸೀರೆ, ಕುಚಹಾರ, ಹೂವಿನ ದಂಡೆ ತಲೆಯ ಮೇಲೆ

ದರಿಸಿರುವಳು. ಇಳಿಬಿಟ್ಟ ಎಡಗೈಯಲ್ಲಿ ಈಕೆಯು ಕಮಂಡಲವನ್ನು ಹಿಡಿದಿರುವಳು. ಕುತ್ತಿಗೆ ಮತ್ತು ಹೊಟ್ಟೆಯ ಬದಿಯಲ್ಲಿ ನಾಲ್ಕು ರಂಧ್ರಗಳಿವೆ. ಹಿರೇಹಳ್ಳಿ (ಬ್ಯಾಡಗಿ ತಾ)ಯ ಶಿಲ್ಪದಲ್ಲಿ ಶಿಲೆಯನಿಂಬೆಹಣ್ಣನ್ನು ಇಳಿಬಿಟ್ಟು ತನ್ನ ಎಡಗೈಯಲ್ಲಿ ಹಿಡಿದಿದ್ದಾಳೆ. ಬಲಗೈಯಲ್ಲಿ ಹಿಡಿದ ವಸ್ತು ಸ್ಪಷ್ಟವಾಗಿ ಕಾಣುವುದಿಲ್ಲ.

ತಲೆಯ ಸುತ್ತಲಿನ ಹೂವಿನ ದಂಡೆ ವೃತ್ತಾಕಾರದಲ್ಲಿದೆ. ಈಕೆಗೂ ಹಾರ, ಕುಚಗಳ ಮಧ್ಯೆ ಇಳಿಬಿದ್ದಿದೆ. ಕುತೂಹಲವೆಂದರೆ ಉಟ್ಟ ಸೀರೆಯ ನೆರಿಗೆಗಳು ಬದಿಗಳಲ್ಲೂ ಚಾಚಿವೆ. ಉಳಿದ ಸಿಂಗಾರ ಈ ಮೇಲಿನಂತಿದೆ. ಮುತ್ತೂರಿನ (ಬ್ಯಾಡಗಿ ತಾ.) ಹಾಲಿನ ಡೈರಿಯ ಸಂಕಿರಣದಲ್ಲಿ ಎರಡು ಸತಿಗಲ್ಲುಗಳಿವೆ. ಒಂದರಲ್ಲಿ ಸತಿ ತ್ರಿಭಂಗಿಯಲ್ಲಿ ಇರುವಳು. ಬಲಗೈಯಲ್ಲಿ ನಿಂಬೆಹಣ್ಣು ಇದೆ. ಬಲತೋಳನ್ನು ಬಗ್ಗಿಸಿರುವಳು. ಎಡಗೈಯಲ್ಲಿ ಕನ್ನಡಿಯಿದೆ. ಆಕೆಯ ಸೊಂಟದ ಬಲಕ್ಕಿಬ್ಬರು ದಂಪತಿಗಳು ಕೈಮುಗಿದು ಕಮಲ ಪೀಠದ ಮೇಲೆ ಕುಳಿತಿರುವರು. ದಂಟುಳ್ಳ ಕಮಲದ ಮೊಗ್ಗು ಕೆಳಗಿನಿಂದ ಮೇಲಕ್ಕೆ ಬೆಳದಿರುವಂತೆ ಚಿತ್ರಿಸಲಾಗಿದೆ. ಈ ರೀತಿ ಕದರಮಂಡಲಗಿಯ ಶಿಲ್ಪದಲ್ಲೂ ಕಾಣಬಹುದು. ಚಂದ್ರಾಕಾರದಲ್ಲಿ ತಲೆಯ ಮೇಲೆ ದಂಡೆ ಇದೆ. ಆಕೆಯ ಎಡತೋಳಿನ ಬದಿಗೆ ದಂಪತಿಗಳಿಬ್ಬರು ಕೈಮುಗಿದು ಕುಳಿತಿರುವರು. ಇನ್ನೊಂದರಲ್ಲಿ ಬಲಸೊಂಟದ ಬದಿಗೆ ಆಕೆಯ ಗಂಡನು ಬಿಲ್ಲನ್ನು ಹಿಡಿದು ನಿಂತಿದ್ದಾನೆ. ಎತ್ತಿದ ಕೈ ಬಲತೋಳು ಸ್ವಲ್ಪ ಬಗ್ಗಿದೆ. ತಲೆಯ ಮೇಲಿನ ಕೇದಿಗೆಯ ಎಸಳುಗಳು ಸ್ವಲ್ಪ ದೂರದಲ್ಲಿವೆ. ಈ ಎರಡಕ್ಕೂ ಹೊಟ್ಟೆಯ ಬದಿಗಳಲ್ಲಿ ರಂಧ್ರಗಳನ್ನು, ಉಡಿಸಿದ ಸೀರೆಯನ್ನು ಕಟ್ಟಲು ಕೊರೆಯಲಾಗಿದೆ. ಸಿಡೇನೂರಿನ ಕಲ್ಲೇಶ್ವರ ದೇವಾಲಯ ಮುಂದಿನ ಒಂದು ಸತಿ ಶಿಲ್ಪದಲ್ಲಿ ಅನೇಕ ವಿವರಗಳಿವೆ. ಆಕೆಯ ಮೇಲೆತ್ತಿದ ಬಲಗೈಯಲ್ಲಿ ನಿಂಬೆ ಹಣ್ಣಿದೆ. ಬಲಗೈ ತೋಳು ಸ್ವಲ್ಪ ಕೆಳಗಿಳಿದಿದೆ. ಎಡಗೈಯಲ್ಲಿ ಕಮಂಡಲವಿದೆ.

ತಲೆಯ ಮೇಲಿನ ದಂಡೆಯಲ್ಲಿ ಕೇದಿಗೆಗಳ ಸಾಲಿನ ತುದಿಗಳಿಗೆ ಸೇವಂತಿಗೆಯ ಸಾಲು ಕಾಣಬರುತ್ತವೆ. ಕೊರಳಲ್ಲಿ ಸರ ಕುಚಹಾರವಲ್ಲದೆ ಮಣಿಗಳುಳ್ಳ ಯಜ್ಞೋಪವೀತ ಧರಿಸಿರುದು ವಿಶೇಷ. ಧರಿಸಿದ ಸೀರೆಗೆ ಅನೇಕ ಸಮಾನಾಂತರ ನೆರಿಗೆಗಳು ಮೇಲಿನಿಂದ ಕೆಳಗಿನವರೆಗಿವೆ. ಅದರ ಅಂಚುಗಳಿಗೆ ಎರಡು ಪಟ್ಟಿಕೆಗಳನ್ನು ಅಡ್ಡವಾಗಿ ಕಟ್ಟಲಾಗಿದೆ. ಬಲಗಡೆ ಆರೆಗಂಭದ ಮೇಲೆ ಎಣ್ಣೆಯ ಕುಂಭದ ಎಡಗಡೆಗೆ ನೆಲದಿಂದ ಮೇಲಕ್ಕೆ ಬೆಳೆದ ಕಮಲದಂಚಿನ ಮೊಗ್ಗು ಅದರ ಮೇಲೆ ದಂಪತಿಗಳಿಬ್ಬರು ಕೈಮುಗಿದು ಕುಳಿತಿರುವೆರು. ಆಕೆಯ ತಲೆಯ ಎಡಬದಿಗೆ ಯತಿ ಶಿವಲಿಂಗವನ್ನು ಪೂಜಿಸುತ್ತಾ ನಿಂತಿದ್ದಾನೆ, ಮೇಲೆ ಸೂರ್ಯ ಚಂದ್ರರ ಚಿಹ್ನೆಗಳಿವೆ. ಆಲದಗೇರಿ (ಹಿರೆಕೇರೂರು ತಾಲೂಕು) ಶಿಲ್ಪದಲ್ಲಿ ಅರ್ಧವೃತ್ತಾಕಾರದ ತಲೆಯ ದಪ್ಪನೆಯ ಕೇಶಕ್ಕೆ ಬಿಡಿ ಬಿಡಿಯಾಗಿ ಕೇದಿಗೆಯ ಎಸಳನ್ನು ಚುಚ್ಚಿಕೊಂಡಿರುವಳು. ಮೇಲೆತ್ತಿದ ಬಲಗೈಯಲ್ಲಿ ನಿಂಬೆಹಣ್ಣಿದೆ. ಎಡಗೈ ಇಳಿಬಿಟ್ಟಿದ್ದಾಳೆ. ಉಟ್ಟ ಸೀರೆಯ ಜೊತೆ ಬಲಗಡೆ ಒಂದು ವಸ್ತ್ರವನ್ನು ಕಟ್ಟಿರುವಳು.

ಸಿಡೇನೂರಿನ ಕಲ್ಲೇಶ್ವರ ದೇವಾಲಯದ ಎದುರಿನ ಇನ್ನೊಂದು ಸತಿಯ ಶಿಲ್ಪದಲ್ಲಿ ಮೇಲೆತ್ತಿದ ತನ್ನ ಬಲಗೈಯಲ್ಲಿ ವೃತ್ತಾಕಾರದ ಅರಳಿದ ಕಮಲದ ಮಧ್ಯೆ ನಿಂಬೆ ಹಣ್ಣನ್ನು ಹಿಡಿದಿದ್ದಾಳೆ. ಬೆರಳುಗಳಿಗೆ ಉದ್ದವಾದ ಉಗುರುಗಳಿವೆ. ಉಂಗುರಗಳನ್ನು ಧರಿಸಿದ್ದಾಳೆ. ಈ ತೋಳನ್ನು ಕೆಳಗಡೆ ಇಳಿಬಿಟ್ಟು ಬಗ್ಗಿಸಿದ್ದಾಳೆ. ಇಳಿ ಬಿಟ್ಟ ಎಡಗೈಯಲ್ಲಿ ದುಂಡಾದ ಕನ್ನಡಿ ಹಿಡಿದಿರುವಳು. ಈಕೆಯು ಯಜ್ಞೋಪವೀತಧಾರಿ. ಸೊಂಟಕ್ಕೆ ಕಟ್ಟಿದ ಸೀರೆಗೆ ಗೆಜ್ಜೆ ಸರದ ಮಧ್ಯದಲ್ಲಿ ಇಳಿ ಬಿಟ್ಟ ಸೀರೆಯ ಮಡಿಕೆ ಇದೆ. ಸರಳ ಅಡ್ಡ ಪಟ್ಟಿಯುಳ್ಳ ಇಳಿ ಬಿಟ್ಟ ಸೇರೆಯ ಮಡಿಕೆಗಳಿವೆ. ತಲೆಯ ಮೇಲೆ ದಪ್ಪನೆಯ ಕೇಶಕ್ಕೆ ಹೊಂದಿ ಕಿರು ಕೇದಿಗೆಗಳ ದಂಡೆಯಿದೆ. ಇದರಲ್ಲಿಯೂ ಬಲಗಡೆ ಅರೆಗಂಭದ ಮೇಲೆ ಎಣ್ಣೆಯ ಕುಂಬವಿದೆ. ತಲೆಯ ಎಡಗಡೆ ಎರಡು ಸಾಲುಗಳಲ್ಲಿ ಕ್ರಮವಾಗಿ ಕೈಮುಗಿದು ಕುಳಿತ ದಂಪತಿಗಳು ಮತ್ತು ಕುಳಿತ ನಂದಿ ಬದಿಯಲ್ಲಿ ಶಿವಲಿಂಗವನ್ನು ಆರಾಧಿಸುವ ಯತಿ ನಿಂತಿರುವರು. ಮೇಲೆ ಸೂರ್ಯ ಚಂದ್ರರಿದ್ದಾರೆ.

ಚಿಕ್ಕೇರೂರಿನಲ್ಲೊಂದು ಸತಿ ಶಿಲ್ಪದಲ್ಲಿ ಮೇಲೆತ್ತಿದ ಬಲಗೈಯಲ್ಲಿ ನಿಂಬೆಹಣ್ಣಿದೆ. ಇಳಿಬಿಟ್ಟ ಎಡಗೈಯಲ್ಲಿ ಕಮಂಡಲ, ತಲೆಯ ಮೇಲೆ ಅರ್ಧವೃತ್ತಾಕಾರದ ಕೇಶಕ್ಕೆ ಕೇದಿಗೆಯ ಹೆಸಳುಗಳುಳ್ಳ ದಂಡೆ, ಕಿವಿ ಒಲೆಗಳು, ಕುಚಹಾರ, ತೋಳುಬಳೆ, ಸೀರೆ ಯನ್ನು ಲಂಗದಂತೆ ಧರಿಸಿರುವಳು, ಅದಕ್ಕೆ ಉದ್ದ ರವಿಕೆಗಳು ಮತ್ತು ಅಗಲ ವಾದೊಂದು ವಸ್ತ್ರವನ್ನು ಕಟ್ಟಿರುವುದು ಆಕೆಯ ಸಿಂಗಾರವನ್ನು ತೋರಿಸುತ್ತದೆ. ಬಲ ಗಡೆಗೆ ಆಕೆಯ ಪತಿ ಪೀಠದ ಮೇಲೆ ಕೈಮುಗಿದು ಕುಳಿತಿರುವನು. ಹೊಟ್ಟೆಯ ಬದಿ ಗಳಲ್ಲಿ ಎರಡು ರಂಧ್ರಗಳಿವೆ. ಸುಣ್ಣಕಲ್ಲು ಬಿದರಿ (ರಾಣೆಬೆನ್ನೂರು ತಾಲೂಕು)ಯ ಸತಿ ಶಿಲ್ಪದಲ್ಲಿ ಸತಿಯ ಸೊಂಟದ ಬಲಕ್ಕೆ ಒಂದು ಪ್ರಾಣಿ ಚಿತ್ರವಿದೆ. (ಹುಲಿ ಅಥವಾ ಚಿರತೆ) ಸತಿ ಮುಖದ ಬದಿಗಳಲ್ಲಿ ಕಮಲಗಳ ಚಿತ್ರವಿದೆ. ಇಳಿಬಿಟ್ಟ ಬಲಗೈಯಲ್ಲಿ ನಿಂಬೆ ಹಣ್ಣಿದೆ. ಹಿರೇಅಣಜಿ (ಹಿರೇಕೆರೂರು ತಾಲೂಕು) ಶಿಲ್ಪದಲ್ಲಿ ಸತಿಯು ಧರಿಸಿದ ವಸ್ತ್ರಾಭರಣಗಳು ವಿಶಿಷ್ಟವೆನಿಸಿವೆ. ಕದರಮಂಡಲಗಿಯ ಒಂದು ಶಿಲ್ಪದಲ್ಲಿ ಸತಿಯ ಬದಿಗೆ ಸವತಿಯರಿ ದ್ದಾರೆ. ಆದರೆ ಸವತಿ ಕೈ ಮುಗಿದು ನಿಂತಿರುವಳು. ಅಲ್ಲಿಯ ಮತ್ತೊಂದು ಶಿಲ್ಪದಲ್ಲಿ ತನ್ನ ಬಲಗೈಯಲ್ಲಿ ನಿಂಬೆ ಹಣ್ಣು ಹಿಡಿದಿದೆ, ಎಡಗೈಯಲ್ಲಿ ಕಮಂಡಲಗಳಿವೆ. ಲಂಗದಂತೆ ಸೀರೆ ಉಟ್ಟಿರುವಳು. ಸುತ್ತಕೋಟಿ (ಹಿರೇಕೆರೂರು.ತಾ) ಶಿಲ್ಪದಲ್ಲಿ ಸತಿಯು ಕುಚಹಾರಧಾರಿ, ತಲೆ ಬದಿಗಳಲ್ಲಿ ಅರಳಿದ ಕಮಲಗಳಿವೆ. ಬೋಗಾವಿ ಶಿಲ್ಪದಲ್ಲಿ ಸತಿಯ ಬಲಗಡೆ ಕೆಳಭಾಗದಲ್ಲಿ ಸತಿಪತಿಯರು ನಿಂತಿರುವುದನ್ನು ಕಿರಿದಾಗಿ ಚಿತ್ರಿಸಲಾಗಿದೆ. ಸತಿಯು ಬಲಗೈಯಲ್ಲಿ ನಿಂಬೆಹಣ್ಣು ಎಡಗೈಯಲ್ಲಿ ಕಮಂಡಲ ಹಿಡಿದಿರುವಳು. ಗೋಡಬಾಳಂಬಡದ ಸತಿ ಶಿಲ್ಪದಲ್ಲಿ ಸತಿ ಬದಿಗೆ ಗಂಡ ಕೈ ಮುಗಿದು ಕುಳಿರುವುದುನ್ನು ಕಿರುದಾಗಿ ಚಿತ್ರಿಸಲಾಗಿದೆ. ತಲೆಗೆ ಕೇದಿಗೆಯ ದಂಡೆಯನ್ನು ಧರಿಸಿ ದ್ದಾಳೆ.

ಗೊಡಗೊಂಡದ ಇನ್ನೊಂದು ಸತಿ ಶಿಲ್ಪದಲ್ಲಿ ಸತಿಯ ಬಲಗಡೆಗೆ ಬಲತೋಳಿನ ಕೆಳಗಳಡೆಗೆ ಸತಿ ಪತಿಯರು ಕೈಗಳಲ್ಲಿ ಬಿಲ್ಲನ್ನು ಹಿಡಿದು ಎದುರುಬದರು ನಿಂತಿರುವರು. ಸತಿಯ ಬಲಗೈಯಲ್ಲಿ ನಿಂಬೆಹಣ್ಣು ಮತ್ತು ಎಡಗೈಯಲ್ಲಿ ಕಮಂಡಲವಿದೆ.

ಕಮ್ಮೂರಿನ (ಬ್ಯಾಡಗಿ-ತಾ) ಮೂರು ಶಿಲ್ಪಗಳು ಸತಿ ರೂಪದ ಶಿಲ್ಪಗಳಿಗಿಂತ ಭಿನ್ನವಾಗಿದೆ. ಒಂದರಲ್ಲಿ ಮಲ್ಲರಸ ಗೌಡನ ತಾಯಿ ಸಿರಿಯಕ್ಕನ ವಿವರವಿದೆ. ಚಿತ್ರದಲ್ಲಿ ಸಿರಿಯಕ್ಕ ಕೈಮುಗಿದು ಕುಳಿತಿದ್ದಾಳೆ. ಮೇಲುಗಡೆ ಯತಿ ಶಿವಲಿಂಗವನ್ನು ಆರಾಧಿಸುತ್ತಾ ನಿಂತಿದ್ದಾನೆ. ಎಡಕ್ಕೆ ಕುಳಿತ ನಂದಿ ಇದೆ. ಮೇಲೆ ತೊರಣವಿದೆ. ಕಾಲ (ಕ್ರಿ.ಶ.೧೭ ಶತಮಾನ)

ಇನ್ನೊಂದು ರೀತಿಯ ಶಿಲ್ಪದಲ್ಲಿ ಮುತೂರ ಕಲ್ಲಗವುಡರು ಹೆಸಳಕಲ್ಲೋಜನ ಎಂದು ಬರೆಯಲಾಗಿದೆ. ಶಿಲ್ಪದಲ್ಲಿ ಗಡ್ಡಧಾರಿ ಗವುಡ ಕೈಮುಗಿದು ಕುಳಿತಿದ್ದು, ಎಡಕ್ಕೆ ಬಿಲ್ಲಿದೆ. ಬಲಕ್ಕೆ ಸೇವಕ ಛತ್ರಿಯನ್ನು ಹಿಡಿದಿರುವನು. ಹಂಸಬಾವಿ ಹತ್ತಿರದ ಒಂದು ಹಳ್ಳಿಯಲ್ಲಿ ಕೆಲವು ಸತಿ ಕಲ್ಲುಗಳಿವೆ. ಸತಿಯ ಬದಿಗೆ ಕೆಳಗಡೆ ಬೆಳೆದು ನಿಂತ ಜೋಳದ ಗಿಡವಿದೆ. ಕೈಗಳಲ್ಲಿ ಸತಿಯರು ನಿಂಬೆಹಣ್ಣು, ಕಮಂಡಲು ಹಿಡಿದಿರುವರು. ಜೋಳದ ಸಸಿ ಚಿಹ್ನೆ ಯಾವಕಾರಣಕ್ಕೆ ಚಿತ್ರಿಸಲಾಗಿದೆ ಎಂಬುದು ತಿಳಿಯಬೇಕಾಗಿದೆ.

ಆಳೆತ್ತರದ ಮನುಷ್ಯ ರೂಪದ ಸತಿ ಪತಿಯರುಳ್ಳ ಶಿಲ್ಪಗಳು

ವರಹ ಗ್ರಾಮದ ಹೊಲದಲ್ಲಿ ಆಳೆತ್ತರದ ಮನುಷ್ಯರೂಪದ ಸತಿಪತಿಯರುಳ್ಳ ಕೆಲವು ಶಿಲ್ಪಗಳಿವೆ. ಒಂದರಲ್ಲಿ ಸತಿಯು ನಿಂಬೆಹಣ್ಣನ್ನು ಮೇಲಕ್ಕೆ ಎತ್ತಿದ ತನ್ನ ಬಲಗೈಯಲ್ಲಿ ಹಿಡಿದು ನಿಂತಿದ್ದಾಳೆ. ಆಕೆಯ ಗಂಡ ಬಿಲ್ಲನ್ನು ಆಕೆಯ ಬದಿಗೆ ಹಿಡಿದು ನಿಂತಿರುವನು. ಮೇಲುಗಡೆ ಕಿರಿದಾಗಿ ಕುಳಿತ ದಂತಿಗಳನ್ನು ಯತಿ ಶಿವಲಿಂಗ ಮತ್ತು ನಂದಿಯುರನ್ನು ಚಿತ್ರಿಸಲಾಗಿದೆ. ಕಾಲ ಸುಮಾರು ಕ್ರಿ.ಶ.೧೬ನೇ ಶತಮಾನ. ಬದಿಯಲ್ಲಿರುವ ಈ ನಮೂನೆಯ ಈ ಕಾಲದ ಶಿಲ್ಪದಲ್ಲಿ ಸತಿಪತಿಯರ ತಲೆಗಳ ಮಧ್ಯಭಾಗದಲ್ಲಿ ಒಬ್ಬ ವ್ಯಕ್ತಿ ಮತ್ತು ತೂಗುವ ತೊಟ್ಟಿಲಿರುವುದು ವಿಶೇಷವಾಗಿದೆ.

ನಿಟ್ಟೂರಿನ (ಹಿರೇಕೆರೂರು ತಾ.) ಶಿಲ್ಪದಲ್ಲಿ ಆಳೆತ್ತರದ ನಿಂತ ದಂಪತಿಗಳಿದ್ದು ಪತಿಯು ಸತಿಯನ್ನು ತನ್ನ ಎಡಗೈಯಿಂದ ಆಕೆಯ ಭುಜದ ಮೇಲಿಟ್ಟು ಅಪ್ಪಿಕೊಂಡು, ನಿಂತಿದ್ದಾನೆ. ಇನ್ನೊಂದು ಕೈಯಲ್ಲಿ ಕತ್ತಿಯನ್ನು ಹಿಡಿದಿದ್ದಾನೆ. ಸತಿಯು ಬಲಗೈಯನ್ನು ಸೊಂಟದ ಮೇಲಿಟ್ಟಿದ್ದಾಳೆ. ಇಳಿಬಿಟ್ಟ ಎಡಗೈಯಲ್ಲಿ ಕಮಂಡಲವಿದೆ. ಸತಿಯು ತನ್ನ ಸೀರೆಗೆ ಹಾರದಂತೆ ಒಂದು ವಸ್ತ್ರವನ್ನು ಕಟ್ಟಿರುವುದು ಗಮನೀಯ. ಸತಿಯ ಎಡಗಡೆ ದೊಡ್ಡದಾದ ಬಿಲ್ಲಿದೆ. ಅಂದಲಗಿ (ಶಿಗ್ಗಾವ ತಾ) ಯ ಶಿಲ್ಪದಲ್ಲಿ ಸತಿಯು ಎಡಗೈಯಲ್ಲಿ ದುಂಡಾದ ಕನ್ನಡಿಯನ್ನು ಹಿಡಿದು ಮೇಲೆತ್ತಿ ನಿಂತಿರುವುದು ವಿಶೇಷ. ಬಲಗೈಯನ್ನು ಇಳಿಬಿಟ್ಟು ಅದರಲ್ಲಿ ನಿಂಬೆಹಣ್ಣನ್ನು ಹಿಡಿದಿರುವಳು. ಸೀರೆಯನ್ನು ಧರಿಸಿದ್ದಾಳೆ. ನಡುವೆ ಮೇಲಿನಿಂದ ಕೆಳಗಿನ ವರೆಗೆ ನೆರಿಗೆಗಳನ್ನು ಇಳಿಬಿಟ್ಟಿದ್ದಾಳೆ. ಸೊಂಟಕ್ಕೆ ಕಠಾರಿಯನ್ನು ಕಟ್ಟಿರುವುದು ಗಮನೀಯ. ತಲೆಯ ತುರುಬಿಗೆ ಕೇದಿಗೆಯ ಎಸಳು

ಗಳನ್ನು ಸಿಕ್ಕಿಸಿಕೊಂಡಿದ್ದು, ತುರುಬನ್ನು ತಲೆಯ ಬಲಕ್ಕೆ ಕಟ್ಟಿದ್ದಾಳೆ. ಆಕೆಯ ಬಲಗಡೆಗೆ ಎತ್ತರ ಪೀಠದ ಮೇಲೆ ವೀರನು ಕೈಮುಗಿದು ನಿಂತಿದ್ದಾನೆ. ಕಚ್ಚೆ ಮತ್ತು ಬಾಕನ್ನು ಸೊಂಟಕ್ಕೆ ಕಟ್ಟಿದ್ದಾನೆ. ಎಡತೋಳಿನಿಂದ ವಸ್ತ್ರ ಇಳಿಬಿದ್ದಿದೆ. ಆತನ ತುರುಬು ತಲೆಯ ಎಡಕ್ಕಿದೆ. ಅದರ ಎರಡನೆಯ ಹಂತದಲ್ಲಿ ಸಾಲಾಗಿ ಯತಿ, ಶಿವಲಿಂಗ, ಮತ್ತು ದಂಪತಿಗಳು ಕೈಮುಗಿದು ಕುಳಿತಿದ್ದಾರೆ. ಮೂರನೆಯ ಹಂತದಲ್ಲಿ ಕುಳಿತ ನಂದಿ, ಶಿವಲಿಂಗ ಮತ್ತು ನಿಂತ ಆಕಳು ಕರುವಿದೆ. ಈ ಶಿಲ್ಪಕ್ಕೆ ಶಾಸನವೂ ಇದೆ.

ದೇವಗಿರಿ ಶಿಲ್ಪದಲ್ಲಿ ಇಬ್ಬರು ಮನುಷ್ಯರೂಪದ ಆಳೆತ್ತರದ ಸತಿಯರು ತಮ್ಮ ಬಲಗೈಯನ್ನು ಮೇಲಕ್ಕೆ ಎತ್ತಿ ನಿಂತಿದ್ದಾರೆ. ಲಂಗದಂತೆ ಸೀರೆಯನ್ನು ಉಟ್ಟಿರುವರು. ಎರಡನೆಯ ಹಂತದಲ್ಲಿ ವಿಮಾನದಲ್ಲಿ ವೀರನನ್ನು ಕೂಡಿಸಿ ಅಪ್ಸರೆಯರಿಬ್ಬರು ಒಯ್ಯುವ ದೃಶ್ಯವಿದೆ. ಮೇಲಿನ ಸಾಲಿನಲ್ಲಿ ನಂದಿ ಯತಿ ಶಿವಲಿಂಗ ಮತ್ತು ವೀರ ತನ್ನಿಬ್ಬರು ಸತಿಯರ ಸಂಗಡ ಕುಳಿತಿರುವುದು ಗಮನೀಯ. ಗೊಡಿಚಿ ಕೊಂಡ (ಹಿರೆಕೆರೂರು ತಾ.) ಶಿಲ್ಪದಲ್ಲಿ ಪೀಠದ ಮೇಲೆ ವೀರ ಕೈಮುಗಿದು ಪದ್ಮಾಸನದಲ್ಲಿ ಕುಳಿತಿದ್ದಾನೆ. ಸತಿಯು ನಿಂತಿದ್ದಾಳೆ. ಬಲತೋಳನ್ನು ಮಡಚಿ ಕೈಯನ್ನು ಮೇಲೆತ್ತಿ ನಿಂಬೆಹಣ್ಣನ್ನು ಹಿಡಿದಿರುವಳು. ಇಳಿಬಿಟ್ಟ ಎಡಗೈಯಲ್ಲಿ ಕಮಂಡಲವಿದೆ. ಪತಿಯ ತಲೆಗೆ ಕುಂಚಲಿಯನ್ನು ಕಟ್ಟಿದ್ದರೆ, ಸತಿಯ ತಲೆಯ ಕೇಶದ ತುರುಬಿಗೆ ಕೇದಿಗೆಯ ಎಸಳನ್ನು ಚುಚ್ಚಿಕೊಂಡಿದ್ದಾಳೆ. ಧರಿಸಿದ ಅಡ್ಡವಾಗಿ ಅನೇಕ ಮಡಿಕೆಗಳು ಇವುಗಳ ನಡುವೆ ಮೇಲಿಂದ ಕೆಳಗೆ ಇಳಿಬಿಟ್ಟ ನೆರಿಗೆಗಳಿವೆ. ಕುಚಹಾರ, ಸರ, ಬಳೆ, ಕುಂಡಲ ಧರಿಸಿದ್ದಾಳೆ. (ಕ್ರಿ.ಶ.೧೬ನೇ ಶತಮಾನ,)

ಭೈರವನ ಪಾದ (ಹಿರೇಕೇರೂರು ತಾ.)ದಲ್ಲಿ ಮೂರು ಶಿಲ್ಪಗಳಿವೆ. ಒಂದರಲ್ಲಿ ಪತಿಯ ಸಂಗಡ ಇಬ್ಬರು ಸತಿಯರು ತಮ್ಮ ಬಲಗೈಯನ್ನು ಮೇಲೆತ್ತಿ ನಿಂತಿದ್ದಾರೆ. ವೀರ ಬಲಗೈಯಲ್ಲಿ ಕತ್ತಿಯನ್ನು ಹಿಡಿದು ಮೇಲೆತ್ತಿ ನಿಂತಿರುವನು. ಈ ಮೂವರು ತಮ್ಮ ಎಡಗಾಲನ್ನು ತಮ್ಮ ಎಡಕ್ಕೆ ಮುಖಮಾಡಿ ಇಟ್ಟಿರುವರು. ಮೇಲಿನ ಭಾಗದಲ್ಲಿ ಸೂರ್ಯ ಚಂದ್ರರ ಚಿಹ್ನೆಗಳಿವೆ. (ಕ್ರಿ.ಶ. ೧೬ನೇ ಶತಮಾನ,) ಅಲ್ಲಿನ ಇನ್ನೊಂದು ಶಿಲ್ಪದಲ್ಲಿ ಸತಿಪತಿಯರು ನಿಂತಿದ್ದಾರೆ, ಪತಿಯು ಎಡಕ್ಕೆ ನಿಂತು ಸತಿಯನ್ನು ಅಪ್ಪಿಕೊಂಡಿರುವನು, ಇಳಿ ಬಿಟ್ಟ ಎಡಗೈಯಲ್ಲಿ ಬಿಲ್ಲಿದೆ. ಸತಿಯ ಬಲಗೈಯಲ್ಲಿ ನಿಂಬೆಹಣ್ಣಿದೆ. ಅಲ್ಲಿಯ ಮತ್ತೊಂದು ಶಿಲ್ಪದಲ್ಲಿ ಸತಿಪತಿಯರು ನಿಂತಿದ್ದಾರೆ. ಸತಿ ಬಲಗೈಯಲ್ಲಿ ನಿಂಬೆ ಹಣ್ಣುಹಿಡಿದು ಮೇಲಕ್ಕೆತ್ತಿ ಹಿಡಿದಿದ್ದಾಳೆ. ಎಡಗೈಯನ್ನು ಕೆಳಗೆ ಇಳಿಬಿಟ್ಟಿದ್ದಾಳೆ. ಆಕೆಯ ಎಡದಲ್ಲಿರುವ ವೀರ ಬಲಗೈಯಲ್ಲಿ ಬಾಣವನ್ನೆತ್ತಿ ಹಿಡಿದಿದ್ದಾನೆ. ಎಡಗೈಯಲ್ಲಿ ಬಿಲ್ಲನ್ನು ಹಿಡಿದಿರುವನು. (ಕ್ರಿ.ಶ. ೧೬ನೇ ಶತಮಾನ.) ವರಾಹಿಯಲ್ಲೂ ದಂಪತಿಗಳು ನಿಂತ ಶಿಲ್ಪದಲ್ಲಿ ಸತಿಯು ತನ್ನ ಬಲಗೈಯನ್ನು ಎತ್ತಿಹಿಡಿದು ನಿಂಬೆಹಣ್ಣನ್ನು ಹಿಡಿದಿರುವಳು. ಇಳಿ ಬಿಟ್ಟ ಎಡಗೈಯಲ್ಲಿ ಕಮಂಡಲವಿದೆ. ಎಡಕ್ಕೆನಿಂತ ವೀರನು ಬಲಗೈಯಲ್ಲಿ ಬಾಣಹಿಡಿದು ತನ್ನ ಸೊಂಟದ ಮೇಲಿಟ್ಟಿರುವನು.

ಎಡಗೈಯಲ್ಲಿ ಬಿಲ್ಲನ್ನು ಹಿಡಿದು ಮುಂಚಾಚಿದ್ದಾನೆ. ವಸ್ತ್ರಾಭರಣಗಳನ್ನು ಧರಿಸಿರುವನು. ತನ್ನ ತುರುಬನ್ನು ತಲೆಯ ಎಡಕ್ಕೆ ಕಟ್ಟಿದ್ದಾನೆ. ಮೇಲುಗಡೆ ಕುಳಿತ ದಂಪತಿಗಳು ಯತಿ, ಶಿವಲಿಂಗ, ಪುನಃ ಕುಳಿತ ದಂಪತಿಗಳ ಚಿತ್ರವಿದೆ. ವರಾಹಿಯ ಮತ್ತೊಂದು ಈ ರೀತಿಯ ಶಿಲ್ಪದಲ್ಲಿ ಸತಿ ಮತ್ತು ಪತಿ ಇಬ್ಬರ ಹೊಟ್ಟೆಗಳ ಬದಿಯಲ್ಲಿ ರಂಧ್ರಗಳನ್ನು ಕೊರೆದಿದ್ದಾರೆ. ಸತಿಯ ಬಲತೋಳಿನ ಕೆಳಗಡೆ ಅರೆಗಂಭವಿದೆ. ಪತಿಯು ನೇರವಾಗಿ ಬಿಲ್ಲನ್ನು ಹಿಡಿದಿರುವನು. ಆತನ ಬಲತೋಳಿನ ಬದಿಗೆ ಒಬ್ಬ ವ್ಯಕ್ತಿ ನಿಂತಿರುವುದನ್ನು ಕಿರಿದಾಗಿ ಚಿತ್ರಿಸಿರುವುದು ಗಮನೀಯ. ವರಾಹಿಯ ಮತ್ತೊಂದು ಶಿಲ್ಪದಲ್ಲಿ ಸತಿ ಪತಿಯರು ನಿಂತಿದ್ದಾರೆ. ಸತಿ ತನ್ನ ಇಳಿ ಬಿಟ್ಟ ಎಡಗೈಯಲ್ಲಿ ಗಿಂಡಿಯನ್ನು ಹಿಡಿದಿದ್ದಾಳೆ. ಪತಿ ನೇರವಾಗಿ ಬಿಲ್ಲನ್ನು ಹಿಡಿದಿದ್ದಾನೆ. ಕೆಳಗಡೆ ಕುದುರೆ ಸವಾರ ಮತ್ತು ನಾಲ್ವರು ನಿಂತಿರುವುದನ್ನು ಕಾಣಬಹುದು. ಮೇಲ್ಗಡೆ ಕುಳಿತ ದಂಪತಿಗಳು ಶಿವಲಿಂಗ, ಯತಿ, ಕುಳಿತ ನಂದಿಯರ ಶಿಲ್ಪ ಚಿತ್ರಗಳಿವೆ. ಶಿವಲಿಂಗದ ಮೇಲೆ ಕೀರ್ತಿಮುಖವನ್ನು ಕಾಣಬಹುದು.

ಸುಣಕಲ್ಲು ಬಿದರಿಯ (ರಾಣೆಬೆನ್ನೂರು ತಾ.) ಶಿಲ್ಪದಲ್ಲಿ ಇಬ್ಬರು ಸತಿಯರ ಉಬ್ಬು ಶಿಲ್ಪಗಳಿವೆ. ತಲಾ ಒಬ್ಬರು ಬಲಗೈಯನ್ನು ಮೇಲಕ್ಕೆತ್ತಿದ್ದಾರೆ. ಒಬ್ಬಳು ನಿಂಬೆಹಣ್ಣನ್ನು ಇನ್ನೊಬ್ಬಳು ಕನ್ನಡಿಯನ್ನು ಹಿಡಿದಿರುವರು. ಬಲಗೈಗಳನ್ನು ಇಳಿಬಿಟ್ಟಿದ್ದಾರೆ. ಅವರ ಹೊಟ್ಟೆಗಳ ಮತ್ತು ತಲೆಯ ಬದಿಗಳಲ್ಲಿ ರಂಧ್ರಗಳಿವೆ. ಮೇಲ್ಗಡೆ ಒಂದು ಕಡೆ ಕೈ ಮುಗಿದು ದಂಪತಿಗಳು ಕುಳಿತಿದ್ದಾರೆ. ಎದುರಿಗೆ ಕುದುರೆಯನ್ನು ಸವಾರಿ ಮಾಡುವ ದಂಪತಿಗಳ ಚಿತ್ರಗಳಿವೆ. ಕದರಮಂಡಲಗಿ (ಬ್ಯಾಡಗಿ ತಾ.) ಶಿಲ್ಪದಲ್ಲಿ ಸತಿ ಮತ್ತು ಸವತಿಯರು ನಿಂತಿದ್ದಾರೆ. ಸವತಿ ಕೈಮುಗಿದು ನಿಂತಿದ್ದರೆ ಸತಿ ಬಲಗೈಯನ್ನು ಎತ್ತಿ ನಿಂಬೆಹಣ್ಣನ್ನು ಹಿಡಿದು ನಿಂತಿದ್ದಾಳೆ. ಸೀರೆಯನ್ನು ಸೊಂಟಕ್ಕೆ ಕಟ್ಟಿದ್ದಾರೆ. ಸತಿಯ ತಲೆಯ ಮೇಲ್ಗಡೆ ದಪ್ಪನಾಗಿ ಹೂವಿನ ಮೊಗ್ಗನ್ನು ಕೆತ್ತಲಾಗಿದೆ. ಕಾಲ ಸು. ಕ್ರಿ.ಶ. ೧೬ನೇ ಶತಮಾನ. ಅಲ್ಲಿಯ ಇನ್ನೊಂದು ಶಿಲ್ಪದಲ್ಲಿ ನಿಂತ ಸತಿ ಸಂಗಡ ಮಗುವಿನ ಕಿರುಚಿತ್ರವಿದೆ. ಚಿನ್ನಿಕಟ್ಟಿ ಗ್ರಾಮ, (ಬ್ಯಾಡಗಿ ತಾಲೂಕು) ದ ಶಿಲ್ಪದಲ್ಲಿ ಕೆಳಗಡೆ ಇಬ್ಬರು ಸತಿಯರು ತಮ್ಮ ಬಲತೋಳುಗೈಯನ್ನು ಎತ್ತಿ ಹಿಡಿದು ನಿಂತಿದ್ದಾರೆ. ಕುತೂಹಲವೆಂದರೆ ಮೇಲ್ಭಾಗದಲ್ಲಿ ಮೊದಲು ಬಲದಿಂದ ನಂದಿ, ಶಿವಲಿಂಗ, ಯತಿ, ವೀರನ ಬದಿಗಿಬ್ಬರು ಸತಿಯರು ಕೈಮುಗಿದು ಕುಳಿತಿರುವುದನ್ನು ಚಿತ್ರಿಸಲಾಗಿದೆ.

ವಿಶಿಷ್ಟ ಸ್ಮಾರಕ ಶಿಲ್ಪಗಳು

ವಿಜಯನಗರ ಕಾಲದ ಮೂರು ಜಾವಿದೇವ ಗುಂಡಬ್ರಹ್ಮಯ್ಯ (ಕುಮ್ಮೂರು) ತ್ರಿಶೂಲ (ಅಕ್ಕಿ ಆಲೂರು ಇತ್ಯಾದಿ ಸ್ಥಳ.) ಶಿವ ಶರಣರ (ಕೋಡ್ಲ) ಶಿಲ್ಪ ಮತ್ತು ಪಾದ ಮುದ್ರೆ ಕಲ್ಲುಗಳು ಮಹತ್ವವೆನಿಸಿವೆ. ಶಿವಶರಣರ ಶಿಲ್ಪದಲ್ಲಿ ಎರಡು ಹಂತಗಳ ಚಿತ್ರಗಳಿವೆ. ಮೊದಲನೆಯ ಹಂತದಲ್ಲಿ ನಿಂತ ನಂದಿಯ ಎದುರಿಗೆ ಶರಣ ಕೈಮುಗಿದು ನಿಂತಿದ್ದಾನೆ. ಎಡಗಡೆ ಇಷ್ಟಲಿಂಗ ಹಿಡಿದು ಕುಳಿತ ಶರಣರ ಪಕ್ಕದಲ್ಲಿ ಇಬ್ಬರು

ಕೈಮುಗಿದು ಕುಳಿತಿದ್ದಾರೆ. ತಲಾ ಒಬ್ಬರನ್ನು ಗೂಡುಗಳಲ್ಲಿ ಚಿತ್ರಿಸಲಾಗಿದೆ. ಮೇಲಿನ ಭಾಗದಲ್ಲಿ ಮೂರು ಗೂಡುಗಳಲ್ಲಿ ಕ್ರಮವಾಗಿ ಬ್ರಹ್ಮ, ನಂದಿ, ಸವಾರಿ ಮಾಡುವ ಶಿವ ಪಾರ್ವತಿ ವಿಷ್ಣು ದೇವತೆಗಳಿದ್ದಾರೆ. ತಲಾ ಒಬ್ಬರ ಗೂಡನ್ನು ತೋರಣವುಳ್ಳ ಆರೆಗಂಭಗಳಿಂದ ವಿಭಾಗಿಸಲಾಗಿದೆ. ಜೊತೆಗೆ ತೋರಣಗಳಿವೆ. ಈ ತೋರಣಗಳ ಶೈಲಿಯು ಸುಮಾರು ಕ್ರಿ.ಶ.೧೬ನೇ ಶತಮಾನದ ಕಲಾ ಲಕ್ಷಣಗಳನ್ನು ಹೋಲುತ್ತವೆ. ಈ ಮಾದರಿಯು ಶಿಲ್ಪಕಲಾ ಇತಿಹಾಸದಲ್ಲಿ ವಿರಳ. ಅಕ್ಕಿ ಆಲೂರಿನ ಶಿಲ್ಪದಲ್ಲಿ ಪ್ರಮುಖವಾಗಿ ಒಂದು ತ್ರಿಶೂಲದ ಚಿತ್ರವಿದೆ. ಮೇಲ್ಗಡೆ ಅಂಚಿನಲ್ಲಿ ಸೂರ್ಯ-ಚಂದ್ರರಿದ್ದಾರೆ. (ಕ್ರಿ.ಶ.೧೬ನೇ ಶತಮಾನ,)

ಹೊಟ್ಟೂರು ಮತ್ತೀಹಳ್ಳಿ ದೇವಿ ಹೊಸೂರು ಮುಂತಾದ ಸ್ಥಳಗಳಲ್ಲಿ ಪಾದಮುದ್ರೆ ಶಿಲ್ಪಗಳಿವೆ. ಒಂದು ಪೀಠದ ಮೇಲೆ ಒಂದು ಜೊತೆ ಅಥವಾ ಎರಡು ಜೊತೆ ಪಾದ ಕೊರೆಯಲಾಗಿದೆ. ಈ ಪಾದಗಳ ಸುತ್ತ ದಪ್ಪಹಗ್ಗವನ್ನು ಚಿತ್ರಿಸಿಲಾಗಿದೆ. ಕೆಲವೊಮ್ಮೆ ಪಾದಗಳನ್ನು ಪೀಠದಲ್ಲಿ ಕೆತ್ತಲಾಗಿದೆ.

ಕುದುರೆ ಸವಾರ ಶಿಲ್ಪಗಳು (ಕುಮಾರ ರಾಮ.)

ವರಾಹದ ಒಂದು ಶಿಲ್ಪದಲ್ಲಿ ಕುದುರೆ ಸವಾರನನ್ನುಳ್ಳ ಒಂದು ಶಿಲ್ಪವಿದೆ. ಕುದುರೆ ಸವಾರ ಒಂದು ಕೈಯಲ್ಲಿ ಕತ್ತಿ ಇನ್ನೊಂದು ಕೈಯಲ್ಲಿ ಕುದುರೆಯನ್ನು ಹಿಡಿದಿರುವನು, ಕುದುರೆಯು ಓಡುವ ಭಂಗಿಯಲ್ಲಿದೆ. ಕಾಲ ಸು.ಕ್ರಿ.ಶ.೧೫ನೇ ಶತಮಾನ, ಕುದುರೆ ಸವಾರ ಶಿಲ್ಪಗಳನ್ನು ಕುಮಾರರಾಮನದೆಂದು ಈಗಾಗಲೇ ಅನೇಕರು ಗುರುತಿಸಿದ್ದಾರೆ. ಅಂತಹ ಹೊಸ ಶಿಲ್ಪಗಳು ಹಾವೇರಿ ಮತ್ತು ಇನ್ನಿತರೆ ಜಿಲ್ಲೆಗಳಲ್ಲಿ ಕಾಣಸಿವೆ.ಅರಳಿ ಕಟ್ಟೆಯಲ್ಲಿ ಬಲಗಡೆ ಒಂದು ಕುದುರೆ ನಿಂತಿದೆ. ಎಡಕ್ಕೆ ವೀರನೊಬ್ಬ ಬಲಗೈಯಲ್ಲಿ ಕತ್ತಿ ಎಡಗೈಯಲ್ಲಿ ಬಾಕುಗಳನ್ನು ಎತ್ತಿ ಹಿಡಿದು ವೀರಾವೇಶದಿಂದಿ ನಿಂತಿರುವುದನ್ನು ಕಾಣಬಹುದು. ಇದನ್ನು ಆಯಾತಾಕಾರದ ಚಿತ್ರಿಸಲಾಗಿದೆ. ಆ ಸ್ಥಳದ ಇನ್ನೊಂದು ಶಿಲ್ಪದಲ್ಲಿ ಒಬ್ಬ ಹಿಂದಕ್ಕೆ ನೋಡುತ್ತಾ ಕುದುರೆ ಸವಾರಿ ಮಾಡುತ್ತಿದ್ದು ಜೊತೆಯಲ್ಲಿ ಪರಿವಾರವಿದೆ. ಕುದುರೆ ಬಾಲದ ಬಲಗಡೆ ಒಬ್ಬ ನಿಂತಿದ್ದಾನೆ. ಅದರ ಮುಖದ ಎದುರು ಇನ್ನೊಬ್ಬ ಬಿಲ್ಲನ್ನು ಹಿಡಿದು ನಿಂತಿರುವನು. ಕುದುರೆ ಬಲಬದಿಗೆ ಇನ್ನೊಬ್ಬನು ನಿಂತಿದ್ದಾನೆ. ಒಬ್ಬನು ಕುದುರೆ ಸವಾರನಿಗೆ ಛತ್ರಿಯನ್ನು ಹಿಡಿದು ನಿಂತಿರುವನು. ಬೋಗಾವಿಯ ಶಿಲ್ಪದಲ್ಲಿ ಒಂದು ಕೈಯಲ್ಲಿ ಚಾಟಿ ಎತ್ತಿ ಹಿಡಿದಿರುವನು. ಬದಿಗೆ ಕುದುರೆಯ ಸವಾರ, ಒಬ್ಬ ಸೇವಕ, ಛತ್ರಿಯನ್ನು ಹಿಡಿದು ನಿಂತಿದ್ದಾರೆ. ತಲೆಗೆ ತುರುಬಿದೆ. ಸಿಬಾರಗಟ್ಟಿಯ ಶಿಲ್ಪದಲ್ಲಿ ಕುದುರೆ ಸವಾರ ತನ್ನ ಬಲಗೈಯಲ್ಲಿ ಕೋಲನ್ನು ಹಿಡಿದಿರುವನು. ಬಸವಕಲ್ಯಾಣ (ಬೀದರ ಜಿಲ್ಲೆ) ದ ಶಿಲ್ಪದಲ್ಲಿ ಕುದುರೆ ಸವಾರ ಬಲಗೈಯಲ್ಲಿ ಕತ್ತಿಯನ್ನು ಹಿಡಿದು ಎಡಗೈಯಲ್ಲಿ ಕುದುರೆಯನ್ನು ಕಡಿವಾಣವನ್ನು ಎತ್ತಿ ಹಿಡಿದಿರುವನು. ವಸ್ತ್ರಾಭರಣ ಧಾರಿಯಾಗಿದ್ದಾನೆ. ತಲೆಗೆ ರುಮಾಲು ಕಟ್ಟಿರುವನು.

ಬಲಭುಜದ ಮೇಲೆ ಬಲಗಿವಿಯ ಬದಿಗೆ ಚಂದ್ರ ಚಿಹ್ನೆಯಲ್ಲಿ ಒಂದು ಕುಂಭವನ್ನು ತೋರಿಸಿರುವುದು ಅಪರೂಪದ ಸಂಕೇತವಾಗಿದೆ.

ಬಂಕಾಪುರ ಶಿಲ್ಪದಲ್ಲಿ ಕುದುರೆ ಸವಾರ ಈಟಿ ಹಿಡಿದಿರುವನು. ಕುದುರೆ ತನ್ನ ಮುಂದಿನ ಎರಡು ಕಾಲುಗಳನ್ನು ಮೇಲಕ್ಕೆತ್ತಿ ಓಡುವ ಭಂಗಿಯಲ್ಲಿದೆ.

ನಾಗರ ಹಳ್ಳಿ (ನವಲಗುಂದ ತಾಲೂಕು) ಶಿಲ್ಪದಲ್ಲಿ ಕುದುರೆ ಸವಾರ ಅಡ್ಡವಾಗಿ ಕೋಲನ್ನು ಎತ್ತಿ ಹಿಡಿದಿರುವನು. ಶಿವಮೊಗ್ಗ ವಸ್ತು ಸಂಗ್ರಹಾಲಯದ ಶಿಲ್ಪದಲ್ಲಿ ವೀರ ಬಲಗೈಯಲ್ಲಿ ಕತ್ತಿ ಹಿಡಿದು ಕುದುರೆಯನ್ನು ಓಡಿಸುತ್ತಿರುವನು. ಕುದುರೆಯ ಮುಂದಿನ ಎರಡು ಕಾಲುಗಳು ಮೇಲಕ್ಕೆತ್ತಿ ಓಡುವ ಭಂಗಿಯಲ್ಲಿ ಚಿತ್ರಿತವಾಗಿದ್ದು, ಆ ಕಾಲುಗಳ ಕೆಳಗಡೆಗೆ ಒಬ್ಬ ವೀರನು ಕತ್ತಿ ಹಿಡಿದು ಬಗ್ಗಿಕೊಂಡು ನಿಂತಿದ್ದಾನೆ. ಬಾಲದ ಹಿಂದೆ ಸೇವಕ ಛತ್ರಿಯನ್ನೆತ್ತಿ ಹಿಡಿದು ನಿಂತಿರುವನು. ಆದರೆ ಸಿಡೇನೂರಿನ ಶಿಲ್ಪ ದಲ್ಲಿ ಕುದುರೆ ಸವಾರನ ಎಡಬದಿಗೆ ಕುದುರೆಗಳು (ತನ್ನ ಪರಿವಾರದ ಸವಾರರು ಇರಬೇಕು.) ಓಡುತ್ತಿರುವುದನ್ನು ಚಿತ್ರಿಸಲಾಗಿದೆ. ಅದಕ್ಕೆ ಮುಂದೆ ಚಾಚಿದ ಪೀಠವಿದೆ. ಈ ಪೀಠದ ಕೆಳಗಡೆ ಕುದುರೆ ಸವಾರನ ಮಡದಿಯೊಬ್ಬಳು ಮಧ್ಯದಲ್ಲಿ ಕೈಹಿಡಿದು ಕುಳಿತಿದ್ದರೆ, ಆಕೆಯ ಬಲಕ್ಕೆ ಇಬ್ಬರು ವೀರರು ಬಿಲ್ಲುಗಳನ್ನು ಬಗಲಲ್ಲಿ ಹೊತ್ತು ಕೈಮುಗಿದು ನಿಂತಿದ್ದಾರೆ. ಆತನ ಎಡಗಡೆಗೆ ಇಬ್ಬರು ಸ್ತ್ರೀಯರು ಕೈಮುಗಿದು ನಿಂತಿರುವರು. ಕಢವಿಯ ಶಿಲ್ಪದಲ್ಲಿ (ಹಿರೆಕೆರೂರು ತಾ.) ಕುದುರೆ ಸವಾರನ ಬಾಲದ ಹಿಂದೆ ದಂಪತಿಗಳಿಬ್ಬರು ನಿಂತಿರುವರು. ಕದರಮಂಡಲಗಿಯ (ಬ್ಯಾಡಗಿ ತಾ.) ಕುದುರೆ ಸವಾರನು ಕುದುರೆಯ ಮುಂದೆ ಇಬ್ಬರು ಬಾಣ ಮತ್ತು ಬಿಲ್ಲುಗಳನ್ನು ಹಿಡಿದು ನಿಂತಿರುವರು. ಮೇಲ್ಗಡೆ ಕೈಮುಗಿದು ಕುಳಿತ ದಂಪತಿಗಳು, ಯತಿ ಯೊಬ್ಬ ಶಿವಲಿಂಗವನ್ನು ಆರಾಧಿಸುತ್ತಿಗುವುದನ್ನು ಕಾಣಬಹುದು. ಕನ್ನಡ ಸಂಶೋಧನಾ ಸಂಸ್ಥೆ ವಸ್ತು ಸಂಗ್ರಹಾಲಯ (ಕನ್ನಡ ವಿಶ್ವವಿದ್ಯಾಲಯ, ಹಂಪಿ) ದಲ್ಲಿಕುದುರೆಯ ಸವಾರನ ಬದಿಗೆ ಛತ್ರಿ ಹಿಡಿದು ಸೇವಕ ನಿಂತಿರುವನು. ಅದನ್ನು ಗೂಡಿನಲ್ಲಿ ಚಿತ್ರಿಸಲಾಗಿದೆ.

ತೋಳುಗೈಯುಳ್ಳ ಸ್ತಂಭ ಸತಿಕಲ್ಲುಗಳು

ತೋಳುಗೈ ಸ್ತಂಭ ಸತಿ ಕಲ್ಲುಗಳು ಈ ಭಾಗದಲ್ಲಿ ವೈವಿಧ್ಯಮಯವಾಗಿವೆ. ವರಾಹದ ಒಂದು ಸ್ಥಂಭ ಶಿಲ್ಪದಲ್ಲಿ ನೇರವಾಗಿ ನಿಲ್ಲಿಸಿದ ಒಂದು ಕಂಬಕ್ಕೆ ಕೇವಲ ಸತಿ ಹೋದವಳ ಬಲತೋಳು ಜೋಡಿಸಲಾಗಿದೆ. ಕೈಯಲ್ಲಿ ನಿಂಬೆಹಣ್ಣಿದೆ. ಕಂಭದ ತುದಿಯು ಕಳಸದ ಮಾದರಿಯಲ್ಲಿದೆ. ಅದರ ಮೇಲೆ ದಂಪತಿಗಳು ಕೈಮುಗಿದು ಕುಳಿತಿರುವರು. ಶಿಲ್ಪದ ಕೆತ್ತನೆ ಅಪೂರ್ಣವಾಗಿದೆ. (ಕ್ರಿ.ಶ. ೧೩ನೇ ಶತಮಾನ) ಈ ರೀತಿಯ ಚಿತ್ರವು ಸೂಡಂಭಿಯಲ್ಲಿದೆ. ಆದರೆ ವೀರನು ಕೈಮುಗಿದು ಕುಳಿತಿರುವನು. ಇದರ ಪಕ್ಕದಲ್ಲಿ ಕಂಬವಿದೆ. ಕಂಬದ ತುದಿಯ ಕಳಸ ಭಾಗದ ಮೇಲೆ ಅರಳಿದ ಹೂವಿನ ಆಲಂಕಾರವನ್ನು ನೀಡಲಾಗಿದೆ. ಮೇಲ್ಭಾಗದ ಮುಂಚಾಚಿನಲ್ಲಿ ಪಟ್ಟಿಕೆ ಇದೆ. ಅಲ್ಲಿರುವ ಚಿತ್ರಗಳು ಅಸ್ಪಷ್ಟವಾಗಿವೆ.

ಇದೇ ಗ್ರಾಮದ ಮತ್ತೊಂದು ಶಿಲ್ಪದಲ್ಲಿ ಕೆಳಗಡೆ ಕೈಕಂಬ ನಡುವೆ ಕ್ರಮವಾಗಿ ಹೋರಾಟ ಮತ್ತು ಕೈಮುಗಿದು ಕುಳಿತ ದಂಪತಿಗಳಿರುವರು. ದಂಪತಿಗಳು ಮೇಲ್ಭಾಗದಲ್ಲಿ ಯತಿ ಶಿವಲಿಂಗವನ್ನು ಆರಾಧಿಸುತ್ತಾ ನಿಂತಿರುವನು. ಸತಿಯ ಕೈಯಲ್ಲಿ ನಿಂಬೆ ಹಣ್ಣಿದೆ. ಕೈ ಮತ್ತು ತೋಳಲ್ಲಿ ಬಳೆಗಳಿವೆ. ಯುದ್ಧದ ದೃಶ್ಯದಲ್ಲಿ ವೀರನು ವೈರಿಗಳಿಬ್ಬರ ಜೊತೆ ಸೆಣಸಾಡಲು ಹೊರಟಿದ್ದಾನೆ. ವೈರಿಗಳು ಕೈಯಲ್ಲಿ ಬಿಲ್ಲುಗಳನ್ನು ಹಿಡಿದು ನಿಂತಿರುವರು. ಇದರಲ್ಲಿ ತೋಳಿನ ಕೆಳಗಡೆ ದಂಪತಿಗಳಿಬ್ಬರು ಕೈಮುಗಿದು ಕುಳಿತಿರುವುದನ್ನು ಮತ್ತು ಬಲಗಡೆಗೆ ವಿವರಗಳನ್ನು ಕಿರಿದಾಗಿ ಚಿತ್ರಿಸಿರುವುದು ವಿಶೇಷ ವೆನ್ನಿಸಿದೆ. ಚಿಕ್ಕೆರೂರಿನ ಶಿಲ್ಪದಲ್ಲಿ ತೋಳಿನ ಬುಡಬಾಗದಲ್ಲಿ ಇಬ್ಬರು ಎದುರು ಬದುರಾಗಿ ಹೋರಾಡುವ ದೃಶ್ಯವಿದೆ. ತೋಳಿನ ಮೇಲೆ ಮತ್ತು ಕೈಕಂಬಗಳ ನಡುವೆ ದಂಪತಿಗಳು ಕೈಮುಗಿದು ಕೊಂಡು ಕುಳಿತಿರುವರು, ಕಂಬದ ಕಳಸ ಭಾಗದಲ್ಲಿ ಕುಂಭ ಚಿತ್ರಣವಿದೆ; ಕೈಗೆ ಅನೇಕ ಬಳೆಗಳನ್ನು ಧರಿಸಿರುವುದು ವಿಶೇಷವೆನ್ನಿಸಬಹುದು. ಕೋಡ್ಲಾದಲ್ಲಿ ಎರಡು ಈ ರೀತಿಯ ಶಿಲ್ಪಗಳಲ್ಲಿ ತೋಳಿನ ಬುಡಭಾಗದಲ್ಲಿ ವೀರನು ಬಿಲ್ಲನ್ನು ಹಿಡಿದು ನಿಂತಿದ್ದಾನೆ. ಆದರೆ ಒಂದರ ಕೆಳಭಾಗ ಒಡೆದಿದೆ. ನಿಟ್ಟೂರಿನ ಶಿಲ್ಪದಲ್ಲಿ ದಂಪತಿಗಳನ್ನು ಕೈ ಮತ್ತು ಕಂಭದ ನಡುವೆ ಹಾಗೂ ಮೇಲ್ಗಡೆ ಯತಿ ಶಿವಲಿಂಗ ಬದಿಯಲ್ಲಿ ಕುಳಿತಿರುವುದುನ್ನು ಚಿತ್ರಿಸಲಾಗಿದೆ. ಹೆಡೆಯಾಲ (ರಾಣೇ ಬೆನ್ನೂರು ತಾ.) ಶಿಲ್ಪದಲ್ಲಿ ತೋಳಿನ ಬುಡದಲ್ಲಿ ಒಂದು ಸಾಲಿನಲ್ಲಿ ವೀರನು ಹೋರಾಡುವುದು ಇನ್ನೊಂದು ಸಾಲಿನಲ್ಲಿ ಕೈಮುಗಿದು ಕುಳಿತ ದಂಪತಿಗಳ ಚಿತ್ರಗಳಿವೆ. ಕಂಭದ ಕಳಸ ಭಾಗದ ಬದಿಗಳಲ್ಲಿ ರಂಧ್ರಗಳಿವೆ. ಸಿಡೇನೂರಿನ ಶಿಲ್ಪದಲ್ಲಿ ತೋಳಿನ ಕೆಳಗಡೆ ಗಿಂಡಿ ಇದೆ. ಕೈ ಬಲಗಡೆ ವೀರ ಕೈಮುಗಿದು ಕುಳಿತಿದ್ದಾನೆ. ಕೈತೋಳಿಗೆ ರುದ್ರಾಕ್ಷಿ ಕಟ್ಟಿದ್ದಾನೆ. ತಲೆಯ ಮೇಲೆ ಅರ್ಧವೃತ್ತಾಕಾರದ ಛತ್ರಿಇದೆ. ಮೇಲಿನ ಪಟ್ಟಿಕೆ ಒಡೆದಿದ್ದು ಅದರಲ್ಲಿ ಪ್ರಾಣಿಯೊಂದರ ಕಾಲಿದೆ. ಲಕೇರಿಯ ಶಿಲ್ಪದಲ್ಲಿ ಕೈಮೇಲೆ ಅರಳಿದ ಹೂವಿನ ಚಿಹ್ನೆ ಹಾಗೂ ಕಂಭದ ತುದಿಯ ಕಳಸದಲ್ಲಿ ಕುಂಭದ ಚಿತ್ರವಿದೆ. ವರಾಹದ ಒಂದು ಶಿಲ್ಪದಲ್ಲಿ ತೋಳಿನ ಬುಡದಲ್ಲಿ ಕುದುರೆ ಸವಾರ ಈಟಿಯನ್ನು ಹಿಡಿದುಕೊಂಡಿರುವುದನ್ನು ಮತ್ತು ತೋಳನ್ನು ಜೋಡಿಸಿ ಕಂಭ ಪಟ್ಟಿಕೆಯ ಮೇಲೆ ದಂಪತಿಗಳನ್ನು ಚಿತ್ರಿಸಿರುವುದು ವಿಶೇಷ. ವರಾಹಿಯ ಮತ್ತೊಂದು ಶಿಲ್ಪದಲ್ಲಿ ಎರಡು ಸಮಾನಾಂತರವಾಗಿರುವ ಕಂಭಗಳಿವೆ. ತಲಾ ಒಂದಕ್ಕೆ ಬಲತೋಳಗೈಯನ್ನು ಜೋಡಿಸ ಲಾಗಿದೆ. ಇವುಗಳ ನಡುವೆ ಕಿರಿದಾಗಿ ಸತಿ ಹೋದವರ ಪತಿಯನ್ನು ಚಿತ್ರಿಸಲಾಗಿದೆ. ಶಿಲ್ಪದ ಮೇಲಿನ ಭಾಗದಲ್ಲಿ ಸಾಲಾಗಿ ವೀರನ ಜೊತೆ ಇಬ್ಬರು ಸತಿಯರು, ಯತಿ, ಶಿವಲಿಂಗ ಆರಾಧಿಸುತ್ತಿರುವುದು ಮತ್ತು ಕುಳಿತ ನಂದಿ ಇದೆ. ಏಕ ಶಿಲೆಯಲ್ಲಿ ಪ್ರತ್ಯೇಕ ವಾಗಿ ಜೋಡುಕಂಬಗಳು ಬಲತೋಳನ್ನು ಹೊತ್ತಿರುವುದು ವಿಶೇಷವೆನ್ನಬಹುದು. (ಕ್ರಿ.ಶ. ೧೬ನೇ ಶತಮಾನ,) ವರಾಹಿಯ ಇನ್ನೊಂದು ಶಿಲ್ಪದಲ್ಲಿ ಜೋಡಿ ಕಂಬಗಳಿಗೆ ಬಲತೊಳುಗಳಿದ್ದು ಕೆಳಗಡೆ ಹೋರಾಟದ ದೃಶ್ಯವಿದೆ. ವೀರ ಬಾಣವನ್ನು ವೈರಿಗಳಿಗೆ ಪ್ರಯೋಗಿಸುತ್ತಿರುವನು. ಈ ಪಟ್ಟಿಕೆಯ ಮೇಲೆ ಮತ್ತು ಎಡಸ್ತಂಭದ ತೋಳಿನ

ಬುಡದಲ್ಲಿ ಒಂದರ ಮೇಲೆ ಒಂದರಂತೆ ಕುದುರೆಯ ಸವಾರ ಮತ್ತು ಮಡಿದ ವೀರ ವಿಮಾನದಲ್ಲಿ ಕೈಮುಗಿದು ಕುಳಿತಿರುವುದನ್ನು ಚಿತ್ರಿಸಿಲಾಗಿದೆ. ಇಲ್ಲಿಯೂ ಇಬ್ಬರು ಸತಿ ಹೋಗಿರುವುದು ತಿಳಿಯುತ್ತದೆ. ಅಲ್ಲಿ ಇನ್ನೊಂದು ಈ ರೀತಿಯ ಶಿಲ್ಪವಿದೆ.

ಉಪಸಂಹಾರ

ಆಳೆತ್ತರದ ಮಹಿಳೆ ರೂಪ ಮತ್ತು ತೋಳಗೈ ಶಿಲ್ಪಗಳಲ್ಲಿ ಸತಿಯು ಕೈಯಲ್ಲಿ ನಿಂಬೆಹಣ್ಣು, ಕನ್ನಡಿ, ಗಿಂಡಿ, ಕಮಂಡಲಗಳನ್ನು ಹಿಡಿದಿರುವಳು. ವಿರಳವಾಗಿ ಹೆಣ್ಣು ಕುಂಕುಮ ಧರಿಸಿದ್ದಾಳೆ. ನಿಂಬೆಹಣ್ಣು ಬಲಗೈಯಲ್ಲಿ ಗಿಂಡಿ, ಕಮಂಡಲ ಎಡಗೈಯಲ್ಲಿ ಸಾಮಾನ್ಯವಾಗಿ, ವಿರಳವಾಗಿ ಎಡಗೈಯಲ್ಲಿ ನಿಂಬೆ ಹಣ್ಣು ಮತ್ತು ಬಲಗೈಯಲ್ಲಿ ಕನ್ನಡಿ/ಹಿಡಿದಿರುವಳು. ಕಿವಿಗಳಲ್ಲಿ ಒಲೆಗಳನ್ನು, ಕೈಗಳಲ್ಲಿ ಮತ್ತು ತೋಳುಗಳಲ್ಲಿ ಬಳೆಗಳನ್ನು, ಕೊರಳಲ್ಲಿ ಸರಗಳನ್ನು ಕೆಲವೊಮ್ಮೆ ಹಾರಗಳನ್ನು, ಅಪರೂಪವಾಗಿ ಮಣಿಗಳುಳ್ಳ ಯಜ್ಞೋಪವೀತವನ್ನು ಕಾಲುಗಳಲ್ಲಿ ಕಡಗಗಳನ್ನು ಧರಿಸಿರುವಳು. ಇಬ್ಬರು ಸತಿ ಹೋದಲ್ಲಿ ಒಬ್ಬಳು ಅಪರೂಪವಾಗಿ ಬಲತೋಳಗೈಯನ್ನು ಎತ್ತಿರುವುದನ್ನು ತೋರಿಸಲಾಗಿದೆ. ಸತಿಯರು ಸಮಭಂಗದಲ್ಲಿ ನಿಂತಿರುವುದು ಸಾಮಾನ್ಯ. ಅಪರೂಪವಾಗಿ ಸತಿಯು ತ್ರಿಭಂಗಿಯಲ್ಲಿ ನಿಂತಿರುವ ಉದಾಹರಣೆಗಳಿವೆ. ಅಪರೂಪವಾಗಿ ಸತಿಯು ಸೊಂಟಕ್ಕೆ ಚಾಕು ಕಟ್ಟಿಕೊಂಡಿರುವಳು, ಸೀರೆಯನ್ನು ಸೊಂಟದಿಂದ ಪಾದದವರೆಗೆ ಉಡಲಾಗಿದೆ.

ಸೀರೆಯನ್ನು ಲಂಗದಂತೆ ಉಟ್ಟಿರುವುದು; ಮಧ್ಯದಲ್ಲಿ ಮೇಲಿಂದ ಕೆಳಗಿನವರೆಗೆ ಉದ್ದ ನೆರಿಗೆಗಳನ್ನು ಹಾಗೂ ಬದಿಗಳಲ್ಲಿ ಅಡ್ಡಪಟ್ಟಿಯಲ್ಲಿ ಮಡಿಕೆಗಳನ್ನು ಚಿತ್ರಿಸಲಾಗಿದೆ. ಅರ್ಧ ವೃತ್ತಾಕಾರದಲ್ಲಿ ತಲೆಯ ಕೇಶವನ್ನು ಅಲಂಕರಿಸಿ ಅದರ ತುರುಬನ್ನು ತಲೆಯ ಬಲಬದಿಗೆ ಕಟ್ಟಿರುವುದು ಸಾಮಾನ್ಯ. ಆದರೆ ಅರ್ಧ ವೃತ್ತಾಕಾರದ ದಂಡೆಯಂತೆ ಕೇದಿಗೆಗಳ ಸಾಲನ್ನು ಅಥವಾ ಕೆಲವೇ ಕೇದಿಗೆಗಳನ್ನು ಅಥವಾ ಕೇದಿಗೆಗಳ ಸಾಲಿನ ಮೇಲೆ ಸೇವಂತಿಗೆ ಹೂವಿನ ಸಾಲುಗಳನ್ನು ಹೊಂದಿರುವುದು ಕಾಣುತ್ತದೆ. ಈ ರೀತಿಯ ವಸ್ತ್ರಾಭರಣದ ಸಿಂಗಾರದಿಂದ ಸತಿ ಹೋದವಳ ಸಾಮಾಜಿಕ, ಆರ್ಥಿಕ, ಸ್ಥಿತ್ಯಂತರದ ಹಿನ್ನಲೆಯನ್ನು ತಕ್ಕಮಟ್ಟಿಗೆ ಅರ್ಥೈಸಲು ಸಹಾಯಕವಾಗುವುದು. ಅಂದಿನ ಸಮಾಜದ ಉಡುಗೆ ತೊಡುಗೆಯ ಸಿಂಗಾರವು ತಿಳಿದುಬರುವುದು.

ಎಡಕೈಯಲ್ಲಿ ದುಂಡಾದ ಕನ್ನಡಿ, ಕೊಡವನ್ನು ಎತ್ತಿ ಮೇಲೆ ಹಿಡಿದಂತೆ ಚಿತ್ರಿಸಿರುವುದು ಅಪರೂಪದ ನಿದರ್ಶನ. ಅದೇ ರೀತಿ ಆಯತಾಕಾರದ ಕನ್ನಡಿಯನ್ನು ಬಲಗಡೆಯ ಎತ್ತಿದ ತೋಳ ಕೈಯಲ್ಲಿ ಹಿಡಿದಿರುವ ಉದಾಹರಣೆ ವಿರಳವೆನಿಸಿದೆ.

ಮನುಷ್ಯ ಎತ್ತರದ ಸತಿ ಶಿಲ್ಪಗಳು ಸಾಮಾನ್ಯ. ಆಳೆತ್ತರದ ಸತಿಪತಿಯರುಳ್ಳ ಶಿಲ್ಪಗಳಲ್ಲಿ ವಿರಳವಾಗಿ ನಿಂತ ಸತಿಯ ಬದಿಗೆ ಪತಿ ಕುಳಿತಿರುವನು. ಕೆಲವೊಮ್ಮೆ ಪತಿ ಆಯುಧ ಬಿಲ್ಲನ್ನು ಹಿಡಿದು ಸತಿಯ ಎಡ, ಬಲ ಬದಿಯಲ್ಲಿ ನಿಂತಿರುವುದನ್ನು ಚಿತ್ರಿಸಲಾಗಿದೆ. ಇಬ್ಬರು ಸತಿ ಹೋದವರ ಮಧ್ಯದಲ್ಲಿ ಕತ್ತಿ ಹಿಡಿದು ನಿಂತ ಶಿಲ್ಪಗಳು

ವಿರಳವಾಗಿದೆ. ಕಲವೊಮ್ಮೆ ಕೆಳಭಾಗದಲ್ಲಿ ಯುದ್ಧ .ದೃಶ್ಯದ ಕಿರುಪಟ್ಟಿಕೆ ಇದೆ. ಮೇಲ್ಭಾಗದ ಪಟ್ಟಿಕೆಯಲ್ಲಿ ಸಾಮಾನ್ಯವಾಗಿ ಮಡಿದ ಸತಿ ಪತಿಯರು ಶಿಲ್ಪದ ಬಲ ಭಾಗದ ಅಂಚಿನಲ್ಲಿ ಚಿತ್ರಿಸಲಾಗಿದೆ. ವಿರಳವಾಗಿ ಅವರನ್ನು ಶಿಲ್ಪದ ಎಡ ಅಂಚಿನಲ್ಲಿ ತೋರಿಸಿದ್ದು ಕಾಣುವುದು. ಇಬ್ಬರು ಕೈಮುಗಿದು ಕುಳಿತಿರುವುದು ಸಾಮಾನ್ಯ. ಸತಿಪತಿಯರ ಎಡಗಡೆಗೆ ಯತಿ ಒಬ್ಬ ಶಿವ ಲಿಂಗದ ಬಲಕ್ಕೆ ನಿಂತು ಆರಾಧಿಸಲು ನಿಂತಿರುವುದು ಸಾಮಾನ್ಯ. ಕೆಲವೊಮ್ಮೆ ಆತನು ಶಿಲಿಂಗದ ಬಲಕ್ಕೆ ನಿಂತು ಆರಾಧಿಸುವ ಕೆಲವು ಉದಾಹಾರಣೆಗಳಿವೆ. ಶಿವಲಿಂಗದ ಎಡಕ್ಕೆ ಕುಳಿತ ನಂದಿ ಇದೆ. ಆಪರೂಪವಾಗಿ ಅದನ್ನು ಶಿವಲಿಂಗದ ಬಲಗಡೆ ಚಿತ್ರಿಸಿದ್ದನ್ನು ಕಾಣಬಹುದು. ನಂದಿಯು ಸಾಮಾನ್ಯ ವಾಗಿ ಅದರ ಮುಂದಿನ ಒಂದು ಎಡಗಾಲನ್ನು ಮುಂಚೆ ಚಾಚಿ ಕುಳಿತಿರುವುದನ್ನು ಕಾಣಬಹುದು. ಸತಿ ಹೋದವರು ಒಂದಕ್ಕಿಂತ ಹೆಚ್ಚಿದ್ದರೆ ಪತಿಯ ಸಂಗಡ ಸತಿಯರು ಕುಳಿರುವುದನ್ನು ಚಿತ್ರಿಸಲಾಗಿದೆ. ಅಪರೂಪವಾಗಿ ಕುಳಿತ ಸತಿಪತಿಯರನ್ನಲ್ಲದೆ ಅವರ ಎದುರಿಗೆ ಕುದುರೆ ಸವಾರಿ ಮಾಡುವ ದಂಪತಿಗಳ ಚಿತ್ರದ ಉದಾಹರಣೆಯೂ ಇದೆ.

ಏಕ ಸ್ತಂಭ ತೋಳುಗಳು ಸಾಮಾನ್ಯ. ಸ್ತಂಭ ತೋಳುಗೈ ಶಿಲ್ಪಗಳು ವಿರಳ ಹಾಗೂ ಅಂಥಹುಗಳ ಬುಡಭಾಗದಲ್ಲಿ ಯುದ್ಧ ದೃಶ್ಯದ ಉದಾಹರಣೆಗಳಿವೆ. ಸ್ತಂಭಗಳಲ್ಲಿ ಚೌಕ, ಆಯತಾಕಾರ, ಎರಡು ಪಟ್ಟಿಕೆಗಳು ಅದರ ಮೇಲಿನ ಭಾಗ ವಿರಳವಾಗಿ ಕಂಬಗಳ ಚಿತ್ರಗಳಿವೆ. ಸ್ತಂಭದ ಎಡಭಾಗಕ್ಕೆ ಬಲತೋಳಗೈಯನ್ನು ಜೋಡಿಸಲಾಗಿದೆ. ಕೆಲವೊಮ್ಮೆ ಸ್ತಂಭಗಳ ಬುಡಭಾಗದಲ್ಲಿ ಯುದ್ಧದ ದೃಶ್ಯವನ್ನು ಚಿತ್ರಿಸಲಾಗಿದೆ. ಸ್ತಂಭ ಬಲ ತೋಳುಗಳ ಶಿಲ್ಪಗಳಲ್ಲಿ ಕೈ ಮತ್ತು ಮೇಲ್ಭಾಗದ ಕಂಬದ ನಡುವೆ ದಂಪತಿಗಳು ಕೈಮುಗಿದು ಕುಳಿತಿರುವುದನ್ನು ಕಾಣಬಹುದು.

ಕುಮಾರರಾಮನ ಕುದುರೆ ಸವಾರ ಶಿಲ್ಪಗಳು ಈ ಭಾಗದಲ್ಲಿ ಹೆಚ್ಚು. ಅಪರೂಪವಾಗಿ ಈ ಶಿಲ್ಪದ ಕೆಳಹಂತದಲ್ಲಿ ಕೈಮುಗಿದು ಕುಳಿತ ರಾಣಿಯರ ಚಿತ್ರಗಳಿವೆ. ಮೇಲ್ಭಾಗದಲ್ಲಿ ದಂಪತಿಗಳು ಕೈಮುಗಿದು ಕುಳಿತಿರುವ ದೃಶ್ಯಗಳು ವಿರಳ.

ವೀರಗಲ್ಲು ಶಿಲ್ಪಗಳಲ್ಲಿ ಏಕವೀರನ ಮತ್ತು ವೀರನಿಗೆ ಸಾಮಾನ್ಯವಾಗಿ ಸೇವಕ ಛತ್ರಿ ಹಿಡಿದು ನಿಂತಿರುವ ಉದಾಹರಣೆಗಳಿವೆ. ಆತನೊಬ್ಬ ಅಧಿಕಾರಿಯೆಂದು ತಿಳಿಯು ವುದು. ಹೋರಾಟದೃಶ್ಯ ಸಾಮಾನ್ಯವಾಗಿ ಈ ಕಾಲಾಪೂರ್ವದಲ್ಲಿ (ವಿಜಯನಗರದ ಪೂರ್ವ) ಕೆಳಗಿನ ಹಂತದಲ್ಲಿ ಚಿತ್ರಿಸಲಾಗುತ್ತಿತ್ತು. ಈ ಕಾಲದಲ್ಲಿ ಎರಡನೆಯ ಹಂತದಲ್ಲಿ ಹೋರಾಟ ದೃಶ್ಯವುಳ್ಳ ಶಿಲ್ಪಗಳು ವಿರಳವಾಗಿ ಮೂರಕ್ಕಿಂತ ಅಧಿಕ ಹಂತಗಳಲ್ಲಿವೆ. ವಿಭಿನ್ನ ದೃಶ್ಯಗಳುಳ್ಳ ವೀರಗಲ್ಲುಗಳಿವೆ. ವೀರ ಸತಿಯರ ಶಿಲ್ಪಗಳಲ್ಲಿ ಕೆಳಹಂತದ ಹೋರಾಟದ ದೃಶ್ಯವನ್ನು ಮೇಲಿನ ಹಂತದಲ್ಲಿ ಸತಿಹೋದವರ ಬಲತೋಳುಗೈಗಳನ್ನು ಚಿತ್ರಿಸಲಾಗಿದೆ. ವಿರಳವಾಗಿ ಆಳೆತ್ತರದ ದಂಪತಿಗಳ ಚಿತ್ರಗಳು ಕಾಣುತ್ತವೆ. ಮಹಿಳೆಯರ ರೂಪದ ಸತಿ ಶಿಲ್ಪಗಳಲ್ಲಿ ಸಾಮಾನ್ಯವಾಗಿ ಆಕೆಯ

ಹೊಟ್ಟೆಯ ಮತ್ತು ಕುತ್ತಿಗೆ ಬದಿಗಳಲ್ಲಿ ರಂಧ್ರಗಳನ್ನು ಕೊರೆಯಲಾಗಿದೆ. ಅಲ್ಲಿ ಆಕೆಗೆ ಸೀರೆಯನ್ನು ಧರಿಸಲು ಅನುಕೂಲವಾಗಲೆಂದು ರಂಧ್ರಗಳನ್ನು ಕೊರೆಯಲಾಗಿದೆ.

ಕೆಲವು ಶಿಲ್ಪಗಳಲ್ಲಿ ಮಡಿದ ಹೆಂಗಸು ಕೇವಲ ಕೈಮುಗಿದು ಕುಳಿತುಕೊಂಡಿರುವುದನ್ನು ಮೇಲ್ಭಾಗದಲ್ಲಿ ಯತಿ, ಶಿವಲಿಂಗ, ನಂದಿ ಚಿತ್ರಗಳನ್ನು ಕಂಡರಿಸಲಾಗಿದೆ.

ಕೆಲವು ಶಿಲ್ಪಗಳಲ್ಲಿ ದಾಸರ ಚಿತ್ರಗಳಿವೆ. ಅವರು ಕೈಗಳಲ್ಲಿ ಹಿಡಿದ ತಾಳ ಅಥವಾ ತಂಬೂರಿ ಇತ್ಯಾದಿಗಳಿವೆ. ಒಂದರ ಸ್ಮಾರಕ ಶಿಲ್ಪದ ವ್ಯಕ್ತಿಯ ಬದಿಗಳಲ್ಲಿ ಚಿತ್ರಿಸಿದ ಶಂಖ, ಚಕ್ರ, ನಾಮಗಳಿಂದ ಇವರನ್ನು ದಾಸರೆಂದು ಗುರುತಿಸಲಾಗಿದೆ. ಅದೇ ರೀತಿ ನಂದಿಯ ಮುಂದೆ ಕೈಮುಗಿದು ನಿಂತು ಬದಿಯಲ್ಲಿ ಇಷ್ಟಲಿಂಗ ಎಂದು ಕುಳಿತವರನ್ನು ವೀರಶೈವನ ಸ್ಮಾರಕವೆಂದು ಭಾವಿಸಲಾಗಿದೆ. ಕುತೂಹಲವೆಂದರೆ ಕೆಲವು ಶಿಲ್ಪಗಳಲ್ಲಿ ಕೇವಲ ತ್ರಿಶೂಲ ಮತ್ತೆ ಕೆಲವುಗಳಲ್ಲಿ ಪಾದ ಮುದ್ರೆಗಳುಳ್ಳ ಉದಾಹರಣೆಗಳಿವೆ.

ವೀರಗಲ್ಲುಗಳಲ್ಲಿ ವೀರನನ್ನು ಪಲ್ಲಕ್ಕಿಯಲ್ಲಿ ಕೂರಿಸಿದ್ದನ್ನು ಕಾಣಬಹುದು. ಸಾಮಾನ್ಯವಾಗಿ ಮಡಿದ ವೀರನನ್ನು ವಿಮಾನದಲ್ಲಿ ಕೂಡಿಸಿದ ಉದಾಹರಣೆಗಳು ಸಾಮಾನ್ಯ. ಮಡಿದ ವೀರ ಆಶೀರ್ವಾದ ಮಾಡುತ್ತ ಕುಳಿತ ಉದಾಹರಣೆ ವಿಶೇಷ ಗಮನವನ್ನು ಸೆಳೆಯುತ್ತದೆ. ವೀರರು ಕೈಗಳಲ್ಲಿ ಹಿಡಿದ ಆಯುಧಗಳಲ್ಲಿ ಬಿಲ್ಲಿನಿಂದ ಬಾಣಪ್ರಯೋಗ ಮಾಡುವುದು, ಇನ್ನೊಂದು ಕೈಯಲ್ಲಿ ಗುರಾಣಿಯನ್ನು ಹಿಡಿದಿರುವುದು ಸಾಮಾನ್ಯ. ಗುರಾಣಿಗಳು ವೃತ್ತಾಕಾರವಾಗಿವೆ. ವಿರಳವಾಗಿ ಅವುಗಳ ಮೇಲೆ ಅರಳಿದ ಕಮಲ ಚಿತ್ರ ಒಳಗೊಂಡಿರುವ ಶಿಲ್ಪಗಳೂ ಇವೆ.


ವಿಜಯನಗರ ಕಾಲದ ಹಾವೇರಿ ಜಿಲ್ಲೆಯ ಸ್ಮಾರಕ ಶಿಲ್ಪಗಳ ಕಲೆಯ ಛಾಯಾಚಿತ್ರಗಳು.


































































೨೫. ವಿಜಯನಗರ ಸಾಮ್ರಾಜ್ಯದ ಕೊನೆಯ ರಾಜಧಾನಿಯಾಗಿ ಬೇಲೂರು

ಡಾ.ಜಿ.ಗೋಪಾಲಕೃಷ್ಣ

೧೬ನೇ ಶತಮಾನದಲ್ಲಿ ಗೋವಾದಲ್ಲಿ ಸೈಂಟ್ ಫ್ರಾನ್ಸಿಸ್ ಕ್ಸೇವಿಯರ ಅನ್ನುವ ಸಂತ ಆಗಿಹೊದ. ಹಳೆಯ ಗೋವೆಯ ಬೋಮ್ ಜೀಸಸ್ ಚರ್ಚಿನಲ್ಲಿ ಐದು ಶತಮಾನದ ನಂತರವೂ ಇಂದಿಗೂ ಕೆಡದ ಸುಸ್ಥಿತಿಯಲ್ಲಿರುವ ಆತನ ದೇಹವನ್ನು ಕಾಲ ಕಾಲಕ್ಕೆ ದರ್ಶನಕ್ಕೆ ಇಡುತ್ತಾರೆ. ೧೬ನೇ ಶತಮಾನದ ಮೂರನೆಯ ಪಾದದಲ್ಲಿ ಭಾರತಕ್ಕೆ ಪ್ರವಾಸಕ್ಕೆಂದು ಬಂದ ಅನಾಮಧೇಯ ಪೋಚುಗೀಸ್ ಪ್ರವಾಸಿ ಈ ಸಂತನ ಜೀವನಚರಿತ್ರೆಯನ್ನು ಬರೆದಿದ್ದಾನೆ. ಪ್ರಾಯಶಃ ತಾಳಿಕೋಟೆ[1] ಯುದ್ಧವನ್ನು ಕಣ್ಣಾರೆ ಕಂಡ ವಿದೇಶಿಗ ಇವನೊಬ್ಬನೇ ಇರಬೇಕು. ಸಂತನ ಜೀವನ ಚರಿತ್ರೆಯನ್ನು ಬರೆಯುತ್ತಾ ಈತನ ಬರಹವನ್ನು ಫಾದರ್ ಹೆರಾಸ್ ಉದ್ಧರಿಸುತ್ತಾರೆ.[2]" After narrating the battle of Rakkasa Tangadi, the unknown author of the life of St. Francis Xavier writes' Nevertheless, the king of this country was not so much knocked down. For, he is still very rich and powerful ; and he possesses a large and has quite a good number of elephants and cavalry and infantry'

ತಾಳೀಕೋಟೆಯುದ್ಧದೊಂದಿಗೆ ವಿಜಯನಗರ ಸಾಮ್ರಾಜ್ಯ ಮುಗಿಯಲಿಲ್ಲ, ಇನ್ನೊಂದು ಘಟ್ಟ ಆರಂಭವಾಯಿತಷ್ಟೆ. ಆದರೆ ಕರ್ಣಾಟಕದ ಇತಿಹಾಸಕಾರು ಈ ಘಟ್ಟದ ಬಗ್ಗೆ ಹೆಚ್ಚು ಗಮನ ಕೊಟ್ಟಿಲ್ಲ. ಉದಾಹರಣೆ ಎಂ.ವಿ. ಕೃಷ್ಣರಾವ್ ಅವರು ತಮ್ಮ ಗ್ರಂಥದಲ್ಲಿ ಬೇಲೂರು ರಾಜಧಾನಿಯಾದ ಬಗ್ಗೆ ಏನೂ ಬರೆಯುವುದಿಲ್ಲ. ಹಂಪೆ ಕನ್ನಡ ವಿಶ್ವವಿದ್ಯಾಲಯದ ಇತಿಹಾಸ ಸಂಪುಟ ಬೇಲೂರಿನ ಬಗ್ಗೆ ಒಂದೆರಡು ವಾಕ್ಯ ಬರೆದು ಮುಗಿಸುತ್ತದೆ.[3] 'ಕರ್ಣಾಟಕದ ಪರಂಪರೆ' ಯಲ್ಲಿಯೂ ಕೂಡಾ ಶ್ರೀ ಎಂ. ರಾಜಗೋಪಾಲರಾಯರು ಒಂದೆರಡು ವಾಕ್ಯಗಳನ್ನು ಬರೆದು ಮುಗಿಸುತ್ತಾರೆ.[4] ಭಾರತದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯದ ಬಗ್ಗೆ ಆಗಿರುವಷ್ಟು, ಆಗುತ್ತಿರುವಷ್ಟು ಸಂಶೋಧನೆ ಪ್ರಾಯಶಃ ಬೇರಾವ ಸಾಮ್ರಾಜ್ಯದ ಬಗ್ಗೆಯೂ ಆಗಿಲ್ಲವೆಂದು ಹೇಳಬಹುದು. ವಿಪುಲವಾದ ಆಕರಗಳಿದ್ದರೂ ಅಪಾರವಾದ ಆಸಕ್ತಿ ವಿದ್ಯಾರ್ಥಿವೃಂದ

ವಿದ್ದರೂ ತಾಳೀಕೋಟೆಯ ಯುದ್ಧದ ನಂತರದ ವಿಜಯನಗರದ ಬಗ್ಗೆ ನಡಯುತ್ತಿರುವ ಸಂಶೋಧನೆ ಅಲ್ಪವೆಂದೇ ಹೇಳಬೇಕು. ಕರ್ಣಾಟಕದಲ್ಲಿ ಪ್ರಾರಂಭವಾಗಿ ಕರ್ಣಾಟಕದ ಬೇಲೂರಿನ ಅಂತ್ಯವಾದ ಸಾಮ್ರಾಜ್ಯದ ಈ ಘಟ್ಟದ ಬಗ್ಗೆ ಕನ್ನಡಿಗರ ಈ ದಿವ್ಯ ನಿರ್ಲಕ್ಷ್ಯ ಖಂಡಿತ ಸಲ್ಲದು. ತಮ್ಮೆಲ್ಲರ ಗಮನವನ್ನು ಈ ದಿಸೆಗೆ ಸೆಳೆಯುವುದಕ್ಕೆ ಮುಂಚೆ ಶೀಘ್ರವಾಗಿ, ಸಂಕ್ಷಿಪ್ತವಾಗಿ ಯುದ್ಧೋತ್ತರ ಸಾಮ್ರಾಟರುಗಳ ಬಗ್ಗೆ, ಯುದ್ಧೋತ್ತರ ರಾಜಧಾನಿಗಳ ಬಗ್ಗೆ ನಮ್ಮ ಜ್ಞಾನವನ್ನು ನವೀಕರಸಬೇಕಾದ್ದು ಅಗತ್ಯ. ಹಾಗೆಯೇ ಬೇಲೂರಿನ ಸಂಕ್ಷಿಪ್ತ ಇತಿಹಾಸ ಕೂಡ.

ಯುದ್ಧದ ನಂತರದ ಪರಿಸ್ಥಿತಿಯನ್ನು ಪರಿಶೀಲಿಸಿದರೆ ಕ್ರಿ.ಶ.೧೫೬೫ರ ಯುದ್ಧದಲ್ಲಿ ರಾಮರಾಯನ ಕೊಲೆಯಾದ ಕೂಡಲೆ ತಿರುಮಲನು ರಾಜಧಾನಿಗೆ ಧಾವಿಸಿ ರಾಣೀವಾಸದವರನ್ನೂ ೧೫೦ ಆನೆ ಹೊರೆಯಷ್ಟು ಸಂಪತ್ತನ್ನೂ ಸಾಗಿಸಿಕೊಂಡು ಚಂದ್ರಗಿರಿಯನ್ನು ತಲುಪಿಸಿದನು.[5] ಸುಮಾರು ಕ್ರಿ.ಶ.೧೫೭೦ರವರೆಗೂ ರಾಜಧಾನಿಗೆ ವಾಪಸ್ಸು ಬರುವ ಪ್ರಯತ್ನಗಳೇನೋ ನಡೆದವು. ಸದಾಶಿವರಾಯನ ಪಕ್ಷದವರು, ತಿರುಮಲನ ಪಕ್ಷದವರು ಮತ್ತು ರಾಮರಾಯನ ಮಕ್ಕಳ ನಡುವೆ ಅವಿರತವಾಗಿ ಘರ್ಷಣೆಗಳು ನಡೆಯುತ್ತಲೇ ಇದ್ದವು. ಬಹಮನಿ ಸೈನ್ಯಗಳು ಮತ್ತೆರೆಡು ಬಾರಿ ರಾಜಧಾನಿಯನ್ನು ಆಕ್ರಮಿಸಿದವು. ಇದಕ್ಕೆಲ್ಲ ದಾಖಲೆಯಾಗಿ ಇಟಲಿ ಪ್ರವಾಸಿ ಸೀಜರ್ ಫ್ರೆಡರಿಕನ ವರದಿಗಳಿವೆ.[6] ಹಂಪೆಗೆ ಹಿಂದಿರುಗುವುದು ಅಸಾಧ್ಯವೆನಿಸಿದಾಗ ತಿರುಮಲನು ಪೆನುಕೊಂಡೆಯಲ್ಲಿ ಕ್ರಿ.ಶ.೧೫೭೦ ರಲ್ಲಿ ಪಟ್ಟಾಭಿಷಿಕ್ತನಾದನು. ಹೀಗೆ ಪೆನುಕೊಂಡೆಯು ಮೊದಲನೆಯ ವಿಜಯನಗರದ ಯುದ್ಧೋತ್ತರ ರಾಜಧಾನಿಯಾಯಿತು. ತಿರುಮಲ, ಆವನ ಮಗ ಒಂದನೆಯ ಶ್ರೀರಂಗ ಮತ್ತು ಒಂದನೆಯ ವೆಂಕಟಪತಿ ಪೆನುಗೊಂಡ ಯಿಂದಲೇ ರಾಜ್ಯವಾಳಿದರು. ಬಿಜಾಪುರದವರ ಸತತ ದಾಳಿಗಳಿಂದಾಗಿ ಒಂದನೆಯ ವೆಂಕಟಪತಿಯು ಕ್ರಿ.ಶ.೧೫೯೨ರಲ್ಲಿ ರಾಜಧಾನಿಯನ್ನು ಚಂದ್ರಗಿರಿಗೆ ಬದಲಾಯಿಸಿದನು. ನಂತರ ರಾಜ್ಯವಾಳಿದ ಎರಡನೇ ಶ್ರೀರಂಗ, ರಾಮದೇವರಾಯ ಮತ್ತು ಮೂರನೆಯ ವೆಂಕಟಪತಿ ಕೆಲಕಾಲ ವೆಲ್ಲೂರಿನಿಂದಲೂ ರಾಜ್ಯವಾಳಿದಂತೆ ಊಹಿಸಬಹುದು. ಈ ಕಾಲಘಟ್ಟದಲ್ಲಿ ಬಿಜಾಪುರ, ಗೋಲ್ಕೊಂಡದವರ ಸತತ ದಾಳಿಗಳಿಂದ ರಕ್ಷಣಾ ಉದ್ದೇಶಗಳಿಗೋಸ್ಕರ ರಾಜನು ವಾಸಸ್ಥಾನವನ್ನು ಪದೇಪದೇ ಬದಲಾಯಿಸುತ್ತಿದ್ದುರಿಂದ ರಾಜಧಾನಿಯ ಬಗ್ಗೆ ಖಚಿತವಾಗಿ ಹೇಳಲಾಗದು. ಆದರೂ ಮೂರನೇ ಶ್ರೀರಂಗನ ಪಟ್ಟಾಭಿಷೇಕವು ಕ್ರಿ.ಶ.೧೬೪೨ ರಲ್ಲಿ ವೆಲ್ಲೂರಿನಲ್ಲಿ ನಡೆದದ್ದರಿಂದ ಆ ಸುಮಾರಿಗೆ ವೆಲ್ಲೂರು ಸಾಮ್ರಾಜ್ಯದ ರಾಜಧಾನಿಯಾಗಿತ್ತು ಎಂದು ಹೇಳಬಹುದು.

ಮೂರನೆಯ ಶ್ರೀರಂಗನ ಬಗ್ಗೆ ಇಲ್ಲಿ ಎರಡು ಮಾತು ಹೇಳುವು ಉಚಿತ. ಇತರ ಎಲ್ಲ ಯುದ್ಧೋತ್ತರ ಸಾಮ್ರಾಟರೂ ಸಾಮ್ರಾಜ್ಯವಿರಲಿ, ಅದರ ಬಾಲವನ್ನು ಉಳಿಸಿಕೊಳ್ಳಲೂ ಮನಸ್ಸಿಲ್ಲದ ಪ್ರಯತ್ನ ಮಾಡಿದಾಗ ಶ್ರೀರಂಗ ತನ್ನೆಲ್ಲ ಶಕ್ತಿ, ಮುತ್ಸದ್ದಿತನ, ರಾಜಕೀಯ ಚಾತುರ್ಯ ಮತ್ತು ಸಂದರ್ಭೋಚಿತ ಕ್ರಮಗಳನ್ನು ಉಪಯೋಗಿಸಿ

ಕೊಂಡು ತನ್ನ ರಾಜ್ಯ ಹಿಂದಿನ ಸ್ಥಿತಿ, ವೈಶಾಲ್ಯ ಮತ್ತು ವೈಭವಕ್ಕೆ ಮರಳಬೇಕೆಂದು ಅತಿ ಪ್ರಮಾಣಿಕ ಪ್ರಯತ್ನವನ್ನು ಮಾಡಿದ ಮಹತ್ವಕಾಂಕ್ಷಿ ಸಾಮ್ರಾಟ. ಅವನ ಪ್ರಯತ್ನ ಸಫಲವಾಗಲಿಲ್ಲವೆಂಬ ಮಾತು ಬೇರೆ.

ಮೂರನೇ ಶ್ರೀರಂಗನು ಗೋಪಾಲರಾಜನ ದತ್ತುಪುತ್ರ. ರಾಮರಾಜ ರಂಗರಾಜನ ಮೊಮ್ಮಗ. ಪಟ್ಟಕ್ಕೆ ಬಂದ ಎರಡು ವರ್ಷಗಳಲ್ಲೆ ಬಿಜಾಪುರಿಗಳು ಮತ್ತು ಗೋಲ್ಕೊಂಡಿಗಳು ಒಟ್ಟಾಗಿ ವೆಲ್ಲೂರನ್ನು ಆಕ್ರಮಿಸಿ ಮೂರನೆಯ ಶ್ರೀರಂಗನನ್ನು ಸಂಪೂರ್ಣವಾಗಿ ಸೋಲಿಸಿದಾಗ ಯುದ್ಧದ ಖರ್ಚು, ಕಾಣಿಕೆ ಇತ್ಯಾದಿಗಳನ್ನು ಕೊಡಬೇಕಾಯಿತು.

ಕ್ರಿ.ಶ.೧೬೪೬ ರ ಗೋಲ್ಕೊಂಡದ ಆಕ್ರಮಣದ ನಂತರ ಮೂರನೆಯ ಶ್ರೀರಂಗ ಸ್ವಲ್ಪಕಾಲ ವೆಲ್ಲೂರನ್ನು ಬಿಡಬೇಕಾಯಿತಾದರೂ ಮೈಸೂರಿನ ಕಂಠೀರವ ನರಸರಾಜ ಒಡೆಯನ ಸಹಾಯದಿಂದ ರಾಜಧಾನಿಯನ್ನು ಮರಳಿ ಪಡೆದ. ಮೂರನೆಯ ಶ್ರೀರಂಗ ಅಷ್ಟಕ್ಕೆ ಸುಮ್ಮನಾಗಿದ್ದಿದ್ದರೆ ವೆಲ್ಲೂರೇ ಸಾಮ್ರಾಜ್ರದ ಕೊನೆಯ ರಾಜಧಾನಿಯಾಗುತ್ತಿತ್ತೇನೋ. ಆದರೆ ಗೋಲ್ಕೊಂಡದ ಸೈನ್ಯಾಧಿಪತಿ ಮೀರ್ ಜುಮ್ಲಾನ ಜೊತೆ ಮೂರನೆಯ ಶ್ರೀರಂಗನ ಒಪ್ಪಂದ ಬಯಲಾದಾಗ ಬಿಜಾಪುರದ ಮಹಮದ್ ಆದಿಲ್ ಶಾ ಕೆರಳಿ ವೆಲ್ಲೂರನ್ನು ಮುತ್ತಿ ಕ್ರಿ.ಶ.೧೬೫೪ರಲ್ಲಿ ವಶ ಮಾಡಿಕೊಂಡ. ಆದರೂ ಮೂರನೆಯ ಶ್ರೀರಂಗನ ಮೇಲೆ ಕರುಣೆ ತೋರಿಸಿ ಅವನಿಗೆ ವಾಸಕ್ಕೆಂದು ಚಂದ್ರಗಿರಿ ಪಟ್ಟಣವನ್ನು ಸುತ್ತಲಿನ ಪ್ರದೇಶವನ್ನು ಬಿಟ್ಟುಕೊಟ್ಟ ನಂತರ ರಾಜಧಾನಿ ಪುನಃ ಚಂದ್ರಗಿರಿಗೆ ಬದಲಾಯಿತು. ಕ್ರಿ.ಶ.೧೬೫೬ರಲ್ಲಿ[7] ಮೂರನೆಯ ಶ್ರೀರಂಗನು ಚಂದ್ರಗಿರಿಯಲ್ಲಿ ಆಳುತ್ತಿದ್ದುದನ್ನೂ ತನ್ನದೇ ಸೈನ್ಯದಿಂದ ತಿರುಪತಿ ಸುತ್ತಮುತ್ತಲಿನ ಪ್ರದೇಶವನ್ನು ಗೆದ್ದುದನ್ನೂ ಬಟಾವಿಯದಿಂದ ಬರೆದ ಡಚ್‌ಮಿಷನರಿ ಪತ್ರ ದಾಖಲಿಸುತ್ತದೆ.[8] ಇದಕ್ಕೆ ಆಧಾರವಾದ ಮೂರನೆಯ ಶ್ರೀರಂಗನ ಹೆಸರಿನಲ್ಲಿ ಹೊರಡಿಸಲಾದ ಕ್ರಿ.ಶ. ೧೬೫೬ರ ತಿರುಪತಿ ಶಾಸನವು ಇದೆ.[9]

ಕ್ರಿ.ಶ.೧೬೫೭ರ ಸುಮಾರಿಗೆ ವಿಜಯನಗರ ಸಾಮ್ರಾಜ್ಯವನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡ ಬಿಜಾಪುರಿ ಗೋಲ್ಕಂಡಿಗಳು ಸಾಮ್ರಾಜ್ಯದ ಭೂಭಾಗಗಳನ್ನು ಹಂಚಿಕೊಂಡಾಗ ದುರದೃಷ್ಟವಶಾತ್ ಮೂರನೆಯ ಶ್ರೀರಂಗನಿದ್ದ ಚಂದ್ರಗಿರಿಯ ಭಾಗ ಗೋಲ್ಕೊಂಡದ ಪಾಲಿಗೆ ಹೋಯಿತು. ವಿಜಯನಗರ ಅರಸ ತನಗೆ ಸೇರಿದ ಭೂಮಿಯಲ್ಲಿ ಎಲ್ಲೂ ಆಶ್ರಿತನಾಗಿಯೂ ಇರಕೂಡದೆಂದು ಗೋಲ್ಕೊಂಡಿಗಳು ಕ್ರಿ.ಶ.೧೬೫೮ರಲ್ಲಿ ಚಂದ್ರಗಿರಿಯನ್ನು ಮುತ್ತಿದರು. ಯುದ್ಧಕ್ಕೆ ಸಿದ್ಧನಾಗಿದ್ದರೂ ಮೂರನೆಯ ಶ್ರೀರಂಗನು ತನ್ನ ಸೇನಾಧಿಕಾರಿಗಳಾದ ಉದಯಗಿರಿ ಕೊನೇರಿ ಚೆಟ್ಟಿ ಮತ್ತು ಚಿನ್ನ ಚೆಟ್ಟಿ ದ್ರೊಹ ಬಗೆದಾಗ ತುಬಾಕಿ ಕೃಷ್ಣಪ್ಪನಿಂದ ಸೋತು ಚಂದ್ರಗಿರಿಯನ್ನು ಬಿಡಬೇಕಾಯಿತು.[10] ತನ್ನ ಸಾಮಂತರಾದ ಜಿಂಜಿ, ತಂಜಾವೂರು, ಮದುರೆಯ ನಾಯಕರು ಯಾರೂ ತನಗೆ ಆಶ್ರಯ ನೀಡದಿದ್ದಾಗ ಮೂರನೇ ಶ್ರೀರಂಗ ನಿಜವಾಗಿಯೂ ನಿರಾಶ್ರಿತನಾದ. ಈ ಸಂಗತಿಯನ್ನು ಫ್ರೆಂಚ್ ಪ್ರವಾಸಿ ಥಾವೆನೋ, ಫಾದರ್ ಪ್ರ್ರಾಯೆನ್ಸಾ, ಶಿವತತ್ವ

ರತ್ನಾಕರ ಇವು ಮೂರೂ ಆಕರಗಳು ಸಮರ್ಥಿಸುತ್ತವೆ. ನಿರ್ವಾಹವಿಲ್ಲದೆ ಮೂರನೇ ಶ್ರೀರಂಗ ಕ್ರಿ.ಶ.೧೬೫೮ರಲ್ಲಿ ಶ್ರೀರಂಗಪಟ್ಟಣದಲ್ಲಿ ಕಂಠೀರವ ನರಸರಾಜನ ಆಶ್ರಯದಲ್ಲಿ ಕೆಲವು ಕಾಲ ಕಳೆದ.

ಇಂಥ ಪರಿಸ್ಥಿತಿಯಲ್ಲಿ ಕೆಳದಿ ಶಿವಪ್ಪನಾಯಕನ ಪ್ರವೇಶವಾಯಿತು. ಕ್ರಿ.ಶ.೧೬೫೯ರಲ್ಲಿ ಬಿಜಾಪುರದ ಮಹಮದ್ ಆದಿಲ್‌ಶಾ ಸತ್ತಾಗ ಆಡಳಿತ ಶಿಥಿಲವಾಗಿ ಆದುವರೆವಿಗೂ ಬಿಜಾಪುರಕ್ಕೆ ಸೇರಿದ್ದ ಬೇಲೂರು ಸಂಸ್ಥಾನವನ್ನು ಗೆಲ್ಲಲು ಶಿವಪ್ಪನಾಯಕನಿಗೆ ಅವಕಾಶವಾಯಿತು. ಕೆಳದಿನಾಯಕನು ಬೇಲೂರನ್ನು ವೆಂಕಟಾದ್ರಿ ನಾಯಕನಿಂದ ಗೆದ್ದು ಮೂರನೇ ಶ್ರೀರಂಗನಿಗೆ ಒಪ್ಪಿಸಿ ತನ್ನ ಸ್ವಾಮಿಭಕ್ತಿಯನ್ನು ಪ್ರದರ್ಶಿಸಿದನು. ತನ್ನ ವೈರಿ ಮೈಸೂರಿಗೂ ತನಗೂ ಮಧ್ಯೆ ಸಾಮ್ರಾಟನಿರುವುದು ಕೆಳದಿಗೆ ಅನುಕೂಲವೂ ಆಗಿತ್ತು. ಈ ಘಟನೆಯನ್ನು ಕೆಳದಿ ನೃಪವಿಜಯವು "ಶಿವಪ್ಪನಾಯ ಕಂದಲ್ಲಿವಿಕಾರಿ ಸಂವತ್ಸವರ ರಾಯಸಂಸ್ಥಾನವನುದ್ಧರಿಸಲ್ವೇಳ್ಕೆಂದು ಮನಂದಂದು ಸೋದೆ, ಬಿಳಿಗೆ, ತರೀಕೆರೆ, ಹರಪುರ ಮುಂತಾದ ದೊರೆಗಳ ಸೈನ್ಯ ಸ್ವಸೈನ್ಯಂವೆರಸು ತೆರಳ್ದು ಬೇಲೂರಂ ತೆಗೆದುಕೊಂಡು ಶ್ರೀರಂಗರಾಯರಿಗಿತ್ತು ರಾಯಸಂಸ್ಥಾನಮಂ ನೆಲೆಗೊಳಿಸಿ" ಎಂದು ದಾಖಲಿಸುತ್ತದೆ.[11]

ಹೀಗೆ ಮೂರನೇ ಶ್ರೀರಂಗರಾಯನ ಬೇಲೂರು ವಾಸ್ತವ್ಯ ಪ್ರಾರಂಭವಾದದ್ದು ಕ್ರಿ.ಶ.೧೬೫೯ರಲ್ಲಿ. ಬೇಲೂರಿನಿಂದ ಹೊರಡಿಸಲಾದ ಮೂರನೇ ಶ್ರೀರಂಗನ ೨೩ ಶಾಸನಗಳು ಕ್ರಿ.ಶ.೧೬೫೯ನೇ ಏಪ್ರಿಲ್‌೨೬ ರಿಂದ ಹಿಡಿದು ಕ್ರಿ.ಶ.೧೬೬೩ ಮಾರ್ಚ್ ೭ ರವರೆವಿಗೂ ಹರಡಿವೆ. ಇವೆಲ್ಲವೂ ದೇವಸ್ಥಾನಗಳಿಗೆ, ಮಠಗಳಿಗೆ, ಯತಿಗಳಿಗೆ ನೀಡಿದ ದಾನಶಾಸನಗಳು. ಶಿಲಾ ಮತ್ತು ತಾಮ್ರ ಶಾಸನಗಳೆರಡೂ ಇವೆ. ಹೆಚ್ಚು ಸಂಖ್ಯೆ ಬೇಲೂರು ಪಟ್ಟಣದಿಂದಲೇ ನೀಡಿದಂಥವು; ಒಂದು ಅಪವಾದ ಬಿಟ್ಟರೆ ಕೆರೆ, ಕಾಲುವೆ ಇತ್ಯಾದಿಗಳನ್ನು ಕಟ್ಟಿಸಿದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಶಾಸನಗಳು ಏನೂ ಹೇಳುವುದಿಲ್ಲ. ಪ್ರತಿ ಶಾಸನದಲ್ಲೂ ಶ್ರೀರಾಮ ಎಂಬ ವೊಪ್ಪವಿದೆ. ಬಹುತೇಕ ಶಾನಗಳಲ್ಲಿ ತಾನು ಕೊಟ್ಟ ದಾನ ವೆಂಕಟೇಶ ಪ್ರೀತಿಯಾಗಿ ಎಂದು ಹೇಳಿಕೊಂಡಿದ್ದಾನೆ. ಮೂರನೇ ಶ್ರೀರಂಗ ಬೇಲೂರಿಗೆ ಬಂದಾಗ ಅಲ್ಲಿ ಎರ್‍ರಕೃಷ್ಣನಾಯಕನ ವಂಶಜನಾದ ಮೂರನೇ ವೆಂಕಟಾದ್ರಿ ನಾಯಕನನ್ನು 'ಶ್ರೀರಂಗರಾಯರ ಕಾರ್ಯಕ್ಕೆ ಕರ್ತರಾದ'[12] ಎನ್ನುವ ಉಲ್ಲೇಖ ಬರುವುದರಿಂದ ಅವನು ಸಾಮ್ರಾಟನ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಿರಬೇಕು. ಆದರೆ ಕ್ರಿ.ಶ.೧೬೭೦ರ ವೆಂಕಟಾದ್ರಿನಾಯಕನ ಶಾಸನದಲ್ಲಿ ಸಾಮ್ರಾಟನ ಹೆಸರನ್ನು ಹೇಳದಿರುವುದೇ ಅಲ್ಲದೇ ತನ್ನನ್ನು 'ಶ್ರೀಮದ್ರಾಜಾಧಿರಾಜ ರಾಜ ಪರಮೇಶ್ವರ ಶಿಂಧು ಗೋವಿಂದ ....'[13] ಎಂದು ಕರೆದುಕೊಂಡಿರುವುದರಿಂದ ೧೬೭೦ ಕ್ಕೆ ಮುಂಚೆಯೇ ಬೇಲೂರಿನಿಂದ ಮೂರನೇ ಶ್ರೀರಂಗನು ನಿರ್ಗಮಿಸಿರಬೇಕು.

ಕೆಳದಿ ಶಿವಪ್ಪನಾಯಕನು ಬೇಲೂರನ್ನು ಮೂರನೇ ಶ್ರೀರಂಗನಿಗೆ ವಹಿಸಿ ಕೊಟ್ಟಾಗಲೂ ಮೈಸೂರಿನವರ ದಾಳಿ ಭಯವಿದ್ದೇ ಇತ್ತು. ಎಂತಲೇ ಬೇಲೂರಿನ ಹೊರಭಾಗ

ದಲ್ಲಿ ತನ್ನ ಅಣ್ಣ ಭದ್ರಪ್ಪನಾಯಕನ ಅಳಿಯನಾದ ಶಿವಲಿಂಗನಾಯಕನನ್ನು ಕಾವಲಿಟ್ಟ. ಆದರೂ ಶಿವಪ್ಪನಾಯಕನ ಭಯ ನಿಜವಾಯಿತು. ಕಂಠೀರವ ನರಸರಾಜನು ಕ್ರಿ.ಶ. ೧೬೬೦ರಲ್ಲಿ ಗತಿಸಿದ ನಂತರ ಕ್ರಿ.ಶ.೧೬೬೩ರಲ್ಲಿ ದೇವರಾಜನು ಶಿಲಿಂಗನಾಯಕ ನನ್ನು ಕೊಂದು ಹಾಸನ, ಸಕ್ರೆಪಟ್ಟಣ, ವಸ್ತಾರೆ ಮುಂತಾದ ಪ್ರದೇಶಗಳನ್ನು ಗೆದ್ದು ಮೂರನೇ ಶ್ರೀರಂಗನ ಸಂಸ್ಥಾನವನ್ನು ಮತ್ತೂ ಕಿರಿದಾಗಿಸಿದನು. ಕೆಳದಿ ಸೋಮಶೇಖರನಾಯಕನು ಕ್ರಿ.ಶ.೧೬೬೫ರ ಸುಮಾರಿನಲ್ಲಿ ಬೇಲೂರಿನ ಮೇಲೆ ದಾಳಿ ಮಾಡಬೇಕಾದ ಪರಿಸ್ಥಿತಿಯನ್ನು ಕೆಳದಿ ನೃಪವಿಜಯವು ಉಲ್ಲೇಖಿಸಿ ಕ್ರಿ.ಶ. ೧೬೬೫ ವೇಳೆಗೆ ಪ್ರಾಯಶಃ ಬೇಲೂರನ್ನು ದೇವರಾಜನು ಗೆದ್ದುದ್ದನ್ನು ದಾಖಲಿಸುತ್ತದೆ.[14] ಇದಕ್ಕೆ ಪೂರಕವಾಗಿ ಕ್ರಿ.ಶ.೧೬೬೫ ಕ್ಕೆ ಮೂರನೇ ಶ್ರೀರಂಗನ ಬೇಲೂರು ಸೀಮೆಯ ಶಾಸನಗಳು ಕೊನೆಯಾಗುತ್ತವೆ. ಮೂರನೆಯ ಶ್ರೀರಂಗನ ಕೊನೆಯ ಬೇಲೂರು ಶಾಸನ ಕುಕ್ಕೆ ಸುಬ್ರಹ್ಮಣ್ಯಕ್ಕೆ ಕೊಟ್ಟ ದಾನ ಶಾಸನ. ಕ್ರಿ.ಶ.೧೬೬೫ ಏಪ್ರಿಲ್ ೭[15] ರಂದು ಇದರ ನಂತರದ ಶಾಸನ ಮೂರನೇ ಶ್ರೀರಂಗನು ತಿರುಪತಿಯಲ್ಲಿ ಹಾಕಿಸಿದ್ದು, ಕ್ರಿ.ಶ.೧೬೬೫ ನೇ ಏಪ್ರಿಲ್ ೨೯ರಂದು. ಪ್ರಾಯಶಃ ಮಧುರೆಯ ನಾಯಕನ ಆಶ್ರಯಕ್ಕೆ ಹೋಗುವ ಮುಂಚೆ ತಿರುಪತಿಯ ಭೇಟಿಯದ್ದಾಗಿರಬೇಕು.

ಹೀಗೆ ಕ್ರಿ.ಶ.೧೬೪೯ ರಿಂದ ಕ್ರಿ.ಶ.೧೬೬೫ರವರೆಗೆ ವಿಜಯನಗರ ಸಾಮ್ರಾಜ್ಯದ ತುಣುಕು ಬೇಲೂರು ಸಂಸ್ಥಾನವೂ, ವಿಜಯನಗರ ಸಾಮ್ರಾಜ್ಯದ ಕೊನೆಯ ರಾಜಧಾನಿಯಾಗಿ ಬೇಲೂರು ಪಟ್ಟಣವೂ ಬೆಳಗಿ ಮರೆಯಾದವು.

ಗ್ರಂಥ ಋಣ

1. ಫಾದರ್ ಹೆರಾಸ್ 'ಅರವೀಡು' ಪು-೨೪೨.
2. ಅದೇ
3. 'ಕರ್ನಾಟಕ ಇತಿಹಾಸ ದರ್ಶನ' ಎಂ.ವಿ.ಕೃಷ್ಣರಾವ್ ಮತ್ತು ಕೇಶವಭಟ್ಟ, ಸಹಕಾರಿ ಪ್ರಕಾಶನ, ಬೆಂಗಳೂರು.ಪು-೪೨೮.
4. ಕರ್ನಾಟಕ ಚರಿತ್ರೆ, ಪ್ರಧಾನ ಸಂಪಾದಕ ಬಿ.ಷೇಕ್ ಆಲಿ, ಹಂಪೆ ಕನ್ನಡ ವಿಶ್ವವಿದ್ಯಾಲಯ, ೧೯೯೭ ಪು ೫೬.
5. ಅದೇ ಸಂಪುಟ ೩, ಪು ೫೪.
6. ವಿಜಯನಗರ, ವಸುಂದರಾ ಫಿಲಿಯೋಜಾ, ಪು ೩೧೮, ನ್ಯಾಷನಲ್ ಬುಕ್ ಟ್ರಸ್ಟ್ ೧೯೯೭.
7. ನಾಯಕ್ಸ್ ಆಫ ಟ್ಯಾಂಜೋರ್‌ನ್ ವೃದ್ಧಗಿರೀಶ. ಅಣ್ಣಾಮಲೈ ವಿಶ್ವವಿದ್ಯಾಲಯ, ಅಣ್ಣಾಮಲೈನಗರ ೧೯೪೨.
8. ಅದೇ, ಪುಟ ೧೨೯ ೧೪೮.
9. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, ಸಂಪುಟ ೧೬, ಸಂಖ್ಯೆ ೩೩೩.

10. ಟಿಪ್ಪಣಿ ೭

11. ಕೆಳದಿ ನೃಪವಿಜಯ, ಸಂಪಾದಕ ಶಾಮಶಾಸ್ತ್ರಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ೧೯೭೩. ಪು ೧೦೦.

12. E.C.8 ಅರಕಲಗೂಡು ೧೪೨.

13. E.C.9 ಸಕಲೇಶಪುರ ೬೩.

14. 'ಬೆಕ್ಕೋಡಂ ಬೆಳಗೋಡಂ ಮಿಕ್ಕಾ ಕಣತೂರನಬ್ಬಿಣವ ಬೇಲೂರಂ ಚಕ್ಕನೆ ಕೊಂಡಾ ಶಿವನೃಪ....' ಕೆಳದಿ ನೃಪವಿಜಯ ಪು ೧೧೧.

15. M.A.R.1924-25, ಪು ೧೬೭.

೨೬. ವಿಜಯನಗರ - ಒರಿಸ್ಸಾ ಸಂಬಂಧ

ಕೆಳದಿ ವೆಂಕಟೇಶ ಜೋಯಿಸ್

ವಿಜಯನಗರ ಮತ್ತು ಒರಿಸ್ಸಾ ಇತಿಹಾಸಕ್ಕೆ ವಿಶೇಷ ಸಂಭಂಧ ವಿದ್ದಿತೆಂಬುದಕ್ಕೆ ಅಂದಿನ ಕೆಲವು ಐತಿಹಾಸಿಕ ಸಂಗತಿಗಳು ಪುರಾವೆ ಒದಗಿಸುತ್ತವೆ. ವಿಜಯಗರ ಅರಸರು ಹಾಗೂ ಒರಿಸ್ಸಾ ಅರಸರು ಒಂದಿಲ್ಲೊಂದು ರೀತಿಯಲ್ಲಿ ಬಾಂಧವ್ಯ ಹೊಂದಿದ್ದಾರೆಂದು ತಿಳಿದುಬರುತ್ತದೆ. ವಿಜಯನಗರ -ಒರಿಸ್ಸಾದ ೧೬-೭ನೇ ಶತಮಾನದಲ್ಲಿ ಆನೆಗೊಂದಿ ಸಂಸ್ಥಾನವನ್ನಾಳಿದ ತುಂಗಾಭದ್ರನದಿಯ ಉತ್ತರ ದಿಕ್ಕಿನಲ್ಲಿ ಕಟ್ಟಿದ ರಾಜ್ಯ ಇದಾಗಿತ್ತು. ಇದನ್ನು ರಾಯವಂಶಾವಳಿಯಲ್ಲಿ ಈ ರೀತಿ ಉಲ್ಲೇಖಿಸಲಾಗಿದೆ.

ಕ್ರಿ.ಶ.೧೨೯೭ ರಿಂದ ೧೩೩೪ ರವರೆಗೆ ಆನೇಗೊಂದಿ ಭಾಗವನ್ನು ಪ್ರತಾಪರುದ್ರನ ಮಗ ಜಂಬೂಕೇಶ್ವರರಾಯನು ಆಳುತ್ತಿದ್ದನು. ಈ ಸಾಮ್ರಾಜದ ಕೊನೆಯ ದೊರೆ ಇವನ ಸೇನಾಧಿ ಪತಿಯೊಬ್ಬನು ಈ ರಾಜನ ದುಷ್ಪತನವನ್ನು ಸಹಿಸಲಾರದೆ ಅವನ ಮತ್ತು ಅವನ ಕುಟುಂಬವನ್ನು ಹತ್ಯೆ ಮಾಡಿದನು. ಕ್ರಿ.ಶ.೧೩೩೬ರಲ್ಲಿ ಇವನ ಮಂತ್ರಿ ಯಾಗಿದ್ದ ಹರಿಹರರಾಯನು ಈ ಭಾಗದ ಆಡಳಿತವನ್ನು ತಾನು ವಹಿಸಿಕೊಂಡನು. ಇದರಿಂದ ರಾಜ ವಂಶಾವಳಿಯ ಪ್ರಕಾರ ಕ್ರಿ.ಶ.೧೩೩೬ರಲ್ಲಿ ಇವನ ಮಂತ್ರಿಯಾಗಿದ್ದ ಹರಿಹರರಾಯನು ಈ ಭಾಗದ ಆಡಳಿತವನ್ನು ತಾನು ವಹಿಸಿಕೊಂಡನು. ಇದರಿಂದ ರಾಜ ವಂಶಾವಳಿಯ ಪ್ರಕಾರ ಕ್ರಿ.ಶ. ೧೩೩೬ರ ವರೆಗೆ ವಿಜಯನಗರ ಸಾಮ್ರಾಜ್ಯ ಇರಲಿಲ್ಲವೆಂದು ತಿಳಿದಬರುತ್ತದೆ. ಆದರೆ ಒರಿಸ್ಸಾ ಇತಿಹಾಸವನ್ನು ಗಮನಿಸಿ ದಾಗ ಇದು ಬೇರೆಯೇ ರೀತಿಯಲ್ಲಿ ಕಂಡುಬರುತ್ತದೆ. ಕಪಿಲದೇವನ ದೇಶಭ್ರಷ್ಟ ಸುಪುತ್ರ ಪುರುಷೋತ್ತಮದೇವನು ಗಂಗ ವಂಶದವನಾಗಿದ್ದು ಒರಿಸ್ಸಾ ರಾಜ್ಯವನ್ನು ಆಳುತ್ತಿದ್ದನು. ಈತನು ತನಗೆ ಬಂದ ಕಷ್ಟಗಳನ್ನು ಎದುರಿಸಿಕೊಂಡು ಪವಾಡ ಸದೃಶ ರೀತಿಯಲ್ಲಿ ಒರಿಸ್ಸಾ ಸಿಂಹಾಸನವನ್ನು ಎರಿದ್ದನು. ಇವನು ತನಗೆ ಮಕ್ಕಳು ಮಡದಿ ಇದ್ದರೂ ಸಹ ಚೋಳರಾಜರ ಮಗಳನ್ನು ಸಿಂಹಾಸನಕ್ಕೆ ತರುವ ಸಲುವಾಗಿ ಮದುವೆಯಾಗಿ ದ್ದನು. ಈ ವಿಷಯವನ್ನು ಜಂಬುಕೇಶ್ವೇರ ರಾಜನ ಗಮನಕ್ಕೂ ತಂದಿದ್ದನು. ಈ ಜಂಬುಕೇಶ್ವರ ರಾಜನು ಆಗ ಚೋಳರಾಜ್ಯವನ್ನು ಆಳುತ್ತಿದ್ದನು. ಪುರುಷೋತ್ತಮ ದೇವನ ಈ ನಡುವಳಿಕೆಯು ಕಾಂಚಿ, ವಿದ್ಯಾನಗರ ಮುಂತಾದ ಎರಡು ರಾಜಧಾನಿಗಳ ಮೇಲೆ ದಂಡೆತ್ತಿ ಹೋಗಿ ಅವುಗಳನ್ನು ಒಶಪಡಿಸಿಕೊಂಡು ಅಲ್ಲಿಯ ಖಜಾನೆಗಳನ್ನು ಲೂಟಿ ಮಾಡಿದ್ದಲ್ಲದೆ ಚೋಳರಾಜನ ಮಗಳಾದ ಪದ್ಮಾವತಿಯನ್ನು ವರಿಸಿದುದು

ಚೋಳರಾಜನಿಗೆ ಸಹಿಸಲಾರದ ಅವಮಾನ ಉಂಟು ಮಾಡಿದಂತೆ ಆಗಿತ್ತು. ಕಳಿಂಗ ಎಂದು ಕರೆಯಲ್ಪಡುತ್ತಿದ್ದ ಒರಿಸ್ಸಾವನ್ನು ಮೊದಲು "ಒಡ್ರಿಯ" ಎಂದು ಕರೆಯುತ್ತಿದ್ದರು.

ಬಂಬ್ರರಾಯ ವಂಶಾವಳಿ ಪ್ರಕಾಶ ಜಗನ್ನಾಥ ದೇವರು ಸ್ವಪ್ನದಲ್ಲಿ ಬಂದು ತಿಳಿಸಿದ ಮೇರೆಗೆ ಒರಿಸ್ಸಾ ರಾಜನು ತನ್ನ ದೇಶಭ್ರಷ್ಟ ದೊರೆಯ ಮಗನನ್ನು ಮತ್ತು ತನ್ನ ೧೮ ಮಕ್ಕಳನ್ನು ಬಿಟ್ಟು ದೇಶವನ್ನು ತ್ಯಜಿಸಿ ಹೊರಟು ಹೋದನು. ಅನಂತರದಲ್ಲಿ ಒರಿಸ್ಸಾ ದೇಶಭ್ರಷ್ಟ ಪುರುಷೋತ್ತಮ ದೇವನಿಂದ ಆಳಲ್ಪಟ್ಟಿತು ಎಂಬುದಾಗಿ ಉಲ್ಲೇಖಿಸುತ್ತದೆ. ಇದು ಮಹಾರಾಜ ನರಸಿಂಹ ದೇವನ ತಾಮ್ರಶಾಸನದಲ್ಲಿ ಅಂದರೆ ಶಾ.ಶ. ೧೨೩೪ (ಕ್ರಿ.ಶ.೧೩೧೨) ರಲ್ಲಿಯ ತಾಮ್ರಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿದೆ.

ಬಂಗಾಳಿ ಭಾಷೆಯಲ್ಲಿರುವ ಚೈತನ್ಯಮುತ್ತಂ ಪ್ರಕಾರ ೪೦೦ ವರ್ಷಗಳ ಹಿಂದೆ ಚೈತನ್ಯಚಳುವಳಿಯ ಸಂಸ್ಥಾಪಕ ಚೈತನ್ಯರ ಪತ್ರಿಕೆಯು ಪುರುಷೋತ್ತಮನು ಈ ಎರಡೂ ಚೋಳರಾಜ್ಯಗಳನ್ನು ಗೆದ್ದುದನ್ನು ತಿಳಿಸುತ್ತದೆ. ಆನಂತರ ಅವರಿಂದಲೇ ಕೊನೆಯವರೆಗೆ ಆಡಳಿತ ನಡೆಸಿದ್ದುದಾಗಿ ತಿಳಿದುಬರುತ್ತದೆ. ಇದೇ ಕೃತಿಯಲ್ಲಿ ವಿದ್ಯಾನಗರ ಸಾಮ್ರಾಜ್ಯವು ತುಂಗಭದ್ರ ತೀರದಲ್ಲಿತ್ತು. ಇದು ಒರಿಸ್ಸಾ ರಾಜ್ಯದ ರಾಜರಿಂದ ನಾಶವಾಯಿತು. ಪರುಷೋತ್ತಮದೇವನು ಹರಿಹರರಾಯನನ್ನು ಮಂತ್ರಿಯನ್ನಾಗಿ ನೇಮಿಸಿ ಅದಕ್ಕೆ ವಿಜಯನಗರ ಎಂದು ಹೆಸರಿಟ್ಟನು. ಆನಂತರ ಈತನು ಗೋಪಾಲಕೃಷ್ಣ ವಿಗ್ರಹ, ವಜ್ರದ ಸಿಂಹಾಸನವನ್ನು ಪಡೆದುಕೊಂಡನು. ವಜ್ರದ ಸಿಂಹಾಸನವು ಆನಂತರ ಪುರಿಯ ಜಗನ್ನಾಥ ಸ್ವಾಮಿಗೆ ಅರ್ಪಿಸಲಾಯಿತು. ಗೋಪಾಕೃಷ್ಣ ವಿಗ್ರಹವು ಕಟಕ್‌ನಲ್ಲಿ ಸ್ಥಾಪಿಸಲ್ಪಟ್ಟಿತು. ಇದು ಈಗ ಸಾಕ್ಷಿ ಗೋಪಾಲ ಎಂಬುದಾಗಿ ಗುರುತಿಸಲ್ಪಟ್ಟಿದೆ ಎಂಬುದಾಗಿ ಉಲ್ಲೇಖಿತವಾಗಿದೆ.

ಕ್ರಿ.ಶ.೧೪ನೇ ಶತಮಾನದ ಮೊದಲ ಆರ್ಧಭಾಗದಲ್ಲಿ ಕಂಚಿ ಮತ್ತು ವಿದ್ಯಾನಗರ ಅಥವಾ ವಿಜಯನಗರ ಇವುಗಳು ಕಾವೇರಿ ಮತ್ತು ತುಂಗಭದ್ರಾ ತಟಗಳು ಚೋಳರ ಗಂಢಗೋಪಾಲ, ವಿಷ್ಣುವರ್ಧನ ಮಹಾರಾಜ ಇವರುಗಳು ರಾಜಧಾನಿಗಳಾಗಿದ್ದವು. ಇವು ಕ್ರಮೇಣ ನಾಶವಾದವು. ಇದನ್ನು ಅನೇಕ ಇತಿಹಾಸ ತಜ್ಞರು ಉಲ್ಲೇಖಿಸಿದ್ದಾರೆ. ಇಂತಹ ಪ್ರಸಿದ್ಧ ಸಾಮ್ರಾಜ್ಯವು ಇದ್ದ ಬಗ್ಗೆ ಇಲ್ಲಿರುವಂತಹ ಪಳೆಯುಳಿಕೆಗಳು ಸಾಕ್ಷೀಕರಿಸುತ್ತವೆ.

ಬಹಳ ಹಿಂದಿನಿಂದಲೂ ಧಾರ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಒರಿಸ್ಸ ಜನರು ರಕ್ಷಿಸಿಕೊಂಡು ಬಂದಿರುವ, ಗೌರವಿಸುವ ಮಡಲಪಂಜಿ ಎಂಬ ಗ್ರಂಥದಲ್ಲಿ ಸಾಕ್ಷಿಯಲ್ಲಿರುವ ಗೋಪಾಲಕೃಷ್ಣ ಭವ್ಯಮೂರ್ತಿ (ಸಾಕ್ಷಿ ಗೋಪಾಲ) ಸತ್ಯನಾರಾಯಣ ಮತ್ತು ವಟಮಂಗಳ ಇವುಗಳು ಪುರಿದೇವಾಲಯದ ಎಲ್ಲೆಯಲ್ಲಿಯೇ ಸ್ಥಾಪಿತವಾಗಿರುವುದಾಗಿ ತಿಳಿಸುತ್ತದೆ. ಅಲ್ಲದೆ ನರಸಿಂಹ, ಮಹಾಗಣಪತಿ (ಭಂಢಾರ ಗಣೇಶ), ಸರಸ್ವತಿ, ದಕ್ಷಿಣಕಾಳಿಕಾ, ಸೇತಲ, ಈ ಮೊದಲಾದವು ಪುರಿಯ ಮುಕ್ತಿ ಮಂಟಪದ ಎದುರು

ಗಡೆಯು ರಾಮಕೃಷ್ಣ, ಲಕ್ಷ್ಮಿ, ಸರಸ್ವತಿ ಮೊದಲಾದ ಲೋಹದ ವಿಗ್ರಹಗಳು ವಿಜಯನಗರ ರಾಜ್ಯದಲ್ಲಿ ಪುರುಷೋತ್ತಮ ದೇವನಿಂದ ಪ್ರತಿಷ್ಠಾಪಿತವಾಗಿದ್ದು ಇವುಗಳನ್ನು ವಿಗ್ರಹಗಳು ಕಂಚಿ ಮತ್ತು ವಿಜಯನಗರ ಖಜಾನೆಗಳಲ್ಲಿ ನೋಡಬಹುದಾಗಿದೆ ಎಂದು ಉಲ್ಲೇಖಿಸುತ್ತದೆ. ಅಲ್ಲದೇ ೧೪೬೪ರಲ್ಲಿ ಕಪಿಲದೇವ ಗಜಪತಿ ಮಹಾರಾಜರು ದಕ್ಷಿಣ ಭಾರತದಲ್ಲಿ ದಂಡೆತ್ತಿದಾಗ ಕರ್ನಾಟಕ ರಾಜ್ಯದ ೯ ಕೋಟೆಗಳನ್ನು ವಶಪಡಿಸಿಕೊಂಡಿದ್ದಾಗಿ ಅನಂತರ ಸುಮಾರು ೧೦೦ ವರ್ಷಗಳ ನಂತರದಲ್ಲಿ ವಿಜಯನಗರದ ಅರಸರು ಇದನ್ನು ಸ್ವಾಧೀನಪಡಿಸಿಕೊಂಡಿದ್ದುದ್ದಾಗಿ ಮಡಲಪಂಜಿ ಕೃತಿ ಉಲ್ಲೇಖಿಸುತ್ತದೆ.[೧]

ವಿದ್ಯಾನಗರ ಅಥವಾ ವಿಜಯನಗರ ರಾಜ್ಯದ ಬಗ್ಗೆ ಅದು ನಾಶವಾದ ನಂತರ ಪುನಪ್ರತಿಷ್ಠಾಪನೆಯು ಹರಿಹರರಾಯನಿಂದ ಆಯಿತೆಂದು ತಿಳಿದುಬರುತ್ತದೆ. ಆದರೆ ಇದು ಕೃಷ್ಣದೇವಾರಾಯನ ಕಾಲದ ವರೆಗೆ ಪ್ರಸಿದ್ಧವಾಗುವುದಿಲ್ಲ. ದಕ್ಷಿಣ ಭಾರತದಲ್ಲಿ ಈ ನಗರವು ಕೃಷ್ಣದೇವರಾಯನಿಂದ ವೈಭವೋಪೇತವಾಗಿ ಮರುಕಳಿಸಿದುದನ್ನು ಆ ಕಾಲದ ಕೆಲವು ಘಟನೆಗಳಿಂದ ತಿಳಿಯಬಹುದು. ಉದಯಗಿರಿ ಕೋಟೆ, ಈಗಿನ ನೆಲ್ಲೂರು ಜಿಲ್ಲೆಯು ಒರಿಸ್ಸಾದ ಪ್ರತಾಪಚಂದ್ರದೊರೆಯ ಮಗ ವೀರಭದ್ರದೇವ ದೊರೆಯ ಆಡಳಿತದಲ್ಲಿತ್ತು. ಕ್ರಿ.ಶ.೧೫೧೩ ರಲ್ಲಿ ಕೃಷ್ಣದೇವರಾಯ ಪೂರ್ವಭಾರತದ ಮೇಲೆ ದಂಡೆತ್ತಿಹೋದಾಗ ಉದಯಗಿರಿಯನ್ನು ವಶಪಡಿಸಿಕೊಳ್ಳಲು ಘೋರ ಯುದ್ಧವನ್ನೇ ಮಾಡಬೇಕಾಯಿರು. ಆ ಯುದ್ಧದಲ್ಲಿ ಜಯಗಳಿಸಿದ್ದುದಲ್ಲದೆ ಪುನಃ ವೀರಭದ್ರದೇವನಿಗೆ ಅದನ್ನು ವಹಿಸಿಕೊಟ್ಟು ಆತನ ಮಗಳಾದ ಚೆನ್ನಮ್ಮ ದೇವಿಯನ್ನು ವಿವಾಹವಾಗಿ ವಿಜಯನಗರದ ಪಟ್ಟದರಾಣಿಯಾಗಿ ಮಾಡಿಕೊಂಡದ್ದು ಅಲ್ಲದೇ ವೀರಭದ್ರದೇವನನ್ನು ಸೋಲಿಸಿ ಅವನ ರಾಜ್ಯವನ್ನು ತನ್ನ ರಾಜ್ಯಕ್ಕೆ ಸೇರಿಸಿ ಕೊಂಡುದು ಅಲ್ಲದೇ ಪುನಃ ಆತನಿಗೆ ಕ್ಷಮಾದಾನ ಮಾಡಿ ತನ್ನ ಸಾಮಂತನನ್ನಾಗಿಸಿಕೊಂಡನು. ವಿಜಯನಗರ "ರಾಯರೇಖೆ" ಎಂಬ ಕೃತಿಯಲ್ಲಿ "ಆ ತಾರುವಾಯ ಪರೀಕ್ಷಿತರಾಯರು ರಾಜ್ಯಭಾರ ಮಾಡಿಕೊಂಡು ಕಲಿಪುರುಷನು ಕಟ್ಟಿ ರಾಜ್ಯವನ್ನು ಅಳುತ್ತಾ ಇದ್ದರು. ತದನಂತರ ಇವರ ಮಗ ಜನಮೇಜಯ ಮಹಾರಾಜರು ಇದೇ ಪ್ರಕಾರ ಸಕಲ ಧರ್ಮವನ್ನು ನಡೆಸಿಕೊಂಡು ಸತ್ಯದಿಂದ ರಾಜ್ಯವನ್ನು ಆಳುತ್ತಾ ಇದ್ದರು. ತದನಂತರದಲ್ಲಿ ಇವರ ಮಗ ಮಕುಟವರ್ಧನರಾಯರು ಇವರ ಮಗ ರಾಜಮೇಧಿನಿರಾಯ, ಇವರ ಮಗ ಸಾರಂಗಧರರಾಯ ಈ ಪರ್ಯಂತರಕ್ಕು ಕಲಿಯುಗ ಆದಿಯಾಗಿ ಇವರು ಹಸ್ತಿನಾಪುರವೆಂಬ ಪಟ್ಟದಲ್ಲಿ ಏಕಚಕ್ರಾಧೀಶ್ವರರಾಗಿ ಆಸೇತುಹಿಮಾಚಲಪರ್ಯಂತರಕ್ಕು ಇರುವ ರಾಜ್ಯ ಯಾವತ್ತು ಧರ್ಮದಿಂದ ಪರಿಪಾಲನೆ ಮಾಡಿಕೊಂಡು ಇದ್ದ ವರ್ಷಗಳು".

ಯುಧಿಷ್ಠಿರ ಶಕ ೩೦೩೪ ವರ್ಷ ದೊರೆತನ ಮಾಡಿದರು. ಆ ತರುವಾಯ ಉಜ್ಜಿಯನಿ ಮಹಾಕಳಿ ಎಂಬ ಪಟ್ಟಣದಲ್ಲಿ ವಿಕ್ರಮಾದಿತ್ಯ ಮಹಾರಾಯನು ಏಕ

ಸಿಂಹಾಸನ ರೂಢವಾಗಿ ಸಕಲ ರಾಜ್ಯ ವನ್ನು ಧರ್ಮದಿಂದ ಪರಿಪಾಲನೆ ಮಾಡಿ ಕೊಂಡು ವಿಂಧ್ಯಪರ್ವತಕ್ಕೆ ಪ್ರತಿ ನಾಮದೇಯ...... ಗೊಂಡಾರಣ್ಯದಿಂದ ದಕ್ಷಿಣದೇಶ (ಯಾವತ್ತು) ೧೪೫ ವರ್ಷ ವಿಕ್ರಮಾದಿತ್ಯನ ಶಕೆಯಲ್ಲಿ ದೊರೆತನ ಮಾಡಿಕೊಂಡು ಇದ್ದರು. ಉಭಯ ಕಲಿಯುಗದಲ್ಲಿ ನಡೆದ ವರುಷ (ವರ್ಷ) ೩೧೭. ಈ ಬಗ್ಗೆ ಶಾಲಿವಾಹನ ಶಕೆಯಿಂದ ಧಾರನಗರದಲ್ಲಿಯೂ ಏಕ ಸಿಂಹಾಸನ ರೂಢನಾಗಿ ದಕ್ಷಿಣ ದೇಶ ಯಾವತ್ತನ್ನು ಭೋಜರಾಜನು ಧರ್ಮದಿಂದ ರಾಜ್ಯವನ್ನು ಆಳುತ್ತಾ ಇದ್ದರು. ಆ ಬಳಿಕ ೪ (ಲ್ಕು) ಸಿಂಹಾಸನ ಯಾವತ್ತು ದಕ್ಷಿಣದೇಶಕ್ಕೆ ಯಾವತ್ತು. ನರಪತಿ ಎಂಬುದಾಗಿ ವಿಜಯನಗರದ ಪಟ್ಟಣ .... ಯು ಅರುವತ್ತೈದು (೬೫) ಮಂದಿ ರಾಯರು ಆಳಿದ ಸಿಂಹಾಸನ೧. ಅಶ್ವಪಥಿ ಮರಾಠೆಯವರು ಮೊಗಲರು ಸಹ ಸಿಂಹಾಸನ ೧ ಗಜಪತಿ ರಾಜಮಹೇಂದ್ರ ಪಟ್ಟಣದಲ್ಲಿಯೂ ಪ್ರತಾಪ ರುದ್ರನ ಸಿಂಹಾಸನ ೧ ಅಂತೂ ಸಿಂಹಾಸನ ೪ ಈ ನಾಲ್ಕು ಸಿಂಹಾಸನವು ದೊರೆಗಳು ರಾಜ್ಯವಾಳುತ್ತಾ ಇದ್ದರು. ಆ ತರುವಾಯ ವಿಜಯನಗರದ ಪಟ್ಟಣದ ಸಂಸ್ಥಾನ (ವನ್ನು) ಆಳಿದ ದೊರೆಗಳ ಅಳಿಕೆ, ರಾಯಪಟ್ಟಿ, ಕೃಷ್ಣರಾಯರವರಿಗೆ ಜನಮೇಜಯ ಆದಿಪಟ್ಟಿ ೬೫ಕ್ಕೆ ಸೇರಿದ ರಾಯಪಟ್ಟಿ ದೊರೆಗಳಿಗೆ ಕಪ್ಪವನ್ನು ಕೊಡುತ್ತಾ ಬಲ್ಲಾಳರಾಯರು ತಮ್ಮ ಹೆಸರಿನ ಬಲ್ಲಾಳ-ರಾಯ ಪಟ್ಟಣವೆಂಬ ಹೆಸರಿಟ್ಟು ರಾಜ್ಯವನ್ನು ಧರ್ಮದಿಂದ ಅಳುತ್ತಾ ಇದ್ದಲ್ಲಿ ವಿಜಯನಗರದ ಪಟ್ಟಣದ ಸಂಸ್ಥಾನ ವಾಳಿದ ದೊರೆಗಳ ಆಳಿಕೆ ರಾಯಪಟ್ಟಿ ೬೫ಕ್ಕೆ ಸೇರಿದ ಕೃಷ್ಣರಾಯರ ತಂದೆ ನರಸಿಂಹ ರಾಯರು ಆಳುವಿಕೆಯಲ್ಲಿ ಸಾಧಿಸಿದ ರಾಜ್ಯ-ಪ್ರಾಕೆ ೬೫ ದೊರೆತನಕ್ಕೆ ಸೇರಿದ ಕುಂಬಳ ರಾಯನು ಪು...... ಕರದಲ್ಲಿಯೂ ನರಸಿಂಗರಾಯರು ಸಾಧಿಸಿದ ಕರ್ನಾಟಕದ ರಾಜ್ಯದ ಅವ ಕೋಟೆ ಚಕ್ರ ೮೪೦೦೦೦೦ ರಾಜ್ಯಕ್ಕೆ ಈ ಬಲ್ಲಾಳರಾಯ ಪಟ್ಟಣವು ಸೇರಿತ್ತು. ಈವರೆಗಾದ ಶಾ.ಶ.ವರ್ಷಗಳು ೧೪೮೧೬ ವರ್ಷ ಆ ತರುವಾಯ ಬಡಿಗೇರಿ ತಿಂಮ ನಾಯಕನು ಎಂಬ ಬೇಡನು ಈ ಆನಾಯಕದ ವೇಳೆ ನೋಡಿ ಅವಾಗ ಬಂದು ಬಲ್ಲಾಳ ರಾಯ ಪಟ್ಟಣವು ಈ ಅನಾಯಕದ ವೇಳೆ ನೋಡಿ ಅವಾಗ ಬಂದು ಈ ಬಲ್ಲಾಳ ರಾಯ ಪಟ್ಟಣವು ದಮಡು ಮಾಡಿಸುತ್ತಾ ಮುತ್ತಲು (ಸುತ್ತಲು) ಲೂಟಿ ಮಾಡಿ ದ್ರವ್ಯಗಳನ್ನು ಸಂಪಾದಿಸಿ ತನ್ನ ಹೆಸರಿನಲ್ಲಿ ತಿಮ್ಮ ಸಮುದ್ರನೆಂಬ ಒಂಟಿ ಬುರುಜು ಕೋಟೆ ಕಟ್ಟಿಸಿ ತನ್ನ ಶಕ್ತಿಯಿಂದ ಪಾಳ್ಯಗಾರನಾಗಿದ್ದನು. ಜಗದೇವಾರಾಯರು ಕರ್ನಾಟಕದ ಸಿಂಹಾಸನ (೧) ಚಿನ್ನಪಟ್ಟಣದಲ್ಲಿ ರಾಣಿ....... ಜಗದೇವರಾಯರ ಹೆಸರಿನಿಂದ ರಾಜ್ಯವನ್ನು ಪಾಲಿಸುವ ಸಮಯದಲ್ಲಿ ಶ್ರೀರಂಗರಾಯರು ಪೆನುಗೊಂಡೆ ಸಿಂಹಾಸನದಲ್ಲು ರಾಜ್ಯವಂಶ ಪರಿಪಾಲಿಸುವ ಸಮಯದಲ್ಲಿ ವಿಜಯಪುರದ ಆಬ್ದುಲ್ ಖಾನನು ಬಂದು ಪೆನಗೊಂಡೆ ಮುತ್ತಿಗೆ ಹಾಕಿದಾಗ ಆ ಆಮಯದಲ್ಲಿ ರಾಣಾ ಜಗದೇವರಾಯನು ಬಂದು ಮುತ್ತಿಗೆ ಯನ್ನು ತೆಗೆಸಿದಾಗ ಶಾಲಿವಾಹ ಶಕೆ ೧೪೩೮ ಮೇಲೆ ಸಲ್ಲುವ ಈಶ್ವರ ಸಂವತ್ಸರದಲ್ಲು ಉಚಿತವಾಗಿ ಪಾಲಿಸಿದ ಬಲ್ಲಾಳರಾಯ ಪಟ್ಟಣಕ್ಕೆ ಸೇರಿದ ಸೀಮೆ ಸೋನಾಳ ಪೊತ್ತುನಾಳು. ಪೂರ್ವದಲ್ಲಿದ್ದ ದೊರೆಗಳಿಗೆ

ಅತಿ ನೂತನವಾದ ಬಲ್ಲಾಳರಾಯ ಪಟ್ಟಣ ವನ್ನು ಉಚಿತವಾಗಿ ಕೊಟ್ಟದ್ದರಿಂದ ಈ ಸೀಮೆಗೆ ಸೇರಿದ ಸೀಮೆ ಇಕ್ಕೆ ವಿವರ. .... ಹೀಗೆ ಪೆನುಗೊಂಡೆಯ ಯುದ್ಧ ಮತ್ತು ಆ ಸಂಬಂಧದ ಕುರಿತು ಉಲ್ಲೇಖವಾಗಿರುವುದನ್ನು ಗಮನಿಸಬಹುದಾಗಿದೆ.

Spendours of the Vijayanagar empire. ಎಂಬ ಕೃತಿಯಲ್ಲಿ In A.D.1513-1514 he recaptured Udayagiri from the Orissa king and stormed Gulbarga ಎಂಬುದಾಗಿಯೂ In A D 1516, he destroyed Bidar, penetrated deep into Orissan territory disrupted the odiya camp by a plot and celebrated his victory by erecting a tower in cuttack. He married Tukk. daughter of Prataparudra, the Gajapati of Orissa in A.D. 1516. He made pilgramages to Sri shaila, Tirupathi and Kanchi by way a offering his all to the mimesis of vitality. The god Shiva had always represented the giver of energies above the inner weaknesses of man, the inspirer of the will to conquer, the embodiment of the power of nature ...... ಎಂಬುದಾಗಿ ಆ ಸಂದರ್ಭದ ಬಗ್ಗೆ ವಿವರಣೆ ನೀಡಲಾಗಿದೆ.[೨]

ಅದೇ ಸಂದರ್ಭವು The history of the Vijayanagar empire, Begining and expansion - 1308-1569. ಕೃತಿಯಲ್ಲಿ "Although Krishna raya had recovered Kondaveedu from the king of orissa and appointed his own officer in charge of that province, its possesion did not go unchallenged. Kulikutubsha who use frontiers the raya had ravaged in tha late war and who could not fully resist him at that time, now turned his attention to inflict whatever losses he could on the territories of Vijayanagar. As a consequence saluva Timmaiah who on the king's return to his capital, was sent to resume his duties as governor of Kondaveedu, found himself on his way opposed by 60,000 men under general by name Madar-ool- mulk. But with 2,00,000 men at his commend it was an easy matter for the minister to defeat his enemy taking madar, wife and son as prisoners, he sent them with their horses, elephants, money and jewels as booty to vijayanagar. After this he proceeded to konaveedu where he stopped for some months putting down all disorder and setting many disputes. Thus having seen to the smooth working of the civil administration in that far off province, he left there an agent to continue the

government in his name and returned to the imperial head quarter" ಎಂಬುದಾಗಿ ಉಲ್ಲೇಖಿತವಾಗಿದೆ.

ಕೃಷ್ಣದೇವರಾಯನು ಕೊಂಡಪಳ್ಳಿಯನ್ನು ಆಕ್ರಮಿಸಿ ತನ್ನ ಸ್ವಸಾಮರ್ಥ್ಯದಿಂದ ಗೆದ್ದು ಕೊಂಡುದಲ್ಲದೆ ಅಲ್ಲಿಯ ಏಳು ಸಾಮಂತರನ್ನು ಮತ್ತು ಸೈನಿಕರನ್ನು ಒರಿಸ್ಸಾದೇಶದ ಅಪರಾಧಿಗಳನ್ನಾಗಿ ತೆಗೆದುಕೊಂಡು ಹೋಗಿ ವಿಜಯನಗರ ರಾಜ್ಯದಲ್ಲಿಟ್ಟನು. ಒರಿಸ್ಸಾವನ್ನು ತನ್ನ ಆಡಳಿತಕ್ಕೆ ಸೇರಿಸಿಕೊಂಡನು ಪ್ರತಾಪರುದ್ರ ಗಜಪತಿಯು ತನ್ನ ರಾಜ್ಯದಲ್ಲಾದ ಅನಾಹುತವನ್ನು ತಿಳಿದು ಸೈನ್ಯ ಸಮೇತ ದಕ್ಷಿಣಕ್ಕೆ ದಂಡೆತ್ತಿ ಹೋಗಿ ವಿಜಯವಾಡದ ಹತ್ತಿರ ವಿಜಯನಗರದ ದೊರೆಯನ್ನು ಎದುರಿಸಿದನು. ಆಗ ವಿಜಯವಾಡ ದಕ್ಷಿಣರಾಜ್ಯದ ಮುಖ್ಯಭಾಗವಾಗಿತ್ತು. ಘೋರಯುದ್ಧ ನಡೆದು ಪ್ರತಾಪರುದ್ರನು ಸೋಲನುಭವಿಸಬೇಕಾಯಿತು. ಕೃಷ್ಣದೇವರಾಯನು ಪುನಃ ಸೈನ್ಯಸಮೇತ ಜಮ್ಮಿಲಾಯ ಕೊನಸಿಂಹ, ಕೇರಂ, ರಾಜಮಂಡ್ರಿ ಮೊದಲಾದ ವೆಂಗಿರಾಜ್ಯಗಳನ್ನು ಕೊನೆಯಲ್ಲಿ ಗೆದ್ದುದಲ್ಲದೆ ಪೊಟ್ಟನೂರೆ, ವಿಶಾಖಪಟ್ಟಣ ಜಿಲ್ಲೆಯ ಬಾಹುಬಲೇಂದ್ರದಲ್ಲಿ ವಿಜಯ ಸ್ತಂಭವನ್ನು ನಿಲ್ಲಿಸಿದನು. ಆನಂತರ ಸಿಂಹಾಚಲದ ಕಡೆಗೆ ದಂಡೆತ್ತಿ ಹೋಗಿ ನಾದತ್ತಿ, ಮುದುಗುಲ್ಲು ಮತ್ತು ಇತರ ಮುಖ್ಯ ಸ್ಥಳಗಳನ್ನು ಗೆದ್ದುಕೊಂಡನು. ಸಿಂಹಾಚಲದಲ್ಲಿ ವರಾಹ ನರಸಿಂಹ ದೇವರಿಗೆ ನಮಸ್ಕರಿಸಿ ಅಲ್ಲಿಯೆ ವಿಜಯಸ್ತಂಭ ಸ್ಥಾಪಿಸಿದನು. ಒರಿಸ್ಸಾದ ಮುಖ್ಯ ಪಟ್ಟಣಕ್ಕೆ ಹೋಗಿ ಕಟಕನಗರವನ್ನು ಸ್ಥಾಪಿತಗೊಳಿಸಿ ವಿಜಯ ನಗರಕ್ಕೆ ಹಿಂತಿರುಗಿದನು. ಒರಿಸ್ಸಾ ರಾಜನು ಕೃಷ್ಣದೇವರಾಯನಿಂದ ಚಿತ್ರದುರ್ಗ ಜಿಲ್ಲೆಯ ಕೆಲಭಾಗವನ್ನು ಪಡೆದುಕೊಂಡಿದ್ದನು.

ಗಜಪತಿ ರಾಜ್ಯವನ್ನು ವಶಪಡಿಸಿಕೊಂಡ ಕೃಷ್ಣದೇವರಾಯನು ತನ್ನ ಮಗನನ್ನು ಆ ರಾಜ್ಯಕ್ಕೆ ಅಧಿಪತಿಯನ್ನಾಗಿ ಮಾಡಿದನು. ಅಲ್ಲದೆ ತಾನು ಸೆರೆ ಹಿಡಿದಿದ್ದ ಕೈದಿಗಳನ್ನು ತನ್ನ ಯುದ್ಧ ಕೌಶಲ್ಯದಿಂದ ಪಡೆದಿರುವುದನ್ನು ಆಸ್ಥಾನದಲ್ಲಿ ತಿಳಿಸಿದುದು ಅಲ್ಲದೆ ಕೊಂಡಪಳ್ಳಿಯ ರಾಜನಿಗೆ ಅವಮಾನ ಮಾಡಿದನು. ಇವನನ್ನು ಸಹಿಸದ ಕೊಂಡಪಳ್ಳಿ ರಾಜನು ಆತ್ಮಹತ್ಯೆ ಮಾಡಿಕೊಂಡನು. ಈ ಘಟನೆಯ ನಂತರದಲ್ಲಿ ಪ್ರತಾಪರುದ್ರ ನಿಗೂ, ಕೃಷ್ಣದೇವರಾಯನಿಗೂ ಒಂದು ಒಪ್ಪಂದವಾಯಿತು. ಆ ಒಪ್ಪಂದದ ಮೇರೆಗೆ ಕೃಷ್ಣದೇವರಾಯನು ಕೃಷ್ಣಾನದಿಯ ಪಶ್ಚಿಮಭಾಗವನ್ನು ಪ್ರತಾಪರುದ್ರನಿಗೆ ಬಿಟ್ಟು ಕೊಟ್ಟುದಲ್ಲದೇ ಅವನ ಮಗಳನ್ನು ವಿವಾಹವಾದನು. ಅನಂತರದಲ್ಲಿ ಉತ್ತರ ಭಾಗ ದಲ್ಲಿಯೂ ರಾಜ್ಯವಿಸ್ತಾರ ಮಾಡಿದನು. ಇದು ದಕ್ಷಿಣಭಾರತದ ಮೂಲ ಚಕ್ರಾಧಿಪತ್ಯ ವಾಗಿ ರೂಪುಗೊಳ್ಳಲು ಪ್ರಮುಖ ಕಾರಣವಾಯಿತು. ಕ್ರಿ.ಶ. ೧೫೦೯ ರಿಂದ ೧೫೩೦ರ ವರೆಗೆ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ವಿಜಯನಗರ ಸಾಮ್ರಾಜ್ಯವು ಕಲೆ, ಸಾಹಿತ್ಯ, ಸಂಸ್ಕೃತಿ ಮೊದಲಾದವುಗಳಲ್ಲಿ ಉಚ್ಛ್ರಾಯಸ್ಥಿತಿಯನ್ನು ತಲುಪಿತು. ಉದಯಗಿರಿಯಿಂದ ತಂದ ಕೃಷ್ಣನ ವಿಗ್ರಹಕ್ಕೆ ಭವ್ಯವಾದ ದೇವಾಲಯವೊಂದು ನಿರ್ಮಾಣಗೊಂಡಿತ್ತು. ಆದರೆ ಆ ವಿಗ್ರಹವು ಇಂದು ಮದ್ರಾಸ್ ವಸ್ತುಸಂಗ್ರಹಾಲಯದಲ್ಲಿದೆ. ಒಂದುಕಾಲದಲ್ಲಿ

ವೈಭವದಿಂದ ಕೂಡಿದ್ದ ರಾಜ್ಯ ಇಂದು ಹಾಳು ಹಂಪಿಯಾಗಿದೆ. ಮೇಲಿನ ಘಟನೆಗಳು ಐತಿಹ್ಯವೆನಿಸಿದರೂ ಇತಿಹಾಸ ರಚನೆಯಲ್ಲಿ ಸಹಕಾರಿಯಾಗಿರುವುದನ್ನು ಅಲ್ಲ ಗೆಳಯು ವಂತಿಲ್ಲ.

ಮೇಲಿನ ಹಲವು ಆಧಾರಗಳನ್ನು ಆಧರಿಸಿ ವಿಜಯನಗರ ಮತ್ತು ಒರಿಸ್ಸಾ ಸಂಬಂಧ ಕುರಿತಂತೆ ಆ ಕಾಲದ ಐತಿಹಾಸಿಕ ಘಟನೆಗಳ ಮೂಲಕ ಅರಿತುಕೊಳ್ಳಬಹುದಾಗಿದೆ. ಈ ಕುರಿತಂತೆ ಇನ್ನು ಹೆಚ್ಚಿನ ಸಂಶೋಧನೆ ನಡೆಯಬೇಕಿದೆ.

ಗ್ರಂಥ ಋಣ

೧. Orissa, taking advantage of these circumstamces, was meditating an invasion of the Vijayanagar empire; see quotations from Chaitanay's life in the Indian Historical Quarterly for 1927.

೨. Splendours of the Vijayanagar Empire Hampi; George Michell, Vaundhara Filliozat and mary publications.

3. The history of the Vijajanagar empire. Begining and expansion-1308-1569). M.H.Ramasharma ed. M.H. Gopal, Bombay Popular Prakashana 1978 p.134. The struggle for Kondaveedu 1518.

೨೭. ವಿಜಯನಗರ ಸಾಮ್ರಾಜ್ಯ ಮತ್ತು ಕುರುಗೋಡುನಾಡಿನ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಸಂಬಂಧ

ವೈ ಹನುಮಂತರೆಡ್ಡಿ

ಬಳ್ಳಾರಿ ಜಿಲ್ಲೆಯ ಕುರುಗೋಡು ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವ ಪಡೆದ ಕ್ಷೇತ್ರ. ಇದು ಕ್ರಿ.ಶ. ೯೪೭ ರಿಂದ ೧೨೦೭ರ ವರೆಗೆ ಬಲ್ಲಕುಂದೆ ಮುನ್ನೂರುನಾಡಿನ ರಾಜಧಾನಿಯಾಗಿ ಮರೆದಿತ್ತು. ಈ ನಾಡು , ಈಗಿನ ಸಿರುಗುಪ್ಪ, ಬಳ್ಳಾರಿ, ಹೊಸಪೇಟೆ ಮತ್ತು ಸಂಡೂರು ತಾಲೂಕಿನ ಸುಮಾರು ೩೦೦ ಹಳ್ಳಿಗಳನ್ನು ಒಳಗೊಂಡಿತ್ತು. 'ಹಂಪಿ ಕ್ಷೇತ್ರ' ಕೂಡ ಈ ನಾಡಿನಲ್ಲಿ ಸೇರಿತ್ತು. ಕುರುಗೋಡು ರಾಜಧಾನಿಯಲ್ಲಿ ಕುರುಗೋಡು ಸಿಂದ ವಂಶದ, ಅರಿಬಲ್ಲದಾಗ್ರನಿಂದ ವೀರ ಕಲಿದೇವರಸನವರೆಗೆ ೧೧ ಜನ ಅರಸರು ರಾಜ್ಯಭಾರ ಮಾಡಿ ಪ್ರಖ್ಯಾತರಾಗಿದ್ದಾರೆ. ಸಿಂದ ಅರಸರ ಆಳ್ವಿಕೆಯ ಪತನದ ನಂತರ ಈ ಪ್ರದೇಶವು ಕ್ರಿ.ಶ.೧೩೩೬ ರಿಂದ ಪ್ರಾರಂಭವಾದ ವಿಜಯನಗರ ಸಾಮ್ರಾಜ್ಯದಲ್ಲಿ ವಿಲೀನಗೊಂಡಿತು. ಹೀಗೆ ಕುರುಗೋಡು ಮತ್ತು ವಿಜಯನಗರದ ಸಂಬಂಧ ವಿಜಯ ನಗರ ಸಾಮ್ರಾಜ್ಯ ಸ್ಥಾಪನೆಗಿಂತ ಮೊದಲಿನಿಂದ ಕೊನೆವರೆಗೂ ಮತ್ತು ಆನಂತರ ಮುಂದುವರೆದಿದೆ. ಇವರೆಡರ ಸಂಬಂಧ ಪಟ್ಟಂತೆ ಕೆಲವು ವಿಶೇಷ ಅಂಶಗಳನ್ನು ಮಾತ್ರ ನಾನು ಈ ಪ್ರಬಂಧದಲ್ಲಿ ಪ್ರಸ್ತುತ ಪಡಿಸುತ್ತಿದ್ದೇನೆ.

ಕುರುಗೋಡು ಪ್ರಸಿದ್ಧ ದೊರೆ ಇಮ್ಮಡಿ ರಾಚಮಲ್ಲನ ಮಗನಾದ ವೀರಕಲಿದೇವ ರಸ, ತನ್ನ ತಂದೆಯ ಮರಣಾನಮತರ ನಾಡಿನ ಅಧಿಪತಿಯಾಗುತ್ತಾನೆ. ಈತನು ಪುಣ್ಯಕ್ಷೇತ್ರ 'ಹಂಪೆ' ಯ ರಕ್ಷಣೆಗಾಗಿ ಸಾಮಂತ ಮಾದೆಯ ನಾಯಕನನ್ನು ಅಗತ್ಯವಾದ ಕಾವಲು ಪಡೆಯ ಸಮೇತ ನೇಮಿಸಿದ್ದ ಬಗ್ಗೆ ಹಂಪೆಯ[1] ಶಾಸನದಲ್ಲಿ ಉಲ್ಲೇಖಿತ ವಾಗಿದೆ. **'ಪಂಪಾತೀರ್ಥ ರಕ್ಷಣಾರ್ಥ ಸಾಮನ್ತ ಮಾದೆಯ ನಾಯಕಂ ಮತಂಗ ಪರ್ವತಮಂ ಪ್ರತಿಪಾಳಿಸುತ್ತಮಿರೆ'** ಎಂದು ತಿಳಿಸುತ್ತಿರುದು ಶತ್ರುಗಳಿಂದ ಈ ಕ್ಷೇತ್ರ ವನ್ನು ರಕ್ಷಣೆ ಮಾಡುವ ಉದ್ದೇಶವಿರಬೇಕು. ಇಮ್ಮಡಿರಾಚಮಲ್ಲನ ಮರಣಾನಂತರ, ಆತನ ಸ್ಮಾರಣಾರ್ಥವಾಗಿ ಹಂಪಿಯ ಮನ್ಮಥಕುಂಡದ ಎದುರುಗಡೆ, ದುರ್ಗಾದೇವ ಸ್ಥಾನದ ಉತ್ತರ ಬಾಗದಲ್ಲಿ ರಾಚಮಲ್ಲ ದೇವಸ್ಥಾನವನ್ನು "ಹೆಗಡೆ ರೇಚಯ್ಯ" ನು ನಿರ್ಮಿಸಿದ್ದಾನೆ. ಇದು ಪೂರ್ವ ಈಶಾನ್ಯ ಮುಖವಾಗಿದೆ. ಪ್ರವೇಶ ದ್ವಾರದ ಒಳಗಡೆ ಸಭಾಮಂಟಪವಿದ್ದು ಇದಕ್ಕೆ ಅಭಿಮುಖವಾಗಿ ಬಂದ ಗರ್ಭಗೃಹದ ಹೊರೆ ಮೈಯ ಅಧಿಷ್ಠಾನವು ಪದ್ಮ, ಕುಮುದ,ಕಪೋತಗಳನ್ನು ಒಳಗೊಂಡಿದೆ. ಗರ್ಭ ಗೃಹದ ಮೇಲೆ

ಕದಂಬನಾಗರ ಶೈಲಿಯ ಶಿಖರವಿದ್ದು, ಸ್ವಲ್ಪಭಾಗ ಹಾಳಾಗಿದೆ. ಸಾಮಾನ್ಯಜನರಿಗೆ ಇದು ಕುರುಗೋಡು ನಾಡನ್ನು ಆಳಿದ ದೊರೆ ಇಮ್ಮಡಿ ರಾಚಮಲ್ಲನ ಸ್ಮರಣಾರ್ಥ ನಿರ್ಮಿಸಿದ ದೇವಸ್ಥಾನ ಎನ್ನುವ ಬಗ್ಗೆ ತಿಳಿದಿಲ್ಲ. ತಿಳಿಸುವ ನಾಮಫಲಕವನ್ನು ಹಾಕಿರುವುದಿಲ್ಲ.

ಕುರುಗೋಡಿನಲ್ಲಿ ಸಿಂದ ವಂಶದ ಅರಸರ ಆಳ್ವಿಕೆ ಕಾಲದಲ್ಲಿ ಅಂದರೆ ಕ್ರಿ.ಶ. ೧೧ ಮತ್ತು ೧೨ನೇ ಶತಮಾನದಲ್ಲಿ ಕೆಲವು ಸುಂದರ ದೇವಾಲಯಗಳು ನಿರ್ಮಿಸಲ್ಪಟ್ಟಿವೆ. ಅವುಗಳಲ್ಲಿ ಪ್ರಮುಖವಾದವು ೧. ಕುರುಗೋಡಿನ ಪ್ರಖ್ಯಾತ ಅರಸ ೧ನೇ ರಾಚಮಲ್ಲನ ಸ್ಮಾರಕವಾಗಿ ನಿರ್ಮಿಸಿದ ಶಿವದೇವಸ್ಥಾನ, ೨. ಕಲ್ಲೇಶ್ವರ, ೩. ಉಜ್ಜಾಳೇಶ್ವರ ಮತ್ತು ೪. ತ್ರಿಕೂಟದೇವಾಲಯ ಮೊದಲಾದವು. ಇವುಗಳ ಹೊರತಾಗಿ ವಿಜಯನಗರ ಸಾಮ್ರಾಜ್ಯದ ೧. ಸಂಗಮೇಶ್ವರ ೨. ದೊಡ್ಡ ಬಸವೇಶ್ವರ. ಸಂಗಮೇಶ್ವರ ದೇವಾಲಯವು ಈಗಿನ ಕುರುಗೋಡು ಪಟ್ಟಣದ ಪಶ್ಚಿಮ ದಿಕ್ಕಿನಲ್ಲಿ, ಹಿಂದೆ ರಾಜಧಾನಿ ಪಟ್ಟಣ ಇದ್ದ ಪ್ರದೇಶದಲ್ಲಿ ಇದೆ. ಇದು ಎತ್ತರವಾದ ಜಗತಿಯ ಮೇಲೆ ನಿರ್ಮಾಣವಾಗಿದ್ದು ಗರ್ಭ ಗೃಹ, ಅಂತರಾಳ, ಸಭಾಮಂಟಪ, ಮುಖಮಂಟಪ ಮತ್ತು ಪ್ರದಕ್ಷಿಣಾ ಪಥವನ್ನು ಒಳಗೊಂಡಿದೆ. ಇದರಲ್ಲಿ ಮೊದಲು ೫ ಅಂಕಣಗಳ ಸಭಾಮಂಟಪವನ್ನು ನಿರ್ಮಿಸಿದ್ದು ನಂತರ ಮೊದಲಿದ್ದ ೫ ಅಂಕಣಗಳ ಸಭಾಮಂಟಪದ ಪಕ್ಕದ ಎರಡೂ ಬದಿಗಳಲ್ಲಿ ಮತ್ತು ಮುಂಭಾಗದಲ್ಲಿ ಒಂದೊಂದು ಅಂಕಣವು ಹೆಚ್ಚುವರಿಯಾಗಿ ನಿರ್ಮಿಸಲಾಗಿದೆ. ವಿಶಾಲವಾದ ಈ ಸಭಾಮಂಟಪದ ಐದು ಅಂಕಣಗಳ ಮಧ್ಯದಲ್ಲಿರುವ ಅರ್ಧ ಅಡಿ ಎತ್ತರದ ವೇದಿಕೆ ಕಪ್ಪು ಶಿಲೆಯ ನಾಲ್ಕು ಕಂಭಗಳು ಕೆಳಗೆ ಚೌಕಾಕಾರ, ಮಧ್ಯ ಎಂಟು, ಹದಿನಾರು ಭಾಗದ ಪಟ್ಟಿಕೆಗಳು, ಮೇಲೆ ವೃತ್ತಾಕಾರದ ಮುಚ್ಚಳ ಚೌಕಾಕಾರದ ಫಲಕ ಮತ್ತು ಬೋದಿಗೆಗಳಿಂದ ಕೂಡಿದೆ. ಅದರ ನಂತರ ಅಕ್ಕಪಕ್ಕದ ೨ ಅಂಕಣಗಳಲ್ಲಿರುವ ಒಟ್ಟು ೨೦ ಕಂಭಗಳು ಕೆಳಗೆ ಚೌಕಾಕಾರ, ಮೇಲೆ ಎಂಟು ಭಾಗದ ಪಟ್ಟಿಕೆಗಳು ಮೇಲ್ಭಾಗದಲ್ಲಿ ಚೌಕಾಕಾರದ ಫಲಕ; ಉಳಿದ ಅಂಕಣಗಳ ಕಂಭಗಳಂತೆ ನೈಪುಣ್ಯತೆ ಹೊಂದಿಲ್ಲ. ನಂತರ ಈ ದೇವಸ್ಥಾನದ ಸುತ್ತಲೂ ಅರ್ಧ ಮುಚ್ಚಿದ ಗೋಡೆಗೆ ಹೊಂದಿಕೊಂಡು ತೀರಾ ಸರಳವಾಗಿ ಚೌಕಾಕಾರದ ಕಂಭಗಳು ಇವೆ. ಹೀಗೆ ಕೊನೆಯ ಎರಡು ಅಂಕಣಗಳು ನಂತರ ಸೇರಿಸಿದವುಗಳಾಗಿವೆ. ಅಂದರೆ ವಿಜಯನಗರದ ಸಂಗಮ ವಂಶದ ಅರಸರ ಆಳ್ವಿಕೆ ಪ್ರಾರಂಭದ ಕಾಲದಲ್ಲಿ ನಿರ್ಮಾಣಗೊಂಡಿದೆ.

ಪ್ರದಕ್ಷಿಣಾ ಪಥ

ಕುರುಗೋಡಿನಲ್ಲಿರುವ ೧೫ ದೇವಾಲಯಗಳು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡಿದ್ದು ಕಲ್ಯಾಣ ಚಾಲುಕ್ಯ ಶೈಲಿಯಲ್ಲಿವೆ. ಆದರೆ ಸಂಗಮೇಶ್ವರ ದೇವಸ್ಥಾನವು ಕಲ್ಯಾಣಚಾಲುಕ್ಯರ ಶೈಲಿಯಲ್ಲಿ ೧೪ ನೇ ಶತಮಾನದ ಪೂರ್ವಾರ್ಧವಲ್ಲಿ ನಿರ್ಮಿಸಲಾಗಿದೆ. ಇಲ್ಲಿ ಪ್ರದಕ್ಷಿಣಾಪಥ, ಗರ್ಭ ಗೃಹದ ನೆಲಮಟ್ಟ ಕ್ಕಿಂತ ಸುಮಾರು

೨ ಅಡಿ ಕೆಳಮಟ್ಟದಲ್ಲಿ ೨ಸೋಪಾನಗಳ ಮೂಲಕ ಕೆಳಗಿಳಿಯಲು ವ್ಯವಸ್ಥೆ ಕಲ್ಪಿಸಲಾಗಿದೆ. ಪ್ರದಕ್ಷಿಣಾಪಥವು ೬ ಅಡಿ ಅಗಲವಾಗಿದ್ದು, ಅದರ ಹೊರ ಭಾಗದ ಸುತ್ತಲು ಸುಮಾರು ೮ ಅಡಿ ಎತ್ತರದ ಗೋಡೆಯನ್ನು ಕಟ್ಟಿ ಅರ್ಧಭಾಗ ಮುಚ್ಚ ಲಾಗಿದ್ದು, ಅದರ ಮಧ್ಯದಲ್ಲಿ ಕಂಭಗಳನ್ನು ಮಾಳಿಗೆಗೆ ಜೋಡಿಸಲಾಗಿದೆ. ಇದೇ ರೀತಿಯ ಪ್ರದಕ್ಷಿಣಾಪಥಗಳ ನಿರ್ಮಾಣ ವಿಜಯನಗರದ ಸಂಗಮರ ಕಾಲದಲ್ಲಿ ನಿರ್ಮಾಣವಾದ ಹಂಪಿಯ ವಿಜಯವಿಠ್ಠಲ, ಬಾಲಕೃಷ್ಣ ಮತ್ತು ಹೊಸಪೇಟೆಯ ದಕ್ಷಿಣದ ಗುಡ್ಡದ ಮೇಲಿರುವ ಜಂಭುನಾಥ ದೇವಾಲಯಗಳಲ್ಲಿ ಕಾಣಬಹುದು. ಸಂಗಮೇಶ್ವರ ದೇವಾಲಯದ ಗರ್ಭಗೃಹದ ಮೇಲೆ ಕಂದಬನಾಗರ ಶೈಲಿಯ ಶಿಖರ ಇದ್ದು, ಇದು ಕೂಡ ಹಂಪಿಯ ಹೇಮಕೂಟದ ಮೇಲಿನ ಕೆಲವು ಮತ್ತು ಕಮಲಾಪುರದಲ್ಲಿರುವ ಕೆಲವು ದೇವಾಲಯಗಳಂತೆ ಕಲ್ಯಾಣ ಚಾಲುಕ್ಯ ಶೈಲಿಯಲ್ಲಿ ವಿಜಯನಗರದ ಪ್ರಾರಂಭದಲ್ಲಿ ಮುಂದುವರೆದಿದೆ. ಮುಖಪುಟ ಮತ್ತು ಸಭಾ ಮಂಟಪದ ಭಾಗದಲ್ಲಿ ಕಕ್ಷಾಸನದ ವ್ಯವಸ್ಥೆ ಮಾಡಲಾಗಿದೆ. ಮುಖಮಂಟಪದ ಮುಂದೆ ಸೋಪಾನಗಳ ಎರಡು ಪಕ್ಕದಲ್ಲಿ ೨ ದೊಡ್ಡ ೫ ಅಡಿ ಎತ್ತರದ ಆನೆಗಳ ಶಿಲಾ ಶಿಲ್ಪಗಳಿವೆ. ಈ ದೇವಾಲಯದ ಸಭಾಮಂಟಪಕ್ಕೆ ಹೊಂದಿಕೊಂಡು, ಅಂತರಾಳ ಮತ್ತು ಗರ್ಭಗೃಹಗಳಿವೆ. ಗರ್ಭಗೃಹ, ಪ್ರವೇಶದ್ವಾರಕ್ಕೆ ಅರ್ಧಕಂಭಗಳು ಇದ್ದು, ಲಲಾಟ ಬಿಂಬ ಅಂತರಾಳ ಮತ್ತು ಗರ್ಭಗೃಹಗಳಿವೆ. ಗರ್ಭಗೃಹ, ಪ್ರವೇಶದ್ವಾರಕ್ಕೆ ಅರ್ಧಕಂಭಗಳು ಇದ್ದು, ಲಾಲಾಟ ಬಿಂಬದಲ್ಲಿ ಗಜಲಕ್ಷ್ಮಿ, ಅದರ ಮೇಲ್ಭಾಗದಲ್ಲಿ ದ್ವಾರಪಾಲಕರ ಉಬ್ಬು ಶಿಲ್ಪಗಳಿವೆ. ಎಡಭಾಗದಲ್ಲಿರುವ ದ್ವಾರಪಾಲಕರ ಕೈಗಳಲ್ಲಿ, ವೈಷ್ಣವ ಚಿಹ್ನೆಗಳಾದ ಶಂಖ, ಚಕ್ರ ಮತ್ತು ಗದೆ ಆಯುಧಗಳು ಇದ್ದು, ಬಲಭಾಗದಲ್ಲಿರುವ ದ್ವಾರಪಾಲಕರ ಕೈಗಳಲ್ಲಿ ಶೈವ ಚಿಹ್ನೆಗಳಾದ ಡಮರು, ತ್ರಿಶೂಲ ಮತ್ತು ಗದೆ ಹಿಡಿದಿರುವುದು ಇಲ್ಲಿ ಕಂಡುಬರುತ್ತಿರುವ ಒಂದು ವೈಶಿಷ್ಟ್ಯವಾಗಿದೆ. ಗರ್ಭಗೃಹದಲ್ಲಿ ೨' ೬" ಎತ್ರ್ರದ ಸುಂದರವಾದ ಪಾಣಿಪೀಠದ ಮೇಲೆ ೧' ೬" ಎತ್ತರದ ಶಿವಲಿಂಗವಿದೆ. ಶಿವಲಿಂಗಕ್ಕೆ ಸಾಮಾನ್ಯಾವಾಗಿ ಎಡಭಾಗದಲ್ಲಿರಬೇಕಾದ ಪ್ರಣಾಳ, ಇಲ್ಲಿ ಬಲಭಾಗದಲ್ಲಿರುವುದು ಇನ್ನೊಂದು ವಿಶೇಷ. ಮೇಲೆ ವಿವರಿಸಿದ ಎರಡು ತರಹದ ವೈಶಿಷ್ಟ್ಯಪೂರ್ಣವಾದ ಈ ಲಿಂಗವನ್ನು ಸಂಗಮೇಶ್ವರನೆಂದು ಕರೆಯುತ್ತಿದ್ದಾರೆ.

ಕೂಡಲ ಸಂಗಮದ ಮತ್ತಿತರ ಕಡೆಯಗಳಲ್ಲಿರುವಂತೆ ಇಲ್ಲಿ ಯಾವ ನದಿಗಳ 'ಸಂಗಮವೂ' ಇಲ್ಲ. ಆದರೆ ಇಲ್ಲಿ ಶೈವ, ಜೈನ ಮತ್ತು ವೈಷ್ಣವ ಧರ್ಮದ ಸಮನ್ವಯತೆ ಯನ್ನು ಈ ಸಂಸ್ಕೃತಿಯ ಸಾಮರಸ್ಯವನ್ನು ಮತ್ತು ಏಕತೆಯನ್ನು ಸಾರುವದೃಷ್ಟಿಯಿಂದ 'ಹರಿಹರ' ರ ಸಂಗಮವನ್ನು ಪ್ರತಿಪಾದಿಸುವುದಕ್ಕೆ ಈ ಲಿಂಗಕ್ಕೆ 'ಸಂಗಮೇಶ್ವರ' ನೆಂದು ಹೆಸರಿಟ್ಟಿದ್ದಾರೆ. ವಿಜಯನಗರದ ಅರಸರು ಸರ್ವ ಧರ್ಮ ಸಮನ್ವಯ ದೃಷ್ಟಿಯುಳ್ಳ ವರು. ಮೊದಲನೆಯ ಬುಕ್ಕರಾಯನು ಜೈನ-ವೈಷ್ಣವರ ಕಲಹವನ್ನು ಸರ್ವರೂ ಮೆಚ್ಚತಕ್ಕ ರೀತಿಯಲ್ಲಿ ಪರಿಹರಿಸಿ, ವಿಜಯನಗರದ ಅರಸರು ಸರ್ವಧರ್ಮಗಳನ್ನು ಸಮನಾಗಿ ಕಾಣುವರೆಂಬ ಭರವಸೆಯನ್ನು ಪ್ರಜೆಗಳಲ್ಲಿ ಮೂಡಿಸಿದ್ದನ್ನು ನಾವು ಈ

ಸಂದರ್ಭದಲ್ಲಿ ಸ್ಮರಿಸಬಹುದು. ಅಂಥಾ ಒಂದು ಧರ್ಮ ಸಾಮರಸ್ಯವನ್ನು ಸಾರುವುದೇ ಈ ದೇವಸ್ಥಾನ ನಿರ್ಮಾಣದ ಉದ್ದೇಶ ಎಂದು ಕಂಡು ಬರುತ್ತದೆ.

ಈ ದೇವಾಲಯದಲ್ಲಿರುವ ಕ್ರಿ.ಶ. ೧೫೪೩ ರ ಸದಾಶಿವಮಹಾರಾಜನ ಕಾಲದ ಶಾಸನದಲ್ಲಿ[೨], ಶ್ರೀ ಕೃಷ್ಣದೇವರಾಯನು ಈ ದೇವಾಲಯಕ್ಕೆ ಚಿನಕುಂಟೆ ಜಾನೆಕುಂಟೆ ಗ್ರಾಮವನ್ನು ದಾನದತ್ತಿ ಬಿಟ್ಟದ್ದನು. ಕಾರಣಾಂತರದಿಂದ ಅದು ನಿಂತುಹೋಗಲು ಗುಂಡರಾಜನ ಅಳಿಯ ನಿಂಗರಾಜನು ಸದಾಶಿವರಾಯರಿಗೆ ಪುಣ್ಯವಾಗಬೇಕೆಂದು, ಅದನ್ನು ಪುನರ್ ದತ್ತಿಯಾಗಿಬಿಟ್ಟದ್ದಲ್ಲದೆ, ಗ್ರಾಮದ ತೋಟವನ್ನು ಮಾನ್ಯವಾಗಿ ಮಾಡಿದ್ದಾನೆ. ಇದೇ ಗುಡಿಯ ಸಭಾ ಮಂಟಪದ ೨ನೇ ಸಾಲಿನಲ್ಲಿ ಎಡಗಡೆ ಇರುವ ಕಂಭದಲ್ಲಿ ಏಳು ಸಾಲುಗಳ ಇನ್ನೊಂದು ಶಾಸನದಲ್ಲಿ[೩] ಸಂಗಮೇಶ್ವರ ದೇವರ ಧರ್ಮಕಾರ್ಯಕ್ಕೆ ಜೂಜಾಡುವವರು ದಾನದತ್ತಿ ಬಿಟ್ಟ ಬಗ್ಗೆ ತಿಳಿಸುತ್ತದೆ.

ರಾಜಧಾನಿ ಮಧ್ಯದಲ್ಲಿದ್ದು ಪ್ರಾಮುಖ್ಯತೆಯನ್ನು ಪಡೆದ ಈ ದೇವಾಲಯ ಕ್ರಿ.ಶ. ೧೭೦೧-೦೨ರಲ್ಲಿ, ಈಗಿನ ಸ್ಥಳಕ್ಕೆ ಗ್ರಾಮ ಸ್ಥಳಾಂತರಗೊಂಡನಂತರ, ಈ ಜನಭರಿತ ವಾಗಿದ್ದ ರಾಜಧಾನಿ ನಿರ್ಜನ ಪ್ರದೇಶವಾಗಿ ಹಾಳುಬಿದ್ದಿದೆ. ಆದ್ದರಿಂದ ನಿಧಿ ಚೋರರು ಈ ಗುಡಿಯಲ್ಲಿ ಗರ್ಭಗೃಹದಲ್ಲಿ ಪೀಠ ಮತ್ತು ಲಿಂಗವನ್ನು ಕಿತ್ತಿಹಾಕಿದ್ದರಿಂದ ಇದು ಪೂರಾ ಹಾಳುಬಿದ್ದಿತ್ತು. ಆ ಹೊಲದ ರೈತನು ಇದನ್ನು ದುರುಪಯೋಗಪಡಿಸಿ ಕೊಂಡಿದ್ದನ್ನು ಕಂಡು, ಇದರ ಐತಿಹಾಸಿಕ ಸಾಂಸ್ಕೃತಿಕ ಮಹತ್ವವನ್ನು ಅರಿತಿದ್ದ ನಾವು ಈ ದೇವಾಲಯವನ್ನು ದುರಸ್ತಿಪಡಿಸಿ, ಕ್ರಿ.ಶ. ೧೯೭೬ರ ಶ್ರಾವಣ ಮಾಸದ ಮೂರನೇ ಸೋಮವಾರದಂದು ಶಿವಲಿಂಗವನ್ನು ಪುನಃ ಪ್ರತಿಷ್ಠಾಪನೆ ಮಾಡಿಸಿ, ಪೂಜಾ ವ್ಯವಸ್ಥೆ ಮಾಡಿದ್ದು, ಅಲ್ಲದೆ ವಿದ್ಯುತ್ ದೀಪದ ವ್ಯವಸ್ಥೆ ಮತ್ತು ಕೊಳವೆ ಭಾವಿಯಿಂದ ನೀರಿನ ವ್ಯನಸ್ಥೆಯನ್ನು ಮಾಡಲಾಗಿದೆ. ಪೂರಾ ಹಾಳುಬಿದ್ದಿದ್ದ ಈ ದೇವಾಲಯವು ಈಗ ತನ್ನ ಮೊದಲಿನ ವೈಭವವನ್ನು ಪಡೆಯುತ್ತಾ ಇದೆ.

ಟಿಪ್ಪಣಿ

೧. ಎಸ್.ಐ.ಐ.೪-೨೬೦ ಕ್ರಿ.ಶ. ೧೧೯೯, ಹಂಪೆ, ಹೊಸಪೇಟೆ ತಾಲ್ಲೂಕು.

೨. ಬಳ್ಳಾರಿ ಜಿಲ್ಲೆಯ ಶಾಸನ ಸಂಗ್ರಹ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ : ಹೊಸಪೇಟೆ ತಾಲ್ಲೂಕು ಕ್ರ.ಸಂ. ೧೬ ಕ್ರಿ.ಶ. ೧೫೪೩ ಆಗಸ್ಟ್ ೯.

೩. ಅದೇ ಕ್ರ.ಸಂ.೧೨, ದಿನಾಂಕ ನಮೂದಿಸಿಲ್ಲ.

ಗ್ರಂಥ ಋಣ

೧. ಬಲ್ಲಕುಂದೆ ಮುನ್ನೂರು ನಾಡಿನ ರಾಜಧಾನಿ ಕುರುಗೋಡು ನಾಡಿನ ಸಾಂಸ್ಕೃತಿಕ ಇತಿಹಾಸ, ಗ್ರಂಥ ಕರ್ತರು. ವೈ. ಹನುಮಂತ ರೆಡ್ಡಿ, ನಿವೃತ್ತ ಇತಿಹಾಸ ಉಪನ್ಯಾಸಕರು, ಬಳ್ಳಾರಿ ೨೦೦೩.

೨೮. ಬಾರಕೂರು ರಾಜ್ಯದಲ್ಲಿ ವಿಜಯನಗರ ಕಾಲದ ನೀರಾವರಿ ವ್ಯವಸ್ಥೆ

ಡಾ.ಬಿ.ಜಗದೀಶ ಶೆಟ್ಟಿ

ತುಳುನಾಡಿನ ರಾಜಕೀಯ ಹಾಗು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕೇಂದ್ರ ಸ್ಥಾನ ವಾಗಿದ್ದ ಬಾರಕೂರು ಕರ್ನಾಟಕದ ಇತಿಹಾಸದಲ್ಲಿ ಬಹಳ ಮಹತ್ವವನ್ನು ಹೊಂದಿರುವ ಊರು. ಕ್ರಿ.ಶ.೧೩೩೬ ರ ನಂತರ ವಿಜಯನಗರದ ಆಡಳಿತ ತುಳುನಾಡಿ ನಲ್ಲಿ ಆರಂಭ ವಾದಾಗ ಅದು ಪ್ರಾಂತದ ಹೆಸರೂ ಆಯಿತಲ್ಲದೆ ಪ್ರಾಂತೀಯ ರಾಜಧಾನಿ ಯಾಯಿತು. ಅಲ್ಲದೆ ಬಾರಕೂರು ವಾಣಿಜ್ಯ ಕೇಂದ್ರವಾಗಿಯೂ ಪ್ರಸಿದ್ಧಿಯನ್ನು ಪಡೆದಿದ್ದರಿಂದ ವಿಜಯನಗರದ ಒಟ್ಟು ಬೆಳವಣಿಗೆಯಲ್ಲಿ ತನ್ನದೇ ಆದ ಕೊಡುಗೆಯನ್ನು ಸಲ್ಲಿಸಿದೆ.

ವಿಜಯನಗರ ಕಾಲದಲ್ಲಿ ಬಾರಕೂರು ರಾಜ್ಯದ ವ್ಯವಸಾಯೋತ್ಪನ್ನ ಹಾಗೂ ಆರ್ಥಿಕ ಸ್ಥಿತಿಗಳ ಮೇಲೆ ಇತರ ಅಂಶಗಳೊಂದಿಗೆ ನೀರಾವರಿ ವ್ಯವಸ್ಥೆ ಹೆಚ್ಚಿನ ಪ್ರಭಾವ ವನ್ನೂ ಬೀರಿದೆ. ಹಾಗಾಗಿ ಅದರ ಅಧ್ಯಯನ ಹೆಚ್ಚು ಮಹತ್ವವನ್ನು ಪಡೆದಿದೆ. ಬಾರಕೂರು ರಾಜ್ಯದಲ್ಲಿ ಮಳೆಗೆ ಯಾವುದೇ ರೀತಿಯ ಕೊರತೆ ಆಗ ಇರಲಿಲ್ಲವೆನ್ನ ಬಹುದು. ಅದು ಖಂಡಿತ ವ್ಯವಸಾಯದ ಬೆಳವಣಿಗೆಗೆ ಹೆಚ್ಚು ಸಹಕಾರಿಯಾಯಿತು. ಆದರೆ ರೈತರು ಮಳೆಯ ಮೇಲೆ ಸಂಪೂರ್ಣ ಅವಲಂಬಿತವಾಗಿರುವುದು ಸಾಧ್ಯವಿರಲಿಲ್ಲ. ಕೆಲವೊಮ್ಮೆ ಮಳೆ ಅನಿಶ್ಚಿತವಾಗಿತ್ತು. ಬೇಕಾದಷ್ಟು ಬರುತ್ತಿರಲಿಲ್ಲ, ಮತ್ತು ಎಲ್ಲ ಪ್ರದೇಶಗಳಲ್ಲಿ ಏಕ ಪ್ರಕಾರದಲ್ಲಿ ಮಳೆಯಾಗುತ್ತಿರಲಿಲ್ಲ.[೧] ಮಳೆ ಕಡಿಮೆಯಾದ ದಿನಗಳಿಗಾಗಿ ಬೇರೆ ವ್ಯವಸ್ಥೆಯನ್ನು ಮಾಡಬೇಕಾಗಿತ್ತು. ಹೊಳೆ, ಕಾಲುವೆ, ಭಾವಿ ಮತ್ತು ಕೆರೆ ಯಶಸ್ವಿ ವ್ಯವಸಾಯಕ್ಕೆ ಸಹಾಯ ಮಾಡುತ್ತಿದ್ದವು. ಈ ವ್ಯವಸ್ಥೆ ಖಾಸಗಿಯ ವರಿಂದ ಹಾಗೂ ಸರಕಾರದಿಂದ ಆಗುತ್ತಿತ್ತು. ನೀರಾವರಿ ಅನುಕೂಲತೆ ಭೂಮಿಯ ಉತ್ಪನ್ನಗಳ ಮೇಲೆ ಪ್ರಭಾವ ಬೀರುವುದರೊಂದಿಗೆ, ತೆರಿಗೆ ಮೇಲೂ ಪ್ರಭಾವ ಹೊಂದಿತ್ತು. ಒಟ್ಟಿನಲ್ಲಿ ಜನರ ಉದ್ಧಾರ ಹಾಗೂ ಸರಕಾರದ ಆದಾಯ ಇವುಗಳು ನೀರಾವರಿ ವ್ಯವಸ್ಥೆಯನ್ನು ಹೊಂದಿದ್ದವು. ಹಾಗಾಗಿ ಸರಕಾರ ನೀರಾವರಿ ಯೋಜನೆಗಳ ಬಗ್ಗೆ, ನೀರಿನ ವ್ಯವಸ್ಥಿತ ಹಂಚಿಕೆ ಬಗ್ಗೆ ಹೆಚ್ಚಿನ ಆಸಕ್ತಿ ತಾಳಿತ್ತು.

ಬೃಹತ್ ನೀರಾವರಿ ವ್ಯವಸ್ಥೆಯ ಜವಬ್ದಾರಿಯನ್ನು ಸರಕಾರವೇ ವಹಿಸಿಕೊಳ್ಳುತ್ತಿತ್ತು ಅಲ್ಲದೆ ಖಾಸಗಿ ವ್ಯಕ್ತಿಗಳು ಅಂತಹ ಕೆಲಸ ಮಾಡಿದಾಗ ಸರಕಾರ ಕೆಲವೊಂದು

ಸವಲತ್ತುಗಳನ್ನು ಕೊಡುತ್ತಿತ್ತು ಮಾತ್ರವಲ್ಲ ಅಂತಹ ನೀರಾವರಿ ಯೋಜನೆಯ ಪ್ರಯೋಜನ ಪಡೆದ ಭೂಮಿಗೆ ತೆರಿಗೆಯಲ್ಲಿ ವಿನಾಯತಿಯನ್ನು ಕೊಡುತ್ತಿತ್ತು.[೨]

ವಿಜಯನಗರ ಆಡಳಿತ ಕಾಲದಲ್ಲಿ ಬಾರಕೂರು ರಾಜ್ಯದಲ್ಲಿ ಅವರ ಆಡಳಿತ ಮೊದಲು ಇದ್ದ ವ್ಯವಸ್ಥೆಯನ್ನು ಮುಂದುವರಿಸಲಾಯಿತು. ವಿಜಯನಗರದ ದೊರೆ ಒಂದನೆಯ ಬುಕ್ಕನ ಶಾಸನ ಬಾರಕೂರು ಮೂಡುಕೇರಿಯ ತುಂಬುಲಕೆರೆಯ ಬಗ್ಗೆ ತಿಳಿಸುತ್ತದೆ. ಈಗಲೂ ಸಹ ಈ ಕೆರೆ ಹೆಚ್ಚಿನ ವ್ಯವಸಾಯ ಯೋಗ್ಯ ಗದ್ದೆಗಳಿಗೆ ನೀರಿನ ಸೌಲಭ್ಯವನ್ನು ನೀಡುತ್ತಿದೆ.[೩] ಇದೇ ಶಾಸನ ನದಿಯನ್ನು ನೀರಾವರಿ ಮೂಲವಾಗಿ ಉಪಯೋಗಿಸಿದ ಬಗ್ಗೆ ತಿಳಿಸುತ್ತದೆ.

ಕೆರೆಯಲ್ಲದ,[೪] ಭಾವಿ,[೫] ತೋಡು,[೬] ಗುಮ್ಮೆ,[೭] ಸಾಲು[೮] ಮತ್ತು ಹೊಳೆಗಳು[೯] ನೀರಾವರಿ ಸೌಲಭ್ಯವನ್ನೂ ಒದಗಿಸುತ್ತಿದ್ದವು. ಹೊಳೆ, ಸಾಲು, ತೋಡು ಮುಂತಾದವು ಗಳು ವಿಭಿನ್ನವಾದ ನೀರಾವರಿ ಸೌಲಭ್ಯಗಳು ಏಕೆಂದರೆ ಅವುಗಳು ಕೃತಕ ವ್ಯವಸ್ಥೆಯಲ್ಲ. ಕೆರೆ ಎನ್ನುವುದು ಆಸ್ತಿಯ ಅವಿಭ್ಯಾಜ್ಯ ಅಂಗ. ಶಾಸನಗಳು ಕಲ್ಲು ಕೆರೆ[೧೦] ಮತ್ತು ಮಣ್ಣು ಕೆರೆಯ[೧೧] ಬಗ್ಗೆ ತಿಳಿಸುತ್ತವೆ. ಕಲ್ಲು ಕೆರೆ ಎಂದರೆ ಮುರಕಲ್ಲಿನಿಂದ ಸುತ್ತಲೂ ಕಟ್ಟಿರುವ ಬಾವಿ. ಮಣ್ಣುಕೆರೆ ಎನ್ನುವುದು ಗಟ್ಟಿಯಾದ ಮುರಕಲ್ಲು ಇರುವಲ್ಲಿ ತೋಡಿರುವು ಸುತ್ತಲೂ ಕಲ್ಲು ಕಟ್ಟಿ ಗಟ್ಟಿ ಮಾಡದೆ ಇರುವ ಕೆರೆ. ಈ ಹೆಸರುಗಳು ಕೆರೆಯನ್ನು ಕಟ್ಟುವಲ್ಲಿನ ರೀತಿಯ ಅಧ್ಯಯನಕ್ಕೂ ಸಹಕಾರಿಯಾಗಿದೆ. ಕೆರೆಯ ಹೆಸರು ಗಳೂ ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿದ್ದು ಅವುಗಳು ಯಾವ ವ್ಯಕ್ತಿಗೆ ಅಥವಾ ಸಂಸ್ಥೆಗೆ ಸೇರಿದ್ದೆಂದು ತಿಳಿಯಲು ಸಹಾಯ ಮಾಡುತ್ತವೆ. ಉದಾ. ಸೋಮಣ್ಣ ಸೆಟ್ಟಿಯ ಕೆರೆ[೧೨] ಮಹಾದೇವರ ಕೆರೆ[೧೩] ಕೆಲ್ಲಂಗೆರೆ[೧೪] ಸೋಮಣ್ಣ ಕೆರೆ ಅವನು ಕಟ್ಟಿಸಿದ, ಆಥವಾ ಯಜ ಮಾನ ಮಹಾದೇವರ ಕೆರೆ ಎನ್ನುವುದು ದೇವಸ್ಥಾನ ಕೆರೆ. ಕೆಲ್ಲನು ಕೆರೆಯ ನಿರ್ಮಾಣಕ್ಕೆ ಕಾರಣನಾಗಿದ್ದರಿಂದ ಅದು ಕೆಲ್ಲಂಗೆರೆ ಎಂಬುದಾಗಿ ಕರೆಯಲ್ಪಟ್ಟಿದೆ. ಮೇಲಿನ ಉದಾ ಹರಣೆಗಳು ನೀರಾವರಿ ವ್ಯವಸ್ಥೆಯಲ್ಲಿ ಖಾಸಗಿಯವರ ಪ್ರಯತ್ನವನ್ನೂ ತಿಳಿಯಲು ಸಹಕಾರಿಯಾಗಿವೆ.

ದೇವಸ್ಥಾನಗಳಲ್ಲಿನ ಕೆರೆಗಳು ಸಹ ನೀರಾವರಿ ಸೌಲಭ್ಯವನ್ನು ನೀಡಿದ್ದವು. ಈ ಕೆರೆಗಳಲ್ಲಿ ವಿವಿಧ ಮಟ್ಟಗಳಲ್ಲಿ ನೀರು ಗದ್ದೆಗಳಿಗೆ ಹೋಗಲು ವ್ಯವಸ್ಥೆಯಿತ್ತು. ಕ್ರಿ.ಶ. ೧೩೬೭ರ ಕಚ್ಚೂರು ಶಾಸನ[೧೫] ಮಠದ ಕೆರೆಯ ನೀರು ಹೊಲಕ್ಕೆ ತಕ್ಕ ನೀರು ಎಂದು ಹೇಳಿರುವುದು ಮಠದ ಕೆರೆ ಮತ್ತು ನೀರಾವರಿ ವ್ಯವಸ್ಥೆಯ ಮೇಲೆ ಬೆಳಕು ಚೆಲ್ಲುತ್ತದೆ. ಬಸ್ರೂರು ದೊಡ್ಡ ಕೆರೆ ಕಟ್ಟೆಯ ಶಾಸನ (ಕ್ರಿ.ಶ.೧೪೭೨) ಮಹಾದೇವರ ಕೆರೆಯ ನೀರು ಯಾವ ರೀತಿಯಲ್ಲಿ ತೋಡುಗಳ ಮೂಲಕ ಹೊರಹೋಗುತ್ತಿತ್ತು ಎಂಬುದನ್ನು ತಿಳಿಸುತ್ತದೆ.[೧೬] ಬಾರಕೂರಿನ ಪಂಚಲಿಂಗೇಶ್ವರ ದೇವಸ್ಥಾನದ ಶಾಸನದಲ್ಲಿ ಉಲ್ಲೇಖಿ ಸಿರುವ ಹೇಮ್ಮಣ್ಣ ಕೆರೆಯಲ್ಲಿ ಮಣ್ಣಿನ ಗುಣವನ್ನು ತಿಳಿಸುತ್ತದೆ.[೧೭] ವಿಜಯನಗರ ಕಾಲದಲ್ಲಿ ಹಲವಾರು ಹೊಸಕೆರೆಗಳು ನಿರ್ಮಾಣವಾದವು. ಉದಾ: ಕಡಸಾಲ ಕೆರೆ

ನೀಡು ಹೊಲಿಕೆ ಬಂದುದು ಇದು ಕಡಸಾಲು ಕೆರೆಯ ನೀರನ್ನು ವ್ಯವಸಾಯಕ್ಕೆ ಉಪಯೊಗಿಸುತ್ತಿದ್ದುದಕ್ಕೆ ಸಾಕ್ಷಿ.[೧೮] ನೀರಿನ ಕೊರತೆ ಇದ್ದಾಗ ಹೊಸಕೆರೆ ಗಳನ್ನು ಕಟ್ಟಿಸುತ್ತಿದ್ದರು. ಶಾಸನಗಳಲ್ಲಿ ಹೊಸಕೆರೆ ಎಂಬ ಉಲ್ಲೇಖ ಇದನ್ನು ಪುಷ್ಟೀಕರಿಸುತ್ತದೆ.[೧೯] ಅದೂ ಅಲ್ಲದೆ ಇದು ನೀರಾವರಿ ಸೌಲಭ್ಯದ ವಿಸ್ತರಣೆಯೂ ಹೌದು. ನೀರಾವರಿ ಕೆರೆಗಳ ಅಧ್ಯಯನದಿಂದ ಹೆಚ್ಚು ಹೆಚ್ಚು ವಿಷಯಗಳನ್ನು ತಿಳಿದುಕೊಳ್ಳಲು ಸಾಧ್ಯ. ಉದಾ : ಕೇಸನಕೆರೆ (ಕೇಶವಯ್ಯನಕೆರೆ) ಕೊಳಕೆಕೆರೆ (ಕೊಳಕೆ ಎಂಬ ಮೂರನೇ ಬೆಳೆಗೆ ನೀರೊದಗಿಸುತ್ತಿದ್ದ ಕೆರೆ) ಶೇಡಿಕೆರೆ (ಬಿಳಿಯ ಶೇಡಿ ಮಣ್ಣಿದ್ದ ಕೆರೆ) ಹುಂತದ ಕೆರೆ (ಹುಂತದ ಬಳಿ ಇದ್ದ ಕೆರೆ) ಅರಸಿಕೆರೆ ಅರಸಿಯಿಂದ ನಿರ್ಮಾಣವಾದ ಕೆರೆ.[೨೦]

ಗುಮ್ಮೆ ಇನ್ನೊಂದು ನೀರಾವರಿ ಮೂಲ. ಗುಮ್ಮೆ ಎಂದರೆ ಸಣ್ಣಕೆರೆ. ಕೆಲವೇ ಗದ್ದೆಗಳ ನೀರಿನ ಅವಶ್ಯಕತೆಗಳನ್ನು ಅವು ಪೂರೈಸುತ್ತಿದ್ದವು.[೨೧] ಹಳ್ಳವು ಸಹ ವ್ಯವಸಾಯಕ್ಕೆ ಅನುಕೂಲಕರವಾದ ನೀರಾವರಿಯ ಮೂಲವಾಗಿತ್ತು. ಇದು ನಿರ್ಮಿತವಾದದ್ದಲ್ಲ. ತನ್ನಿಂದ ತಾನೆ ಆಳವಾದ ಗುಂಡಿಯಲ್ಲಿ ನೀರು ಸಂಗ್ರಹಣೆಯಾಗಿರುವುದು. ಬಾವಿ ಬಹಳ ಮುಖ್ಯವಾದ ನೀರಾವರಿ ಮೂಲ.[೨೨] ಇದು ಸಾಮಾನ್ಯವಾಗಿ ಕುಡಿಯುವ ನೀರಿಗಾಗಿ ಇರುವ ಮೂಲ. ಆದರೆ ಅದನ್ನು ವ್ಯವಸಾಯಕ್ಕಾಗಿಯೂ ಉಪಯೋಗಿಸುತ್ತಿದ್ದರು. ಡಾ.ಕೆ.ಎಸ್.ಶಿವಣ್ಣರವರು ಒಟ್ಟು ಕರ್ನಾಟಕದ ವಿಜಯ ನಗರ ಕಾಲದ ನೀರಾವರಿ ವ್ಯವಸಾಯದ ಬಗ್ಗೆ ಹೇಳುವಾಗಲೂ ಬಾವಿಯನ್ನು ನೀರಾವರಿ ಮೂಲವಾಗಿ ಉಪಯೋಗಿಸಿದ್ದನ್ನು ಹೇಳುತ್ತಾರೆ. ಅಲ್ಲದೆ ಬಾವಿಗಳು ಖಾಸಗಿ ವ್ಯಕ್ತಿ ಗಳಿಂದ ನಿರ್ಮಿತವಾಗಿ ಕಾಪಾಡಲ್ಪಡುತ್ತಿತ್ತು ಎಂಬ ಮಾತನ್ನು ತಿಳಿಸುತ್ತಾರೆ. ತುಳು ನಾಡಿನಲ್ಲಿ ಭೂಹಿಡುವಳಿ ಸಣ್ಣಮಟ್ಟದ್ದಾದ್ದರಿಂದ ಅವರಿಗೆ ಸಣ್ಣ ಪ್ರಮಾಣದ ನೀರಾವರಿ ಸೌಲಭ್ಯ ಸಾಕಾಗಿತ್ತು. ಹಾಗಾಗಿ ಬಾವಿಗಳನ್ನು ಅಥವಾ ಕೆರೆಗಳನ್ನು ಹೆಚ್ಚಾಗಿ ಉಪಯೋಗಿಸಿ ಕೊಂಡಿರಬೇಕು.

ಬಾರಕೂರು ರಾಜ್ಯದ ವಿಜಯನಗರ ಶಾಸನದಲ್ಲಿ ತೋಡುಗಳ ಉಲ್ಲೇಖ ಆಗಾಗ ಬರುತ್ತದೆ. ಇವು ಸಣ್ಣ ಜಲಾಶಯಗಳಿಂದ ಗದ್ದೆಗಳಿಗೆ ನೀರು ಹರಿಯಲು ಇರುವ ವ್ಯವಸ್ಥೆ. ಮಳೆಗಾಲದಲ್ಲಿ ಹೆಚ್ಚಿನ ನೀರು ತೋಡುಗಳ ಮೂಲಕ ಹರಿಯುತ್ತಿತ್ತು. ಉದಾ : ಸೂರಾಲಿನ ಶಾಸನದಲ್ಲಿ ಕಲ್ಲುಗದ್ದೆಯ ತೋಡಿಂದಂ ಬಡಗಲು; ಬೈಂದೂರು ಶಾಸನದಲ್ಲಿ ಮೂಡಲು ಹರಿನ ತೋಡುಗಡಿ; ಬೇರೆ ಶಾಸನಗಳಲ್ಲಿಯೂ ಇಂತಹ ಉಲ್ಲೇಖ ಬರುತ್ತದೆ. ಆದರೆ ಬೈಂದೂರಿನ ಶಾಸನವೊಂದರಲ್ಲಿ ಗೋಪು ನಾಯಕನ ಬಾಳಿಗೆ ನೀರು ಹರಿವು ತೋಡಿಂದಂ ಎಂಬ ಉಲ್ಲೇಖ ಬಹಳ ಮುಖ್ಯವಾಗುತ್ತದೆ. ಸಣ್ಣದಿದ್ದರೆ ಕೈತೋಡು ಎಂದು ಕರೆಯುತ್ತಾರೆ. ಬೀಜ ಬಿತ್ತುವಾಗ ಗದ್ದೆಗಳಲ್ಲಿನ ಹೆಚ್ಚಿನ ನೀರನ್ನು ಹೊರಗೆ ಬಿಡಲು ಅವುಗಳು ಸಹಾಯವಾಗುತ್ತಿದ್ದವು.

ಶಾಸನಗಳಲ್ಲಿ ಕಂಡು ಬರುವ ಇನ್ನೊಂದು ವಿಧವಾದ ನೀರಾವರಿ ಮೂಲವೆಂದರೆ ಓಣಿ ಅಥವಾ ನೀರು ಹರಿಯುವ ಓಣಿ. ಅದು ಜನರಿಗೆ ಮತ್ತು ಪ್ರಾಣಿಗಳಿಗೆ

ಉಪಯೋಗವಾಗುತ್ತಿತ್ತು. ಅಲ್ಲದೆ ಮಳೆಗಾಲದಲ್ಲಿ ಅದರಲ್ಲೇ ನೀರು ಹರಿಯುತ್ತಿತ್ತು. ಹೊಳೆಗಳು ಸಹ ನೀರಾವರಿ ಮೂಲವಾಗಿ ಬೇಸಾಯಗಾರರಿಗೆ ವರದಾನವಾಗಿದ್ದವು. ಶಾಸನಗಳು ಹೊಳೆಗಳ ಬಗ್ಗೆ ಉಲ್ಲೇಖಿಸುತ್ತವೆ. ಕರಾವಳಿತೀರ ಪ್ರದೇಶವನ್ನು ಹೊರತು ಪಡಿಸಿ ಉಳಿದ ಕಡೆ ಹೊಳೆಯನ್ನು ಅವಲಂಬಿಸಿದ್ದರು. ಕರಾವಳಿಯಲ್ಲಿ ಹೊಳೆಯ ನೀರಿನ ನಿರಂತರ ಉಪಯೋಗ ಸಾಧ್ಯವಿರಲಿಲ್ಲ. ಕಾರಣ ಸಮುದ್ರದ ಉಪ್ಪು ನೀರು ಮುಖ್ಯವಾಗಿ ಬೇಸಗೆ ಕಾಲದಲ್ಲಿ ಹೊಳೆಯಲ್ಲಿ ಹರಿದು ಬರುತ್ತಿದ್ದುದು.

ಶಾಸನಗಳಲ್ಲಿ ಹೇಳದ ಸಾಲುಗಳ ಅಂದರೆ ನದಿಯ ಸಣ್ಣ ಸಣ್ಣ ಶಾಖೆಗಳು ಅವೂ ನೀರಾವರಿಗೆ ಸಹಾಯಕವಾಗಿದ್ದವು. ಅವುಗಳೆಂದರೆ ದಣ್ಣೀರ ಸಾಲು ಉಪ್ಪಿ ನಾಗರದ ಸಾಲು ಇನ್ನೊಂದು ನೀರಾಶ್ರಯವೆಂದರೆ ಕಟ್ಟು ಅಥವಾ ಕಟ್ಟ. ಸಾಲುಗಳು, ಸಣ್ಣ ನದಿಗಳು ಮತ್ತು ತೋಡುಗಳಲ್ಲಿನ ಹರಿಯುವ ನೀರನ್ನು ಕಟ್ಟುಗಳನ್ನೂ ಕಟ್ಟಿ ತಡೆಯುವ ಕ್ರಮ ಬಾರಕೂರು ರಾಜ್ಯದಲ್ಲಿ ಕಂಡುಬರುತ್ತದೆ. ಇವುಗಳ ಸಣ್ಣ ತಡೆ ಗಳು. ಇವುಗಳ ಉಪಯೋಗವಾಗುತ್ತಿದ್ದುದು ಎರಡನೇ ಬೆಳೆಗೆ ಅಥವಾ ಸುಗ್ಗಿಗೆ. ಶಾಸನಗಳಲ್ಲಿ ಇದಕ್ಕೆ ಹಲವು ಉಲ್ಲೇಖಗಳು ಬರುತ್ತವೆ. ಉದಾ: ಕಟ್ಟಿನ ಸಮೀಪ ಇರುವ ಗದ್ದೆ ಕುಂದಾಪುರ ತಾಲೂಕಿನ ಬಿಜೂರು ಶಾಸನದಲ್ಲಿ ಕಟ್ಟಿನಿಂದ ಹರಿಯುವ ನೀರಿನ ಉಲ್ಲೇಖವಿದೆ.

ಈ ನೀರಾವರಿ ವ್ಯವಸ್ಥೆಗೆ ಹೆಚ್ಚಿನ ಹಣದ ಅವಶ್ಯಕತೆ ಇದ್ದಾಗ ಸರಕಾರ ಭಾಗಿ ಯಾಗುತ್ತಿತ್ತು. ಉದಾ. ಬಾಚಣ್ಣ ಒಡೆಯ ಬಾರಕೂರಿನ ರಾಜ್ಯಪಾಲನಾಗಿದ್ದಾಗ ಕ್ರಿ.ಶ. ೧೪೦೬ ರಲ್ಲಿ ನಿರ್ಮಿಸಿದ ಜಲಾಶಯ ಅಲ್ಲದೆ ಸರಕಾರ ಮದಗಗಳ ನಿರ್ಮಾಣದಲ್ಲಿ ಭಾಗಿಯಾಗುತ್ತಿತ್ತು. ಮೂರುಕಡೆಗಳಲ್ಲಿ ಎತ್ತರದ ಜಾಗವಿದ್ದು ಒಂದು ಕಡೆ ಸಮತಟ್ಟಾದಜಾಗವಿದ್ದಾಗ ಸಮತಟ್ಟು ಇರುವ ಜಾಗದಲ್ಲಿ ಕಟ್ಟುಕಟ್ಟಿ ಮದಗಗಳನ್ನು ನಿರ್ಮಾಣಮಾಡುತ್ತಿದ್ದರು. ಅದಕ್ಕೆ ಎತ್ತರದ ಜಾಗಗಳಿಂದ ನೀರು ಬರುವ ವ್ಯವಸ್ಥೆ ಮಾಡಲಾಗುತ್ತಿತ್ತು.

ಕೆಲವು ಕಡೆ ಗದ್ದೆಗಳ ಮೂಲಕವೇ ನೀರು ಬಿಡುವ ಕ್ರಮವಿದ್ದು ಅಂತಹ ಗದ್ದೆ ಗಳನ್ನು ನೀರುಪಾಡುವಿನ ಗದ್ದೆ ಎಂಬುದಾಗಿ ಕರೆಯುತ್ತಿದ್ದರು. ಅಂತಹ ಮದಗಗಳು ಮಳೆಗಾಲದಲ್ಲಿ ಹಾಗೂ ಮಳೆನಿಂತು ಸ್ವಲ್ಪ ಕಾಲದವರೆಗೆ ನೀರನ್ನು ತಡೆದು ನಿಲ್ಲಿಸುವ ಸಾಮರ್ಥ್ಯ ಹೊಂದಿದ್ದವು. ಇವುಗಳಿಂದ ನೀರು ಹೊರ ಹೋಗಲು ಬೇರೆ ಬೇರೆ ಮಟ್ಟದಲ್ಲಿ ತೂಬುಗಳು ಇರುತ್ತಿದ್ದವು. ಇದಕ್ಕೆ ಉತ್ತಮ ಉದಾಹರಣೆ ಚಾಂತಾರು ಮದಗ. ಇದು ವಿಜಯನಗರಕಾಲದ ನೀರಾವರಿ ಯೋಜನೆಯ ರಚನಾ ಸಾಮರ್ಥ್ಯಕ್ಕೆ ಉದಾಹರಣೆ. ಶಾಸನದ ಪ್ರಕಾರ ಇದು ಕ್ರಿ.ಶ.೧೪೪೫ ರ ಮೊದಲು ರಚಿತವಾಯಿತು. ಇದು ಹಲವಾರು ಎಕರೆ ಪ್ರದೇಶಗಳಿಗೆ ನೀರುಣಿಸುತ್ತಿತ್ತು. ಹಾಗೆಯೇ ವ್ಯವಸಾಯೋ ತ್ಪನ್ನ ಹೆಚ್ಚಿಸಲು ಸಹಕಾರಿಯಾಯಿತು.

ಅಲ್ಲದೆ ವಿಜಯನಗರ ಕಾಲದ ಬಾರಕೂರು ರಾಜ್ಯದ ಶಾಸನಗಳು ನೀರಾವರಿ ವ್ಯವಸ್ಥೆಯ ನಿರ್ವಹಣೆ ಮತ್ತು ಇದಕ್ಕೆ ಸಂಬಂಧಿಸಿದ ನೀತಿನಿಯಮಗಳ ಬಗ್ಗೆಯೂ ತಿಳಿಸುತ್ತವೆ. ಹೊಸಾಳದ ಒಂದು ಶಾಸನ ಕೆರೆಯ ನೀರನ್ನು ಯಾವ ರೀತಿಯಲ್ಲಿ ಇಟ್ಟು ಕೊಳ್ಳಬೇಕು ಮತ್ತು ಕೆಸರನ್ನು ಯಾವಾಗ ತೆಗೆಯಬೇಕೆಂಬ ಬಗ್ಗೆ ತಿಳಿಸುತ್ತದೆ.[೧೦] ಇದು ಸಾರ್ವಜನಿಕ ಕೆರೆ ಆದ್ದರಿಂದ ಸ್ಥಳೀಯಾಡಳಿತ ಇದಕ್ಕೆ ವ್ಯವಸ್ಥೆ ಮಾಡಿತ್ತು. ಅದರೂ ಬಸ್ರೂರಿನ ದೊಡ್ಡ ಕೆರೆಕಟ್ಟೆ ಶಾಸನ ಕೆರೆಯ ಕಾಲುಭಾಗ ನೀರು ತೋಟ ಗಳಿಗೆ ಹೋಗಬೇಕು. ಉಳಿದ ನೀರು ಗದ್ದೆಗಳಿಗೆ ಎಂಬುದಾಗಿ ಸೂಚ್ಯವಾಗಿ ಹೇಳಿದೆ. ಅಂದರೆ ಆಗ ಭತ್ತದ ಬೆಳೆಗೆ ಹೆಚ್ಚು ಪ್ರಾಮುಖ್ಯತೆ ಇದ್ದುದು ಸ್ಪಷ್ಟವಾಗುತ್ತದೆ. ಬಾರಕೂರಿನ ಇನ್ನೊಂದು ಶಾಸನದಲ್ಲಿ ನಾರಣ ಚುಯ್ಯನ ಮಠದ ಕೆರೆಯಿಂದ ನೀರು ಯಾವ ರೀತಿ ಹಂಚಿಕೆಯಾಗಬೇಕೆಂಬ ಉಲ್ಲೇಖವಿದೆ. ಇದರಿಂದ ೧/೩ ಭಾಗ ನೀರು ಹೋಗಬೇಕಾದ ಭೂಮಿ ಗಡಿಯನ್ನು ಹೇಳಲಾಗಿದೆ. ಈ ರೀತಿಯ ಕಟ್ಟು ಪಾಡುಗಳ ಉಲ್ಲೇಖವಿರುವ ಇನ್ನೊಂದು ದಾಖಲೆಯಲ್ಲಿ ಕೆರೆಯ ನೀರು ಹಾಯವ ವೊಕ್ಕಲು ಸಾಮ್ಯ ಸಹವಾಗಿ ಎಂದು ಹೇಳಲಾಗಿದೆ. ಇವೆಲ್ಲ ಉದಾಹರಣೆಗಳು ಸರಕಾರ ಹಾಗೂ ಖಾಸಗಿ ವ್ಯಕ್ತಿಗಳು ನೀರಿನ ಹಂಚಿಕೆ ಬಗ್ಗೆ ಯಾವ ರೀತಿ ಗಮನ ಹರಿಸುತ್ತಿದ್ದರು ಎಂಬುದನ್ನು ವಿವರಿಸುತ್ತದೆ.

ಒಟ್ಟಿನಲ್ಲಿ ವ್ಯವಸಾಯ ಪ್ರಧಾನವಾಗಿದ್ದ ವಿಜಯನಗರ ಆರ್ಥಿಕ ವ್ಯವಸ್ಥೆಯಲ್ಲಿ ನೀರಾವರಿ ಸೌಲಭ್ಯದ ಕಾಳಜಿ ತುಂಬಾ ಇತ್ತು ಎನ್ನುವುದು ಸ್ಪಷ್ಟ.

ಟಿಪ್ಪಣಿಗಳು

೧. ಎ.ಆರ್.ಎಸ್.ಐ.ಇ.೧೯೩೦-೩೧,೩೩೮.

೨. ಮಹಾಲಿಂಗಮ್ ಟಿ.ವಿ.ರೀಡಿಂಗ್ಸ್ ಇನ್ ಸೌತ್ ಇಂಡಿಯನ್‌ಹಿಸ್ಟರಿ (ದೆಹಲಿ ೧೯೭೭) ಪು.೧೪೯.

೩. ಎಸ್.ಐ.ಐ.ಸಂಪುಟ ೭ ಸಂಖ್ಯೆ-೩೨೨.

೪. ಎಸ್.ಐ.ಐ.ಸಂಪುಟ ೯. ಭಾಗ.೨. ಸಂಖ್ಯೆಗಳು ೩೬೪, ೪೨೮, ೪೨೬ ಸಂಪುಟ ೭. ಸಂಖ್ಯೆಗಳು ೩೪೨, ೩೫೭, ೧೯೪, ೩೮೫.

೫. ಎಸ್.ಐ.ಐ.ಸಂ.೯. ಸಂಖ್ಯೆಗಳು ೪೧೯, ೪೨೬.

೬. ಪೂರ್ವೋಕ್ತ. ಸಂ.೭. ಸಂಖ್ಯೆಗಳು ೩೪೬,೩೭೧, ೩೭೨.

೭. ಪೂರ್ವೋಕ್ತ. ಸಂಖ್ಯೆಗಳು ೩೪೬.

೮. ಪೂರ್ವೋಕ್ತ. ಸಂ.೯. ಭಾಗ ೨, ಸಂಖ್ಯೆ ೪೬೪.

೯. ಪೂರ್ವೋಕ್ತ.

೧೦. ಪೂರ್ವೋಕ್ತ. ಸಂ.೨೭. ಸಂಖ್ಯೆ ೪೯.

೧೧. ಪೂರ್ವೋಕ್ತ. ಸಂ.೭. ಸಂಖ್ಯೆ ೩೭೫.

೧೨. ಪೂರ್ವೋಕ್ತ. ಸಂಖ್ಯೆ ೩೭೭.

೧೩. ಪೂರ್ವೋಕ್ತ. ಸಂ.೯. ಭಾಗ.೨.೪೬೪.

೧೪. ಪೂರ್ವೋಕ್ತ. ಸಂ.೭. ಸಂಖ್ಯೆ ೩೪೪.

೧೫. ಪೂರ್ವೋಕ್ತ. ಸಂ.೨೭. ಸಂಖ್ಯೆ ೭೦.

೧೬. ಪೂರ್ವೋಕ್ತ. ಸಂ.೯. ಭಾಗ ೨. ಸಂಖ್ಯೆ ೪೬೪.

೧೭. ಪೂರ್ವೋಕ್ತ. ಸಂ.೭. ಸಂಖ್ಯೆ ೩೮೫.

೧೮. ಪೂರ್ವೋಕ್ತ. ಸಂಖ್ಯೆ ೩೫೬.

೧೯. ಪೂರ್ವೋಕ್ತ. ಸಂಖ್ಯೆ ೩೫೭.

೨೦. ಇವು ಈಗಲೂ ಪ್ರಚಲಿತವಿರುವ ಹೆಸರುಗಳು. ಅಂದರೆ ಹೊಸ ಹೆಸರುಗಳಾಗಿರದೆ ಇತಿಹಾಸಕಾಲದಿಂದ ಮುಂದುವರಿದುಕೊಂಡು ಬಂದವುಗಳು.

೨೧. ಎಸ್.ಐ.ಐ.ಸಂ.೭.ಸಂಖ್ಯೆ ೩೪೬.

೨೨. ಎ.ಆರ್.ಎಸ್.ಐ.ಇ. ೧೯೭೮-೭೯ ಸಂಖ್ಯೆ ೧೭೭.

೨೯. ಶ್ರೀಕೃಷ್ಣದೇವರಾಯನ ಧಾರ್ಮಿಕ ವಿಶ್ಲೇಷಣೆ

ಡಾ.ಚೆನ್ನಕ್ಕ ಪಾವಟೆ

ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಆಗುವ ಪೂರ್ವದಲ್ಲಿ ಹಂಪೆ ಅತ್ಯಂತ ಮಹತ್ವದ ಪ್ರಾದೇಶಿಕ ಇತಿಹಾಸವನ್ನು ಪಡೆದಿತ್ತು. ಅರಮನೆ ಆವರಣದಲ್ಲಿ ದೊರಕಿದ ಕ್ರಿ.ಶ. ೧-೨ನೇ ಶತಮಾನಗಳ ಮೂರು ಬ್ರಾಹ್ಮೀ ಶಾಸನಗಳು ಈ ಪ್ರದೇಶದಲ್ಲಿ ದೊರೆತ ಅತಿ ಪ್ರಾಚೀನ ದಾಖಲೆಗಳು. ವಿಜಯನಗರದ ಚಕ್ರವರ್ತಿ ಶ್ರೀಕೃಷ್ಣದೇವ ರಾಯನು ಕನ್ನಡಿಗರು ಅತ್ಯಂತ ಹೆಮ್ಮೆ ಪಡುವ ಅರಸ. ಕರ್ನಾಟಕದ ಐತಿಹಾಸಿಕ ಭೂಮಿಕೆಯಲ್ಲಿ ದಾಖಲಾಗಿರುವ ಕೃಷ್ಣಕಥೆ ಕಲ್ಲಮೇಲೆ ಕಂಡರಸಿದ ಕನ್ನಡಿಗರ ವೀರ ಶೌರ್ಯ, ಧೈರ್ಯ ಸಾಹಸದ ಕಥಾನಕ ತನ್ನ ಆಳ್ವಿಕೆಯ ಸಂದರ್ಭದಲ್ಲಿ ಹತ್ತಾರು ಸಮಾಜಹಿತ ಕಾರ್ಯ ಕೈಕೊಂಡು ಕೃಷ್ಣದೇವರಾಯ ಕನ್ನಡಿಗರ ಜನಮನದಲ್ಲಿ 'ಕರ್ನಾಟಕ ಕುಲ ತಿಲಕ' ಕರ್ನಾಟಕ ರಾಜ್ಯ 'ರಮಾರಮಣ' ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದುದು ಇತಿಹಾಸದಿಂದ ವಿದಿತಗೊಳ್ಳುವ ಅಂಶ. ತನ್ನ ಆಡಳಿತ ಅವಧಿಯಲ್ಲಿ ಹತ್ತಾರು ದೇವಾಲಯಗಳ ನಿರ್ಮಾಣ ಕಾರ್ಯ, ನಾಲ್ಕಾರು ಯುದ್ಧ ಸಂದರ್ಭಗಳಲ್ಲಿ ಭಾಗವಹಿಸಿ ಕೈಕೊಂಡ ಅಪರಿಮಿತ ಧಾರ್ಮಿಕ ಸಾಂಸ್ಕೃತಿಕ ಕಾರ್ಯಗಳು ಅವನನ್ನು ದೈವಾಂಶ ಸಂಭೂತನ ನ್ನಾಗಿಸಿ ದವು. ಆತನ ಆಡಳಿತ ವ್ಯವಸ್ಥೆಯ ವಿಧಿಯನ್ನು ಅಭಿವ್ಯಕ್ತಪಡಿಸುವ ಕನ್ನಡ ಶಾಸನ ಗಳನ್ನು ವಿಷಯವನ್ನಾಗಿ ಆಧರಿಸುವುದಕ್ಕಿಂತ, ಅದರ ಹಿಂದಿರುವ ದೊರೆ ಕೃಷ್ಣನ ಮನಸ್ಸು ಸಮಾಜ, ಸಂಸ್ಕೃತಿಗಳ ಮೇಲೆ ಬೀರಿದ ಪ್ರಭಾವ, ವಿಭಿನ್ನ ಧರ್ಮಗಳಲ್ಲಿ ಅವನಿಗಿದ್ದ ಪ್ರಬಲ ಆಸಕ್ತಿ ಆದರಿಂದುಂಟಾದ ಸತ್ಪರಿಣಾಮ-ದುಷ್ಪರಿಣಾಮಗಳನ್ನು ಚಿತ್ರಿಸುವುದೇ ಆಚ್ಚಳಿಯದ ವಿಜಯನಗರ ಸಂಸ್ಕೃತಿ ಎನಿಸಿದೆ.

ಶ್ರೀಪಂಪಾವಿರೂಪಾಕ್ಷ ಅಧಿದೇವತೆ

ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿರುವ ಹಂಪೆ, ಮೂಲತಃ ಕರ್ನಾಟಕದ ಒಂದು ವಿಶಿಷ್ಟ ಧರ್ಮಕ್ಷೇತ್ರ. ವಿಜಯನಗರ ಪರೋಕ್ಷ ಅಧಿಪತಿ ಪಂಪಾ ವಿರೂಪಾಕ್ಷ. ಇದಕ್ಕೆ ರಾಜಕೀಯ ನಿದರ್ಶನವೆಂಬಂತೆ ಸಂಗಮ ವಂಶದ ಅರಸರು ತಮ್ಮ ಆಳ್ವಿಕೆಯ ಕಾಲದ ಶಾಸನಗಳ ಅಂತ್ಯದಲ್ಲಿ ತಮ್ಮ ಹೆಸರಿಗೆ ಬದಲಾಗಿ "ಶ್ರೀ ವಿರೂಪಾಕ್ಷ" ಎಂಬ ರುಜು ಹಾಕುತ್ತಿದ್ದರು. ಚಂದ್ರಶೇಖರ ಕವಿ ತನ್ನ "ವಿರೂಪಾಕ್ಷಸ್ಥಾನ ವರ್ಣನಂ" ಎಂಬ ಕಾವ್ಯದಲ್ಲಿ ಬಂದ ಕೃಷ್ಣದೇವರಾಯನ ಕಾಲದ ಧಾರ್ಮಿಕಕ್ಷೇತ್ರ

ವಿಭಿನ್ನ ಬಗೆಯಲ್ಲಿ ಪರ್ಯಾವಾ ಸಾನಗೊಂಡು ಪ್ರಾರಂಭದಲ್ಲಿ ಪಂಪಾ ವಿರುಪಾಕ್ಷನ, ಆಳ್ವಿಕೆಯ ಮಧ್ಯಭಾಗದಲ್ಲಿ ಉಡುಪಿಯ ಕೃಷ್ಣನ, ಆಳ್ವಿಕೆಯ ಅಂತ್ಯದಲ್ಲಿ ತಿರುಪತಿ ವೆಂಕಟೇಶ್ವರ ಪೂಜೆಗೆ ಅವಕಾಶ ಕಲ್ಪಿಸಿ ಕೊಟ್ಟುದು ಆತನ ಭಾವಸೌಹಾರ್ದತೆ, ಅನ್ಯಧರ್ಮ-ದೈವಗಳಿಗೆ ನೀಡಿದ ಪ್ರೇರಣೆ ದಾಖಲಿಸುವಂತಿದೆ.

ವಿಜಯನಗರದಲ್ಲಿ ಸಂಗವಂಶದವರನ್ನು ಕೊನೆಗೊಳಿಸಿ ಸಾಳುವರು, ಸಾಳುವರನ್ನು ಕೊನೆಗೊಳಿಸಿ ತುಳುವರು, ಆಸ್ಥಾನದ ಗದ್ದಿಗೆಯನ್ನೇರುವಲ್ಲಿ ಸಹಜ ನೇರ ಸ್ಪರ್ಧೆ ಹೋರಾಟಗಳು ಸಹಜ ರೀತಿಯಲ್ಲಿ ಮುಂದುವರೆದಿವೆ. ಹಿರಿಯ ವಿದ್ವಾಂಸ ಡಾ.ಎಂ.ಎಂ.ಕಲಬುರ್ಗಿಯವರು ಅಭಿವ್ಯಕ್ತ ಪಡಿಸಿದಂತೆ ಕೃಷ್ಣ ದೇವರಾಯನು ಪಟ್ಟವನ್ನು ಸ್ವೀಕರಿಸುವ ಸಂದರ್ಭದಲ್ಲಿ ಕಟ್ಟಿಸಿದ ಅಣ್ಣ ವೀರನಾರಸಿಂಹನ ಮತ್ತು ತಿರುಮಲನ ಅಸಹಜ ಮರಣ ಪ್ರಕ್ರಿಯೆ ಕೃಷ್ಣದೇವರಾಯನ ರಾಜಕೀಯ ಪ್ರವೇಶ ವಿಜಯನಗರ ರಾಜ್ಯದಲ್ಲಿ ಅಸಂತೋಷ ಅನುಮಾನ ಹುಟ್ಟಿಸುವ ಸಂದರ್ಭವೊಂದು ಒದಗಿತ್ತು. ಬಹುಶಃ ಕೃಷ್ಣದೇವರಾಯ ತೆಲುಗು ತಾಯಿಯ ಮಗನಾಗಿದ್ದು, ಹಾಗೂ ಅವನ ಗುರು ಕ್ರಿಯಾಶಕ್ತಿ ಪಂಡಿತರು ವೈದಿಕ ಮತದವನಾಗಿದ್ದುದರಿಂದ ಸಹಜವಾಗಿ ಕೃಷ್ಣನ ಗಮನ ತೆಲುಗು ನಾಡಿನ ಕಡೆಗೆ ಸೆಳೆದಂತಿದೆ. ಸಾಲದುದಕ್ಕೆ ಮಂತ್ರಿ ತಿಮ್ಮರಸ ರಂಥ ರಾಜ್ಯದ ಮುಂದಾಳುಗಳ ಕಾರಣವಾಗಿ ರಾಜಕೀಯದ ಬಹುಮುಖ್ಯವಾದ ಅಂಗ ಸೈನ್ಯ ವ್ಯವಸ್ಥೆ, ಅರಮನೆ ಗುರುಮನೆಗಳಲ್ಲಿ ಹಾಗೂ ಆಸ್ಥಾನದಲ್ಲಿ ತೆಲುಗರು ತುಂಬು ಭಾವೈಕ್ಯಯತೆಯಿಂದ ತುಂಬಿಕೊಂಡಿದ್ದರು. ಕೃಷ್ಣದೇವರಾಯ ಪಟ್ಟವನ್ನೇರು ವಲ್ಲಿ ಸಶಕ್ತರಾದ ತೆಲುಗರು ಕನ್ನಡ ಸಾಮ್ರಾಜ್ಯದಲ್ಲಿ ಅಂದಿನ ರಾಜಕೀಯದ ಚಲನ ವಲನಗಳನ್ನು ಗುರುತಿಸಿದ್ದರು. ಕೃಷ್ಣದೇವರಾಯ ಪಟ್ಟವನ್ನೇರುತ್ತಲೇ ಪಂಪಾ ವಿರೂ ಪಾಕ್ಷನ ಮೇಲಿನ ಭಕ್ತಿ ಶ್ರದ್ಧೆಗಳಷ್ಟೇ ರಾಯನ ಮನಸ್ಸು ಸಹಜವಾಗಿ ಉಡುಪಿಯ ಕೃಷ್ಣನ ಹಾಗೂ ತಿರುಪತಿ ವೆಂಕಟೇಶ್ವರನ ಕಡೆಗೆ ಒಲವು ಕೇಂದ್ರೀಕೃತವಾದುದನ್ನು ಅಂದಿನ ಶಾಸನಗಳು ವರ್ಣಿಸಿವೆ. ಎಂದು ಹೇಳಿದ್ದಾರೆ.

ವಿಜಯನಗರ ಮೂಲ ದಾಖಲೆಗಳು

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ೧೯೬೭ರಲ್ಲಿ ಪ್ರಕಟ ಪಡಿಸಿದ ವಿಜಯನಗರ (ಹಂಪೆಯ ಶಾಸನಗಳು) ಕೃತಿಯಲ್ಲಿ ವಿಜಯನಗರ ಪಟ್ಟಣದ ಈಗಿನ ರಾಯಚೂರು ಜಿಲ್ಲೆ ಗಂಗಾವತಿ ತಾಲೂಕಿನ ಆನೆಗೊಂದಿ, ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಬುಕ್ಕಸಾಗರ, ಹಂಪೆ, ಕಮಲಾಪುರ, ಕಡಿರಾಂಪುರ, ವೆಂಕಟಾಪುರ, ನಿಂಬಾಪುರ, ನಾಗೇನಹಳ್ಳಿ, ಅನಂತನಶಯನಗುಡಿ, ಹೊಸಪೇಟೆ, ಮಲಪನಗುಡಿ, ಕೊಂಡನಾಯ್ಕನಹಳ್ಳಿ ಮತ್ತು ಜಂಬುನಾಥನ ಹಳ್ಳಿ ಪರಿಸರದ ೪೭೧ ಶಾಸನಗಳನ್ನು ಒಳಗೊಂಡಿದೆ.[3] ಹಂಪಿಯ ಕನ್ನಡ ವಿಶ್ವವಿದ್ಯಾಲಯ ಪುನಃ ಪ್ರಕಟಿಸಿದ ಹಂಪಿಯ ಕನ್ನಡ ಶಾಸನಗಳು ಹೆಸರಿನ ಸಂಪುಟದಲ್ಲಿ ಒಟ್ಟು ೩೯೯ ಶಾಸನಗಳಿವೆ. ಇವುಗಳಲ್ಲಿ ಒಟ್ಟು ವಿಜಯನಗರ ದೊರೆಗಳಿಗೆ ಸಂಬಂಧಿಸಿದವು ೯೯ ಶಾಸನಗಳು:

ಇವುಗಳಲ್ಲಿ ಕೃಷ್ಣದೇವರಾಯನ ಆಡಳಿತಾವಧಿಯ ಶಾಸನಗಳು ೨೩, ಇವುಗಳಲ್ಲಿ ೩ ಶಾಸನಗಳನ್ನು ಹೊರತು ಪಡಿಸಿ (೨೩೦, ೭೯, ೨೫೩) ಉಳಿಯುವವು ೨೦ ಶಾಸನಗಳು ಕೃಷ್ಣದೇವರಾಯನ ಮಾನಸಿಕ ಸ್ಥಿಮಿತಿ, ಆತ ಕೈಕೊಂಡ ಧಾರ್ಮಿಕ ಕರ್ತವ್ಯಗಳು ಸಂದರ್ಶಿಸಿದ ಧರ್ಮಕ್ಷೇತ್ರಗಳು ವಿಧಿವತ್ತಾಗುತ್ತವೆ.

ಹಂಪಿ ಪರಿಸರದ ಪ್ರಮುಖ ದೇವತೆ ಪಂಪಾ ವಿರೂಪಾಕ್ಷ: ವಿಜಯನಗರ ಗದ್ದುಗೆಗೆ ವಿರೂಪಾಕ್ಷನೇ ಅಧಿಕಾರಿ. ಕರ್ನಾಟಕದ ಮಹತ್ವಪೂರ್ಣ ಸಾಂಸ್ಕೃತಿಕ ನೆಲೆಗಳಲ್ಲಿ ಅದ್ವಿತೀಯವಾದುದು. ಇದು ಯಾರ ಒಡೆತನಕ್ಕೂ ಒಳ ಗಾಗದ ಸಾಮ್ರಾಜ್ಯ. ವಿಜಯನಗರದ ಪ್ರತಿಷ್ಠಿತ ಕವಿ ಹರಿಹರ ಅಭಿವ್ಯಕ್ತಪಡಿಸುವಂತೆ ಪೂರ್ವದಲ್ಲಿ ಕಿನ್ನರೇಶ್ವರ, ಪಶ್ಚಿಮದಲ್ಲಿ ಸೋಮೇಶ್ವರ, ಉತ್ತರದಲ್ಲಿ ವಾಣಿ ಭದ್ರೇ ಶ್ವರ, ದಕ್ಷಿಣದಲ್ಲಿ ಜಂಬುಕೇಶ್ವರದ ವರೆಗೆ ವಿಸ್ತರಿಸಿದ ವಿಜಯನಗರ ಸಾಮ್ರಾಜ್ಯದ ಪರ್ಯಾಯ ನಾಮ ಪಂಪಾವಿರೂಪಾಕ್ಷ. ತಮ್ಮ ನಿಜನಾಮವನ್ನು ಬದಿಗಿರಿಸಿ ಪಂಪಾ ವಿರೂಪಾಕ್ಷನ ಹೆಸರಿನಲ್ಲಿ ಸಂಗಮದೊರೆಗಳು ಸಾಮ್ರಾಜ್ಯವನ್ನಾಳಿದರು. ಕೃಷ್ಣದೇವ ಕರ್ನಾಟಕದವನಾಗಿದ್ದರಿಂದ ಸಾಳುವ ತುಳುವನಾಡಿನ ಆಳ್ವಿಕೆ ವಿಜಯನಗರದವರೆಗೆ ಪರಕೀಯವೆನಿಸಲೇ ಇಲ್ಲ. ಆದರೆ ತೆಲುಗು ಮೂಲದ ತಿರುಪತಿ ವೆಂಕಟೇಶ್ವರನ ಭಕ್ತಿಗೆ ಒಳಗಾದ ಕೃಷ್ಣದೇವರಾಯ ಸಿಂಹಾಸನವನ್ನೇರುತ್ತಲೆ ಸುತ್ತಲಿನ ಜನತೆ ತುಂಬ ಎಚ್ಚರಿಕೆಯಿಂದ ಗಮನಿಸತೊಡಗಿದರು.

ಸಾಂಸ್ಕೃತಿಕ ಕೊಡುಗೆಗಳು

ವಿಜಯನಗರ ದೊರೆ ಕೃಷ್ಣದೇವರಾಯನ ಪಟ್ಟಾಭಿಷೇಕ ೨೪.೧.೧೫೧೦ರಲ್ಲಿ ತುಂಬಾ ವಿಜೃಂಭಣೆಯಿಂದಲೇ ಜರುಗಿತು. ಈ ಸಂದರ್ಭದಲ್ಲಿ ಕೃಷ್ಣದೇವರಾಯ ವಿಜಯನಗರದಲ್ಲಿ ಅನೇಕ ದೇವಸ್ಥಾನಗಳನ್ನು ನಿರ್ಮಿಸಿಸಿದನು. ತಾನು ಪಟ್ಟವೇರಿದ ಸಂದರ್ಭದಲ್ಲಿ ಪಂಪಾ ವಿರೂಪಾಕ್ಷ ದೇವಸ್ಥಾನದಲ್ಲಿ ಮಹಾರಂಗ ಮಂಟಪ ಮತ್ತು ಮುಂದಿನ ಗೋಪುರವನ್ನು ಕಟ್ಟಿಸಿ ಇದೇ ಸಂದರ್ಭದಲ್ಲಿ ದೊಡ್ಡ ಗೋಪುರದ ಜೀರ್ಣೋದ್ಧಾರ ಕಾರ್ಯವನ್ನು ಕೈಕೊಂಡನು. ದಾನ ನೀಡುವ ಸಂದರ್ಭ ದಲ್ಲಿ ಸಿಂಗೆನಾಯಕನಹಳ್ಳಿಯನ್ನು ದೇವರಿಗೆ ಮುಡಿಪು ನೀಡಿದ್ದಲ್ಲದೆ ಒಂಬತ್ತು ರತ್ನಗಳಿಂದ ಕೂಡಿದ ಚಿನ್ನದ ಕಮಲ, ಒಂದು ನಾಗಾಭರಣ ಒಂದು ಚಿನ್ನದ ಪಾತ್ರೆ, ಮತ್ತು ೨೪ ಬೆಳ್ಳಿಯ ದೀಪಗಳನ್ನು ದೇವರ ಸನ್ನಿಧಾನಕ್ಕೆ ಅರ್ಪಿಸಿದನು.

ಪಟ್ಟಾಭಿಷಿಕ್ತನಾದ ೩ ಸಂವತ್ಸರಗಳ ತರುವಾಯ ತನ್ನ ತಂದೆ ನರಸಣ್ಣನಾಯಕ ತಾಯಿ ನಾಗಾಜಿಯಮ್ಮನವರಿಗೆ ಪುಣ್ಯವಾಗಲೆಂದು ವಿರೂಪಾಕ್ಷದೇವರ ಪಕ್ಷೋತ್ಸವ, ಮಾಸೋತ್ಸವ ಮತ್ತು ಸಂವತ್ಸರೋತ್ಸವಗಳಿಗೆ ಮತ್ತು ಪ್ರತಿನಿತ್ಯಪೂಜೆಗೆ ಚಿನ್ನನಾಯಕನ ಹಳ್ಳಿ, ಕಾಳಗಟ್ಟೆ, ಡಾಣಾಪುರ, ರಾಮಚಂದ್ರಪುರ, ಕಂಚುಮಂತಿನಕುಪೆ, ಅಯೋದಿ, ಹೊನ್ನಾಪುರ, ಮಂಡನೂರು, ದಮ್ಮೂರು, ಭಯಿರದೇವನಹಳ್ಳಿ ಕಲುಕಂಬ, ಗೋನಾಹಾಳ, ಗುಂಡೆಗನೂರು, ಪಾಡಿರಾಳ ಮತ್ತು ಕನ್ನಾಕಿಯಕಟ್ಟಿ, ಮುದಗೆರೆ ಗ್ರಾಮಗಳನ್ನು

ದಾನಮಾಡಿರುವನು.[೩] ಇಷ್ಟೇ ಅಲ್ಲದೆ ಅಮೂಲ್ಯಮಣಿಗಳಿಂದ ಅಲಂಕೃತಗೊಂಡ ಚಿನ್ನದ ಒಡವೆಗಳನ್ನು ಚಿನ್ನದ ತಟ್ಟೆ ಮತ್ತು ಬೆಳ್ಳಿಯ, ಚಿನ್ನದ ಆರತಿಗಳನ್ನು ದೇವರಿಗೆ ಕಾಣಿಕೆಯಿತ್ತಿರುವನು.[೪]

ಕ್ರಿ.ಶ. ೧೫೨೪ರಲ್ಲಿ ಕಡಿರಾಮಪುರದ ಶಾಸನದಲ್ಲಿ ಅರಸನು ರಘುನಾಥ ದೇವರಿಗೆ ಪ್ರತಿದಿನ ೨೦ ಪಡಿ ಅಕ್ಕಿ, ೧ ಪಡಿ ತುಪ್ಪ, ಮತ್ತು ೧ ಪಡಿ ಎಣ್ಣೆಯನ್ನು ಪ್ರತಿ ತಿಂಗಳೂ ೧ ಗದ್ಯಾಣ ಅಥವಾ ಹೊನ್ನನು ಕೊಡುವ ಕಟ್ಟಳೆಯನ್ನು ಮಾಡಿದನು.

ಕ್ರಿ.ಶ. ೧೫೧೬ರ ವಿಜಯನಗರದ ಶಾಸನಗಳು ರಾಜನು ವಿಠಲದೇವರಿಗೆ ನೂರ ಕಂಬಗಳ ಮಂಟಪವನ್ನು ಕಟ್ಟಿಸಿದನೆಂದು ತಿಳಿಸುತ್ತದೆ.[೫] ಕ್ರಿ.ಶ. ೧೫೧೫ರಲ್ಲಿ ಕೃಷ್ಣದೇವರಾಯ ಕಳಿಂಗ ಯುದ್ಧವನ್ನು ಗೆದ್ದು, ಉದಯಗಿರಿಯಿಂದ ತಂದ ಬಾಲಕೃಷ್ಣ ದೇವರನ್ನು ಪ್ರತಿಷ್ಠಾಪಿಸಿರುವನು. ಬಾಲಕೃಷ್ಣ ವಿಗ್ರಹಕ್ಕಾಗಿ ವಿರೂಪಾಕ್ಷ ದೇವಾಲಯದ ದಕ್ಷಿಣ ಭಾಗದಲ್ಲಿ ಕಟ್ಟಿಸಿರುವನು. ಇದರ ಪೂಜೆಗಾಗಿ ಅತ್ತಿವಟ್ಟೆ ಗ್ರಾಮ, ಹೊಸೂರು, ಮಾಗಣೆಯಲ್ಲಿರುವ ಮುದಲಾಪುರ ಗ್ರಾಮ, ಕಂಪಿಲೆ ಮಾಗಣೆಯಲ್ಲಿರುವ ದೇವಲಾಪುರ ಕಳಸಾಪುರಕ್ಕೆ ಸೇರಿದ ಹರಿಯಸಮುದ್ರ ತೊಗಲುಗಲ್ಲು, ಬಾದನಹಟ್ಟಿ ತೆಕ್ಕಲ ಕೋಟೆಗೆ ಸೇರಿದ ರುದ್ರಪಾದ ಗ್ರಾಮಗಳನ್ನು ಮತ್ತು ಕೃಷ್ಣಪುರದ ಸ್ಥಳಸುಂಕವನ್ನು ದೇವರ ಸೇವೆಗೆ ದಾನ ಮಾಡಿರುವನು.[೬]

ವಿರೂಪಾಕ್ಷ ದೇವಾಲಯದತ್ತ ಗಮನ ಸೆಳೆಯುವಂತೆ ಪ್ರಸನ್ನ ವಿರೂಪಾಕ್ಷ ದೇವಾಲಯ ಕಟ್ಟಿಸಿದನು. ಅದರ ಮಗ್ಗುಲಲ್ಲಿ ಯೋಗ ಲಕ್ಷ್ಮೀನರಸಿಂಹನ ಏಕಶಿಲೆ ಬೃಹತ್ ವಿಗ್ರಹ, ಕಡಲೆಕಾಳು ಗಣಪತಿ, ಸಾಸಿವೆಕಾಳು ಗಣಪತಿ, ಮುಂತಾದ ಏಕ ಶಿಲಾವಿಗ್ರಹಗಳನ್ನು ಸಂಸ್ಥಾಪಿಸಿದ. ವಿಜಯನಗರದ ಅಧಿದೈವ ವಿರೂಪಾಕ್ಷನಿಗಿಂತ ಹೆಚ್ಚು ಮಾನಕರ್ಷಕವಾಗುವ ರೀತಿಯಲ್ಲಿ ವಿಜಯವಿಠಲನಿಗಾಗಿ ಭವ್ಯ ದೇವಾಲಯ ವೊಂದು ಆ ಸಂದರ್ಭದಲ್ಲಿ ಬೆಳೆದು ನಿಂತಿತು. ಇಲ್ಲಿಯ ರಥಬೀದಿಯ ವಿರೂಪಾಕ್ಷನ ವಿಸ್ತಾರ ವೈವಿಧ್ಯತೆಯಲ್ಲಿ ಮಿಗಿಲೆನಿಸುವ ವಿಜಯ ವಿಠಲ ದೇವಾಲಯ. ಹೀಗೆ ಒಂದೆಡೆ ವಿಜಯ ವಿರೂಪಾಕ್ಷನನ್ನು ಪ್ರತಿಷ್ಠಿಸಿದರೆ ಇನ್ನೊಂದೆಡೆ ವಿಜಯ ವಿಠಲ ಹೆಸರು ಪಡೆದ ದೇಗುಲವೊಂದನ್ನು ಸ್ಥಾಪಿಸಿದ.

ಪ್ರಸನ್ನ ವಿರೂಪಾಕ್ಷ, ರಾಮಚಂದ್ರ, ವಿಜಯವಿಠಲ ಈ ಮೂರು ದೇವತೆಗಳಿಗೆ ಕ್ರಮವಾಗಿ ಪ್ರಸನ್ನ ವಿರೂಪಾಕ್ಷ ದೇವಾಲಯದ ಈಶಾನ್ಯ ದಿಕ್ಕಿನ ಮಂಟಪದ ದಕ್ಷಿಣ ಗೋಡೆಯ ಮೇಲೆ ತನ್ನ ತಂದೆ ನರಸಣ್ಣ ನಾಯಕ ಮತ್ತು ತಾಯಿ ನಾಗಾಜಿ ಅಮ್ಮನವರಿಗೆ ಪುಣ್ಯವಾಗಲೆಂದು ರಾಮಚಂದ್ರ ದೇವಾಲಯಕ್ಕೆ ದೇವರ ಸೇವೆಗೆ ಕಳಸಾಪುರ ಮಾಗಣೆಯಲ್ಲಿ, ವೋಳಕೋಟೆ ಗ್ರಾಮ, ಸಂಡೂರು ಸೀಮೆಯಲ್ಲಿ ತಾಳೂರು ಗ್ರಾಮ, ನಾರಿಸೀಮೆಯಲ್ಲಿ ಇಟ್ಟಿಗೆ ಗ್ರಾಮ, ಬಳದೇವರ ಕಣಿವೆ ಹತ್ತಿರ ಮುದ್ದಾಪುರ ಗ್ರಾಮ, ಕೊಪಣ ಸೀಮೆಯಲ್ಲಿರುವ ಕುಟಕನಹಳ್ಳಿ ಮತ್ತು ನಾರಿಯಿಸೀಮೆಯಲ್ಲಿನ ಜಾಯಿ ನೂರು ಗ್ರಾಮಗಳನ್ನು ದಾನ ಮಾಡಿರುವನು.[೭]

ನಾಗೇನಹಳ್ಳಿಯಲ್ಲಿ ಕೃಷ್ಣದೇವರಾಯನ ಕಾಲದಲ್ಲಿ ರಂಗನಾಥ ದೀಕ್ಷಿತನು ದೇವಸ್ಥಾನಗಳನ್ನು ಮತ್ತು ಅರಸನ ತಾಯಿ ನಾಗಲಾದೇವಿಗೆ ಪುಣ್ಯವಾಗಲಿ ಎಂದು ನಾಗಾಂಬಿಕಾ ಸಮುದ್ರವೆಂಬ ಕೆರೆಯನ್ನು ಕಟ್ಟಿಸಿ ಆಗ್ರಹಾರವಾಗಿ ಪರಿವರ್ತಿಸಿ ಬ್ರಾಹ್ಮಣ ರಿಗೆ ವೃತ್ತಿಯನ್ನು ಕೊಟ್ಟಿರುವನು.[೮]

ಕೃಷ್ಣದೇವರಾಯನ ಮಾನಸಿಕ ಸ್ಥಿಮಿತ ಆತ ಕೈಕೊಂಡ ಧಾರ್ಮಿಕ ಕರ್ತವ್ಯಗಳು ರಾಜ್ಯವಿಸ್ತರಣೆಯ ಸಂದರ್ಭದಲ್ಲಿ ತಾನು ನಂಬಿಕೊಂಡು ಬಂದ ದೈವಗಳಿಗೆ ನೀಡಿದ ದತ್ತಿ ದಾನಗಳು ಕೃಷ್ಣನ ಧರ್ಮಪರ ಮನೋಭಾನೆಯನ್ನು ಸೂಚಿಸಿವೆ.

ಹಂಪಿ ಪರಿಸರದ ಮುಖ್ಯ ದೇವತೆ ಶ್ರೀ ಪಂಪಾವಿರೂಪಾಕ್ಷ. ವಿಜಯನಗರ ಸಿಂಹಾಸನಕ್ಕೆ ವಿರೂಪಾಕ್ಷನಿಗೆ ಭಕ್ತಿ ನಮನಗಳನ್ನು ಸಲ್ಲಿಸಿ ಆವನ ಹೆಸರಿನಲ್ಲಿ ರಾಜ್ಯ ಭಾರ ನಡೆಸುವಷ್ಟು ಹೆಚ್ಚು ಆಸಕ್ತಿ ಬೀರಿದವರು.

ಹೀಗೆ ಕೃಷ್ಣದೇವರಾಯ ಮನಬಿಚ್ಚಿ ದಾನ ಮಾಡಿದ್ದರೂ ಅವನಿಗೆ ವಿರೂಪಾಕ್ಷ, ಪ್ರಸನ್ನ ವಿರೂಪಾಕ್ಷರಿಗಿಂತ ರಾಮಚಂದ್ರನ ಬಗ್ಗೆ ಮನಸ್ಸು ಕೇಂದ್ರೀಕರಣವಾಗಿದೆ. ಇವರೆಲ್ಲರಿಗಿಂತ ವಿಜಯವಿಠಲ ಮತ್ತು ಬಾಲಕೃಷ್ಣರ ಬಗ್ಗೆ ಭಕ್ತಿ ತುಂಬಿ ಹರಿದಿದೆ. ಇದರ ಜೊತೆ ತಿರುವೆಂಗಳನಾಥ ರಘುನಾಥ ಲಕ್ಷ್ಮೀನರಸಿಂಹ ದೇವರಿಗೆ ವಿಶೇಷ ಭಕ್ತಿ ವ್ಯಕ್ತಪಡಿಸಿರುವನು. ಇಷ್ಟೇ ಅಲ್ಲದೆ ಕಂಚಿ ಶ್ರೀಶೈಲ ಅರುಣಾಚಲಂ ಚಿದಂಬರಂ ಕಾಳಹಸ್ತಿ ಮತ್ತು ತಿರುಪತಿಗಳಿಗೆ ಅವನು ಭೆಟ್ಟಿ ನೀಡಿದ ಬಗ್ಗೆ ಉಲ್ಲೇಖಗಳಿವೆ. ಇಂಥ ಪೂಜನೀಯ ಯಾತ್ರಾಸ್ಥಳಗಳಿಗೆ ಒಂದೆರಡು ಬಾರಿ ದರ್ಶನಮಾಡಿಯೂ ಬಂದಿ ರುವನು.

ತಿರುಪತಿ ವೆಂಕಟೇಶ್ವರನ ಬಗ್ಗೆ ಕೃಷ್ಣದೇವರಾಯನಿಗೆ ಎಲ್ಲಿಲ್ಲದ ಭಕ್ತಿ, ಶ್ರದ್ಧೆ. ವಿರೂಪಾಕ್ಷ ಕ್ಷೇತ್ರದಲ್ಲಿ ಉಡುಪಿಯ ಕೃಷ್ಣನ ಸಂಸ್ಕೃತಿ-ತಿರುಪತಿ ವೆಂಕಟೇಶ್ವರ ಸಂಸ್ಕೃತಿಗೆ ಹೆಚ್ಚು ಅವಕಾಶ ಮಾಡಿಕೊಟ್ಟಿರುವನು. ಸಂಗಮವಂಶದವರ ಕೈಯಿಂದ ಕ್ರಮವಾಗಿ ಸಾಳುವ ತುಳು ವಂಶದವರ ಕೈಗಳಿಗೆ ರಾಜ್ಯಸೂತ್ರ ಇಳಿದು ಬಂದಿತು. ತುಳು ಭಾಷಿಕರು ಕೃಷ್ಣಭಕ್ತರಾದ ಈ ಎರಡೂ ರಾಜವಂಶಗಳ ಆಶ್ರಯದಲ್ಲಿ ತಮ್ಮ ಧರ್ಮ ಸುರಕ್ಷಿತವಾಗಿರುತ್ತದೆ, ವರ್ಧಿಸುತ್ತದೆ, ಎಂಬ ಭಾವನೆಯಿಂದ ವ್ಯಾಸರಾಯ ರಂಥ ಮಾಧ್ವಯತಿಗಳು ರಾಜಧಾನಿಯಲ್ಲಿ ನೆಲೆಯೂರಿದರು. ಹೀಗೆ ಒಂದು ಕಡೆಯಿಂದ ಉಡುಪಿ ಮಾಧ್ವ "ಆಚಾರ್ಯಪಂಥ" ಪ್ರವೇಶಿಸುತ್ತಲೇ ಇನ್ನೊಂದು ಕಡೆಯಿಂದ ಪಂಡರಾಪುರದ ವಿಠಲನ "ಭಕ್ತಿಪಂಥ" ವೂ ಹಂಪಿಗೆ ಬಂದು ಎರಡರ ಸಂಗಮದಿಂದ ಕೃಷ್ಣನ ಸಂಪ್ರದಾಯ ಇಲ್ಲಿ ಬೆಳೆಯುತ್ತ ಬಂದು ವಿರೂಪಾಕ್ಷನ ಏಕಚಕ್ರಾಧಿಪತ್ಯ ಸಡಿಲಗೊಳ್ಳತೊಡಗಿತು ಎಂಬ ಕಲಬುರ್ಗಿಯವರ ಹೇಳಿಕೆ ಚಿಂತನೀಯವಾಗಿದೆ.

ತೆಲುಗು ಪ್ರಾಂತ್ಯ ತಿರುಪತಿ ವೆಂಕಟೇಶ್ವರನಿಗೆ ಕೃಷ್ಣದೇವರಾಯ ಏಳು ಬಾರಿ ಸಲ್ಲಿಸಿದ ಭಕ್ತಿಸೇವೆ ವಿಶೇಷವಾಗಿದೆ. ಉಮ್ಮತ್ತೂರಿನ ಮೇಲೆ ಗಳಿಸಿದ ವಿಜಯದ ಪ್ರತೀಕವಾಗಿ ಕ್ರಿ.ಶ. ೧೫೧೩ರಲ್ಲಿ ಚಿನ್ನಾದೇವಿ ತಿರುಮಲಾದೇವಿರೊಂದಿಗೆ ಕೃಷ್ಣದೇವ

ರಾಯ ಬೆಟ್ಟದ ಗುಡಿಗೆ ಸಲ್ಲಿಸಿದ ಕಾಣಿಕೆಗಳಿಗೆ ಲೆಕ್ಕವಿಲ್ಲ. ಈ ಮೊದಲ ಭೇಟ್ಟಿಯಲ್ಲಿ ನವರತ್ನ ಖಚಿತವಾದ ಚಿನ್ನದ ಕಿರೀಟವನ್ನು ದೇವರಿಗೆ ಅರ್ಪಿಸಿರುವನು.

ಎರಡನೆಯ ಬಾರಿ ತಿರುಪತಿಯಲ್ಲಿ ನವರತ್ನಖಚಿತ ಕಿರೀಟ, ಮೂರೆಳೆ ಮುತ್ತಿನ ಹಾರ, ಮುತ್ತಿನ ಪದಕ, ಇಪ್ಪತ್ತೈದು ತಟ್ಟೆಗಳು, ಕಿರೀಟ ದಲ್ಲಿ ೧೫೫೫ ತೂಕದ ಬಂಗಾರದ ಕಟ್ಟಡ ೧೦೭೬ ತೂಕದ ಕುಂದಣ -ಬಂಗಾರ, ೨೮೨೨ ಕೆಂಪುಗಳು, ೧೬೦ ಪಚ್ಚೆ, ೪೨೩ ಹಳೆಯ ವಜ್ರ ಮೂರು ಮಾಣಿಕ್ಯಗಳು, ೧೦ ನೀಲಗಳು, ೧೭ ವೈಡೂರ್ಯ ಗೋಮೇದಿಕ ಎಲ್ಲವೂ ಸೇರಿ ೩೧೩೦ ತೂಕ ; ೧೬೩ ರತಿ ತೂಗುವ ಮುತ್ತುಗಳ ಕಟ್ಟಡ ಬಂಗಾರದ ಸರಿಗೆ, ಸರ, ಕಿರೀಟದ, ಒಟ್ಟು ತೂಕ ೩೩೦೮.ಮುತ್ತಿನ ಮೂರೆಳೆಸರದಲ್ಲಿ ೧೩೭೦, ಜರಿ ಮುತ್ತುಗಳಿದ್ದವು. ಒಂದು ಮಾಣಿಕ್ಯವಿದ್ದಿತು. ಎರಡು ನೀಲಮಣಿಗಳಿದ್ದವು ಹದಿನೈದು ಅಡ್ಡಿಕೆಗಳಿದ್ದವು. ಇದರ ಒಟ್ಟು ತೂಕ ೨೫ ತರಿಗಳು. ಪದಕದಲ್ಲಿ ಆರು ಮುತ್ತುಗಳು ಅರುವತ್ತು ವಜ್ರಗಳು ಮೂರು ಮಾಣಿಕ್ಯಗಳು ಐದು ಕೆಂಪುಗಳು ಇದ್ದು ಅದರ ಒಟ್ಟು ತೂಕ ೯೧ ರಷ್ಟು ಇದ್ದಿತು. ಇದು ಕೃಷ್ಣದೇವರಾಯನ ೨ನೇ ಬಾರಿ ತಿರುಪತಿಗೆ ಬಂದಾಗ ನೀಡಿದ ಕಾಣಿಕೆ.

ಮೂರನೇ ಸಲದ ಯಾತ್ರೆಯಲ್ಲಿ ತನ್ನ ತಂದೆ ನರಸನಾಯಕ ತಾಯಿ ನಾಗಾಜಮ್ಮ ನಿಗೆ ಪುಣ್ಯಲಭಿಸಬೇಕೆಂದು ವೇಂಗಡದೇವರಿಗೆ ನವರತ್ನ ಖಚಿತ ವಸ್ತುಗಳನ್ನು ದಾನಮಾಡಿ ಅವರ ಹೆಸರಿನಲ್ಲಿ ತ್ರೈಮಾಸೋತ್ಸವ ಸಂದರ್ಭದಲ್ಲಿ ಬಳಸುವಂತೆ ಗ್ರಾಮಗಳನ್ನು ದಾನ ಕೊಟ್ಟಿರುವನು.

ನಾಲ್ಕನೇ ಬಾರಿ ತನ್ನ ರಾಣಿಯರಾದ ಚಿನ್ನಾದೇವಿ ತಿರುಮಲಾದೇವಿಯರೊಡನೆ ತಿರುಪತಿಗೆ ಬಂದು ದೇವರಿಗೆ ಕನಕಾಭಿಷೇಕವನ್ನು ಮಾಡಿಸಿರುವನು. ಪ್ರತಾಪರುದ್ರ ಗಜಪತಿಯ ಮೇಲೆ ದಂಡೆತ್ತಿ ಅವನನ್ನು ಕೊಂಡವೀಡುವಿನ ವರೆಗೆ ಓಡಿಸಿ ಉದಯಗಿರಿ ದುರ್ಗವನ್ನು ವಶಪಡಿಸಿಕೊಂಡು ವಿಜಯನಗರಕ್ಕೆ ಬರುವ ಮುನ್ನ ಈ ಕಾಣಿಕೆ ಸಲ್ಲಿಸಿದ್ದು.

ಐದನೇ ಬಾರಿ ವಿಜಯನಗರದಿಂದ ಪೂರ್ವದಿಗ್ವಿಜಯ ಯಾತ್ರೆ ಕೈಕೊಂಡ ಸಲ ಕೆಲವು ಅರಸರನ್ನು ಗೆದ್ದು-ಗಿರಿ ದುರ್ಗಮುಂತಾದ ಸ್ಥಳಗಳನ್ನು ವಶಪಡಿಸಿಕೊಂಡು ಹಿಂತಿರುಗಿ ಬಂದಾಗ ತಿರುವೆಂಗಳನಾಥನಿಗೆ ನವರತ್ನ ಪ್ರಭಾವಳಿ ಕಳುಹಿಸಿದ್ದು ಇದೆ.

ಆರನೇ ಬಾರಿ ತಿರುಮಲದೇವಿಗೆ ಪುತ್ರೋತ್ಸವ ಆದ ಸಂದರ್ಭ ತೀರ್ಥಯಾತ್ರೆ ಕೈಕೊಂಡಿರುವನು.

ಏಳನೆಬಾರಿ ತಿರುಮಲೆಯ ವೆಂಕಟನಾಥನಿಗೆ ನವರತ್ನ ಖಚಿತ ಪೀತಾಂಬರ, ಮಾಣಿಕ್ಯ, ಪಚ್ಚೆ, ಕುಲ್ಲಾಯಿ ಚಾಮರ, ಇತ್ಯಾದಿ ತನ್ನ ರಾಣಿ ತಿರುಮಲಾದೇವಿ ಯೊಂದಿಗೆ ಹೋಗಿ ಸಮರ್ಪಿಸಿ ಬಂದಿರುವನು.

ಈ ಎಲ್ಲಾ ಉದಾಹರಣೆಗಳನ್ನು ಗಮನಿಸಿದರೆ ಕೃಷ್ಣದೇವರಾಯನ ಧರ್ಮ ಸಾಮರಸ್ಯ ಮನೋಭಾವನೆ ವಿದಿತವಾಗುತ್ತದೆ. ಹೀಗೆ ಬಾರಿ ಬಾರಿ ಸಂದರ್ಶಿಸುವಲ್ಲಿ ವೈರಿಗಳನ್ನು ತಹಬಂಧಿಯಲ್ಲಿಡುವ ಕೆಲಸ ಕೈಕೊಳ್ಳುವಂತೆ ಕಂಡುಬರುತ್ತಿದೆ. ವಿಜಯ ನಗರ ಸಾಮ್ರಾಜ್ಯ ವಿಶಾಲತ್ವ ಪಡೆಯುವಲ್ಲಿ ಇಂಥಹ ಮಹತ್ತರ 'ಕೆಲಸಗಳನ್ನು ಕೈಕೊಳ್ಳಬೇಕಾದ ಆವಶ್ಯಕತೆಯನ್ನು ಸೂಚಿಸುತ್ತದೆ.

ಗ್ರಂಥಋಣ

೧. ಡಾ. ಎಂ.ಎಂ.ಕಲಬುರ್ಗಿ, ಮಾರ್ಗ೪-೨೦೦೩.

೨. ವಿಜಯನಗರ ಹಂಪಿ ಶಾಸನಗಳು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ.

೩. ಹಂಪೆ ಶಾಸನ ನಂ ೧೦೪-೧೦೬ ಹಂಪೆ, ಕ್ರಿ.ಶ. ೧೫೧೦ : ಹಂಪೆ ಶಾ. ೧೦೨, ಹರಿಹರ ಕ್ರಿ.ಶ.೧೫೧೩.

೪. ಹಂಪೆ ಶಾಸನ ನಂ ೭೫ ಕಡಿರಾಂಪುರ ಕ್ರಿ.ಶ. ೧೫೧೩.

೫. ಹಂಪೆ ಶಾಸನ ನಂ ೨೭೯ ಕಡಿರಾಂಪುರ ಕ್ರಿ.ಶ. ೧೫೨೪.

೬. ಹಂಪೆ ಶಾಸನ ೧೯೯ ವಿಜಯನಗರ ಕ್ರಿ.ಶ.೧೫೧೬.

೭. ಹಂಪೆ ಶಾಸನ ೩೩೮ ವಿಜಯನಗರ ಕ್ರಿ.ಶ. ೧೫೧೩.

೮. ಹಂಪೆ ಶಾಸನ ೪೧೪ ನಾಗೇನಹಳ್ಳಿ ಕ್ರಿ.ಶ. ೧೫೧೬.

೯. ಡಾ. ಎಂ.ಎಂ.ಕಲಬುರ್ಗಿ ಮಾರ್ಗ-೪-೨೦೦೪.

೧೦. ಪ್ರಸ್ತುತ ಲೇಖನಕ್ಕೆ ಡಾ. ಎಂ.ಎಂ. ಕಲಬುರ್ಗಿಯವರ ಮಾರ್ಗ-೪ರ ಕೃಷ್ಣದೇವರಾಯ ತೆಲುಗು ಸಂಸ್ಕೃತಿಯ ಆಕ್ರಮಣ ಹಾಗೂ ಕೃಷ್ಣದೇವಾಯನ ಹಂಪಿ ಶಾನಗಳು ಲೇಖನಗಳ ಸಹಕಾರ ಪಡೆದಿದ್ದು ಅವರಿಗೂ ವಿಜಯನಗರ ಸಾಂಸ್ಕೃತಿಕ ಆಯಾಮ ಕೃತಿ ರಚಿಸಿದ ಶ್ರೀ ವಿರೂಪಾಕ್ಷ ಪೂಜಾರಹಳ್ಳಿ ಅವರಿಗೂ ಅಭಿನಂದನೆಗಳು.

೩೦. ಹಸಿರುವಾಣೆ: ಹಂಪಿ ಪರಿಸರದ ಒಂದು ವಿಶಿಷ್ಟ ತೆರಿಗೆ

ಡಾ.ಸಿ.ಎಸ್.ವಾಸುದೇವನ್

ಶಾಸನಗಳು ಪ್ರಾಚೀನ ಕಾಲದ ಕೈಗನ್ನಡಿಗಳಿದ್ದಂತೆ. ಅವುಗಳು ಪ್ರಾಚೀನ ಕಾಲದ ಅನೇಕ ಮಹತ್ವದ ಸಂಗತಿಗಳನ್ನು ಹೊರಗೆಡವುತ್ತವೆ ಹಾಗು ರಾಜಕೀಯ, ಸಾಮಾಜಿಕ, ಧಾರ್ಮಿಕ ಆರ್ಥಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ಕಟ್ಟಲು ನೆರವಾಗುವ ಬಹುದೊಡ್ಡ ಸಾಧನವೆಂದರೆ ತಪ್ಪಾಗಲಾರದು. ಶಾಸನಗಳ ಅಧ್ಯಯನವು ಇತಿಹಾಸದ ಅನೇಕಾನೇಕ ಮಜಲುಗಳನ್ನು ನಮ್ಮ ಮುಂದಿಡುತ್ತವೆ. ಶಾಸನಗಳು ಅಂದಿನ ರಾಜ ಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಷಯಗಳನ್ನು ಒಳಗೊಂಡಿರುವಂತೆ ಆರ್ಥಿಕ ವಿಷಯಗಳನ್ನು ಸಹ ಒಳಗೊಂಡಿರುವುದು ಸಾಮಾನ್ಯವಾದ ಸಂಗತಿ. ರಾಜ್ಯದ ಬೊಕ್ಕಸಕ್ಕೆ ಆದಾಯವಾಗಿ ಬಂದು ಸೇರುತ್ತಿದ್ದ ಹಣವನ್ನು ತೆರಿಗೆಯ ರೂಪದಲ್ಲಿ ಸಂಗ್ರಹಿಸಲಾಗುತ್ತಿತ್ತು. ವಿವಿಧ ತೆರಿಗೆಗಳನ್ನು ವಿವಿಧ ರೂಪದ ವಸ್ತು ಮತ್ತು ಭೂಮಿ ಗಳಿಗೆ ವಿಧಿಸಲಾಗುತ್ತಿದ್ದಿತೆಂಬುದನ್ನು ಶಾಸನಗಳ ಅಧ್ಯಯನವು ತಿಳಿಸುತ್ತದೆ. ತೆರಿಗೆಗಳಾದ ಸುಂಕ, ಸುವರ್ಣಾದಾಯ, ಭತ್ತಾದಾಯ, ರೊಕ್ಕ, ಬಡ್ಡಿ, ಮುಂತಾದವು ಗಳನ್ನು ನಗದು ಮತ್ತು ವಸ್ತುಗಳ ರೂಪದಲ್ಲಿ ಸಂಗ್ರಹಿಸುವುದು ವಾಡಿಕೆಯಲ್ಲಿದ್ದಿತು. ಉದಾಹರಣೆಗೆ ಬೆಳೆದ ಧಾನ್ಯವಾದ ಭತ್ತವನ್ನು ಇಂತಿಷ್ಟು ಅಳತೆಯ ಭತ್ತದ ಆದಾಯವನ್ನು ಒಬ್ಬ ವ್ಯಕ್ತಿಯು ರಾಜ್ಯಕ್ಕೆ ನೀಡಬೇಕಿತ್ತು. ತೆರಿಗೆಗಳನ್ನು ಸಂಗ್ರಹಿಸಲು ಅಧಿಕಾರಿಗಳಿದ್ದು, ಅವರುಗಳು ಈ ಕಾರ್ಯವನ್ನು ಪೂರೈಸುತ್ತಿದ್ದರು. ಸುಂಕ, ಸಿದ್ಧಾಯ, ಜೋಡಿ, ತಳವಾರಿಕೆ, ಬಿರಾಡ, ನೀರಬಿರಾಡ, ಹಾರಿಕೆ, ಆಳಮಂಜಿ, ಕೂಡಿ ಮರಾಮತ್, ಕಟ್ಟುಕೊಡಿಗೆ, ದಸವಂದ, ವಿಭೂತಿ, ಕಾಣಿಕೆ, ಬಿಟ್ಟಿ, ಸೂಲವರಿ, ಏರಿಅಯ, ನೀರು ಕಂದಾಯ, ಚೆರುವು ಕುಂಚಾಲು, ಕಾಲುವೆ ಸುವರ್ಣಾದಾಯ, ಆದಾಯ ಸಕಲ ಭತ್ತಾದಾಯ[೧] ಮುಂತಾದವುಗಳು ನೇರ ತೆರಿಗೆಗಳಾಗಿದ್ದವು. ಇವಲ್ಲದೆ ವಸ್ತುಗಳ ಮೇಲೆಯು ತೆರಿಗೆಳನ್ನು ವಿಧಿಸಿ ಸಂಗ್ರಹಿಸಲಾಗುತ್ತಿತ್ತು. ಇದರಿಂದ ರಾಜ್ಯದ ಬೊಕ್ಕಸಕ್ಕೆ ಆದಾಯದ ರೂಪದಲ್ಲಿ ಹಣವು ಸಂಗ್ರಹಗೊಂಡು, ಅದನ್ನು ಪ್ರಜಾಹಿತಾತ್ಮಕ ಕಾರ್ಯ ದಲ್ಲಿ ಬಳಸಲಾಗುತ್ತಿತ್ತು. ಕೆಲವೊಂದು ಸಂದರ್ಭದಲ್ಲಿ ಒಂದು ಗ್ರಾಮದ ಉತ್ಪನ್ನ ಅಥವಾ ಆದಾಯವನ್ನು ಸಹ ಶಾಸನಗಳು ಉಲ್ಲೇಖಿಸಿವೆ. ದೇವಾಲಯಗಳಿಗೆ ದಾನ ಗಳನ್ನು ನೀಡುವಾಗ ಈ ತೆರಿಗೆಗಳನ್ನು ರಾಜ್ಯದ ಬೊಕ್ಕಸದ ಬದಲಾಗಿ ದೇವಾಲಯದ ಭಂಡಾರಕ್ಕೆ ನೀಡಲಾಗುತ್ತಿತ್ತು. ಅಂದರೆ ತೆರಿಗೆ ಪಾವತಿಸುವವರು ರಾಜ್ಯಕ್ಕೆ ನೀಡುವ

ತೆರಿಗೆಯನ್ನು ದೇವಾಲಯದ ಭಂಡಾರಕ್ಕೆ ನೀಡುತ್ತಿದ್ದರು. ಈ ಸಂಗತಿಗಳನ್ನು ಶಾಸನಗಳ ಅಧ್ಯಯನದಿಂದ ಕಂಡುಕೊಳ್ಳಬಹುದಾಗಿದೆ.

ಮಧ್ಯಕಾಲೀನ ಸಾಮ್ರಾಜ್ಯವಾದ ವಿಜಯನಗರ ಅರಸರ ಆಳ್ವಿಕೆಯ ಕಾಲದಲ್ಲಿ ಇಂತಹ ವಿಸ್ತೃತವಾದ ತೆರಿಗೆ ಪದ್ಧತಿ ಬಳಕೆಯಲ್ಲಿದ್ದಿತು.[೨] ಎಲ್ಲರೂ ಬಲ್ಲಂತೆ ವಿಜಯನಗರ ಸಾಮ್ರಾಜ್ಯವು ಇಂದಿನ ದಕ್ಷಿಣ ಭಾರತದ ಬಹುತೇಕ ಭಾಗಗಳನ್ನು ಒಳಗೊಂಡಿದ್ದಿತು. ಆಯಾ ಪ್ರಾದೇಶಿಕ ವಲಯಗಳಲ್ಲಿ ಪ್ರಚಲಿತದಲ್ಲಿದ್ದತೆರಿಗೆ ಪದ್ಧತಿಯನ್ನು ವಿಜಯನಗರದ ಆರಸರು ಮುಂದುವರಿಸಿದರು.[೩] ಅರಸರ ಬದಲಾವಣೆ ಯೊಂದಿಗೆ, ಹಾಗು ಕಾಲ ಕಾಲಕ್ಕೆ, ಪ್ರಾದೇಶಿಕ ಬೇಡಿಕೆ ಮತ್ತು ಅಗತ್ಯತೆಗಳಿಗೆ ಅನುಗುಣವಾಗಿ ಹೊಸ ತೆರಿಗೆಗಳನ್ನು ವಿಧಿಸಲಾದ ವಿಷಯವನ್ನು ಆಯಾ ಪ್ರದೇಶಗಳ ಶಾಸನಗಳು ತಿಳಿಸುತ್ತವೆ. ಅವುಗಳು ಕೆಲವೊಮ್ಮೆ ತಾತ್ಕಾಲಿಕವಾಗಿ ಪ್ರಚಲಿತದಲ್ಲಿದ್ದು ನಂತರ ಅವುಗಳನ್ನು ಕೈಬಿಟ್ಟಂತೆ ತೋರುತ್ತವೆ. ಈ ಹಿನ್ನೆಲೆಯಲ್ಲಿ ಹಂಪಿ ಪರಿಸರದ ಕೆಲವು ಶಾಸನಗಳು ಒಂದು ಅಪರೂಪದ ತೆರಿಗೆಯನ್ನು ಕುರಿತು ಪ್ರಸ್ತಾಪಿಸುತ್ತವೆ. ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಕಾಲದಲ್ಲಿ ಹೊರಡಿಸಲಾದ ಅಥವಾ ಅವರ ಕಾಲಕ್ಕೆ ಸಂಬಂಧಿಸಿದ ಸಹಸ್ರಾರು ಶಾಸನಗಳಲ್ಲಿ ಈ ತೆರಿಗೆಯನ್ನು ಕುರಿತು ಉಲ್ಲೇಖವಿರುವುದಿಲ್ಲ. ಇದು ಹಂಪಿ ಪ್ರದೇಶಕ್ಕೆ ಮಾತ್ರ ಸೀಮಿತಗೊಂಡಿರುವಂತೆ ಕಂಡುಬರುತ್ತದೆ. ಸದರಿ ತೆರಿಗೆಯ ಹೆಸರು ಹಸಿರುವಾಣಿ ಸುಂಕ. ಮೇಲ್ನೋಟಕ್ಕೆ ಇದು ಸಾಮಾನ್ಯವಾದ ಸುಂಕವೆಂದು ಕಂಡುಬಂದರೂ ಇದು ವಿಶೇಷ ಸುಂಕವಾಗಿದೆ.

ಕೃಷ್ಣದೇವರಾಯನ ಕಾಲಕ್ಕೆ ಸೇರಿದ ಹಂಪಿಯ ಒಂದು ಶಾಸನವು ಮೊದಲ ಬಾರಿಗೆ ಈ ತೆರಿಗೆಯನ್ನು ಕುರಿತು ಉಲ್ಲೇಖಿಸುತ್ತದೆ.[೪] ಕೃಷ್ಣದೇವರಾಯನು ಉದಯಗಿರಿಯಿಂದ ತಂದ ಬಾಕಲಕೃಷ್ಣ ದೇವರನ್ನು ಪ್ರತಿಷ್ಠೆ ಮಾಡಿ, ದೇವರ ನಿತ್ಯಪೂಜೆ, ಅಂಗರಂಗ ಭೋಗ, ಪಂಚಪರ್ವಗಳಿಗೂ ಆನೇಕ ದಾನಗಳನ್ನು ನೀಡುತ್ತಾನೆ. ದೇವರಿಗೆ ನವರತ್ನ ಖಚಿತವಾದ ಆಭರಣಗಳನ್ನು ಬೆಳ್ಳಿ, ಚಿನ್ನ, ಪರಿಕರಗಳನ್ನು ನೀಡುತ್ತಾನೆ. ದೇವರ ಪೂಜೆಗಾಗಿ ಹುಲಿಗೆ ಮಾಗನೆಗೆ ಸೇರಿದ ಅತ್ತಿವಟೆ ಗ್ರಾಮವನ್ನು ಮತ್ತು ಅದಕ್ಕೆ ಸಲ್ಲುವ ಅನೇಕ ಕುರ್ವಗಳನ್ನು ಕಂಪಿಲೆ ಮಾಗಣಿಗೆ ಸೇರಿದ ದೇವಲಾಪುರ, ಹೊಸವೂರ ಮಾಗಣೆಗೆ ಸೇರಿದ ಮುದ್ದಾಲಾಪುರ, ಬಾದನಹಟ್ಟಿ, ತೊಗಲುಗಲ್ಲು ಗ್ರಾಮಗಳು, ಕಳಸಾಪುರ ಮಾಗಣೆಗೆ ಸೇರಿದ ಹರಿಯಸಮುದ್ರ, ತೆಕ್ಕಲಕೋಟೆ ಸೀಮೆಗೆ ಸೇರಿದ ರುದ್ರಪಾದ ಗ್ರಾಮಗಳನ್ನು ರಾಯದುರ್ಗದ ಸೀಮೆಗೆ ಸಲ್ಲುವ ಬ್ರಹ್ಮಸಮುದ್ರ ಮತ್ತು ಅದಕ್ಕೆ ಸಲ್ಲುತ್ತಿದ್ದ ಕೆಲವು ತೆರಿಗೆಗಳು, ತಿರುಮಲದೇವಿಯರ ಪಟ್ಟಣಕ್ಕೆ ಸೇರಿದ ರಾಮಾಪುರದ ಗ್ರಾಮದ ಕೆಲವು ಗದ್ದೆಗಳು, ಯೆಂಮೆ ಸುಂಕ, ಹಸಿರುವಾಣಿ ಸುಂಕವನ್ನು ಬಿಡುತ್ತಾನೆ. ಪಾರ್ಥಿವ ಸಂವತ್ಸರದಲ್ಲಿ ತೊಗಲುಗಲ್ಲು ಗ್ರಾಮವನ್ನು ಅನಂತಶಯನ ದೇವರಿಗೆ ಸಮರ್ಪಿಸುತ್ತಾನೆ. ನೆಳಲಹುಣಿಸೆಗ್ರಾಮದ[೫] ಬ್ರಾಹ್ಮಣರಿಗೆ ಸೇರಿದ ಗದ್ದೆ ಗಳನ್ನು ಅವರಿಂದ ಬಿಡಿಸಿ ಪರ್ಯಾಯವಾಗಿ ಅವರಿಗೆ ಬದಲಿ ಭೂಮಿಯನ್ನು ದಾನ

ನೀಡುತ್ತಾನೆ. ಶಾಸನದ ತೇದಿಯು ಶ. ೧೪೩೫, ಭವಸಂವತ್ಸರ, ಪಾಲ್ಗುಣ, ಶು.೩, ಶುಕ್ರವಾರ ಎಂದಿದ್ದು, ಕ್ರಿ.ಶ.೧೫೧೫ ಫೆಬ್ರವರಿ ೧೬ಕ್ಕೆ ಸರಿಹೊಂದುತ್ತದೆ.

ಅಚ್ಯುತರಾಯ ದೇವಾಲಯದ ಉತ್ತರ ಗೋಪುರದ ಎಡಬದಿಯಲ್ಲಿರುವ ಶಾಸನವು ಅಚ್ಯುತರಾಯನ ಕಾಲಕ್ಕೆ ಸೇರಿದುದಾಗಿದೆ.[೬] ಇದರ ತೇದಿಯು ಕ್ರಿ.ಶ. ೧೫೩೪. ತ್ರುಟಿತವಾದ ಈ ಶಾಸನವು ಶ. ೧೪೫೬, ಜಯ ಸಂವತ್ಸರ, ವೈಶಾಖ ಶು. ೧೩, ಅಂದರೆ ಕ್ರಿ.ಶ. ೧೫೩೪ಕ್ಕೆ ಸರಿಹೊಂದುತ್ತದೆ. ಈ ಶಾಸನವು ಅಚ್ಯುತರಾಯನ ಆಳ್ವಿಕೆಯ ಕಾಲದಲ್ಲಿ ಸಕಲರಾಜವೊಡೆಯನ ಮಗನಾದ ಹಿರಿಯ ತಿರುಮಲರಾಜ ವೊಡೆಯನು ತುಂಗಭದ್ರಾ ತೀರದಲ್ಲಿ ಶ್ರೀತಿರುವೆಂಗಳನಾಥ ದೇವರ ಪ್ರತಿಷ್ಠೆ ಮಾಡಿದ. ಆಗ ರಾಜನು ನವರತ್ನ ಖಚಿತವಾದ ಆಭರಣಗಳನ್ನು ಚಿನ್ನ ಬೆಳ್ಳಿಯ ಪರಿಕರಗಳನ್ನು ನೀಡಿ ದೇವರ ಅಮೃತಪಡಿ, ಅಂಗರಂಗಭೋಗ, ನೈವೇದ್ಯ, ಮಾಸೋತ್ಸವ, ಪಂಚ ಪರ್ವ, ರಥೋತ್ಸವ, ಕೊಡೆತಿರುನಾಳು, ಮುಂತಾದ ಸೇವೆಗಳಿಗೆ ಹೊರ ಮಲೆನಾಡಿಗೆ ಸೇರಿದ ಅಚ್ಯುತಾಪುರವೆಂದು ಪ್ರತಿನಾಮ ಹೊಂದಿದ ಚೋರಮನೂರು ಗ್ರಾಮವನ್ನು ನೀಡಿದ. ಶಾಸನದಲ್ಲಿ ತಿರುಮಲರಾಜನು ಕಟ್ಟಿಸಿದ ಅಚ್ಯುತರಾಯಪೇಟೆಯ ಎಲ್ಲೆ ಗಳನ್ನು ಹೇಳಿದೆ. ತಿರುಮಲರಾಜನು ಕೋಟಿನಹಾಳು, ಮೊದಲಾದ ೩ ಗ್ರಾಮಗಳನ್ನು ದೇವಾಲಯದ ಪರಿಚಾರಕರಿಗೆ (ಕರ್ಮಿಗಳಿಗೆ) ಜೀವಿತ ಪ್ರಸಾದಕ್ಕೆ ಕಟ್ಟಳೆಯನ್ನು ಅಚ್ಯುತರಾಯನು ಮಾಡುತ್ತಾನೆ. ಪ್ರಸ್ತುತ ಶಾಸನವು ತುಂಗಭದ್ರಾ ತೀರದ ಸೀತಾ ಕೊಂಡ, ತೆಂಕಲು ಭೂಪತಿಕೆರೆ ಮತ್ತು ಚತುಸೀಮೆ ಒಳಗಾದ ಪೇಟೆಯ ತೋಟ ಮತ್ತು ಹಸಿರುವಾಣಿ (ಸುಂಕ), ಸರ್ವಮಾನ್ಯದ ಪೇಟೆ ಒಂದನ್ನು ಸಕಲರಾಜನ ಮಗ ಹಿರಿಯ ತಿರುಮಲರಾಜನು ಕ್ರಯಕ್ಕೆ ಕೊಂಡು ದಾನ ನೀಡಿದನೆಂದು ತಿಳಿಸುತ್ತದೆ. ಮೇಲಿನ ಎರಡೂ ಶಾಸನಗಳಲ್ಲಿ ಹಸಿರುವಾಣೆಯ ಸುಂಕವನ್ನು ತೋಟದ ಸಂಬಂಧ ವಾಗಿ ಬಳಸಲಾಗಿದೆ. ಇದೇ ತೆರಿಗೆಯನ್ನು ಕುರಿತು ಇನ್ನೊಂದು ಶಾಸನವು ತುಸು ಅಧಿಕ ಮಾಹಿತಿಯನ್ನು ನೀಡುತ್ತದೆ.

ಪಟ್ಟಾಭಿರಾಮ ದೇವಾಲಯದಲ್ಲಿರುವ ಮಂಟಪದ ಪೂರ್ವದ ಗೋಡೆಯಲ್ಲಿನ ಶಾಸನವು ಶಕವರ್ಷ ೧೪೬೧, ವಿಕಾರಿ ಸಂವತ್ಸರ, ಪುಷ್ಯ, ಶು.೧ ಎಂದಿದ್ದು, ಇದು ಕ್ರಿ.ಶ. ೧೧.೧೨.೧೫೩೯ರ ಗುರುವಾರಕ್ಕೆ ಸರಿಹೊಂದುತ್ತದೆ. ತ್ರುಟಿತವಾಗಿರುವ ಈ ಶಾಸನವು ಅಚ್ಯುತರಾಯನ ಕಾಲಕ್ಕೆ ಸೇರಿದ್ದು, ಅವನ ಆಳ್ವಿಕೆಯ ಕಾಲದಲ್ಲಿ ಅಚ್ಯುತ ರಾಯ ಮಲ್ಲಪಂಣ ಅಯ್ಯನವರು ರಘುನಾಥ ದೇವರ ಸೇವೆಗಾಗಿ ಭೂದಾನ ನೀಡಿದ ಉಲ್ಲೇಖವಿದೆ.[೬] ವರದಾದೇವಿ ಅಮ್ಮನವರ ಪಟ್ಟಣದಲ್ಲಿನ ರಘುನಾಥದೇವರ ಸೇವೆಗಾಗಿ ದೊರವದಿ ಸೋಮಲಾಪುರದ ಸೀಮೆಯಲ್ಲಿರುವಂತಹ ತೋಟದ ಬೆಳೆಗಳ ಹಸಿರುವಾಣಿ ಸುಂಕವನ್ನು ೧೫೦ ಗದ್ಯಾಣಗಳ ಲೆಕ್ಕದಲ್ಲಿ ಕಂದಾಚಾರಕ್ಕೆ ನೀಡುತ್ತಾರೆ. ಶಾಸನವು ಬಹಳ ಸ್ಪಷ್ಟವಾಗಿ ರಘುನಾಥದೇವರ ಅಮೃತಪಡಿಗೆ ಸಲುವ ದೊರವದಿ ಸೋಮಲಾಪುರದ ಸೀಮೆಯಲು ಪುಟಿದಂಥ ತೆಂಗು, ಹಲಸು, ಎಲೆಬಳ್ಳಿ, ಹುಣಿಸೆ,

ನಿಂಬೆ, ಮಾದಳ ಮೊದಲಾದ ಹಸುರುವಾಣಿ ಅದಕ್ಕೆ ಸಲುವ ಸ್ವಾ(ಂ)ಮ್ಯ ಏನು ಉಂಟಾದನು ಅಚ್ಯುತರಾಯ ಮಲ್ಲಪಂಣ ಅಯ್ಯನವರೂ ಯೀ ಹಸಿರುವಾಣಿಯನೂ ಕಂದಾಚಾರಕ್ಕೆ ...... ಬದಲು ಸಲುವ ....ಮ ಹಡಪಗ ೧೦೫೦ ಮಿ ೧ ಕಂದಾಚಾರದ ಪ್ರಾಕು ... ಸುಂಕು ಮಾನ್ಯ ಎಂದು ವಿವರಿಸಿದೆ.

ಮೇಲೆ ಉಲ್ಲೇಖಿಸಿದ ಮೂರು ಶಾಸನಗಳು ಹಸಿರುವಾಣಿ ಸುಂಕವು ತೋಟದ ಉತ್ಪನ್ನಗಳ ಮೇಲೆ ವಿಧಿಸಲಾಗುತ್ತಿದ್ದ ಸುಂಕವೆಂದು ಸ್ಪಷ್ಟಪಡಿಸುತ್ತದೆ. ಅದರಲ್ಲಿಯೂ ಕೊನೆಯದಾಗಿ ಉಲ್ಲೇಖಿಸಿದ ಶಾಸನವು ತೆಂಗು, ಹಲಸು, ಎಲೆಬಳ್ಳಿ, ಹುಣಿಸೆ, ನಿಂಬೆ, ಮಾದಳ ಮುಂತಾದ ಫಲ ನೀಡುವ ಮರಗಳ ತೋಟಗಳಿಗೆ ವಿಧಿಸಲಾಗುತ್ತಿದ್ದ ತೆರಿಗೆಯು ಹಸಿರುವಾಣಿ ಸುಂಕ ಎಂಬುದನ್ನು ದೃಢಪಡಿಸುತ್ತದೆ. ಇದು ಅಂದಿನ ಕಾಲದ ಅವರ ಪರಿಸರ ಪ್ರಜ್ಞೆಯನ್ನು ತೋರಿಸುತ್ತದೆ. ಜೊತೆಗೆ ಅವರು ತೆರಿಗೆಗಳಿಗೆ ಸೂಕ್ತವಾದ ಹೆಸರನ್ನು ನೀಡುತ್ತಿದ್ದರು ಎಂಬುದು ಸಹ ವ್ಯಕ್ತವಾಗುತ್ತದೆ. ಒಂದು ಪ್ರದೇಶವನ್ನು ಹಸಿರುಕ್ರಾಂತಿಗೆ ಒಳಪಡಿಸಿ, ಅಲ್ಲಿ ಸಮೃದ್ಧವಾದ ಬೆಳೆ ಮತ್ತು ಫಲಗಳನ್ನು ಬೆಳೆಯುವುದು ಹಾಗೂ ಹಸಿರುಕ್ರಾಂತಿಯ ಫಲಾವಾಗಿ ಉಂಟಾಗಬಹುದಾದ ಹಸಿರುಕೊಡೆ ಅಥವಾ ಚಪ್ಪರ (ವಾಣಿ)ಕ್ಕೆ ಹಸಿರುವಾಣಿ ಎಂದು ತೆರಿಗೆಗೆ ಸೂಚ್ಯವಾಗಿ ಹೆಸರಿಸಿರುವುದು ನಿಜಕ್ಕೂ ಶ್ಲಾಘನೀಯ. ಈ ನಿರ್ದಿಷ್ಟ ತೆರಿಗೆಯು ರಾಜ್ಯದ ಬೇರೆಡೆಯಲ್ಲಿ ಬಳಕೆಯಲ್ಲಿದ್ದಿರಬಹುದು. ಆದರೆ ಈ ಕುರಿತಂತೆ ಪ್ರಸ್ತುತ ಶಾಸನದಲ್ಲಿ ಮಾಹಿತಿ ಲಭ್ಯವಿಲ್ಲವಾದುದರಿಂದ ಹಸಿರುವಾಣಿ ಸುಂಕವು ಮುಖ್ಯವಾಗಿ ಹಂಪಿ ಪರಿಸರದಲ್ಲಿ ವಿಧಿಸಲಾಗುತ್ತಿದ್ದ ಸುಂಕ ಎಂದು ಸದ್ಯಕ್ಕೆ ತೀರ್ಮಾನಿಸಿಸಬಹುದು. "ರಾಜಧಾನಿ ಪ್ರದೇಶವನ್ನು ಹಸಿರು ಕ್ರಾಂತಿಗೆ ಒಳಪಡಿಸಿರುವುದು ಇಲ್ಲಿ ಗಮನಾರ್ಹ".

ಇದೇ ಸಂದರ್ಭದಲ್ಲಿ ಹಸಿರುವಾಣಿಯಂತೆ ಬಳಕೆಯಲ್ಲಿದ್ದ ಇನ್ನೊಂದು ತೆರಿಗೆಯನ್ನು ಹಂಪಿಯ ಶಾಸನಗಳು ಉಲ್ಲೇಖಿಸುತ್ತವೆ. ಫಲವೃಕ್ಷಗಳ ಸುಂಕ ಎಂದು ಎರಡು ಶಾಸನಗಳು ಉಲ್ಲೇಖಿಸಿದರೆ ಒಂದು ಶಾಸನವು ಫಲಗುತ್ತಿಗೆ ಎಂದು ವಿವರಿಸು ತ್ತದೆ. ಸದಾಶಿವರಾಯನು ವಿದ್ಯಾನಗರದಲ್ಲಿ ರಾಜ್ಯಭಾರ ಮಾಡುತ್ತಿದ್ದಾಗ ಕ್ರಿ.ಶ.೧೫೫೪ ರಲ್ಲಿ ಶ್ರೀವಿಠ್ಠಲ ದೇವರಿಗೆ ಹರೀತಗೋತ್ರದ ಆಪಸ್ತಂಭ ಸೂತ್ರದ ಯಜುಶಾಖಾಧ್ಯಾಯಿಯಾದ ಮುಸಲಿಮಡುವಿನ ವೀರರಾಮರಾಜ ತಿಂಮರಾಜನ ಮಗನು ವಿಜಯನಗರದ ಮೂಡಣದಲ್ಲಿರುವ ಉದಯಗಿರಿ ಬಾಗಿಲ ಮುಂದೆ ಇರುವ ಅವನ ಅಮರಮಾಗಣೆಗೆ ಸಲ್ಲುವ ಅನಂತಾಪುರ ಗ್ರಾಮವನ್ನು ಸದಾಶಿವರಾಯನ ಕೈಲಿ ಧಾರೆಯನೆರಸಿ ಕೊಡುತ್ತಾನೆ. ಈ ಗ್ರಾಮದ ಉತ್ಪನ್ನವಾದ ಗಟ್ಟಿ ಗದ್ಯಾಣ ೨೦೦ ವರಹವನ್ನು ವಿಠ್ಠಲ ದೇವರಿಗೆ ಮತ್ತು ಲಕ್ಷ್ಮೀದೇವಿ ಅಮ್ಮನವರ ಪೂಜೋಪಚಾರಗಳಿಗೆ ಬಿಡುತ್ತಾನೆ. ಈ ಉತ್ಪನ್ನಗಳಲ್ಲದೇ ಶಾಸನಸ್ಥವಾಗಿ ಬಂದು ದೂರೂರು, ವಿಜಯಸಮುದ್ರ, ಮಕರಕೊಂಬನಹಳ್ಳಿಗೆ ಪ್ರತಿನಾಮವಾದ ವಿಜಯಸಮುದ್ರ ಅಗ್ರಹಾರದಲು ೧ ವ್ರಿತ್ತಿ, ಫಲಗತ್ತಿಗೆ ವರಹ ಗದ್ಯಾಣ ೧೦ ಸಹ ಮರಕೊಂಬನಹಳ್ಳಿಗೆ ಪ್ರತಿನಾಮವಾದ

ತಿಮ್ಮಸಾಗರ ಅಗ್ರಹಾರದಲು ವ್ರಿತ್ತಿ ೪ ಕ್ಕೆ ಫಲಗುತ್ತಿಗೆ ವರಹ ಗದ್ಯಾಣ ೨೦ ಸಹ ಅಂತು ವರಹ ಗಟ್ಟಿ ಗದ್ಯಾಣ ೩೦೦ ವರಹಗಳನ್ನು ಬೆಳಗಿನ ಜಾವದ ಹರಿವಾಣ, ನಂದಾದೀಪಕ್ಕೆ ದಿನವೊಂದಕ್ಕೆ ೧ ಸೇರು ತುಪ್ಪ, ಗಂಧ ಪರಿಮಳಕ್ಕಲ್ಲದೆ ವಿಠ್ಠಲ ದೇವರಿಗೆ ಮತ್ತು ಲಕ್ಷ್ಮೀದೇವಿಯಮ್ಮನವರಿಗೆ ದಿನಕ್ಕೆ ತಲಾ ಒಂದೊಂದರಂತೆ ಎರಡು ಹಾರಗಳು, ಹೀಗೆ ವರ್ಷಕ್ಕೆ ಏರ್ಪಾಟು ಮಾಡಿ ಅವುಗಳ ಬೆಲೆಯನ್ನು ನಿಷ್ಕರ್ಶೆ ಮಾಡುತ್ತಾನೆ ಎಂದು ಶಾಸನವು ಉಲ್ಲೇಖಿಸಿದೆ.[೮] ಸದರಿ ಶಾಸನವು ಗ್ರಮಗಳಲ್ಲಿನ ಫಲ ಬಿಡುವ ಮರಗಳ ಉತ್ಪನ್ನಗಳನ್ನು ಗುತ್ತಿಗೆ ನೀಡಿ, ೩೦೦ ಗದ್ಯಾಣಗಳ ಗುತ್ತಿಗೆ ಹಣವನ್ನು ಸಂಗ್ರಹಿಸಿ ಅದನ್ನು ದೇವಾಲಯಕ್ಕೆ ದಾನ ನೀಷ್ಕಲಾಗಿರುವ ವಿಷಯವನ್ನು ದಾಖಲಿಸಿದೆ. ಶಾಸನವು ಫಲಗುತ್ತಿಗೆ ಮತ್ತು ಅದರ ನಿರ್ದಿಷ್ಟ ಮೊತ್ತವನ್ನು ಹಣ ರೂಪದಲ್ಲಿ ಉಲ್ಲೇಖಿಸಿರುವುದು ಗಮನಾರ್ಹ.

ಸದಾಶಿವರಾಯನ ಕಾಲಕ್ಕೆ ಸಂಬಂಧಿಸಿದ ಇನ್ನೊಂದು ಶಾಸನವು ವಿಠ್ಠಲದೇವಾಲಯದ ಸಭಾಮಂಟಪದ ಪೂರ್ವದ ಗೋಡೆಯಲ್ಲಿದೆ.[೯] ಇದರ ತೇದಿಯು ಶಕ ೧೪೮೩, ದುರ್ಮತಿ ಸಂವತ್ಸರ, ಜೇಷ್ಠ ಶು೫. ಸೋಮವಾರ ಎಂದಿದ್ದು ಅದು ೧೯.೫.೧೫೬೧ಕ್ಕೆ ಸರಿಹೊಂದುತ್ತದೆ. ಅರಸನು ರಾಜ್ಯಭಾರ ಮಾಡುತ್ತಿದ್ದಾಗ ಶ್ರೀವಿಠ್ಠಲ ದೇವರ ಅಮೃತಪಡಿ ನೈವೇದ್ಯಕ್ಕೆ ಅರವೀಡು ರಾಮರಾಜ ಕೊಂಡ್ಯೆಯದೇವನ ಮೊಮ್ಮಗನೂ ಕೋನೆಟ್ಯೆಯ್ಯನ ಮಗನೂ ಆದ ಕೋನೇಟಿ ಕೊಂಡರಾಜಯ್ಯನು ತಮ್ಮ ತಂದೆಗೆ ಪುಣ್ಯವಾಗಬೇಕೆಂದು ಕೆಲವು ದತ್ತಿಗಳನ್ನು ಬಿಡುತ್ತಾನೆ. ಮಕರಸಂಕ್ರಮಣದ ಪುಣ್ಯಕಾಲದಲ್ಲಿ ಶ್ರೀವಿಠ್ಠಲದೇವರಿಗೆ ಕೊಂಡರಾಜಯ್ಯನ ತಮ್ಮ ಉದಯಗಿರಿ ತಿಂಮರಾಜಯ್ಯನು ೧೦ ದಿನಗಳ ತಿರುನಾಳ ಚೆರುಪನು ಮಾಡಿಸಲು ಪುದುವಟ್ಟು ನೀಡಿದ್ದನು. ಕೊಂಡರಾಜಯ್ಯನು ೧೧ನೆಯ ದಿನದ ವೆಚ್ಚವನ್ನು ನೀಡಿದ್ದನು ; ಈತನು ೧೨ನೆಯ ದಿನದ ವೆಚ್ಚವನ್ನು ಸೇರಿಸಿ ನೀಡಿದನು. ಇದಕ್ಕಾಗಿ ರಾಮಸಾಗರದಲ್ಲಿ ಹತ್ತು ಕೊಳಗದ ಗದ್ದೆಯನ್ನು ನೀಡುತ್ತಾನೆ. ಇದರೊಂದಿಗೆ ಈ ಗದ್ದೆಯ ಒಳಗಿರುವ ಮಾವು, ನೇರ್ಲ್ಲು ಸಹವಾಗಿ ಸಕಲ ಫಲವೃಕ್ಷಗಳು, ಬಿರಾಡ, ವಿಶೇಶ, ಬಿರಾಡ, ಬಿಟ್ಟಿ, ಜೋಡಿ, ಆಯ, ಸ್ವಾಮ್ಯ, ಸುಂಕ ಮೊದಲಾದ ಸಕಲ ಸುವರ್ಣಾದಾಯ ಮತ್ತು ಸಕಲಭತ್ತ ಆದಾಯಗಳನ್ನು ವಿಠ್ಠಲದೇವರಿಗೆ ನೀಡುತ್ತಾನೆ. ಪ್ರಸ್ತುತ ಶಾಸನವು ಗದ್ದೆಯಲ್ಲಿನ ಮಾವು ಮತ್ತು ನೇರ್ಲ್ಲು ಮರಗಳನ್ನು ಒಳಗೊಂಡಂತೆ ಸಕಲ ಫಲ ನೀಡುವ ಮರಗಳ ಮೇಲೆ ವಿಧಿಸಲಾಗುತ್ತಿದ್ದ ಸುಂಕಗಳನ್ನು ಇತರೆ ತೆರಿಗೆಗಳೊಂದಿಗೆ ಉಲ್ಲೇಖಿಸಿರುವುದುರಿಂದ ಫಲವೃಕ್ಷಗಳ ಮೇಲೆ ತೆರಿಗೆ ವಿಧಿಸಲಾಗುತ್ತಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಮೂರನೆಯ ಶಾಸನವು ಸಹ ಸದಾಶಿವರಾಯನ ಕಾಲಕ್ಕೆ ಸೇರಿದುದಾಗಿದೆ. ವಿಠ್ಠಲದೇವಾಲಯದ ಗರ್ಭಗೃಹದ ಉತ್ತರ ಅಧಿಷ್ಠಾನದ ಮೇಲಿರುವ ಶಾಸನದ ತೇದಿಯು ಶಕೆ ೧೪೮೫, ರುಧಿರೋದ್ಗಾರಿ ಸಂವತ್ಸರ, ಶ್ರಾವಣ, ಬಹುಳ ೭ರಲ್ಲಿ ಎಂದಿದ್ದು ಕ್ರಿ.ಶ. ೫.೮.೧೫೬೩ರ ಗುರುವಾರಕ್ಕೆ ಸರಿಹೊಂದುತ್ತದೆ.[೧೦] ಈ ಶಾಸನವು

ಸದಾಶಿವರಾಯನು ವಿದ್ಯಾನಗರದಲ್ಲಿ ರಾಯಭಾರ ಮಾಡುತ್ತಿದ್ದಾಗ ನಮ್ಮಾಳ್ವರನು ದೇವರ ಉದಯಕಾಲದ ನೈವೇದ್ಯವನ್ನು ತನಗೆ ಸಕಲ ವಾದ್ಯದ ಸಮೇತ ಕಳುಹಿಸಲು ಶ್ರೀ ವಿಠ್ಠಲದೇವರ ಭಂಡಾರಕ್ಕೆ ೬೦ ಘಟ್ಟಿ ವರಹಗಳನ್ನು ಸಮರ್ಪಿಸುತ್ತಾನೆ. ಇದರ ಜೊತೆಗೆ ೧೨ ಕೊಳಗದ ಗದ್ದೆಯನ್ನು ಆ ಸ್ಥಳದಲ್ಲಿನ ವೃಕ್ಷ,ಸಾಂಮ್ಯ, ಆಯ, ಬಿರಾಡ ಮೊದಲಾದವುಗಳನ್ನು ಪುದುವಟ್ಟಾಗಿ (ಪುಲಿವಟ್ಟು) ಬಿಟ್ಟಂತೆ ಹೇಳಿದೆ. ಶಾಸನದಲ್ಲಿ ನೈವೇದ್ಯಕ್ಕಾಗಿ ದಿವೊಂದಕ್ಕೆ ನೀಡಬೇಕಾದ ಪಡಿತರವನ್ನು ವಿವರಿಸಿದೆ. ಮುಖ್ಯವಾಗಿ ಶಾಸನವು 'ಗೌಡ ಸುಬ್ಬಂಣನ ಚುಡನ ಕುಳದ ಗದ್ದೆ ೨ ಹೂಲಿಯ ಹೆಗ್ಗಡೆಯ ಕುಳಗದೆ ೨ ಉಭಯಕುಳ ೨ ಕೆ ಗದೆಯ ಬಿಜವರಿ ಅಕ್ಷರದಲ್ಲಿ ಹಂನೆರಡು ಕೊಳಗದ ಗದ್ದೆಯ ಒಳಗಣ ಮಾವು ಸಹ ಸಕಲ ವೃಕ್ಷ, ಸುವರ್ಣಾದಾಯ, ಬಿರಾಡ, ಆಯ, ಸಾಂಮ್ಯ ಮೊದಲಾದ ರೊಕ್ಕ ಧಾನ್ಯ ಸಹವಾಗಿ ಸರ್ವಮಾನ್ಯವಾಗಿ ಸಮರ್ಪಿಸಿದೆವು' ಎಂದು ಉಲ್ಲೇಖಿಸುತ್ತದೆ. ಪ್ರಸ್ತುತ ಶಾಸನವು ಸಹ ಮಾವು ಮತ್ತು ಸಕಲ ವೃಕ್ಷ ಎಂದು ಹೆಸರಿಸಿರುವುದು ಗಮನಾರ್ಹ. ಫಲ ಮತ್ತು ಹಣ್ಣುಗಳನ್ನು ನೀಡುವ ಮರಗಳಿಗೆ ಫಲವೃಕ್ಷವೆಂದು,[೧೧] ಫಲಗುತ್ತಿಗೆ ಹಾಗೂ ಹಸಿರುವಾಣಿ ಸುಂಕಗಳನ್ನು ಅವುಗಳ ಮೇಲೆ ವಿಧಿಸುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ಸಮಕಾಲೀನ ಸಾಹಿತ್ಯಿಕ ಆಧಾರಗಳು ಹಂಪಿಯ ಪರಿಸರದಲ್ಲಿ ಬೆಳೆಯಲಾಗುತ್ತಿದ್ದ ಫಲ, ಪುಷ್ಪ ಮತ್ತು ಮರಗಿಡಗಳ ಬಗೆಗೆ ಮಾಹಿತಿಯನ್ನು ನೀಡುತ್ತವೆ. ಹರಿಹರನ 'ಪುಷ್ಪರಗಳೆ' ಯು ಹಂಪೆಯ ಪ್ರದೇಶದ ಹೂವುಗಳನ್ನು ಕುರಿತು ವಿವರವಾಗಿ ತಿಳಿಸುತ್ತದೆ. ವಿದೇಶಿ ಪ್ರವಾಸಿಗರ ಕಥಾನಕಗಳು ಸಹ ವಿಪುಲ ಮಾಹಿತಿಯನ್ನು ಒದಗಿಸುತ್ತವೆ.

ವಿಜಯನಗರವನ್ನು ಕುರಿತು ಡೊಮಿಂಗೋ ಪ್ಯಾಸ್[೧೩] (ಪಯಸ್) ಒಂದೆಡೆ ಈ ರೀತಿಯಾಗಿ ಉಲ್ಲೇಖಿಸುತ್ತಾನೆ[೧೪]. "ಈ ಬೆಟ್ಟ ಸಾಲುಗಳು ನಗರದ ಒಳಭಾಗದವರೆಗೆ ಸಾಗುತ್ತವೆ. ಇವೆಲ್ಲ ಸುತ್ತಗುಟ್ಟುಳ್ಳ ಪ್ರದೇಶಗಳ ನಡುವೆ ಭತ್ತ ಬೆಳೆಯುವ ಬಯಲುಗಳು ಮತ್ತು ಕಣಿವೆಗಳಿವೆ, ಲೆಟ್ಯುಸ್ ಮತ್ತು ಕ್ಯಾಬೇಜುಗಳು ಮಾತ್ರವಲ್ಲದೆ ಪೋರ್ತುಗಾಲಿನಲ್ಲಿಯಂತೆ ಕಿತ್ತಲೆ, ನಿಂಬೆ, ಜಂಬೀರ, ಮೂಲಂಗಿ ಮತ್ತಿತರ ತೋಟೋತ್ಪನ್ನಗಳುಳ್ಳ ತೋಟಗಳಿವೆ," ಇನ್ನೊಂದೆಡೆ "ರಾಜನು ನಿರ್ಮಿಸಿದ ಈ ನೂತನ ನಗರವನ್ನು ಬಯಲಿನಲ್ಲಿ ಸ್ಥಾಪಿಸಲಾಗಿದೆ ಮತ್ತು ಅದರ ಸುತ್ತಮುತ್ತ ನೆಲಕ್ಕನುಗುಣವಾಗಿ ನಿವಾಸಿಗಳು ಪ್ರತಿಯೊಂದು ಪ್ರತ್ಯೇಕವಾಗಿರುವ ತೋಟಗಳನ್ನು ಮಾಡಿಕೊಂಡಿರುವರು."

ಪ್ಯಾಸ್‌ನು (ಪಯಸ್) ವಿಜಯನಗರದ ಪೇಟೆಗಳನ್ನು ಹಾಗೂ ಬೀದಿಗಳನ್ನು ವರ್ಣಿಸುತ್ತಾ "ಈ ಬೀದಿಯಲ್ಲಿ ವರ್ತಕರಿದ್ದು ಅಲ್ಲಿ ನೀವು ಎಲ್ಲ ತರಹದ ಮಾಣಿಕ್ಯ ಮತ್ತು ವಜ್ರಗಳು, ಪಚ್ಚೆಗಳು, ಮುತ್ತುಗಳು, ಬಟ್ಟೆ ಮತ್ತು ಭೂಮಿಯ ಮೇಲಿರುವ ಮತ್ತು ನೀವು ಕೊಳ್ಳಬಯಸುವ ಪ್ರತಿಯೊಂದು ತರಹದ ವಸ್ತುವನ್ನೂ ಕಾಣಬಹುದು. ಮತ್ತು ಅಲ್ಲಿ ನೀವು ಪ್ರತಿ ಸಂಜೆ ಸಂತೆಯೊಂದನ್ನು ನೋಡುವಿರಿ. ಅದರಲ್ಲಿ ಅನೇಕ ಸಾಮಾನ್ಯ ಕುದುರೆಗಳನ್ನು ಮತ್ತು ತಟ್ಟುಕುದುರೆಗಳನ್ನು ಹಾಗೂ ಅನೇಕ ಜಂಬೀರ

ಗಳನ್ನು, ನಿಂಬೆಗಳನ್ನು, ಕಿತ್ತಲೆಗಳನ್ನು, ದ್ರಾಕ್ಷಿಗಳನ್ನು ಮತ್ತು ಪ್ರತಿಯೊಂದು ತರಹದ ಕಾಯಿಪಲ್ಯೆ ಮತ್ತು ಹಣ್ಣುಹಂಪಲವನ್ನು ಮತ್ತು ಕಟ್ಟಿಗೆಯನ್ನು ಮಾರುತ್ತಾರೆ ಎಂದು" ಈ ರೀತಿ ತಿಳಿಸಿದ್ದಾನೆ.[೧೫]

ಅವನು ಇನ್ನೊಂದೆಡೆಯಲ್ಲಿ ಕೆಳಕಂಡಂತೆ ಬರೆದಿರುವನು.[೧೬] "ಈ ನಗರದ ಗಾತ್ರದ ಬಗೆಗೆ ನಾನಿಲ್ಲಿ ಬರೆಯುವುದಿಲ್ಲ. ಏಕೆಂದರೆ, ಯಾವ ಸ್ಥಳದಿಂದಲೂ ಅದು ಎಲ್ಲೂ ಕಾಣಿಸದು. ಆದರೆ ನಾನೊಂದು ಗುಡ್ಡ ಏರಿದೆ. ಅಲ್ಲಿಂದ ಅದರ ಬಹುಭಾಗವನ್ನು ನೀಡಲು ಶಕ್ಯವಾಯಿತು. ಅದನ್ನು ಎಲ್ಲೂ ನೋಡಲಾಗಲಿಲ್ಲವೇಕೆಂದರೆ ಅದು ಹಲವಾರು ಬೆಟ್ಟಸಾಲುಗಳ ಮಧ್ಯೆ ಇದೆ. ಅಲ್ಲಿಂದ ನಾನು ನೋಡಿದುದು ರೋಮ್ ನಷ್ಟು ವಿಶಾಲ ವಾಗಿಯೂ ಮತ್ತು ಬಹಳ ಸುಂದರವಾಗಿಯೂ ಕಂಡಿತು. ಅದರೊಳಗೆ ಮತ್ತು ಮನೆಗಳ ತೋಟಗಳಲ್ಲಿ ಅನೇಕ ಗಿಡಗಳಿವೆ ಮತ್ತು ಅದರ ಮಧ್ಯೆ ಹರಿಯುವ ನೀರಿನ ಅನೇಕ ನಾಲೆಗಳಿವೆ. ಅಲ್ಲಲ್ಲಿ ಸರೋವರಗಳಿವೆ. ರಾಜ ತನ್ನ ಅರಮನೆಯ ಹತ್ತಿರವೇ ತೆಂಗಿನ ತೋಪು ಮತ್ತು ಇತರ ಸಂಪದ್ಭರಿತ ಹಣ್ಣಿನ ಗಿಡಗಳನ್ನು ಹೊಂದಿದ್ದಾನೆ. ಮೂರರ ವಾಸಸ್ಥಾನದ ಕೆಳಗಡೆ ಒಂದು ಚಿಕ್ಕ ನದಿಯಿದೆ. ಅದರ ಈ ಬದಿಗೆ ಅನೇಕ ಹಣ್ಣಿನ ತೋಟಗಳು ಮತ್ತು ಅನೇಕ ಹಣ್ಣಿನ ಗಿಡಗಳುಳ್ಳ ತೋಟಗಳು ಇವೆ. ಅವುಗಳಲ್ಲಿ ಬಹುಮಟ್ಟಿಗೆ ಇರುವುದು ಮಾವು, ಅಡಿಕೆ, ಹಲಸು ಮತ್ತು ಅನೇಕ ನಿಂಬೆ, ಕಿತ್ತಳೆ ಗಿಡಗಳು, ಅವುಗಳಲ್ಲಿ ಒಂದಕ್ಕೊಂದು ಎಷ್ಟು ಒತ್ತಾಗಿ ಬೆಳೆದಿವೆಯೆಂದರೆ ಅದು ದಟ್ಟ ಅರಣ್ಯದಂತೆ ತೋರುತ್ತದೆ. ಮತ್ತು ಅಲ್ಲಿ ಬಿಳಿ ದ್ರಾಕ್ಷಿಗಳು ಉಂಟು. ನಗರದಲ್ಲಿರುವ ನೀರೆಲ್ಲ ಪ್ರಥಮ ಸುತ್ತಿನ ಗೋಡೆಯ ಹೊರಗೆ ಇರುವ ನಾನು ಹೇಳಿದ ಎರಡು ಕೆರೆಗಳಿಂದ ಬರುತ್ತದೆ."

ವಿಜಯನಗರದ ಮಾರುಕಟ್ಟೆಗೆ ಬರುವ ವಿವಿಧ ವಸ್ತುಗಳನ್ನು ಕುರಿತು ಬರೆಯುತ್ತಾ "ದಿನಾಲು ಬರುವ ನಿಂಬೆಯ ರಾಶಿಗಳಿಗೆ ಪೊಮೊಸ್‌ನವುಗಳು ಯಾವ ಲೆಕ್ಕವೂ ಅಲ್ಲ. ಸಿಹಿ ಮತ್ತು ಹುಳಿ ಕಿತ್ತಳೆಗಳ, ಕಾಡುಬದನೆಕಾಯಿಗಳ ಇತರ ಕಾಯಿಪಲ್ಯ, ಹಣ್ಣು ಹಂಪಲುಗಳ ವಿಪುಲತೆ ದುಂಗಬಡಿಸುವಂತಹದು" ಎಂದು ಅವನು ದಾಖಿಲಿಸಿದ್ದಾನೆ. ಮುಂದುವರಿದು ಅವುಗಳ ಬೆಲೆಯನ್ನು ಸಹ ಈ ರೀತಿ ತಿಳಿಸುತ್ತಾನೆ. "ಬಹಳ ದಾಳಿಂಬ ಗಳು ಉಂಟು. ದ್ರಾಕ್ಷಿಗಳನ್ನು ಒಂದು ಫಣಮ್‌ಗೆ ಮೂರು ಗೊಂಚಲಿನಂತೆ, ದಾಳಿಂಬ ಗಳನ್ನು ಹತ್ತರಂತೆ ಮಾರಲಾಗುತ್ತದೆ." ಎಂಬುದಾಗಿ ಬೆಲೆಯನ್ನು ದಾಖಲಿಸಿ ನಮ್ಮ ಗಮನ ಸೆಳೆಯುತ್ತಾನೆ.[೧೭]

ಟಿಪ್ಪಣಿಗಳು

೧. ಮಹಾಲಿಂಗಂ, ಟಿ.ವಿ., ಅಡ್‌ಮಿನಿಸ್ಟ್ರೇಶನ್ ಅಂಡ್ ಸೋಶಿಯೆಲ್ ಲೈಫ್ ಇನ್ ವಿಜಯನಗರ ಪಿರಿಯಡ್, ಪು.೭೬; ಸಾಲೆತ್ತೂರೆ ಬಿ.ಎ., ಸೋಶಿಯಲ್ ಅಂಡ್ ಪೊಲಿಟಿಕಲ್

ಲೈಫ್ ಇನ್ ವಿಜಯನಗರ, ಸಂ. II, ಪು. ೪೫೮ ಮತ್ತು ಕುಪ್ಪುಸ್ವಾಮಿ ಜಿ.ಆರ್, ಎಕನಾಮಿಕ್ ಕಂಡಿಶನ್ಸ್ ಇನ್ ಕರ್ನಾಟಕ, ಎಡಿ ೯೭೩-೧೩೩೬, ಪು.೧೫೭.

೨. ಕರಾಶಿಮಾ, ನೊಬೊರು, ಟುವರ್ಡ್ಸ್ ಎ ನ್ಯೂ ಫಾರ್‌ಮೇಶನ್, ಪು. ೧೧೭-೨೦೪ ; ಕರಾಶಿಮಾರವರು, ವಿಜಯನಗರ ತೆರಿಗೆ ಮತ್ತು ಕಂದಾಯ ಪದ್ಧತಿಯನ್ನು ಕುರಿತಂತೆ ಭಾರತದ ವಿದ್ವಾಂಸರುಗಳೊಡನೆ ಜೋತೆಗೂಡಿ ವಿಸ್ತೃತಿ ಮತ್ತು ವಿಶ್ಲೇಷಣಾತ್ಮಕವಾಗಿ ಅಧ್ಯಯನ ನಡೆಸಿದ್ದಾರೆ. ತಮಿಳುನಾಡಿನ ವಿಜಯನಗರ ಪೂರ್ವದ ಅರಸು ಮನೆತನವಾದ ಚೋಳರ ಆಡಳಿತ ವ್ಯವಸ್ಥೆಯ ಮತ್ತು ಕಂದಾಯ ಪದ್ಧತಿಯನ್ನು ಕುರಿತಂತೆ ಅಧ್ಯಯನ ನಡೆಸಿದ್ದಾರೆ. ತಮಿಳುನಾಡಿನಲ್ಲಿ ದೊರಕಿರುವ ವಿಜಯನಗರ ಕಾಲದ ಶಾಸನಗಳ ಅಧ್ಯಯನ ನಡೆಸಿದ್ದಾರೆ. ತಮಿಳುನಾಡಿನಲ್ಲಿ ದೊರಕಿರುವ ವಿಜಯನಗರ ಕಾಲದ ಶಾಸನಗಳನ್ನು ಅಧ್ಯಯನ ನಡೆಸಿ, ಅವುಗಳಲ್ಲಿ ಉಲ್ಲೇಖಿತವಾಗಿರುವ ತೆರಿಗೆಗಳನ್ನು ಹಲವಾರು ಕೋಷ್ಟಗಳ ಮೂಲಕ ಈ ಪುಸ್ತಕದಲ್ಲಿ ನಿರೂಪಿಸಿದ್ದಾರೆ. ನೋಡಿ ; ಪು ೨೧೧-೨೬೩.

೩. ರಮೇಶ್ ಕೆ.ವಿ., ಎ ಹಿಸ್ಟರಿ ಆಫ್ ಸೌಥ್ ಕೆನರಾ, ಪು.೨೮೭ ; ಜಗದೀಶ ಶೆಟ್ಟಿ ಬಿ., "ತುಳುನಾಡಿನ ಜೈನ ಶಾಸನಗಳಲ್ಲಿ ಅರ್ಥಿಕ ವಿವರಗಳು", ದೇವರಕೊಂಡಾರೆಡ್ಡಿ ಮತ್ತು ಜಯಪ್ರಕಾಶ ಮಾವಿನಕುಳಿ (ಸಂ). ತುಳುನಾಡಿನ ಜೈನ ಶಾಸನಗಳು, ಪು. ೬೬-೭೨.

೪. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೩ (ಹಂಪಿ ಶಾಸನಗಳು) (ಇನ್ನು ಮುಂದೆ ಕವಿಶಾ) ಸಂ. ೭೪ ; ಎಆರ್ ೧೮೮೯, ಸಂ ೨೬, ಸೌಥ್ ಇಂಡಿಯನ್ ಇನ್ಸ್‌ಸ್ಕ್ರಿಪ್ಶನ್ಸ್ (ಇನ್ನು ಮುಂದೆ ಎಸ್‌ಐಐ), ಸು IV, ಸಂ. ೨೫೫ ಮತ್ತು ವಿಜಯನಗರ ಶಾಸನಗಳು (ಇನ್ನು ಮುಂದೆ ವಿಶಾ) ಸಂ.೨೨೮.

೫. ನೆಳಲಹುಣಿಸೆ ಗ್ರಾಮವು ಮುಖ್ಯ ಆಗ್ರಹಾರವಾಗಿತ್ತು. ನೋಡಿ ; ಕವಿಶಾ,ಸಂ.೩, ಸಂ.೨೨೯, ೨೩೦ ಮತ್ತು ೩೨೬.

೬. ಕವಿಶಾ, ಸಂ. ೧೩೨; ಎಆರ್ ೧೯೦೪, ಸಂ.೧೬; ಎಸ್‌ಐಐ. ಸಂ.XVII, ಸಂ.೧೭ ಮತ್ತು ವಿಶಾ. ಸಂ. ೨೫೭.

೭. ಅದೇ, ಸಂ. ೩೨೪; ಎಆರ್ ೧೯೨೨, ಸಂ. ೬೯೫; ಎಸ್‌ಐಐ. ಸಂ. IX, ಭಾಗ II, ಸಂ. ೫೯೫ ಮತ್ತು ವಿಶಾ, ಸಂ. ೪೬೫.

೮. ಅದೇ, ಸಂ. ೧೮೭; ಎಆರ್ ೧೯೦೪, ಸಂ. ೧೩; ಎಸ್‌ಐಐ, ಸಂ. IX, ಭಾಗ II, ಸ. ೬೫೪; ಸಂ. ೧೫ ಮತ್ತು ವಿಶಾ ೧೮೫.

೯. ಅದೇ, ಸಂ. ೧೮೩; ಎಆರ್ ೧೯೮೯, ಸಂ.೪೬; ಎಸ್‌ಐಐ, ಸಂ IV ಸ. ೨೭೫ ಮತ್ತು ವಿಶಾ, ಸಂ. ೧೭೭.

೧೦. ಅದೇ, ಸಂ. ೧೮೫; ಎಆರ್ ೧೯೦೪, ಸಂ. ೧೧; ಎಸ್‌ಐಐ, ಸಂ.IX, ಭಾಗ II, ಸಂ. ೬೭೮; ಸಂ.XVII, ಸಂ. ೧೨ ಮತ್ತು ವಿಶಾ. ೧೮೩.

೧೧. ತೆಂಗಿನಮರದ ದಾನವನ್ನು ಕುರಿತು ಇನ್ನೊಂದು ಶಾನವು ಉಲ್ಲೇಖಿಸುತ್ತದೆ. ನೋಡಿ : ಕವಿಶಾ, ಸಂ. ೩, ಸಂ. ೩೨೬.

೧೨. ಕಲಬುರ್ಗಿ, ಎಂ.ಎಂ. (ಸಂ). 'ಪುಷ್ಪರಗಳೆ', 'ಹರಿಹರನ ರಗಳೆಗಳು', ಪು. ೫೦೧-೫೦೫ ನೋಡಿ ಶಿವಾನಂದ ಎಸ್.ವಿರಕ್ತಮಠ (ಸಂ), ಹರಿಹರನ ರಗಳೆಗಳು: ಸಾಂಸ್ಕೃತಿಕ ಮುಖಾಮುಖಿ ; ಚಿದಾನಂದಮೂರ್ತಿ, ಎಂ. "ಮನ್ಮುಖ ತೀರ್ಥ ಮತ್ತು ಹಂಪೆಯ ಹರಿಹರನ ಹೂದೋಟ: ಒಂದು ಅಭಿಜ್ಞೆ," ಹೊಸತು ಹೊಸತು, ಪು. ३೧೧-३೧೮. ಬಿ.ಜಿ.ಎಲ್., "ಹರಿಹರ ಪುಷ್ಪರಗಳೆ, ಸಸ್ಯಶಾಸ್ತ್ರೀಯ ಮತ್ತು ಸಾಂಸ್ಕೃತಿಕ ಟಿಪ್ಪಣಿ ವಿಚಾರ", ಪ್ರಬುದ್ಧ ಕರ್ನಾಟಕ ಸಂ. ೫೪, ಸಂ. ३, ಪು. ३, ಹರಿಹರನ ರಗಳೆ ಅದರಲ್ಲೂ ಪುಷ್ಪರಗಳೆ ಯನ್ನು ಕುರಿತು ನನ್ನ ಗಮನದ ಸೆಳೆದ ಶ್ರೀ ಜೈನುಲ್ಲಾ ಬಳ್ಳಾರಿಯರಿಗೆ ಕೃತಜ್ಞನಾಗಿದ್ದೇನೆ.

೧३. ಇವನ ಹೆಸರನ್ನು ಡೊಮಿಂಗೊ ಪಿಯಾಸ್ ಎಂದು ಕೆಲವರು, ಡೆಮಿಂಗೊ ಪ್ಯಾಸ್ ಎಂದು ಮತ್ತೆ ಕೆಲವರು ಕರೆದಿರುವರು.

೧೪. ಸದಾನಂದ ಕನವಳ್ಳಿ (ಅನು) ರಾಬರ್ಟ್ ಸಿವೆಲ್ (ಮೂಲ), ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ, ಪು. ೨೬३-೨೬೪ ಮತ್ತು ೨೬೬; ಪ್ರಕಾಶ್, ಎಂ.ಪಿ. ಡೊಮಿಂಗೋ ಪಿಯಾಸ್ ಕಂಡ ವಿಜಯನಗರ, ಮಂಟಪಮಾಲೆ ಸಂ. ೫೯, ಪು. ೫.

೧೫. ಅದೇ, ಪು. ೨೭೪; ಅದೇ, ಪು. ೧೨.

೧೬. ಅದೇ, ಪು. ೨೭೪; ಅದೇ, ಪು ೧३.

೧೭. ಅದೇ, ಪು ೨೭೭; ಅದೇ, ಪು. ೧೪ ಮತ್ತು ೧೭.

೧೮. ಅದೇ, ಪು. ३೨३.

೧೯. ಈ ವಿಷಯವನ್ನು ಸೂರ್ಯನಾರಾಯಣರಾವ್‌ರವರು ತಮ್ಮ ಪುಸ್ತಕದಲ್ಲಿ ಚರ್ಚಿಸಿದ್ದಾರೆ, ನೋಡಿ; ಸೂರ್ಯನಾರಾಯಣ ರಾವ್, ಬಿ.ಎ ಹಿಸ್ಟರಿ ಆಫ್ ವಿಜನಯಗರ, ದಿ ನೆವರ್ ಟು.ಬಿ. ಫರ್‌ಗಾಟನ್ ಎಂಫೈರ್, ಪು. ೨೪೦.

೨೦. ಸದಾನಂದ ಕನವಳ್ಳಿ, (ಅನು). ಪೂರ್ವೋಕ್ತ, ಪು. ೪೦೧.

೩೧. ವಿಜಯನಗರ ಕಾಲದ ತಳವಾರಿಕೆ

ಡಾ.ವಿರೂಪಾಕ್ಷ ಪೂಜಾರಹಳ್ಳಿ

ವಿಜಯನಗರ ಕಾಲದ ಚರಿತ್ರೆ ಮತ್ತು ಸಂಸ್ಕೃತಿ ಕ್ಷೇತ್ರದಲ್ಲಿ ತಳವಾರ ಮತ್ತು ತಳವಾರಿಕೆ ಎಂಬ ಹುದ್ದೆ ಹಾಗು ವೃತ್ತಿಯನ್ನು ನಿರ್ವಹಿಸಿದ ಬಗ್ಗೆ ಇಲ್ಲಿ ತಿಳಿಸುವ ಉದ್ದೇಶವಿದೆ. ವೃತ್ತಿನಿರತ ಈ ವರ್ಗವನ್ನು ಚರಿತ್ರೆಯ ಪುಟಗಳಲ್ಲಿ ಎಲ್ಲೂ ದಾಖಲಿಸದೆ ಅಲಕ್ಷಿಸಲಾಗಿದೆ. ಹಾಗಾಗಿ ಕೆಲವು ಒಳನೋಟಗಳನ್ನು ಬೆಳಕಿಗೆ ತರುವ ಪ್ರಯತ್ನ ಮಾಡಲಾಗುವುದು. ಈವರೆಗೆ ಅಲ್ಲಲ್ಲಿ ಕೆಲವು ಉದಾಹರಣೆಗಳನ್ನು ಹೊರತುಪಡಿಸಿದರೆ ಈ ಅವಧಿಯ ತಳವಾರರನ್ನು ಅಲಕ್ಷಿಸಿರುವುದು ಸ್ಪಷ್ಟ.

'ತಳವಾರ' ಎಂಬುದು ನಾಮಪದ. ಈ ನಾಮಪದಕ್ಕೆ ಇಕೆ ಪ್ರತ್ಯಯಸೇರಿ ತಳವಾರಿಕೆ ಆಗಿದೆ. ಜಾತಿ ಸೂಚಕವಾಗಿಯು ಕ್ರಿಯವಾಚಕವಾಗಿಯು ಬಳಕೆಯಲ್ಲಿದೆ. ವ್ಯಕ್ತಿನಾಮಗಳನ್ನು ಅಧ್ಯಯನ ಮಾಡುವಾಗ ತಳವಾರ ವಾರ್ಗಿಕವಾಗಿ ಬಳಕೆಯಲ್ಲಿರುವುದನ್ನು ನೋಡಬಹುದು. ಈ ವಾರ್ಗಿಕ ಪದ ಉತ್ತರ ಕರ್ನಾಟಕದಲ್ಲಿ ಕುಲನಾಮವಾಗಿ ಪ್ರಚಲಿತದಲ್ಲಿದೆ. ದಕ್ಷಿಣ ಕರ್ನಾಟಕದಲ್ಲಿ ವಾರ್ಗಿಕವಾಗಿ ಚಾಲ್ತಿಯಲ್ಲಿದೆ. ಉತ್ತರ ಕರ್ನಾಟಕದಲ್ಲಿ ಕುಲನಾಮವಾಗಿಯು ಇರುವುದು ಹೀಗೆ : ರಮೇಶ ತಳವಾರ, ನೀಲಗಿರಿ ತಳವಾರ, ಶುಭಾಶ್ ತಳವಾರ ಇತ್ಯಾದಿ. ಇಲ್ಲಿ ತಳವಾರ ವೃತ್ತಿ ಮತ್ತು ಕುಟುಂಬದ ಹೆಸರನ್ನು ಸಂಕೇತಿಸುತ್ತದೆ. ಹಾಗೆಯೇ ದಕ್ಷಿಣ ಕರ್ನಾಟಕದಲ್ಲಿ ತಳವಾರ ಶರಣಪ್ಪ, ತಳವಾರ ಚೆನ್ನಯ್ಯ ತಳವಾರ ಪಂಪಾಪತಿ ಇತ್ಯಾದಿಯಾಗಿ ಕರೆದುಕೊಳ್ಳುತ್ತಾರೆ.

'ತಳವಾರ' ಎಂದರೆ ಊರ ಕಾವಲುಗಾರ, ಗ್ರಾಮರಕ್ಷಕ, ಸಂರಕ್ಷಕ ಎಂದು ಕರೆಯಲಾಗಿದೆ. ಇವರಿಗೆ ಕನ್ನಡ ಕಾವ್ಯ ಮತ್ತು ಶಾಸನಗಳಲ್ಲಿ ತಳರ, ತಳವಾರ, ತಲವಾರ, ತಲಕಾರ, ತಳಾರಿ ಎಂದೆಲ್ಲಾ ಉಲ್ಲೇಖವಿದೆ. ಕತ್ತಿ ಹಿಡಿದು ಊರಿನ ಜನರ ಹಿತವನ್ನು ಕಾಪಾಡತಕ್ಕವನೆಂದೂ ಪಂಚಾಯತಿ ಕಟ್ಟೆಗಳಲ್ಲಿ (ಪ್ರತಿ ಗ್ರಾಮಗಳಲ್ಲಿ ಊರಿನ ತಳವಾರ, ಕೋಲುಕಾರ, ಓಲೆಕಾರ ಇರುತ್ತಿದ್ದರು) ಕತ್ತಿ ಕೋಲು ಹಿಡಿದು ಸುದ್ದಿಸಾರುವವನು. ಆರಕ್ಷಕನ ಹೆಗ್ಗುರುತಾಗಿಯು ಊರನ್ನು ಕಾಯುವ ರಕ್ಷಿಸುವ ಅಧಿಕಾರಗಳಂತೆಯೇ ಹೊಣೆಯನ್ನು ನಿರ್ವಹಿಸುತ್ತಿದ್ದವರಿಗೆ ತಳವಾರರೆಂದು ಕರೆಯುತ್ತಾರೆಂದು ತಿಳಿಸಲಾಗಿದೆ.[೧] ಇವರು ಗ್ರಾಮರಕ್ಷಣೆಯ ಜೊತೆಗೆ ಆಗಾಗ ಪೂಜಾರಿಕೆಯನ್ನು ಕರ್ನಾಟಕದ ಕೆಲವು ಭಾಗಗಳಲ್ಲಿ ಮಾಡಿಕೊಂಡು ಬಂದಿದ್ದಾರೆ. ತಳವಾರ, ವಾಲಿಕಾರ, ಕೋಲುಕಾರ ಗೌಡ, ಪಟೇಲ, ಸಿಕ್ಕರು, ಗೂರ್ಖಾಗಳಂತೆ ಬೇಡರು ಸೈನಿಕ, ತಳವಾರ ವೃತ್ತಿಯಲ್ಲಿ

ದ್ದರು. ಸೈನಿಕ ವೃತ್ತಿಯ ಸಮೀಪದ ಇತರ ವೃತ್ತಿಗಳೆಂದರೆ ಅಂಗರಕ್ಷಣೆ, ನಗರ, ಗ್ರಾಮ ರಕ್ಷಣೆ, ಕೋಟೆ-ಕೊತ್ತಲಗಳ ಕಾವಲು ಕೆಲಸ, ಗಸ್ತಿತಿರುಗುವುದು, ಬೇಟೆ ಯಾಡುವುದು. ಈ ಬಗೆಯ ಕರ್ತವ್ಯದ ಲಕ್ಷಣಗಳು ಹಿಂದೆ ಚಾಲ್ತಿಯಲ್ಲಿದ್ದವು. 'ತಳವಾರ' ವೃತ್ತಿ ಮತ್ತು ಜಾತಿ ಬೇರೆ ಬೇರೆ ಎಂಬುದನ್ನು ಚರ್ಚಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ವಿಜಯನಗರ ಪೂರ್ವ, ವಿಜಯನಗರ ಮತ್ತು ಆನಂತರದಲ್ಲಾದ ಸ್ಥಿತ್ಯಾಂತರಗಳನ್ನು ತಳವಾರ-ತಳವಾರಿಕೆ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ಪ್ರಯತ್ನವಿದು.

ಪ್ರಾಚೀನತೆ

ತಳವಾರಿಕೆಯ ಚರಿತ್ರೆ ಬಹುಪ್ರಾಚೀನವಾದುದು. ಭಾರತ ಹಳ್ಳಿಗಳ ದೇಶ. ಹಳ್ಳಿಗರ ಗ್ರಾಮಗಳ ರಕ್ಷಕರೇ ಈ ತಳವಾರರು. ಗ್ರಾಮ ಸೇವೆಯೇ ದೇಶ ಸೇವೆಯೆಂದು ತಮ್ಮನ್ನು ತಾವು ಅರ್ಪಿಸಿಕೊಂಡವರಲ್ಲದೆ ಈಗಿನ ಪೋಲೀಸ್‌ರಂತೆ ಅಂದು ಕಾರ್ಯ ನಿರ್ವಹಿಸಿದ್ದರು.

ಈವರೆಗೆ 'ತಳವಾರ' ಎಂಬ ಪದವನ್ನು ಶಿವಕೋಟ್ಯಾಚಾರ್ಯನ 'ವಡ್ಡಾರಾಧನೆ' ಎಂಬ ಗದ್ಯ ಕೃತಿಯ ಮೂಲಕ ಮೊದಲನೆ ಉಲ್ಲೇಖವೆಂದು ತಿಳಿಯಲಾಗಿತ್ತು. ಆದರೆ ಇತ್ತೀಚಿನ ಚರಿತ್ರೆಯ ಸಂಶೋಧನೆಯಲ್ಲಿ ಇದಕ್ಕೂ ಪೂರ್ವದ ಉಲ್ಲೇಖವಿರುವುದು ಗಮನಾರ್ಹ. ಸನ್ನತಿಯ ಶಾತವಾಹನ ಶಾಸನದಿಂದ 'ತಳವಾಟ' ಎಂಬ ಪದದ ಚಾರಿತ್ರಿಕತೆ ಕ್ರಿ.ಶ.೨ನೆಯ ಶತಮಾನಕ್ಕೂ ಹಿಂದೆ ಹೋಗುತ್ತದೆ. ಮೌರ್ಯ ಕಾಲದ ಶಾಸನ ಸಾಹಿತ್ಯದಲ್ಲಿ ಬೇಡರ ಉಲ್ಲೇಖವಾಗಿರುವುದರಿಂದ ತಳವಾರಿಕೆ ಯನ್ನು ಆಗಿನಿಂದಲೇ ಗುರುತಿಸಬಹುದು. ಏಕೆಂದರೆ ಮೇಲಿನಂತೆ ಶಾತವಾಹನ ಕಾಲಕ್ಕೆ 'ತಟಿರ' ಮತ್ತು 'ತಟಿರಿಣಿ' ಪದಗಳು ಸನ್ನತಿ ಶಾಸನದಲ್ಲಿ ಉಲ್ಲೇಖವಾಗಿರುವುದರಿಂದ ಮಹತ್ವ ಬಂದಿದೆ.[೨]

ಶಾತವಾಹನರ ನಂತರ ಇಕ್ಷ್ವಾಕು ಅರಸರ ಕಾಲದಲ್ಲಿ 'ನಾಡ ತಳವಾರ, ಮಹಾತಳ ವರ' ಎಂಬ ಉಲ್ಲೇಖಗಳಿವೆ. ಗಂಗ, ಚಾಲುಕ್ಯ, ರಾಷ್ಟ್ರಕೂಟ ಹಾಗೂ ಹೊಯ್ಸಳರ ಕಾಲದ ಶಾಸನಗಳಲ್ಲಿ ಈ ಬಗ್ಗೆ ವಿಪುಲ ಮಾಹಿತಿ ಲಭ್ಯವಿದೆ. ಈ ಕಾಲಕ್ಕಾಗಲೇ (೧೦ನೇ ಶತಮಾನ) 'ಮಹಾನಾಡತಳವಾರ' ಎಂದು ವೃತ್ತಿ-ಹುದ್ದೆ ವಿಕಾಸವಾಗಿರುವುದನ್ನು ಗುರುತಿಸಬೇಕಾಗುತ್ತದೆ. ಭಾರತ ಮತ್ತು ಕರ್ನಾಟಕದಲ್ಲಿ ತಳವಾರರ ಮೂಲ, ಹಿನ್ನಲೆಯನ್ನು ಪುಳಿಂದ, ಬಲ್ಲ, ಕಿರಾತ, ವ್ಯಾಧ, ವನಚರ, ಶಬರ, ವಾಲ್ಮೀಕಿ, ನಿಷಾದ, ತಳವಾರ, ನಾಯಕ, ಕಣ್ಣಪ್ಪನ ಮಕ್ಕಳು ಇತರ ಹದಿನೆಂಟು ವಿಧದ ಸಮಾನ ಹೆಸರುಗಳಿಂದ ಗುರುತಿಸಲಾಗುತ್ತದೆ. ಇಂದಿಗೂ ಕರ್ನಾಟಕದ ಸಹಸ್ರಾರು ಗ್ರಾಮಗಳಲ್ಲಿ ಬೇಡರೆ ತಳವಾರರಾಗಿರುವುದನ್ನು ಗಮನಿಸಬಹುದು. ಬೇಡರಲ್ಲಿಯೇ ಇನ್ನೊಂದು ಹೆಸರು 'ತಳವಾರ' ಎಂದಾಗಿದೆ. ಇವರಿಗೆ ತಳವಾರ (ಖಡ್ಗ) ದಿಂದ 'ತಳವಾರ' ಎಂಬ ಅಭಿದಾನ ಬಿಜಾಪುರ ಸುಲ್ತಾನನಿಂದ ಬಂದಿದೆ ಎಂಬುದು ಸುಳ್ಳುವಾದ. ಹೀಗಾಗಿ ವಿಜಯನಗರ ಪೂರ್ವದಲ್ಲಿಯೂ ತಳವಾರರ ಆಡಳಿತ ಇತ್ತು. ರಾಜಪ್ರಭುತ್ವದಲ್ಲಿ

ಅವರಿಗೂ ಉನ್ನತ ಸ್ಥಾನ ಮಾನಗಳಿದ್ದವೆಂಬುದಕ್ಕೆ ಅನೇಕ ಉದಾಹರಣೆಗಳಿವೆ. ಮುಮ್ಮಡಿ ಸಿಂಗೇಯನಾಯಕನು ನಾಡ ತಳವಾರನಾಗಿದ್ದನು. ಕಂಪಿಲರಾಯನ, ಕುಮಾರ ರಾಮನಾಥರು ನಾಡತಳವಾರಿಕೆಯಿಂದ ಬಂದವರಾಗಿದ್ದರೂ, ಅರಸರಾಗಿ ಖ್ಯಾತಿ ಮೆರದಿದ್ದುಗಮನಾರ್ಹ.

ವಿಜಯನಗರ ಕಾಲ

ಹಿಂದಿನ ರಾಜಪ್ರಭುತ್ವದಲ್ಲಿ ಪ್ರಚಲಿತವಿದ್ದಂತೆ ತಳವಾರಿಕೆ ವಿಜಯನಗರ ಕಾಲದಲ್ಲಿ ವ್ಯಾಪಕವಾಗಿದ್ದುದು ಗಮನಾರ್ಹ. ವಿಜಯನಗರ ಸಾಮ್ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ರಕ್ಷಣಕ್ಷೇತ್ರವು ಮಹತ್ವದ್ದು, ಈ ರಕ್ಷಣೆಯಲ್ಲಿ ತಳವಾರರು ನಿಷ್ಣಾತರು. ಇವರು ದಟ್ಟವಾಗಿ ನೆಲಸಿದ್ದ ಬಗ್ಗೆ ಶಾಸನಗಳಿವೆ. ಈ ಕಾರಣವಾಗಿ 'ತಳವಾರಿಕೆ' ನಿರ್ಣಾಯಕ ಹುದ್ದೆಯಾಗಿತ್ತು. ಅಂದಿನ ಗ್ರಾಮಾಡಳಿತಕ್ಕೆ ಸಂಬಂಧಸಿದ ಇಬ್ಬರು ಹೆಸರುಗಳನ್ನು ಇಲ್ಲಿ ಸ್ಮರಿಸಬಹುದು. ಒಬ್ಬ ಸೇನ ಬೋವ (ಶಾನುಭೋಗ) ಮತ್ತೊಬ್ಬ ತಳವಾರ.[೩] ಗ್ರಾಮದಲ್ಲಿ ಗೌಡ, ಪಟೇಲ ಅಧಿಕಾರ ನಡೆಸಿದರೆ, ಅಕ್ಷರಸ್ಥನಾದ ಶಾನುಭೋಗ ಕರಣಿಕನಾಗಿದ್ದನು ತಳವಾರನು ಗ್ರಾಮ, ನಾಡು, ನಗರದ ರಕ್ಷಕ-ಕಾವಲುಗಾರನಾಗಿದ್ದನು. ಆಡಳಿತದಲ್ಲಿ Head man ನಂತರ Accountant ಸ್ಥಾನ ಮಾನದ ಬಗ್ಗೆ ಡಾ.ಜಿ.ಎಸ್.ದೀಕ್ಷಿತ್ ಹೇಳಿದ್ದಾರೆ.[೪]

ವಿಜಯನಗರವನ್ನಾಳಿದ ನಾಲ್ಕು ವಂಶಗಳಾದ ಸಂಗಮ, ಸಾಳುವ, ತುಳುವ, ಮತ್ತು ಅರವೀಡು ವಂಶದ ಪ್ರಮುಖ ಅರಸರು ತಳವಾರಿಕೆಗೆ ಪ್ರೋತ್ಸಾಹ ಕೊಟ್ಟಿದ್ದು ಗಮನಾರ್ಹ. ವಿಶೇಷವಾಗಿ ತುಳುವ ಅರಸರು ತಳವಾರಿಕೆಗೆ ಆದ್ಯತೆ ಕೊಟ್ಟು ರಕ್ಷಣಾಕ್ಷೇತ್ರವನ್ನು ಇಮ್ಮಡಿಗೊಳಿಸಿದ್ದು ಸ್ಪಷ್ಟ. ಆರಂಭದ ಅರಸರು ಹಿಂದಿನ ಪದ್ಧತಿಯನ್ನೆಲ್ಲ ಅನುಸರಿಸಿದರು. ಕೆಲವರು ಪರಂಪರೆ, ವಂಶಾವಳಿ ಮತ್ತು ತಲೆಮಾರಿನ ರೂಢಿ -ಸಂಪ್ರದಾಯಗಳಿಗೆ ಜೋತು ಬಿದ್ದು, ಮತ್ತು ಆ ಮನೆತನದ ಸದೃಢ ಅರ್ಹ ವ್ಯಕ್ತಿಗಳು ತಳವಾರಿಕೆ ನಡಿಸುತ್ತಿದ್ದರು. ಅರಸರು ತಳವಾರ ವೃತ್ತಿಯಲ್ಲಿದ್ದವ್ಯಕ್ತಿಗಳಿಗೆ ಉಂಬಳಿ ಇನಾಂ ಭೂದಾನ, ಸುಂಕ, (ತೆರಿಗೆ) ಕೊಡುವ ಮತ್ತು ಕೆಲವು ಹಕ್ಕು ಬಾದ್ಯತೆ ಗಳಿಂದ ವಿನಾಯ್ತಿ ಪಡೆದಿದ್ದರು. ಇಲ್ಲಿ ಮುಖ್ಯವಾಗಿ ವಿಜಯನಗರ ಕಾಲ ಎಂದು ಪರಿಗಣಿಸಿದರೂ ಹಂಪಿ ಪರಿಸರ ಮತ್ತು ಮಾಹಿತಿ ದೊರೆತ ಸ್ಥಳ, ವ್ಯಕ್ತಿ ಮತ್ತು ವಿಷಯವನ್ನು ತಿಳಿಸುವ ಉದ್ದೇಶವಿದೆ.

ಕ್ರಿ.ಶ.೨.೮.೧೪೨೨ರ ಶಾಸನವು ಮೈಸೂರು ಜಿಲ್ಲೆ ಮಲೆಯೂರ ಗ್ರಾಮದಲ್ಲಿದೆ. ಇದರಲ್ಲಿ ಈ ಗ್ರಾಮವನ್ನು ವಾಸುದೇವರಿಗೆ ೩ನೇ ವೀರ ಹರಿಹರ ರಾಯರ ತಂದೆ ದೇವರಾಯ ಕೊಟ್ಟಿರುತ್ತಾರೆ. ಕನಕಗಿರಿಯ ಶ್ರೀವಿಜಯದೇವರ...... ಅಂಗಭೋಗ ......ಮಲೆಯೂರು ಚತುಸ್ಸೀಮೆ ಯೊಳಗಾದ.......ತಳವಾಱುಕೆ ಗ್ರಾಮದ ಮಣಯ ವೊಸಗೆ ಕ್ಷೌರ, ಇತರೆ ವಿವರಗಳಿವೆ.[೫]

ವಿಜಯನಗರದ ಆರಂಭದ ಅವಧಿಯು ಸಂಘಟನೆ ಮತ್ತು ಹೋರಾಟದ ಕಾಲವಾಗಿತ್ತು. ರಾಜಪ್ರಭುತ್ವ ತಳವಾರಿಕೆಗೆ ಉದಾರ ಪ್ರೋತ್ಸಾಹ ನೀಡಿದ ಉದಾಹರಣೆಗಳಿವೆ. ಶಿವಮೊಗ್ಗ ಜಿಲ್ಲೆಯ ೧೪೩೧ರ ಒಂದು ಶಾಸನದಲ್ಲಿ ಏನುಳ್ಳ ಸುಂಕ ತಳವಾರಿಕೆಗೆ ಉ ಸಲುವ ಅಂಬಲಿ ವುಡುಗೊರೆ ಗೌಡುಂಬಳಿ ಸಹವಾಗಿ ಎಂದು ತಿಳಿದು ಬರುತ್ತದೆ.[೮] ಇದೇ ಜಿಲ್ಲೆಯ ಮತ್ತೊಂದು ಶಾಸನದಲ್ಲಿ ಸೀಮೆಗ್ಗೆ ತಳವಾರಿಕೆಯಿಂದ ಗಾಜನೂರು ಯಡತ್ತೋರೆ ಸೀಮೆಯಲ್ಲು ಈ ಮಠಕ್ಕೆ ಉತ್ತರವಾದ ಗ್ರಾಮದವರು... ತೆಗೆದುಕೊಂಡು ಹೋದಂಥದಕ್ಕೆ ಎಂದು ತಳವಾರರ ಆದಾಯ ಮತ್ತು ಭಕ್ತಿಯ ಸ್ಥಿತಿ ಗತಿಯನ್ನು ಸಂಕೇತಿಸುವುದು. ತಳವಾರಿಕೆಯಿಂದ, ಆದಾಯವನ್ನು ವಿವಿಧ ಸಮಾಜ ಸೇವಾ ಕಾರ್ಯಗಳಿವೆ ಬಳಸಿಕೊಳ್ಳುತ್ತಿದ್ದರು. ಕ್ರಿ.ಶ. ೧೪೬೮ರ ಮುಳಬಾಗಿಲಿನ ಒಂದು ಶಾಸನದಲ್ಲಿ ಸುಂಕ ಮಗ್ಗಮೆ ತಳವಾರಿಕೆ ಕಾಣಿಕೆ ಕಡ್ಡಾಯ, ಎಂದಿದೆ.[೯] ಬಹುಶಃ ಆಕಾಲದಲ್ಲಿ ತಳವಾರನಿಗೆ ಕೊಡುವ ಸುಂಕ ಕಡ್ಡಾಯವಾಗಿದ್ದು ಆರ್ಥಿಕ ಸ್ಥಿತಿ -ಗತಿ ಸುಧಾರಣೆ ಮಾಡುವ ಕ್ರಮ ಇರಬೇಕು. ಹಾಗೆಯೇ ಸಾಗರ ತಾಲೂಕಿನ ಶಾಸನದಲ್ಲಿ 'ಅಂಕಸುಂಕ ಟಂಕಸಾಲೆ ತಳವಾಟಿಕೆ ನಿದಿ ನಿಕ್ಷೇಪ'ದ ವಿವರವಿದೆ. ವಿಜಯನಗರ ಕಾಲದಲ್ಲಿ ಗ್ರಾಮರಕ್ಷಕನೆ ಸಂಪತ್ತಿನ ಕ್ರೋಢೀಕರಣಕ್ಕೆ ಈ ಪದ್ಧತಿ ಹಾಸುಹೊಕ್ಕಾಗಿತ್ತು. ವೇಶ್ಯಗೃಹಗಳ ತೆರಿಗೆಯಿಂದ ಬಂದ ೧೨ ಸಾವಿರ ಫಣಂ ಆದಾಯವನ್ನು ಪಹರೆಯವರಿಗೆ ಸಂಬಳವಾಗಿ ಕೊಡುತ್ತಿದ್ದರು. ಈ ಪಹರೆಯವರು ಕೋಟೆಯೊಳಗೆ ನಡೆಯುವ ಎಲ್ಲಾ ವಿಚಾರಗಳನ್ನು ತಿಳಿದುಕೊಳ್ಳಬೇಕು. ಕಳ್ಳವುಗಳನ್ನು ಪತ್ತೆ ಹಚ್ಚಿವರದಿ ಮಾಡಬೇಕು.[೧೦] ತಳವಾರರೇ ಪಹರೆಯವರು ಇರಬೇಕೆಂಬ ಬಹಳ ಚರ್ಚೆನಡೆಯು ಬೇಕಾಗಿದೆ.

ತುಳು ಸಂತತಿಯ ಶ್ರೀಕೃಷ್ಣದೇವರಾಯನ ಕಾಲದಲ್ಲಿ ತಳವಾರಿಕೆ ಬಗ್ಗೆ ಹೆಚ್ಚಿನ ಉಲ್ಲೇಖಗಳಿವೆ. ಮೂಲತಃ ತುಳು ಸಂತತಿ ತಳವಾರಿಕೆಯಿಂದ ವಿಕಾಸವಾಗಿರಬೇಕು. ಇವರ ಮೂಲ ಪುರುಷರು ತಳವಾರ ಈಶ್ವರನಾಯಕ, ನರಸನಾಯಕ ಮೊದಲಾದವರನ್ನು ಇಲ್ಲಿ ಸ್ಮರಿಸಬಹುದು. ಕೃಷ್ಣದೇವರಾಯನು ತನ್ನಪಟ್ಟದ ಅವಧಿಯಲ್ಲಿ ಶ್ರೀವಿಠಲೇಶ್ವರ ದೇವರ ಅಮೃತ ಪಡಿ ನೈವೇದ್ಯಕ್ಕೆ ಅನೇಕ ಗ್ರಾಮ, ದವಸ ಧಾನ್ಯಗಳನ್ನು ದಾನಮಾಡುತ್ತಾನೆ. ವಿಠಲಸ್ವಾಮಿ ದೇವಾಲಯದ ಮುಂದಿನ ಮಂಟಪದ ದಕ್ಷಿಣ ಗೋಡೆಯ ಶಾಸನವು ....ಯ ಗ್ರಾಮ ೧ ಇ ಗ್ರಾಮಗಳಿಗೆ ಸಲ್ಲುವ ಸಕಲ ಸುವರ್ನಾದಾಯ ಸಕಲ ಭತ್ತಾದಾಯ ಸ್ತಳಸುಂಕ ತಳವಾರಿಕೆ ಸಾಂಮ್ಯ ಹಾರಿಕಾಯಿ ಈ ಗ್ರಾಮಗಳ ಜೋಡಿ ಬಿರಾಡ ತೆರಿಗೆ ಕಾಲುವೆಯ ನೀರ ಬಿರಾಡ ಮೊದಲಾದ ಏನು ಉಂಟಾದನೂ ಸರ್ವಮಾನ್ಯವಾಗಿ ನಮ್ಮ ತಂದೆ ಸರಸಣನಾಯಕ ವೊಕೆಯರಿಗೆ ನಂಮ ತಾಯಿ ನಾಗಾಜಿ ಅಮ್ಮನವರಿಗೂ ಪುಣ್ಯವಾಗಿ ಸೂರ್ಯಗ್ರಹಣ ಪುಣ್ಯ ಕಾಲದಲೂ ಆಚಂದ್ರಾರ್ಕಸ್ತಾಯಿಯಾಗಿ ನಡೆವ ಮರಿಯಾದೆಯಲೂ ಸಮರ್ಪಿಸಿದೆ. ಈ ಧರ್ಮಕೆ ಎಂದು ವಿವರವಾಗಿ ತಿಳಿದು ಬರುತ್ತದೆ.[೧೧] ಕ್ರಿ.ಶ.೧೫೧೦ರ ಶಾಸನದಲ್ಲಿ ಸುಂಕವನ್ನು ಕೊಂಡವನ್ನು ತನ್ನ ತಲಾರಿಗೆ ಮದುವೆವಣಿಗೆ ಕೊಟ್ಟನುಯೆಂದು ತಿಳಿದುಬರುತ್ತದೆ.[೧೨]

ಕ್ರಿ.ಶ.೧೨.೩.೧೫೧೩ರ ಕೃಷ್ಣದೇವರಾಯನ ಶಾಸನ (ಹಜಾರರಾಮ ಸ್ವಾಮಿ ದೇವಾಲಯ) ದಲ್ಲಿ ತಳವಾರರಿಗೆ ಗ್ರಾಮಗಳ ದಾನ ನೀಡಿದ ವಿಷಯ ತಿಳಿದು ಬರುತ್ತದೆ. ಸ್ತಳದ ಸುಂಕ ಸಾಮ್ಯ ತಳವಾಟಿಕೆಯ ರೋಕ್ಕತ್ತಭತ್ತ ಜೋಡಿ ಬಿರಾಡ ಗ್ರಾಮಗಳನ್ನು ನೀರ ಬಿರಾಡ ಅನುಪುಹಾರಿ ಕಾಯಿ...ಎಂದಿದೆ. ಗ್ರಾಮದ ಸುಂಕವನ್ನು ತಳವಾರರು ಸಂಗ್ರಹಿಸಿಕೊಡುತ್ತಿದ್ದ ವಿಧಾನ ಶ್ರೇಷ್ಠತೆ, ಪ್ರಾಮಾಣಿಕತೆಯಿಂದ ಬೊಕ್ಕಸ ತುಂಬುತ್ತಿತ್ತು. ಮತ್ತೊಂದು (೧೧.೩.೧೫೧೩) ಶಾಸನದಲ್ಲಿ ಕೃಷ್ಣದೇವರಾಯ ತನ್ನ ತಂದೆ-ತಾಯಿಗೆ ಪುಣ್ಯವಾಗಲೆಂದು ತಳವಾರಿಕೆ ಸುಂಕ ಸಂಬಂಧ ಜೋಡಿ ಬಿರಾಡ ಸಾಂಮ್ಯ ಸಕಲ ಸುವರ್ಣಾದಾಯಸಹ ೩ ಗ್ರಾಮ ಗೋಪಿಸೆಟಿಹಳ್ಳಿ, (ಪಂಚಕಸೀಮೆ), ಬೀಜವರಿ ಮುತ್ತುಮಳಲಕೋಟೆ, ಇವಲ್ಲದೆ, ವಿರೂಪಾಪುರ ಗ್ರಾಮಗಳ ತಳವಾರಿಕೆ ಸುಂಕ ಬಗ್ಗೆ ತಿಳಿಯುತ್ತದೆ.

ಶ್ರೀಕೃಷ್ಣದೇವರಾಯ ವಿಶೇಷವಾಗಿ ಅನೇಕ ಗ್ರಾಮ ಮತ್ತು ಭೂಮಿಗಳನ್ನು ದಾನ ಮಾಡಿದ್ದು ಗಮನಾರ್ಹ. ತಂದೆ-ತಾಯಿಗಳಿಗೆ ಪುಣ್ಯವಾಗಲೆಂದು ಈ ಗ್ರಾಮದ ಆದಾಯವಾದ ಭತ್ತ, ಹಣ, ತಳವಾರಿಕೆ ಸುಂಕ, ಸಾಮ್ಯ, ಜೋಡಿ ಬಿರಾಡ, ಕಟ್ಟೆಯಹೊಕ್ಕ, ಇವೆಲ್ಲವೂ ದೇವಾಲಯಕ್ಕೆ ಸಲ್ಲುತ್ತವೆ.[೧೩] ಇದೇ ಕಾಲಕ್ಕೆ ಸೇರಿದ ಮತ್ತೊಂದು ಶಾಸನದಲ್ಲಿ ನರಸಿಂಹದೇವರಿಗೆ ಕೋನಮರಸಯ್ಯನವರು ಕೊಟ್ಟ ಧರ್ಮಶಾಸನದ ಕ್ರಮವೆಂದರೆ, ಸ್ವಾಮಿನಮಗೆ ಪಾಲಿಸಿದ ವಿಜಯನಗರದ ತಳವಾರಿಕೆಗೆ ಸಲುವ ಕಂದಾಯ ಕೊಟ್ಟ ಮೂಲಕಾಣಿಕೆ ಅಡಿಕಾಸು....... ರಾಜನಿಗೆ, ದೇವರಿಗೆ ತಳವಾರರು ತಮ್ಮ ಕಂದಾಯವನ್ನು ಅಡಿಕಾಸು ಕೊಟ್ಟದ್ದುಂಟು. ಕೃಷ್ಣಸ್ವಾಮಿದೇವಾಲಯ ಶಾಸನದಲ್ಲಿ ಜೋಡಿ ಬಿರಾಡ ಸಾಮ್ಯ ನಾಡ ತಳವಾರಿಕೆ ಸುಂಕ ಕರಣಿಕರ ಮಾನ್ಯದ ಗದ್ದೆಗಳು...... ೧೪ನೇ ಸಾಲು ರಾಯದುರ್ಗದ ಸೀಮೆಗೆ ಸಲ್ಲುವ ಬ್ರಹ್ಮಸಮುದ್ರದ ಗ್ರಾಮ ಈ ಗ್ರಾಮಕ್ಕೆ ಸಲ್ಲುವ ದುರ್ಗದೇವರಿಗೆ ಕೊಟ್ಟು ಬರಹ. ಕಡಿವಾಟೆ ನಾಡುದಳವಾಟಿಕೆ ಹುಗಿಯಬತ್ತ ....ಜಿನ ಮಾದಿಯವರೆಗೆ ಕೊಟ್ಟು ಬಹ ತಳವಾರಿಕೆ ಎಂದು ಈಗಿನ ಚಿತ್ರದುರ್ಗ, ಬಳ್ಳಾರಿ ಜಿಲ್ಲೆಗಳ ಪೂರ್ವಭಾಗದಲ್ಲಿದ್ದ ಗ್ರಾಮರಕ್ಷಣೆಯನ್ನು ನಾಡ ತಳವಾರರು ತಮ್ಮ ಅವಧಿಯಲ್ಲಿ ಸಾಧಿಸಿದ ವಿವರಗಳನ್ನು ಅನೇಕ ಶಾಸನಗಳು ಒಳಗೊಂಡಿವೆ.

ವಿಜಯನಗರದ ಕಾಲದ ಶಾಸನವೊಂದು ಮೈಸೂರು ಜಿಲ್ಲೆ ದಾಸನಪುರ ಗ್ರಾಮದಲ್ಲಿದೆ. ಇದು ೨೫.೫.೧೫೩೬ರಲ್ಲಿ ಅಚ್ಯುತರಾಯ ಮಹಾರಾಯರು....... ಮನಗೆ ನಾಯಕತನಕ್ಕೆ ನಡೆದು ಬಂದ ತೆರಕಣಾಂಬೆಯ.......ಮಾದಾರಿಕೆ, ತಳವಾರಿಕೆ ಉಪ್ಪಿನ ಕಾವಲಿ ಇತರ ಸಂಗತಿಗಳ ಉಲ್ಲೇಖವಿದೆ.[೧೪] ಇದೇ ಕಾಲಕಕ್ಕೆ ಸೇರಿದ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ಒಂದು ಶಾಸನದಲ್ಲಿ ತಳಾವಾಟಿವರಿ ಮುಂತಾಗಿ ಯೆಲ್ಲಾವು ಸರ್ವಮಾನ್ಯವಾಗಿ ಬಿಟ್ಟು ಎಂಬ ಸಂಗತಿಯಿದೆ.[೧೫] ತಳವಾರರಿಗೆ ದಾನ ದತ್ತಿಗಳನ್ನು ಕೊಡುತ್ತಿದ್ದುದಲ್ಲದೆ. ಸರ್ವಮಾನ್ಯವಾಗಿ ಭೂಮಿಯಲ್ಲದೆ ಎಲ್ಲವನ್ನು

ಕೊಟ್ಟಿದ್ದುಂಟು. ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಮೇಲು ಕೋಟೆಯ ಎರಡು ಶಾಸನಗಳು ಸಿಂಧು ಘಟ್ಟಿದವರನ್ನು ತಳವಾರರನ್ನಾಗಿ ಇಟ್ಟು ಕೊಂಡಿದ್ದು (ಸಿಂದಾಗಟ್ಟಿ ತಳವಾರಿಕೆ) ಅಲ್ಲದೆ. ತಳವಾರಿಕೆಯಿಂದ ಬರುತ್ತಿದ್ದ ಆದಾಯ ೨೬ ಗದ್ಯಾಣಗಳೆಂದು ತಿಳಿದುಬರುತ್ತದೆ. ಚಾಮರಾಜ ನಗರ ತಾಲೂಕಿನ ದಾಸನಪುರದ ೧೫೩೬ರ ಶಾಸನವು ತಳವಾರಿಕೆಯಿಂದ ಬರುತ್ತಿದ್ದ ಸುಂಕವನ್ನು ತಿಳಿಸುತ್ತದೆ. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಕಾರಬಯಲು ಗ್ರಾಮದ ಕ್ರಿ.ಶ.೧೬ನೇ ಶತಮಾನದ ಶಾಸನವು ಜಗದೇವರಾಯ ಒಡೆಯರು ತಳವಾರಿಕೆಯ ದಾಸಪ್ಪನಾಯಕರ ಮಗ ಚಿಕ್ಕರಸನಾಯಕರಿಗೆ ಕಾರಬಯಲು ಗ್ರಾಮವನ್ನು ದಂಡಿಗೆ ಉಂಬಳಿಯಾಗಿ ಕೊಟ್ಟಿದ್ದನ್ನು ಉಲ್ಲೇಖಿಸುತ್ತದೆ. ಮಡಕಶಿರಾ ತಾಲೂಕಿನ ಅಗಳಿ ಶಾಸನವು ಕಾಚವೊಡೆಯರ ಅಗಳಿಯ ತಳವಾರಿಕೆಯನ್ನು ಹುಲಿಕುಂಟೆ ಚಂದ್ರ ನಾಯಕನ ಮಗ ತಳವಾರ ದೊಡ್ಡನಿಗೆ ಶಾಶ್ವತವಾಗಿ ಕೊಟ್ಟಿದ್ದನ್ನು ಗುರುತಿಸಲಾಗಿದೆ. ಇದೇ ತಾಲೂಕಿನ ಅಮರಾಪುರಂ ವೀರ ಗಲ್ಲು ಶಾಸನವು ಕುರುಳೆನಾಯಕ ಎಂಬುವವನು ತರುಗಳನ್ನು ಸೆರೆಹಿಡಿದು ತೈಲಂಗೆರೆಯ ತಳವಾರ ಬೊಮ್ಮಯ್ಯ ನಾಯಕನ ಮಗ ಮುಂಡಿನ ಬೊಮ್ಮಯ್ಯನು ಹೋರಾಟ ಮಾಡಿಸುತ್ತಿದ್ದನ್ನು ತಿಳಿಸುತ್ತದೆ.[೧೬]

ಸಿಂಧನೂರು ತಾಲೂಕಿನ ಮುಕ್ಕಂದಿ ಗ್ರಾಮದ ವೀರೇಶಪ್ಪನ ಹಿತ್ತಲಲ್ಲಿನ ಬಂಡೆಯ ಮೇಲಿನ ಶಾಸನದಲ್ಲಿ ಗೌಡ, ಸೇನಬೋವ, ಪಟಣಸೆಟ್ಟಿಗಳು, ತಳವಾರರು, ಕಾರಟಿಗೆ, ಸಿದ್ದಾಪುರ, ಮುಕ್ಕುಂದಿ ಮುಂತಾದ ಗ್ರಾಮಾನು ಗ್ರಾಮಗಳ ಗೌಡ ಶಾನುಬೋಗರು ದೇವರಿಗೆ ಕೊಟ್ಟ ತೆರಿಗೆ, ಮದುವೆ, ಮಂಗಳ ಕಾರ್ಯ ಹಾಗೂ ಸಂತೆಗೆ ಮಳಿಗೆಗಳನ್ನು ಕಟ್ಟಿಸುತ್ತಾರೆ.

ವಿಜಯನಗರ ಸಾಮ್ರಾಜ್ಯದ ವಿವಿಧಹಳ್ಳಿ, ಗ್ರಾಮ,ಪಟ್ಟಣಗಳಲ್ಲಿ ತಳವಾರರು ನೆಲಸಿದ್ದರು. ಎಲ್ಲಿ ಕರ್ತವ್ಯ ನಿರ್ವಹಿಸುತ್ತಾರೋ ಅಲ್ಲಿಯೇ ತಮ್ಮ ವಾಸವನ್ನು ಮಾಡಿಕೊಳ್ಳುತ್ತಿದ್ದರು. ಕ್ರಿ.ಶ.೧೦.೧೦.೧೫೪೫ ರಸುಮಾರಿಗೆ (ಶಾ.ಶ.೧೪೬೭) ಹೇವಿಳಂಬಿ ಸಂವತ್ಸರ ಕಾರ್ತಿಕ ಶು ೫ ಕುಡುತ್ನೆಯ ತಳವಾರ (ಕುಡುತಿನಿ) ಗೋಸಪೆಂನ್ಯೆಯ್ಯನು ಬಹಶಃ ಸಿದವಿರಪ್ಪ ಸಂಗನಬಸಪ್ಪನ ಪ್ರಾಣ ಹತ್ಯೆ ಮಾಡಿದ. ಇದರ ದೋಷ ಪರಿಹಾರವಾಗಿ ದರೋಜಿ ವಳಿತದ ಹರಲಪುರ ಗ್ರಾಮ, ಕುಡುತಿನಿಯಲ್ಲಿ ೫ ಕೊಳಗ ಎರೆಭೂಮಿ, ಇನ್ನೂ ಕೆಲವು ಅನುಕೂಲಗಳ ಸಮೇತ ದಾನ ನೀಡುತ್ತಾನೆ. ಇದೇ ಶಾಸನದಲ್ಲಿ ಕುಡುತಿನಿಯ ತಳವಾರ ಸಿಂಕನಾಯಕ, ಸೊಂಡೂರು ರಾಜಪನಾಯಕರ ಹೆಸರುಗಳಿವೆ. ವಿರೂಪಾಕ್ಷ ದೇವರಿಗೆ ....ದಾ...... ಸಿಂಗೆಯ ನಾಯಕನಹಳ್ಳಿಯ ಗ್ರಾಮ....... ತಳವಾರಿಕೆಸ್ವಾಮ್ಯ ಜೋಡಿ ಬಿರಾಡ....ಇತ್ಯಾದಿ ವಿವರಗಳಿವೆ. ಕುಡುತಿನಿಯ ಇನ್ನೊಬ್ಬರ ತಳವಾರಗೋಸ ಪೆನ್ನೆಯ್ಯ ಎಂದು ತಿಳಿಯು ವುದು. ಅಧಿಕಾರ ಮುಗಿದಾಗ ಇನ್ನೊಬ್ಬರನ್ನು ನೇಮಿಸಿರಬೇಕು. ಮಡಕಶಿರಾ ತಾಲೂಕು ಅಗಳಿ ಗ್ರಾಮ ಶಾಸನದಲ್ಲಿ ಹುಲಿಕುಂಟೆಯ ಚಂದ ನಾಯಕನ ಮಗ ತಳವಾರ ದೊಡ್ಡ

ಎನ್ನುವವನಿಗೆ ಕಾಚಪೊಡೆಯ ಎನ್ನುವವನು ಅಗಳಿಯ ತಳವಾರಿಕೆಯನ್ನು ಕೊಟ್ಟದ್ದನ್ನು ಇಲ್ಲಿ ದಾಖಲಿಸಲಾಗಿದೆ.

ವಿಜಯನಗರದ ಅರಸ ಸದಾಶಿವದೇವ ಮಹಾರಾಯ ೧೮.೬.೧೫೫೬ರಂದು ವಿದ್ಯಾನಗರದಿಂದ ಆಳುತ್ತಿದ್ದಾಗ ಮಹಾಮಂಡಳೇಶ್ವರ ರಾಮರಾಜ ಅಪ್ಪಯ್ಯದೇವ ಮಹಾ ಅರಸನ ಮಗ ಕೋನಪದೇವ ಮಹಾ ಅರಸನೂ, ರಾಯದುರ್ಗ ವೇಂಠೆಗೆ ಸಲ್ಲುವ ಉರುವಕೊಂಡ ಸೀಮೆಯ ಅಗ್ರಹಾರಗಳಾದ ಆನದಲೆ, ನೆಂಬೆಗಲ್ಲು, ರಾಯಪ್ಪನಹಳ್ಳಿ, ಕಲಿದೇವನಹಳ್ಳಿ, ಸಿರಿವರ, ರೇವಿನಾಯಕನ ಹಳ್ಳಿ, ಯುರ್ರಗುಡಿ, ತುಂಬೆಗನೂರು, ರಾಗನಹಾಳು, ತಾವರೆಗೋಳ, ಚಿಕ್ಕ ಪೇಪಲಿ, ತಿಂಮಾಪುರ, ಹೋತೂರು, ಬೆನಕಾನಹಳ್ಳಿ, ಅಂಡುರಸನಹಾಳು, ಕಮಳ ಹಾಳಗಳ ಮಹಾಜನರಿಗೆ ತಳವಾರಿಕೆ, ಬೆನಕಾನಹಳ್ಳಿ, ಅಂಟರಸನ ಹಾಳು, ಕಮಳ ಹಾಳಗಳ ಮಹಾಜನರಿಗೆ ತಳವಾರಿಕೆ, ಬೇಡಿಕೆ, ರಾಯಸದ ವರ್ತನೆ, ಕರಣಿಕರ ವರ್ತನೆ, ಹರಳಬತ್ತಿ ಮೊದಲಾದ ವಿನಾಯತಿ ನೀಡಿದನೆಂದು ಇದರಲ್ಲಿ ದಾಖಲಿಸಿದೆ. ತಂದೆ ಅಪ್ಪಲರಾಜ ಅಯ್ಯ ಹಾಗೂ ಅಣ್ಣ ತಿರುಮಲರಾಜನಿಗೆ ಪುಣ್ಯವಾಗಲೆಂದು ಪಿನಾಕನೀ ನದಿ ತೀರ್ದಲ್ಲಿ ಹನ್ನೆ ಅಹೋಬಲನಾರಸಿಂಹ ದೇವರ ಸನ್ನಿಧಿಯಲ್ಲಿ ಈ ದತ್ತಿಯನ್ನು ನೀಡಲಾಯಿತೆಂದು ತಿಳಿಸಿದೆ. ಇಂಥ ಹಲವು ಉಲ್ಲೇಖಗಳು ಈ ಕಾಲಕ್ಕೆ ಸರಿ ಹೊಂದುವಂತೆ ಸಿಗುತ್ತವೆ.

ಹಡಗಲಿ (ದು) ತಾಲೂಕಿನ ನಕ್ಕರ ಹಲುವಿನ ಕ್ರಿ.ಶ.೧೫೬೨ರ ಒಂದು ಶಾಸನವು ನಗರೆ ಹಾಳ್ ಅಧಿಕಾರಿ ಸೇನಬೋವ ತಿರುಮಲ್ಲ ರಸಗೌಡ, ತಳವರ ಮತ್ತು ಜೋಯಿಸರಿಗೆ ಮಾನ್ಯ ಭೂಮಿಯನ್ನು ಕೊಡಲಾಯಿತು ಎಂದು ತಿಳಿಸುತ್ತದೆ.[೧೯]

ಅಮರಾಪುರಂ ಗ್ರಾಮದ ವೀರಗಲ್ಲು ಶಾಸನದಲ್ಲಿ ಕರುಳೆಯನಾಯಕ ಎಂಬುವನು ತುರುಗಳ ಸೆರೆಹಿಡಿದಾಗ ತೈಲಂಗೆಟಿಯ ತಳವಾರ ಬೊಮ್ಮಯ ನಾಯಕನ ಮಗ ಮುಂದಿನ ಬೊಮ್ಮಯ್ಯನು ಹೋರಾಟಮಾಡಿ ಸತ್ತದ್ದನ್ನು ತಿಳಿಸುತ್ತದೆ.[೨೦] ಬೇಡರು ಎಂಥ ಅಸಾಮಾನ್ಯ ಕೆಲಸ ಮಾಡುತ್ತಾರೆಂಬುದು ಸತ್ಯ ಹಾಗೂ ಸ್ಪಷ್ಟ. ನೊಳಂಬವಾಡಿ ೩೨,೦೦೦ (ಅಮರಾಪುರಂ ೫೫) ಸೋವಯ್ಯರನ್ನು ಪೆಂಜೇರು (ಹೆಂಜೇರು) ವಿನ ಕಾವಲುಗಾರ ಬಟ್ಟೆರಾಚಯ್ಯನು ದೇವರಕೆರೆ ಕಟ್ಟಿಸಿದ, ಕಲ್ಲಿನ ತೂಬು ಇಡಿಸಿದ ಖಂಡುಗ ಭೂಮಿದಾನ ಮಾಡಿದ್ದು ಶ್ಲಾಘನೀಯ. ಕಾವಲುಗಾರ ತಳವಾರರು ಇಂಥ ನಾನಾಬಗೆಯ ಲೋಕಕಲ್ಯಾಣ ಕಾರ್ಯಗಳನ್ನು ಮಾಡಿ ನಿಸ್ಸೀಮರಾಗಿದ್ದು ನಿಜ. ಹೀಗೆ ಈ ಸಾಮ್ರಾಜ್ಯದಲ್ಲಿ ತಳವಾರರ ಸೇವೆ ಶ್ಲಾಘನೀಯವಾಗಿ ರುಜುವಾತಾಗಿದೆ.

ನಾಯಕನ ಮತ್ತು ತಳವಾರಿಕೆ ಹುದ್ದೆ ಸೇವೆಗೆ ರಾಜನಿಂದ ವಿಶೇಷ ಮನ್ನಣೆ ಇತ್ತು. ಹಾಸನ ಜಿಲ್ಲೆಯ ಕುದುರೆಗುಂಡಿ ವೀರಭದ್ರ ದೇವಾಲಯದ ಶಾಸನ ೧೨.೧೨.೧೫೬೨ ರಲ್ಲಿ ವೀರ ಪ್ರತಾಪ ಅಚ್ಯುತರಾಯ ಮಹಾರಾಯರ ಮಕ್ಕಳು ಸದಾಶಿವರಾಯರು ವಿದ್ಯಾನಗರಿ ಅಧಿಕಾರಿ ಅನ್ಯೆಯಸುಂಕ ತಳವರಿಕೆ ಸೊಲಿಗಿ ಬಿಟ್ಟು ಅಳಿವು ಎಂದು ಉಲ್ಲೇಖಿತವಾಗಿದೆ. ಇದೇ ಜಿಲ್ಲೆಯ ಹಾಸನದ ವಿರೂಪಾಕ್ಷ ದೇವಸ್ಥಾನ ದಕ್ಷಿಣ

ಬಾಗಿಲಿನ ನೆಟ್ಟಕಲ್ಲಿನ ಶಾಸನ ಕ್ರಿ.ಶ.೨.೮.೧೫೬೩ರಲ್ಲಿ ವೀರಪ್ರತಾಪ ಅಚ್ಯುತ ರಾಯ.... ಬಯ್ಯಪನಾಯಕನವರ ಮಕ್ಕಳು ಕೃಷ್ಣಪ್ಪನಾಯಕ ಒಬ್ಬನಿಗೆ ಅವರನಾಯಕತ ನಕ್ಕೆ ......ಪಾಲಿಸಿದ ಹಾಸಂದು ಗ್ರಾಮ ಕಾಣಿಕೆ, ಕಪ್ಪ-ಜೋಡಿ ಬೇಡಿಕೆ ತಳವಾಟಿಕೆ ..... ಅಳಿವು ಅನ್ಯಾಯ...........[೨೧] ಇತ್ಯಾದಿ ವಿವರಗಳಿದ್ದು[೨೧] ಅವು ತಲವಾರರ ಬಗ್ಗೆ ಹೆಚ್ಚು ಬೆಳಕು ಚೆಲ್ಲುತ್ತವೆ. ಏಕ ಕಾಲಕ್ಕೆ ಎರಡು ಹುದ್ದೆ, ದಾನ-ದತ್ತಿಗಳನ್ನು ನೀಡಿದ್ದು ಗಮನಾರ್ಹ. ಇದೇ ಜಿಲ್ಲೆಯ ಆಲೂರು ತಾಲೂಕಿನ ಪಾಳ್ಯ ದೇವಸ್ಥಾನದ ಶಾಸನವು ೨೦.೧೦.೧೫೬೬ರಂದು ಬುಕ್ಕಪ್ಪನಾಯಕರು ಕೃಷ್ಣಪ್ಪನಾಯಕ ರಿಗೆ ಪುಣ್ಯವಾಗಲೆಂದು ಗೋಣಿ ಬೀಡ ಸೀಮೆಯ ೧೮ ಅಘರ ಮುಂತಾದ ಸರ್ವಮಾನ್ಯ ಗಳಲ್ಲಿ ತೆಕ್ಕೊಂಬ ತಳವಾರಿಕೆ ಬೇಡಿಕೆ ವರ್ತನೆಗಳೂ ಸೊಲ್ಲಗೆ ಬಿಟ್ಟ ಸಂಗತಿ ತಿಳಿಯುತ್ತದೆ.[೨೨] ರಾಜನ ಪರವಾಗಿ ಸಾಮಂತರು ಅಧೀನರು ದತ್ತಿ-ದಾನ ಮಾಡಿದ್ದು, ತಳವಾರಿಕೆ ಮಟ್ಟಿಗೆ ಹೆಚ್ಚಿನ ಅನುಕೂಲಕ್ಕೆ ಅಸ್ಪದವಾಯಿತು. ಇದೇ ಜಿಲ್ಲೆಯ ಭೈರಾಪುರ ಬಸವಣ್ಣ ಗುಡಿಯ ಪೂರ್ವ ಗೋಡೆಯ ಶಾಸನವು ತಳವಾರಿಕೆ ಕುರಿತು ಬೆಳಕು ಚೆಲುತ್ತದೆ.

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಕಾರುಬಯಲು ನರಸಿಂಹದೇವಸ್ಥಾನದ ಹತ್ತಿರ ಶಾಸನವು ೧೬ನೇ ಶತಮಾನಕ್ಕೆ ಸೇರಿದ ಕಾರ ಬಯಲು ಗ್ರಾಮವನ್ನು ಚಿಕ್ಕ ನರಸನಾಯಕನಿಗೆ (ತಂದೆ ತಳವಾರಿಕೆಯ ದಾಸಪ್ಪ ನಾಯಕ) ತಳವಾರಿಕೆಯ ಕಾರಣವಾಗಿ ದಂಡಿಗೆ ಉಂಬಲಿ ನೀಡುತ್ತಾರೆ.[೨೩]. (ತಳವಾರಿಕೆಯ ದಾಸಪ್ಪನಾಯಕರ ಮಗ ಬೆಕಾರಸನಾಯ್ಕರಿಗೆ ದಂಡಿಗೆ ಉಂಬಳಿ ಕೊಟ್ಟು, ಗ್ರಾಮ ಅರಸನ ಅಪ್ಪಣೆಯಿಂದ). ಇದೇ ಜಿಲ್ಲೆಯ ಪಾಂಡವಪುರ ತಾಲೂಕಿನ ನಾರಾಯಣ ದೇವಸ್ಥಾನದಲ್ಲಿ ನೆಟ್ಟ ಕಲ್ಲಿನ ಶಾಸನವು 'ತಳವಾರಿಕೆ ೧೪೬೫-೬೬ಯನ್ನು ಉಲ್ಲೇಖಿಸುತ್ತದೆ. ಈ ಹಿಂದೆ ತಿಳಿಸಿದಂತೆ, ಮೇಲುಕೋಟೆಯ ಶಾಸನವು ಕೃಷ್ಣದೇವರಾಯನ ಕಾಲಕ್ಕೆ ಸೇರಿದ, ಕೃಷ್ಣದೇವ ಮಹಾರಾಯ ನಾಯಕತನಕ್ಕೆ ಪಾಲಿಸಿದ ಶ್ರೀರಂಗಪಟ್ಟಣದ ಸಿಂದಾಗಟ್ಟ ಸೀಮೆಗ್ರಾಮ. ... ಕಾಮೆನಾಯಕನಹಳ್ಳಿ ತಳವಾರಿಕೆಯಿಂದ ನಮ್ಮಗೆದೆಟೆಗೆ ಯಿಂದ ಗ..... ಎಂದಿದೆ. ಹೀಗೆ ಸಿಂದಾಗಟ್ಟದ 'ತಳವಾರಿಕೆ' ಬಗ್ಗೆ ಈ ಶಾಸನ ಮಾಹಿತಿ ನೀಡುತ್ತದೆ.[೨೪]

ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲೂಕಿನ ಜಟ್ಟಂಗಿರಾಮೇಶ್ವರ ಕ್ಷೇತ್ರ ಸುಪ್ರಸಿದ್ಧವಾದುದು. ಈ ದೇವಾಲಯದ ಪರಿಸರದ ದೇವಸಮುದ್ರ ಗ್ರಾಮದ ಅಕ್ಕಸಾಲೆ ಗಂಗಾಧರಪ್ಪನ ಮನೆಯ ಪೂರ್ವಕ್ಕೆ ನೆಟ್ಟಕಲ್ಲು ಕ್ರಿ.ಶ.೧೬ನೇ ಶತಮಾನದ್ದಾಗಿದೆ. ಇದರಲ್ಲಿ ಸದಾಶಿವರಾಯನ ಉಲ್ಲೇಖ ಹಾಗೂ 'ನಾಡದಳವಾರಿಕೆ ಹೋಟಿ ಬಳಿ ಹುಲು ಬಂನಿಬಣ ಜಿಗರಯೆತ್ತಿನ......' ಎಂದು ತಿಳಿದುಬರುತ್ತದೆ.

ವಿಜಯನಗರ ಕಾಲದಲ್ಲಿ ಬಂದ ಯಾತ್ರಿಗರು, ಪ್ರವಾಸಿಗರು ಸಹ ತಳವಾರಿಕೆ ಬಗ್ಗೆ ಸ್ಮರಿಸಿ ದಾಖಲಿಸಿದ್ದಾರೆ. ಅಬ್ದುಲ್‌ರಜಾಕ್ ವಿಜಯನಗರಕ್ಕೆ ಬಂದಾಗ ಬಿಜನಗರ ದಂಥ ನಗರವನ್ನು ಕಣ್ಣು ಕಂಡಿಲ್ಲ ಕಿವಿ ಕೇಳಿಲ್ಲ. ಈ ನಗರವನ್ನು ಹೇಗೆ ನಿರ್ಮಿಸಿದ್ದಾ

ರೆಂದರೆ, ಏಳು ದುರ್ಗಗಳೂ ಏಳು ಕೋಟೆಗಳೂ ಒಂದನ್ನೊಂದು ಆವರಿಸಿಕೊಂಡಿವೆ ..... ಒಂದನೆಯ ದುರ್ಗದ ಸುತ್ತ ಮನುಷ್ಯನ ಎತ್ತರ ಕಲ್ಲು ಕಂಭಗಳನ್ನು ಭೂಮಿಯಲ್ಲಿ ಅರ್ಧಹೂತು ಇನ್ನರ್ಧ ಮೇಲೆ ಕಾಣುವಂತೆ ನೆಟ್ಟಿದ್ದಾರೆ. ಇವುಗಳನ್ನು ಒಂದರ ಪಕ್ಕದಲ್ಲಿ ಒಂದನ್ನು ಹೇಗೆ ಹೂತಿದ್ದಾರೆಂದರೆ, ರಾವುತನಾಗಲೀ ಪದಾತಿ ಯಾಗಲೀ ಧೈರ್ಯವಾಗಿ ಅಥವಾ ಸುಲಭವಾಗಿ ದುರ್ಗದಕಡೆ ಹೋಗುವಂತಿಲ್ಲ. ಈ ಕೋಟೆ ಚಕ್ರಾವಾಗಿ ಅಥವಾ ಸುಲಭವಾಗಿ ದುರ್ಗದಕಡೆ ಹೋಗುವಂತಿಲ್ಲ. ಈ ಕೋಟೆ ಚಕ್ರಕಾರವಾಗಿದೆ. ಇದನ್ನು ಬೆಟ್ಟದ ತುದಿಯ ಮೇಲೆ ಕಲ್ಲು ಮತ್ತು ಗಾರೆಯಿಂದ ಕಟ್ಟಿದ್ದಾರೆ. ಇದರ ಹೆಬ್ಬಾಗಿಲುಗಳುಬಹುಬಲವಾಗಿವೆ. ಈ ಹೆಬ್ಬಾಗಿಲುಗಳನ್ನು ಒಂದೇ ಸಮನೆ ಕಾಯುತ್ತಾರೆ. ಯಾರನ್ನೂ ಸಂಪೂರ್ಣ ಪರೀಕ್ಷೆ ಮಾಡದೆ ಒಳಗೆ ಬಿಡುವುದಿಲ್ಲ.[೨೫] ಎಂದಾಗ ಇವರು ಬೇರೆ ಯಾರು ಆಗಿರದೇ ತಳವಾರ ಅಥವಾ ರಕರು, ಕಾವಲುಗಾರರೇ ಆಗಿರಬೇಕು.

ವಿಜಯನಗರ ಕಾಲದ ರಕ್ಷಣಾ ವ್ಯವಸ್ಥೆಯಲ್ಲಿ ತಳವಾರರು ಬಹು ಮುಖ್ಯ ಪಾತ್ರ ವಹಿಸಿದ್ದರು. ಪ್ರಾಮಾಣಿಕತೆ, ದಕ್ಷತೆಯ ಸೇವಾ ಮನೋಭಾವಕ್ಕೆ ಇವರು ಅರ್ಹರಾಗಿದ್ದರು. ರಾಜ ಪ್ರಭುತ್ವದಲ್ಲಿ ಸಂಪತ್ತು ರಾಜ್ಯದ ಗೂಢಚಾರಿಕೆ, ಉಸ್ತುವಾರಿ, ಇತರ ಕಾರಣಗಳಿಗಾಗಿ ತಳವಾರರು ರಾಜನಿಗೆ ಹತ್ತಿರವಾಗಿದ್ದರು. ಕೆಲವರು ತಮ್ಮ ರೀತಿ ನೀತಿ ಹಾಗೂ ದೌರ್ಬಲ್ಯಗಳಿಂದ ಬಳಲುತ್ತಿದ್ದರು. ಹೀಗೆ ಏನೆಲ್ಲಾ ಸಂಘಟನೆ ಮತ್ತು ಹೋರಾಟದ ನಡುವೆಯೂ ಮಾತೃಪ್ರೇಮ, ದೇಶಪ್ರೇಮದೊಂದಿಗೆ ತಳವಾರರು ವಿಜಯನಗರ ಸಾಮ್ರಾಜ್ಯದ ನೀತಿಗೆ ತಾತ್ಕಾಲಿಕ ಕಾರಣಿಭೂತರಾಗಿರುವುದು ಸ್ಪಷ್ಟ.

ವಿಜಯನಗರ ಕಾಲದ ಆಡಳಿತದಲ್ಲಿ ತಳವಾರಿಕೆಯ ಸ್ವರೂಪ ಮತ್ತು ಲಕ್ಷಣಗಳು

ವಿಜಯನಗರ ಸಾಮ್ರಾಜ್ಯವು ದಕ್ಷಿಣ ಭಾರತದಲ್ಲೇ ಏಕೆ ? ಜಗತ್ತಿನಲ್ಲೇ ಪ್ರಸಿದ್ಧಿ ಪಡೆದಿರುವುದು ಈ ಬಗೆಯ ಆಡಳಿತಕ್ಷೇತ್ರದಿಂದಲೇ. ಇವರು ಹೆಚ್ಚಾಗಿ ಗ್ರಾಮಾಡಳಿತಕ್ಕೆ ಒತ್ತುಕೊಟ್ಟಿದ್ದರಿಂದಲೇ ಆರ್ಥಿಕ ಅಭಿವೃದ್ಧಿಯಾಯಿತು. ಈ ಸಾಮ್ರಾಜ್ಯವನ್ನು ಮಹಾರಾಜ್ಯ ರಾಜ್ಯ, ಮಂಡಲ, ಸೀಮೆ, ನಾಡು, ಕಾರು,ಗ್ರಾಮ, ಸ್ಥಳ ಎಂದು ವರ್ಗೀಕರಿಸಲಾಗಿದ್ದಿತು. ಉದಾ. ಉದಯಗಿರಿರಾಜ್ಯ,ಪೆನುಗೊಂಡೆ, ತೆಲಂಗಾಣ, ರಾಯಲಸೀಮಾ ಇತ್ಯಾದಿ. ಮಂಡಲಕ್ಕೆ ಮಂಡಲೇಶ್ವರ ಎಂದು ರಾಜ ಕುಟುಂಬದವರೇ ಇರುತ್ತಿದ್ದರು. ಪ್ರಾಂತಕ್ಕೆ ನಾಯಕನನ್ನು ನೇಮಿಸುತ್ತಿದ್ದರು. ಎಲ್ಲ ಪ್ರಾಂತ್ಯಗಳು ಮಹಾನಾಯಕಾಚಾರ್ಯರ ಅಧೀನದಲ್ಲಿದ್ದವು. ನಾಯಕರ ಅಧೀನದಲ್ಲಿ ೨೦೦ ಘಟಕಗಳಿದ್ದವು. ಪಾಯಸ್ ಹೇಳುವಂತೆ ಅಂದುನಗರ, ಉಪನಗರಗಳನ್ನು, ಸೆಟ್ಟಿ ಪಟ್ಟಿಣಸ್ವಾಮಿಗಳು ನೋಡಿಕೊಳ್ಳುತ್ತಿದ್ದರು. ಗ್ರಾಮ ಅಥವಾ ಹಳ್ಳಿ ಸ್ವಯಂ ಆಡಳಿತ ಘಟಕಗಳಾಗಿದ್ದವು. ಹಳ್ಳಿಗಳು ಗ್ರಾಮ ಸಭೆ ಹೊಂದಿದ್ದವು. ಸೇನಬೋವ ಶ್ಯಾನಭೋಗ, ತಳವಾರ ಹುದ್ದೆಗೆ ಕ್ಷತ್ರಿಯರಾದ ಯೋಧ ಸೈನಿಕರಾದ ಬೇಡರನ್ನೇ ನೇಮಿಸುತ್ತಿದ್ದುದು ಗಮನಾರ್ಹ. ಆಗ ಜಿಲ್ಲೆ ಮತ್ತು ಗ್ರಾಮಗಳಲ್ಲಿ ಶಾಂತಿ, ನೆಮ್ಮದಿಯನ್ನು ಪಾಲಿಸಲು

ತಳವಾರಿ, ಕಾವಲುಗಾರ, ದೇಶಕಾವಲುಗಾರರಿದ್ದರು. ವಿಜಯನಗರ ಕಾಲದ ನಾಯಕರ ಬಗ್ಗೆ ನೆಬುರೂಕರಾಶಿಮ ವಿಶೇಷ ಅಧ್ಯಯನ ನಡೆಸಿದ್ದಾರೆ.

ಬರ್ಟನ್ ಸ್ಟೀನ್ ವಿಜಯನಗರದ ಕೇಂದ್ರಾಡಳಿತ ಧಾರ್ಮಿಕವಾಗಿರಲಿಲ್ಲ. ಸಂಪ್ರದಾಯ ಆಗಿರಲಿಲ್ಲ ಮತ್ತು ನಿಜವಾದ ಅಧಿಕಾರ ಅಲ್ಲಿರಲಿಲ್ಲ ಎನ್ನುತ್ತಾರೆ. ಅಮರನಾಯಕರು ಮತ್ತು ಇತರ ವಿಕೇಂದ್ರೀಕೃತ ಅಂಗಗಳಿದ್ದರೂ ಕೇಂದ್ರ ಪ್ರಭುತ್ವ ಅಧೀನ ಘಟಕಗಳ ಮೇಲೆ ಸ್ವಲ್ಪ ಮಟ್ಟಿಗೆ ನಿಜವಾದ ಹತೋಟಿ ಹೊಂದಿದ್ದಿತು. ವಿಜಯನಗರ ಏಕಕಾಲದಲ್ಲಿ ಸಾಮಂತ, ಒಕ್ಕೂಟ ಹಾಗೂ ವಿಕೇಂದ್ರೀಕೃತ ಲಕ್ಷಣಗಳನ್ನು ಹೊಂದಿತ್ತು. ನ್ಯೂನಿಜ್, 'ಪೆಯಸ್'ರು ಈ ಬಗ್ಗೆ ಹೇಳಿದ್ದಾರೆ. ಸರ್.ಥಾಮಸ್ ಮನ್ರೋ ಬಳ್ಳಾರಿ ಜಿಲ್ಲೆ ಕಲೆಕ್ಟರ್‌ನಾಗಿದ್ದಾಗ ತಳವಾರಿಕೆ ಬಗ್ಗೆ ಕಾನೂನು ಕಾಯ್ದೆಗಳನ್ನು ಜಾರಿಗೆ ತಂದು ಹಿಂದಿನ ವ್ಯವಸ್ಥೆಗೆ ಒಂದು ರೂಪ ಕೊಟ್ಟನು. ಹಾಗೆಯೇ ವಿಜಯನಗರ ಕಾಲದ ತಳವಾರಿಕೆ ಬಗ್ಗೆ ಅಮೇರಿಕಾದ ಇತಿಹಾಸಕಾರ ಬರ್ಟನ್ ಸ್ಟೀನ್ ಈ ರೀತಿ ಪ್ರತಿಪಾದಿಸುತ್ತಾನೆ : Fifty miles South-west of Anegondi and Hampi was the Harapanahalli poligar ; This family seems to have been established in the sixteenth century by a lingayat chief, Dadappa Nayak on the modest basis of his watchman's (Taliyar) rights in two villages.[೨೭] ಹರಪನಹಳ್ಳಿ ಪಾಳೆಯಗಾರರು ಬೇಡರಾಗಿದ್ದು, ವಿಜಯನಗರದ ನಂತರ ಅವರ ಆಡಳಿತ ಲಕ್ಷಣಗಳನ್ನು ಅನುಸರಿಸಿದ್ದರು. ಇವರು ಮೂಲತಃ ತಳವಾರರಾಗಿ ನಂತರ ಹರಪನಹಳ್ಳಿ ಪಾಳೆಯಗಾರರಾಗಿದ್ದರು. ಹೀಗೆ ವಿಜಯನಗರ ಕಾಲದಲ್ಲಿದ್ದ ನಾಡತಳವಾರರು ಕರ್ನಾಟಕದಲ್ಲಿ ಎಪ್ಪತ್ತೇಳು ಪಾಳೆಯಗಾರರಾಗಿ ಆಳ್ವಿಕೆ ನಡೆಸಿರುವುದು ಸ್ಮರಣೀಯ.

ಈ ಮೇಲೆ ಚರ್ಚಿಸಿರುವಂತೆ, ವಿಜಯನಗರವನ್ನು ಅನೇಕ ಪಾಳೆಂ ಅಥವಾ ವಿಭಾಗಗಳನ್ನಾಗಿ ವಿಂಗಡಿಸಲಾಗಿತ್ತು. ಪ್ರತಿ ವಿಭಾಗದಲ್ಲೂ ಅನೇಕ ಬೀದಿಗಳಿದ್ದವು. ಪ್ರತಿಯೊಂದು ವಿಭಾಗವು ಸಹಾಯಕ ವರ್ಗದವರೊಡನೆ ಒಬ್ಬ 'ತಳಾರಿ' ಯ ಹತೋಟಿಯಲ್ಲಿದ್ದಿತು. ಪ್ರತಿ ಪಟ್ಟಣದಲ್ಲೂ ಅದರದೇ ಆದ ತಳವಾರರಿದ್ದರು. ಪ್ರತಿಯೊಂದು ಪಟ್ಟಣ ಮತ್ತು ನಗರಗಳಲ್ಲಿ ಶಾಂತಿ ಪಾಲನೆಗೆ ಒಬ್ಬ ಮುಖ್ಯಾಧಿಕಾರಿಯ (Prefect) ನೇತೃತ್ವದಲ್ಲಿ ಅನೇಕ ತಳವಾರರಿಗೆ ವಹಿಸಲ್ಪಟ್ಟಿತು.[೨೮]

ಒಂದು ರೀತಿಯಲ್ಲಿ ವಿಜಯನಗರ ಸಾಮ್ರಾಜ್ಯ ಶಾಂತಿ ಮತ್ತು ಸಮೃದ್ಧವಾಗಿರಲು ತಳವಾರರೇ ಕಾರಣ ಎಂದು ಹೇಳಬಹುದು. ಇವರು ಪೋಲಿಸರಂತೆ ಕಳ್ಳರನ್ನು ಹಿಡಿಯುವುದು, ಗ್ರಾಮರಕ್ಷಣೆ ಮಾಡುತ್ತಾ, ದೇಶ ರಾಜ್ಯದ ಸಂಪತ್ತನ್ನು ಕಳ್ಳ-ಕಾಕರರಿಂದ, ನಿಧಿಚೋರರಿಂದ ರಕ್ಷಿಸುತ್ತಾರೆ. ಈಗಿನ ಪೋಲೀಸರಂತೆ ಹಿಂದಿನ ತಳವಾರರು ಇದ್ದರು. ಅವರ ಚಟುವಟಿಕೆಗಳ ಮೇಲ್ವಿಚಾರಣೆಯನ್ನು ಗ್ರಾಮ ಮುಖ್ಯಸ್ಥನು ನೋಡಿಕೊಳ್ಳುತ್ತಿದ್ದನು. 'ತಳಾರಿ' ಯು ಗೌಡನ ಅಧೀನದಲ್ಲಿ ಕೆಲಸ ಮಾಡಬೇಕಾಗಿತ್ತು.

ಅವನನ್ನು ತಳವಾರ ಅಥವಾ ಕಾಪು ಅಥವಾ ಕಾವಲ್ ಎಂದು ಕರೆಯುತ್ತಿದ್ದರು. ಈ ಹುದ್ದೆಯೂ ವಂಶಪಾರಂಪರ್ಯ ದ್ದಾಗಿತ್ತು. ಅವರು ಶಾಂತಿಯನ್ನು ಕಾಪಾಡಲು ಅಹೋರಾತ್ರಿ ಗಸ್ತು ತಿರುಗುತ್ತಾ ಅಪರಾಧಿಗಳನ್ನು ಹಿಡಿಯುತ್ತಿದ್ದರು. ಗ್ರಾಮವನ್ನು ಕ್ರೂರ ಮೃಗಗಳು ಮತ್ತು ಹೊರಗಿನ ಶತ್ರುಗಳಿಂದ ರಕ್ಷಿಸುವುದು ಬಾರಿ-ಕಾಪು-ಎಂಬ ಸೇವಕನ ಕರ್ತವ್ಯವಾಗಿತ್ತು. ಅನೇಕ ವೇಳೆ ಕಾಪುಗಳ ಸಂಭಾವನೆಯನ್ನು ಗ್ರಾಮ ದಿಂದ ಕೊಡಲಾಗುತ್ತಿತ್ತು. ಕ್ರಿ.ಶ.೧೫೨೪-೨೬ ರಲ್ಲಿ ಚೆನ್ನಮನಾಯನಿಂಗರು, ಕುಂಡಳ ಕುಂಟದ ಕೆರೆಯ ಕೆಳಗಿನ ಭೂಮಿಯಲ್ಲಿ ಮೂರು ಭಾಗವನ್ನು ದೇವರು, ಬ್ರಾಹ್ಮಣರು ಮುಂತಾದವರಿಗೂ ಮತ್ತು ಗ್ರಾಮವನ್ನು ಕಾಯುತ್ತಿದ್ದ 'ಕಾಪು' ಗಳಿಗೆ ಎರಡು ಭಾಗಗಳೂ ಸೇರಬೇಕೆಂದು ತೀರ್ಮಾನಿಸಿದರು.[೨೮]

ತಳವಾರ (ಸರ್ಕಾರ) ರಾಜ್ಯ(Police State)

ವಿಜಯನಗರ ಕಾಲದಲ್ಲಿ ಸೈನಿಕರು, ಸಾಮಂತರು, ನಾಯಕರು, ಬೇಡರಪಡೆ ಖಾಸಬೇಡರಪಡೆ, ಮೀಸಲುಪಡೆ, ದಂಡನಾಯಕರು ಇರುವಂತೆ ತಳವಾರ, ಊಳಿಗ ತಳವಾರ, ನಾಡತಳವಾರ, ಮಹಾತಳವಾರ ಮತ್ತು ಮೀಸಲು ತಳವಾರರು ಇದ್ದರು. ಈ ತಳವಾರ ಅಧಿಕಾರ ಶ್ರೇಣಿಕೃತವಾಗಿತ್ತು. ತಳವಾರಿಕೆಯಲ್ಲಿ ಆರೋಹಣಕ್ರಮದ ಅಧಿಕಾರ ಸ್ಥಾನಗಳಿದ್ದವು. ಈ ತಳವಾರರು ಸರ್ಕಾರ ನಡೆಸುವಷ್ಟು ಮತ್ತು ನಿಯಂತ್ರಿಸುವಷ್ಟು ಶಕ್ತಿಶಾಲಿಗಳಾಗಿದ್ದರು. ರಾಜ್ಯ, ಸಾಮ್ರಾಜ್ಯದ ಸಂರಕ್ಷಣೆಯನ್ನಷ್ಟೇ ನೋಡಿ ಕೊಳ್ಳುವ ಸರ್ಕಾರಕ್ಕೆ ತಳವಾರ ಸರ್ಕಾರ ಎನ್ನುತ್ತಾರೆ. ರಾಜಪ್ರಭುತ್ವದಲ್ಲಿ ರಾಜನನ್ನು ಬುಡಮೇಲು ಮಾಡಿ ಬಂದ ತಳವಾರ ರಾಜ್ಯಕ್ಕೆ ತಳವಾರ ರಾಜ್ಯ ಎಂದು ಕರೆಯುವರು. ಸಿಪಾಯಿ, ಮ್ಯಾಜಿಸ್ಟ್ರೇಟು, ಪೋಲಿಸು ಇವರಿಂದ ಆಗುವಂಥ ಪ್ರಜಾಸಂರ ಕ್ಷಣೆಯೇ ಬಹು ಪುರಾತನವಾದ ರಾಜ್ಯ ಕರ್ತವ್ಯ. ಇಂಥಾ ಸರಕಾರವನ್ನು ಸಂಕ್ಷೇಪವಾಗಿ ತಳವಾರ ಸರಕಾರ ಎಂದು ಕರೆಯಬಹುದು. ವಿಜಯನಗರದಲ್ಲಿ ಬಹುತೇಕ ಸೈನಿಕ ತಳವಾರರೇ ಆಳ್ವಿಕೆಯಲ್ಲಿ ಬಹುಮುಖ್ಯ ಪಾತ್ರವಹಿಸಿದ್ದರಿಂದ ಮೇಲಿನ ಶೀರ್ಷಿಕೆ ಸೂಕ್ತವಾಗಿದೆ ಎನ್ನಬಹುದು.

ತಳವಾರ ಘಟ್ಟ

ಕರ್ನಾಟಕ ಮತ್ತು ಆಂಧ್ರದಲ್ಲಿ ತಳವಾರಘಟ್ಟ, ತಳವಾರಕೇರಿ, ತಳವಾರ ಓಣಿ, ತಳವಾರಹಳ್ಳಿ, ತಳವಾರಕಟ್ಟೆ ಎನ್ನುವ ಹೆಸರಿನ ಸ್ಥಳನಾಮಗಳಿವೆ. ತಳವಾರಕಟ್ಟೆ, ತಳವಾರಗಟ್ಟೆ (ನಾ) ಯು ತಳವಾರನು ಕಾರ್ಯವನ್ನು ನಿರ್ವಹಿಸುವ ಸ್ಥಳವಾಗಿತ್ತು. ವಿಜಯನಗರದಲ್ಲಿ (ತಳವಾರ+ಕಟ್ಟೆ) ಕೊತ್ವಾಲನ ಚಾವಡಿ, ಪುರ, ಪೇಟೆ ತಳವಾರಗಟ್ಟೆ ಮುಂತಾದವರ ರಚನೆಗೈಸಿದ್ದರು ಎಂದು ತಿಳಿದುಬರುತ್ತದೆ. ಈಗಿನ ತಳವಾರ ಘಟ್ಟವು ಹಿಂದೆ ವಿಠಲಪುರದ ಕೊನೆಯ ಭಾಗವಾಗಿತ್ತಂತೆ. ಆನೆಗೊಂದಿಯ ಭಾಗ ದಿಂದ ಹಂಪಿಗೆ ಪ್ರವೇಶ ಮಾಡುವ ಪ್ರತಿಯೊಬ್ಬರೂ ಈ ನದಿ ತೀರದಿಂದಲೇ ಬರಬೇಕಾಗಿತ್ತು. ಇಂತಹ

ಪ್ರದೇಶದಲ್ಲಿ ರಾಜರಿಗೆ ವಿಷಯ ಮುಟ್ಟಿಸುವ, ಮಾಹಿತಿ ನೀಡುವ ಹಾಗೂ ಗಡಿರಕ್ಷಣೆಯ ತಳವಾರ ಗ್ರಾಮವೊಂದಿತ್ತು. ಆದ್ದರಿಂದ ಈ ಸ್ಥಲಕ್ಕೆ ತಳವಾರಘಟ್ಟ ಎಂದು ಹೆಸರು ಬಂತೆಂದು ಜನ ಹೇಳುತ್ತಾರೆ.[೩೦] ವಿಜಯ ನಗರ ಕಾಲದಲ್ಲಿ ತಳವಾರರೇ ವಾಸಿಸುವ ಪ್ರದೇಶ ಇದಾಗಿತ್ತು. ಕಾರ್ಯನಿರ್ವಹಿಸುವ ಅಂದಿನ ಕಟ್ಟೆ ಇದಾಗಿತ್ತು. ಹಂಪೆ ಪರಿಸರದಲ್ಲಿ ಬೇಡರೇ ಹೆಚ್ಚಾಗಿ ಸೈನಿಕರು, ತಳವಾರರು ಆಗಿದ್ದರು. ನಾಯಕತನ, ಅಮರ ನಾಯಕ, ನಾಯಕಾಚಾರ್ಯ ಎಂಬ ಹುದ್ದೆಗಳಲ್ಲಿ ಬೇಡರು ಅಗ್ರ ಪಂಕ್ತಿಯಲ್ಲಿದ್ದರು. ಇವರಂತೆ ತಳವಾರರು ಸೇವೆಸಲ್ಲಿಸುತ್ತಿದ್ದರು.

ವಿಜಯನಗರ ಕಾಲದಲ್ಲಿ ತುಂಗಭದ್ರಾನದಿಯ ಬಲದಂಡೆ ಆನೆಗೊಂದಿ ಮಹಾದ್ವಾರದ ಎಡಭಾಗಕ್ಕೆ ಇರುವ ತಳವಾರಘಟ್ಟವು ತಳವಾರರ ಕೇಂದ್ರಕಛೇರಿಯಾಗಿತ್ತು. ಈಗಿರುವ ಕಟ್ಟೆ, ದೇವರಗುಡಿ, ವೀರಗಲ್ಲುಗಳು ಹಾಗೂ ಸಮಾಧಿಗಳು ತಳವಾರರ ವಾಸಸ್ಥಳದ ಕುರುಹುಗಳಾಗಿವೆ. ತಳವಾರರು ಇಲ್ಲಿಯೇ ವಾಸಿಸುತ್ತಿದ್ದರೆಂದು ತಿಳಿಯಬಹುದು. ಅವರ ವಾಸಸ್ಥಳಕ್ಕೆ ಅರಸರು ತಕ್ಕಮನೆಗಳನ್ನು ಕಟ್ಟಿಕೊಟ್ಟಿರಬೇಕು. ಇಂದು ಆ ಬಗೆಗಿನ ಕುರುಹುಗಳು ನೋಡಲು ಲಭ್ಯವಿಲ್ಲ. ಕಾವಲು ಗೋಪುರ, ತಳವಾರ ಮಂಟಪಗಳು ರಾಜಧಾನಿಯ ಎತ್ತರದ ಜಾಗದಲ್ಲಿವೆ. ತಳವಾರ ಎತ್ತರವಾದ ಆಯಕಟ್ಟಿನ ಜಾಗದಲ್ಲಿರುತ್ತಿದ್ದನು.

ತಳವಾರರು ವಾಸಿಸುವ ನೆಲೆ ಸ್ಥಳಗಳಿಗೆ ತಳವಾರ ಓಣಿ, ತಳವಾರ ಕೇರಿ (ಕಮಲಾಪುರ-ಹೊಸಪೇಟೆ), ತಳವಾರಗೇರಾ (ಸುರಪುರ), ತಳವಾರಹಳ್ಳಿ (ಮೊಳಕಾಲ್ಮೂರು), ತಳವಾರಕೊಪ್ಪ (ಖಾನಾಪುರ), ತಳವಾರಮಟ್ಟಿ (ಕುಡುತಿನಿ) ಮೊದಲಾದ ಕಡೆ ಈ ಹೆಸರಿನ ಸ್ಥಳನಾಮಗಳಿವೆ. ಹಿಂದೆ ತಳವಾರರು ನೆಲಸಿದ್ದಸ್ಥಳಗಳು ಕಾಲಾಂತರದಲ್ಲಿ ಪರಿವರ್ತನೆ ಆಗಿರುವುದು ಗಮನಾರ್ಹ.

ಇಂದು ಆನೆಗೊಂದಿಗೆ ಹೋಗುವ ಮಾರ್ಗದಲ್ಲಿ ತುಂಗಭದ್ರಾನದಿಗೆ ಸೇತುವೆಯನ್ನು ಕಟ್ಟಿರುವುದರಿಂದ ಇದರ ಪಕ್ಕದಲ್ಲಿರುವ ತಳವಾರಘಟ್ಟದ ಅವಶೇಷಗಳು ಭಗ್ನಗೊಳ್ಳುತ್ತಲಿವೆ. ಗತಕಾಲದ ಭವ್ಯ ಇತಿಹಾಸವನ್ನು ಹೊಂದಿರುವ ಇದು ಇಂದಿನ ರಕ್ಷಣಾ ವ್ಯವಸ್ಥೆಗೆ ದಾರಿದೀಪ ಹಾಗೂ ಸಂಕೇತವಾಗಿದೆ. ಇಲ್ಲಿನ ವೀರಗಲ್ಲುಗಳು ತಳವಾರರು ಆಗಿದ್ದ, ಅವರ ವಂಶಜರು ಆಗಾಗ ಆರಾಧನೆ ಮಾಡುವ ಪದ್ಧತಿಯು ಇತ್ತು. 'ತಳವಾರ' ಎಂಬ ಅಧಿಕಾರಿ ಇಲ್ಲಿ ಕಾರ್ಯನಿರ್ವ ಹಿಸಿದ ಬಗ್ಗೆ ಶಾಸನಗಳಲ್ಲಿಯೂ ಸಹಾ ಉಲ್ಲೇಖವಿದೆ.

ತಳವಾರಿಕೆಯ ಪರಂಪರೆ

ತಳವಾರಿಕೆ ವಂಶಪರಂಪರೆಯಿಂದ ಬರುವುದೇ ಹೆಚ್ಚು. ಅತಿ ಪ್ರಾಚೀನ ಕಾಲದಿಂದಲೂ ತಳವಾರಿಕೆ ಈ ನೆಲದಲ್ಲಿತ್ತು. ವಂಶಪರಂಪರೆಯಿಂದ ಅಂದರೆ ತಾತ, ತಂದೆ,ಮೊಮ್ಮಗನಿಗೆ ತಳವಾರಿಕೆ ಹಕ್ಕುಗಳು ರವಾನೆಯಾಗುತ್ತಿದ್ದವು. ವಿಜಯನಗರ ಕಾಲಕ್ಕೆ ಇದು ಉನ್ನತ ಹುದ್ದೆಯಾಗಿತ್ತು. ತಳವಾರರಿಗೆ ಹಿಂದೆ ಸಂಭಾವನೆ ಇತ್ತು.

ಹಮು(ಡ)ಗಲಿ ತಾಲೂಕಿನ ನಕ್ಕರಹಲುವಿನ ಕ್ರಿ.ಶ.೧೫೬೨ರ ಒಂದು ಶಾಸನದ ಪ್ರಕಾರ ನಗರೆಹಾಳ್ ಅಧಿಕಾರಿ ಸೇನಬೋವ ತಿರುಮಲ್ಲರಸಗೌಡ, ತಳರ್ ಮತ್ತು ಜೋಯಿಸರಿಗೆ ಮಾನ್ಯಭೂಮಿಯನ್ನು ಕೊಡಲಾಯಿತು.[೬೦] ತಳವಾರನ ಜೀವಿತಕ್ಕಾಗಿ ವ್ಯಾಪಾರಿಗಳು 'ತಳಟಸುಂಕ' ವನ್ನು ಕೊಡಬೇಕಾಗಿತ್ತು. ತಳವಾರನಿಗೆ ವ್ಯಾಪಾರ ಸಾಮಗ್ರಿಗಳ ಮೇಲಿನ ಸುಂಕವಾಗಿ 'ತಳಭಂಡಸುಂಕ'ವನ್ನು ನೀಡುತ್ತಿದ್ದರು.

ಹಿಂದೆ ತಳವಾರಿಕೆಯಲ್ಲಿ ಬೇಡರೇ ವ್ಯಾಪಕವಾಗಿದ್ದರು. ನಂತರ ಸೈನಿಕರಾಗಿ ರಕ್ಷಣೆಗಾಗಿ ಬೇರೆ ಬೇರೆ ಸಮುದಾಯದವರನ್ನು ಈ ಹುದ್ದೆಗಳಿಗೆ ನೇಮಿಸಿದರು. ಬ್ರಿಟೀಷರ ಕಾಲಕ್ಕೆ ಪಲ್ಲಟಗೊಂಡಿತು. ವಿಜಯನಗರ ಅಥವಾ ಅನಂತರದಲ್ಲಿ ಲಿಂಗಾಯತರಲ್ಲಿ ಸಹಾ ಲಿಂಗಾಯಿತ ತಳವಾರ ಜಾತಿ ಹುಟ್ಟಿಕೊಂಡಿತ್ತು. ತಳವಾರಿಕೆ ವೃತ್ತಿ ಮತ್ತು ಹುದ್ದೆಯನ್ನುಹೊಂದಿರುವ ಕುಟುಂಬಗಳಿಗೆ ತಳವಾರ ಹೆಸರಿಂದ ಕರೆಯುವುದು ಒಂದು ವಾಡಿಕೆ. ಹಾಗೆಯೇ ದಲಿತ, ಹಿಂದುಳಿದ ವರ್ಗಗಳಲ್ಲಿಯು ಸಹಾ ತಳವಾರರಿದ್ದರು.

ದೇವಲಾಪುರದ ಮಲ್ಲಿಕಾರ್ಜುನ ಸಾಳ್ವ ನಗರಸಿಂಗರಾಯನ .... ಆಳ್ವಿಕೇಲಿ.... ಗೌಡರು ...ಲಕ್ಕಣ್ಣ ಗೌಡ.... ಬೊಮ್ಮವ.... ಶಾನುಭೋಗ, ಬಡಗಿ ಗುರುವೊಜ.... ತಳವಾರ ನಲ್ಲೊಬ್ಬ...ಇವನು ಊರಿಗೆ ಉಗ್ಗಿಹೊಯ್ದ ವಿಚಾರ ತಿಳಿದು ಬರುತ್ತದೆ. ಇದರಂತೆ ಬಳ್ಳಾರಿ ತಾಲೂಕು ಕುಡುತಿನಿ ಗ್ರಾಮವು ತಳವಾರರ ನಿಂಯತ್ರಣದಲ್ಲಿತ್ತು. ಇದರ ಚಕ್ಕುಬಂದಿ, ಯಿಂದ್ರಿದಿಕ್ಕಿನಲ್ಲಿ ಕೊಳಗಲ್ಲು ನಮ್ಮ ಮೇಲೆ ಹರದಾರಿ ತಳವಾರ ಮಟ್ಟಿ ಅಗ್ನಿದಿಕ್ಕಿಗೆ ಬೆಳಗಲ್ಲು ಹೊಸಮೇರೆಗೆ ....ಹರಿದಾರಿ....ಬಾಣರಾವಿ ಎಂದಿದೆ.[೬೧]

ತಳವಾರರಿಗೆ ಪೂಜನೀಯ ಕೇಂದ್ರಗಳಿದ್ದವು. ತಳವಾರ ಚೌಡಕಿ, ದೇವಾಲಯ, ಮನೆ, ಕಟ್ಟೆ ಇತ್ಯಾದಿ. ಕುರುಗೋಡಿನಲ್ಲಿ ಅನೇಕ ದೇವಾಲಯ ಗುಡಿಗಳಿವೆ. ಇದಕ್ಕೆ ಉತ್ತರ ತಳವಾರ ಯೀಶ್ವರನಗುಡಿ (ಈ).. ಮಲ್ಲರಾಯನ ವಂಶದವರು ಕಟ್ಟಿಸಿ ಸ್ಥಳವನ್ನು ಪ್ರಭು ಮಾಡಿ, ಕೋಟೆ ಮುಮತಾದವುಗಳನ್ನು ಕಟ್ಟಿಸಿ... ವಿಜಯನಗರ ವಿದ್ಯಾರಣ್ಯ ಕ್ಷತ್ರಿಯ ತುಳುವರು ರಾಜ್ಯಾಧಿಕಾರಮಾಡಿದ ಬಗ್ಗೆ ತಿಳಿದು ಬರುತ್ತದೆ. ಈಶ್ವರನ ಗುಡಿ ಕೆಲವು ತಳವಾರರಿಗೆ ಆರಾಧನಾ ಕೇಂದ್ರವಾಗಿತ್ತು. ಕೃಷ್ಣದೇವರಾಯನ ತಾತನ ಹೆಸರು ತಳವಾರ ಈಶ್ವರನಾಯಕ ಎಂದೇ ಆಗಿದೆ. ಕೈಫಿಯತ್ತುಗಳಲ್ಲಿ 'ತಳವಾರ' ಮರಿಯನ ಸೇವೆ, ಬನವಾಶೆ ತಳವಾರ ನಾರಾಯಣ ಇತರ ವಿವರಗಳಿವೆ. ತಲವಾರನ ಸ್ಥಾನ-ಮಾನ ಹೇಗಿತ್ತೆಂದರೆ ಊಳಿಗ ತಳವಾರ ಗಂಡು ಹೆಣ್ಣಿನ ಕೂಡಿಸಿ ಬಿಳಿಶಾಲು ಪುಡಿಸಿ-ಈ ಸಾಮಗ್ರಿಯಲ್ಲಾ ಉಡಿ ತುಂಬಿ ನಿಶ್ಚಿಯ ಮಾಡಿ ಆಮೇಲೆ ವೀಳ್ಯೆ ಹಂಚುವ ವಿವರ ಹೀಗಿದೆ. ೧. ದೇವರು, ೨. ಗುರುಗಳು, ೩. ನಾಡಿಗ, ೪. ಶ್ಯಾನುಭೋಗ, ೫. ಮಠ, ೬.ಪಾಟೆಶೆಟ್ಟರು, ೭. ಪಟ್ಟಣಶೆಟ್ಟಿ, ೮. ಊಳಿಗ ತಳವಾರ ಎಂದು ಶ್ರೇಣಿಕೃತವಾಗಿ ವರ್ಗೀಕರಿಸಲಾಗಿದೆ. ಊಳಿಗ ತಳವಾರ, ಬಿಟ್ಟಿಚಾಕರಿ ಮಾಡುವವನಂತೆ

ಕಂಡು ಬರುತ್ತಾನೆ. ವಿಜಯನಗರದಲ್ಲಿ ಊಳಿಗಮಾನ್ಯ ವ್ಯವಸ್ಥೆ, ಶೋಷಣೆ ನೆಲೆಗಳು ಅಲ್ಲಲ್ಲಿ ಬೇರೂರಿದ್ದವು. ತಳವಾರಿಕೆ ಕೂಡ ಒಂದು.

ತಳವಾರಿಕೆ ಪರಂಪರೆಯಲ್ಲಿಯೇ ಕುಮಾರರಾಮ, ಕೃಷ್ಣದೇವರಾಯರಿಂದ ಗುರುತಿಸಿ ಕೊಳ್ಳುವುದು ಜಾತಿ ಅಭಿಮಾನದಿಂದಲೆ ಹೊರತು ಬೇರೆ ಅಲ್ಲ. ಇವರು ಬೇಡರು ಆಗಿರುವುದರಿಂದ ತಳವಾರ ಸೇರಿದಂತೆ ಬಹುಪಾಲು ಜನರು ಇವರಿಗೆ ಪ್ರೋತ್ಸಾಹ ಕೊಟ್ಟಿದ್ದರು. ನಾಗಲಾದೇವಿ ಸ್ತ್ರೀ ದಾಸಿಯು, ಆಕೆಯ ಗರ್ಭದಲ್ಲಿ ಕೃಷ್ಣರಾಯ ಜನಸಿದನು. ಪಟ್ಟದರಸಿಗೆ ಅಚ್ಯುತರಾಯ ಜನಿಸಿದ. ಹೀಗೆ ಕೃಷ್ಣರಾಯ ಆಳುವಾಗ ಪೂರ್ವ ದಾರಭ್ಯವಾಗಿ ನಮಗೆ ಕಾವಲಿ (ಕಂಪ) ನಾಡದಳವಾರಿಕೆಯು ನಡಿಯು ಆಯಿತು.· ನಮ್ಮ ಮರಿಯಾದೆ ದಯಪಾಲಿಸ ಬೇಕೆಂದು ಕೇಳಿಕೊಂಡವ ನಾದನು. ಅದೇ ಮೇರೆಗೆ ಕೃಷ್ಣರಾಯನು ದಯಪಾಲಿಸಿದ ವಿವರ : ನಾಡದಳವಾರಿಕೆ ಸ್ವಾಸ್ಥಿಯು ಕುಮಾರರಾಮ ವಂಶಸ್ಥರಾದ ಹಿರೆಬೊಮ್ಮಂತ ರಾಜನಿಗೆ ಜಾಗೀರು ಕೊಟ್ಟ ಗ್ರಾಮಗಳು ಉಜನಿ (ಇಮ್ಮಡಿನಾಯಕ), ಜರಿಮಲೆ (ಮಲ್ಲಿಕಾರ್ಜುನ), ಗುಡೇಕೋಟೆ (ಈರಪ್ಪನಾಯಕ), ಬಾಣರಾವಿ (ರಾಜಪ್ಪನಾಯಕ), ಸೊಂಡೂರು (ಬಸಾಳನಾಯಕ), ವಡ್ಡು (ಚಿನ್ನಪ್ಪನಾಯಕ), ಕುಡುತಿನಿ ಹಿರೆಬೊಮ್ಮಂತರಾಜರು ಆಳುತ್ತಿದ್ದರು.

ವಿಜಯನಗರ ಕಾಲದಲ್ಲಿ ತಳವಾರಿಕೆಗೆ ಹೆಚ್ಚು ಒತ್ತುಕೊಟ್ಟವರು ಸಾಳುವ ವಂಶಸ್ಥರು. (ವೀರ) ನರಸಿಂಹನ ಕಾಲದಲ್ಲಿ ನಾಯಕ ಜನಾಂಗದವರನ್ನು ಅಂಗರಕ್ಷಕರ ನ್ನಾಗಿ ನೇಮಕ ಮಾಡಿಕೊಂಡಿದ್ದರು. ಕಾಡುಚೆಂಚರು, ಶಬರರು, ಕಿರಾತರು, ವಾಲ್ಮೀಕಿ, ಪಾಳೆಯಗಾರರನ್ನು ಈ ವ್ಯವಸ್ಥೆಗೆ ಸೇರಿಸಿಕೊಂಡಿದ್ದರು. 'ಈ ಜನಾಂಗದ ಕೆಲವು ಜನರು ಹಳ್ಳಿ ಮತ್ತು ಊರುಗಳಲ್ಲಿ ಕೇವಲ ಜೀವನೋಪಾಯಕ್ಕಾಗಿ ಊರಿನ ಯಜಮಾನರು ಅಂದರೆ ಗೌಡ, ಶ್ಯಾನುಭೋಗ, ಗೊಂಚಿಕಾರ ಇವರುಗಳು ಹೇಳಿದಂತೆ ಊರಿನ ಆಳಾಗಿಯೂ ರಾತ್ರಿ-ಹಗಲು ಜೀತದಾಳಾಗಿ ದುಡಿಯುತ್ತಾ ಜೀವನ ನಡೆಸುತ್ತಿರುವಂತ ವರಿಗೆ ತಳವಾರರೆಂದರು. ಬರುಬರುತ್ತಾ ಈ ತಳವಾರನೆಂಬ ಕಸುಬಿನ ನಾಮವು ಆ ಸಂತತಿಯ ಜಾತಿನಾಮವಾಗಿ ಕರೆಯಲ್ಪಟ್ಟಿತು ಎಂದಿರುವರು.[೩೨]

ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ತಳವಾರ (ಖಡ್ಗ ಹಿಡಿಯಲು ಸಮಾನದವ) ಎಂಬಮನೆತನದ ಹೆಸರು ಹೊಂದಿದವರನ್ನು ಇವರು ಕಡಿಮೆಯೆಂದು ಭಾವಿಸಿದ್ದಾರೆ.[೩೩] ಇವರು ಹಗಲಿರುಳೂ ಗ್ರಾಮಗಳ ರಕ್ಷಣಾ ಕಾರ್ಯಕ್ಕೆ ನಿಯಮಿಸಲ್ಪಟ್ಟವರ ಸಂತತಿಯ ವರು ತಮ್ಮನ್ನು ತಳವಾರರೆಂದು ಕರೆದುಕೊಳ್ಳುತ್ತಾರೆ. ಗ್ರಾಮರಕ್ಷಣೆಯ ಹೊಣೆಗಾರಿಕೆ ಯನ್ನು ಜನರೇ ತಳವಾರರಿಗೆ ಕೊಟ್ಟಿದ್ದಾರೆ. ಅದಕ್ಕೆ ರಾಜಮನ್ನಣೆ ನೀಡಿದ್ದಾರೆ. ತಳವಾರರು ಸಂಪೂರ್ಣ ಸ್ಥಳೀಯರ ನಿಯಂತ್ರಣದಲ್ಲಿದ್ದರು.

ಇಂದು ತಳವಾರರು ತಮ್ಮ ಹಿಂದಿನ ಬದುಕಿನಿಂದ ಸ್ಥಿತ್ಯಂತರಗೊಂಡಿದ್ದಾರೆ. ರಾಜಪ್ರಭುತ್ವದಲ್ಲಿ ಏನೆಲ್ಲಾ ಸಾಧನೆ ಮಾಡಿದ ಜನಾಂಗಕ್ಕೆ ಬ್ರಿಟಿಷರು ಪಿಂಚಣಿ ಕೊಡು ವುದು, ಪೋಲಿಸ್ ಹುದ್ದೆಗಳಿಗೆ ನೇಮಿಸುವುದನ್ನು ಮಾಡಿದರು. ಆನಂತರ ರಾಜ್ಯ

ಸರಕಾರ ಯಾವುದೇ ಮಾಸಾಶನ ಕೊಡಲಿಲ್ಲ. ಹಾಗೂ ಇವರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸುವ ಬಗ್ಗೆ ಹೋರಾಟ ಚಳುವಳಿಗಳು ಮುಂದುವರಿದಿದೆ. ಇಂದಿಗೂ ಅವರು ಗ್ರಾಮ ಪಂಚಾಯ್ತಿ, ಗ್ರಾಮ ಲೆಕ್ಕಿಗ ತಹಶೀಲ್ದಾರ ಇತರ ಅಧಿಕಾರಿಗಳ ಸಹಾಯಕರಾಗಿರುವುದು ಗಮನಾರ್ಹ.

ಹಂಪೆಯಲ್ಲಿ ತಳವಾರರ ಮನೆಯಿದೆ. ಅವರ ಹೆಸರು ತಳವಾರ ಪಂಪಣ್ಣ; ೫೨ ವರ್ಷ ವಯಸ್ಸು, ತಂದೆ ತಳವಾರ ಈರಣ್ಣ. ಇವರ ತಾತ ತಳವಾರ ತಿಮ್ಮಪ್ಪ. ಇವರ ಮಡದಿ ಲಕ್ಷ್ಮಿ ಕಮಲಾಪುರ ಗ್ರಾಮದವಳಾಗಿದ್ದರೂ, ಮೂಲತಃ ಆಂಧ್ರ ಪ್ರದೇಶದ ಆಲೂರು ತಾಲೂಕಿನ (ಮಂದ್ಲಾರುಬೆಡಗು) ಬದ್ನಾಳು ಗ್ರಾಮದವಳು. ನಾಯಕರ ಮೀನುಗಲಾರು ಎಂಬುವುದು ಇವರ ಬೆಡಗು. ಮನೆ ದೇವರು ತಿರುಪತಿ ವೆಂಕಟೇಶ. ಪೋತರಾಜನನ್ನು ಮಾಡಿಕೊಂಡು ಮದುಮಗನನ್ನು ಮಾಡುತ್ತಾರೆ. ಇವರಿಗೆ ತಾತನವರಿಂದ ತಳವಾರಿಕೆ ಬಂದಿದೆ. ಇಡೀ ವಂಶವೇ ತಳವಾರಿಕೆ, ತಳವಾರ ಎಂದು ಶಾನುಭೋಗರಿಂದ ಬ್ರಿಟೀಷರ ಕಾಲದಲ್ಲಿ ತಾತ-ತಂದೆಯಿಂದ ಹಕ್ಕು ಅಧಿಕಾರ ಇವರಿಗೆ ಬಂದಿದೆ.

ಬ್ರಿಟಿಷ್ ಅಧಿಕಾರಿಗಳು ಈ ತಳವಾರರಿಗೆ ಬಿಲ್ಲೆ, ಕೋಲು ಕೊಟ್ಟಿದ್ದರು. ಇವರು ಅವುಗಳನ್ನು ಕಳೆದುಕೊಂಡಿದ್ದಾರೆ. ಇದಲ್ಲದೆ, ಜಹಗೀರಾಗಿ ೩ ಎಕರೆ ನೀರಾವರಿಭೂಮಿಯನ್ನು ಕೊಟ್ಟಿದ್ದರು. ಇವರ ತಂದೆ ಎಲ್ಲವನ್ನು ಕಳೆದುಕೊಂಡರು. ತಾತನದು ಇನಾಂ ಭೂಮಿ ಇತ್ತು. ಜಬ್ಬಲ ಭೂಮಿಯನ್ನು ಅವರು ಮಾರಿ ಹೋಗಿದ್ದಾರೆ.

ಹಂಪೆಯಲ್ಲಿರುವ ಈ ತಳವಾರ ಮನೆತನದವರು ಹಿಂದೆ ಮೀಸಲು ತಳವಾರರಾಗಿದ್ದರು. ಇವರ ಕರ್ತವ್ಯಗಳಲ್ಲಿ ಪ್ರಮುಖವಾಗಿ ಸರ್ವೆಭೂಮಿಯಾರದ್ದೆಂದು ಗುರುತಿಸಿ ಹೇಳುತ್ತಿದ್ದರು. ತಳವಾರ ಸದಾಕಾಲ ವಿಲೇಜ್ ಆಕೌಂಟೆಂಟ್, ಜಿಲ್ಲೆದಾರ, ತಹಶೀಲ್ದಾರ, ಡಿ.ಸಿ., ಮೊದಲಾದವರು ಬಂದಾಗ ಅವರು ಹೇಳಿದ ಕೆಲಸವನ್ನು ಇವರು ಮಾಡುತ್ತಿದ್ದರು. ಗ್ರಾಮದಲ್ಲಿ ಬಹುತೇಕ ನ್ಯಾಯ ತೀರ್ಮಾನಗಳು ತಳವಾರನ ಮೂಲಕ ಆಗುತ್ತಿದ್ದವು. ಸೇವೆ ಎಷ್ಟಾಗಿದೆ; ಜಮೀನು, ಹಳೆಕಾಲದವೆ, ಹೊಸಕಾಲದವೆ ಎಂದು ತಳವಾರ ಹೇಳಿದಾಗಲೇ ಅವರು ಕೇಳಿ ಒಪ್ಪಿಕೊಳ್ಳುತ್ತಿದ್ದರು. ಗ್ರಾಮದಲ್ಲಿ ಯಾವುದೇ ಜಮೀನು ವಿವಾದಗಳಾದ್ದರೂ ತಳವಾರ ಸೊಗಸಾಗಿ ಬಗೆ ಹರಿಸುತ್ತಿದ್ದನು. ದೇವರ ಕಾರ್ಯಕ್ರಮಗಳಲ್ಲಿ ಇವರ ಪಾತ್ರ ಗಮನಾರ್ಹವಾದುದು. ಎಲ್ಲದರಲ್ಲಿಯೂ ಮುಂದಾಳತ್ವ ವಹಿಸುತ್ತಿದ್ದವರು ತಳವಾರರು. ತಳವಾರನಿಗೆ ಗ್ರಾಮಸ್ಥರು ಬಟ್ಟೆ ತರುತ್ತಾರೆ. ಊರ ಕಾರ್ಯ ಮಾಡಿದಾಗ ಕಾಳಿಕಾದೇವಿ ಮಾಡಿದಾಗ ತಳವಾರರು ಬೇಕಾಗುತ್ತಾರೆ. ತಳವಾರರು ಊರಿನ ಸರಗ ಹಾಕುತ್ತಾರೆ. ಕೈಗೆ ಕಡಗ, ಉಂಗುರ, ಕಾಲಿಗೆ ಗೆಜ್ಜೆಯನ್ನು ಗ್ರಾಮಸ್ಥರು ತಳವಾರನಿಗೆ ಕೊಡುತ್ತಿದ್ದರು. ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ತಳವಾರಘಟ್ಟವೇ ತಳವಾರರ ಊರಾಗಿತ್ತೆಂದು ಇವರು ಹೇಳುತ್ತಾರೆ. ತಮಗೆ ಆನೆಗೊಂದಿ ರಾಜರು ಪ್ರೋತ್ಸಾ ಕೊಡುತ್ತಿದ್ದರೆಂದು ಅವರು ತಿಳಿಸುತ್ತಾರೆ.

ಇಂದು ತಳವಾರನ ಹುದ್ದೆ ಮತ್ತು ವೃತ್ತಿ ತೀರಾ ನಿರ್ಲಕ್ಷ್ಯೆಗೆ ಗುರಿಯಾಗಿದೆ. ಡಿ.ಸಿ ಮತ್ತು ಎ.ಸಿ., ತಹಶೀಲ್ದಾರ, ಆರ್.ಐ.ವಿ.ಎ. ಕೆಳಗಡೆ ನಾನು ಕೆಲಸ ಮಾಡಬೇಕು. ಸಾಮಾಜಿಕವಾಗಿ ನಮಗೆ ನೀಚಸ್ಥಾನ ಕೊಟ್ಟಿದ್ದಾರೆ. ಎಲ್ಲರ ಸೇವೆ ಮಾಡಿದರೂ ನಮಗೆ ಕಿಂಚಿತ್ತು ಬೆಲೆ ಇಲ್ಲವೆಂಬ ಕೊರಗು ಅವರದು.

ಮೀಸಲು ತಳವಾರ

ಹಂಪೆಯಲ್ಲಿ ನೆಲೆಸಿರುವ ತಳವಾರರಿಗೆ 'ಮೀಸಲು ತಳವಾರರು' ಎಂದು ಕರೆಯುವರು. ತಲೆ ತಲಾಂತರಗಳಿಂದ ಬಂದಿರುವ ತಳವಾರರು ಈಗಿನ ಎಸ್.ಪಿ., ಡಿ.ಎಸ್.ಪಿ., ಸರ್ಕಲ್, ಎಸ್.ಐ. ಪೋಲಿಸರಂತೆ ಅಧಿಕಾರ ಹೊಂದಿದ್ದರು. ನಮ್ಮ ತಳವಾರರ ಬಗ್ಗೆ ಹಳೆಯ ದಾಖಲೆಗಳು ಧರ್ಮಸ್ಥಳದ ಮ್ಯೂಸಿಯಂನಲ್ಲಿವೆಯಂತೆ.

ತಳವಾರ (ಪಂಪಣ್ಣ) ರಿಗೆ ಸರ್ಕಾರ ಆರಂಭದಲ್ಲಿ ಸಂಬಳ ಕೊಡುತ್ತಿರಲಿಲ್ಲ. ಜನರು ಆಯಗಾರರಿಗೆ ಕೊಡುವಂತೆ ದವಸ-ಧಾನ್ಯ ಹಾಗೂ ವಸ್ತುಗಳನ್ನು ತಳವಾರರಿಗೆ ಕೊಡುತ್ತಿದ್ದರು. ನಂತರ ೧೦೦ ರೂ. ಕೊಡಲು ಸರ್ಕಾರ ಮುಂದಾಯಿತು. ಹೀಗೆ ೧೦೦ರಿಂದ ಆರಂಭವಾದ ಸಂಬಳ ರೂ.೧೫೦, ೩೦೦, ೫೦೦, ೬೦೦, ೮೦೦, ೯೦೦, ೧೦೦೦ರೂಪಾಯಿ ಆಯಿತು. ಹುದ್ದೆಖಾಯಂ ಅಲ್ಲದ ಕಾರಣ ಸಧ್ಯ ೨೦೦೦ರೂ ಕ್ರೋಢೀಕೃತವೇತನ ಕೊಡುಲಾಗುತ್ತದೆ. ಇಂದಿಗೂ ಹಾಗೆಯೇ ಇವರ ಹಕ್ಕು-ಬಾದ್ಯತೆಗಳು ಬೇರೆ ಬೇರೆ ಪ್ರದೇಶಕ್ಕೆ ತಕ್ಕಂತೆ ಬದಲಾಗಿವೆ.

ಒಟ್ಟಾರೆ ಹೇಳುವುದಾದರೆ, ವಿಜಯನಗರ ಕಾಲದಲ್ಲಿ ತಳವಾರರು ರಾಜ್ಯ ರಕ್ಷಣೆ ಸಾಮ್ರಾಜ್ಯದ ಶಾಂತಿ, ಸುವ್ಯವಸ್ಥೆಗೆ ಕಾರಣಕರ್ತೃಗಳಾಗಿದ್ದರು. ಇಂಥಹ ಅಧ್ಯಯನವೊಂದು ವಿಜಯನಗರ ಸಾಮ್ರಾಜದ ಚರಿತ್ರೆಗಳಿಂದ ಮರೆಯಾಗಿತ್ತು. ತುಳುವ ಸಂತತಿಯವರು ಮೂಲದಲ್ಲಿ ತಳವಾರಿಕೆಯಿಂದ ವಿಕಾಸವಾದವರು. ಕೃಷ್ಣದೇವರಾಯನ ಮೂಲ ವಂಶಸ್ಥರು ತಳವಾರರೇ ಆಗಿದ್ದರು. ತಳವಾರರೇ ವ್ಯಾಪಕವಾಗಿದ್ದು ಆಡಳಿತದಲ್ಲಿ ದಕ್ಷತೆ, ಪ್ರಮಾಣಿಕತೆ, ರಕ್ಷಣೆ ಮಾಡಿದ್ದ ಕಾರಣ ಇದನ್ನು ತಳವಾರರ ರಾಜ್ಯ(Police State) ಎಂದು ಕರೆಯಬಹುದಾಗಿದೆ. ಇಂದಿನ ತಳವಾರ ಘಟ್ಟ, ತಳವಾರ ಕೇರಿಗಳು ಗತಕಾಲದ ರಕ್ಷಣೆಯ ಬಗ್ಗೆ ಇಂದಿನ ತಲೆ ಮಾರಿಗೆ ಹೊಸಸಂದೇಶವನ್ನು ಕೊಡುತ್ತವೆ. ವಿಜಯನಗರ ಅರಸರು ತಳವಾರರ ಮೂಲಕ ಗ್ರಾಮಾಡಳಿತಕ್ಕೆ ಒತ್ತು ಕೊಟ್ಟಿದ್ದು ಸ್ಮರಣೀಯ. ಇಂದಿನ ಪೋಲಿಸ್ ವ್ಯವಸ್ಥೆಯಂತೆ ತಳವಾರಿಕೆಯಲ್ಲಿಯೂ ಸೇವಾ ಹಿರಿತನ, ಶ್ರೇಣಿಕೃತ ಅಧಿಕಾರ ಹಂಚಿಕೆಯಾಗಿದ್ದಿತು. ವಿಜಯನಗರ ಕಾಲದ ಸಾಂಸ್ಕೃತಿಕ ಚರಿತ್ರೆಯಲ್ಲಿ ತಳವಾರರ ಪಾತ್ರ ಬಹುಮುಖ್ಯ. ಊರಿನ ಪ್ರತಿಯೊಂದು ಕಾರ್ಯಕ್ರಮಕ್ಕೆ ಇವರು ಹಾಜರಿದ್ದು ಕರ್ತವ್ಯ ನಿರ್ವಹಿಸುತ್ತಾರೆ. ಹಬ್ಬಹರಿದಿನಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿದ್ದರು. ಯುಗಾದಿ, ಧನುರ್ಮಾಸಗಳಲ್ಲಿ ಬೇಟೆಗೆ ಹೊರಡುವಮುನ್ನ ಊರಲ್ಲಿ ತಮಟೆ ಮೂಲಕ ಸಾರುವವನು ತಳವಾರನೆ.

ಇವರು ಬೇಟೆ, ಪಶುಪಾಲನೆ ಮತ್ತು ಕೃಷಿಯಲ್ಲಿ ಸಹಾ ತಮ್ಮನ್ನು ತೊಡಗಿಸಿ ಕೊಂಡಿರುವುದು ಗಮನಾರ್ಹ.

ಆಧಾರ ಸೂಚಿ ಹಾಗು ಟಿಪ್ಪಣಿಗಳು

೧. ವಾಲ್ಮೀಕಿ ಜ್ಯೋತಿ ಸಂ ಹ.ವಿ.ಸಿಂಹ, (ಸ್ಮರಣ ಸಂಚಿಕೆ), ೧೯೮೯, ಪು.೨೩.

೨. ಸಂಸ್ಕೃತಿ ಚರಿತ್ರೆ ಸಂಪುಟ-ಎ, ಮೌರ್ಯ ಶಾತವಾಹನ, ಲಕ್ಷ್ಮಣ್ ತೆಲಗಾವಿ.

೩. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ.ಎಂ.ಚಿದಾನಂತಮೂರ್ತಿ, ೨೦೦೨ (೩ನೇ ಮುದ್ರಣ).

೪. Local self goverment in mediaeval Karnataka, P.400, Dikshit KUD, 1964, P, 146-49.

೫. Ec, Vol-IV, P.237.

೬. ಎ.ಕ., VII, ಶಿವಮೊಗ್ಗ 7131 : 1431

೭. ಎ.ಕ., VIII, ತೀರ್ಥಹಳ್ಳಿ 91-66 : 1709

೮. ಎ.ಕ., X, ಮುಳುಬಾ 20-2 :1468

೯. ಎ.ಕ., VIII, ಸಾಗರ 163 - 23 : 1488.

೧೦. ಪ್ರವಾಸಿ ಕಂಡ ಇಂಡಿಯಾ ಭಾಗ - ೨, (ನಿಕೋಲೊ ದೆ ಕೊಂತಿ) ಪು : ೧೫೫.

೧೧. ಹಂಪಿ ಶಾಸನಗಳು, ಕವಿವಿ-ಹಂಪಿ., ಪು : ೧೬೪.

೧೨. ಸೌ.ಇಇ, IX-II ೪೮೦-೧೩ : ೧೫೧೦.

೧೩. ನೋಡಿ ಹಂಪಿ ಶಾಸನಗಳು, ಪು-೧೮೪.

೧೪. EC.Vol - IV, P-196.

೧೫. ಎ.ಕ. X (S) ಮುಳವಾ . ೫-೨, ೧೫ನೇ ಶತ.

೧೬. ಎ.ಕ. VII, ನಾಗಮಂಡಲ, ಎ.ಕ.ಸಂ VI ಮಂಡ್ಯ, ಪಾಂಡವಪುರ, ಪು.೧೨೪, ೨೧೬,೨೨೭,೨೨೮.

೧೭. ರಾಯಚೂರು ಜಿಲ್ಲೆಯ ಶಾಸನ ಸಂಪುಟ, ಕ.ವಿ.ಹಂ, ಪು.೩೬೭.

೧೮. ಹಂಪಿ ಶಾಸನಗಳು, ಪು.೧೭೦.

೧೯. ಸೌ.ಇ.ಇ., IX (II) ನಂ-೬೭೬.

೨೦. ಹಂಪಿ ಶಾಸನಗಳು, ಪು.೬೮.

೨೧. EC.Vol - 8, P-215

೨೨. ಅದೇ.ಪು. ೪೬೦.

೨೩. EC Vol-7 P-124.

೨೪. ಅದೇ.ಪು. ೨೨೭-೨೮.

೨೫. ಪ್ರವಾಸಿ ಕಂಡ ಇಂಡಿಯಾ, ಭಾಗ-೨, ಪು.೧೫೫

೨೬. ಕರ್ನಾಟಕ ಸಮಗ್ರ ಚರಿತ್ರೆ ಸಂಪುಟ-೩

೨೭. Vijayanagara, Burton stein, C.U.P. P-60.

೨೮. Studies in the history of the third bynasty of Vijayanagara, Venkata Ramanayya.N, P-142.

೨೯. ವಿಜಯನಗರ ಕಾಲದ ಸ್ಥಳೀಯ ಸರ್ಕಾರ, ಎ.ವಿ.ವೆಂಕಟರತ್ನಂ ಪು.೩೮.

೩೦. ಸೌ.ಇ.ಇ. IX (II) ನಂ-೬೭೬.

೩೧. ಕರ್ನಾಟಕ ಕೈಫಿಯತ್ತುಗಳು, ಪು೫೨೧-೨೨.

೩೨. ನಾಯಕ ಜನಾಂಗದ ಇತಿಹಾಸ, ರಾಜನರಾಜಣ್ಣ, ಪು.೮೪-೮೫-೯೧.

೩೨. ವಿಜಯನಗರ ಕಾಲದ ಯಲಹಂಕನಾಡು

ಕೆ.ಎಲ್. ರಾಜಶೇಖರ್

ಬೆಂಗಳೂರು ಸ್ಥಾಪನೆಗೆ ಮುಖ್ಯ ಕಾರಣಕರ್ತವಾಗಿರುವ ಯಲಹಂಕನಾಡು, ವಿಜಯನಗರ ಸಾಮ್ರಾಜ್ಯದ ಒಕ್ಕೂಟ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಹಿಸಿದ ಸಾಮಂತನಾಡು. ಪ್ರಸ್ತುತ ಬೆಂಗಳೂರು ಉತ್ತರ ತಾಲ್ಲೂಕಿನ ಮುಖ್ಯಸ್ಥಳವಾಗಿರುವ, ರಾಜಧಾನಿ ಬೆಂಗಳೂರಿಗೆ ೧೪ ಕಿ.ಮೀ. ಅಂತರದಲ್ಲಿರುವ ಈ ನಾಡು ಇಂದಿಗೂ 'ಯಲಹಂಕ'ವೆಂಬ ಹೆಸರಿನ ಹೋಬಳಿಕೇಂದ್ರವಾಗಿದೆ. ಪ್ರಾಚೀನಕಾಲದಿಂದಲೂ ಚಾರಿತ್ರಿಕ ಪರಂಪರೆಯನ್ನು ಹೊಂದಿರುವ ಈ ನಾಡು ಸಮಕಾಲೀನವಾಗಿಯೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ.

ರಾಜಕೀಯವಾಗಿ ವಿವಿಧ ಕಾಲಘಟ್ಟಗಳಲ್ಲಿ ಬೇರೆ ಬೇರೆ ರಾಜಮನೆತನಗಳ ಆಡಳಿತಕ್ಕೆ ಒಳಪಡುತ್ತಾ ಬಂದ ಯಲಹಂಕನಾಡು, ಹನ್ನೊಂದನೇ ಶತಮಾನದ ವೇಳೆಗೆ ಅಸ್ತಿತ್ವ ಪಡೆದ ನಾಡಾಗಿತ್ತೆಂದು ಚೋಳರ ತಮಿಳು ಶಾಸನಗಳಿಂದ ತಿಳಿದು ಬರುತ್ತದೆ. ಅಂದರೆ, ಚೋಳರ ರಾಜರಾಜ ಕೇಸರಿವರ್ಮನಾದ ರಾಜರಾಜದೇವನ ಆಡಳಿತಕ್ಕೆ ಈ ನಾಡು ಒಳಪಟ್ಟಿದ್ದಿತು. ನಂತರ ೧೨ನೇ ಶತಮಾನದಲ್ಲಿ ಹೊಯ್ಸಳರ ತೆಕ್ಕೆಗೆ ಸೇರಿದ ಈ ನಾಡಿನ ಪ್ರದೇಶಗಳು ಕ್ರಿ.ಶ. ೧೨೦೦ ರಿಂದ ೧೩೪೨ರ ವರೆಗೆ ಅಂದರೆ, ಸುಮಾರು ೧೪೨ ವರ್ಷಗಳ ಕಾಲ ಅವರ ಅಧೀನದಲ್ಲಿದ್ದವು. ಮುಂದೆ, ಕ್ರಿ.ಶ. ೧೩೪೮ರ ವೇಳೆಗೆ ವಿಜಯನಗರ ಅರಸರ ಆಡಳಿತಕ್ಕೆ ಸೇರ್ಪಡೆಗೊಂಡವು.

ಅಂದಾಜು ೬೫ಕ್ಕೂ ಹೆಚ್ಚಿನ ಶಾಸನಗಳಲ್ಲಿ ಯಲಹಂಕನಾಡಿನ ಉಲ್ಲೇಖಗಳಿದ್ದು, ೧೦ ರಿಂದ ೧೯ನೇ ಶತಮಾನದವರೆಗೆ ಇವು ಪ್ರಚಲಿತದಲ್ಲಿದ್ದವು. ಕನ್ನಡ ಶಾಸನಗಳಲ್ಲಿ ಎಲಹಕ, ಎಲವಕ, ಎಲಹಕ್ಕ, ಯಲಹಕ್ಕ, ಯೆಲಹಕ, ಯೆಲಹಕ್ಕ, ಎಲಹ್ಕ, ಎಲಹಂಕ, ಯಲಹಂಕ, ಯಲವಂಕ ಇತ್ಯಾದಿ ರೂಪಗಳು ಕಂಡುಬರುತ್ತವೆ. ತಮಿಳು ಶಾಸನಗಳಲ್ಲಿ 'ಇಲೈಪಾಕ್ಕ' (ಇಲೈಪಾಕ್ಕನಾಟ್ಟು) ಎಂದು ಕರೆದಿವೆ.

ಕ್ರಿಸ್ತಶಕ ೧೩೪೮ರ ದೇವನಹಳ್ಳಿ ತಾಲೂಕಿನ ಜಾಲದ ಹೋಬಳಿಗೆ ಸೇರಿದ ಕಟಿಗೇನಹಳ್ಳಿ ಶಾಸನದ ಪ್ರಕಾರ, ಯಲಹಂಕನಾಡು ವಿಜಯನಗರ ಅರಸರ ನೇರ ಆಡಳಿತಕ್ಕೆ ಒಳಪಟ್ಟಿದ್ದಿತು. ಅಂದರೆ, ಒಂದನೇ ಹರಿಹರ(೧೩೪೮)ನ ಕಾಲಕ್ಕೆ ಈ ನಾಡು ವಿಜಯನಗರದ ವ್ಯಾಪ್ತಿಗೆ ಬಂದಿತು. ಈತನ ಆಡಳಿತಾವಧಿಯಲ್ಲಿ ಯಲಹಂಕ ನಾಡಿಗೆ ಕಾಮಯ ದಂಣಾಯಕನು (ಕ್ರಿ.ಶ. ೧೩೪೧ರ ಶಾಸನ) ಮಹಾಪ್ರಧಾನನಾಗಿದ್ದ. ಅದೇ ರೀತಿ ಅಲ್ಲಾಳದೇವನೆಂಬವನು ಶಾನಬೋವನಾಗಿ ನೇಮಕಗೊಂಡಿದ್ದು, ಬಹು

ಪ್ರಖ್ಯಾತಿಹೊಂದಿದ ವ್ಯಕ್ತಿಯಾಗಿ ಈತ ಈ ನಾಡಿನೊಂದಿಗೆ ಗುರುತಿಸಿಕೊಂಡಿದ್ದಾನೆ. ಈತನ ಹೆಸರನ್ನು ಉಲ್ಲೇಖಿಸುವ ಅನೇಕ ಶಾಸನಗಳು ಈ ನಾಡಿನ ಉಲ್ಲೇಖದೊಂದಿಗೆ ಕಂಡುಬಂದಿದ್ದು, ಈತ ವಿಜಯನಗರ ಅರಸರಿಂದ ಅನೇಕ ದಾನಗಳನ್ನು ಪಡೆದಿರುವಂತೆಯೂ ಅನೇಕ ದಾನಗಳನ್ನು ಸ್ಥಳೀಯರಿಗೆ ನೀಡಿರುವಂತೆಯೂ ದಾಖಲಿಸಲಾಗಿದೆ. ಅದೇ ರೀತಿ ರಾಮರಸರ ಮಗ ದೇವರಸನೆಂಬವನನ್ನು ಈ ನಾಡಿನ ಸುಂಕದ ಅಧಿಕಾರಿಯಾಗಿ ನೇಮಿಸಿದ್ದ ವಿಚಾರವು ದೇವನಹಳ್ಳಿ ತಾಲೂಕಿನ ಶಾಸನ(ಕ್ರಿ.ಶ. ೧೩೮೨)ದಲ್ಲಿ ಪ್ರಸ್ತಾಪಗೊಂಡಿದೆ.

ಹೀಗೆ ಒಂದನೇ ಹರಿಹರನ ಕಾಲದಿಂದ ವಿಜಯನಗರದ ಎಲ್ಲ ಮನೆತನಗಳೂ ಈ ನಾಡಿನ ಮೇಲೆ ತಮ್ಮ ಹಿಡಿತ ಸಾಧಿಸಿದ್ದುದನ್ನು ಶಾಸನಗಳು, ಹಸ್ತಪ್ರತಿಗಳು, ವಿದೇಶಿಯರ ಪ್ರವಾಸಕಥನಗಳು ಹಾಗೂ ಇನ್ನಿತರ ಚಾರಿತ್ರಿಕ ಆಕರಗಳು ವ್ಯಕ್ತಪಡಿಸುತ್ತವೆ. ಈ ಯಲಹಂಕನಾಡು ಸುಮಾರು ೨೩೦ ವರ್ಷಗಳ ಕಾಲಾವಧಿಯ ವಿಜಯನಗರ ಆಳ್ವಿಕೆಯಲ್ಲಿ ಕೇಂದ್ರೀಯ ವ್ಯವಸ್ಥೆಯಡಿ ವಿಕೇಂದ್ರೀಕರಣಗೊಂಡ ಸ್ಥಳೀಯ ವ್ಯವಸ್ಥೆಯಾಗಿತ್ತು. ಹೀಗಾಗಿ ಸ್ಥಳೀಯ ಸರ್ಕಾರಗಳು ಪ್ರಧಾನ ರಾಜಕೀಯ ಬೆಳವಣಿಗೆಯಲ್ಲಿ ನಿರ್ವಹಿಸಿದ ಕಾರ್ಯವಿಧಾನಗಳನ್ನು ಅಧ್ಯಯನ ಮಾಡಲು ಇದು ನೆರವಾಗುತ್ತದೆ.

ವಿಜಯನಗರದ ಆಳ್ವಿಕೆಯಲ್ಲಿ ಯಲಹಂಕನಾಡಿನ ಆಧಿಪತ್ಯವನ್ನು ನಿರ್ವಹಿಸುತ್ತಿದ್ದವರು ಕೆಂಪೇಗೌಡ ವಂಶಸ್ಥರು. ಯಲಹಂಕನಾಡು ಪ್ರಸಿದ್ಧಿಗೆ ಬಂದುದು ಇವರ ಕಾಲದಲ್ಲೆ ಎನ್ನಬಹುದು. 'ಯಲಹಂಕನಾಡೆಂದರೆ ಯಲಹಂಕಪ್ರಭುಗಳು' ಎನ್ನುವಷ್ಟರ ಮಟ್ಟಿಗೆ ಪ್ರಖ್ಯಾತಿಯನ್ನು ಪಡೆಯಿತು. ವಿಜಯನಗರದ ಅರಸರೊಂದಿಗೆ ಈ ಪ್ರಭುಗಳು ಹೊಂದಿದ್ದ ರಾಜಕೀಯ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ಸಂಬಂಧಗಳು ಹಾಗೂ ಸಮನ್ವಯ ಗುಣಗಳೇ ಇದಕ್ಕೆ ಮುಖ್ಯ ಕಾರಣ. ಈ ದೃಷ್ಟಿಯಿಂದ ಕರ್ನಾಟಕದ ಇನ್ನಿತರ ನಾಯಕ, ಪಾಳೆಯಗಾರರಿಗಿಂತಲೂ ಭಿನ್ನವಾಗಿ ಈ ನಾಡಪ್ರಭುಗಳನ್ನು ಗುರುತಿಸಬೇಕಾಗುತ್ತದೆ. ಏಕೆಂದರೆ ವಿಜಯನಗರ ಸಾಮ್ರಾಜ್ಯವು ಹೇಗೆ ತನ್ನ ಆಳ್ವಿಕೆಯಲ್ಲಿ ಹಲವಾರು ಏರಿಳಿತಗಳನ್ನು ಕಂಡು ಅಂತ್ಯಗೊಂಡಿತೋ, ಅದೇ ಬಗೆಯಲ್ಲಿ ಯಲಹಂಕನಾಡ ಪ್ರಭುಗಳ ಆಳ್ವಿಕೆಯೂ ಅಂತ್ಯಗೊಂಡಿತು.

ಆರಂಭಿಕ ಹಂತದಲ್ಲಿ ದ್ವಿತೀಯದರ್ಜೆ ನಾಯಕರಾಗಿದ್ದವರು ಈ ನಾಡಪ್ರಭುಗಳು. ರಣಭೈರೇಗೌಡನ ಕಾಲದಿಂದ ಕೆಂಪನಂಜೇಗೌಡನ (೧೩೬೭-೧೫೧೦) ಕಾಲದವರೆಗೆ ಕೇವಲ ದಂಡಾಧಿಕಾರಿಗಳಾಗಿದ್ದು, ವಿಜಯನಗರ ಸಾಮ್ರಾಜ್ಯದ ಸಂಘಟನೆಯಲ್ಲಿ ಅವರು ಚಕ್ರವರ್ತಿಯ ಸೇವೆಗೆ ಬದ್ಧರಾಗಿದ್ದರು. ಮುಂದೆ, ಒಂದನೇ ಕೆಂಪೇಗೌಡನ ಕಾಲಕ್ಕೆ ಯಲಹಂಕನಾಡಿಗೆ ಸಾಮಂತರಾಜ್ಯದ ಸ್ಥಾನ-ಮಾನ ಲಭ್ಯವಾಯಿತು. ಇದರಿಂದ ವಿಜಯನಗರ ಸಾಮ್ರಾಜ್ಯದಲ್ಲಿ ಯಲಹಂಕನಾಡಿಗೆ ಪ್ರಥಮದರ್ಜೆ ಸ್ಥಾನ ದೊರೆತಂತಾಯಿತು. ಕರ್ನಾಟಕದ ಚರಿತ್ರೆಯಲ್ಲಿ ಪ್ರತಿಷ್ಠಿತ ಸ್ಥಾನಮಾನಗಳನ್ನು

ಪಡೆದುಕೊಂಡಿರುವ ಕೆಳದಿ ಅರಸರು, ಚಿತ್ರದುರ್ಗ ನಾಯಕ ಅರಸುಮನೆತನಗಳ ಸಾಲಿಗೆ ಯಲಹಂಕನಾಡು ಸಹಾ ಸೇರಿಕೊಂಡಿತು.

ಹದಿನಾರನೇ ಶತಮಾನದಲ್ಲಿ ವಿಜಯನಗರದ ಕೃಷ್ಣದೇವರಾಯ ಹಾಗೂ ಅಚ್ಯುತರಾಯರ ಅವಧಿಯಲ್ಲಿ ಈ ಹಿಂದೆ ನಾಡಗೌಡರಾಗಿದ್ದ ಅನೇಕರಿಗೆ ಅಮರ ನಾಯಕತ್ವವನ್ನು ನೀಡಲಾಯಿತು. ಸಾಮ್ರಾಜ್ಯದ ಕೇಂದ್ರೀಯ ವ್ಯವಸ್ಥೆಯು ಕೈಗೊಳ್ಳುವ ರಾಜ್ಯವಿಸ್ತಾರ ಮತ್ತು ಪರಕೀಯರ ವಿರುದ್ಧದ ಯುದ್ಧ ಮುಂತಾದ ರಕ್ಷಣಾ ಸಂಬಂಧದ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲಾಯಿತು. ಅಂತೆಯೇ, ಯಲಹಂಕಪ್ರಭುಗಳಿಗೆ ಸಾಮಂತ ಸಂಸ್ಥಾನದ ಸ್ಥಾನವು ದೊರೆತಿದ್ದರಿಂದ ಸಹಜವಾಗಿಯೇ ಅವರು ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಹಿಸಲು ಅವಕಾಶವಾಯಿತು. ವಿಜಯನಗರ ಸಾಮ್ರಾಜ್ಯದ ಎಲ್ಲೆಗಳು ವಿಸ್ತಾರವಾಗಲು ಅಮರನಾಯಕರ ಪಾತ್ರ ಬಹು ಹಿರಿದು. ಇವರ ಅವಧಿಯಲ್ಲಿ ಸಾಮ್ರಾಜ್ಯವು ವೃದ್ಧಿಸಿದಂತೆಲ್ಲಾ ಅಧೀನ ಪಾಳೆಯಗಾರರ ಬಲ-ಸಾಮರ್ಥ್ಯಗಳೂ ಕ್ರೋಢೀಕೃತ ಗೊಂಡವು. ಏಕೆಂದರೆ ಬಹು ವಿಶಾಲ ವ್ಯಾಪ್ತಿಯ ಭೂಮಿಯನ್ನು ತಮ್ಮ ಹತೋಟಿ ಯಲ್ಲಿ ಇಟ್ಟುಕೊಳ್ಳುವ ಇರಾದೆ ಈ ಅಮರನಾಯಕರಲ್ಲಿತ್ತು. ಯಲಹಂಕ ವಂಶಸ್ಥರು ಸಹಾ ಸಂಪನ್ಮೂಲದ ಸಂಗ್ರಹದ ಜೊತೆಗೆ ಸೈನ್ಯವನ್ನೂ ರಕ್ಷಣಾಸಂಬಂಧಿ ಕೋಟೆಗಳನ್ನೂ ನಿರ್ಮಿಸುವತ್ತ ಹೆಚ್ಚಿನ ಆಸ್ಥೆ ವಹಿಸಿದರು. ಯುದ್ಧ ಸಂದರ್ಭದಲ್ಲಿ ಇತರರ ಭೂಭಾಗಗಳು ತಮ್ಮ ವಶಕ್ಕೆ ಬಂದಂತೆಲ್ಲಾ, ಸಂಪನ್ಮೂಲದ ಗಳಿಕೆ ಮತ್ತು ಸೈನ್ಯಬಲದ ಸಂಘಟನೆಗಳೂ ಜೊತೆಯಾಗಿಯೇ ಜರುಗಿದವು. ಯಲಹಂಕನಾಡಿನ ಇತಿಹಾಸದಲ್ಲಿ ಕಾಣಬರುವ ಭೂವಿಸ್ತರಣದ ಅವಧಿಯೆಂದರೆ ಕ್ರಿ.ಶ. ೧೩೬೭ ರಿಂದ ೧೭೨೮ರ ವರೆಗೆ. ಅಂದರೆ, ಮೈಸೂರು ಅರಸರ ಆಡಳಿತದಲ್ಲಿ ವಿಲೀನವಾಗುವವರೆಗೆ ಇಲ್ಲಿನ ನಾಡಗೌಡರು ಪ್ರಭಾವಶಾಲಿಗಳಾಗಿ ಬೆಳೆದರು.

ಒಂದನೇ ಕೆಂಪೇಗೌಡನ ಕಾಲದಲ್ಲಿ ಯಲಹಂಕನಾಡು ತನ್ನ ಸುತ್ತಮುತ್ತಲಿನ ಬೆಂಗಳೂರು, ನೆಲಮಂಗಲ, ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ ತಾಲೂಕುಗಳ ಭೂಭಾಗಗಳನ್ನು ತನ್ನ ಆಡಳಿತ ವ್ಯಾಪ್ತಿಗೆ ಸೇರಿಸಿಕೊಂಡಿತ್ತು. ಈ ಅವಧಿಯಲ್ಲಿ ಯಲಹಂಕನಾಡಿಗೂ ವಿಜಯನಗರಕ್ಕೂ ಇದ್ದ ಸಾಮಂತ ಸಂಬಂಧಗಳು ಸ್ವಾರಸ್ಯಕರವಾದವು. ಈ ರಾಜಕೀಯ ಸಂಬಂಧವನ್ನು ಕುರಿತಂತೆ ಬಿ.ಎಲ್.ರೈಸ್ ಅವರ ಅಭಿಪ್ರಾಯಗಳನ್ನು ಕರ್ನಾಟಕ ಚರಿತ್ರೆ ಸಂಪುಟ ೩ರಲ್ಲಿ ಹೀಗೆ ದಾಖಲಿಸಲಾಗಿದೆ:

ಒಮ್ಮೆ ಕೆಂಪೇಗೌಡನು ಯಲಹಂಕದಿಂದ ದಕ್ಷಿಣಕ್ಕೆ ೧೦ ಮೈಲಿ ದೂರದ ಒಂದು ಹಳ್ಳಿಗೆ ಬಂದನು. ಆ ಸ್ಥಳವು ಒಂದು ಕೋಟೆಯನ್ನು ಕಟ್ಟಲು ಬಹು ಅನುಕೂಲಕರವಾಗಿ ಕಂಡಿತು. ಅವನು ಅಚ್ಯುತರಾಯನ ಅನುಮತಿಯನ್ನು ಪಡೆದು ೧೫೩೭ರಲ್ಲಿ ಆ ಸ್ಥಳದಲ್ಲಿ ಒಂದು ಮಣ್ಣಿನಕೋಟೆಯನ್ನು ನಿರ್ಮಿಸಿದನು. ತನ್ನ ರಾಜಧಾನಿಯನ್ನು ನೂತನವಾಗಿ ನಿರ್ಮಿಸಿದ ಈ ಕೋಟೆ ಬೆಂಗಳೂರಿಗೆ ವರ್ಗಾ

ಯಿಸಿದನು. ಈತನಲ್ಲಿದ್ದ ಉತ್ಸಾಹ, ದಕ್ಷತೆ ಮತ್ತು ಕ್ರಿಯಾಶೀಲತೆಗಳನ್ನು ಮೆಚ್ಚಿಕೊಂಡ ಅಚ್ಯುತರಾಯ, ಅವನಿಗೆ ಹಳೆಯ ಬೆಂಗಳೂರು, ವೊರ್ತೂರು, ಯಲಹಂಕ, ಬೇವೂರು, ಹಲಸೂರು, ತಂಚೇರಿ, ತಲೆಗಟ್ಟಿಪುರ, ದಿಗರಿ, ಕುಂಬಳ ಗೋಡು, ಕನಹಳ್ಳಿ, ಬಾಣಾವರ ಮತ್ತು ಹೆಸರುಘಟ್ಟ ಸ್ಥಳಗಳನ್ನು ಕೊಟ್ಟನು. ಈ ಹನ್ನೆರಡು ಹೋಬಳಿಗಳಿಂದ ಬರುತ್ತಿದ್ದ ಒಟ್ಟು ವರಮಾನ ೩೦,೦೦೦ ಪಗೋಡಗಳಿಗಿಂತಲೂ ಹೆಚ್ಚು. ಹೀಗೆ ದೊರಕಿದ ಐಶ್ವರ್ಯದಲ್ಲಿ ದೇವಾಲಯಗಳ ನಿರ್ಮಾಣಕ್ಕೆಂದು ಭಾಗಶಃ ವಿನಿಯೋಗಿಸಲಾಯಿತು. ಈ ದೇವಾಲಯಗಳೆಂದರೆ, ಬೆಂಗಳೂರು ಕೋಟೆಯಲ್ಲಿರುವ ವೆಂಕಟರಮಣಸ್ವಾಮಿ ದೇವಸ್ಥಾನ, ಗವೀಪುರದಲ್ಲಿರುವ ಗವಿಗಂಗಾಧರೇಶ್ವರ ದೇವಸ್ಥಾನ, ಅದರ ಆಸುಪಾಸಿನಲ್ಲೇ ಇರುವ ಬಸವೇಶ್ವರ ಮತ್ತಿತರ ದೇವಾಲಯಗಳು. ಈ ದೇವಾಲಯಗಳ ಸಮೀಪದಲ್ಲೇ ಒಂದು ದೊಡ್ಡ ಕೆರೆಯನ್ನು ನಿರ್ಮಿಸಿ, ಅದನ್ನು ಅವನ ಕುಲದೇವತೆಯ ಹೆಸರಿನಲ್ಲಿ ಕೆಂಪಾಂಬುಧಿಕೆರೆ ಎಂದು ಕರೆಯಲಾಯಿತು.

ಈ ಸಾಮಂತ ಗೌರವಗಳಿಂದ ತೃಪ್ತನಾಗದ ಕೆಂಪೇಗೌಡನು, ರಾಜಪದವಿಯ ಸಕಲ ಮರ್ಯಾದೆಗಳನ್ನು ರೂಢಿಸಿಕೊಂಡನು. ಒಂದು ಟಂಕಸಾಲೆಯನ್ನು ಸ್ಥಾಪಿಸಿ, ಭೈರೇಶ್ವರ ನಾಣ್ಯಗಳನ್ನು ಹಾಕಿಸಿದನು. ಇದೇ ವೇಳೆಗೆ ಅಚ್ಯುತರಾಯನು ಮೃತನಾಗಿ, ಅಳಿಯ ರಾಮರಾಯನ ನಾಯಕತ್ವದಲ್ಲಿ ಸದಾಶಿವರಾಯನು ವಿಜಯನಗರ ಸಿಂಹಾಸನವನ್ನೇರಿದ್ದನು. ಕೆಂಪೇಗೌಡನು ಕೈಗೊಂಡ ಕಾರ್ಯಗಳ ವರದಿ ಆಸ್ಥಾನವನ್ನು ತಲುಪಿತು. ಕೆಂಪೇಗೌಡನನ್ನು ವಿಜಯನಗರಕ್ಕೆ ಕರೆಸಿಕೊಂಡು ತನ್ನ ಕೃತ್ಯಗಳಿಗೆ ವಿವರಣೆ ನೀಡಬೇಕೆಂದು ಕೇಳಲಾಯಿತು. ಅಲ್ಲದೆ, ಅವನನ್ನು ಸೆರೆಮನೆಗೆ ಹಾಕಿ, ಅವನ ರಾಜ್ಯವನ್ನು ಪ್ರತ್ಯೇಕಿಸಿ ಜಗದೇವರಾಯನ ರಾಜ್ಯಕ್ಕೆ ಸೇರಿಸಲಾಯಿತು. ಆನೆಗೊಂದಿಯಲ್ಲಿ ಐದುವರ್ಷ ಬಂಧನದಲ್ಲಿದ್ದು, ಭಾರೀ ಜುಲ್ಮಾನೆಯನ್ನು ತೆತ್ತ ನಂತರ ಕೆಂಪೇಗೌಡನು ಬಿಡುಗಡೆ ಹೊಂದಿದನು. ಅವನ ಸೊತ್ತುಗಳನ್ನೆಲ್ಲ ಅವನಿಗೆ ಮರಳಿಸಲಾಯಿತು. ಅವನ ಆಳ್ವಿಕೆಯು ೧೫೬೯ರ ವರೆಗೆ ಮುಂದುವರೆಯಿತು. ಬಂಧನಕ್ಕೆ ಮೊದಲು ೪೩ ವರ್ಷ, ಬಿಡುಗಡೆಯ ನಂತರ ಐದು ವರ್ಷ ಮುಂದುವರೆಯಿತು.

ಈ ಮೇಲಿನ ಸಂಗತಿಯ ನೆಲೆಯಲ್ಲಿ ಸಾಮಂತಕೇಂದ್ರವಾಗಿ ಬೆಳೆದ ಯಲಹಂಕನಾಡಿನ ಪ್ರಭುಗಳ ಬಗೆಗೆ ಈ ಕೆಳಗಿನಂತೆ ಕೆಲವಂಶಗಳನ್ನು ಪ್ರಸ್ತಾಪಿಸಬಹುದು :

೧. ರೈತವರ್ಗದಿಂದ ಬಂದ ಕೆಂಪೇಗೌಡನ ವಂಶಸ್ಥರು ಆರಂಭದಲ್ಲಿ ನಾಡಗೌಡರಾಗಿದ್ದು, ನಂತರ ಯಲಹಂಕನಾಡಿನ ಸಾಮಂತರ ಸ್ಥಾನಮಾನವನ್ನು ಸಂಪಾದಿಸಿದರು.

೨. ಕೆಂಪೇಗೌಡನು ಕೃಷ್ಣದೇವರಾಯ ಮತ್ತು ಅಚ್ಯುತರಾಯರಿಗೆ ವಿಜಯನಗರ ಸಾಮ್ರಾಜ್ಯ ನಿರ್ಮಾಣದಲ್ಲಿ ನೆರವಾದನು. ಈ ಕಾರಣಕ್ಕಾಗಿ ಅಚ್ಯುತರಾಯನು

೩೦,೦೦೦ ಪಗೋಡ ವರಮಾನವುಳ್ಳ ಹನ್ನೆರಡು ಹೋಬಳಿಗಳ ವ್ಯಾಪ್ತಿಯ ಸಾಮಂತ ಸಂಸ್ಥಾನವನ್ನು ಯಲಹಂಕನಾಡಿಗೆ ಕೊಡುಗೆಯಾಗಿ ನೀಡಿದನು.

೩. ಕೃಷಿಸಂಪನ್ಮೂಲಗಳಿಗಷ್ಟೇ ಸೀಮಿತವಾಗಿದ್ದ ಈ ನಾಡು ತನ್ನ ಆರ್ಥಿಕ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲು ತನ್ನ ಆಳ್ವಿಕೆಯ ಪ್ರದೇಶದಲ್ಲಿ ಹಲವಾರು ಪ್ರಗತಿಪರ ಕಾರ್ಯಕ್ರಮಗಳನ್ನು ಆರಂಭಿಸಿತು. ಮುಖ್ಯವಾಗಿ, ತನ್ನ ಆಳ್ವಿಕೆಯ ಪ್ರದೇಶದಲ್ಲಿ ನೂತನ ನಗರಗಳನ್ನು ನಿರ್ಮಿಸಿ ಅವುಗಳಲ್ಲಿ ವಿದೇಶಿ ವರ್ತಕರು ಮತ್ತು ಕುಶಲಕರ್ಮಿಗಳು ನೆಲಸಲು ಏರ್ಪಾಟು ಮಾಡಲಾಯಿತು. ಹೀಗೆ ವರ್ತಕರ ಮತ್ತು ಕುಶಲಕರ್ಮಿಗಳ ಆಶ್ರಯತಾಣವಾಗಿ ಯಲಹಂಕನಾಡು ಬೆಳೆಯಿತು.

೪. ವಿಜಯನಗರದರಸರ ಅನುಮತಿ ಪಡೆಯದೆ ಭೈರೇಶ್ವರನಾಣ್ಯಗಳನ್ನು ಟಂಕಿಸಿದ ಪರಿಣಾಮವಾಗಿ ನಾಡಪ್ರಭುವನ್ನು ಸೆರೆಮನೆಗೆ ದೂಡಲಾಯಿತು. ಈ ಪ್ರಕರಣವು ಸಾಮಂತನೊಬ್ಬನು ಚಕ್ರವರ್ತಿಯ ಪರಮಾಧಿಕಾರವನ್ನು ಉಲ್ಲಂಘಿಸಿದ ನಿದರ್ಶನವಾಗಿದೆ. ವಿಜಯನಗರ ಸಾಮಂತರಲ್ಲಿ ಇಂಥದೇ ಕಾರ್ಯಗಳಿಗಾಗಿ ಶಿಕ್ಷೆ ಅನುಭವಿಸಿದವರ ಉದಾಹರಣೆಗಳ ಸಾಲಿಗೆ ಇದು ಸಹಾ ಸೇರುತ್ತದೆ. ಆದರೆ, ಯಲಹಂಕಪ್ರಭುಗಳು ಸ್ವತಂತ್ರ ಟಂಕಸಾಲೆಯನ್ನು ಹೊಂದಿದ್ದರ ಬಗೆಗೆ ಹಾಗೂ ಭೈರೇಶ್ವರನಾಣ್ಯಗಳನ್ನು ಚಲಾವಣೆಗೆ ತಂದ ಬಗೆಗೆ ಯಾವುದೇ ಪುರಾವೆಗಳಿಲ್ಲ; ಅಲ್ಲದೆ, ಇಂಥಾ ನಾಣ್ಯಗಳೂ ಈವರೆಗೆ ಲಭ್ಯವಿಲ್ಲ.

೫. ಯಲಹಂಕನಾಡಿನ ನೂತನ ಬೆಂಗಳೂರು ನಗರದ ನಿರ್ಮಾಣವು ಕ್ರಿ.ಶ. ೧೫೩೭ರಲ್ಲಿ ಆಯಿತು. ಈ ನಗರದ ನಿರ್ಮಾಣಕ್ಕೆ ಕೆಂಪೇಗೌಡನಷ್ಟೇ ಕಾರಣಕರ್ತನಾಗಿರದೆ, ವಿಜಯನಗರದ ಅರಸ ಅಚ್ಯುತರಾಯನೂ ಕಾರಣಕರ್ತನಾಗಿದ್ದಾನೆಂಬುದು ಸ್ಪಷ್ಟ.

ಒಟ್ಟಿನಲ್ಲಿ, ಯಲಹಂಕನಾಡು ವಿಜಯನಗರದೊಡನೆ ಅತ್ಯಂತ ವಿಧೇಯವಾಗಿ ನಡೆದುಕೊಳ್ಳುವುದರೊಂದಿಗೆ ರಾಜಮನ್ನಣೆಗೆ ಪಾತ್ರವಾಯಿತು. ವಿಜಯನಗರದವರು ಕೈಗೊಂಡ ಅನೇಕ ಯುದ್ಧಗಳಲ್ಲಿ ಈ ಪ್ರಭುಗಳು ತಮ್ಮ ಮೊರಸುಸೈನ್ಯದೊಂದಿಗೆ ಭಾಗವಹಿಸಿ ವಿಜಯಶಾಲಿಯಾಗಿದ್ದಾರೆ. ಪ್ರತಿಫಲವಾಗಿ, ಇಮ್ಮಡಿ ಕೆಂಪೇಗೌಡನಿಗೆ 'ಚಿಕ್ಕದೊರೆ'ಯೆಂತಲೂ, ಮುಮ್ಮಡಿ ಕೆಂಪೇಗೌಡನಿಗೆ 'ಸ್ವಾಮಿದ್ರೋಹರಗಂಡ'(ಚಂದ್ರಗಿರಿಯಿಂದ ಆಳುತ್ತಿದ್ದ ವಿಜಯನಗರದರಸ ೩ನೇ ವೆಂಕಟನ ವಿರುದ್ಧ ಬಂಡೆದ್ದ ಮಾಂಡಲಿಕರನ್ನು ಸದೆಬಡಿದನೆಂದು) ಎಂಬ ಬಿರುದುಗಳು ವಿಜಯನಗರದಿಂದ ಮಾನಿತವಾಗಿವೆ. ಹೀಗೆ, ವಿಜಯನಗರದ ರಾಜ್ಯವಿಸ್ತರಣೆಯ ಕಾರ್ಯದಲ್ಲಿ ಸಹಕರಿಸುವುದರೊಂದಿಗೆ ಯಲಹಂಕನಾಡು ರಾಜಕೀಯವಾಗಿ ರೂಪು ಪಡೆಯಿತು ಹಾಗೂ ಆಡಳಿತಾತ್ಮಕವಾಗಿ ದಕ್ಷಿಣ ಕರ್ನಾಟಕದಲ್ಲಿ ತನ್ನ ವರ್ಚಸ್ಸನ್ನು ಹೆಚ್ಚಿಸಿ ಕೊಂಡಿತು.

ಆಕರಗಳು

೧. ಬಿ.ಎಲ್. ರೈಸ್ (ಸಂ.), ಎಪಿಗ್ರಾಫಿಯ ಕರ್ನಾಟಿಕ, ಸಂಪುಟ ೯, ಬೆಂಗಳೂರು, ೧೯೦೬

೨. ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ ೯ರ ಸಪ್ಲಿಮೆಂಟ್, ಮೈಸೂರು

೩. ಕರ್ಲಮಂಗಲಂ ಶ್ರೀಕಂಠಯ್ಯ (ಸಂ.), ಗೌಡಕುಲ ವಿಭೂಷಣ ಕೆಂಪೇಗೌಡನ ಜಯಪ್ರಶಸ್ತಿ, ಮಾಗಡಿ, ೧೯೬೧

೪. ಬ.ನ. ಸುಂದರರಾವ್, ಬೆಂಗಳೂರಿನ ಇತಿಹಾಸ, ಬೆಂಗಳೂರು, ೧೯೮೫

೫. ಸೂರ್ಯನಾಥ ಯು.ಕಾಮತ್ (ಸಂ.), ಕರ್ನಾಟಕ ಗ್ಯಾಸೆಟಿಯರ್ - ಬೆಂಗಳೂರು ಜಿಲ್ಲೆ, ಕರ್ನಾಟಕ ಸರ್ಕಾರ, ಬೆಂಗಳೂರು, ೧೯೯೦

೬. ರಾಮೇಗೌಡ (ಪ್ರ.ಸಂ.), ಯಲಹಂಕ ಪ್ರಭುಗಳು : ಒಂದು ಅಧ್ಯಯನ, ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮಂಡ್ಯ, ೧೯೯೪

೭. ಎಂ.ಎಚ್. ಕೃಷ್ಣಯ್ಯ, ದೇವರಕೊಂಡಾರೆಡ್ಡಿ (ಸಂ.), ಬೆಂಗಳೂರು ಕೆಂಪೇಗೌಡ ವಂಶಸ್ಥರು, ಜನತಾ ಶಿಕ್ಷಣ ಸಂಸ್ಥೆ, ಬೆಂಗಳೂರು, ೧೯೯೬

೮. ಕೆ.ಎಸ್. ಶಿವಣ್ಣ (ಸಂ.), ಕರ್ನಾಟಕ ಚರಿತ್ರೆ, ಸಂಪುಟ ೩, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮

೯. ಎಂ.ಎಂ. ಕಲಬುರ್ಗಿ (ಸಂ.), ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೩೩. ಪ್ರೌಢದೇವರಾಯನ ಕಾಲದ ವಿರಕ್ತರಲ್ಲಿನ ಅವಧೂತರು

ಜಿ.ಕರಿಯಪ್ಪ ಮಾಳಿಗೆ

ವಿಜಯನಗರದ ಅರಸರು, ರಾಜಕೀಯ ಅಭ್ಯುದಯದೊಡನೆ ಸಾಹಿತ್ಯ, ಸಂಸ್ಕೃತಿ, ಕಲೆಗಳ ಪೋಷಕರೂ, ಸಂವರ್ಧಕರೂ ಆಗಿದ್ದರೆಂಬುದು ಸತ್ಯ. ಅದರಲ್ಲೂ ಮುಖ್ಯವಾಗಿ ಮಧ್ಯಕಾಲೀನ ಕನ್ನಡ ಸಾಹಿತ್ಯದ ಬೆಳವಣಿಗೆಗೆ ಪ್ರೌಢದೇವರಾಯನ ಕೊಡುಗೆ ಅವಿಸ್ಮರಣೀಯ. ಆತನ ವಿಶಾಲಧಾರ್ಮಿಕ ದೃಷ್ಟಿ, ಹಿಂದೂ ಮುಸ್ಲಿಂ ಸಾಮರಸ್ಯ, ಆಡಳಿತ ಸುಧಾರಣೆ, ಗಾಂಭೀರ್ಯ, ಔದಾರ್ಯ ಮುಂತಾದ ವ್ಯಕ್ತಿತ್ವಕ್ಕೆ ಹೆಸರಾದ ದೊರೆ.

ಪ್ರೌಢದೇವರಾಯನ ವಿಶಾಲ ಧಾರ್ಮಿಕ ದೃಷ್ಟಿಯಿಂದ ಜೈನ, ವೈಷ್ಣವ ಸಾಹಿತ್ಯದ ಬೆಳವಣಿಗೆಯಾಯಿತಾದರೂ ವೀರಶೈವ ಧರ್ಮಕ್ಕೆ ಹೆಚ್ಚಿನ ಪ್ರಾತಿನಿಧ್ಯ ದೊರೆತಿದೆ. ಇದಕ್ಕೆ ಆತ ವೀರಶೈವ ಮತಾವಲಂಬಿಯಾಗಿರುವುದೂ ಕಾರಣವಿರಬಹುದು. ಈತನ ಕಾಲದಲ್ಲಿ ಕಂಡು ಬಂದ ನೂರೊಂದು ವಿರಕ್ತರು ವೀರಶೈವ ಧರ್ಮವನ್ನು ಪುನರುಜ್ಜೀವನ ಗೊಳಿಸಿದರೆಂಬುದು ಸರ್ವವಿದಿತವಾಗಿದೆ. ಮಹಾಮಂತ್ರಿ ಲಕ್ಕಣ ದಂಡೇಶನು ಉಲ್ಲೇಖಿಸಿದ ಆರುನೂರಕ್ಕೂ ಹೆಚ್ಚಿನನೂತನ ಗಣಂಗಳ ಕಾಲ ಮುಗಿಯುತ್ತಿದ್ದಂತೆ, ನೂರೊಂದು ವಿರಕ್ತರು ಉದಯರಾಗಿ ವೀರಶೈವ ಧರ್ಮವನ್ನು ಉದಯಿಸಿದರೆಂಬ ಸಂಗತಿ ಅನೇಕ ಪುರಾಣಗಳಲ್ಲಿ ಉಲ್ಲೇಖಿತವಾಗಿದೆ. ಹಾಗೆಯೇ ಈ ನೂರೊಂದು ವಿರಕ್ತರ ಚರಿತ್ರೆ, ವೀರಶೈವ ಗಣವರರ ಚರಿತ್ರೆಯಲ್ಲಿಯೂ ಸೇರಿದೆ. ಈ ನೂರೊಂದು ವಿರಕ್ತರು ಇದ್ದರೇ, ಅಥವಾ ಇದು ಸಾಂಕೇತಿಕ ಅರ್ಥಕೊಡುವ ಸಂಖ್ಯೆಯೇ ಎಂಬುದು ಚರ್ಚಿತವಾಗಿದ್ದರೂ, ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ ಕೃತಿಯ ಅನಂತರ ಬಂದ ಅನೇಕ ಕೃತಿಗಳು ವಿಜಯನಗರದಲ್ಲಿ ಈ ನೂರೊಂದು ವಿರಕ್ತರಿದ್ದರೆಂಬುದನ್ನು ತಿಳಿಸುತ್ತವೆ.

ಹರರೂಪವಾದ ನೂರೊಂದು ಸುವಿರಕ್ತರೆ
ಕಲಸ್ಥಲದ ನಾಗಿದೇವನು ಕಲ್ಲುಮಠದ ಪ್ರಭು
ವರನು ವೀರಣ್ಣೊಡೆಯರುಂ ಚಾಮರಸಾಧಿ ಶಿವಭಕ್ತತತಿಯ ನೆರೆದು*೧

ಇದರಿಂದ ಪ್ರೌಢದೇವರಾಯನ ಕಾಲದಲ್ಲಿ ನೂರೊಂದು ವಿರಕ್ತರಿದ್ದ ರೆಂಬುದು

ಸ್ಪಷ್ಟವಾಗಿದೆ. ಮೂಲತಃ ಈ ವಿರಕ್ತರು ಎಲ್ಲೆಲ್ಲಿಂದ ಬಂದರೆಂಬುದಕ್ಕೆ ಹೆಚ್ಚು ಮಾಹಿತಿ ಇರುವುದಿಲ್ಲ. ಇವರು ನಗರದ ಹೊರಭಾಗಗಳಿಂದಲೂ ಬಂದು ನೆಲೆಸಿದವರಾಗಿದ್ದಾರೆ. ಆದರೆ ಇವರೆಲ್ಲಾ ಪ್ರೌಢದೇವರಾಯನ ಆಶ್ರಯದಲ್ಲಿದ್ದು, ವೀರಶೈವ ಧರ್ಮ ಸಂಘಟನೆ, ತತ್ವ ಪ್ರಚಾರಗಳ ಕಾರ್ಯದಲ್ಲಿದ್ದರೆಂದು ಹಲವು ಕಾವ್ಯಗಳಲ್ಲಿ ಉಲ್ಲೇಖಿತವಾಗಿದೆ. ವಿರೂಪಾಕ್ಷ ಪಂಡಿತನು "ಇಳೆಯೊಳಗೆ ನೂರೊಂದು ವರಗಣೇಶ್ವರರುದಿಸಿ, ಜಂಗಮಸ್ಥಲವಾಂತು ಪರಮ ಷಟ್‌ಸ್ಥಲವನುದ್ಧರಿಸಿ" ಎಂದು ಸ್ಪಷ್ಟ ದಾಖಲೆ ಒದಗಿಸಿದ್ದಾನೆ.

ಗಮನಿಸಬಹುದಾದ ಮುಖ್ಯ ವಿಷಯವೆಂದರೆ ಈ ನೂರೊಂದು ವಿರಕ್ತರ ಕೆಲವರು ಸಾತ್ವಿಕವಾಗಿ ಬಾಳಿ, ಅಲೌಕಿಕ ಸಿದ್ಧಿಯನ್ನು ಪಡೆದುಕೊಂಡವರು. ಜಗಕೆ ತಾ ಮರುಳು, ತನಗೆ ಜಗ ಮರುಳು ಎಂಬಂತೆ ಲೀಲಾಮೂರ್ತಿಗಳಾಗಿ, ಪ್ರಾಪಂಚಿಕರ ಕಣ್ಣಿಗೆ ಹುಚ್ಚರಂತೆ ಕಂಡುಬಂದರೂ ಇವರುಗಳ ಜೀವನದಲ್ಲಿ ನಡೆದ ಒಂದೊಂದು ಘಟನೆಗಳು, ಆಚರಣೆಗಳು ಲೌಕಿಕರ ನೋಟಕ್ಕೆ ವಿಚಿತ್ರವಾಗಿ ಕಂಡುಬಂದರೂ ಅಂತರಂಗದಲ್ಲಿ ಪರಶಿವನನ್ನು ಕಂಡುಕೊಂಡವರಾಗಿದ್ದಾರೆ. ಕರಸ್ಥಲದ ವೀರಣ್ಣೊಡೆಯ, ಕರಸ್ಥಲದ ನಾಗಿದೇವ, ಗುರುಬಸವ, ಹೊನ್ನಯ್ಯ, ಮಿಡಿಬಲ್ಲಶಾಂತದೇವ, ನಿರ್ವಾಣಿ ಬೋಳೇಶ, ಬಾಲಲಿಂಗಣ್ಣ ಮುಂತಾದವರು "ಅತಿ ಮರುಳರಂದ ದೊಳಿರ್ಪ ನೂರೊಂದು ವಿರಕ್ತರ್" ಎಂದು ಮೋದಿಯ ರುದ್ರ ತಿಳಿಸಿದ್ದಾನೆ.

ವಿರಕ್ತರಿಗಿಂತ ಭಿನ್ನವಾದ, ವಿವಿಧ ಲಕ್ಷಣಗಳುಳ್ಳ ಕೆಲವರು ಈ ಗುಂಪಿನಲ್ಲಿದ್ದರೆಂದು ಅವರ ದೈಹಿಕ ಮತ್ತು ಮಾನಸಿಕ ಸ್ಥಿತಿಯನ್ನರಿತು ಪ್ರತ್ಯೇಕಗುಂಪನ್ನು ಗುರ್ತಿಸಲಾಗಿದೆ. ಈ ಪ್ರತ್ಯೇಕತೆಯನ್ನು ಗುರ್ತಿಸಿ ಅವರು ಶುದ್ಧ ವಿರಕ್ತರಲ್ಲವೆಂದೂ ಹೇಳಲಾಗುತ್ತಿದೆ.

"ನೂರೊಂದು ವಿರಕ್ತರಲ್ಲಿ ಕೆಲವರು ವಿರಕ್ತರಲ್ಲವೆಂದು ಬಹು ಮಟ್ಟಿಗೆ ದೃಢಪಟ್ಟಿದೆ. ಉದಾ.ಚಾಮರಸ, ಕಲ್ಲುಮಠದ ಪ್ರಭುದೇವ, ಮಹಾಲಿಂಗದೇವ, ಜಕ್ಕಣಾರ್ಯ, ಮಗ್ಗೆಯ ಮಾಯಿದೇವ ಮುಂತಾದವರನ್ನು ಹೊರತುಪಡಿಸಿದರೆ ಉಳಿಯುವ ಕೆಲವು ವಿರಕ್ತರ ಧಾರ್ಮಿಕ ಕೊಡುಗೆ ತೀರಾ ಸಾಮಾನ್ಯ. ಬರೆದ ಕೃತಿಗಳೂ ಲಘು ಕೃತಿಗಳು. ವಿದ್ವಾಂಸರು ಹೇಳುವಂತೆ ಇವರು ವಚನಗಳ ಸಂಗ್ರಹ, ಸಂಕಲನ, ಸಂಪಾದನಾ ಕಾರ್ಯ ಮಾಡಿದುದಾಗಲಿ, ಪ್ರೇರಣೆ ನೀಡಿದುದಾಗಲಿ ಈ ವರೆಗೆ ಗೊತ್ತಾಗಿಲ್ಲ. ಬಹುಶಃ ಮಾಡಿದಂತೆಯೂ ಇಲ್ಲ. ಆದುದರಿಂದ ನೂರೊಂದು ವಿರಕ್ತರನ್ನು ವೀರಶೈವಧರ್ಮ, ಸಾಹಿತ್ಯಗಳು ಪುನರುಜ್ಜೀವನದ ಹರಿಕಾರರೆಂದು ಕರೆಯುವುದು ತಪ್ಪಾಗುತ್ತದೆ."[೨] ಎಂದು ಡಾ.ಎಂ.ಎಂ.ಕಲಬುರ್ಗಿಯವರು ತಮ್ಮ ಸಂಶೋಧನಾ ಲೇಖನದಲ್ಲಿ ಹೇಳಿದ್ದಾರೆ.

ಚರ್ಚೆಯನ್ನು ಮುಂದುವರೆಸುತ್ತಾ "ಈ ನೂರೊಂದು ವಿರಕ್ತರಲ್ಲಿ ಕೆಲವರು ಸಂಸಾರ ವಂದಿಗರಾಗಿದ್ದಾರೆ. ಕೆಲವರು ವಾಮಾಚಾರಿಗಳಂತೆ ಅರೆಮರುಳ ಸ್ಥಿತಿ ಯವರಾಗಿಯೂ

ಇದ್ದಾರೆ. ಇಂಥವರನ್ನು ಶುದ್ಧ ಆಚಾರದ ಪರಿಶುದ್ಧ ವಿಚಾರದ ವೀರಶೈವ ವಿರಕ್ತರೆಂದು ಒಪ್ಪುವುದಾದರೂ ಹೇಗೆ ? ಆದುದರಿಂದ ಒಂದು ಬಗೆಯ ವಾಮಾಚಾರದ ಶಿವೋಪಾಸಕರಂತಿರುವ ಇವರು ನಾಥಪಂಥೀಯರಂತೆ ಕಾಣುತ್ತಾರೆ. ಈ ಪಂಥದ ಸಂತರಿಗೆ "ಅವಧೂತ"ರೆಂದು ಹೆಸರು. ನೂರೊಂದು ವಿರಕ್ತರ ಅರೆಮರುಳ ಸ್ಥಿತಿಯೂ ಅವಧೂತರುಗಳನ್ನು ನೆನಪಿಸುತ್ತದೆ[೬] ಎಂದಿದ್ದಾರೆ.

'ಅವಧೂತ' ಎಂದರೆ ಯಾರು? ಆ ಪರಂಪರೆಯ ಪ್ರಭಾವ ವಿರಕ್ತರ ಮೇಲಾಗಲು ಅಥವಾ ಅ ಪ್ರಭಾವ ಬೀರಲು ಕಾರಣವೇನು ಎಂದು ತಿಳಿಯುವ ಮೊದಲು, ವಿರಕ್ತ ಎಂದರೆ ಯಾರು ಎಂದು ತಿಳಿಯಬೇಕು. ಆಚಾರ ಸಹಿತವಾಗಿ ಭಕ್ತಿ ಭಕ್ಷವ ತೆಗೆದು ಕೊಂಡು ಉಪಾಧಿರಹಿತವಾಗಿಪ್ಪನೆಂದೂ, ಒಡಲ ಹುಡಿಗುಟ್ಟಿ ಮೃಡನೊಳೆಡೆದೆರಹಿಲ್ಲ ದಿರಬಲ್ಲದೆ ವಿರಕ್ತಿಯೆಂದೂ ವಿರಕ್ತನಾದ ಬಳಿಕ ವಿಷಯಕ್ಕೆ ದೂರವಾಗಿರಬೇಕೆಂದೂ, ಅಷ್ಟಮದಂಗಳನೊತ್ತಿ ಮೆಟ್ಟಿ ನೆಟ್ಟಗೆ ನಿಂತು ಇಷ್ಟಲಿಂಗವನರಿಯಬಲ್ಲಡೆ ವಿರಕ್ತ ನೆಂದೂ ಶರಣರು ವ್ಯಾಖ್ಯಾನಿಸಿದ್ದಾರೆ.

ಶುದ್ಧ ಆಚಾರ ಮತ್ತು ವಿಚಾರಕ್ಕಿಂತ ಭಿನ್ನವಾದ ನಡೆ-ನುಡಿಯನ್ನು ಹೊಂದಿದ್ದು ಕೆಲವು ವಿರಕ್ತರ ಸ್ಥಿತಿ-ಗತಿಗೆ ಕಾರಣ ಅಥವಾ ಪ್ರಭಾವವೇನು ಎಂದು ಆಲೋಚಿಸಿದಾಗ ಕೆಲವು ಅಂಶಗಳು ಸಿಗಬಹುದು. ಮುಖ್ಯವಾಗಿ ೧೨ನೇ ಶತಮಾನದಲ್ಲಿದ್ದ ಶರಣ ರಲ್ಲಿಯೇ ಕೆಲವು ಇಷ್ಟಲಿಂಗ ಸಂಸ್ಕೃತಿಯನ್ನು ಇಷ್ಟಪಡದವರೂ ಇದ್ದರೆಂಬುದು ಸ್ಪಷ್ಟ. ಇಂತಹವರನ್ನು ಆತ್ಮವಾದಿಗಳೆಂದೂ, ಆತ್ಮಲಿಂಗವಾದಿಗಳೆಂದೂ ಕರೆಯಲಾಗಿದೆ. ಅಲ್ಲಮಪ್ರಭು, ಅಜಗಣ್ಣ, ಸಿದ್ದರಾಮ ಮೊದಲಾದವರು ಈ ಗುಂಪಿನಲ್ಲಿ ಪ್ರಮುಖ ರಾದವರು. ಇವರೆಲ್ಲಾ ದೈಹಿಕವಾಗಿ ಮಲಿನ ಮತ್ತು ವಿಲಕ್ಷಣ ಸ್ಥಿತಿಯಲ್ಲಿದ್ದವರು. ಅದರಲ್ಲೂ ಅಲ್ಲಮನ ಅಲೆದಾಟ ಮತ್ತು ಅವನು ಹಲವಾರು ಜನರನ್ನು ಭೇಟಿ ಮಾಡುವ ಸ್ಥಿತಿಯನ್ನು ಶಿವಗಣ ಪ್ರಸಾದಿ ಮಹಾದೇವಯ್ಯನವರ ಶೂನ್ಯ ಸಂಪಾದನೆ ಯಲ್ಲಿ ಅಲ್ಲಮನ ಚಿತ್ರಣ ಅವಧೂತನಂತೆಯೇ ವರ್ಣಿತವಾಗಿರುವುದು ಸ್ಪಷ್ಟ. ವಿಲಕ್ಷಣ ರೂಪದ ವೈರಾಗ್ಯ ಮನೋಧರ್ಮದ ಈ ಆತ್ಮವಾದಿಗಳ ಮಾರ್ಗವನ್ನು ನಂತರದ ಅನೇಕ ಯೋಗಿಗಳು, ಆರೂಢರು, ನಾಥರು, ಅವಧೂತರು ಸಿದ್ಧರು ತತ್ವ ಪದಕಾರರು ಮುಂದುವರೆಸಿದ್ದಾರೆಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ. ಈ ಹಿನ್ನೆಲೆಯನ್ನು ಗಮನಿಸಿದಾಗ ಮಧ್ಯಕಾಲೀನ ಚಾರಿತ್ರಿಕ ಸಂದರ್ಭದಲ್ಲಿ ನಾಥ, ಆರೂಢ, ಅವಧೂತ, ಪಂಥಗಳು ಇದ್ದವೆಂಬುದನ್ನು ಪುಷ್ಟೀಕರಿಸುತ್ತದೆ.

೧೫ ಮತ್ತು ೧೬ನೇ ಶತಮಾನದ ವೇಳೆಗೆ ವೀರಶೈವ ಧರ್ಮ ಸಾಂಸ್ಥಿಕ ಧರ್ಮವಾಗುತ್ತಿದ್ದಂತೆ ಇಷ್ಟಲಿಂಗ ಸಂಸ್ಕೃತಿಯನ್ನು ವಿರೋಧಿಸುತ್ತಿದ್ದ ಕೆಲವು ವಿರಕ್ತರು ಅನುಭಾವದ ಮಾರ್ಗವನ್ನು ಕಂಡು ಕೊಂಡಿದ್ದಾರೆ. ಇವರ ಮೇಲೆ ಅಲ್ಲಮಪ್ರಭು ಸಂಪ್ರದಾಯದ ಪ್ರಭಾವವಿರುವುದನ್ನು ಗಮನಿಸಿಕೊಳ್ಳಬಹುದಾಗಿದೆ. ಗುರು ಶಿಷ್ಯರ ಸಂಬಂಧಕ್ಕೆ ಹೆಚ್ಚಿನ ಮಹತ್ವ ನೀಡಿದ ಇವರು ಯಾವುದೇ ಜಾತಿ, ಮತ, ಪಂಥಗಳಿಗೆ

ಸೀಮಿತವಾಗದೆ, ಸಮಾಜದಿಂದ ದೂರಉಳಿದು ಅಂತರ್ಮುಖಿಗಳಾಗಿ ಬಾಳಿದ್ದಾರೆ. ಅವಧೂತ ಸಂಪ್ರದಾಯದಂತೆ ಏಕಾಂಗಿತನ ಮತ್ತು ಮೌನಕ್ಕೆ ಮಹತ್ವ ನೀಡಿದ ಇವರು ಯೋಗ ಮಾರ್ಗವನ್ನು ಅನುಸರಿಸಿದ್ದಾರೆ.

ಕೆಲವು ವಚನ ಚಳುವಳಿಯ ಆಶಯವನ್ನು ಮುಖ್ಯವಾಗಿಟ್ಟುಕೊಂಡರೆ, ಕೆಲವು ವಚನ, ತತ್ವಪದ, ಸ್ವರ ವಚನಗಳನ್ನು ರಚಿಸಿದ್ದಾರೆ. ಇನ್ನೂ ಕೆಲವರು ಏನನ್ನೂ ಬರೆಯದೆ ತಮ್ಮ ನಡೆ ಮತ್ತು ನುಡಿದ ಕೆಲ ನುಡಿಗಳಿಂಮದಲೇ ಸಾಮಾಜಿಕ ಬದಲಾವಣೆ ತಂದವರಾಗಿದ್ದಾರೆ.

ಈ ಹಿನ್ನಲೆಯಲ್ಲಿ ನೋಡಿದಾಗ ಅವಧೂತ ಪರಂಪರೆಯೊಂದು ೧೫ನೇ ಶತಮಾನ ದಲ್ಲಿತ್ತೆಂದು, ನೂರೊಂದು ವಿರಕ್ತರಲ್ಲಿ ಒಬ್ಬನಾಗಿರುವ ಗುರುಬಸವನ ಅವಧೂತ ಗೀತೆಯೂ ದೃಢಪಡಿಸುತ್ತದೆ.

"ಅವಧೂತ" ಎಂದರೆ ವರ್ಣಾಶ್ರಮ ಧರ್ಮಗಳನ್ನು ತ್ಯಜಿಸಿ ಪರಮಾತ್ಮ ಧ್ಯಾನಾಸಕ್ತ ನಾದ ಯೋಗಿ. ಸರ್ವಸಂಗ ಪರಿತ್ಯಾಗಿಯಾದ ಸನ್ಯಾಸಿ, ದಿಗಂಬರ. ಮುಮುಕ್ತಮಾರ್ಗ ದಲ್ಲಿ ನಡೆದು ಆತ್ಮಾನಂದದಲ್ಲಿ ವಿರಮಿಸುವ ಯೋಗಿ ಎಂದರ್ಥವಿದೆ. ತಾವು ಬೆಳೆದ ಮತಕ್ಕನುಸಾರವಾಗಿ, ನಿಯಮಬದ್ಧವಾಗಿ ಆಚಾರ ವಿಚಾರಗಳನ್ನು ಅಳವಡಿಸಿಕೊಂಡ ಅವಧೂತರಿಗಿಂತಲೂ ಭಿನ್ನವಾದ ಪಂಥವೊಂದಿದೆ. ಯಾವ ವಿಧವಾದ ಜಾತಿ ಲಾಂಛನವೂ ಇಲ್ಲದೆ, ಶೋಕ, ಮೋಹ ವರ್ಜಿತನಾಗಿ ಯಾವ ವಿಧಿ ನಿಷೇಧಗಳಿಗೂ ಬದ್ಧನಾಗದೆ, ಯಾವ ಉದ್ದೇಶವೂ ಇಲ್ಲದೆ ಸಂಕಲ್ಪರಹಿತನಾಗಿ ಪ್ರಾರಬ್ಧಗಳನ್ನು ಅನುಭವಿಸುತ್ತಾ ಸಂತುಷ್ಟಚಿತ್ತರಾಗಿ ದೇಶಾಟನೆ ಮಾಡುತ್ತಿರುತ್ತಾರೆ. ಇಂಥವರನ್ನೇ ಹಂಸಾವಧೂತರೆಂದು ಕರೆಯುತ್ತಾರೆ.

ಒಟ್ಟಾರೆ ಪ್ರೌಢದೇವರಾಯನ ಕಾಲದಲ್ಲಿದ್ದ ವಿರಕ್ತರಲ್ಲಿನ ಕೆಲವರು ಅವಧೂತ ಪರಂಪರೆಯನ್ನು ಬೆಳೆಸಿದ್ದಾರೆ. ಇವರುಗಳ ಈ ಸ್ಥಿತಿಗೆ ಆ ಕಾಲದ ಸಾಮಾಜಿಕ, ಧಾರ್ಮಿಕ, ಪರಿಸರವೇ ಕಾರಣವಾಗಿದೆ. ಹಾಗಾಗಿ ಸಹಜವಾಗಿಯೇ ಇವರು ಸಮಾಜ ದಿಂದ ದೂರಉಳಿದು, ಬೆಟ್ಟ, ಗವಿ, ಕೊಳ್ಳಗಳಲ್ಲಿ ವಾಸವಾಗಿದ್ದು, ಯೋಗ ಸಾಧನೆ ಮಾಡಿರುತ್ತಾರೆ. ಮಾನಸಪೂಜೆ ಮತ್ತು ಜ್ಞಾನ ಮಾರ್ಗಕ್ಕೆ ಹೆಚ್ಚಿನ ಮಹತ್ವ ನೀಡಿದ ಇವರು ಜಾತಿ, ಮತ, ಪಂಥಗಳನ್ನು ಮೀರಿದ ವ್ಯಕ್ತಿತ್ವ ಹೊಂದಿದ್ದು, ವ್ಯಕ್ತಿಗತ ಸಾಧನೆಗೆ ಮಹತ್ವ ನೀಡಿರುತ್ತಾರೆ.

ಅವಧೂತಸ್ಥಿತಿ ತಲುಪಿದವರೆಲ್ಲಾ ಸಾಮಾನ್ಯವಾಗಿ ಲೌಕಿಕ ಜೀವನದ ಬಗ್ಗೆ ಜಿಗುಪ್ಸೆ ಹೊಂದಿ ಜಗತ್ತಿನ ನೋವು, ಆಸೆ, ನಿರಾಸೆ, ದುಃಖ, ದುಮ್ಮಾನ, ಅಶಾಂತಿ, ಅತೃಪ್ತಿ, ಅಸಮಾಧಾನ ಅಸ್ಥಿರ ಮನಸ್ಸು, ನಿಷ್ಕ್ರಿಯಾಚರಣೆಗಳ ಬಗ್ಗೆ ಬೇಸತ್ತ ಸಾಮಾಜಿಕ ಬದುಕಿನ ಬಗ್ಗೆ ನಿರಾಸಕ್ತಿ ಹೊಂದಿರುತ್ತಾರೆ. ಪರಿಣಾಮವಾಗಿ ಮನೆ, ಮಠ, ಹೆಂಡತಿ, ಮಕ್ಕಳು, ಬಂಧು, ಬಳಗ ಇಂಥ ಲೌಕಿಕ ಬಂಧನಗಳನ್ನು ತ್ಯಜಿಸಿ ಹೊರ ಬಂದಿರುತ್ತಾರೆ. ಎಲ್ಲೆಂದರಲ್ಲೆ ವಾಸಿಸುತ್ತಾ ಒಂಟಿಯಾಗಿದ್ದುಕೊಂಡೇ, ಧ್ಯಾನ ಮಾಡುವರಂತೆ

ಮೌನವಾಗಿದ್ದುಕೊಂಡೇ ನಿರ್ಲಿಪ್ತರಾಗಿರುತ್ತಾರೆ. ಆತ್ಮ ತೃಪ್ತಿಗಾಗಿ ಆತ್ಮಜ್ಞಾನಕ್ಕಾಗಿ ಗುರುವನ್ನು ಶೋಧಿಸಿ ಅವರ ಶಿಷ್ಯರಾಗಿ ಗುರೂಪದೇಶ ಪಡೆದಿರುತ್ತಾರೆ. ಗುರು ಯಾವುದೇ ಜಾತಿಗೆ ಸೇರಿರಲಿ ಯೋಗ್ಯತೆಯೇ ಮುಖ್ಯ. ಬಾಹ್ಯವಾಗಿ ಮಲಿನರಂತೆ ಕಂಡು ಬಂದರೂ ಅಂತರಂಗದಲ್ಲಿ ಪರಶಿವನನ್ನು ಸಾಕ್ಷಾತ್ಕರಿಸಿ ಕೊಂಡಿರುವವರಾಗಿರುತ್ತಾರೆ.

ಸುಮಾರು ೧೪೩೦ ರಲ್ಲಿ ಬಾಳಿದ ಕವಿ ಗುರುಬಸವನು "ಅವಧೂತ ಗೀತ" ಎನ್ನುವ ಕೃತಿಯನ್ನು ಚೌಪದಿಯಲ್ಲಿ ರಚಿಸಿದ್ದಾನೆ. ನೂರೊಂದು ಪದ್ಯಗಳಲ್ಲಿ ರಚಿಸಿರುವ ಈ ಕೃತಿ ಚಿಕ್ಕದಾದರೂ ಆಧ್ಯಾತ್ಮದ ವಿಷಯವನ್ನೊಳಗೊಂಡಿದೆ. ವಿಷಯ ವಾಸನೆಯಲ್ಲಿ ಸಿಲುಕಿರುವ ಮನಸ್ಸು ಚಂಚಲವಾಗಿದ್ದು, ಮುಕ್ತಿಯ ಕಡೆವಾಲುವುದೇ ಇಲ್ಲ. ಚಲಿಸುವ ಮನಸ್ಸು ಅತ್ತಿತ್ತ ಹರಿಯದಂತೆ ಸ್ಥಿರಗೊಳಿಸುವುದೇ ಈ ಕೃತಿಯ ಉದ್ದೇಶ. ಸ್ವಾನುಭವ ಸಿದ್ಧನಾದ ಅವಧೂತನೆಂದೇ ಹೇಳಿಕೊಂಡಿರುವ ಗುರುಬಸವನು ವಿಶಿಷ್ಟ ಮನೋಧರ್ಮದವನಾಗಿದ್ದಾನೆ. ವೀರಶೈವ ತತ್ವವನ್ನು ಒಳಗೊಂಡಿರುವಂತೆ ಯೋಗ, ವೈರಾಗ್ಯ, ಆಧ್ಯಾತ್ಮ ವಿಷಯಗಳನ್ನು ಕೃತಿಯಲ್ಲಿ ಸಂಯೋಜಿಸಿದ್ದಾನೆ. ಅವಧೂತರು ಸಹಜವಾಗಿಯೇ ಅದ್ವೈತ ಮಾರ್ಗಾವಲಂಬಿಗಳಾಗಿರುತ್ತಾರೆ. ಬಾಹ್ಯಪೂಜೆಗಿಂತ ಮಾನಸ ಪೂಜೆಗೆ ಮಹತ್ವ ನೀಡುತ್ತಿದ್ದು, ಕ್ರಿಯೆಗಿಂತ ಜ್ಞಾನಕ್ಕೆ ಆದ್ಯತೆ ನೀಡಿರುತ್ತಾರೆ. "ನಾನಾ ವಿಧವವಧೂತ ಚಿಹ್ನೆ, ಅಧಿಕರೋಳಧಿಕನು ಅವಧೂತ" ಎಂದು ಅವಧೂತನ ಲಕ್ಷಣವನ್ನು ಹೇಳಿರುವುದನ್ನು ನೋಡಿದರೆ ವೀರಶೈವ ವಿರಕ್ತರಲ್ಲಿ ಅವಧೂತ ಪರಂಪರೆ ಬೆಳೆದು ಬಂದಿರುವುದು ಸ್ಪಷ್ಟವಾಗಿದೆ.

ಮುಂದೆ ೧೭ನೇ ಶತಮಾನದವರೆಗೆ ಅವಧೂತರಾಗಲಿ ಅವರ ಸಾಹಿತ್ಯವಾಗಲಿ ಕಂಡುಬಂದಿಲ್ಲ. ದೊರೆತಿರುವ ಅವಧೂತರುಗಳಲ್ಲಿ ಸಚ್ಚಿದಾನಂದರು ಮೊದಲಿಗರು. ನಂತರ ಅವರ ಶಿಷ್ಯ ಭಕ್ತಿ ರಸಾಯನವನ್ನು ಬರೆದ ಸಹಜಾನಂದರು ಮುಂದುವರೆದಂತೆ ಬ್ರಹ್ಮಾನಂದರು, ಚಿದಾನಂದವಧೂತರು ಪ್ರಮುಖರಾಗುತ್ತಾರೆ.

೧೭೦೦ ರಲ್ಲಿ ಕಂಡು ಬಂದ ಚಿದಾನಂದವಧೂತರು ಅವಧೂತ ಪರಂಪರೆಯಲ್ಲಿಯೇ ಪ್ರಮುಖರು. ಹಳೆ ಬಳ್ಳಾರಿ ಜಿಲ್ಲೆಯ ಆದವಾನಿ ತಾಲೂಕಿಗೆ ಸೇರಿದ ಹರಿವಾಣ ಗ್ರಾಮದಲ್ಲಿ ಜನಿಸಿದವರು. ಗಂಗಾವತಿ ಸಮೀಪದ ಅಯೋಧ್ಯೆ ಯಲ್ಲಿದ್ದ ಮಹಾಜ್ಞಾನಿ ಸದ್ಗುರು ಕೊಂಡಪ್ಪನಿಂದ ಜ್ಞಾನೋದಯವನ್ನು ಪಡೆದು ಹೋಗಿ ಪುಂಗವರಾಗಿ ಮೆರೆದು, ಹಲವಾರು ದೇಶಗಳಲ್ಲಿ ಸಂಚಾರ ಕೈಗೊಂಡು ಅನುಭಾವವನ್ನು ಗಳಿಸಿಕೊಂಡವರು. ತರುವಾಯ ಹಲವಾರು ಕೃತಿಗಳನ್ನು ರಚಿಸಿರುವುದಲ್ಲದೆ ಹಲವಾರು ಪವಾಡಗಳನ್ನು ಮೆರೆದು, ಹಲವಾರು ಶಿಷ್ಯರಿಗೆ ಬ್ರಹ್ಮೋಪದೇಶವನ್ನು ಮಾಡಿ ಉದ್ಧರಿಸಿದ್ದಾರೆ.

ಇಲ್ಲಿ ನಾವು ಗಮನಿಸಬೇಕಾದ ಹಾಗೇ ಚರ್ಚಿಸಬೇಕಾದ ವಿಷಯವೆಂದರೆ ನಾಡಿನ ಬೇರೆ ಬೇರೆ ಪ್ರದೇಶಗಳಿಗಿಂತ ಹೆಚ್ಚಾಗಿ ಅಥವಾ ಇದೇ ಪ್ರದೇಶದಲ್ಲಿ ೧೮ ಮತ್ತು ೧೯ನೇ ಶತಮಾನದಲ್ಲಿ ಹಲವಾರು ಅವಧೂತರು ಅವತರಿಸಿ ಅವಧೂತ ಮಾರ್ಗವನ್ನು

ಮುಂದುವರೆಸಿದ್ದಾರೆ. ಇಂದು ಹಂಪಿ ಪರಿಸರದ ವ್ಯಾಪ್ತಿಯಲ್ಲಿ ಅಧಿಕಸಂಖ್ಯೆಯ ಅವಧೂತರುಗಳ ನೆಲೆ ಮತ್ತು ಐಕ್ಯವಾದ ಸಮಾಧಿ ಸ್ಥಳಗಳಾಗಿವೆ. ಬಹುಶಃ ೧೫ನೇ ಶತಮಾನದಲ್ಲಿದ್ದ ವಿರಕ್ತರಲ್ಲಿನ ಅವಧೂತರ ಪ್ರಭಾವವೇ ಇಂದಿನ ಅವಧೂತರ ನೆಲೆಗಳಿಗೆ ಕಾರಣವಾಗಿರಬಹುದು.

ಉತ್ತರ ಕರ್ನಾಟಕದ ಕಡೆ ಕೊಡೇಕಲ್ಲು ಮತ್ತು ಸಾವಳಗಿ ಶಿವಲಿಂಗನ ಪರಂಪರೆಯನ್ನೂ, ಮಧ್ಯ ಕರ್ನಾಟಕದಲ್ಲಿ ಪಂಚ ಗಣಾಧೀಶ್ವರರ ಪರಂಪರೆಯನ್ನು ದಕ್ಷಿಣ ಕರ್ನಾಟಕದ ಕಡೆ ಮಲೆ ಮಾದೇಶ್ವರ, ಮಂಟೇ ಸ್ವಾಮಿಯ ಪರಂಪರೆಯನ್ನು ಕಾಣುವ ಹಾಗೆ ಇಂದು ಹಂಪಿ ಪರಿಸರದ ಪ್ರಾಂತ್ಯದಲ್ಲಿ ಅವಧೂತ ಪರಂಪರೆ ಬೆಳೆದು ಬಂದಿದೆ. ಇವರೆಲ್ಲಾ ವೀರಶೈವಧರ್ಮದ ಸಾಂಸ್ಥಿಕತೆಯನ್ನು ನಿರಾಕರಿಸಿದವರು. ಎಲ್ಲೋ ಹುಟ್ಟಿ, ಮತ್ತೆಲ್ಲೋ ಬೆಳೆದು, ಇನ್ನೆಲ್ಲಿಯೋ ನೆಲೆನಿಂತಿರುವ ಮಹಾತ್ಮರು. ಈ ಪ್ರದೇಶದಲ್ಲಿ ನೆಲೆನಿಂತು ಭಕ್ತ ಸಮುದಾಯವನ್ನು ಪಡೆದಿದ್ದಾರೆ. ಚೇಳಗುರಿಕೆ ಎರ್ರಿತಾತ, ದಮ್ಮೂರು ವೆಂಕಾವಧೂತ, ಎಮ್ಮಿಗನೂರು ಜಡೆಪ್ಪತಾತ, ಹಂಪಿ ಶಿವರಾಮವಧೂತ, ಹೇರೂರು ವಿರೂಪಾವಧೂತ, ಕೆಂಪಾವಧೂತ, ರುದ್ರಾವಧೂತ ಹೀಗೆ ಈ ಪ್ರಾಂತದಲ್ಲಿ ನೆಲೆ ನಿಂತಿರುವ ಅವಧೂತರ ಪಟ್ಟಿ ಬೆಳೆಯುತ್ತದೆ. ಇವರುಗಳ್ಯಾರು ಹೆಚ್ಚಾಗಿ ಸಾಹಿತ್ಯ ರಚಿಸಿದವರಲ್ಲ, ಯಾವುದೇ ಒಂದು ವ್ಯವಸ್ಥೆಯ ವಿರುದ್ಧ ಹೋರಾಡಿದವರಲ್ಲ. ಆದರೂ ತಮ್ಮ ವಿಶಿಷ್ಟ ನಡೆ ನುಡಿಯಿಂದ ಮತ ಸಹಿಷ್ಣುತೆಯನ್ನು, ಭಾವೈಕ್ಯತೆಯನ್ನು ಗಡಿನಾಡ ಪ್ರದೇಶದಲ್ಲಿ ಭಾಷಾ ಬಾಂಧವ್ಯವನ್ನು ಮೆರೆದಿದ್ದಾರೆ. ನಂಬಿದ ಭಕ್ತ ಜನತೆಯ ಮನ-ಮನೆ ಮಂದಿರಗಳಲ್ಲಿ ನೆಲೆಗೊಂಡಿದ್ದು, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಬದುಕಿನಲ್ಲಿ ಬದಲಾವಣೆ ತಂದಿದ್ದಾರೆ.

ಒಟ್ಟಾರೆ ಪ್ರೌಢದೇವರಾಯನ ಕಾಲದಲ್ಲಿದ್ದ ನೂರೊಂದು ವಿರಕ್ತರಲ್ಲಿನ ಅವಧೂತ ಮಾರ್ಗದ ಪ್ರಭಾವ, ಹಂಪಿ ಪರಿಸರದಲ್ಲಿ ಇಂದು ಹೆಚ್ಚಾಗಿ ಅವಧೂತರುಗಳ ನೆಲೆಯಿರುವುದಕ್ಕೆ ಕಾರಣವಾಗಿರಬಹುದೆಂದು ಊಹಿಸಬಹುದಾಗಿದೆ.

ಟಿಪ್ಪಣಿಗಳು

೧. ಭೂಸನೂರು ಮಠ. ಎಸ್.ಎಸ್. (ಸಂ) ಪ್ರೌಢದೇವರಾಯನ ಕಾವ್ಯ, ಸಂಧಿ ೧-೪೨೧.
೨. ಕಲಬುರ್ಗಿ ಎಂ.ಎಂ., ಮಾರ್ಗ III ಪುಟ : ೨೩೦.
೩. ಅದೇ ಪುಟ : ೨೩೧.

೩೪. ಶ್ರೀಶೈಲ ಮತ್ತು ವಿಜಯನಗರ ಸಾಂಸ್ಕೃತಿಕ ಅನನ್ಯತೆ

ಡಾ.ಜಾಜಿ ದೇವೇಂದ್ರಪ್ಪ

ಶ್ರೀಶೈಲ ಪ್ರಾಚೀನ ಶೈವ ಕ್ಷೇತ್ರವೆಂದು ಪ್ರಸಿದ್ಧಿಯಾಗಿದೆ. ಇಲ್ಲಿ ಹಲವು ಶೈವಪಂಥಗಳ ಆಧ್ಯಾತ್ಮ ಸಾಧಕರು ನೆಲೆಸಿದ್ದರು. ಮುಖ್ಯವಾಗಿ ಪಾಶುಪತ, ಲಾಕುಲೀಶ ಪಂಥಗಳು ಹೆಸರುವಾಸಿಯಾಗಿದ್ದವು. ಅಲ್ಲದೇ ಶೈಕ್ಷಣಿಕ, ಸಾಮಾಜಿಕ ಅಭಿವೃದ್ಧಿಯಲ್ಲಿ ಮುಖ್ಯ ಪಾತ್ರವನ್ನು ವಹಿಸಿದ್ದವು. ಪಾಶುಪತ-ಲಾಕುಲೀಶ ಶಾಖೆಯ ಮೂಲ ಶೈವಪಂಥದವರೊಂದಿಗೆ ವೀರಶೈವ ವಿರಕ್ತರು ಅಲ್ಲಿ ಮಠಗಳನ್ನು ನಿರ್ಮಿಸಿದ್ದರು. ಕಾಳಾಮುಖ, ಪಾಶುಪತಾದಿ ಸ್ಥಾನಪತಿಗಳು ಶ್ರೀಶೈಲದ ಮಲ್ಲಿಕಾರ್ಜುನ ದೇವರ ಪೂಜಾಡಳಿದಲ್ಲಿಯೂ, ರಾಜಪ್ರಭುತ್ವದಲ್ಲಿ ಸಲಹೆಗಾರರಾಗಿಯೂ ತಮ್ಮ ಪಾತ್ರ ನಿರ್ವಹಿಸಿದ್ದಾರೆ.

ಭಾಷಾವಾರು ಪ್ರಾಂತ್ಯದ ಪೂರ್ವದಲ್ಲಿ ಅಖಂಡ ಕರ್ನಾಟಕದ ಒಂದು ಪ್ರಮುಖ ಶೈವಕೇಂದ್ರವಾಗಿದ್ದ ಶ್ರೀಶೈಲವನ್ನು ಕನ್ನಡದ ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ ಮುಂತಾದ ರಾಜಮನೆತನಗಳು ತಮ್ಮ ಆಡಳಿತವ್ಯಾಪ್ತಿಯಲ್ಲಿ ಸೇರಿಸಿಕೊಂಡು ಕೆಲವಾರು ದಾನ-ದತ್ತಿಗಳನ್ನು ನೀಡುವ ಮೂಲಕ ಆ ಕ್ಷೇತ್ರದ ಬೆಳವಣಿಗೆಗೆ ಕಾರಣರಾಗಿ ದ್ದಾರೆ. ಆದರೂ ಇವರ್‍ಯಾರೂ ಅಧಿಕೃತವಾಗಿ ಶ್ರೀಶೈಲವನ್ನು ತಮ್ಮ ನೇರ ಅಧಿಪತ್ಯಕ್ಕೆ ತೆಗೆದುಕೊಂಡಿಲ್ಲವೆಂಬುದು ತಿಳಿಯುತ್ತದೆ.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯನಂತರ ಮೊದಲನೆಯ ಹರಿಹರನು ಕ್ರಿ.ಶ ೧೩೪೫ರಲ್ಲಿ ಪ್ರೋಲಯವೇಮನೆಂಬ ಕಾಕತೀಯ ದೊರೆಯಿಂದ ಶ್ರೀಶೈಲಪ್ರದೇಶವನ್ನು ಗೆದ್ದುಕೊಂಡ. ಆದರೂ ಅದು ಬಹಳದಿನ ಹರಿಹರನ ವಶದಲ್ಲಿ ಉಳಿಯಲಿಲ್ಲ. ಏಕೆಂದರೆ ವೇಮಯಲಿಂಗಮನಾಯಕನೆಂಬುವನು ಪುನಃ ಶ್ರೀಶೈಲವನ್ನು ಗೆದ್ದು ಆಡಳಿತ ನಡೆಸಿದ. ಕ್ರಿ.ಶ. ೧೪೨೨ ರಲ್ಲಿ ಶ್ರೀಶೈಲ ಮತ್ತೆ ವಿಜಯನಗರ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಮುಂದೆ ಶ್ರೀಕೃಷ್ಣದೇವರಾಯನ ಕಾಲದಲ್ಲಿ ಈ ಪ್ರದೇಶ ಒಂದು ರಾಜ್ಯದ ಸ್ಥಾನಕ್ಕೇರಿ ವಿಜಯನಗರದ ಒಂದು ಪ್ರಮುಖ ಆಡಳಿತ ವಿಭಾಗವಾಯಿತು. ಆದರೆ ಕೇವಲ ರಾಜಕೀಯವಾಗಿಯಲ್ಲದೇ ಪ್ರಾಚೀನ ಕಾಲದಿಂದಲೂ ಶ್ರೀಶೈಲ ಮತ್ತು ವಿಜಯನಗರ ಪರಿಸರದ ಸಮುದಾಯಗಳಿಗೆ ಗಾಢವಾದ ಸಾಂಸ್ಕೃತಿಕ ಅನನ್ಯತೆ ಯಿದ್ದುದು ತಿಳಿಯುತ್ತದೆ. ಇದನ್ನು ಶಿವತತ್ವಸಾರ, ಸ್ಕಂದಪುರಾಣ, ಮಹಾಭಾರತಾದಿ ಕಾವ್ಯಗಳು ಸ್ಪಷ್ಟವಾಗಿ ಉಲ್ಲೇಖಿಸುತ್ತವೆ.

ಪ್ರಸ್ತುತ ಪ್ರಬಂಧದಲ್ಲಿ ವಿಜಯನಗರದ ಅರಸರ ಆಡಳಿತವನ್ನು ಪ್ರಸ್ತಾಪಿಸುತ್ತಾ ಆಮೂಲಕ ಶ್ರೀಶೈಲದೊಂದಿಗೆ ಇರಿಸಿಕೊಂಡಿದ್ದ ರಾಜಕೀಯ-ಸಾಮಾಜಿಕ ಸಾಂಸ್ಕೃತಿಕ ಸಂಬಂಧವನ್ನು ಸಂಕ್ಷಿಪ್ತವಾಗಿ ಅನಾವರಣಗೊಳಿಸಲಾಗಿದೆ.

ಕ್ರಿ.ಶ.೧೪೬೨ರಲ್ಲಿ ಶಾಂತಯ್ಯನೆಂಬ ಭೈರಾಗಿಯೊಬ್ಬನು ತನ್ನ ಹೂದೋಟವನ್ನು ಶ್ರೀಶೈಲದ ಮಲ್ಲಿಕಾರ್ಜುನನಿಗೆ ದಾನಮಾಡಿದನು. ಆ ದಾನವನ್ನು ವಿಜಯನಗರದ ದೊರೆ ಮಲ್ಲಿಕಾರ್ಜುನನ ಆಳ್ವಿಕೆಯ ಕ್ರಿ.ಶ. ೧೪೬೮ರ ಒಂದು ತೆಲುಗು ಶಾಸನವು ಉಲ್ಲೇಖಿಸುತ್ತದೆ. ಈ ಶಾಸನ ಆಲಂಪುರದಲ್ಲಿದೆ. (MAR ೧೯೧೫ -೮೯).

ಕ್ರಿ.ಶ. ೧೪೫೮ ಜನವರಿ ೧೯ರ ಒಂದು ಶಾಸನವು ಪ್ರೌಢದೇವರಾಯನ ಆಳ್ವಿಕೆಯನ್ನು ಹೇಳುತ್ತದೆ. ಪ್ರೌಢದೇವರಾಯ ಮಹಾರಾಯನು ಅರಮನೆಯಲ್ಲಿದ್ದಂತಹ ಓದುವ ಹೊನ್ನಮ್ಮವ್ವ ಎಂಬಾಕೆ ಶ್ರೀಶೈಲವನ್ನು ಕ್ರಯವಾಗಿಕೊಂಡು ಅಲ್ಲಿಯ ಅಧಿದೈವ ಶ್ರೀಶೈಲಮಲ್ಲಿಕಾರ್ಜುನ ದೇವರ ಪೂಜೆ, ನೈವೇದ್ಯಕ್ಕೆ ಮತ್ತು ಐದು ಮಂದಿ ಜಂಗಮರ ಆರೋಗಣೆಗೆಂದು ದತ್ತಿಯನ್ನು ಕೊಟ್ಟಳು ಎಂಬ ಪ್ರಸ್ತಾಪವಿದೆ. ಈ ಐದು ಮಂದಿ ಜಂಗಮರ ಹೆಸರುಗಳು ಕಂಡು ಬರುವುದಿಲ್ಲ. ೧೪ನೇ ಶತಮಾನದ ಪೂರ್ವದಲ್ಲಿಯೇ ಶ್ರೀಶೈಲದ ಪಂಚಮಠಗಳು ಅಸ್ತಿತ್ವದಲ್ಲಿದ್ದವು. ಘಂಟೆಮಠ, ಅರಸಮಠ, ಕಲ್ಲುಮಠ, ಭಿಕ್ಷಾವೃತ್ತಿಮಠ, ವಿಭೂತಿಮಠ ಬಹುಶಃ ಈ ಪಂಚಮಠದ ಅದಿಪತಿಗಳಿಗೆ ಐವರು ಜಂಗಮರೆಂದು ಕರೆದಿರುವ ಸಾಧ್ಯತೆಯಿದೆ. ಈ ಹೊತ್ತಿಗೆ ಕರ್ನಾಟಕದಲ್ಲಿ ಬಸವಾದಿ ಶರಣರು ಸ್ಥಾಪಿಸಿದ ವೀರಶೈವ ಧರ್ಮ ಹೆಸರು ಪಡೆದಿತ್ತು. ಅಲ್ಲದೆ ಶ್ರೀ ಶೈಲದಲ್ಲಿ ಇದರ ಪ್ರಭಾವದಿಂದ ಅನೇಕರು ಈ ಧರ್ಮದ ಅನುಯಾಯಿಗಳಾಗಿದ್ದರೆಂದು ತಿಳಿಯಬಹುದು. ಇದಕ್ಕೆ ಕಾರಣ ೧೪ನೇ ಶತಮಾನದ ಸಮಯಕ್ಕಾಗಲೇ ವಿಭೂತಿಮಠ. ಭಿಕ್ಷಾವೃತ್ತಿಮಠ, ಗಣಮಠಗಳೆಂಬ ವೀರಶೈವ ಧಾರ್ಮಿಕ ಸಂಸ್ಥೆಗಳು ಶ್ರೀಶೈಲದಲ್ಲಿ ಸ್ಥಾಪನೆಯಾಗಿದ್ದವು. ಕ್ರಿಶ ೧೫೧೧ರ ಒಂದು ಶಾಸನದಲ್ಲಿ ಶ್ರೀಕೃಷ್ಣದೇವರಾಯನ ಶ್ರೀಶೈಲಶಾಸನದಲ್ಲಿ ಸಾರಂಗಮಠ, ವಿಭೂತಿಮಠ, ಘಂಟಾಮಠಗಳ ಉಲ್ಲೇಖವಿದೆ. ಈ ಮೂರು ಉಲ್ಲೇಖಿತ ಮಠಗಳಲ್ಲಿ ಘಂಟಾಮಠವು ಕ್ರಿ.ಶ. ೭ನೇ ಶತಮಾನದಷ್ಟು ಪ್ರಾಚೀನವಾದಂಥದು. ಅಲ್ಲದೇ ಕೃಷ್ಣದೇವರಾಯನ ಶಾಸನದಲ್ಲಿ ಉಲ್ಲೇಖವಾದ ವಿಭೂತಿಮಠ ವಿವಿಧ ಶೈವ ಸಂಪ್ರದಾಯಕ್ಕೆ ಸೇರಿದ ಮಠಾಧಿಪತಿಗಳ ಆಡಳಿತಕ್ಕೆ ಒಳಗಾಗಿದೆ.

ಇನ್ನು ಸಾರಂಗಮಠವಂತೂ ಶ್ರೀಶೈಲದ ಎಲ್ಲಾ ಮಠಗಳಿಗಿಂತ ವಿಶಾಲವಾಗಿದ್ದಾಗಿತ್ತು. ಅನೇಕ ಮಠಗಳ ಅಧಿಕಾರಿಗಳು ಸಾರಂಗಮಠದಲ್ಲಿಯೇ ಸಭೆಸೇರಿ ಧಾರ್ಮಿಕ ಚರ್ಚೆಗಳನ್ನು ನಡೆಸುತ್ತಿದ್ದರು. ಕ್ರಿ.ಶ. ೧೫೮೫ ಸೆಪ್ಟಂಬರ್ ೩೦ರ ಸಾರಂಗಮಠದಲ್ಲಿರುವ ಒಂದು ಶಾಸನವು ಇಂತಹ ಧಾರ್ಮಿಕ ಸಮಾವೇಶದ ಉಲ್ಲೇಖ ನೀಡುತ್ತದೆ. ನಂದಿಮಠ, ಭೃಂಗಿಮಠ, ವೀರಭದ್ರಮಠ ಮುಂತಾದ ಹಲವು ಮಠದ ಅಧಿಕಾರಿಗಳು ಸಾರಂಗಮಠದಲ್ಲಿ ಸಭೆಸೇರಿ, ಸಾರಂಗಮಠಕ್ಕೆ ಪ್ರಧಾನ ಪೂಜಾರಿಯಾಗುವುದಕ್ಕೆ

ಯಾರಿಂದಲಾದರೂ ಶಿಫಾರಸ್ಸು ಮಾಡಿಸಿದರೆ ಲಂಚ ನೀಡಿದರೆ ಅವರು ಶಿಕ್ಷಾರ್ಹರೆಂಬ ನಿರ್ಣಯ ತೆಗೆದುಕೊಂಡರೆಂಬ ಮಹತ್ವದ ಅಂಶವಿದೆ.

ಕ್ರಿ.ಶ. ೧೫೧೫ ಜೂಲೈ ೨೫ರ ಒಂದು ಶಾಸನ ಕೃಷ್ಣದೇವರಾಯನ ಆಳ್ವಿಕೆಯನ್ನು ಹೇಳುತ್ತದೆ. ಈ ಶಾಸನದಲ್ಲಿ ಕೃಷ್ಣದೇವರಾಯನ ಪೂರ್ವದಿಗ್ವಿಜಯಗಳನ್ನು ಹೇಳಲಾಗಿದೆ. ಅವನು ಉದಯಗಿರಿಯನ್ನು ಗೆದ್ದು ತಿರುಮಲರಾವುತನನ್ನು ಸೆರೆಹಿಡಿದು, ಪ್ರತಾಪರುದ್ರ ಗಜಪತಿಯ ಕುಮಾರ ವೀರಭದ್ರರಾಯ, ಕುಮಾರಪಾತ್ರನ ಮಗ ನರಹರಿದೇವ, ರಾಯಚೂರಿನ ಮಲ್ಲೂಖಾನ, ಉದ್ಧಂಡಖಾನನನ್ನು ಸೆರೆ ಹಿಡಿಯುತ್ತಾನೆ. ಈ ಸಂದರ್ಭದಲ್ಲಿ ಕೃಷ್ಣದೇವರಾಯ ಶ್ರೀಶೈಲಕ್ಕೆ ಭೇಟಿನೀಡಿ ತೇರುಬೀದಿಯಲ್ಲಿ ಶಿಲಾಮಂಟಪವನ್ನು ಕಟ್ಟಿಸುತ್ತಾನೆ. ಅಲ್ಲದೇ ಈ ಮುಂಚೆ ಕ್ರಿ.ಶ. ೧೫೧೩ ಎಪ್ರಿಲ್ ೧೫ ರಂದು ಶ್ರೀಶೈಲಮಲ್ಲಿಕಾರ್ಜುನ ದೇವರಿಗೆ ಮಹಾನೈವೇದ್ಯದ ಸಲುವಾಗಿ ಪಾರುಮಂಚಾಲ ಮತ್ತು ಆತ್ಮಕೂರುಗಳನ್ನು ದತ್ತಿ ನೀಡುತ್ತಾನೆ.

ಕೃಷ್ಣದೇವರಾಯನ ಆಡಳಿತದ ಅವಧಿಯಲ್ಲಿಯೇ ವೀರಶೈವ ಧರ್ಮಕ್ಕೆ ಸೇರಿದ ಉಗ್ರಭಕ್ತನೊಬ್ಬನು ಶ್ರೀಶೈಲದಲ್ಲಿ ಜೈನಧರ್ಮೀಯರಿಗೆ ಅಪಾರ ಹಿಂಸೆಯನ್ನು ಮಾಡುತ್ತಿದ್ದನು. ಇದನ್ನು ಗಮನಿಸಿದ ಕೃಷ್ಣದೇವರಾಯನು ತನ್ನ ರಾಜ್ಯದ ವೆಲಗೋಟಿ ಗಣಿ ತಿಮ್ಮನಾಯಕನೆಂಬುವವನ್ನು ಕಳುಹಿಸಿ ಅದನ್ನು ನಿಲ್ಲಿಸಿದನೆಂಬುದಾಗಿ ತಿಳಿದು ಬರುತ್ತದೆ.

ಕೃಷ್ಣದೇವರಾಯನ ಕಾಲಕ್ಕಾಗಲೇ ಶ್ರೀಶೈಲದಲ್ಲಿ ಹಲವಾರು ಧಾರ್ಮಿಕ ಸಂಘಗಳು ಆರಂಭವಾಗಿದ್ದವು. ಕೇವಲ ಜೈನ-ವೀರಶೈವರಿಗೆ ಮಾತ್ರವಲ್ಲದೆ ಶೈವರಲ್ಲಿಯೇ ದೊಡ್ಡ ದೊಡ್ಡ ಕಲಹಗಳಾಗಿದ್ದವು. ಪ್ರಾಚೀನ ಶೈವ ಮತ್ತು ಮಧ್ಯಕಾಲೀನ ವೀರಶೈವ ಮತಾಚಾರ್ಯರ ನಡುವೆ ಧಾರ್ಮಿಕ ಭಿನ್ನಾಭಿಪ್ರಾಯಗಳು, ಸ್ಪರ್ದೆಗಳು, ಶ್ರೀಶೈಲ ಮಲ್ಲಿಕಾರ್ಜುನದೇವರ ಆಡಳಿತ ವಿಷಯ ಸಂಬಂಧಿಯಾಗಿಯೂ ಕೆಲವಾರು ಸಂಘರ್ಷಗಳಾಗಿದ್ದವು. ಈ ಸಂಘರ್ಷದಲ್ಲಿ ಭೃಂಗಿಮಠ, ಶಿವಲಿಂಗಮಠ ನಾಮಾವಶೇಷವಾದ ವೆಂದು ತಿಳಿಯುತ್ತದೆ. ಕ್ರಿ.ಶ. ೧೩೧೩ ಫೆಬ್ರುವರಿ ೨೬ರಲ್ಲಿ ಅರಸಮಠದ ಒಂದು ಶಾಸನದಲ್ಲಿ ಮಲ್ಲಿಕಾರ್ಜುನದೇವರಿಗೆ ಪಾಶುಪತಶೈವ ಸಂಪ್ರದಾಯದ ಪೂಜಾಕಾರ್ಯ ನಿಲ್ಲಿಸಿ ಮುಂದೆ ವೀರಶೈವ ಸಂಪ್ರದಾಯದಂತೆ ಪೂಜೆ ನಡೆಸಬೇಕೆಂಬ ಮುಖ್ಯ ಅಂಶವಿದೆ. ಅಲ್ಲದೇ ಪಾಶುಪತರಿಂದ ದೇವಾಲಯದ ೭೦ ಗ್ರಾಮಗಳನ್ನು ವೀರಶೈವರ ಗಣಾಮಠಾಧಿಪತಿಗಳು ಸ್ವಾಧೀನ ಮಾಡಿಕೊಂಡರು. ಇಂತಹ ಹಲವಾರು ಧಾರ್ಮಿಕ ಕೆಲಹಗಳನ್ನು ಬಹುಶಃ ಕೃಷ್ಣದೇವರಾಯನು ಅರಿತಿದ್ದ ಕಾರಣವಾಗಿ, ಜೈನರ ಮೇಲೆ ಧಾಳಿಯಿಟ್ಟು ವೀರಶೈವ ಉಗ್ರಭಕ್ತನನ್ನು ಕೂಡಲೇ ನಿಗ್ರಹಿಸುವ ಕಾರ್ಯ ಕೈಗೊಂಡನು.

ತೇದಿಯಿಲ್ಲದ ಒಂದು ಶಾಸನದಲ್ಲಿ ವಿಜಯನಗರದ ದೊರೆ ವೀರನರಸಿಂಗರಾಯ ಮಹಾರಾಯನು ಮಲ್ಲಿಕಾರ್ಜುನ ದೇವರ ಪಾದ ಸೇವೆ ಮಾಡುತ್ತಿದ್ದನು ಎಂಬುದಾಗಿದೆ. ಈ ದೊರೆ ಸಾಳುವ ಅಥವಾ ತುಳುವ ವಂಶದವನೋ ಎಂಬುದು ತಿಳಿಯುವುದಿಲ್ಲ.

ಕ್ರಿ.ಶ. ೧೬೦೩ ಜನವರಿ ೨೧ ರ ಶಾಸನ, ವಿಜಯನಗರದ ದೊರೆ ವೆಂಕಟಪತಿ ರಾಯನು "ಮುತಿನಗಧಿಗೆ"ಯಿಂದ ರಾಜ್ಯಭಾರ ಮಾಡುತ್ತಿದ್ದನೆಂಬುದಾಗಿ ಹೇಳಿದೆ. ಮುದಿಯಣನಾಯಕರ ಸೀಮೆಯೊಳಗಿನ ನಾಗೇನಹಳ್ಳಿಯಲ್ಲಿ ವಾಸಿಸುತ್ತಿದ್ದ ಹೆಂಜೇರಿನ ಬಡಗಿ ದೊಡ್ಡ ಹಲಗಯ್ಯನ ಮಗ ಚಿಗಚಿಕ್ಕಯ್ಯನು ಮುದಿಯಪನಾಯಕರಿಗೆ ಸ್ಥಿರರಾಜ್ಯವಾಗಲಿಯೆಂದು ಶ್ರೀಶೈಲದ ಮಲ್ಲಿಕಾರ್ಜುನದೇವರಿಗೆ ಕಬ್ಬಿಣದ ದೀಪಮಾಲೆಯನ್ನು ಮಾಡಿಸುತ್ತಾನೆ.

ಮೇಲಿನ ಮುಖ್ಯ ಲಭ್ಯಶಾಸನಗಳಲ್ಲಿ ಶ್ರೀಶೈಲ ಮತ್ತು ವಿಜಯನಗರ ಸಾಮ್ರಾಜ್ಯದ ರಾಜ ತಾಂತ್ರಿಕ ಸಂಬಂಧ ಮತ್ತು ಧಾರ್ಮಿಕ, ಆಧ್ಯಾತ್ಮಿಕ ಸಂಬಂಧ ಅಲ್ಲದೇ ಧಾರ್ಮಿಕ ಕಲಹದ ಬಗೆಗೂ ಮಾಹಿತಿಯಿದೆ. ಆ ಮೂಲಕ ಎರಡೂ ಕ್ಷೇತ್ರಗಳ ಸಾಂಸ್ಕೃತಿಕ ಕಲಹದ ಬಗೆಗೂ ಮಾಹಿತಿಯಿದೆ. ಆ ಮೂಲಕ ಎರಡೂ ಕ್ಷೇತ್ರಗಳ ಸಾಂಸ್ಕೃತಿಕ ಅನನ್ಯತೆಯೂ ಅನಾವರಣಗೊಂಡಿದೆ. ಶ್ರೀಶೈಲದಲ್ಲಿ ವಿಜಯನಗರೋತ್ತರ ಕಾಲಾವಧಿಯಲ್ಲಿ ಧಾರ್ಮಿಕ ಕಲಹಗಳು ಅಧಿಕವಾಗಿ ಹಲವಾರು ಶೈವಮಠಗಳು ನೆಲಸಮಗೊಂಡವು. ಮಠಾಧಿಪತಿಗಳು ಕಾಣೆಯಾದರು. ಶ್ರೀಶೈಲದ ಮುಖ್ಯದೇವಾಲಯದ ಶ್ರೀಮಲ್ಲಿಕಾರ್ಜುನ ದೇವಾಲಯದ ಪೂಜಾಕಾರ್ಯಗಳು ನಿಂತು ಹೋದವು. ಪ್ರಾಚೀನ ಶೈವ ಮಧ್ಯಕಾಲೀನ ವೀರಶೈವಕ್ಕೆ ಅಪಾರ ಸಂಘರ್ಷಗಳಾದವು. ಹಲವಾರು ಪ್ರಮುಖ ಆಸ್ತಿ-ಪಾಸ್ತಿಗೆ ಸಂಬಂಧಿಸಿದ ಶಾಸನಗಳನ್ನು ಭೂಮಿಯಲ್ಲಿ ಹೂಳಲಾಯಿತೆಂಬುದಾಗಿ ಹಲವಾರು ತೆಲುಗು ಶಾಸನಗಳ ಸೂಕ್ಷ್ಮ ಅಧ್ಯಯನದಿಂದ ತಿಳಿಯುತ್ತದೆಯೆಂದು ಪಿ.ವಿ.ಪರಬ್ರಹ್ಮಶಾಸ್ತ್ರಿಗಳು ಅಭಿಪ್ರಾಯಪಡುತ್ತಾರೆ. ವಿಜಯನಗರ ದೊರೆಗಳ ಅಧಿಕ ಶಾಸನಗಳು ಶ್ರೀಶೈಲಕ್ಕೆ ಸಂಬಂಧಿಸಿ ಇಲ್ಲ. ಇಂಥಾ ಮುಖ್ಯಕ್ಷೇತ್ರವನ್ನು ಉಲ್ಲೇಖಿಸುವ ವಿಜಯನಗರ ದೊರೆಗಳ ಶಾಸನಗಳು ಕೆಲವೇ ಕೆಲವಿವೆ. ಬಹಶಃ ಇಂತಹ ಧಾರ್ಮಿಕ ಕಲಹಗಳಲ್ಲಿ ಅವು ನಾಮಾವಶೇಷವಾಗಿರಲೂ ಬಹುದು. ಅದೇ ನಿದ್ದರೂ ಶ್ರೀಶೈಲಕ್ಕೂ, ವಿಜಯನಗರಕ್ಕೂ ಗಾಢವಾದ ಸಾಂಸ್ಕೃತಿಕ ಸಂಬಂಧ ವಿತ್ತೆಂಬುದು ಗಮನಾರ್ಹ.

ಗ್ರಂಥ ಋಣ

೧. ಆಂಧ್ರಪ್ರದೇಶದ ಕನ್ನಡ ಶಾಸನಗಳು
೨. ಸುಧಾರ್ಣವ, ಬಿ.ವಿ.ಮಲ್ಲಾಪುರ
೩. ವೆಲಗೋಟವಾರಿ ವಂಶಾವಳಿ, ವೆಂಕಟರಮಣಯ್ಯ
೪. MAR-೧೯೧೫, ೨೭,೩೬,೪೦,೪೧,೪೪, ಉಲ್ಲೇಖ.
೫. ಇಂಡಿಯನ್ ಎಪಿಗ್ರಫಿ-ವಾರ್ಷಿಕ ವರದಿ ೪೨/೧೯೧೫.
೬. ಕರ್ನಾಟಕ ಲಾಕುಶಶೈವರ ಇತಿಹಾಸ, ಕಪಟರಾಳ ಕೃಷ್ಣರಾವ್-೧೯೬೫.
೭. ಶ್ರೀಶೈಲ ಪ್ರಾಚೀನತೆ ಶಾಸನಗಳು-ಪಿ.ವಿ. ಪರಬ್ರಹ್ಮಶಾಸ್ತ್ರಿ-ಶ್ರೀಶೈಲಪ್ರಭಮಾಸಿಕ.

೮. ಚಂಚು ಮಲ್ಲಯ್ಯ: ಮೂಲತಃ ಇಲ್ಲಿ ಇರುವ ಮಲ್ಲಿಕಾರ್ಜುನ ಚೆಂಚುಮಲ್ಲಯ್ಯ ಎಂದು ಬುರ್ರಶೆಟ್ಟಿ ಜನರು ಸ್ಥಾಪಿಸಿದ ಆರಾಧ್ಯ ದೈವ.

ಘಂಟಾಸಿರ : ಘಂಟಾಮಠವನ್ನು ಘಂಟೆಯ ಸಿದ್ದನೆಂಬ ಪಾಶುಪತ ಆಚಾರ್ಯ ಸ್ಥಾಪಿಸಿದನೆಂದು ಪಿ.ವಿ.ಪರಬ್ರಹ್ಮ ಶಾಸ್ತ್ರ ಅವರು ಉಲ್ಲೆಖಿಸುತ್ತಾರೆ.

ಚೆಂಚುಮಲ್ಲಯ್ಯ : ಈಗಲೂ ಅಲ್ಲಿದ್ದಾನೆ. ಬಹಶಃ ಶ್ರೀಶೈಲಕ್ಕೆ ಯಾತ್ರೆಗೆ ಹೋಗುವ ದಾರಿದೂರ ಇದ್ದುದರಿಂದ ಇಂತಹ ದೇವರುಗಳನ್ನು ಹಂಪೆಯಲ್ಲಿ ನಿರ್ಮಾಣ ಮಾಡಿಸಿರ ಬಹುದಾಗಿದೆ.

೩೫. ವಿಜಯನಗರ ಅರಸರು ಮತ್ತು ಶ್ರೀರಾಘವೇಂದ್ರ ಸ್ವಾಮಿಗಳ ಪರಂಪರಾಮಠ

ಸಂತೇಬೆನ್ನೂರು ಸುಮತೀಂದ್ರ ನಾಡಿಗ್

ಭಾರತದ ಸನಾತನ ಧರ್ಮಗಳಾದ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮತಗಳಿಗೆ ಪೋಷಕರಾಗಿದ್ದವರು ವಿಜಯನಗರದ ಅರಸರು. ವಿಜಯನಗರ ಸಾಮ್ರಾಜ್ಯವನ್ನಾಳಿದ ಸಂಗಮ, ಸಾಳುವ, ತುಳವ ಹಾಗು ಅರವೀಡು ಮನೆತನಗಳ ಎಲ್ಲಾ ರಾಜಮಹಾರಾಜರು ಒಂದಿಲ್ಲೊಂದು ತ್ರಿಮತಾಚಾರ್ಯರನ್ನು ತಮ್ಮ ರಾಜಗುರುಗಳನ್ನಾಗಿ ಮಾಡಿಕೊಂಡಿದ್ದರು. ಶೈವ, ಜೈನ, ವೈಷ್ಣವ ಮತಗಳು ಅದ್ವೈತಮತದ ಶಂರಾಚಾರ್ಯರ ಪರಂಪರೆಯ ವಿದ್ಯಾರಣ್ಯರು, ವಿಶಿಷ್ಟಾದ್ವೈತ ಮತದ ರಾಮಾನುಜಾಚಾರ್ಯರ ಅನುಯಾಯಿಗಳಾದ ಪರಕಾಲದ ಮಠದ ವೇದಾಂತ ದೇಶಿಕರು, ದ್ವೈತ ಪಂಥದ ಮಧ್ವಾಚಾರ್ಯ ಪರಂಪರೆಯ ವ್ಯಾಸರಾಯರು ಈ ಅರಸೊತ್ತಿಗೆಯ ಆಪ್ತರಾಗಿ ಸಲಹೆಗಾರರಾಗಿ ಸಾಮ್ರಾಜ್ಯದ ಅಭ್ಯುದಯದಲ್ಲಿ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

ತಾಳಿಕೋಟೆ ಯುದ್ಧ ನಂತರ ರಾಜಧಾನಿ ಹಂಪೆ ಹಾಳಾದ ಮೇಲೆ ವಿಜಯನಗರದ ಅರಸು ಮನೆತನಗಳು ತಮ್ಮ ರಾಜಧಾನಿಯನ್ನು ಪೆನುಗೊಂಡ, ಚಂದ್ರಗಿರಿಗಳಲ್ಲಿ ಮುಂದುವರೆಸಿಕೊಂಡು ಬಂದದ್ದು ತಿಳಿದಿರುವ ವಿಚಾರ. ವಿಜಯನಗರದ ಉತ್ತಾರಾಧಿಕಾರಿಗಳಿಂದ ಸಾಳುವ ವಂಶಸ್ಥರು ತಮ್ಮ ಪೂರ್ವಿಕರಂತೆ ತ್ರಿಮತಸ್ತಮಠಗಳವರಿಗೂ ತಮ್ಮ ಆದರ, ಗೌರವಗಳನ್ನು ಮುಂದುವರೆಸಿಕೊಂಡು ಬಂದರು. ಹೀಗೆ ತಮ್ಮ ಭಕ್ತಿ ಆದರಗಳನ್ನು ಮುಂದುವರೆಸಿಕೊಂಡು ಬಂದ ಒಂದು ದ್ವೈತ ಮಠವೇ ಶ್ರಿ ಮಧ್ವಾಚಾರ್ಯರಿಂದ ಮುಂದುವರೆದ ಶ್ರೀರಾಘವೇಂದ್ರ ಸ್ವಾಮಿಗಳ ಪರಂಪರಾಮಠ.

ವಿಜಯನಗರ ಸಾಮ್ರಾಜ್ಯಕ್ಕೂ, ದ್ವೈತ ಪರಂಪರೆಯ ಈ ಶ್ರಿ ರಾಘವೇಂದ್ರ ಸ್ವಾಮಿಗಳ ಪರಂಪರಾ ಮಠಕ್ಕೂ ಇರುವ ಸಂಬಂಧ ತಿಳಿಯುವ ಮೊದಲು ಈ ದ್ವೈತ ಮಠದ ಪರಂಪರೆಯ ಹುಟ್ಟು ಬೆಳವಣಿಗೆ ತಿಳಿಯುವುದು ಅವಶ್ಯಕ. ದ್ವೈತ ಮತ ಸ್ಥಾಪಕರಾದ ಶ್ರಿಮನ್ಮಧ್ವಾಚಾರ್ಯರು ಉಡುಪಿಯಲ್ಲಿರುವ ಅಷ್ಟ ಮಠಗಳ ಯತಿಗಳನ್ನ ಲ್ಲದೆ, ನಾಲ್ವರು ತಮ್ಮ ಸಾಕ್ಷತ್ ಶಿಷ್ಯರಿಗೆ ಸನ್ಯಾಸ ದೀಕ್ಷೆ ನೀಡಿ, ಒಬ್ಬರಾದಂತೆ ಒಬ್ಬರು ಈ ದ್ವೈತ ಪರಂಪರೆಯನ್ನು ಮುಂದುವರೆಸಿ ಕೊಂಡು ಬರುವಂತೆ ಮಾಡಿದರು.

ಅವರುಗಳು ವಿಜಯನಗರ ಸಾಮ್ರಾಜ್ಯದ ಆಡಳಿತ ವಲಯಗಳಲ್ಲೇ ತಮ್ಮ ಪೀಠ ಪರಂಪರೆ ಸ್ಥಾಪಿಸಿಕೊಂಡು ಬಂದರು. ಇದಕ್ಕೆ ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರಾದ ಪದ್ಮನಾಭತೀರ್ಥರು - ಆನೆಗೊಂದಿ, ನರಹರಿತೀರ್ಥ-ಚಕ್ರತೀರ್ಥ, ಮಧ್ವವಾತೀರ್ಥರು ಮಣೂರು, ಅಕ್ಷೋಭ್ಯತೀರ್ಥರು ಮಾಳಖೇಡಗಳಲ್ಲಿ ನೆಲೆಸಿ ಅಲ್ಲಿಯೇ ಬೃಂದಾವನಸ್ಥ ರಾಗಿರುವುದು ಸಾಕ್ಷಿಯಾಗಿದೆ. ಅಕ್ಷೋಭ್ಯತೀರ್ಥರು ತಮ್ಮ ನಂತರ ಜಯತೀರ್ಥರಿಗೆ ತಮ್ಮ ಉತ್ತಾರಾಧಿಕಾರ ವಹಿಸಿಕೊಟ್ಟರು. ಜಯತೀರ್ಥರ ಶಿಷ್ಯರಾದ ವಿದ್ಯಾಧಿರಾಜರು, ರಾಜೇಂದ್ರ ತೀರ್ಥ-ರವೀಂದ್ರ ಕವೀಂದ್ರತೀರ್ಥ ಎಂಬಿಬ್ಬ ರಿಗೆ ಯತ್ಯಾಶ್ರಮ ಕೊಟ್ಟ ಕಾರಣ ರಾಜೇಂದ್ರತೀರ್ಥರಿಂದ ಮುಂದುವರೆದ ಪರಂಪರೆಗೆ ಪೂರ್ವಾದಿ ಮಠ ಎಂತಲೂ ಕವೀಂದ್ರ ತೀರ್ಥರಿಂದ ಮುಂದುವರೆದ ಪರಂಪರೆಗೆ ದಕ್ಷಿಣಾದಿ ಮಠ ಎಂತಲೂ ಕರೆಯಲ್ಪಟ್ಟಿತು. ಈ ರಾಜೇಂದ್ರ ತೀರ್ಥರ ಪೂರ್ವಾದಿ ಮಠ ಪರಂಪರೆ ಯಲ್ಲಿ ಅದರ ನಂತರ ನಾಲ್ಕನೆಯವರಾಗಿ ಈ ಪೀಠವನ್ನು ಅಲಂಕರಿಸಿದವರೇ ವ್ಯಾಸ ರಾಯರು. ಮಹಿಮೆ, ಪಾಂಡಿತ್ಯ, ತಪಶ್ಯಕ್ತಿ, ಸಿದ್ಧಿ ಪ್ರಭಾವ, ಹೆಸರುಗಳಿಂದ ಮುಂದೆ ರಾಜೇಂದ್ರ ತೀರ್ಥರಿಂದ ಪ್ರಾರಂಭವಾದ ಈ ಪರಂಪರೆಗೆ ವ್ಯಾಸರಾಯ ಮಠ ಎಂದೇ ಪ್ರಖ್ಯಾತವಾಯಿತು. ಅದರಂತೆಯೇ ಕವೀಂದ್ರ ತೀರ್ಥರಿಂದ ಮುಂದುವರೆದ ದಕ್ಷಿಣಾದಿ ಮಠ ಪರಂಪರೆಯಲ್ಲಿ ಅವರ ನಂತರ ಮೂರನೇ ಯತಿ ಗಳಾದ ರಾಮಚಂದ್ರ ತೀರ್ಥರ ಕಾಲದಲ್ಲಿ ಮತ್ತೆ ಇವರು ಯತ್ಯಾಶ್ರಮ ಪಡೆದು ಕೊಂಡರು. ಅವರ ಓರ್ವ ಶಿಷ್ಯರಾದ ವಿದ್ಯಾನಿದಿ ತೀರ್ಥರಿಂದ ಆರಂಭವಾದ ಮಠಕ್ಕೆ ಉತ್ತರಾದಿ ಮಠ ಎಂತಲೂ, ಇನ್ನೋರ್ವ ಶಿಷ್ಯರಾದ ವಿಭುದೇಂದ್ರ ತೀರ್ಥರಿಂದ ಮುಂದುವರೆದು ಜಿತಾಮಿತ್ರರು, ರಘುನಂದನರು, ಸುರೇಂದ್ರರು, ವೀಜಯೀಂದ್ರರು, ಸುಧೀಂದ್ರರು ನಂತರ ಕಲಿಯುಗದ ಕಲ್ಪತರು ಕಾಮಧೇನು ಎಂದು ಪ್ರಖ್ಯಾತರಾದ ಮಂತ್ರಾಲಯದ ಶ್ರೀ ರಾಘವೇಂದ್ರ ತೀರ್ಥರು ಮೊದಲಾಗಿ ಈ ದಕ್ಷಿಣಾದಿ ಪೀಠ ಅಲಂಕರಿಸಿದ ಪರಂಪರೆಗೆ ಶ್ರೀ ರಾಘವೇಂದ್ರ ಸ್ವಾಮಿಗಳ ವಿದ್ಯಾಮಠವೆಂದೇ ಪ್ರಸಿದ್ಧಿ ಪಡೆಯಿತು. ವಿಜಯನಗರದ ಪ್ರಖ್ಯಾತ ದೊರೆ ಕೃಷ್ಣದೇವರಾಯರ ರಾಜ ಗುರುಗಳಾ ಗಿದ್ದ ವ್ಯಾಸರಾಯರು, ಸಾಕ್ಷತ್ ವೇದವ್ಯಾಸರ ಅವತಾರ ಎಂದೇ ಹೇಳಲ್ಪಡುತ್ತಾರೆ. ಈ ಶ್ರಿ ವ್ಯಾಸರಾಯರೇ ಮುಂದೆ ಶ್ರೀ ರಾಘವೇಂದ್ರ ತೀರ್ಥರಾಗಿ ಅವತರಿಸಿದರೆಂದು ಮಾಧ್ವ ಮತಾನುಯಾಯಿಗಳ ನಂಬಿಕೆ. ವಿಭುದೇಂದ್ರ ತೀರ್ಥರಿಂದ ಈ ಪರಂಪರೆ ಮುಂದುವರೆದುಕೊಂಡು ಬಂದಿ ದ್ದರೂ ಈ ಮಠಕ್ಕೆ ಶ್ರೀರಾಘವೇಂದ್ರ ಸ್ವಾಮಿಗಳ ಮಠ ಎಂದೇ ಕರೆಯಲಾಗುತ್ತಿದೆ.

ವಿಜಯನಗರದ ಆರವೀಡು ವಂಶದವರೊಂದಿಗೆ ಈ ರಾಘವೇಂದ್ರ ಸ್ವಾಮಿಗಳವರ ಪರಂಪರಾ ಮಠದ ಪೀಠಾಧಿಕಾರಿಗಳ ಸಂಬಂಧ ಬಹಳ ಅನನ್ಯವೂ ಆಗಿತ್ತು. ಈ ಮಠದ ಮೂಲ ದೇವರ ಪೂಜಾ ಕೈಂಕರ್ಯ ಅನ್ನದಾನ ಮತ್ತಿತರ ವಿಷಯಕ್ಕೆ ಹಲ ವಾರು ದತ್ತಿದಾನ ಕೊಟ್ಟಿರುವುದು ಈಗ ಲಭ್ಯವಾದ ಹಲವಾರು ಶಾಸನ ದಾಖಲೆಗಳಿಂದ ತಿಳಿದುಬರುತ್ತದೆ.

ಮೈಸೂರು ಸಮೀಪದ ನಂಜನಗೂಡಿನಲ್ಲಿರುವ ಶ್ರಿ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ವಿಜಯನಗರದ ಅರಸು ಪರಂಪರೆಯವರು ಬರೆದು ಕೊಟ್ಟರೆನ್ನಲಾದ ಆರು ತಾಮ್ರಶಾಸನಗಳು, ಅವರ ಅಧೀನರಾಗಿದ್ದು ತಂಜಾವೂರು, ಮಧುರೆ, ಜಿಂಜಿ ಮುಂತಾದ ನಾಯಕರು ಬರೆಯಿಸಿ ಕೊಟ್ಟ ಒಂಬತ್ತು ತಾಮ್ರ ಶಾಸನಗಳು ಇದ್ದು, ಅವುಗಳಲ್ಲದೆ ಈಗಿನ ದಾವಣಗೇರಿ ಜಿಲ್ಲೆ ಹೊನ್ನಾವಳಿ ತಾಲ್ಲೂಕಿನಲ್ಲಿ ಎರಡೂ ಅದೇ ಜಿಲ್ಲೆಯ ಜಗಳೂರು ತಾಲೂಕಿನಲ್ಲಿ ಒಂದು ಶಿಲಾಶಾಸನ ಇರುವುದು ಕಂಡು ಬಂದಿದ್ದು ಇವುಗಳಿಂದ ವಿಜಯನಗರ ಕಾಲದ ಈ ಮಠ ಪರಂಪರೆಯ ಸಂಬಂಧ ಕುರಿತು ಅನೇಕ ವಿಚಾರಗಳು ತಿಳಿದು ಬರುತ್ತವೆ. ಈ ಶಾಸನಗಳಿಂದ ಅಂದಿನ ರಾಜ ಕೀಯ ಚಿತ್ರಣವಲ್ಲದೆ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಸ್ಥಿತಿಗತಿಗಳನ್ನು ಅರಿಯಲು ಸಾಧ್ಯವಾಗುತ್ತದೆ.

ಈಗ ದೊರೆಯುತ್ತಿರುವ ವಿಜಯನಗರ ಅರಸರ ಮತ್ತು ಶ್ರೀರಾಘವೇಂದ್ರ ಸ್ವಾಮಿಗಳ ಪರಂಪರಾ ಮಠಕ್ಕೆ ಸಂಬಂಧಿಸಿದ ೧೮ ಶಾಸನಗಳಲ್ಲಿ ೧೫ ತಾಮ್ರಶಾಸನ ಗಳಾಗಿದ್ದು, ೩ ಶಿಲಾಶಾಸನಗಳಾಗಿವೆ. ಇವುಗಳಲ್ಲಿ ವಿಜಯೀಂದ್ರ ತೀರ್ಥರ ಕಾಲದ ೫ ಶಾಸನಗಳಾದರೆ ಸುರೇಂದ್ರ ತೀರ್ಥ ಮತ್ತು ಸಮತೀಂದ್ರ ತೀರ್ಥರ ಕಾಲದ ತಲಾ ೩ ಶಾಸನಗಳೂ, ಸುಧೀಂದ್ರ ತೀರ್ಥರ ಕಾಲದ ಎರಡು ಶಾಸನಗಳು, ವಿಭುದೇಂದ್ರ, ರಾಘವೇಂದ್ರ, ಯೋಗೀಂದ್ರ ಮತ್ತು ವಸುದೇಂದ್ರ ತೀರ್ಥರ ಕಾಲದ ತಲಾ ಒಂದೊಂದು ಶಾಸನಗಳಾಗಿವೆ.

ನೇರವಾಗಿ ವಿಜಯನಗರ ಅರಸು ಪರಂಪರೆಯವರೇ ಈ ಪರಂಪರಾ ಮಠಕ್ಕೆ ಬರೆಯಿಸಿಕೊಟ್ಟ, ಐದು ತಾಮ್ರ ಶಾಸನಗಳಲ್ಲಿ ಕೃಷ್ಣದೇವರಾಯ ಮಹಾರಾಯ ವಿಭುದೇಂದ್ರ ತೀರ್ಥರಿಗೆ ಒಂದು ಶಾಸನವನ್ನು, ಆರವೀಡು ವಂಶದ ರಾಮರಾಯ ಸುರೇಂದ್ರ ತೀರ್ಥರಿಗೆ ಎರಡು ಶಾಸನಗಳನ್ನು ಶ್ರೀರಂಗರಾಯ ಸುರೇಂದ್ರ ತೀರ್ಥರಿಗೆ ಒಂದು, ಸುಧೀಂದ್ರ ತೀರ್ಥರಿಗೆ ಒಂದುಶಾಸನ ಬರೆಸಿಕೊಟ್ಟಿದ್ದಾರೆನ್ನಲಾಗಿದ್ದು ದಾವಣ ಗೆರೆ ಜಿಲ್ಲೆ ಹೊನ್ನಾವಳಿ ತಾಲೂಕು ಸವಳಂಗ ಗ್ರಾಮದಲ್ಲಿ ದೊರೆತಿರುವ ಎರಡು ಶಿಲಾ ಶಾಸನಗಳೂ ಇದೇ ಶ್ರೀ ರಂಗರಾಯನ ಕಾಲದ್ದಿರಬಹುದಾಗಿದೆ. ಉಳಿದಂತೆ ವಿಜಯನಗರ ಅಧೀನರಾಗಿದ್ದು ತಂಜಾವೂರಿನ ಚವ್ವಪ್ಪ ಒಂದು, ಚಿನ್ನ ಚವ್ವಪ್ಪ ನಾಯಕ ಎರಡು ಶಾಸನಗಳನ್ನು ವಿಜಿಯೀಂದ್ರರಿಗೂ ಚೆಂಜಿ ರಂಗಪ್ಪ ನಾಯಕ ಸುಧೀಂದ್ರ ತೀರ್ಥರಿಗೆ ಒಂದು ಉತ್ತಮ ರಂಗಪ್ಪ ನಾಯಕ ಸುಮತೀಂದ್ರ ತೀರ್ಥರಿಗೆ ಒಂದು ಮಧುರೆ ಮೂಡಲ ನಾಯಕ ಯೋಗೀಂದ್ರ ತೀರ್ಥರಿಗೆ ಒಂದು, ಸುಮತೀಂದ್ರ ತೀರ್ಥರಿಗೆ ಒಂದು, ಅರಿಯಲ್ಲೂರು ವಿಜಯ ಬಪ್ಪಲುರಾಯ ಮಸುದೇಂದ್ರ ತೀರ್ಥ ರಿಗೆ ಒಂದು, ಸೋಮಭೂಪಾಲ ವರದೇಂದ್ರ ತೀರ್ಥರಿಗೆ ಒಂದು ಶಾಸನ ಬರೆದುಕೊಟ್ಟಿ ದ್ದಾರೆ. ಮೈಸೂರಿನ ದೊಡ್ಡ ದೇವರಾಜ ಒಡೆಯರವರು ಈ ಪರಂಪರೆಯ ಪ್ರಖ್ಯಾತ ಪೀಠಾಧಿಪತಿಗಳಾದ ಶ್ರೀ ರಾಘವೇಂದ್ರ ತೀರ್ಥರಿಗೆ (೧೭ನೇ ಯತಿಗಳು) ಸರಗೂರು

ಸ್ಥಳದ ನಲ್ಲೂರು ಪ್ರತಿನಾಮ ದೇವರಾಜಪುರವನ್ನು ಶ್ರೀಮಠದ ದೇವಬ್ರಾಹ್ಮಣ ಸಂತರ್ಪಣೆಗೆ ಕ್ರಿ.ಶ. ೧೬೬೩ರಲ್ಲಿ ಕೊಡಮಾಡಿರುವುದಾಗಿ ತಾಮ್ರ ಶಾಸನದ ಉಲ್ಲೇಖವಿದೆ. ಚಿತ್ರದುರ್ಗ ಭರಮಣ್ಣ ನಾಯಕರ ಕಾಲದ ಒಂದು ಶಿಲಾಶಾಸನ ಈ ಪರಂಪರೆಯ ೨೦ನೇ ಪೀಠಾಧಿಪತಿಗಳಾದ ಸುಮತೀಂದ್ರ ತೀರ್ಥರಿಗೆ ಬಿದರಕೆರೆ ಹೋಬಳಿಯ ದ್ಯಾಮೇನಹಳ್ಳಿಯನ್ನು ಸರ್ವಮಾನ್ಯವಾಗಿ ಕ್ರಿ.ಶ.೧೭೧೧ರಲ್ಲಿ ಕೊಟ್ಟಿದ್ದನ್ನು ತಿಳಿಸುತ್ತದೆ. ಈ ಶಾಸನ ಇತ್ತೀಚೆಗಷ್ಟೆ ಚಿತ್ರದುರ್ಗದ ಸಂಶೋಧಕ ಡಾ.ಬಿ. ರಾಜಶೇಖರಪ್ಪ ಗುರುತಿಸಿ, ಪ್ರಕಟಿಸಿದ್ದಾರೆ.[೧]

ಈಗ ಲಭ್ಯವಿರುವ ವಿಜಯನಗರದ ಅರಸರು ಈ ಪರಂಪರಾ ಮಠಕ್ಕೆ ಬರೆಯಿಸಿ ಕೊಟ್ಟಿದ್ದೆನ್ನಲಾದ ಪ್ರಥಮ ಶಾಸನ ಕೃಷ್ಣದೇವರಾಯನು ಈ ಮಠದ ಪರಪಂಪರೆಯ ೧೧ನೇ ಪೀಠಾಧಿಪತಿಗಳಾದ ವಿಭುದೇಂದ್ರ ಶ್ರೀಪಾದರಿಗೆ ಶಕ ೧೪೧೨ನೇ ಸಾಧಾರಣ ಸಂವತ್ಸರದ ವೈಶಾಖದಲ್ಲಿ ಬರೆದು ಕೊಟ್ಟಿದ್ದಾಗಿ ತಿಳಿಸುತ್ತದೆ. ಕ್ರಿ.ಶ.೧೪೯೦ರ ಈ ಶಾಸನ ಕಳಿಂಗ ದೇಶದ ದೊರೆ ಪ್ರತಾಪರುದ್ರ ನಿಂದ ಉದಯಗಿರಿ ಕೋಟೆಯನ್ನು ಕೃಷ್ಣದೇವರಾಯ ಕೈವಶ ಮಾಡಿಕೊಂಡ ವಿಜಯದ ನೆನಪಿಗೆ ಶ್ರೀಮಠದ ದಿಗ್ವಿಜಯ ರಾಮದೇವರ ಪೂಜಾ ಕೈಂಕರ್ಯ, ನಂದಾದೀಪಕ್ಕೆ ಬೆಳೆದೊಣೆ ದೇಶದ ಚಿಕ್ಕಕೂಲಿ ಎಂಬ ಗ್ರಾಮವನ್ನು ದತ್ತಿ ಕೊಟ್ಟ ವಿಚಾರ ತಿಳಿಸುತ್ತದೆ. ಇತರೆ ದಾಖಲೆಗಳಲ್ಲಿ ಕೃಷ್ಣದೇವಾರಾಯ ಪಟ್ಟಕ್ಕೆ ಬಂದಿದ್ದು ಕ್ರಿ.ಶ.೧೫೦೯ರಲ್ಲಿ ಪ್ರತಾಪ ರುದ್ರನೊಂದಿಗೆ ಅವನು ಮಾಡಿದ ಯುದ್ಧ ೧೫೩೦ ಎಂದು ತಿಳಿಸಿದರೆ, ಈ ದಾನ ಪತ್ರ ಅದಕ್ಕೆ ಮುಂಚಿನ ೧೯ ವರ್ಷ ಹಿಂದಯೇ ಕೊಡಲ್ಪಟ್ಟಿತ್ತೆಂದು ತಿಳಿಸುತ್ತಿರುವುದು ಈ ಶಾಸನದ ಸತ್ಯತೆಯ ಬಗ್ಗೆ ಆನುಮಾನ ಉಂಟಾಗುತ್ತದೆ. ಈ ಶಾಸನ ಕೂಟಶಾಸನ ಇರಬಹುದೆಂದು ಸಂಶೋಧಕ ಆರ್.ನರಸಿಂಹಾಚಾರ್ ಅಭಿಪ್ರಾಯಪಟ್ಟಿದ್ದಾರೆ.

ಈ ಪರಂಪರಾ ಮಠದಲ್ಲಿ ೧೪ನೇ ಪೀಠಾಧಿಪತಿಗಳಾದ ಶ್ರೀ ಸುರೇಂದ್ರ ತೀರ್ಥರ ಕಾಲದಲ್ಲಿ ಅರವೀಟಿ ರಾಮರಾಜ (ಅರವೀಟಿ ಬುಕ್ಕನ ಮಗ) ೧೫.೪.೧೫೧೩ರಲ್ಲಿ ಮುದಗಲ್ ದೇಶದ ಆನೆಹೊಸೂರು, ಕೊಪ್ಪಳ ದೇಶದ ಲೇಪಗಿರಿ, ಗಂಗಾವತಿ ದೇಶದ ಸಿರುಗುಪ್ಪ, ಕಾಹ್ನಗಿರಿ ದೇಶದ ಮಲ್ಲಾಪುರ, ತೆಕ್ಕಲಕೋಟೆ ದೇಶದ ಹೀರೆಹಾಳು ಗ್ರಾಮಗಳನ್ನು ವಿಜಯವಿಠಲ ದೇವವಾಲಯದಲ್ಲಿ ರಾಮಭಿಷೇಕ ಸಮಯದಲ್ಲಿ ಮಠದ ದೇವರಿಗೆ ದಾನವಾಗಿ ಅರ್ಪಿಸಿದ್ದನ್ನು ನಂಜನಗೂಡು ಶಾಸನ-೧೧೩[೨] ತಿಳಿಸಿದರೆ. ಅದೇ ಕಾಲದಲ್ಲಿ ಇನ್ನೊಂದು ತಾಮ್ರ ಶಾಸನ ನಂಜನಗೂಡು-೧೧೪[೨] ಅದೇ ರಾಮರಾಜ ಅದೇ ಸುರೇಂದ್ರ ತೀರ್ಥರಿಗೆ ಲಕ್ಷ್ಮೇಶ್ವರ ದೇಶದ ತೊಳಲುಗ್ರಾಮ ಬಸವಾಪಟ್ಟಣ ದೇಶದ ಕುಮ್ಮಕಟ್ಟೆ, ರಟ್ಟಿಹಳ್ಳಿ ದೇಶದ ಚಿಕ್ಕಮೊರಲಿ ಗ್ರಾಮಗಳನ್ನು ಶ್ರೀ ಮಠದ ರಾಮದೇವರ ನಿತ್ಯ ಪೂಜಾ ಕಟ್ಟಲೆ, ಅನ್ನದಾನಕ್ಕಾಗಿ ದತ್ತಿ ಕೊಟ್ಟಿರುವುದನ್ನು ತಿಳಿಸುತ್ತದೆ. ಈ ಎರಡೂ ಶಾಸನಗಳ ಆರಂಭದಲ್ಲಿ ಅರವೀಡು ವಂಶ ವೃಕ್ಷವನ್ನು ವಿವರವಾಗಿ ನಮೂದಿಸಲಾಗಿದೆ. ಕರ್ನೂಲ ಜಿಲ್ಲೆಯ ಅರವೀಡು ಎಂಬ ಗ್ರಾಮದಿಂದ

ಬಂದ ಇವರು ತಮ್ಮ ಊರಿನ ಹೆಸರನ್ನು ವಂಶಕ್ಕೂ ಬೆಳೆಸಿದರು. ಈ ಶಾಸನ ಕಾಲದ ವಿಜಯನಗರ ಅರಸು ಕೃಷ್ಣದೇವರಾಯನ ಆಳ್ವಿಕೆಯಕಾಲದ್ದಾಗಿದ್ದು, ಅವನ ಸಾಮಂತ ರಾಗಿದ್ದು ಅರವೀಡು ಮನೆತನ ಶ್ರೀ ಮಠಕ್ಕೆ ಬರೆದು ಕೊಟ್ಟಿದ್ದಾಗಿದೆ ಎಂಬ ವಾದ ಒಂದು ಕಡೆಇದ್ದರೆ ಇವುಗಳೂ ಕೂಟ ಶಾಸನಗಳೆಂಬ ವಾದವೂ ಇದೆ.

ನಂಜನಗೂಡು-೧೧೧ನೇ[೪] ತಾಮ್ರ ಶಾಸನ ಶ್ರೀರಂಗರಾಯ ಈ ಮಠ ಪರಂಪರೆಯ ೧೬ನೇ ಯತಿಗಳಿಂದ ಶ್ರಿ ಸುಧೀಂದ್ರ ತೀರ್ಥರಿಗೆ ನಾವಲೂರು ಅಥವಾ ರಾಮಚಂದ್ರಪುರ ಎಂಬ ಗ್ರಾಮವನ್ನು ೧೪೯೧ನೇ ಯುವ ಸಂವತ್ಸರದ ಆಷಾಢ ಶುದ್ಧ ೧೨ (ದಿನಾಂಕ ೨೦.೬.೧೫೭೫) ದಾನವಾಗಿ ಕೊಟ್ಟ ವಿಚಾರ ತಿಳಿಸಿದೊರೆ, ನಂಜನಗೂಡ-೧೧೨ನೇ[೫] ತಾಮ್ರ ಶಾಸನ ಈ ಮಠದ ೧೪ನೇ ಯತಿಗಳಾದ ಸುರೇಂದ್ರ ತೀರ್ಥರಿಗೆ ಇದೇ ರಂಗರಾಯ ಬಚ್ಚನಾಳು, ಖ್ಯಾಡ, ಯಡವಾಳ, ಚಂಚಲ, ಅರಳೀಕಟ್ಟಿ ಎಂಬ ಪಂಚ ಗ್ರಾಮ ದಾನವಾಗಿ ಕೊಟ್ಟಿದ್ದು ಮೂಲ ಪತ್ರ ನಷ್ಟವಾದ ಕಾರಣ ಅವರ ಶಿಷ್ಯರಾದ ಸುಧೀಂದ್ರ ತೀರ್ಥರಿಗೆ ೨೮.೧.೧೫೭೬ರಲ್ಲಿ ಮರಳಿ ದಾನ ಪತ್ರ ಬರೆಯಿಸಿ ಕೊಟ್ಟಿರುವು ದನ್ನು ತಿಳಿಸುತ್ತದೆ.

ಈಗಿನ ದಾವಣಗೆರೆ ಜಿಲ್ಲಾ ಹೊನ್ನಾಳಿ ತಾಲೂಕಿನ ಸವಳಂಗ ಗ್ರಾಮದಲ್ಲಿ ದೊರೆ ತಿರುವ ಒಂದು ಶಿಲಾಶಾಸನ[೬] ಶ್ರೀ ಮನ್ಮಹಾಮಂಡೇಶ್ವರ ರಂಗದ ರಾಜಯನವರು ತಂಮ ತಂದೆ ವೆಂಕಟಾದ್ರಿ ರಾಜಯನವರ ಉತ್ತರ ಕ್ರಿಯೆ ಮಾಡುವಾಗಲು ತಂಮ ತಂದೆಗೆ ಪುಣ್ಯವಾಗಬೇಕೆಂದು ಆನೆಗೊಂದಿ ಮಠದ ವಿಜೇಂದ್ರ ಒಡೆಯರ ಮಠಕ್ಕೆ ಸವಳಂಗ ಗ್ರಾಮವನ್ನು ಶಕ ೧೪೮೩ನೇ ಪ್ರಜಾಪತಿ ಸಂವತ್ಸವರದ ವೈಶಾಖ ಬಹುಳ ೧೩ರಂದು (ದಿನಾಂಕ ೨೪ ನೇ ಮೇ ೧೫೭೧) ದಾನವಾಗಿ ಕೊಟ್ಟಿದ್ದನ್ನು ತಿಳಿಸುತ್ತದೆ. ಇಲ್ಲಿ ಉಲ್ಲೇಖ ಇರುವ ಆನೆಗೊಂದಿ ಮಠದ ವಿಜೇಂದ್ರ ಒಡೆಯರು ಶ್ರೀರಾಘವೇಂದ್ರ ಸ್ವಾಮಿಗಳವರ ಮಠದ ಪರಂಪರೆಯ ೧೫ನೆ ಯತಿಗಳಾಗಿದ್ದು, ದಾನಕೊಟ್ಟ ರಂಗ ರಾಜಯ್ಯನವರು ಯಾರೆಂಬ ಬಗ್ಗೆ ಇನ್ನು ಜಿಜ್ಞಾಸೆಯಿದ್ದು, ಬಹಶಃ ಅವರು ವಿಜಯನಗರ ಅರಸು ಶ್ರಿ ರಂಗರಾಯರೇ ಇರಬೇಕು. ಇದೇ ಸವಳಂಗ ಗ್ರಾಮದ ಇನ್ನೊಂದು ಶಾಸನ[೭] ಇದೇ ವಿಜಯೀಂದ್ರ ಒಡೆಯರಿಗೆ ಶುಭಮಸ್ತು ಎಂಬ ಬರಹ ಮಾತ್ರ ಇದ್ದು, ಇದೂ ಸಹ ವಿಜಯನಗರ ಅರಸರೇ ಹಾಕಿಸಿದ್ದರೆನ್ನುವುದರಲ್ಲಿ ಸಂಶಯವಿಲ್ಲ. ಈ ಶಾಸನ ತಪ್ಪಾಗಿ ಗುರುತಿಸಲಾಗಿದೆ. ಶಾಸನದಲ್ಲಿ ನಮೂದಿಸಿದ ಕಾಲ, ಆನೆಗೊಂದಿ ಮಠದ ಪ್ರಸ್ತಾಪ ಇರುವುದರಿಂದ ಈ ಶಾಸನಗಳೆರಡೂ ಶ್ರಿ ರಾಘವೇಂದ್ರ ಸ್ವಾಮಿಗಳ ಪರಮಗುರುಗಳಾದ ವಿಜಯೀಂದ್ರ ತೀರ್ಥರಿಗೆ ಸಂಬಂಧ ಪಟ್ಟದ್ದೆಂಬುದಾಗಿ ನಿರ್ಣಯಕ್ಕೆ ಬರಬಹುದಾಗಿದೆ. ಈ ವಿಜಯೀಂದ್ರ ತೀರ್ಥರು ಮೊದಲಿಗೆ ವಿಷ್ಣುತಿರ್ಥರೆಂಬ ಹೆಸರಿನಿಂದ ವ್ಯಾಸರಾಯರ ಸಾಕ್ಷಾತ್ ಶಿಷ್ಯರಾಗಿ ವಿಜಯ ನಗರದ ರಾಜಧಾನಿಯಲ್ಲೇ ವಿದ್ಯಾವ್ಯಾಸಂಗ ಮಾಡುತ್ತಿದ್ದುದಾಗಿ ಇತರೆ ದಾಖಲೆ ಗಳು ತಿಳಿಸುತ್ತವೆ. ರಾಘವೇದ್ರ ಮಠದ ೧೪ನೇ ಯತಿಗಳಾದ ಸುರೇಂದ್ರ ತೀರ್ಥರ

ಅಪೇಕ್ಷೆಯಂತೆ ವ್ಯಾಸರಾಯರು ತಮ್ಮ ಶಿಷ್ಯ ವಿಷ್ಣು ತೀರ್ಥರನ್ನು ರಾಘವೇಂದ್ರ ಸ್ವಾಮಿಗಳ ಮಠದ ಉತ್ತರಾಧಿಕಾರಿಯಾಗಿ ಕೊಡಲು ಒಪ್ಪಿದ ಕಾರಣ ಮುಂದೆ ಅವರು ವಿಜಯೀಂದ್ರ ತೀರ್ಥರೆಂಬಹೆಸರಿನಿಂದ ಈ ಪರಂಪರೆ ಮುಂದುವರೆಸಿದರು. ಇವರ ಸಾಕ್ಷಾತ್ ಶಿಷ್ಯರೇ ಸುಧೀಂದ್ರ ತೀರ್ಥರು. ಸುಧೀಂದ್ರ ತೀರ್ಥರು ರಾಘವೇಂದ್ರ ತೀರ್ಥರ ಸಾಕ್ಷಾತ್ ಗುರುಗಳು. ಸುಧೀಂದ್ರ ತೀರ್ಥರ ಬೃಂದಾವನ ಆನೆಗೊಂದಿಯ ನವವೃಂದಾವನ ನಡುಗಡ್ಡೆಯಲ್ಲಿದ್ದು, ಮೇಲ್ಕಾಂಡ ಶಾಸನ ಬರೆದ ಕಾಲಕ್ಕೆ ವಿಜಯೀಂದ್ರ ತೀರ್ಥರು ಆನೆಗೊಂದಿಯಲ್ಲಿಯೇ ನೆಲೆಸಿದ್ದಿರಬಹುದಾದ ಕಾರಣ ಅವರ ಮಠಕ್ಕೆ ಆನೆಗೊಂದಿ ಮಠ ಎಂದು ಉಲ್ಲೇಖಿಸಲಾಗಿದೆ. ಮುಂದೆ ಇದೇ ಮಂತ್ರಾಲಯ ರಾಘವೇಂದ್ರ ಸ್ವಾಮಿಗಳ ಮಠವೆಂದು ಕರೆಯಲ್ಪಟ್ಟಿದೆ.[೮]

ವಿಜಯನಗರ ಅರಸರ ಆಡಳಿತ ಕಾಲದಲ್ಲಿ ಪ್ರಾರಂಭವಾದ ದಾಸಪರಂಪರೆಗೆ ವ್ಯಾಸಕೂಟ ವೆಂದೂ ಕನ್ನಡ ಸಾಹಿತ್ಯದಲ್ಲಿ ಕರೆಯಲ್ಪಡುತ್ತಿದ್ದು, ಈ ವಿಜಯೀಂದ್ರ ತೀರ್ಥರು ಈ ವ್ಯಾಸಕೂಟದ ಸದಸ್ಯರಲ್ಲಿ ಒಬ್ಬರಾಗಿದ್ದಾರೆ. (ಉಡುಪಿ ವಾದಿರಾಜರು ಈ ವಿಜಯೀಂದ್ರ ತೀರ್ಥರ ಸಮಕಾಲೀನರು)

ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಕೈಫಿಯತ್ತು, ಮಠದ ಷಹಾಲಿಮಲ್ ಬರೆಹಗಳು, ಶ್ರೀ ಮಠದ ಗುರು ಚರಿತ್ರೆ ಇತ್ಯಾದಿ ಚಾರಿತ್ರಿಕ ದಾಖಲೆಗಳು ಶ್ರೀ ಮಠಕ್ಕೆ ವಿಜಯನಗರ ಸಂಸ್ಥಾನಾಧಿ ಪತಿಗಳಿಗೂ ಉತ್ತಮ ಬಾಂದವ್ಯ-ಸ್ನೇಹ-ಗುರು ಭಾವ ಇರುವುದನ್ನು ಪ್ರತಿಪಾದಿಸುತ್ತವೆ. ಸ್ವತಃ ವಿಜಯನಗರದ ಪ್ರಖ್ಯಾತ ದೊರೆ ಕೃಷ್ಣದೇವರಾಯ ಮಹಾರಾಯ ಶ್ರೀ ರಾಘವೇಂದ್ರ ಸ್ವಾಮಿಗಳ ತಂದೆ ತಿಮ್ಮಣ್ಣಭಟ್ಟರ ತಾತ ವೀಣಾಕೃಷ್ಣಚಾರ್ (ಶ್ರೀರಾಘವೇಂದ್ರ ಸ್ವಾಮಿಗಳ ಪೂರ್ವಾಶ್ರಮದ ಹೆಸರು ವೆಂಕಣ್ಣ, ಅವರ ತಂದೆ ತಿಮ್ಮಣ್ಣ, ಅವರ ತಂದೆ ಕನಕಚಲಭಟ್ಟರು, ಅವರ ತಂದೆ ಕೃಷ್ಣಚಾರ್) ರವರಿಂದ ವೀಣಾವಾದವನವನ್ನು ಕಲಿತಿರುವುದನ್ನು ತಿಳಿಸಿದರೆ, ಈ ಪರಂಪರೆಯ ವಿಭುದೇಂದ್ರ ತೀರ್ಥರು, ಸುರೇಂದ್ರ ತೀರ್ಥರು, ವಿಜಯೀಂದ್ರ ತೀರ್ಥರು, ಸುಧೀಂದ್ರ ತೀರ್ಥರು, ಸುರೇಂದ್ರ ತೀರ್ಥರು, ಈ ರಾಜವಂಶದ ಗೌರವಾದರಗಳಿಗೆ, ವಿಶೇಷ ಮನ್ನಣೆಗೆ ಪಾತ್ರರಾಗಿದ್ದನ್ನು ತಿಳಿಸುತ್ತದೆ. ಇದಕ್ಕೆಲ್ಲಾ ಮುಖ್ಯ ಕಾರಣ ಈ ಪೀಠ ಪರಂಪರೆಯ ಹೆಚ್ಚಿನ ಶ್ರೀಪಾದರು ಹಂಪೆಯ ಸಾಮ್ರಾಜ್ಯದ ಪರಿಸರದಲ್ಲಿಯೇ ಮಠಕಟ್ಟಿಕೊಂಡು ವಾಸಮಾಡುತ್ತಿದ್ದ ಕಾರಣವಾಗಿದೆ.

ಹಂಪೆಯ ಸಮೀಪದ ತುಂಗಭದ್ರಾ ನದಿಯ ಎಡದಂಡೆಯಲ್ಲಿರುವ ಆನೆಗೊಂದಿ ನಡುಗಡ್ಡಯಲ್ಲಿರುವ ನವವೃಂದಾವನದಲ್ಲಿ ಈಗಲೂ ಅಲ್ಲಿರುವ ಬೃಂದಾವನಗಳ ಬಗ್ಗೆ ಒಂದು ಚರಮಶ್ಲೋಕವನ್ನು ಅಲ್ಲಿನ ಅರ್ಚಕರು ದಿನನಿತ್ಯ ತಮ್ಮ ಪೂಜಾ ಕಾಲದಲ್ಲಿ ಪಠಿಸುತ್ತಿದ್ದು, ಅದು ಈ ತೀತಿ ಇದೆ. ಪದ್ಮನಾಭಂ, ಕವೀಂದ್ರಚ ವಾಗೀಶಂ ವ್ಯಾಸರಾಜಕಂ ॥ ರಾಘುವರ್ಯಂ ಸುಧೀಂದ್ರಂಚ, ಶ್ರೀನಿವಾಸ ತಪೋನಿಧೆ, ರಾಮತೀರ್ಥಂಚ ಗೋವಿಂದ, ನವವೃಂದಾವನಂ ಭಜೆ ॥

ಈ ಶ್ಲೋಕ ಪಠಿಸಿ ಶಕ್ತ್ಯಾನುಸಾರ ಈ ಬೃಂದಾವನಗಳಿಗೆ ಪ್ರದಕ್ಷಿಣೆ ನಮಸ್ಕಾರ ಮಾಡಿದರೆ ಬದರಿ ಯಾತ್ರ ಮಾಡಿದ ಫಲವೂ ದೊರೆಯುತ್ತದೆಂಬ ನಂಬಿಕೆ ಮಾಧ್ವರಲ್ಲಿದೆ. ಇಲ್ಲಿ ಇರುವ ನವ ಬೃಂದಾವನಗಳಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಗುರುಪರಂಪರೆಯಂತೆ ನಾಲ್ಕುಜನ ಯತಿಗಳ ಬೃಂದಾವನಗಳು ಈ ಆನೆಗೊಂದಿಯ ಈ ನಡುಗಡ್ಡೆಯಲ್ಲಿಯೇ ಇವೆ. ಇದಲ್ಲದೆ ಈ ಗುರು ಪರಂಪರೆಯ ನರಹರಿ ತೀರ್ಥ (ಚಕ್ರತೀರ್ಥ) ರಘುನಂದನರ ಬೃಂದಾವನ (ಪಂಪಾಕ್ಷೇತ್ರ) ಇರುವುದು ವಿಜಯನಗರ ಸಾಮ್ರಾಜ್ಯಕ್ಕೂ - ಈ ಗುರು ಪೀಠಕ್ಕೂ ಇರುವ ಸಂಪರ್ಕವನ್ನು ಬಲಗೊಳಿಸುತ್ತದೆ. ಪ್ರಾಚೀನ ವೃಂದಾವನಗಳು ಮತ್ತು ಇದರಂಥಹ ಇನ್ನಿತರ ಸ್ಮಾರಕಗಳು ಶಿಲಾಶಾಸನ ಮತ್ತು ಗ್ರಂಥಗಳಷ್ಟೇ ಮಹತ್ವದ ದಾಖಲೆಗಳಾಗಿವೆ. ವಿಜಯನಗರ ಸಾಮ್ರಾಜ್ಯದ ಉಚ್ಛ್ರಾಯ ಕಾಲದಿಂದ ಸಾಮ್ರಾಜ್ಯದ ಅಳಿವಿನವರೆಗೂ, ಸಾಮ್ರಾಜ್ಯದೊಂದಿಗೆ ನಿಕಟ ಸಂಪರ್ಕ ಇಟ್ಟುಕೊಂಡಿದ್ದ ಈ ಮಠಾಧಿಪತಿಗಳು ಅವರ ಅಪಾಯದ ಸನ್ನಿವೇಶಗಳಲ್ಲೂ ಜನರಲ್ಲಿ ಜಾಗೃತಿ ಮೂಡಿಸುವಲ್ಲಿ, ರಾಜರಷ್ಟೇ ಪ್ರಯತ್ನಶೀಲರಾಗಿದ್ದುದಾಗಿ ಅವರು ರಚಿಸಿದ ವಾಙ್ಮಯಗಳು, ದಾಖಲೆಗಳು ತಿಳಿಸುತ್ತಿದ್ದು ವಿಜಯನಗರೋತ್ತರವೂ ಅವರ ಸಾಂಸ್ಕೃತಿಕ, ಧಾರ್ಮಿಕ ನೀತಿ ಮುಂದುವರೆಯಲು ಕಾರಣ ಕರ್ತರಾಗಿದ್ದಾರೆ.



ನವವೃಂದಾವನ, ಆನೆಗೊಂದಿ

ಪರಾಮರ್ಶನ ಗ್ರಂಥಗಳು

೧. ಮೈಸೂರು ಪ್ರಾಚ್ಯವಸ್ತು ಇಲಾಖೆಯ ವಾರ್ಷಿಕ ವರದಿ ೧೯೪೪
೨. ಕರ್ನಾಟಕ ಶಾಸನ ಸಂಪುಟ (ರೈಸ್) ಶಿವಮೊಗ್ಗ ಭಾಗ-೧, ಸಂಪುಟ ೭ (೧೯೦೨)
೩. ಕರ್ನಾಟಕ ಶಾಸನ ಸಂಪುಟ, ಪರಿಷ್ಕೃತ ಮೈಸೂರು (ಸಂಪುಟ-೩) ೧೯೭೪
೪. ಕರ್ನಾಟಕ ಶಾಸನ ಸಂಪುಟ, ಮೈಸೂರು ವಿಶ್ವವಿದ್ಯಾಲಯ (ಅನುಬಂಧ) ಡಾ. ಎಂ.ಶೇಷಾದ್ರಿ ಸಂ ೭-೮ (೧೯೭೦)
೫. ಕಲಿಯುಗದ ಕಲ್ಪತರು, ರಾಜಾ.ಎಸ್.ಗುರುರಾಜಾಚಾರ್ ೧೯೯೪
೬. ಗುರುಚರಿತೆ, ಡಾ.ಹುರಿಕೆ ವೇದವ್ಯಾಸಾಚಾರ್.
೭. ಶ್ರೀರಾಘವೇಂದ್ರ ಸ್ವಾಮಿಗಳ ಮಠದ 'ಷಹಾ-ಅಮಲ್' ಬರೆಹಗಳು
೮. ಮಂಚಾಲೆ ಕೈಫಿ ಯತ್ತು ಮತ್ತು ಶ್ರೀಗುರುಸಾರ್ವಭೌಮ ಮಾಸಪತ್ರಿಕೆ ಸೆಪ್ಟಂಬರ್ ೨೦೦೪.
೯. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ (೧೯೭೯) ಮೈಸೂರು ವಿಶ್ವವಿದ್ಯಾಲಯ ಮೈಸೂರು,
೧೦. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ ಸಂ ೮೧, ಸಂಚಿಕೆ-೧.
೧೧. ಸಂಗಮರ ಕಾಲದ ವಿಜಯನಗರ .ಸಂ.ಜಿ.ಎಸ್. ದೀಕ್ಷಿತ್ (೧೯೯೧)
೧೨. ವಿಜಯನಗರ ಅಧ್ಯಯನ ಸಂ-೭ (೨೦೦೩)
೧೩. ಶ್ರೀರಾಘವೇಂದ್ರ ಸ್ವಾಮಿಗಳು-ಕೊರಟಿ ಶ್ರೀನಿವಾಸರಾವ್ (೨೦೦೩)
೧೪. ಶ್ರೀ ವ್ಯಾಸರಾಜ ಸಂಪುಟ-ಡಾ. ಅರಳುಮಲ್ಲಿಗೆ ಪಾರ್ಥಸಾರಥಿ (೧೯೯೮)
೧೫. An Indian ephemerics, Swamy Kanna Pillai
೧೬. ಶ್ರೀ ರಾಘವೇಂದ್ರದರ್ಶನ-ಡಾ.ವ್ಯಾಸನಕೆರೆ ಪ್ರಭಂಜನಾಚಾರ್ಯ.

ಅಡಿ ಟಿಪ್ಪಣಿ

೧. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ ಸಂಪುಟ ೮೧, ಸಂಚಿಕೆ ೧
೨. ಕರ್ನಾಟಕ ಶಾಸನ ಸಂಪುಟ. ಮೈಸೂರು ವಿಶ್ವವಿದ್ಯಾಲಯ, ಮೈಸೂರು ಸಂಪುಟ-೩.
೩. ಅದೇ.
೪. ಅದೇ.
೫. ಅದೇ.
೬. ಕರ್ನಾಟಕ ಶಾಸನ ಸಂಪುಟ (ರೈಸ್) ಶಿವಮೊಗ್ಗ ಸಂಪುಟ-೭
೭. ಅದೇ

೩೬. ವಿಜಯನಗರ ಸಾಮ್ರಾಜ್ಯದ ಮಹಾನವಮಿ ಉತ್ಸವ

ಶ್ರೀಮತಿ ಯಶೋದ ರಾಜಶೇಖರಪ್ಪ

೧೩೩೬ ರ ಸುಮಾರಿಗೆ ಸ್ಥಾಪಿವಾಯಿತೆಂದು ಹೇಳಲಾಗುವ ವಿಜಯನಗರ ಸಾಮ್ರಾಜ್ಯವು ಭಾರತೀಯ ಅಥವಾ ಹಿಂದೂ ಸಂಸ್ಕೃತಿಯ ಪುನರುಜ್ಜೀವನಕ್ಕಾಗಿ ಹುಟ್ಟಿಕೊಂಡಿತೆಂದು ಹೇಳುವುದಾದರೆ ಅದರ ವಿಸ್ತರಣೆಯ ಸ್ವರೂಪವೇ ವಿಜಯ ನಗರದ ವೈಭವದ ಉತ್ಸವಗಳಲ್ಲಿ ಪ್ರಮುಖವಾದ ಮಹಾನವಮಿ ಉತ್ಸವ. ೧೦ ದಿನಗಳ ವಿಶೇಷ ಹಬ್ಬ.

ಒಂದು ನಾಡಿನ ಶ್ರೀಮಂತ ಪರಂಪರೆಯನ್ನು ಇನ್ನಷ್ಟು ಶ್ರೀಮಂತಗೊಳಿಸುವ ಹಾಗು ಅದನ್ನು ಜನರ ಬಳಿಗೆ ಒಯ್ಯುವ ನಿಟ್ಟಿನಲ್ಲಿ ನಾಡಿನ ಉತ್ಸವಗಳಿಗೆ ಪ್ರಮುಖ ಸ್ಥಾನವಿದೆ. ಅತ್ಯಂತ ನಯನ ಮನೋಹರವಾದದ್ದು ಪ್ರಪಂಚ ಪ್ರಸಿದ್ಧವಾದದ್ದು ಎಂದು ಕರೆಯಲ್ಪಡುವ ಮೈಸೂರಿನ ದಸರಾ ಉತ್ಸವದ ಹತ್ತು ಪಟ್ಟು ಹೆಚ್ಚು ವೈಭವವನ್ನು ಹೊಂದಿದ್ದಾಗಿತ್ತು. ವಿಜಯನಗರದವರು ನಡೆಸುತ್ತಿದ್ದ ಈ ಮಹಾನವಮಿ ಉತ್ಸವ ಆ ವಿಜಯನಗರದ ಮಾಂಡಲಿಕರಾದ ಮೈಸೂರಿನ ಅರಸರು ಅದನ್ನು ಕನ್ನಡಿಗರ ಶ್ರೀಮಂತ ಪರಂಪರೆಯ ಪ್ರಜ್ಞೆಯ ಅವಿಭಾಜ್ಯ ಅಂಗದಂತೆ ದಸರಾ ಆಗಿ ನಂತರದಲ್ಲಿ ಮುಂದುವರಿಸಿಕೊಂಡು ಬಂದರು.

ಮಹಾನವಮಿ ಉತ್ಸವ ಆರಂಭವಾದ ಬಗ್ಗೆ ಯಾವ ವಿವರಗಳು ಇಲ್ಲ. ಆದರೆ ನವಮಿ ದಿಬ್ಬ ಅಥವಾ ವಿಜಯಗೃಹ ಎಂದು ಕರೆಯಲ್ಪಡುತ್ತಿದ್ದ ಕಟ್ಟಡವು ರಚನೆಯಾದ ಬಗ್ಗೆ ಪಯಾಸ್ ಒಂದೆಡೆ "ವಿಜಯನಗರದ ಅರಸರು ಒರಿಸ್ಸ ವಿರುದ್ಧ ಜಯವನ್ನು ಪಡೆದು ಹಿಂದಿರುಗಿದಾಗ ವಿಜಯೋತ್ಸವದ ನೆನಪಿಗೆ ಈ ಕಟ್ಟಡ ಕಟ್ಟಿರಬೇಕು ಎನ್ನುತ್ತಾನೆ. ನ್ಯುನಿಜ್ ಅಭಿಪ್ರಾಯ ಪಡುವಂತೆ ಹರಿಹರನ ತಮ್ಮ ಬುಕ್ಕರಾಯನ ೩೭ ವರ್ಷಗಳ ಆಳ್ವಿಕೆಯಲ್ಲಿ ಒರಿಸ್ಸಾ ಸೇರಿದಂತೆ ದಕ್ಷಿಣದ ವಿವಿಧ ರಾಜ್ಯಗಳನ್ನು ಗೆದ್ದುಕೊಂಡದ್ದು, ಮುಸ್ಲಿಂ ರಾಜರ ಕ್ರೂರದಬ್ಬಾಳಿಕೆಯಿಂದ ನೊಂದಿದ್ದ ಜನರಿಗೆ ಸಾಂತ್ವನ ಮತ್ತು ಬಿಡುಗಡೆ ದೊರೆತಂತಾಗಿ ಆ ಗೆಲುವನ್ನು ಒಂದು ಉತ್ಸವದಂತೆ ನಡೆಸಿಕೊಂಡು ಬಂದಿರಬಹುದು ಎನ್ನುತ್ತಾನೆ. ಅದೇನೆ ಇರಲಿ, ಆ ಮಹಾನವಮಿ ಉತ್ಸವ ಕೇವಲ ಒಂದು ಉತ್ಸವವಷ್ಟೇ ಆಗದೆ ಹೊರದೇಶಗಳಲ್ಲಿ ವಿಜಯನಗರ ಸಾಮ್ರಾಜದ ಅತ್ಯುನ್ನತ ಸಂಸ್ಕೃತಿಯ, ಕಲೆಯ, ಶ್ರಿಮಂತಿಕೆಯ, ವೈಭವದ ಶಕ್ತಿ ಸಾಕ್ಷಿಯಾಗಿ ಪ್ರಪಂಚದಾದ್ಯಂತ ಪ್ರಸಿದ್ಧಿ ಹೊಂದಿದ್ದು ಸತ್ಯ. ಅಷ್ಟೇ ಅಲ್ಲದೆ ಅದು ಸಾಮ್ರಾಜ್ಯವ

ಒಳಗಿನವರ ರಾಜರ ಪ್ರತಿಷ್ಠೆ, ವೈಭವ ಶ್ರೀಮಂತಿಕೆ, ಕ್ರೀಡೆಗಳ, ಕಲಾಸ್ಪರ್ಧೆಗಳ ಒರೆಗಲ್ಲೂ ಆಗಿತ್ತು ಎಂಬುದೂ ನಿಜ. ಇವೆಲ್ಲಕ್ಕಿಂತ ಮಿಗಿಲಾಗಿ ವಿಜಯನಗರ ಸಾಮ್ರಾಜ್ಯ ಭೌತಿಕವಾಗಿ ನಾಶವಾದರೂ ಒಂದು ಪರಂಪರೆಯ ಪ್ರಜ್ಞಾ ಪ್ರವಾಹ ಚೈತನ್ಯವಾಗಿ ಇಂದು ನಮ್ಮೆಲ್ಲರ ನೆನಪಿನಲ್ಲಿ ಉಳಿಯಲು ಕಾರಣವಾಗಿದೆ. ಅದೇ ಹಂಪೆಯ ಉತ್ಸವ ಎಂಬುದರಲ್ಲಿ ಎರಡು ಮಾತಿಲ್ಲ.

ಮಹಾನವಮಿ ನಡೆಯುತ್ತಿದ್ದ ರೀತಿಯನ್ನು ಕಣ್ಣಾರೆ ಕಂಡ ವಿದೇಶೀಯರು ಅತ್ಯಂತ ರೋಚಕವಾಗಿ ದೇಶೀಯರಿಗಿಂತ ಮಿಗಿಲಾಗಿ ವರ್ಣಿಸಿದ್ದಾರೆ. ಇಲ್ಲಿ ಅಬ್ದುಲ್ ರಜಾಕ್ ಮತ್ತು ಡೊಮಿಂಗೋ ಪಯಾಸ್ ಮುಂತಾದವರು ಅತ್ಯಂತ ವಿಸ್ತಾರವಾಗಿ ನಿರೂಪಿಸಿದ್ದಾರೆ.

ಸೆಪ್ಟೆಂಬರ್ ತಿಂಗಳ ಅಥವಾ ಅಶ್ವಯುಜ ತಿಂಗಳ ಅಮಾವಸ್ಯೆಯ ನಂತರ ದಿಂದ ೧೦ ದಿನಗಳ ಕಾಲ ನಡೆಯುವ ಉತ್ಸವಕ್ಕಾಗಿ ವಿಶೇಷವಾಗಿ ತಾತ್ಕಾಲಿಕ ವೇದಿಕೆಗಳು ಸಿದ್ಧವಾಗುತ್ತಿದ್ದವು. ಅವೆಲ್ಲವು ಎತ್ತರವಾದ ಕಲ್ಲಿನ ಗೋಡೆಯನ್ನು ಅವರಿಸಿಕೊಂಡು ಎರಡು ದ್ವಾರಗಳನ್ನು ದಾಟಿದ ಮೇಲೆ ಅರಮನೆಯ ಮುಂದಿನ ವಿಶಾಲವಾದ ಬಯಲು ಸ್ಥಳದಲ್ಲಿರುವ ಮಹಾನವಮಿ ದಿಬ್ಬದ ಮೇಲೆ ಇರುವ ವಿಜಯಗೃಹದ ವೇದಿಕೆಯ ಮೇಲೆ ನಡೆಯುತ್ತಿದ್ದವು. ಅದು ಅತ್ಯಂತ ವೈಭವದಿಂದ ಸಿಂಗರಿಸಿಕೊಂಡು ಸಿದ್ಧವಾಗುತ್ತಿತ್ತು. ನವಮಿದಿಬ್ಬ ಆ ಗೃಹದ ಅಕ್ಕಪಕ್ಕದ ಮೊಗಸಾಲೆಗಳಲ್ಲಿ ದಳವಾಯಿಗಳು, ರಾಜ ಪ್ರಮುಖರು, ಮಾಂಡಲೀಕರು, ಉತ್ಸವ ನೋಡುವಂತೆ ವ್ಯವಸ್ಥೆ ಮಾಡಲಾಗುತ್ತಿತ್ತು. ಆ ವಿಜಯಗೃಹವು ವಿಶಾಲವಾಗಿದ್ದು ಆನೆ ಮುಂತಾದ ಪ್ರಾಣಿಗಳ ಚಿತ್ರಗಳನ್ನೊಳಗೊಂಡ ತಳಪಾಯವಿದ್ದು ಅನೇಕ ಮೆಟ್ಟಲುಗಳನ್ನು ಒಳಗೊಂಡು ಅರಮನೆಯ ಎದುರಿಗೆ ತೆರೆಯುವ ದ್ವಾರವನ್ನು ಹೊಂದಿತ್ತು. ವಿಜಯ ಗೃಹದ ಬಲಬದಿಗೆ ಕೆಲವು ತಾತ್ಕಾಲಿಕ ಅಟ್ಟಣೆಗಳನ್ನು ಕಟ್ಟಿದ್ದು ಅವುಗಳನ್ನು ಕೆಂಪು, ಹಸಿರು ಮಖಮಲ್ ಬಟ್ಟೆಯಿಂದ ಮುಚ್ಚಲಾಗಿದ್ದು ಕೆಳಗಿನಿಂದ ಮೇಲಿನವರೆಗೂ ಅಲಂಕರಿಸುತ್ತಿದ್ದರು. ಆ ತರಹದ ೧೧ ಅಟ್ಟಳಿಗೆಗಳೂ ಇರುತ್ತಿದ್ದವು. ಅವುಗಳನ್ನು ವಜ್ರಾಭರಣಗಳಿಂದ ಅಲಂಕೃತಗೊಳಿಸುತ್ತಿದ್ದರು. ರಾಜನು ವಿಜಯ ಗೃಹದ ಮೇಲ್ಭಾಗದಲ್ಲಿ ಅತ್ಯಂತ ವೈಭವದಿಂದ ಅಲಂಕೃತ ವೇದಿಕೆಯ ಮೇಲೆ ತನ್ನ ಆತ್ಮೀಯರು ಪ್ರೀತಿಪಾತ್ರರೂ, ತೀರ ಹತ್ತಿರದ ಸಂಬಂಧಿಕರು, ಇವರ ಜೊತೆಯಲ್ಲಿ ಕೂತು ಉತ್ಸವವನ್ನು ನೋಡುತ್ತಿದ್ದನು.

ಆ ವಿಜಯ ಗೃಹದಲ್ಲಿ ದೇವತಾ ಗೃಹವೊಂದು ಇದ್ದು ಅಲ್ಲಿ ಬಹಶಃ ಆದಿಶಕ್ತಿ ವಿಗ್ರಹವಿದ್ದಿರಬೇಕು. ಅಲ್ಲಿಯೇ ಇನ್ನೊಂದು ಜಗುಲಿಯ ಮೇಲೆ ರಾಜನ ಬಂಗಾರ, ವಜ್ರ, ಮುತ್ತುಗಳಿಂದ ಅಲಂಕೃತವಾದ ಮುಂದೆ ಬಂಗಾರದ ಎರಡು ಸಿಂಹಗಳಿರುವ ಸಿಂಹಾಸನವಿರುತ್ತಿತ್ತು. ಅದಕ್ಕೆ ಹೊದಿಸಿರುವ ರೇಷ್ಮೆ ಬಟ್ಟೆಯೂ ಬಂಗಾರದ ಜರಿ ಮುತ್ತಿನ ಹೆಗೆಯಿಂದ ಕೂಡಿರುತ್ತಿತ್ತು. ಆ ಸಿಂಹಾಸನದ ಮೇಲೆ ಬಂಗಾರದ ಒಂದು ಮೂರ್ತಿಯನ್ನು ಕೂರಿಸಿರುತ್ತಾರೆ. ಸಿಂಹಾಸನದ ಪಕ್ಕದ ಒಂದು ಪೀಠದ ಮೇಲೆ

ಒಂದು ಗೇಣಿನಷ್ಟು ಎತ್ತರದ ಮುತ್ತು ರತ್ನ ಹವಳಗಳಿಂದ ಅಲಂಕೃತವಾದ ರಾಜರು ಧರಿಸುವ ತಲೆಯುಡಿಗೆ ಇಡುತ್ತಾರೆ. ಅದರ ಪಕ್ಕದಲ್ಲಿ ಒಂದು ಕಾಯಿಯಷ್ಟುದಪ್ಪನೆಯ ದೊಡ್ಡದಾರ ಮುತ್ತು ಇದೆ. ಅದರ ಪಕ್ಕದಲ್ಲಿ ಮನುಷ್ಯನ ತೋಳಿನಷ್ಟು ದಪ್ಪದ ಬಂಗಾರದ ಮುತ್ತು ರತ್ನ ವಜ್ರಗಳು ಸೇರಿಸಲ್ಪಟ್ಟ ಕಡಗಗಳಿವೆ. ಅವೆಲ್ಲವೂ ಅಷ್ಟ ದಿನಗಳು ರಾಜರತ್ನಗಳೆಂದು ನವಮಿ ಮುಗಿಯುವವರೆಗೂ ಪ್ರದರ್ಶನಕ್ಕಿಡುತ್ತಿದ್ದವು. ರಾಜನು ಅಲ್ಲಿಯೇ ಸುಂದರವಾಗಿ ಅಲಂಕರಿಸಿರುವ ಪೀಠದ ದಿಂಬುಗಳಿಗೆ ಆತು ಕೂತು ಮುಂದೆ ಪ್ರತಿ ದಿನ ನಡೆಯುವ ಉತ್ಸವ ಕಾರ್ಯಗಳನ್ನು ವೀಕ್ಷಿಸುತ್ತಿದ್ದ.

ಉತ್ಸವ ಕಾರ್ಯಗಳು ಬೆಳಗಿನಿಂದಲೇ ಆರಂಭವಾಗುತ್ತಿದ್ದವು. ಸ್ನಾನಾದಿ ಕಾರ್ಯ ಗಳನ್ನು ಮುಗಿಸಿದ ರಾಜ, ವಿಜಯಗೃಹದ ಮೇಲಿದ್ದ ದೇವಾಲಯದಲ್ಲಿ ದೇವತೆಯನ್ನು ಬ್ರಾಹ್ಮಣರ ಸಹಕಾರದಿಂದ ಪೂಜಿಸುತ್ತಾನೆ. ಆ ಸಂದರ್ಭದಲ್ಲಿ ಗೃಹದ ಹೊರಭಾಗ ದಲ್ಲಿ ರಾಜನ ಹತ್ತಿರದವರು ದಳವಾಯಿಗಳು ಅವರ ಪ್ರಮುಖರು ಸಂಬಂಧಿಗಳು ಇರುತ್ತಿದ್ದರು.

ಜಗುಲಿ ಬದಿಗಳಲ್ಲಿ ನರ್ತಕಿಯರು ನರ್ತಿಸುತ್ತಿದ್ದರು. ಜಗುಲಿಯ ಹತ್ತಿರ ಅಲಂಕೃತಗೊಂಡ ೧೧ ಕುದುರೆಗಳು ನಾಲ್ಕು ಅಲಂಕೃತ ಆನೆಗಳು ಇದ್ದು ಪೂಜೆ ಮುಗಿಸಿದ ನಂತರ ರಾಜ ಅವುಗಳ ಮೇಲೆ ಪವಿತ್ರ ನೀರನ್ನು ಗುಲಾಬಿ ಹೂಗಳಿಂದ ಸಿಂಪಡಿಸುತ್ತಿದ್ದನು. ನಂತರ ಅದೇ ಹೂಗಳಿಂದ ಆಲಂಕೃತವಾಗುತ್ತಿದ್ದವು. ಆನಂತರ ರಾಜ ಸುಗಂಧಿತ ದ್ರವ್ಯಗಳಿಂದ ಹೋಮವನ್ನು ಮಾಡಿ ನಂತರ ದೇವಾಲಯಕ್ಕೆ ಬಂದು ಪೀಠದ ಮೇಲೆ ಆಸೀನ ನಾಗುವನು. ಆ ದೇವಾಲಯದ ಇನ್ನೊಂದು ಪ್ರವೇಶ ದ್ವಾರದಿಂದ, ದಳವಾಯಿ ಗಳು, ಮನ್ನೆಯರು ಪ್ರಮುಖರು ಬಂದು ಸಲಾಮು ಮಾಡುವುದಲ್ಲದೆ ಅನೇಕ ಬೆಲೆಬಾಳುವ ಕಾಣಿಕೆಗಳನ್ನು ಸಮರ್ಪಿಸುತ್ತಿದ್ದರು. ನಂತರ ಬಂದ ರೀತಿಯಲ್ಲೇ ಹಿಂದೆ ಹಿಂದೆ ಸರಿಯುತ್ತಾ ಅಲ್ಲಿಂದ ಹೋಗುತ್ತಿದ್ದರು. ನಂತರ ವಾರಾಂಗನೆಯರು ನರ್ತಿಸುತ್ತಿದ್ದಂತೆಯೇ ರಾಜನು ಅರಮನೆಗೆ ತೆರಳುತ್ತಿದ್ದನು.

ಮಧ್ಯಹ್ನ ಮೂರು ಗಂಟೆಗೆ ಮತ್ತೆಕಾರ್ಯಕ್ರಮ ಆರಂಭ ವಾಗುತ್ತಿತ್ತು. ರಕ್ಷಣಾ ಭಟರು ಈಟಿ ಡಾಲು, ಚಾವಟಿ, ಬೆತ್ತಗಳನ್ನು ಹಿಡಿದು ತಮ್ಮ ಸ್ಥಾನಗಳಲ್ಲಿ ನಿಂತು ರಕ್ಷಣಾಕಾರ್ಯ ಆರಂಭಿಸುತ್ತಿದ್ದರು. ರಾಜನು ಕುಳಿತು ಕೊಳ್ಳುವ ಕಟ್ಟಡದ ಸುತ್ತಬಹಳ ಭದ್ರವಾದ ಕಾವಲು ಇದ್ದು ರಾಜನ ಬಳಿ ಅವರ ತೀರ ಹತ್ತಿರದ ಸಂಬಂಧಿಗಳು ಪ್ರಿಯರು ಆತ್ಮೀಯರು ಕುಳಿತಿರುತ್ತಿದ್ದರು. ಅಲ್ಲಿರುವ ಅಧಿಕಾರಿಗಳು ಶಿಸ್ತನ್ನು ಕಾಪಾ ಡುತ್ತಾ ಅಡ್ಡಾಡುತ್ತಿದ್ದರು. ಇದೆಲ್ಲ ವ್ಯವಸ್ಥೆ ಆದ ಮೇಲೆ ರಾಜನ ಆಗಮನವಾಗು ತ್ತಿತ್ತು. ಸಮಾರಂಭದ ಎಲ್ಲಾ ಕಾರ್ಯಗಳಲ್ಲೂ ರಾಜನು ಶುಭ್ರವಾದ ಬಿಳಿಯಜರಿಯ ಚಿನ್ನ ಮುತ್ತು ರತ್ನಗಳಿಂದ ಹೆಣೆದ ರೇಷ್ಮೆಯ ವಸ್ತ್ರಗಳನ್ನೇ ಧರಿಸಿರುತ್ತಿದ್ದನು. ವಜ್ರನವರತ್ನ ಖಚಿತವಾದ ಕಂಠಾಭರಣಗಳನ್ನು ಮುತ್ತಿನ ಸರಗಳನ್ನು ಧರಿಸಿರುತ್ತಿದ್ದನು.

ರಾಜಖಡ್ಗವನ್ನು ಲಾಂಛನಗಳನ್ನು ಹಿಡಿದು ಕೆಲವರು ನಿಂತಿರುತ್ತಿದ್ದರು. ಕೆಲವರು ಸ್ತ್ರೀಯರು ದೇವರಿಗೆ ಮತ್ತು ರಾಜನಿಗೆ ಚಾಮರ ಚೌರಿಗಳಿಂದ ಗಾಳಿ ಬೀಸುತ್ತಿದ್ದರು.

ಅನೇಕ ಮನ್ನೆಯರು ಸೇನಾಧಿಪತಿಗಳು ದಳವಾಯಿಗಳು, ನಿಧಾನವಾಗಿ ಒಬ್ಬೊಬ್ಬರಾಗಿಯೇ ಬಂದು ಆಸನದಲ್ಲಿ ಕುಳಿತು ಕೊಳ್ಳುತ್ತಿದ್ದರು. ಇವರ ತರುವಾಯ ಬಿಲ್ಲು ಬಾಣಧಾರಿಗಳು, ಬೇಡನಾಯಕರು ಬಂದು ನಯವಾಗಿ ರಾಜನಿಗೆ ಸ್ವಲ್ಪ ದೂರದಲ್ಲಿ ನೆಲದ ಮೇಲೆ ಕುಳಿತು ಕೊಳ್ಳುತ್ತಾರೆ. ಅವರು ರಾಜನ ಅಂಗರಕ್ಷಕರಿದ್ದಂತೆ ಆಯುಧವಿರುವ ಯಾರೂ ಹತ್ತಿರ ಬರದಂತೆ ಕಾಯುತ್ತಿದ್ದರು. ನಂತರ ನರ್ತಕಿಯರು ಬಂದು ನೃತ್ಯ ಮಾಡಲಾರಂಭಿಸುತ್ತಿದ್ದರು. ರಜಾಕ್‌ನು ಆ ನರ್ತಕಿಯರ ಒಡವೆಗಳ ಅಗಾಧತೆಯನ್ನು ಕಂಡು ಅಶ್ಚರ್ಯ ಪಡುತ್ತಾನೆ. ನವರತ್ನ ಖಚಿತ ಕಂಠಾಭರಣಗಳು ರಟ್ಟೆ ಕೈಯ ತುಂಬ ಬಳೆಗಳು ಟೊಂಕಕ್ಕೆ ಕಮಾನಿನ ಮುತ್ತಿನ ಗೊಂಚಲು ಗಳಿಂದ ಇಳಿಬಿದ್ದ ಬಂಗಾರದ ಡಾಬು ಇರುತ್ತಿತ್ತು. ಹಲವುಮುತ್ತಿನ ಸರಗಳನ್ನು ಹಾಕಿಕೊಳುತ್ತಿದ್ದರು. ಅತ್ಯಂತ ಬೆಲೆಬಾಳುವ ರೇಷ್ಮೆ ಸೀರೆಗಳನ್ನು ಧರಿಸುತ್ತಿದ್ದರು. ಅವರು ತೊಟ್ಟಿದ್ದ ಆಭರಣಗಳ ಬೆಲೆಯನ್ನು ಆಸ್ತಿ ಮನೆ ಹೊಲಗಳ ಬೆಲೆಯನ್ನು ಲೆಕ್ಕ ಮಾಡಲು ಅಸಾಧ್ಯ. ಇವರಿಗಿರುವ ದಾಸಿಯರೂ ಅಷ್ಟೇ ಸಂಖ್ಯೆಯಲ್ಲಿದ್ದಾರೆ. ಶ್ರೀಮಂತೆಯರೂ ಆಗಿದ್ದಾರೆ. ಇವೆಲ್ಲವನ್ನು ಅವರು ಮಾಂಡಲಿಕರೂ, ವ್ಯಾಪಾರಿಗಳು ಶ್ರೀಮಂತರನ್ನು ತೃಪ್ತಿಪಡಿಸಿ ಪಡೆಯುತ್ತಾರೆ ಎನ್ನುತ್ತಾರೆ ಪಯಾಸ್.

ನರ್ತನದ ನಂತರ ಕುಸ್ತಿ ಪಟುಗಳ ಕುಸ್ತಿ ಸ್ಪರ್ಧೆ ಆರಂಭವಾಗುತ್ತದೆ. ಅತ್ಯಂತ ರಭಸದಲ್ಲಿ ಮುಖ ನೋಡದೆ ಚುಚ್ಚುತ್ತಿದ್ದರು. ಹೊಸ ಹೊಸ ಕುಸ್ತಿಪಟುಗಳ ಶೋಧವೂ ಆಗಿ ಗೆದ್ದವರನ್ನು ಸತ್ಕರಿಸುತ್ತಿದ್ದರು. ಇವರಿಗೆ ಹಾಗೂ ನರ್ತಕಿಯರಿಗೆ ರಾಜನ ಎದುರಿನಲ್ಲಿ ಸ್ವಲ್ಪ ವಿಶೇಷ ಸ್ವಾತಂತ್ರ್ಯ ಇರುತ್ತಿತ್ತು. ರಾಜ ಎದುರಿನಲ್ಲಿ ಕೂರುವ ಎಲೆ ಅಡಿಕೆ ಹಾಕಿಕೊಳ್ಳುವ ಸ್ವಾತಂತ್ರ್ಯ ಇತ್ತು. ಇದಿಷ್ಟು ನಡೆಯುವ ಹೊತ್ತಿಗೆ ಕತ್ತಲೆಯಾಗುತ್ತಿತ್ತು. ಆಗ ಎಲ್ಲೆಲ್ಲೂ ಹಲಾಲುಗಳನ್ನು ಪುಂಜುಗಳನ್ನ ಹೊತ್ತಿಸಿ ಹಗಲೇನೋ ಎನ್ನುವಷ್ಟು ಮಟ್ಟಿಗೆ ಬೆಳಕು ಮಾಡುತ್ತಿದ್ದರು. ಉತ್ಸವಕ್ಕೆ ಮೆರುಗು ಎನಿಸುತ್ತಿತ್ತು. ಆ ಬೆಳಕಿನಲ್ಲಿ ಚಿತ್ತಾಕರ್ಷಕ ಆಟಗಳನ್ನು ಕೌಶಲ್ಯಗಳನ್ನು ಆಡಿಸುತ್ತಿದ್ದರು. ಜಾದುಗಾರರು ಮಾಂತ್ರಿಕರು ಸಾಹಸಿಗಳು, ವಿಧ ವಿಧದ, ಕೌಶ್ಯಲ್ಯಗಳನ್ನು ತೋರುತ್ತಿದ್ದರು, ದೇಶದ ವಿವಿದೆಡೆಯಿಂದ ಪ್ರದರ್ಶನ ತೋರಿಸಲೆಂದೇ ಕಲಾವಿದರು ಬಂದಿರುತ್ತಿದ್ದರು. ಆನಂತರ ಕುದುರೆ ಸವಾರ ಕುದುರೆಗಳ ಆಟ, ಕೌಶಲ್ಯಗಳು ಸೆರೆಹಿಡಿಯುವ ಆಣಕು ಪ್ರದರ್ಶನಗಳನ್ನು ನೀಡುತ್ತಿದ್ದರು. ಇದಾದ ಮೇಲೆ ರಾಜನಿಗೆ, ಮಂತ್ರಿಗಳಿಗೆ, ಮಾಂಡಲಿಕರಿಗೆ ಸೇರಿದ ಆನೆಗಳು ಬಂದು ರಾಜನಿಗೆ ವಿವಿಧ ಭಂಗಿಗಳಲ್ಲಿ ನಮಸ್ಕರಿಸುವುದು ನಡೆಯುತ್ತವೆ. ನಂತರ ಕುದುರೆ ಸವಾರರು ಪರೇಡು ಮಾಡುತ್ತಾ ರಾಜನಿಗೆ ವಂದನೆಗಳನ್ನು ಅರ್ಪಿಸಿ ೪೦-೫೦ ಸಾಲುಗಳವರೆಗೆ ದೂರ ಹೋಗಿ ನಿಲ್ಲುತ್ತವೆ. ಆನಂತರ ೨೦-೨೫ ಜನ ಸುಂದರಿಯರು ಬೆಳ್ಳಿ ಬೆತ್ತವನ್ನು ಕೈಯಲ್ಲಿ

ಹಿಡಿದು ಹೆಗಲ ಮೇಲೆ ಬಾರು ಕೋಲನ್ನು ಹಾಕಿಕೊಂಡು ಸಭಾಂಗಣವನ್ನು ಪ್ರವೇಶಿಸುತ್ತಾರೆ. ಅವರ ಹಿಂದೆ ಶಿಖಂಡಿಯರು, ಅವರ ನಂತರ ಅನೇಕ ಹಾಡು ಗಾರ್ತಿಯರು ತುತ್ತೂರಿ, ಪಿಟೀಲು, ಮದ್ದಲೆ ಕೊಳಲು ಮುಂತಾದ ವಾದ್ಯಗಳನ್ನು ನುಡಿಸುತ್ತಾ ಬರುತ್ತಾರೆ. ಅವರ ಹಿಂದೆ ಮತ್ತೆ ಬೆಳ್ಳಿ ಬೆತ್ತ ಹಿಡಿದು ಸುಂದರಿಯರು ಬರುತ್ತಾರೆ. ಅವರ ಹಿಂದೆ ೧೬ ರಿಂದ ೨೪ ವಯಸ್ಸಿನ ಅತ್ಯಂತ ಸುಂದರಿಯರು ಅತ್ಯಂತ ಬೆಲೆ ಬಾಳುವ ಮುತ್ತು ರತ್ನಾಭಾರಣಗಳನ್ನು ಧರಿಸಿದಂತಹ ಸ್ತ್ರೀಯರು ಬರುತ್ತಾರೆ. ಕೊರಳಲ್ಲಿ ಕೈಯಲ್ಲಿ ಸೊಂಟಗಳಲ್ಲಿ ಕಾಲುಗಳಲ್ಲಿ ಅನೇಕ ವಿವಿಧ ಮುತ್ತು ರತ್ನ, ಪಚ್ಚೆ, ವಜ್ರ ಖಚಿತವಾದ ಆಭರಣಗಳನ್ನು ಧರಿಸಿ ನಡೆಯಲೂ ಕಷ್ಟವಾಗುವಷ್ಟು ಬಂಗಾರವನ್ನು ಧರಿಸಿ ಬಂಗಾರದಿಂದ ಮುಚ್ಚಿದ ಹಾಗೆ ಕಾಣುತ್ತಿದ್ದರು. ತಮ್ಮ ಕೈಯಲ್ಲಿ ಚಿಕ್ಕ ಚಿಕ್ಕ ಬಂಗಾರದ ಬಿಂದಿಗೆಯನ್ನು ತಂದಿದ್ದು ಅದರೊಳಗೆ ಮೇಣದಿಂದ ಅಂಟಿಸಲಾದ ಮುತ್ತಿನ ಬಳ್ಳಿಗಳಿದ್ದು ಇದೆಲ್ಲದರ ನಡುವೆ ಉರಿಯುವ ದೀಪವಿಟ್ಟು ಕೊಂಡು ರಾಜನಿಗೂ ಅವನ ಪರಿವಾದವರಿಗೂ ಆನೆಗಳಿಗೂ ಕುದುರೆಗಳಿಗೂ ಆರತಿ ಮಾಡುತ್ತಿದ್ದರು. ಇವರೆಲ್ಲ ರಾಣಿಯ ದಾಸಿಯರಿದ್ದು ಒಂದೊಂದುದಿನ ಒಬ್ಬೊಬ್ಬ ರಾಣಿಯರ ದಾಸಿಯರಿಂದ ಈ ಕಾರ್ಯಕ್ರಮ ನಡೆಯುತ್ತಿತ್ತು. ಇದು ರಾಣಿಯರ ಶ್ರೀಮಂತಿಕೆಯ ವೈಭವದ ಪ್ರದರ್ಶನವೂ ಆಗಿರುತ್ತಿತ್ತು. ಅವರು ಎಷ್ಟು ಆಭರಣ ಗಳನ್ನು ಹಾಕಿಕೊಳ್ಳುತ್ತಿದ್ದರೆಂದರೆ ಅವರನ್ನು ನಡೆಸಿಕೊಂಡು ಬರುವ ಸಹಾಯಕಿಯರಿರು ತ್ತಿದ್ದರು. ರಾಣಿಯರ ದಾಸಿಯರೇ ಹೀಗಿರುವಾಗ ಆಯಾ ರಾಣಿಯರು ಹೇಗಿರಬೇಕು ಎಂದು ಜನರಲ್ಲಿ ಕುತೂಹಲ ಮೂಡುತ್ತಿತ್ತು.

ಇಂಥಹ ಪ್ರದರ್ಶನಗಳು ಪ್ರತಿದಿನವು ಬೇರೆ ಬೇರೆ ಮಾಂಡಲಿಕರ ಮನ್ನೆಯರ, ರಾಣಿಯರ ಶ್ರಿಮಂತಿಕೆಯಸಾಹಸದ ಕ್ರೀಡೆಗಳ, ಕಲೆಗಳ ಪ್ರದರ್ಶನವಿರುತ್ತಿತ್ತು. ಕೊನೆಯ ದಿನ ಇವೆಲ್ಲದರೊಡನೆ ದೇವಿಗೆ ನೂರಾರು ಕುರಿ,ಕೋಣಗಳ ಬಲಿಯೊಂದಿಗೆ ಉತ್ಸವ ಮುಗಿಯುತ್ತಿತ್ತು.

ವಜ್ರ, ವೈಡ್ಯೂರ್ಯ, ಪಚ್ಚೆ, ಪುಷ್ಯರಾಗ, ಬಂಗಾರ ಮುತ್ತು, ರತ್ನಗಳು ಆಭರಣಗಳು ರಾಶಿ ರಾಶಿಯಾಗಿರುತ್ತಿದ್ದವು. ದಕ್ಷಿಣ ಹಿಂದೂಸ್ತಾನದ ಸ್ತ್ರೀಯರು, ಸರದಾರರ ಸಿರಿವಂತ ಪತ್ನಿಯರು, ರಾಣಿಯರೂ, ವೇಶ್ಯಾಸ್ತ್ರೀಯರು ನವರಾತ್ರಿ ದೀಪಾವಳಿ ಮೊದಲಾದ ಸಮಾರಂಭಗಳಲ್ಲಿ ಬೀದಿಗಳಲ್ಲಿ ಓಡಾಡುವ ವರ್ಣನೆಯನ್ನು ನೋಡಿದರೆ ಇಷ್ಟು ಸಂಪತ್ತಿದ್ದಿತೇ ಎಂದು ಆಶ್ಚರ್ಯವಾಗುತ್ತದೆ ಎಂದು ಪಯಾಸ್ ಬರೆಯುತ್ತಾನೆ. ವಜ್ರಗಳನ್ನು ಮುತ್ತುಗಳನ್ನು ರಾಶಿ ರಾಶಿಯಾಗಿ ಅಳೆದು ಮಾರುತ್ತಿದ್ದ ರೆಂದು ನ್ಯೂನಿಜ್‌ನು ಬಣ್ಣಿಸುತ್ತಾನೆ. ವಿಜಯನಗರವು ನಿರ್ನಾಮವಾದ ಮೇಲೆ ಬರದಾಸ್ ಎಂಬುವನು ಹೀಗೆ ಹೇಳುತ್ತಾನೆ. ಅಲ್ಲಿ ಏನೂ ಉಳಿಯದಂತೆ ಮುಸ್ಲಿಮರು ಸರ್ವಸ್ವವನ್ನೂ ಸುಲಿಗೆ ಮಾಡಿ ಪ್ರಶಸ್ತವಾಗಿ ಬಳಿದುಕೊಂಡು ಹೋಗಿದ್ದರು. ಆದರೂ ನಾನು ೧೬೧೪ರಲ್ಲಿ ಚಂದ್ರಗಿರಿಗೆ ಹೋದಾಗ ರಾಜನ ಖಜಾನೆಯಲ್ಲಿ ವಜ್ರ ವೈಡ್ಯೂರ

ಮೊದಲಾದ ಸರ್ವವಿಧದ ಹರಳುಕಲ್ಲನ್ನು ತುಂಬಿದ ಅತಿದೊಡ್ಡ ಮೂರು ಪಟ್ಟಿಗೆಗಳನ್ನು ನೋಡಿದೆ ಎನ್ನುತ್ತಾನೆ.

ಉತ್ಸವವೊಂದು ಕೇವಲ ಉತ್ಸವವಾಗಿರದೆ ಅದು ಏನೆಲ್ಲ ಅಂಶಗಳಿಗೆ ಕಾರಣವಾಯಿತೆಂಬುದನ್ನು ಈ ಕೆಳಗಿನ ಅಂಶಗಳಲ್ಲಿ ಗುರುತಿಸಬಹುದು.

೧. ಈ ಮಹಾನವಮಿ ಉತ್ಸವ ವಿಜಯನಗರದ ಸಾಮ್ರಾಜ್ಯದ ಶ್ರೀಮಂತಿಕೆ, ವೈಭವ, ಶಕ್ತಿ ಪೂರ್ಣ ದರ್ಶನದ ಸಾಕ್ಷಿಯಾಗಿ ಪ್ರಪಂಚಕ್ಕೆ ಕಾಣಿಸಿಕೊಂಡಿತು.

೨. ಅವರ ಈ ಉತ್ಸವದ ರಂಜನೆಗಳು ಕಣ್ಣು ಕುಕ್ಕುವ ಶ್ರೀಮಂತಿಕೆಯ ಪ್ರದರ್ಶನ; ವೇದಿಕೆಗಳ ಅಲಂಕಾರ ಪ್ರದರ್ಶಿಸುವ ಕ್ರೀಡೆ ಆಟಗಳು ದೇಶ ವಿದೇಶ ಜನರನ್ನು ಆಕರ್ಷಿಸಿದ್ದವು. ಅದರಿಂದಾಗಿ ಪ್ರವಾಸೋದ್ಯಮ ವ್ಯಾಪಾರ ವಾಣಿಜ್ಯಗಳಿಗೆ ಉತ್ತೇಜನ ದೊರಕಿತು.

೩. ನಾಡಿನ ರಾಜನಿಗೆ ಒಳಗಿನ ಮಾಂಡಲಿಕರಿಗೂ, ರಾಣಿಯರಿಗೂ ಪ್ರಾಂತ ಪ್ಪಾಲಕರಿಗೂ ತಮ್ಮ ತಮ್ಮ ಶಕ್ತಿ, ಸಾಮರ್ಥ್ಯ, ಶ್ರೀಮಂತಿಕೆಯನ್ನು ಪ್ರದರ್ಶಿಸುವ ವೇದಿಕೆಯನ್ನು ಪ್ರದರ್ಶಿಸುವ ವೇದಿಕೆಯಾಯಿತು.

೪. ಕುಸ್ತಿ, ಇಂದ್ರಜಾಲ, ನೃತ್ಯ, ಸಂಗೀತ, ಕ್ರೀಡೆ ಸ್ಪರ್ಧೆಗಳು ನಡೆಯುತ್ತಿದ್ದು ಅದು ಅವರ ಪ್ರತಿಭೆಗೆ ಒರೆಗಲ್ಲಾಗಿ ಅನೇಕ ಪ್ರತಿಭಾವಂತರ ಪ್ರತಿಭೆ ಹೊರಹೊಮ್ಮಲು ಸಾಧ್ಯವಾಯಿತು. ಅಷ್ಟೇ ಅಲ್ಲದೆ ತೀರ ಕೆಳವರ್ಗದ ವೀರ ಪರಾಕ್ರಮಗಳನ್ನು ಗುರುತಿಸಿ ಅಂಥವರಿಗೆ ಜಹಗೀರನ್ನು ಅನೆ, ಕುದುರೆ, ಭೂಮಿ ಛತ್ರ ಚಾಮರಗಳನ್ನು ಕೊಟ್ಟು ಹೊಸದಾಗಿ ಸಂಸ್ಥಾನಗಳನ್ನು ಅವರಿಗೆ ಅಧೀನರಾಗಿ ಕಟ್ಟುವಂತೆ ಮಾಡಿದರು.

೫. ಈ ಉತ್ಸವಕ್ಕೆ ಎಲ್ಲಾ ಅಧೀನ ರಾಜರೂ ಮಾಂಡಲೀಕರು ಪ್ರಾಂತ್ಯಪಾಲಕರೂ ಬಂದು ಭಾಗವಹಿಸಿ ಕಪ್ಪ ಕಾಣಿಕೆಗಳನ್ನು ಮರ್ಯಾದೆಯನ್ನು ಸಲ್ಲಿಸಿ ಆ ವರ್ಷದ ಪೂರ್ಣ ಲೆಕ್ಕ ಒಪ್ಪಿಸುತ್ತಿದ್ದರು. ಅವರಿಗೆ ಯೋಗ್ಯ ಸ್ಥಾನ ಮಾನ ಮರ್ಯಾದೆ ಸಲ್ಲಿಸಲಾಗುತ್ತಿತ್ತು. ವಿಶೇಷ ಸೇವೆ ಮಾಡಿದವರಿಗೆ ಸನ್ಮಾನ ಪ್ರಶಸ್ತಿ ನೀಡುತ್ತಿದ್ದರು.

೬. ಇದು ವಿಶೇಷವಾಗಿ ರಾಣಿಯರ, ನರ್ತಕಿಯರ, ವೇಶ್ಯೆಯರ ಶ್ರಿಮಂತಿಕೆ, ಸೌಂದರ್ಯದ ಪ್ರದರ್ಶನವೂ ಆಗಿತ್ತು. ಹಾಗಾಗಿ ವೇಶ್ಯಸ್ತ್ರೀಯರಲ್ಲಿ ವಿಪರೀತ ಹಣ ಒಡವೆ ಸಂಗ್ರಹವಾಗಲು ಕಾರಣಯಿತು.

೭. ಇಷ್ಟಲ್ಲದೆ ಆನೆ, ಕುದುರೆ, ವಜ್ರ, ವೈಡೂರ್ಯ ಭಾರತೀಯರ ಬಟ್ಟೆ ಇನ್ನಿತರ ಆನೇಕ ವಸ್ತುಗಳ ಆಮದು ರಫ್ತುಗಳು ವ್ಯಾಪಾರ ಅಬಿವೃದ್ದಿ ಹೆಚ್ಚಿಸಲು ಕಾರಣ ವಾಯಿತು.

೮. ಇವೆಲ್ಲ ಮುಗಿದ ನಂತರ ರಾಜನು ತನಗೆ ಬೇಕಾದ ಮಾಂಡಲೀಕರನ್ನು ಮಂತ್ರಿಗಳನ್ನು ಆತ್ಮೀಯರನ್ನು ಸೇರಿಸಿ ಆಪ್ತಮಂತ್ರಾಲೋಚನೆ ಮಾಡುತ್ತಿದ್ದನು. ಆ ಸಂದರ್ಭದಲ್ಲಿ ರಕ್ಷಣಾ ವ್ಯವಸ್ಥೆ ಅದರ ನ್ಯೂನತೆಗಳು, ಆಪಾಯಕಾರಿ ಶತ್ರುಗಳ

ದಮನ ತಂತ್ರಗಳು ರಾಜ್ಯ ವಿಸ್ತರಣಾ ತಂತ್ರಗಳು, ದೇಶದ ಅಭಿವೃದ್ಧಿಯ ಯೋಜನೆಗಳು ವಿಧಿಸಬೇಕಾದ ಕಂದಾಯಗಳು ಇವುಗಳ ಬಗ್ಗೆ ಚರ್ಚಿಸಿ ಸಲಹೆ ಸೂಚನೆಗಳನ್ನು ಸ್ವೀಕರಿಸುತ್ತಿದ್ದನು.

ನಾವೀಗ ಕನಸಿನಲ್ಲೂ ಕಂಡರಿಯದ ಅಷ್ಟೊಂದು ವೈಭವ ಶ್ರೀಮಂತಿಕೆಯಿಂದ ಸಾಮ್ರಾಜ್ಯವೊಂದು ನಾಶವಾಗಿದ್ದೂ ಕೂಡಾ ಅದೇ ಕಾರಣದಿಂದಲೇ ಇರಬೇಕು. ಕಣ್ಣುಕುಕ್ಕುವಂತಹ ಶ್ರೀಮಂತಿಕೆಯ ಬಗ್ಗೆ ಕೇಳಿದ್ದ ಲೂಟಿಕಾರರು, ದರೋಡೆಕಾರರು, ಬುಡಕಟ್ಟಿನ ಕೆಲಜನರು, ಮುಸ್ಲಿಂ ದೊರೆಗಳು, ವಿಜಯನಗರದ ಪತನಾನಂತರ ಕೆಲಜನರು, ಮುಸ್ಲಿಂ ದೊರೆಗಳು, ರಕ್ಷಕರಿಲ್ಲದ ನಾಡನ್ನು ಹಲವು ಬಾರಿ ಲೂಟಿ ಮಾಡಿದರು. ನಾವು ಕಾಲಕ್ಕೆ ಶರಣಾಗಲೇ ಬೇಕು.

೩೭. ಹಂಪಿಯ ತೀರ್ಥಗಳು

ಡಾ.ಕೆ.ರವೀಂದ್ರನಾಥ್

ಹಂಪಿಯ ತೀರ್ಥಗಳನ್ನು ಕುರಿತು ವಿಶೇಷವಾಗಿ ಹರಿಹರನ ಶ್ರೀಪಂಪಾ ಕ್ಷೇತ್ರರಗಳೆ ಮತ್ತು ಲಕ್ಕಣ್ಣದಂಡೇಶನ ಶಿವತತ್ವ ಚಿಂತಾಮಣಿ ಹಾಗೂ ಹೊಳಗುಂದಿ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ಬರೆದ ಶ್ರೀ ಪಂಪಾಮಾಹಾತ್ಮ್ಯೆ ಕೃತಿಗಳು ಉಲ್ಲೇಖಿಸುತ್ತವೆ. ಇವುಗಳ ಜೊತೆಗೆ ಹಂಪಿಯ ಹನ್ನೊಂದು ಶಾಸನಗಳಲ್ಲಿ ತೀರ್ಥಗಳ ಪ್ರಸ್ತಾಪ ಕಂಡುಬರುತ್ತದೆ. ಈ ಎಲ್ಲ ಆಕರಸಾಮಗ್ರಿಗಳನ್ನು ಬಳಸಿಕೊಂಡು ಹಂಪಿಯ ತೀರ್ಥ ಗಳನ್ನು ಅಧ್ಯಯನ ಮಾಡುವುದು ಈ ಲೇಖನದ ಉದ್ದೇಶ. ಇದರಿಂದ ಹಂಪಿಯ ಭೌಗೋಳಿಕ ಸ್ವರೂಪದ ಪರಿಚಯವನ್ನು ತಿಳಿಸುವ ಹಲವು ಕುರುಹುಗಳಾದ ಲಿಂಗಮುದ್ರೆಕಲ್ಲು, ಶಿವಲಿಂಗಗಳು, ದೇವಾಲಯಗಳು, ಗಿರಿಪರ್ವತಗಳ ಸಾಲಿನಲ್ಲಿ ಇಲ್ಲಿಯ ತೀರ್ಥಗಳು ಪ್ರಮುಖ ಆಕರಗಳಾಗಿ ನಿಲ್ಲುತ್ತವೆ.

"ತೀರ್ಥ" ಎಂಬುದಕ್ಕೆ ನಿಘಂಟು ಮೂಲದ ಅರ್ಥ ಪವಿತ್ರವಾದ ಜಲ.ಕೊಳ, ಸ್ನಾನಘಟ್ಟ, ಕೂಪ, ಅಭಿಷೇಕ ಮಾಡಿದ ಪವಿತ್ರವಾದ ನೀರು ಎಂಬಿತ್ಯಾದಿ ಅರ್ಥಗಳಿವೆ. ಭೂಮಿಯ ಮೇಲೆ ಕೆಲವು ಪ್ರದೇಶಗಳು ಪವಿತ್ರವಾಗಿರುತ್ತವೆಂಬ ಭಾವನೆಯಿಂದ ಸ್ಥಳಪುರಾಣ ಮಹಾತ್ಮ್ಯೆಗಳು ಹುಟ್ಟಿಕೊಂಡಿರುತ್ತವೆ. ಈ ಭೂಭಾಗಗಳ ಪ್ರಭಾವದಿಂದ ಅಲ್ಲಿಯ ನೀರು ತೇಜಸ್ಸಿನಿಂದ ಕೂಡಿರುತ್ತದೆಂಬ ಕಾರಣವಾಗಿ ಅವು ಗಳನ್ನು ಪುಣ್ಯತಮ ತೀರ್ಥಗಳೆಂದು ಪರಿಗ್ರಹಿಸುತ್ತಾ ಬಂದಿರುವುದನ್ನು ಕಾಣುತ್ತೇವೆ.

ವಾಯುಪುರಾಣ ಮತ್ತು ಪದ್ಮಪುರಾಣಗಳಲ್ಲಿ ಭೂಮಂಡಲದಲ್ಲಿರುವ ತೀರ್ಥಗಳ ವಿವರವೆಂದು ಹೇಳಿ ಅಯೋಧ್ಯ, ಮಧುರ, ಕಾಶೀ, ಕಾಂಚಿ, ಅವಂತಿಕಾ, ಹಂಪಿ ಇತ್ಯಾದಿ ತೀರ್ಥ ಕ್ಷೇತ್ರಗಳ ಹೆಸರುಗಳನ್ನು ತಿಳಿಸುತ್ತವೆ. ಈ ಕಾರಣಕ್ಕಾಗಿಯೇ ಕ್ರಿ.ಶ. ೧೧೯೯ರ ವಿರೂಪಾಕ್ಷದೇವಾಲಯದ ಉತ್ತರಕ್ಕಿರುವ ದುರ್ಗಾ ದೇವಾಲಯದ ಶಾಸನದಲ್ಲಿ

"...... ನಾಡೋಳ್ಪಂಪಾತೀರ್ಥ ಮಿಪ್ಪುದೆನ್ತೆನೆ ॥ ವಿಲಸದ್ಗಂಗಾನದಿಯಿಂ ಹಲವುಂ

ತೀರ್ಥಗಳಿಂ........" "....... ರಾಜ್ಯಂಗೆಯ್ಯುತ್ತ ಮಿರ್ದ್ದವರೋಳ್ ವಿರೂಪಾಕ್ಷ ತೀರ್ಥ

ರಕ್ಷಣಾರ್ತ್ಥಂ ಸಾಮನ್ತಮಾದೆಯ ನಾಯಕಂ ಮತಂಗ ಪರ್ವತಮಂ ಪ್ರೇಪಾಳಿಸುತ್ತ ಮಿರೆ"[೧]

ಎಂಬ ಉಲ್ಲೇಖವಿದೆ.

ಅದೇ ರೀತಿ ಜೈನ ಪ್ರಾರ್ಥನ ಮಂದಿರದ ಮಲಗು ಬಸವಣ್ಣ ದೇವಾಲಯದ ಉತ್ತರ ದಿಕ್ಕಿನ ಬಂಡೆಯ ಮೇಲೆ ಕಾಲ ನಿರ್ದೇಶನವಿಲ್ಲದ ತೃಟಿತ ಶಾಸನವು "ಶ್ರೀ ಮೈಲಾರ ದೇವರ ತೀರ್ಥ[೨] ಎಂದು ಉಲ್ಲೇಖಿಸಿದರೆ, ಅದೇ ಸ್ಥಳದ ೯೧ ಹಾಗೂ ೯೨ ನಂಬರಿನ ಶಾಸನಗಳು ಅನುಕ್ರಮವಾಗಿ" "ಶ್ರೀಮಾಲ್ಯವಂತ ತೀರ್ಥ,[೩] ಸಾಲಿಗ್ರಾಮ ತೀರ್ಥ[೪]" ಎಂದು ಹೆಸರಿಸುತ್ತವೆ.

ಪ್ರಸ್ತುತ ಶಾಸನೋಕ್ತ ತೀರ್ಥಗಳನ್ನು ಗಮನಿಸಿದಾಗ ಅಲ್ಲಿಯ ಕ್ಷೇತ್ರಾಧಿಪತಿಗಳು ಆವರಣ ವಾತಾವರಣಗಳಿಂದ ಆಯಾ ಹೆಸರುಗಳಿಂದಲೇ ತೀರ್ಥಗಳು ಪ್ರಸಿದ್ಧಿ ಹೊಂದಿರುವುದನ್ನು ಗಮನಿಸಿಬೇಕು.

ರತ್ನಗಿರಿ ಬೆಟ್ಟದ ಜೈನ ಮಂದಿರದ ಪಶ್ಚಿಮ ಕೊಳದ ಸಮೀಪದಲ್ಲಿರುವ ಕಾಲ ನಿರ್ದೇಶನವಿಲ್ಲದ ಶಾಸನವು "ಶ್ರೀ ಪಾಪ ವಿನಾಶಿಯ ತೀರ್ಥದ ಸೇವೆ ಹೆಗ್ಗಡತಿ ಉಮಾದೇವಿಯರ ಧರ್ಮ"[೫] ಎಂದು ಉಲ್ಲೇಖಿಸುವುದರಿಂದ ಈ ತೀರ್ಥವನ್ನು ಹೆಗ್ಗಡತಿ ಉಮಾದೇವಿ ಜೀರ್ಣೋದ್ಧಾರ ಮಾಡಿಸಿದಂತೆ ತೋರುತ್ತದೆ. ಚಕ್ರತೀರ್ಥದ ಬಂಡೆಯ ಮೇಲ್ಭಾಗ ಗಣೇಶ ದೇವಾಲಯದ ದಕ್ಷಿಣ ಭಾಗದ ಶಾಸನಗಳು "ಶ್ರೀಪೂಜಾಧನ ತೀರ್ಥ"[೬] ಎಂತಲೂ ಹೆಸರಿಸುತ್ತದೆ. ವಿಠಲ ದೇವಾಲಯಕ್ಕೆ ಹೋಗುವ ದಾರಿಯಲ್ಲಿ ನದಿ ದಂಡೆಯ ನರಸಿಂಹ ದೇವಾಲಯದ ದಕ್ಷಿಣ ದಿಕ್ಕಿನಲ್ಲಿ ಬಂಡೆಯ ಮೇಲಿನ ಶಾಸನ "ಭವನಾಶಿ ತೀರ್ಥ ಶ್ರೀ"[೭] ಎಂತಲೂ ಚಕ್ರತೀರ್ಥದ ಸಮೀಪದ ಗಣೇಶದೇವಾಲಯದ ದಕ್ಷಿಣ ಭಾಗದ ಶಾಸನಗಳು "ಶ್ರೀ ರುಣವಿಮೋಚನಾ ತೀರ್ಥ"[೮] ಹಾಗೂ "ಶ್ರೀ ಚಕ್ರತೀರ್ಥ"[೯] ಗಳನ್ನು ಹೆಸರಿಸುತ್ತವೆ. ಮಾಲ್ಯವಂತ ರಘುನಾಥ ದೇವಾಲಯದ ಹತ್ತಿರದ ಗುಂಡಿನ ಮೇಲಿನ ಶಾಸನ ಎಂಬ ಉಲ್ಲೇಖವನ್ನು ಕೊಡಲಾಗಿದೆ. ಆದರೆ ಇದು ತಪ್ಪಾಗಿ ದಾಖಲಾಗಿದೆ. ಇದಕ್ಕೆ ಬದಲಾಗಿ ಪಾಪವಿನಾಶಿ, ಶ್ರೀ ಭವನಾಶಿ, ಶ್ರೀ ಋಣ ವಿಮೋಚನಾ ಇತ್ಯಾದಿಗಳಂತೆ ಇದರ ನಿಜವಾಮ ಶ್ರೀ ಮುಕ್ತಿ ಋಣ ನಿರ್ಮಲ ತೀರ್ಥ ಆಗಿರುವುದನ್ನು ಗಮನಿಸಬಹುದು.

ಕ್ರಿ.ಶ. ೧೫೫೬ ರಲ್ಲಿ ಬರೆದ ಕೋದಂಡರಾಮ ದೇವಾಲಯದ ಹಿಂದುಗಡೆಯ ವಿಷ್ಣು ದೇವಾಲಯದ ಶಾಸನ ತೆಲುಗು ಲಿಪಿ, ಸಂಸ್ಕೃತ ಹಾಗೂ ತೆಲುಗು ಭಾಷೆಯಲ್ಲಿ ಬರೆಯಲಾಗಿದೆ. ಸದಾಶಿವರಾಯನ ಆಳ್ವಿಕೆಯಲ್ಲಿ ಅಪ್ಪಿಶೆಟ್ಟಿಯ ಮೊಮ್ಮಗನೂ, ಪಾಪಿ ಶೆಟ್ಟಿ ಹಾಗು ಪಾಚಮ್ಮನ ಮಗನೂ ಆದ ತಿರುಮಳ ಶೆಟ್ಟಿಯ ಸೇವೆಯನ್ನು ಈ ಶಾಸನ ವರ್ಣಿಸುತ್ತದೆ. ವಿಶೇಷವಾಗಿ ತುಂಗಾಭದ್ರ ತೀರದ ಚಕ್ರತೀರ್ಥದಲ್ಲಿ ನೆಲೆಸಿರುವ ವೆಂಕಟೇಶ್ವರನ ಅವತಾರವನ್ನು ಬಣ್ಣಿಸುವ ಅಷ್ಟಕ ಸಾಹಿತ್ಯ ರಚನೆಯಾಗಿದೆ.[೧೦]

ಸಂರಕ್ಷಿತಂ ತಿರುಮಲಾಬಿತ (ಧ) ವೈಶ್ಚ (ಶ್ಯ) ವರ್ಯಂ
ವಿತ್ವಾಫಣೇಶ್ವರ ಗಿರಿಂ ಸಹವಾರ್ಧಿ ಪುತ್ರ್ಯಯಾಂ ಪ್ರಾಬ್ತಂ
ಖಗಾದಿಪತಿನಾಪಿ ಚ ತುಮತಾಭದ್ರಾಂ ಶ್ರೀ ಚಕ್ರತೀರ್ಥ ನಿಲಯಂ
ಭಜೆ ವೆಂಕಟೇಶಂ ॥ ೧ ॥
ವೇದಾನ್ ಪರ್ಯೈಃ ಪ್ರಮುಷಿತಾಂಶ್ಚುತುರೋ ವಿಚೇತುಂ ।
ಮಾಶ್ಯ (ತ್ಸ್ಯ) ವಪುಃ ಸುಲಲಿತಂ ಪ್ರತಿಧಾರಯಂಕ್ತಂ ಅಮೋಲಿ
ಭಜೆ ವೆಂಕಟೇಶಂ ॥ ೨ ॥
ಪಾಥೋದಿ ಮಂಥ್ರುನ ಶೃತಿಸ್ರೈದ ಶೈರೇಷ್ಯೈಃ ಪಾಥೋ ನಿಧೌ
ನಿಹಿತ ಮಂದರ ಶೈಲವರ್ಯಂ ಭರ್ತುಂ ಪುನರ್ವದಿತಶಚ್ಛಪರಾಜ
ವೇಶಂ ಶ್ರೀಚಕ್ರತೀರ್ಥ ನಿಲಯಂ ಭಜ ವೆಂಕಟೇಶಂ ॥ ೩ ॥
ಶೌರ್ಯಾತಿರೇಶ ಶಕಲೀ ಕೃತ ವಂದ್ಯರ ಶ್ಯಾ ದೈತ್ಯಾಧಿಪತ್ಯ
ಹನನಾಯಹಮಹಂ ಚ ಮಗ್ನಾಂ ವದ್ದುರ್ತ ಮಾರ್ಜಿತ
ವರಹಾ ವಪ್ಪುರ್ವಿಶೇಷಂ । ಶ್ರೀ ಚಕ್ರತೀರ್ಥ ನಿಲಯಂ
ಭಜೆ ವೆಂಕಟೇಶಂ ॥ ೪ ॥
ಪಿತ್ರಾ ನಿಜೇನ ಕುಪಾತಿ ಪರಿಪೀಡ್ಯಮಾನಂ ಪ್ರಹ್ಲಾದ ಮೇವ
ಪರಿ ರಕ್ಷಿತುಮಾತ್ಮ ಭಕ್ತಂ । ಸ್ತಂಭಾದ್ವನಿರ್ಗ್ಗತಂ ತನುಂ
ನರಸಿಂಹ್ಯೆರೂಪಂ ಶ್ರೀ ಚಕ್ರತೀರ್ಥ ನಿಲಯಂ
ಭಜೆ ವೆಂಕಟೇಶಂ ॥ ೫ ॥
ಅಕ್ರಮ್ಯಸ್ಸ (ಸ) ರ್ವ ಜಗತೀ ಮತಿ .... ತ್ಯಂ ವಿಧಿಂಚ್ಛ
ಲಯತುಂ ವಲಯ ಜವಾಟಿ ಆದಾಯ ವಾಮನ ತನುಂಜಿತ
ಸ್ಸ (ಸ) ರ್ವ ಲೋಕಂ । ಶ್ರೀ ಚಕ್ರತೀರ್ಥ ನಿಲಯಂ ಭಜೆ ವೆಂಕಟೇಶಂ ॥ ೬ ॥
ಶ್ರೀಂವುನ್ಮಾರ್ಗಯೋವ ಚರಿತಾ ತಂ ಪೃಥವೀಪತಿ ನಾಮತಾಟ
ನಾಯ ಜನಿತಂ ಜಮದಗ್ನಿ ವಂಶೇ । ಪಾಪೀಯ ಸಾಂ ಪರುಶು ನಿ
ರ್ಜಿತ ಶಾರ್ತಕಾರ್ತೆ ವೀರ್ಯಂ । ಶ್ರೀ ಚಕ್ರನಿಲಯಂ ಭಜೆ ವೆಂಕಟೇಶಂ ॥ ೭ ॥
ರಕ್ಷಃ ಪ್ರಲಂಭಪುರ ಯೂಥಕಲೀನ್ ವಿಜೇತುಂ ಕ್ಲ್ರುಪ್ತಾವಾತಾರ ಮಖಿಲೈ
ರಭಿವಂದ್ಯಮಾನಂ । ಕೊದಂಡರಾಮ ಹಲಭೃನ್ಕಲಿ ಕಲ್ಕಿರೂ । ಪಂ
ಶ್ರೀ ಚಕ್ರತೀರ್ಥ ನಿಲಯಂ ಭಜೆ ವೆಂಕಟೇಶಂ ॥ ೮ ॥

ಈ ಸ್ತುತಿಪರವಾದ ಅಷ್ಟಕ ಈಗಿನ ಕೋದಂಡರಾಮನಾಗಿರುವ ವೆಂಕಟೇಶ್ವರ ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ ಹಾಗೂ ಪರಶುರಾಮನಾಗಿ ಅವತಾರ ವೆತ್ತಿ ನಿರ್ವಹಿಸಿದ ಕರ್ತವ್ಯಗಳನ್ನು ವರ್ಣಿಸುತ್ತದೆ.

ಪಂಪಾಕ್ಷೇತ್ರರಗಳೆ ಬರೆದ ಹರಿಹರ "ಇನ್ನಿ (ಲ್ಲಿ) ರ್ದ ತೀರ್ಥ ಸಂತಾನಂ ಪೊಗಳ್ದಪೆಂ" ಎಂದು ಹೇಳಿ

ಅರರೆ (ಮುನ್ಮ್ಮಖ) ತೀರ್ಥವಿ (ಪ್ಪುದದು) ರಾಗದಿಂ
ವರ ಸೋಮತೀರ್ಥದಿಂ ಮಹಕಾಳತೀರ್ಥದಿಂ
ಎಸೆವ ತಾರಾತಿರ್ಥದಿಂ ಸೂರ್ಯತೀರ್ಥದಿಂ
ಪೆಸೆರೆಸೆವ ವತ್ಸತೀರ್ಥದಿಂ ತೀಭ್ಯತೀರ್ಥದಿಂ
ನಾಗಮಾಕರಂಡೆಯ ಗಜಾಶ್ವತೀರ್ಥಂಗಳಿಂ
ಮೇಗೆ ಕಾದಾಂಬರಿ ಬ್ರಹ್ಮ ತೀರ್ಥಂಗಳಿಂ
ಇಂತೆನಿಸಿ ಮೆರೆವ ಹನ್ನೊಂದು ತೀರ್ಥಂಗಳವು [೧೨]

ಎಂದು ಮನ್ಮಥತೀರ್ಥ, ಸೋಮತೀರ್ಥ, ಮಹಾಕಾಳ ತೀರ್ಥ, ತಾರಾತೀರ್ಥ, ಸೂರ್ಯತೀರ್ಥ, ವತ್ಸತೀರ್ಥ, ಗಜ, ಅಶ್ವ, ಕಾದಂಬರಿ ತೀರ್ಥಗಳೆಂದು ತಿಳಿಸುತ್ತ ಮುಂದುವರಿದು ಮತ್ತಂ ಮಹಾನದೀಶ್ವರಿ ತುಂಗಭದ್ರೆಯೊಳು ಉತ್ತಮ ವಶಿಷ್ಠ ರಾಶ್ರಮ ವಿಪ್ಪುದೊಲುಮೆಯೊಳು ಎಂದು ಹೇಳಿ ಅಲ್ಲಿರುವ ತೀರ್ಥಗಳ ಪಟ್ಟಿಯನ್ನು ಹೀಗೆ ನೀಡುತ್ತಾನೆ.

ಅಲ್ಲಿ ಪಾಪಾದಿನಾಶಿಯೆಂದು ನಾಮದ ತೀರ್ಥ
ಅಲ್ಲಿಂ ದಶಾಶ್ವಮೇಧ ವಿಧಾನದ ತೀರ್ಥ
ಅದರೊಳಗೆ ಬದರಿಕಾಶ್ರಮವು ಕೋಟಿ ತೀರ್ಥ[೧೩]
ಅದರೊಳಗೆ ಶಬರಿಕಾಶ್ರಮವು ಕೋಟೀ ತೀರ್ಥ

ಎಂದು ಉಲ್ಲೇಖಿಸಿ ಮುಂದೆ "ಮಾಲ್ಯವಂತಾಚಳವದೊಪ್ಪುವುದು" ಎಂದು ಮಾಲ್ಯವಂತ ಬೆಟ್ಟದ ತಪ್ಪಲಿನಲ್ಲಿರುವ ತೀರ್ಥಗಳ ವೀಕ್ಷಣೆಯನ್ನು ಮಾಡಿಸುತ್ತಾನೆ.

ಸಲ್ಲಲಿತ ರಿಣ (ವಿ) ಮೋಚನದ ತೀರ್ಥವೊಪ್ಪುವುದು
ಉರಿಯಕ್ಷತೀರ್ಥಂ ಗಧಾತೀರ್ಥ ಧನುತೀರ್ಥ
ವರಶಂಖಚಕ್ರತೀರ್ಥ ಪದ್ಮದಳ ತೀರ್ಥ[೧೪]

ಎಂದು ಆಯುಧನಾಮಗಳನಿಟ್ಟು ಕೊಂಡು ಪ್ರಸಿದ್ಧಿಗೆ ಬಂದ ತೀರ್ಥಗಳನ್ನು ಬಣ್ಣಿಸಿದ್ದಾನೆ. ಇಲ್ಲಿಂದ ನೇರವಾಗಿ ಹರಿಹರ ಕವಿ ಹೇಮಕೂಟಕ್ಕೆ ಕರೆದೊಯ್ಯುತ್ತಾನೆ.

ಹೇಮಕೂಟದ ಮೇಲೆ ವತ್ಸ್ಯನಾಭಿಯ ತೀರ್ಥ
ಆ ಮಹಾಕ್ಷೇತ್ರದೊಳಗಗ್ನಿ ತೀರ್ಥ ಸ್ವಾರ್ಥ
ರಾಮ ತೀಥಂ ಸಂದ ಪಿತೃತೀರ್ಥ ವಂತಿಲ್ಲಿ
ಏಮಾತೋ ಮಾಂಗಲ್ಯ ತೀರ್ಥವೊಪ್ಪುವುದಲ್ಲಿ
....
.... ೧೫

ಎಂದು ಇನ್ನು ಅನೇಕ ತೀರ್ಥಗಳು ಹಂಪೆ ಪರಿಸರದಲ್ಲಿರುವುದನ್ನು ತಿಳಿಸುತ್ತಾನೆ.

ಕವಿ ಲಕ್ಕಣ್ಣ ದಂಡೇಶ ಶಿವತತ್ವ ಚಿಂತಾಮಣಿಯಲ್ಲಿ ನೂತನ ಗಣಂಗಳ ಕಥೆಯನ್ನು ವಿವರಿಸುವಃಳನೆಯ ಸಂಧಿಯಲ್ಲಿ ೪ ಪದ್ಯಗಳಲ್ಲಿ ಪಂಪಾಕ್ಷೇತ್ರದ ತೀರ್ಥಗಳನ್ನು ಕುರಿತು ಪ್ರಸ್ತಾಪಿಸುತ್ತಾನೆ. "ಸರಳತೀರ್ಥಂಗಳ ಸಂಕಳವಾಗಿತ್ತು ಪಂಪಾಕ್ಷೇತ್ರ ಎನ್ನುವ ಲಕ್ಕಣ್ಣದಂಡೇಶ ಚಾಚೂತಪ್ಪದೆ ಹರಿಹರನನ್ನು ನೇರವಾಗಿ ಅನುಸರಿಸಿದ್ದಾನೆ. ಹರಿಹರ ಕವಿ ತೀರ್ಥ ಮಹಿಮೆಯನ್ನು ರಗಳೆಯಲ್ಲಿ ಹೇಳಿದ್ದರೆ, ದಂಡೇಶ ಷಟ್ಪದಿಯಲ್ಲಿ ಹೇಳಿದ್ದಾನೆ ಅಷ್ಟೇ.

೧೯೨೩ರಲ್ಲಿ ಪ್ರಕಟವಾದ ಪಂಪಾಮಹಾತ್ಮೆ ಎಂಬ ಕೃತಿಯ ಕರ್ತೃ ಹೊಳಗುಂದಿಯ ಸಿದ್ಧಲಿಂಗೇಶ್ವರ ಸ್ವಾಮಿಗಳು. ಪ್ರಸ್ತುತ ಕೃತಿಯಲ್ಲಿ ೨೨ಕ್ಕೂ ಹೆಚ್ಚು ತೀರ್ಥ ಮಹಿಮೆಗಳನ್ನು ಉಲ್ಲೇಖಿಸುತ್ತಾರೆ. ಆದರೆ ಅವುಗಳಿಗೆ ಯಾವುದೇ ಐತಿಹಾಸಿಕ ಪುರಾವೆಗಳಿಲ್ಲ. ಅಲ್ಲಿ ಅವರು ಗುರು-ಶಿಷ್ಯರ ಸಂವಾದ ರೂಪದಲ್ಲಿ ಮಹಾತ್ಮೆಗಳನ್ನು ಚಿತ್ರಿಸಿದ್ದಾರೆ ಹೊರತು ; ಸ್ಥಳ ನಾಮ ಅಧ್ಯಯನಗಳಾಗಿಲ್ಲ.

ಹಂಪಿ ತೀರ್ಥಗಳ ಆಧ್ಯಯನದಿಂದ ಕೆಲವು ತಾತ್ವಿಕವಾದ ಅಂಶಗಳನ್ನು ಹೀಗೆ ಕಟ್ಟಿಕೊಡಬಹುದಾಗಿದೆ.

೧. ಶಾಸನೋಕ್ತ ತೀರ್ಥಗಳಲ್ಲಿ ಚಕ್ರತೀರ್ಥದಲ್ಲಿಯ ವೆಂಕಟೇಶನ ಗುಣಗಾನ ಮಾಡುವ ವಿಷ್ಣುವಿನ ದಶಾವತಾರಗಳಲ್ಲಿ ೮ ಅವತಾರಗಳನ್ನು ವರ್ಣಿಸುವ ಅಷ್ಟಕವೇ ಸುದೀರ್ಘವಾದುದು. ಉಳಿದಂತೆ ತೀರ್ಥಗಳ ಹೆಸರುಗಳನ್ನು ಬಿಟ್ಟರೆ ಹೆಚ್ಚಿನ ವಿವರಗಳಿಲ್ಲ.

೨. ಈ ಅಷ್ಟಕ ಛಂದಸ್ಸಿನಲ್ಲಿ ಹೇಳಿದ ವೆಂಕಟೇಶ್ವರದೇವರ ಮತ್ಸ್ಯ, ಕೂರ್ಮ ವರಹ, ನಾರಸಿಂಹ, ವಾಮನ, ಪರಶುರಾಮ ಹಾಗೂ ಕೋದಂಡರಾಮ ಅವತಾರಗಳನ್ನು ವರ್ಣಿಸುವ ಕಥಾ ಹಂದರವೇ, ಕವಿಗಳಾದ ಹರಿಹರ ಲಕ್ಕಣ್ಣರು ಹೇಳುವ ಯಕ್ಷತಿರ್ಥ, ಗಧಾತೀರ್ಥ, ಧನುತೀರ್ಥ, ವರಶಂಕ ಚಕ್ರತೀರ್ಥ, ಪದ್ಮಗಳ ತೀರ್ಥಗಳ ಅನುಷ್ಠಾನಕ್ಕೆ ಪ್ರತಿಪಾದನೆಗೆ ಪ್ರೇರಣೆಯಾಗಿರಬೇಕೆಂಬುದು ನನ್ನ ಊಹೆ. ಆದರೆ ಈ ಸಮರ್ಥನೆಗೆ ಪುರಾವೆಗಳು ಬೇಕು.

೩. ಇಲ್ಲಿ ತೀರ್ಥಗಳಿಗೆ ಸಂಬಂಧಿಸಿದಂತೆ ರಾಮಾಯಣ-ಮಹಾಭಾರತ ಮತ್ತು ಭಾಗವತ ಕಥೆಗಳ ಅನೇಕ ಪ್ರಸಂಗಗಳು ಪ್ರಚಲಿತಕ್ಕೆ ಬಂದಿವೆ. ಉದಾಹರಣೆಗೆ ಅಗ್ನಿತೀರ್ಥ ರಚನೆಗೆ ಭಾರತದ ಖಾಂಡವವನದಹನ, ಅರ್ಜುನ ದೇವೇಂದ್ರರ ಯುದ್ಧದ ಹಿನ್ನಲೆಯಿದೆ. ಪಾಪವಿಮೋಚನಾ ತೀರ್ಥರಚನೆಗೆ ಮಣಿಭದ್ರೇಶ್ವರ ಲೀಲೆಯನ್ನು ಹೇಳಲಾಗುತ್ತಿದೆ. ಚಕ್ರತೀರ್ಥ ರಚನೆಗೆ ವಿಷ್ಣುವಿನ ಮಹಿಮೆಯನ್ನು ಆರೋಪಿಸಲಾಗಿದೆ.

ಹೀಗೆ ರಾಮಾಯಣ, ಮಹಾಭಾರತ, ಭಾಗವತದಂಥ ಪುರಾಣ ಕಲ್ಪಿತ ಕಥೆಗಳ ಮೂಲಕ ತಮ್ಮ ಅಸ್ತಿತ್ವ ಉಳಿಸಿಕೊಂಡಿರುವ ತೀರ್ಥಗಳು ಶ್ರೀಸಾಮಾನ್ಯರ ನಡುವೆ ಪುರಾಣ ಕಾವ್ಯಗಳನ್ನು ಸಂವಹನಗೊಳಿಸಿದ ಇಲ್ಲವೇ ಸಂರಕ್ಷಿಸಿದ ಕೀರ್ತಿಗೆ ಭಾಜನವಾಗಿದೆ.

೪. ತೀರ್ಥಗಳ ವರ್ಣನೆಯನ್ನು ತದೇಕ ಚಿತ್ತದಿಂದ ಮಾಡಿರುವ ಹರಿಹರ ಲಕ್ಕಣ್ಣರು ವಿಜಯಕಲ್ಯಾಣವಾಗಿದ್ದ ಅವರ ಕಾಲದ ಹಂಪೆಯನ್ನು ಪಂಪಾಕ್ಷೇತ್ರದ ಮಾಯಜಡೆಯಿಂದ ಚಿತ್ರಿಸಲು ಹೊರಟಂತಿದೆ.

೫. ಸುಮಾರು ೨೫ ತೀರ್ಥಗಳಲ್ಲಿ ಮನ್ಮಥ ತೀರ್ಥ "ತೀರ್ಥಗಳ ರಾಜ" ನೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಉಳಿದಂತೆ ಸಣ್ಣ ಪುಟ್ಟ ಅದೆಷ್ಟೋ ತೀರ್ಥಗಳು ಪ್ರಕೃತಿ ವಿಕೋಪಕ್ಕೆ ಸಿಲುಕಿ ನಾಶಹೊಂದಿದೆ.

೬. ಹರಿಹರ-ಲಕ್ಕಣ್ಣರ ತೀರ್ಥಗಳ ಸ್ಥಳ ನಿರ್ದೇಶನ ಮಾಡಿರುವುದು ವಿಶೇಷವಾಗಿದೆ. ಉದಾಹಾರಣೆಗೆ : ವಸಿಷ್ಠಾಶ್ರಮ ದೊಳಗಿನ ತೀರ್ಥಗಳು, ಮಾಲ್ಯವಂತ ಗಿರಿಯಲ್ಲಿನ ತೀರ್ಥಗಳು, ಹೇಮಕೂಟದಲ್ಲಿಯ ತೀರ್ಥಗಳು, ಇತ್ಯಾದಿ ಉಲ್ಲೇಖಗಳಿಂದ ಹಂಪೆಯ ಭೌಗೋಳಿಕ ಸ್ವರೂಪವನ್ನು ಪರಿಚಯ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಟಿಪ್ಪಣೆಗಳು

೧. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨, ಹಂಪಿಶಾಸನಗಳು ಕ್ರಿ.ಶ. ೧೧೯೯ ನಂ.೫೫, ಪುಟ ೪೪-೪೫.

೨. ಅದೇ ನಂ ೮೮ ಪುಟ ೮೭

೩. ಅದೇ ನಂ ೯೧ ಪುಟ ೮೮

೪. ಅದೇ ನಂ ೯೨ ಪುಟ ೮೮

೫. ಅದೇ ನಂ ೮೭ ಪುಟ ೮೬ ಕ್ರಿ.ಶ. ೧೧೯೯

೬. ಅದೇ ನಂ ೯೬ ಪುಟ ೮೯

೭. ಅದೇ ನಂ ೧೫೨ ಪುಟ ೧೨೧

೮. ಅದೇ ನಂ ೯೪ ಪುಟ ೮೯

೯. ಅದೇ ನಂ ೯೫ ಪುಟ ೮೯

೧೦. ಅದೇ ನಂ ೩೬೮ ಪುಟ ೨೬೩

೧೧. ಅದೇ ನಂ ೧೩೬ ಪುಟ ೧೧೦, ಕ್ರಿ.ಸ. ೧೫೫೬.

೧೨. ಪಂಪಾಕ್ಷೇತ್ರದ ರಗಳೆ ; ಪದ್ಯ ೫೦

೧೩. ಅದೇ ಪದ್ಯ ೬೦

೧೪. ಅದೇ ಪದ್ಯ ೭೦

೧೫. ಅದೇ ಪದ್ಯ ೮೦

೩೮. ವಿ.ಸೀ. ಅವರ 'ಪಂಪಾಯಾತ್ರೆ' : ಪುನರಾವಲೋಕನ

ಪ್ರೊ.ಲಕ್ಷ್ಮಣ್ ತೆಲಗಾವಿ

ಹಂಪೆಯ ಸ್ಮಾರಕರಗಳನ್ನು ಕುರಿತು ದೇಶ ವಿದೇಶಗಳ ಪ್ರತಿಷ್ಠಿತ ಲೇಖಕರು, ಸಂಶೋಧಕರು ಅಧ್ಯಯನ ಕೈಗೊಂಡು ರಚಿಸಿ ಪ್ರಕಟಿಸಿರುವ ಹತ್ತಾರು ಕೃತಿಗಳು ಈಗ ನಮ್ಮ ಕಣ್ಣಮುಂದಿವೆ. ಕನ್ನಡ, ಇಂಗ್ಲೀಷ್, ಫ್ರೆಂಚ್ ಮೊದಲಾದ ಭಾಷೆಗಳಲ್ಲಿರುವ ಈ ಉತ್ಕೃಷ್ಟ ಕೃತಿಗಳು ಕೈಪಿಡಿಗಳು ಹಂಪೆ ಸ್ಮಾರಕಗಳನ್ನು ಅಗತ್ಯ ಐತಿಹಾಸಿಕ ಹಿನ್ನಲೆಯೊಡನೆ ವಿಶ್ವಾದ್ಯಂತ ಪರಿಚಯಿಸುವಲ್ಲಿ, ಅವುಗಳ ಮೌಲ್ಯವನ್ನು ಮನದಟ್ಟು ಮಾಡಿಕೊಡುವಲ್ಲಿ ಸಫಲವೆನಿಸಿವೆ. ನಾವು ಕಂಡಂತೆ, ವಿದೇಶಿಯರ ಪ್ರಯತ್ನಗಳು ಎಷ್ಟೇ ನಿಖರವಾಗಿದ್ದರೂ ಶ್ರೀಮಂತವಾಗಿದ್ದರೂ ದೇಶೀಯರ ಪ್ರಯತ್ನಗಳು ನೀಡುವ ಮುದ ಮತ್ತು ಅನುಭವಗಳು ವಿಶಿಷ್ಟ ಬಗೆಯವು. ನಮ್ಮದೇ ಭಾಷೆಯಲ್ಲಿ ನಮ್ಮದೇ ಸ್ಮಾರಕಗಳನ್ನು ಕುರಿತು ನಮ್ಮ ಲೇಖಕರು ತಮ್ಮದೇ ದೃಷ್ಟಿಕೋನದೊಡನೆ ನೀಡುವ ವಿವರಣೆ ಸಹಜವಾಗಿಯೇ ಇತರ ಲೇಖಕರಿಗಿಂತ ಭಿನ್ನವೆನಿಸುವುದುಂಟು ; ಜೀವಂತವೆನಿಸುವುದುಂಟು. ವಿ. ಸೀತಾರಾಮಯ್ಯನವರ ಪಂಪಾಯಾತ್ರೆ (೧೯೨೬) ಎಂಬ ಸುಪ್ರಸಿದ್ಧ ವರ್ಣನಾತ್ಮಕ ಗದ್ಯಗ್ರಂಥವೇ ಇದಕ್ಕೊಂದು ವಿಶಿಷ್ಟ ಉದಾಹರಣೆ.[೧] ವಾಸ್ತವದಲ್ಲಿ ಈ ಕೃತಿಯ ಹೆಸರನ್ನು ಕೇಳರಿಯದ ಕನ್ನಡಿಗರು ವಿರಳವೆಂದರೆ ತಪ್ಪಿಲ್ಲ. ವಿಮರ್ಶಕರ ಕಣ್ಣಲ್ಲಿ ಈ ಕೃತಿಯ ಕರ್ತೃ ವಿ.ಸೀ. ಅವರು 'ವಿನಯನಿದಿ, ಸ್ನೇಹವತ್ಸಲ, ಧೀಮಂತ ವಿದ್ವಾಂಸ, ವಾಗ್ಮಿ, ಉದಾರಿ ಹಾಗೂ ಶುಚಿರುಚಿ'; ಚತುರ ಹಾಗೂ ಮುಖ್ಯವಾಗಿ, ಕವಿ ಹಾಗು ವಿಮರ್ಶಕ.

'ಪಂಪಾಯಾತ್ರೆ' ಯನ್ನು ಇಲ್ಲಿ ಪ್ರಸ್ತಾಪಿಸಲು ಇರುವ ಪ್ರಮುಖ ಕಾರಣಗಳು ನಾಲ್ಕು

೧. ಇದು ಕನ್ನಡದ ಮೊದಲ ಅತ್ಯುತ್ತಮ ಪ್ರವಾಸ ಕಥನ

೨. ಪ್ರವಾಸಸಾಹಿತ್ಯದಲ್ಲಿ ಗಣನೀಯ ಶ್ರೇಷ್ಠ ಕೃತಿ

೩. ಹಂಪೆ ಮತ್ತು ಕರ್ನಾಟಕಯಾತ್ರೆಯ ದಿಕ್ಕಿನಲ್ಲೂ ಮೊದಲ ಕೃತಿ

೪. ಕರ್ನಾಟಕದಲ್ಲಿ ಪ್ರವಾಸಸಾಹಿತ್ಯ ಪ್ರಾರಂಭಗೊಂಡ ಕಾಲಕ್ಕೆ ಹೆಸರಿಸಬಹುದಾಗಿದ್ದ ಬಹುದೊಡ್ಡ ಕೃತಿ.

ಈ ಕೃತಿ ಕುರಿತು ಕೆ.ಅನಂತರಾಮು ಅವರು "ಕರ್ನಾಟಕದಲ್ಲಿರುವ ಪ್ರೇಕ್ಷಣೀಯ ಸ್ಥಳಗಳನ್ನು ಸಂದರ್ಶಿಸಿದ ಪ್ರವಾಸಿಗರ ಅನುಭವಕಥನ ಸಂಖ್ಯೆಯಲ್ಲಿ ಕಡಿಮೆಯಿದ್ದರೂ ಅವುಗಳಲ್ಲಿನ ಬಹುಪಾಲು ಬರಹಗಳು ಪ್ರವಾಸಸಾಹಿತ್ಯಕ್ಕೆ ಒಳ್ಳೆಯ ಕಾಣಿಕೆಗಳಾಗಿವೆ. ಪ್ರೊ.ವಿ.ಸೀತಾರಾಮಯ್ಯನವರ "ಪಂಪಾಯಾತ್ರೆ" ಕನ್ನಡದಲ್ಲಿ ಪ್ರವಾಸಸಾಹಿತ್ಯ ಪ್ರಾರಂಭ ಗೊಂಡ ಕಾಲಕ್ಕೆ ಹೆಸರಿಸಬಹುದಾಗಿದ್ದು ಬಹುದೊಡ್ಡ ಕೃತಿಯಾಗಿದ್ದಿತು. ಇಂದಿಗೂ ಅದು ಪ್ರವಾಸಸಾಹಿತ್ಯದಲ್ಲಿ ಗಣನೀಯ ಶ್ರೇಷ್ಠಕೃತಿಗಳಲ್ಲಿ ಒಂದಾಗಿ ಪರಿಗಣಿತವಾಗಿದೆ. ಎಲ್ಲ ಕಾಲಕ್ಕೂ ನಿಲ್ಲುವ ಕೃತಿ ಅದು ಎಂದಿರುವುದು ಉಚಿತ ವಾಗಿಯೇ ಇದೆ.[೨] ಇನ್ನು ಇರುವ ಅನ್ಯ ಕಾರಣಗಳೆಂದರೆ, ಪಂಪಾಯಾತ್ರೆ ಕೇವಲ ಪ್ರವಾಸಕಥನವಾಗಿ ಉಳಿಯದೆ ಸಂಸ್ಕೃತಿ, ಇತಿಹಾಸ, ಕಲೆ, ಜಾನಪದ ಮುಂತಾದ ಹಲವಾರು ಕ್ಷೇತ್ರಗಳ ಅಭ್ಯಾಸಿಗಳಿಗೆ, ಸಂಶೋಧಕರಿಗೆ ಸಾಕಷ್ಟು ಮಾಹಿತಿ ನೀಡುವ ಕೋಶವೂ ಆಗಿದೆ. ಮುವತ್ತರ ದಶಕದ ಹಂಪೆಯ ಪರಿಸ್ಥಿತಿ,ಪರಿಸರ, ಜನಜೀವನ, ವಿನೋದ ಸ್ವಾರಸ್ಯ ಮುಂತಾದವು ಗಮನಾರ್ಹವಾದುವು. ಪ್ರವಾಸಿಕರ ದೃಷ್ಟಿಯಿಂದ, ಇಲ್ಲಿ ದೊರೆಯುವ ಎಂಟು ದಶಕಗಳ ಹಿಂದಿನ ಹಂಪೆಯ ಸ್ಥೂಲ ಚಿತ್ರಣ ಅಮೂಲ್ಯವಾದುದು. ವಿ.ಸೀ. ಅವರು ತಮ್ಮ ಈ ಪ್ರವಾಸಾನುಭವವನ್ನು ಆತ್ಮಕಥನದ ನೆಲೆಯಲ್ಲಿ ನಿವೇದಿಸಿಕೊಂಡಿ ರುವುದು ವೈಶಿಷ್ಟ್ಯಪೂರ್ಣವಾಗಿದೆ.

೧೯೨೪ರ ಬೆಳಗಾವಿ ಸಮ್ಮೇಳನದ ನಂತರ ಗೆಳೆಯರೊಡನೆ ಹಂಪೆಯ ಯಾತ್ರೆ ಕೈಗೊಂಡಾಗಿನ ವಿವರಗಳು ಪ್ರವಾಸಸಾಹಿತ್ಯದಲ್ಲಿ ಒಂದು ಮೈಲಿಗಲ್ಲಾಗುವಂತೆ ಈ ಕೃತಿಯಲ್ಲಿ ಮೈದಾಳಿವೆ ಎಂಬುದು ದಿಟ. ಸ್ವತಃ ವಿ.ಸೀ. ಅವರೇ ಹೇಳಿರುವಂತೆ "... ಐವತ್ತೈದು ವರ್ಷಗಳ ಹಿಂದೆ ನಾನು ಬರೆಯತೊಡಗಿದ ಮುಂಚು ಮುಂಚೆಯ ಕಾಲದಲ್ಲಿ ಇದ್ದ ಶೈಲಿಯದು... ಆಗ ಇನ್ನೂ ಸಿದ್ಧತೆಯ ಅಥವಾ ಅಭ್ಯಾಸದ, ಆರಂಭದ ಕಾಲ, ಅದಕ್ಕೆ ನನ್ನ ಸ್ನೇಹಿತರು ಆಧಾರವಾದುದರಿಂದ ಆ ಸನ್ನಿವೇಶ ಅಸಾಧಾರಣವಾಯಿತು. ಅವರ ಸಾಹಚರ್ಯ, ಸ್ಥಳದ ಹಿರಿಮೆ, ಅದರ ಚರಿತ್ರೆಯ ಆಳದಲ್ಲಿ ಹುದುಗಿರುವ ರಾಮಾಯಣದ ಕಾಲದ, ವಿಜಯನಗರ ಕಾಲದ ಮತ್ತು ಕಲೆಯ ಇತಿಹಾಸದ ಸಾಂಗ್ಯತವೂ ಅದಕ್ಕೆ ಒಂದು ವಿಶೇಷ ಮೆರುಗನ್ನು ಕೊಟ್ಟಿತು. ಸ್ವಲ್ಪ ಅಲ್ಲಿ ಇಲ್ಲಿ ಏರುಪೇರು ಮಾಡಿದರೆ ರಾಯರು ಡಿ.ವಿ.ಗುಂಡಪ್ಪನವರು, ಯಜಮಾನರು ಬೆಳ್ಳಾವೆ ವೆಂಕಟನಾರಾಯಣಪ್ಪನವರು, ವೆಂಕಟೇಶಯ್ಯನವರು ಎಂದರೆ ಟಿ.ಎಸ್.ವೆಂಕಣ್ಣಯ್ಯ ನವರು ; ಮೂರ್ತಿ ಎಂದರೆ ಎಂ.ಆರ್.ಶ್ರೀನಿವಾಸಮೂರ್ತಿ.[೩]

ಬೆಳಗಾವಿಯಿಂದ ಹೊರಟು ಪುನಃ ಬೆಂಗಳೂರಿಗೆ ಹಿಂದಿರುಗುವವರೆಗೆ ಸುಮಾರು ೨-೩ ದಿವಸಗಳ ಕಾಲ ವಿ.ಸೀ. ಮತ್ತು ಮೇಲೆ ಹೇಳಿದ ಅವರ ಜತೆ ಯಾತ್ರಿಕರು ಹಂಪೆಯಲ್ಲಿ ಪ್ರವಾಸಿಗರಿಗಾಗಿ ಕಳೆದ ಸಮಯದ ಮನೋಜ್ಞ ವಿವರಣೆ ಈ ಕಥನ ದಲ್ಲಿದೆ. ಜಿ.ವೆಂಕಟಸುಬ್ಬಯ್ಯನವರು ಹೇಳುವಂತೆ, ಒಂದು ಚಾರಿತ್ರಿಕ ಸತ್ಯದ ಪುನರ್ದರ್ಶನವಾಗಿ ಇಂದಿಗೂ ಕಂಗೊಳಿಸುತ್ತಿದೆ. ಹಾಳುಹಂಪೆ ಬಾಳುಹಂಪೆಯಾಗಿದ್ದ

ಕಾಲದ ವೈಭವದ ಚಿತ್ರಕಣ್ಮುಂದೆ ಸುಳಿದು ನಮ್ಮನ್ನು ಎಚ್ಚರಿಸುತ್ತದೆ. ಒಂದು ರಸಿಕ ಮನೋಧರ್ಮ ಇಂಥ ಪ್ರವಾಸದಲ್ಲಿ ಆಲೋಚಿಸಬಹುದಾದ ಅನೇಕ ವಿಷಯಗಳು ಇಲ್ಲಿ ಸುಳಿದು ಬರವಣಿಗೆಗೆ ಕಾವು ಬರುತ್ತದೆ ; ಓದುಗನು ಬೇರೊಂದು ಪ್ರಪಂಚಕ್ಕೆ ಸಾಗಿಬಂದವನಾಗುತ್ತಾನೆ."[೨] ಹಾಗೆಯೇ, "ಆ ಪ್ರವಾಸವನ್ನು ಕೈಗೊಂಡ ವ್ಯಕ್ತಿಗಳ ಪೂರ್ಣದರ್ಶನ ಅಲ್ಲಿ ಸಾಧ್ಯವಾಗಿದೆಯಲ್ಲದೆ ಕೊನೆಯಲ್ಲಿ ಬರುವ ಸ್ವಪ್ನಮಾಲಿಕೆಗಳ ಮೂಲಕ ಗತಕಾಲದ ವೈಭವ ವಿನಾಶಗಳು ಹೃದಯದ್ರಾವಕವಾಗಿ ನಿರೂಪಿತವಾಗಿವೆ. ಕವಿ ಅನುಭವಕ್ಕೆ ಐತಿಹಾಸಿಕ ದೃಷ್ಟಿಯೂ ಉಜ್ವಲವಾದ ಅಭಿಮಾನವೂ ಬೆಸೆದು ಕೊಂಡು ನಿಂತಿವೆ." ಎಂದು ವಿ.ಎಂ.ಇನಾಂದಾರರು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿ ದ್ದಾರೆ. ಈ ಕೃತಿಯನ್ನು ಕಾಳಿದಾಸನ ಮೇಘದೂತ ಕಾವ್ಯಕ್ಕೆ ಹೋಲಿಸಿದಂಥವರು ಎಂ.ರಾಮಚಂದ್ರ.[೬]

ವಿ.ಸೀ. ಅವರ 'ಪಂಪಾಯಾತ್ರೆ' ನೀಡುವ ಹಂಪೆಕ್ಷೇತ್ರ ಮತ್ತು ಸ್ಮಾರಕಗಳ ಚಿತ್ರಣವನ್ನು ಇಂದಿನ ಪರಿಸ್ಥಿತಿಯಲ್ಲಿ ವಿಶ್ಲೇಷಿಸುವುದು ಸ್ವಲ್ಪ ಅಸಂಗತವೆಂದೇ ತೋರುತ್ತದೆ. ಏಕೆಂದರೆ ಈ ಎಂಬತ್ತು ವರ್ಷಗಳ ಕಾಲಾವಧಿಯಲ್ಲಿ ಹಂಪೆಯು ಸಾಕಷ್ಟು ಪರಿವರ್ತನೆಗೊಂಡಿದೆ. ನಾಗರೀಕ ಸೌಲಭ್ಯದಿಂದ ತುಂಬಿ ತುಳುಕುತ್ತಿದೆ. ಸ್ಮಾರಕಗಳು ಹೊಸ ಪರಿವೇಷದೊಡನೆ ಕೂಡಿ ಗತವೈಭವದ ನೆನಪು ಮರುಕಳಿಸುವಂತೆ ಮಾಡಿವೆ. ಪ್ರವಾಸಸಾಹಿತ್ಯವಾಗಲಿ, ಅಧ್ಯಯನಕೃತಿಗಳಾಗಲಿ ವಿಪುಲವಾಗಿವೆ. ಪ್ರವಾಸಿ ಗರ ದೃಷ್ಟಿಯಿಂದ ಹಂಪೆ ಇಂದು ಅಪರಿಚಿತವಾಗುಳಿದಿಲ್ಲ. ವಿಶ್ವಪರಂಪರೆಯ ತಾಣ ವಾಗಿ ಗುರುತಿಸಲ್ಪಟ್ಟು ಇದೀಗ ವಿಶ್ವವಿಖ್ಯಾತಿ ಪಡೆದಿದೆ. ಆದರೆ ಎಂಬತ್ತು ವರ್ಷಗಳ ಹಿಂದೆ ಹಂಪೆಯಲ್ಲಿ ಇದ್ದ ಪರಿಸ್ಥಿತಿ ಎಂಥದು? ವಿ.ಸೀ. ಅವರು ತಮ್ಮ 'ಪಂಪಾಯಾತ್ರೆ' ಯಲ್ಲಿ ಈ ಬಗೆಗೆ ದಾಖಲಿಸಿರುವುದನ್ನು ನೋಡೋಣ.

ವಿ.ಸೀ.ಮತ್ತು ಅವರ ಹಿರಿಯ ಗೆಳೆಯರು ವೀಕ್ಷಿಸಿದ ಹಂಪೆಯ ಪರಿಸರ ಪ್ರಾಕೃತಿಕ ವಾಗಿ ಇಂದಿಗಿಂತ ಭಿನ್ನವಾಗಿರಲಿಲ್ಲವೆಂದರೂ ಸರಿಯೇ. ವಿಪರೀತ ಬಿಸಿಲು. ಬೇಸಗೆಯ ಬಿಸಿಲು ; ಅದರಲ್ಲಿಯೂ ಹಂಪೆಯಲ್ಲಿ (ಪು.೧೭) ಎಂಬ ಅವರ ಉದ್ಗಾರ ಸ್ವಾರಸ್ಯ ವಾಗಿದೆ. ಹಾವು ಚೇಳುಗಳಂಥಾ ವಿಷಜಂತುಗಳ ಕಾಟ.ತಂಗಲು ಉಪಯೋಗಿಸುತ್ತಿದ್ದ ಚಿಕ್ಕಮನೆಗಳಲ್ಲಿ ದೊಡ್ಡಗಾತ್ರದ ಚೇಳು ಮೊಂಡರಗುಪ್ಪೆಗಳ ವಾಸ. ಇನ್ನು ಕಮಲಾ ಪುರದ ಬಂಗಲೆ ಅಧಿಕಾರಿಗಳಿಗಷ್ಟೆ ಮೀಸಲು. ವಿರೂಪಾಕ್ಷ ದೇವಾಲಯದ ಒಳ ಮಂಟಪದಲ್ಲೂ ವಿಷಕೀಟಗಳ ಹಾವಳಿ. ಊಟೋಪಚಾರದ ವ್ಯವಸ್ಥೆಗೆ ಯಾರಾದರೂ ಮುದುಕಿಯನ್ನೋ, ಮನೆಯವರನ್ನೋ ಅವಲಂಬಿಸಬೇಕಾಗಿದ್ದಿತು. ಹೋಟೆಲುಗಳು ತೀರಾವಿರಳ. ಹಂಪೆಯಲ್ಲಿ ಬೇರೆಡೆಯಲ್ಲಿ ಅಪಾಯಕಾರಿಯೆನ್ನುವಂಥಾ ಸನ್ನಿವೇಶ. ತುಂಗಭದ್ರಾನದಿಯಲ್ಲಿ ಪ್ರವಾಹ ಬಂದರೆ ವಿರೂಪಾಕ್ಷ ದೇವಾಲಯದೊಳಗಣ ಬಾವಿ ತುಂಬಿ ನೀರು ಕೈಗೆಟುಕುವಂತೆ ಮೇಲೆ ಬರುತ್ತಿದ್ದಿತು. ಹಂಡೆಯಿಂದ ನೀರು ತುಂಬಿ ಕೊಂಡು ಸ್ನಾನ ಮಾಡುವಂತೆ ನೀರನ್ನು ತುಂಬಿಕೊಂಡು' ಸ್ನಾನ ಮಾಡಬಹುದಿತ್ತು !

ಹಂಪೆಯಿಂದ ಹೊಸಪೇಟೆಗೆ ಪ್ರಯಾಣಿಸಲು ಇದ್ದ ವಾಹನವೆಂದರೆ ಎತ್ತಿನಬಂಡಿ ಮಾತ್ರ.

ಹಂಪೆಯ ಹಾಳುಗಳ ಪುಸ್ತಕ ಅಥವಾ ಮಾರ್ಗದರ್ಶಕ ಕೈಪಿಡಿ (Guide) ಇದ್ದುದು ಇಂಗ್ಲೀಷ್‌ನಲ್ಲಿ ಮಾತ್ರ. ಎಲ್ಲರೂ ಅದನ್ನೇ ಅವಲಂಬಿಸಬೇಕಿತ್ತು. ಸ್ಮಾರಕಗಳ ನೋಟಕ್ಕೆ (Sight Seeing) ನುರಿತ ಮಾರ್ಗದರ್ಶಕರ ಕೊರತೆ. ಅಂಥವರು ಇರಲಿಲ್ಲ ವೆಂದರೂ ಸರಿಯೇ. ವಿ.ಸೀ ಅವರ ತಂಡದಿಂದ 'ಯೋಗ್ಯತಾಪತ್ರ' ಪಡೆದುಕೊಂಡ ಭಾಗ್ಯಶಾಲಿಯೆನಿಸಿದ ಬೈರಾಗಿ ಚೆನ್ನಯ್ಯನೆಂಬವನೇ ಈ ತಂಡದ ಮಾರ್ಗದರ್ಶಿ. ಇತಿಹಾಸಕ್ಕಿಂತಲೂ ಐತಿಹ್ಯವೇ ಇವನಿಗೆ ಹೆಚ್ಚು ತಿಳಿದದ್ದು. ಇವನಂತೆಯೇ ಇತರ ಎರಡು-ಮೂರುಜನ ಮಾರ್ಗದರ್ಶಕರಿದ್ದರೂ 'ಅವರನ್ನು ನಂಬೋದು ಮಹಾಕಷ್ಟ' ಎನ್ನುವಂಥ ಪರಿಸ್ಥಿತಿ. ಆಗ ಮಾರ್ಗದರ್ಶಕರಾದವರಿಗೆ ದೊರಕಬಹುದಾಗಿದ್ದ ಗರಿಷ್ಠ ಸಂಭಾವನೆಯೆಂದರೆ ಒಂದು ರೂಪಾಯಿ ! ಸಂಜೆಯಾದೊಡನೆ ಹಂಪೆಯ ಬಜಾರು (ತೇರುಬೀದಿ) ಹಾಗೂ ವಿರೂಪಾಕ್ಷ ದೇವಾಲಯಗಳಲ್ಲಿ ಹಚ್ಚುತ್ತಿದ್ದ ದೀಪಗಳನ್ನು ಬಿಟ್ಟರೆ ಉಳಿದಂತೆ ಹಂಪೆಯಲ್ಲಿ ಗಾಢಾಂಧಕಾರ ! ಕಳ್ಳಕಾಕರ ಕಾಟ.!

ವಿರೂಪಾಕ್ಷ ದೇವಸ್ಥಾನದ ಮುಂದಿನ ತೇರುಬೀದಿಯ ವರ್ಣನೆಯಿಂದ ಆರಂಭ ಗೊಳ್ಳುವ ಹಂಪೆ ಸ್ಮಾರಕಗಳ ವೀಕ್ಷಣಾಕಾರ್ಯ ಅಲ್ಲಿಂದ ಕಲ್ಲುಮೆಟ್ಟಿಲು ಹಾದಿಯಿಂದ ಮುಂದುವರೆಯುತ್ತದೆ. ದೇವಾಲಯ, ತಪ್ಪೋಗೃಹ, ಆಶ್ರಮಗಳ ಹಾಗೂ ಮುಖ್ಯವಾಗಿ ತುಂಗಭದ್ರೆಯ ಕೋಲಾಹಲದತ್ತಲೂ ನಮ್ಮ ಗಮನವನ್ನು ಸೆಳೆಯುತ್ತಾರೆ ಲೇಖಕರು. ಮೆಟ್ಟಿಲು ದಾರಿಯನ್ನು ತುಳಿದು ಮುಂದುವರೆಯುವ ಈ ತಂಡ ಅಚ್ಯುತರಾಯ ದೇವಸ್ಥಾನ, ನರಸಿಂಹಸ್ವಾಮಿ ದೇವಸ್ಥಾನವನ್ನು ಕಂಡು, ಇಲ್ಲಿ ಬ್ರಿಟಿಷರು ಕೈಗೊಂಡ ಜೀರ್ಣೋದ್ಧಾರ ಕಾರ್ಯವನ್ನು ನೆನೆದು, ಮುಂದೆ ಕೋದಂಡರಾಮಸ್ವಾಮಿ ದೇವಾಲಯ ವನ್ನು ಸೇರುವ ವೇಳೆಗೆ ಹೈರಾಣಾದುದು ವಿಶೇಷ. ಮುಳ್ಳು - ಕಲ್ಲುಗಳಿಂದ ತುಂಬಿದ ದಾರಿ ಒಂದು ಕಾರಣವೆಂದರೆ, ಮನುಷ್ಯರ ಪ್ರವೇಶವನ್ನೇ ನಿರ್ಬಂಧಿಸುತ್ತಿದ್ದ ವಿಶಾಲ ವಾಗಿ ಬೆಳದೆದಿದ್ದ ಮುಳ್ಳುಪೊದೆಗಳು ಇನ್ನೊಂದು ಮುಖ್ಯಕಾರಣ. ಹಂಪೆಯ ಹಾಳುತನ ವನ್ನು ಇನ್ನಷ್ಟು ಸಮರ್ಥಿಸುವ ತೆರನಾಗಿ ಈ ಮುಳ್ಳುಪೊದೆಗಳು ಈಚಿನವರೆಗೂ ತಮ್ಮ ಸಾಮರ್ಥ್ಯ ತೋರಿದುದನ್ನು ಮರೆಯುವಂತಿಲ್ಲ. ಇಂಥಲ್ಲೆಲ್ಲಾ ಸ್ಥಳೀಯ ಮಾರ್ಗದರ್ಶಕರ ಅಗತ್ಯ ಎಷ್ಟು ತೀವ್ರವಾಗಿರುತ್ತದೆಂಬುದನ್ನು ಗುರುತಿಸುತ್ತಾರೆ ವಿ.ಸೀ.

ಲಕ್ಷ್ಮೀನಾರಾಯಣಸ್ವಾಮಿ ದೇವಸ್ಥಾನ, ಸನ್ಯಾಸಿದಿಬ್ಬದ ಕಲ್ಲುಮಂಟಪ, ವಿದ್ಯಾ ರಣ್ಯರು, ಅಂಜನಾಪರ್ವತ-ಹೀಗೆ ಹಲವಾರು ಸಂಗತಿಗಳನ್ನು ವಿವರಿಸುವಲ್ಲಿ ವಿ.ಸೀ. ಅವರು ನುರಿತ ಕಲಾಇತಿಹಾಸಕಾರನಂತೆ, ವಿಮರ್ಶಕನಂತೆ ಪಾತ್ರವಹಿಸುತ್ತಾರೆ. ಸ್ಮಾರಕ ಗಳೆಂದರೆ ಕೃಷ್ಣದೇವರಾಯ ಮತ್ತು ಅಚ್ಯುತರಾಯರ ದಾನಗಳು, ತುಲಾಪುರುಷ ದಾನ ಸ್ತಂಭ ; ಮುಖ್ಯವಾಗಿ, ವಿಠ್ಠಲಸ್ವಾಮಿ ಗುಡಿ ಹಾಗೂ ಪಕ್ಕದಲ್ಲಿನ ದೇವರ ಕಲ್ಯಾಣ ಮಂಟಪಗಳು. ವಿಠ್ಠಲ ದೇವಸ್ಥಾನದ ಕಲ್ಯಾಣಮಂಟಪ ಕುರಿತು ವಿ.ಸೀ ಅವರ ವಿವರಣೆ

ಕಲಾವಿಮರ್ಶಕನಿಗೂ ಮೀರಿದುದು. ಈ ಸ್ಮಾರಕಗಳ ಸಮೂಹವನ್ನು ಕಂಡು ಅವರು ಎತ್ತುವ ಉದ್ಗಾರವೆಂದರೆ, "ಇಲ್ಲಿ ಇಷ್ಟು ಶೃಂಗಾರವೇತಕ್ಕೆ? ......ದೇವರು ಇಷ್ಟು ಸೌಂದರ್ಯವನ್ನು ಒಂದೇ ಕಡೆ ರಾಶಿಹಾಕಿ ಮಿಕ್ಕ ಭಾಗಗಳಿಗೆ ಬಡತನವನ್ನೇಕೆ ಕೊಟ್ಟನೊ (ಪು.೩೪) ಎಂಬುದೇ. ಒಂದೇ ಹಂತದಲ್ಲಿ ಭಾವಾವೇಶಕ್ಕೊಳಗಾಗುವ ವಿ.ಸೀ. ಅವರು, ಹಾಳುಹಂಪೆಯ ವರ್ಣನೆ ಮಾಡುವುದು ಇಲ್ಲಿ ಶಿಲ್ಪಕಲಾ ಸಂಪತ್ತನ್ನು ಹೊಗಳುವುದಕ್ಕಿಂತಲೂ ದಾರುಣವಾದುದು. ಹಾಳು ಹಂಪೆ ಕುರಿತ ವಿಸ್ತಾರವಾದ ವರ್ಣನೆಯಲ್ಲಿ ಬರುವ ಈ ಸಾಲುಗಳನ್ನು ನೋಡಿ. "ವಿಜಯನಗರ ಧ್ವಂಸವಾದು ದಂತೂ ಹಾಗಿರಲಿ ; ಆ ರಾಜರ ಇಂದ್ರಸದೃಶ್ಯವಾದ ವೈಭವಗಳು ಉಚ್ಛ್ರಾಯಾಭಿಲಾಷೆ ಗಳೂ ಮಹಾಸನ್ನಾಹಗಳು ಕಾರ್ಯಮುಖೇನ ಅಮರತ್ವ ಪಡೆಯಬೇಕೆಂದು ಅವರು ಮಾಡಿದ ಅದ್ಭುತ ಪ್ರಯತ್ನಗಳೂ ಒಟ್ಟಿಗೆ ಇಲ್ಲಿ ನಾಶ ಪಡೆದು, ಅವರ ವೈಭವರಂಗ ವನ್ನು ಈಗ ಮಹಾಸ್ಮಶಾನವನ್ನಾಗಿ ಮಾಡಿವೆ. (ಪು.೩೯).

ಹಂಪೆಯ ಸ್ಮಾರಕಗಳ ವರ್ಣನೆ ಈ ಕಥನದ ಅರ್ಧಭಾಗದಷ್ಟು ಆವರಿಸಿದರೆ, ಇನ್ನರ್ಧದಷ್ಟನ್ನು ಆವರಿಸಿಕೊಂಡಿರುವುದು ಆನೆಗೊಂದಿ ಮತ್ತು ಪಂಪಾಸರಸ್ಸು ಅಥವಾ ಪಂಪಾಸರೋವರದ ವರ್ಣನೆ. ಇಂದಿನಂತೆಯೇ ಅಂದು ಸಹಾ ತಲವಾರಘಟ್ಟದ ಬಳಿ ಅಂಬಿಗರ ಸಹಾಯದಿಂದ ಹರಿಗೋಲಿನಲ್ಲಿ ತುಂಗಾಭದ್ರಾನದಿಯನ್ನು ದಾಟಿ ಆನೆ ಗೊಂದಿಯನ್ನು ಪ್ರವೇಶಿಸುವುದು ಅನಿವಾರ್ಯವಾಗಿದ್ದಿತು. ವಿ.ಸೀ.ಅವರು ಕಂಡಂತೆ, ಆಗಿನ ಆನೆಗೊಂದಿ ಸಂಸ್ಥಾನವೆಂದರೆ 'ಜೀವಂತ ಸಂಸ್ಥಾನ'. ಅಂದರೆ ಆಗ ಅದೊಂದು ರಾಜನಗರ. ಅಲ್ಲಿ ರಾಜನೊಬ್ಬನಿದ್ದ. ಅಲ್ಲಿಯ ಅಧಿಕಾರವೆಲ್ಲಾ ಆತನದೇ. ಪ್ರಾಸಂಗಿಕ ವಾಗಿ ಆನೆಗೊಂದಿ ಸಂಸ್ಥಾನದ ರಾಜಬೀದಿ, ರಾಜ್ಯದ ಸುಂಕದ ಅಧಿಕಾರಿ ಗಳು, ನದಿಯದಂಡೆಯ ಅಂಬಿಗರು ಅಥವಾ ಹರಿಗೋಲಿನವರು ; 'ಆರೂವರೆ ಗಂಟೆ ಯಾಗಿ ಸುಂಕದ ಅಧಿಕಾರಿಗಳು ಹೊರಟು ಹೋದಮೇಲೆ ಅಂಬಿಗರು ಹರಿಗೋಲು ನಡೆಸಕೂಡ ದೆಂಬ ಸಂಸ್ಥಾನದವರ ಕಟ್ಟಾಜ್ಞೆ ; 'ಇನಾಮು' ಆಸೆಗಾಗಿ ಸಂಸ್ಥಾನದ ಕಟ್ಟಾಜ್ಞೆಯನ್ನೂ ಮೀರುತ್ತಿದ್ದ ಅಂಬಿಗರು ; ಸಂಸ್ಥಾನದ ರಾಜಬೀದಿಯೆನಿಸಿದ್ದರೂ ನಾಲ್ಕಾಣೆ ಕೊಟ್ಟರೂ ವಿ.ಸೀ.ತಂಡಕ್ಕೆ ಒಂದೇ ಒಂದು ಮೇಣದಬತ್ತಿಯೂ ಸಿಕ್ಕದ ದುಸ್ಥಿತಿ ; ಪಂಪಾಸರಸ್ಸು ಮತ್ತುಪರಿಸರದ ಗುಣಗಾನ ; ಇಲ್ಲಿ ಹಿಂದಿನಿಂದಲೂ ನೆಲಸಿ ಸೀತಾದೇವಿ ಪೂಜೆಯನ್ನು ಕೈಗೊಂಡಿರುವ ಉತ್ತರ ಪ್ರದೇಶದಿಂದ ಬಂದ ಬೈರಾಗಿಗಳು ಅಥವಾ ಗೋಸಾಯಿಗಳ ವಿಚಾರ ; ಮುಖ್ಯವಾಗಿ ಈ ಗೋಸಾಯಿಗಳಿಗೆ ಆನೆಗೊಂದಿ ರಾಜನು ಆಶ್ರಯ ನೀಡಿರುವ ವಿಚಾರ-ಹೀಗೆ ಹಲವಾರು ಸೂಕ್ಷ್ಮ ಅಂಶಗಳನ್ನು ಪ್ರಸ್ತಾಪಿಸುತ್ತಾರೆ ವಿ.ಸೀ. ಕೊಟ್ಟಿರುವ ಪಂಪಾಸರಸ್ಸಿನ ವರ್ಣನೆಯನ್ನು ಓದತೊಡಗಿದಂತೆ, ಈ ರಮಣೀಯ ಎಡೆಯ ವೀಕ್ಷಣೆಗೆಂದು ಪ್ರವಾಸ ಕೈಗೊಳ್ಳುವ ತವಕ ಓದುಗರಲ್ಲಿ ಉಂಟಾಗುವುದಾದರೆ ಅದು ಆಶ್ಚರ್ಯಪಡುವಂಥ ಸಂಗತಿಯೆನಿಸದು.

ಅಂಜನಾಪರ್ವತದ ತಪ್ಪಲಲ್ಲಿ, ತಿಳಿಹಸಿರಿನ ಮೃದು ಚೌಕಟ್ಟಿನಲ್ಲಿ ನೆಲಸಿರುವ ಪ್ರಶಾಂತ ಪಂಪಾಸರಸ್ಸನ್ನು ಕುರಿತು ವಿ.ಸೀ. ಅವರ ವರ್ಣನೆ ಸ್ವಲ್ಪಮಟ್ಟಿಗೆ ಭಾವಾವೇಶದಿಂದ ಕೂಡಿದೆಯೆಂದನಿಸಿದರೂ, ಅದು ವಸ್ತುನಿಷ್ಠ ವಿವರಣೆಯಂತೆಯೂ ಕಂಡು ಬರುವುದುಂಟು. ಸೂಕ್ಷ್ಮಸ್ವಭಾವದ ಅವರ ನಿರೂಪಣೆ, ಸತ್ಯ-ಶಿವ-ಸೌಂದರ್ಯದ ದರ್ಶನದಂತೆಯೂ ಭಾಸವಾಗುತ್ತದೆಂದರೆ ಉತ್ಪ್ರೇಕ್ಷೆಯೇನೂ ಅಲ್ಲ. ವಿ.ಸೀ.ಅವರ ಈ ಬಗೆಯ ನಿರೂಪಣೆಗೆ ಅವರೇ ಕಂಡುಕೊಂಡ ಸ್ಥಳದ ಹಿರಿಮೆ, ಅದರ ಚರಿತ್ರೆಯ ಆಳದಲ್ಲಿ ಹುದುಗಿರುವ ರಾಮಾಯಣ ಕಾಲದ, ವಿಜಯನಗರ ಕಾಲದ ಮತ್ತು ಕಲೆಯ ಇತಿಹಾಸದ ಸಾಂಗತ್ಯ'ವೇ (ಪು.೩-೪). ಕಾರಣವೆನ್ನಬಹುದು. ಪಂಪಾಸರಸ್ಸನ್ನು ಕುರಿತು ಅವರ ವಿವರಣೆಯೆಂದರೆ, ಎಲ್ಲೆಲ್ಲಿಯೂ ನಿಶ್ಶಬ್ಧ. ಆದರೆ ಆ ನಿಶ್ಯಬ್ದತೆಯು ಯಾವ ನಿರ್ಜೀವ ವಸ್ತುವಿನ ಅಥವಾ ನಿದ್ರಿತ ವಸ್ತುವಿನ ನಿಶ್ಯಬ್ದತೆಯಂತೆ ಇಲ್ಲ ; ಮೂಢನ ಅಥವಾ ಗರ್ವಿಯ ಮೌನದಂತೆಯೂ ಇಲ್ಲ. ಶಬ್ದಕ್ಕೆ ಇಲ್ಲಿ ಸ್ಥಳವಿಲ್ಲ, ಅವಕಾಶವಿಲ್ಲ ಅಷ್ಟೇ. ವ್ಯವಹಾರ ಪ್ರಪಂಚ ಈ ಭೂಭಾಗದ ಹೊರ ಎಲ್ಲೆಗೆ ಬಹುದೂರದಲ್ಲಿ ಎಲ್ಲಿಯೊ ಕೊನೆಗೊಂಡಂತಿದೆ. ಅದಕ್ಕೂ ಇದಕ್ಕೂ ಯಾವ ವಿಧವಾದ ಸಂಪರ್ಕವೂ ಇಲ್ಲ. ಬೆಟ್ಟಗಳು ಕೂಡ ಇಲ್ಲಿ ನಮ್ರತೆಯಿಂದ, ಉಚ್ಚಮನೋಭಾವದಿಂದ, ನಿರ್ಮಲ ಚಿತ್ತದಿಂದ ಸರಸ್ಸಿಗೆ ಮರ್ಯಾದೆಯಿತ್ತು ಆದರ ಶಾಂತಿಯನ್ನು ಕಾಪಾಡಿ ಕೊಂಡು ಬಂದಿವೆ. ಸರಸ್ಸಿನ ಅಧಿದೇವತೆಗೆ ಎಲ್ಲ ಪ್ರಕಾರದಿಂದಲೂ ನೆರವು ಕಾಣಿಕೆಗಳ ನ್ನರ್ಪಿಸಿವೆ. ಆ ದೇವತೆಯ ಪ್ರತಿನಿಧಿಯಾಗಿ ತಡಿಯ ದೇವಾಲಯದ ಗಹ್ವರ ಪ್ರದೇಶ ದಿಂದ ಸೀತಾದೇವಿ ತನ್ನ ಪ್ರೇಮಾಧಿಕಾರವನ್ನು ಹೂಡಿ, ಬಾಹ್ಯಾಚರಣೆಗಳೆಲ್ಲವನ್ನೂ ವ್ಯವಸ್ಥೆ ಮಾಡಿ, ತನ್ನ ಸೇವಕರ ಮೂಲಕ ಕಾರ್ಯಭಾರ ನಡೆಸುತ್ತಿದ್ದಾಳೆ. ಅವರೂ ಅಮಾನುಷವಾದ, ಸಾಮಾನ್ಯ ಲಭ್ಯವಲ್ಲದ ಆ ಆವರಣದಲ್ಲಿ ಕಲೆತು ಒಂದಾಗಿ ಹೋಗಿದ್ದಾರೆ. ಆ ಗೋಸಾಯಿಗಳು ಸಾಕಿಕೊಂಡಿರುವ ಬೊಗಸೆಗಣ್ಣಿನ ಹರಿಣಿಯೊಂದು ಅಲ್ಲಿನ ಸಾತ್ವಿಕ ಸೌಂದರ್ಯಕ್ಕೆ ಅನುರೂಪವಾಗಿ ರಾರಾಜಿಸುತ್ತದೆ. ಆನೇಕ ಶತಮಾನಗಳ ಪರ್ಯಂತ ಯೋಗನಿರತನಾಗಿ ತಪಶ್ಚರ್ಯೆಯಿಂದ ಶಾಂತಾತ್ಮವನ್ನೂ ಸಿದ್ಧಿಯನ್ನೂ ಪಡೆದು, ಎಲ್ಲ ವ್ಯಾಮೋಹ ಮಮತೆಗಳನ್ನೂ ತೊರೆದು, ಮಲಿನವಾಗದ ತೇಜಸ್ಸಿನಿಂದ ಪ್ರಪಂಚವನ್ನು ಬೆಳಗಿ, ಏಕಾಗ್ರತೆಯಿಂದ ಸದಾನಂದವನ್ನು ಅನುಭವಿಸುತ್ತಿರುವ ಯೋಗಿವರ್ಯನಂತೆ ಸರಸ್ಸು ಕಾಣುತ್ತದೆ.

"ಇಲ್ಲಿನದು ತಿಳಿಯಾಗಿ ಹೊಳೆವ ಪುಣ್ಯೋದಕ. ಶ್ರೀರಾಮಪಾನದಿಂದ ಪವಿತ್ರ ವಾದದ್ದು. ಕನ್ನಡಿಯಂತೆ ಶುಭ್ರತೇಜಸ್ಸಿನಿಂದ ಹೊಳೆವ ಅದರ ಪಕ್ಕದಲ್ಲಿ ಅಲ್ಲಲ್ಲಿ ತಾವರೆನೈದಿಲೆ ಹೂಗಳು ಹಗಲೆಲ್ಲ ಅರಳಿದ್ದು ಈಗ ಅರ್ಧಅರ್ಧವಾಗಿ ಅವಗುಂಠಿತ ವಾಗುತ್ತಿರುವಂತೆ. ಸುತ್ತಣ ಹೂಗಿಡಗಳೂ ಪರ್ವತಪಂಕ್ತಿಗಳೂ ತಮ್ಮ ಪ್ರತಿಬಿಂಬ ಗಳನ್ನು ಅದರೊಳಗೆ ಕಾಣುತ್ತ ಕೃತಕೃತ್ಯತೆಯನ್ನು ಪಡೆವಂತಿವೆ. ಉಗ್ರವಾಗಿ ಬೀಸುವ ಮಾರುತ ಕೂಡ, ಭಕ್ತಿಯಿಂದ ಮೃದುವಾಗಿ ಚಲಿಸಿ, ಸರಸ್ಸಿನ ಗೋಜಿಗೆ ಹೋಗದೆ

ತನ್ನ ಸ್ವಾಚ್ಛಂದ್ಯವನ್ನು ಮರೆತು, ಮೆಲ್ಲನೆ ಸುಳಿದು ಹೋಗುತ್ತಿದೆ. ಪಕ್ಕದ ಪರ್ವತ ಶಿಖರಗಳೊಂದಿಗೆ ಎಷ್ಟೋ ಬಾರಿ ಸರಸದಿಂದ ಕ್ರೀಡಿಸಿದ್ದ ಸಿಡಿಲುಗಳೂ ದರ್ಪಾಹತ ವಾಗಿ ಈ ಶಾಂತಿಯಲ್ಲಿ ಲಯವಾಗಿ ಹೊಗಿರಬೇಕು. ದಿಕ್ಕುಗಳನ್ನು ತಿವಿದಳಿಸಿ ಉರಿಸಿ ಕೊಂಡು ಕ್ಷಣಮಾತ್ರದಲ್ಲಿ ಭೂವಲಯವನ್ನೇಳುಸುತ್ತು ಸುತ್ತಿ ಭೂಮ್ಯಾಕಾಶಗಳನ್ನು ಒಂದುಮಾಡಿ ಹೊಳೆದುಹೋಗುವ ಮಿಂಚು ಈ ಸರಸ್ಸಿಗೆ ತನ್ನ ಕಾಂತಿಯನ್ನು ಕಾಣಿಕೆ ಕೊಟ್ಟು, ಪರಾಜಯವನ್ನು ಒಪ್ಪಿಕೊಂಡು ಶಿಷ್ಯವೃತ್ತಿಯಾಚರಿಸಿರಬೇಕು. ಡೊಳ್ಳು ಡೋಳಿನ ಆಡಂಬರವನ್ನು ನೂರ್ಮಡಿ ಮಾಡಿ ಅಬ್ಬರಿಸುವ ಗುಡುಗುಗಳಂತೂ ಇಲ್ಲಿನ ವರೆಗೂ ಬರಲು ಕೂಡ ಧೈರ್ಯವಿಲ್ಲದೆ ಸದ್ದಿಲ್ಲದೆ ಕಣ್ಣಿಗೆ ಕಾಣದೆ, ಹೇಗೋ ಎತ್ತಲೋ ಅಡಗಿಹೋಗಿರಬೇಕು. ಇತ್ತಲಾಗಿ ಇವೆಲ್ಲವನ್ನೂ ನೋಡುತ್ತ, ಪುರಾತನ ದಿಂದ ಈ ವರೆಗಿನ ಎಲ್ಲ ವಿಧವಾದ ಕಾರ್ಯಕ್ರಮಗಳನ್ನೂ ಕಣ್ಣಾರಕಂಡು ಎಲ್ಲವನ್ನೂ ತಿಳಿದುಕೊಂಡಿದ್ದರೂ ಏನೂ ತಿಳಿಯದೆ ತನ್ನ ಒಳ ಆನಂದದಲ್ಲಿ ತಾನು ಮಗ್ನನಾಗಿರುವ ಸಿದ್ಧನಂತೆ ಈ ಸರಸ್ಸು ಕಾಣುತ್ತದೆ" (ಪು ೪೫-೪೭).

ವಿ.ಸೀ.ಅವರ ದೃಷ್ಟಿಯಲ್ಲಿ, ಹಂಪೆಯೊಂದು ಪುಣ್ಯಕ್ಷೇತ್ರ, ಸೌಂದರ್ಯದ ಪಾಳು, ಪಾಳೆಯ ಹಾಗು ಶಾಂತಿಯ ರುದ್ರಭೂಮಿ ; ಎರಡು ದಿನಗಳ ಅಲ್ಪಾವಧಿಯಲ್ಲಿ ಇನ್ನೂರ ಐವತ್ತು ವರುಷಗಳ ಚರಿತ್ರೆಯನ್ನು ಸತ್ವತಃ ಅನುಭವಮಾಡಿಸಿಕೊಟ್ಟು, ಒಂದೇ ಕಾಲದಲ್ಲಿ ಸುಖದುಃಖ ಉಂಟುಮಾಡಿದ ನೆಲೆ. ಹಂಪೆಯನ್ನು ಚರಿತ್ರಕಾರನ, ಕಲಾವಿಮರ್ಶಕನ, ರಸಿಕರ, ದಾರ್ಶನಿಕನ ದೃಷ್ಟಿಯಿಂದ ಸಾಧ್ಯವಾದಲ್ಲೆಲ್ಲ ವೀಕ್ಷಿಸಿ ಸಂಭ್ರಮಿಸಿದ, ರೋಸಿದ, ಹೇವರಿಸಿದ, ವಿಷಾದಿಸಿದ ವಿ.ಸೀ., ತಮ್ಮ ಪ್ರವಾಸಕಥನದ ಅಂತ್ಯದಲ್ಲಿ ಹಂಪೆಯಲ್ಲಿ ನೋಡಬೇಕಾದುದನ್ನು ಹಾಗೂ ಮಾಡಬೇಕಾದುದನ್ನು ಕುರಿತು ಕೊಡುವ ಸೂಚನೆಗಳು ಸರ್ವಕಾಲಕ್ಕೂ ಎಲ್ಲ ಪ್ರವಾಸಿಗರು ನೆನಪಿಟ್ಟುಕೊಳ್ಳ ಬೇಕಾದಂಥವು ಹಾಗೂ ಅನುಸರಿಸಬೇಕಾದಂಥವೆಂದರೆ ತಪ್ಪಿಲ್ಲ. ಇದು ಒಂದು ವಿಧದಲ್ಲಿ 'ವಿ.ಸೀ.ಮಾರ್ಗಸೂಚಿ'. ಅವರು ಹೇಳುವುದೆಂದರೆ, ಈ ಪ್ರದೇಶವನ್ನೂ ನೋಡುವುದಕ್ಕೆ ಕೀಳೆಣಿಕೆಯಲ್ಲಿ ಒಂದು ವಾರವಾದರೂ ಬೇಕು. ಆ ಪಾಳುಗಳಲ್ಲಿ ಸ್ವಚ್ಛಂದವಾಗಿ ತಿರುಗಾಡಬೇಕು. ಅಲ್ಲಿನ ಚಮತ್ಕೃತಿಗಳನ್ನು ಪರಿಶೀಲಿಸಬೇಕು. ಅಲ್ಲಿನ ವಸ್ತುಚಯವನ್ನು ಮೇಲಿಂದ ಮೇಲೆ, ಒಂದು ಪರ್ವತದ ಮೇಲಿಂದ ಇನ್ನೊಂದಕ್ಕೆ ಹೋಗಿನಿಂತು ನದಿ ಕಾಲುವೆ ಗುಡಿ ಗೋಪುರ ಕೊತ್ತಲ ಮುಂತಾದವುಗಳು ನೆಲಸು ಬೆಡುಗುಗಳನ್ನು ನೋಡಬೇಕು. ಸೂರ್ಯೋದಯ ಸೂರ್ಯಾಸ್ತಗಳ ಕೋಟಿ ಕಳೆಕಾಂತಿ ಗಳನ್ನು ಕಣ್ಣಿನಿಂದ ನೋಡಿ, ಅದರಲ್ಲಿ ಮನಸ್ಸನ್ನು ಜಾಲಿಸಿ ತೊಳೆದು, ಹೃದಯವನ್ನು ತೆರೆದು ವಿಶಾಲಗೊಳಿಸಿ ಆನಂದಿಸಬೇಕು. ಎಲ್ಲ ಪ್ರದೇಶಗಳನ್ನು ಗುರುತಿಸಿ ಅಲ್ಲಲ್ಲಿ ಕುಳಿತು ಆಯಾ ಸ್ಥಳಗಳಿಗೆ ಸಂಬಂಧಪಟ್ಟ ವ್ಯಕ್ತಿಗಳನ್ನೂ ಘಟನೆಗಳನ್ನೂ ಸನ್ನಿವೇಶ ಗಳನ್ನೂ ಕಲ್ಪಿಸಿಕೊಂಡು ಅವುಗಳಲ್ಲಿ ಪ್ರಾಣಪ್ರತಿಷ್ಠಾಪನೆ ಮಾಡಿ, ಅವುಗಳೊಡನೆ ಕಲೆತು ಪುನಃ ನಮ್ಮೆದುರಿಗೆ ಅವು ಜೀವಿಸುವಂತೆ ಮಾಡಿಕೊಳ್ಳಬೇಕು. ಪೆನುಗೊಂಡ

ಕೊಂಡ ನಮ್ಮ ಗೆಳೆಯರ ಅಣ್ಣಂದಿರು ವರ್ಣಿಸಿರುವಂತೆಯೇ 'ತೆನುಗು ಕತ್ತುಲು ಸಾನಬೆಟ್ಟಿನ ಪಚ್ಚಿ ನೆತ್ತರು ಕಂಡ ಮಾ ಪೆನುಗೊಂಡಯನ್ನು ಕೊಂಡ' ಎಂದರಲ್ಲವೇ? ಅಂದಿನವರಂತೆಯೇ ಉಕ್ಕಿನ ಅಲಗುಗಳನ್ನು ಸಾಣೆಯಕಲ್ಲಿನ ಬಂಡೆಗಳ ಮೇಲೆ ಹರಿತ ಮಾಡಿಕೊಳ್ಳಬೇಕು. ಅವರೊಡನೆ ಸೇರಿ ಹೋರಾಡಬೇಕು. ಹೊಸ ಜೀವನ ಸಂಗ್ರಾಮಕ್ಕೆ ಸಿದ್ಧರಾಗಬೇಕು. ತಾನು ಮಾಡೋಣ ಎಂದು ಗಣಿಸುತ್ತ, ಚಿಂತಾಮಗ್ನರಾಗಿ ಅಲ್ಲೆ ಎಲ್ಲೆಲ್ಲಿಯೂ ಹಗಲೆನ್ನದೆ ಇರುಳೆನ್ನದೆ, ಒಂಟಿಯಾಗಿ ತಿರುಗಾಡುತ್ತಿರುವ ವಿದ್ಯಾರಣ್ಯರ ದರ್ಶನವನ್ನು ಮಾಡಿಕೊಳ್ಳಬೇಕು.... (ಪು ೭೬-೭೭). ಆಗ ಮಾಡಿದ ಕಾರ್ಯ ಹೀಗಾಯಿತಲ್ಲ ಮುಂದೆಯಾವುದನ್ನು ಹೇಗೆಮಾಡೋಣ ಎಂದು

ಹಂಪೆಯ ಆಕೃತಿಯು ವಿ.ಸೀ.ಅವರ "ಪಂಪಾಯಾತ್ರೆ"ಯಲ್ಲಿ ಜೀವಂತವಾಗಿ ಮೂಡಿದೆ. ವಿಜಯನಗರವನ್ನು ಹಿಂದೂ ಸಾಮ್ರಾಜ್ಯವೆಂದೂ ಸ್ಮಾರ್ತ ಸಾಮ್ರಾಜ್ಯ ವೆಂದೂ ಮೇಲಿಂದ ಮೇಲೆ ಗುರುತಿಸುವ ಲೇಖಕರು, ಅದರ ಗತವೈಭವದ ನೆನಪನ್ನು ಕೆದುಕು ತ್ತಲೆ ಮುಂದುವರೆಯುತ್ತಾರೆ. ಇದರೊಡನೆ ಸಾಮ್ರಾಜ್ಯದ ಮರಣದ ಬಗೆಗಿನ ದಟ್ಟ ವಾದ ವಿಷಾದಛಾಯೆಯೂ ಪುಸ್ತಕದ ತುಂಬಾ ಹರಡಿಕೊಂಡಿದೆ. ರಾಮಾಯಣದ ಪ್ರಸ್ತಾಪ ಸಹಾ ಸಾಕಷ್ಟಿದೆ.. ಲೇಖಕರು ಕಾಣುವ ಕನಸುಗಳ ಸಂದರ್ಭವಂತೂ ವಿಜಯ ನಗರ ಸಾಮ್ರಾಜದ ಘನತೆಯನ್ನು ಚಿತ್ರಿಸುವ ಪ್ರಯತ್ನವೆನ್ನಬೇಕು. ಇದೊಂದು ಸುಂದರ ನಿರೂಪಣೆ. ವಿಜಯನಗರದ ಇತಿಹಾಸವನ್ನು ಸೂಕ್ಷ್ಮನೆಲೆಯಲ್ಲಿ ಸಮಗ್ರವಾಗಿ ನಿರೂಪಿಸುವ ಮಟ್ಟಿಗೆ ಲೇಖಕರ ಪ್ರತಿಭೆ ಇಲ್ಲಿ ಪರಿಣಾಮಕಾರಿಯಾಗಿ ಹೊರ ಹೊಮ್ಮಿದೆ. ಇಂಥ ಎಷ್ಟೋ ಪೂರಕ ಸಂಗತಿಗಳನ್ನು ವಿ.ಸೀ. ಅವರು ತಮ್ಮ ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ.

ಹಂಪೆ ಪರಿಸರದಲ್ಲಿ ತಾವು ತಮ್ಮ ಹಿರಿಯ ಮಿತ್ರರೊಂದಿಗೆ ನಡೆಸಿದವಿದ್ವತ್ ಚರ್ಚೆ, ಸರಸ ಸಲ್ಲಾಪ, ಹುಸಿಜಗಳ ಅನುಭವಿಸಿದ ಒಂದೆರಡು ಕಪಿಪ್ರಸಂಗಗಳು ; ಕುತೂಲಕಾರಿಯಾದೊಂದೆರಡು ವಿಚಿತ್ರಗಳು -ಹೀಗೆ ಸ್ವಾರಸ್ಯವಾದುದೆಲ್ಲವನ್ನೂ ತಮ್ಮ ಆಕೃತಿಯಲ್ಲಿ ದಾಖಲಿಸಿದ್ದಾರೆ ವಿ.ಸೀ. ಇವೆಲ್ಲವೂ ಹಂಪೆಯಾತ್ರೆಗೆ ಪೂರಕವೆನಿಸುವ ಸಂಗತಿಗಳೇ. ಪ್ರವಾಸಿಗರನೇಕರಿಗೆ ಇಂದಿಗೂ ಇಂಥವೇ ಅನುಭವವಾಗುವದು ಸಹಜ. 'ಪಂಪಾಯಾತ್ರೆ' ಇಂದಿಗೂ ಪ್ರಸ್ತುತವೆನಿಸಿರುವುದು ಈ ಕಾರಣಕ್ಕಾಗಿಯೇ. ಮುಖ್ಯವಾಗಿ, ಕಾಫಿ ಸೇವನೆಯ ವಿನೋದ ಪ್ರಸಂಗ (ಪು.೧೭-೨೧), ಆನೆಗೊಂದಿಯಲ್ಲಿ ಬಲವಾಗಿ ಬೀಸಿದ ಗಾಳಿ-ಮಳೆಗೆ ಛತ್ರಿ ತಲೆಕೆಳಗಾಗಿ ನಿಂತದ್ದು (ಪು.೪೯), ಆನೆಗೊಂದಿಯಲ್ಲಿ ಅಂಬಿಗರು ಹರಿಗೋಲಿನಲ್ಲಿ ತುಂಗಾಭದ್ರಾನದಿಯನ್ನು ದಾಟಿಸುವ ಮುನ್ನ ತಂಡದವರು ಪರದಾಡಿದ್ದು (ಪು.೫೧-೫೨), ಕಗ್ಗತ್ತಲಲ್ಲಿ ಹಂಪೆಯ 'ಸೀತಾಸೆರಗು' ಎಡೆಯಲ್ಲಿ ಸಿಡಿದ ಸಿಡಿಲಿನ ಭೀಕರಾನುಭವ (ಪು.೫೬), ಮಾರ್ಗದರ್ಶಿ ಬೈರಾಗಿ ಚೆನ್ನಯ್ಯನ ಬೀಡಿ ಬೆಳಕಿನಲ್ಲಿ ಅಂಧಕಾರಭರಿತ ಒನಕೆಕಿಂಡಿಮಾರ್ಗದಲ್ಲಿ ಸಾಲಾಗಿ ಚಲಿಸಿ ಪಾರಾದದ್ದು (ಪು.೫೭), ಮಳೆಯ ದೆಸೆಯಿಂದ ಹೊರಬಂದ ನೂರಾರು ಭೇಕ (ಕಪ್ಪೆ)ಗಳ ಸಮೂಹ

ಗಾನ (ಪು.೫೭-೫೮), ಕೆಸರಲ್ಲಿ ಸಿಕ್ಕು ಹರಿದ ಎಕ್ಕಡದಿಂದಾದ ಫಜೀತಿ (ಪು.೫೯-೬೨) ಮೊದಲಾದವು ರಸವತ್ತಾಗಿ ಮೂಡಿಬಂದಿವೆ. ಇವೆಲ್ಲ ಗುರುತಿಸಬಹು ದಾದರೆ, ವಿ.ಸೀ. ಅವರ ಜೀವನೋತ್ಸದ, ಅಮಿತ ಆತ್ಮ ವಿಶ್ವಾಸ, ಸೂಕ್ಷ್ಮನೋಟ, ವಯಸ್ಸಿಗನುಗುಣವಾದ ಸಹಜ ನಡವಳಿಕೆ, ನಳನಳಿಸುವ ತಾಜಾತನದ ರಸಿಕ ಭಾವನೆಗಳಿಂದ ಕೂಡಿದ ಮಾತು, ಶುದ್ಧ ಹೃದಯದಿಂದ ಹೊರಹೊಮ್ಮಿದ ಉನ್ನತ ವಿಚಾರಗಳು, ಹಿರಿಯರ ಬಗೆಗಿನ ಅಪಾರ ಶ್ರದ್ಧೆ-ಗೌರವ ಇತ್ಯಾದಿ. ದೈವಸಾನ್ನಿಧ್ಯದಲ್ಲಿಯೂ ದೈವ ಸಿದ್ಧಾಂತಗಳ ಒಡನಾಟದ ನಡುವೆಯೂ ತಮ್ಮ ವೈಚಾರಿಕ ನಿಲಯವನ್ನು ಉಳಿಸಿಕೊಳ್ಳಬಲ್ಲ ಹಾಗೂ ಪ್ರದರ್ಶಿಸಬಲ್ಲ ದಿಟ್ಟತನ ವಿ.ಸೀ.ಅವರದು. ಒಟ್ಟಿನಲ್ಲಿ, 'ಪಂಪಾಯಾತ್ರೆ' ಯೆಂಬುದು ಸಹೃದಯಿಯೋರ್ವನ ಸದಭಿರುಚಿಯ ಬರಹ.

ಪಂಪಾಯಾತ್ರೆ ಪ್ರಕಟಗೊಂಡು ಹತ್ತಿರ ಹತ್ತಿರ ಎಂಬತ್ತು ವರ್ಷಗಳಾದರೂ ಇಂದಿಗೂ ಈ ಕೃತಿಗಿರುವ ಆದರಣೆ ಗಮನಾರ್ಹ. ಈ ಮಟ್ಟಿಗೆ ಈ ಕೃತಿಯು ಹಂಪೆ ಪರಿಸರದ ನಿಖರ ಮಾಹಿತಿಯನ್ನೂ ರಮಣೀಯ ಎಡೆಗಳ ರಸಭರಿತ ವರ್ಣನೆಯನ್ನೂ ದರ್ಶಿಸುವ ದೃಷ್ಟಿಯಿಂದ ಒಂದು ಹಂತದಲ್ಲಾದರೂ ಪರಿಗಣಿಸಲೇಬೇಕಾದ ಅನಿವಾರ್ಯತೆಯನ್ನು ಮನಗಾಣಿಸಿಕೊಡುತ್ತದೆನ್ನುವುದರಲ್ಲಿ ಸಂಶಯವಿಲ್ಲ.

ಟಿಪ್ಪಣಿಗಳು

೧. ಈ ಪ್ರಬಂಧವು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು-ತನ್ನ ಜನಪ್ರಿಯ ಪುಸ್ತಕಮಾಲೆಯಲ್ಲಿ ೧೯೯೦ ರಲ್ಲಿ ಪ್ರಕಟಿಸಿರುವ 'ಪಂಪಾಯಾತ್ರೆ'ಯ ೫ನೆಯ ಅವೃತ್ತಿಯನ್ನು (೧೯೮೩) ಅನುಸರಿಸಿದೆ.

೨. ಪ್ರವಾಸ ಸಾಹಿತ್ಯ ಒಂದು ಅಧ್ಯಯನ (ಸಂ : ಮಲ್ಲೇಶಪುರಂ ಜಿ.ವೆಂಕಟೇಶ), ೧೯೯೨, ಹೊನ್ನ ಪ್ರಕಾಶನ, ಬೆಂಗಳೂರು, ಪು.೧೭ (ಲೇಖನ : ಕನ್ನಡದಲ್ಲಿ ಪ್ರವಾಸಸಾಹಿತ್ಯ ಭಾರತ')

೩. ಪಂಪಾಯಾತ್ರೆ, ಪು.೩-೪

೪. ಸಾಲುದೀಪಗಳು (ಸಂ : ಜಿ.ಎಸ್.ಸಿದ್ದಲಿಂಗಯ್ಯ, ಎಂ.ಎಚ್.ಕೃಷ್ಣಯ್ಯ), ೧೯೯೦, ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು, ಪು.೧೩೧. (ಲೇಖನ : 'ವಿ.ಸೀ.')

೫. ಶ್ರೀ-ರಂಗ-ಮಂಗ, ೧೯೪೬, ಮುಕ್ಕಣ್ಣ ಯಾತ್ರೆ, ರಂಗಮಂಗ ಪ್ರಕಾಶನ, ಧಾರವಾಡ, ಪು.೮.: ಮುನ್ನುಡಿ

೬. ಬಾಡದ ಹೂವುಗಳು, ೧೯೭೭, ಅಪರ್ಣ ಪ್ರಕಾಶನ ,ಮೈಸೂರು, ಪು.೮೧ಲೇಖನ ವಿ.ಸೀ.ಅವರ ಪಂಪಾಯಾತ್ರೆ

೭. ಉದಾ : ಎ.ಹೆಚ್.ಲಾಂಗ್‌ಹರ್ಸ್ಟ್ ಅವರ ಹಂಪಿ ರೂಯಿನ್ಸ್ (೧೯೨೫, ಕಲ್ಕತ್ತಾ)

೩೯. ಹರಿದಾಸರು ಕಂಡ ಜನಜೀವನ : ಇಣುಕು ನೋಟ

ಎಂ.ಎಸ್.ಗುರುರಾಜಾಚಾರ್ಯ

ಪ್ರಸ್ತಾವನೆ

ತಮ್ಮ ಆತ್ಮೋನ್ನತಿಯನ್ನು ಸಾಧಿಸುವದು ಮಾತ್ರವಲ್ಲದೆ, ತಾವು ಬದುಕಿ ಬಾಳುತ್ತಿರುವ ಸಾಮ್ರಾಜ್ಯವನ್ನು ಮೇಲೆತ್ತಲು ಪ್ರಯತ್ನಿಸಿರುವುದು ಭಾರತೀಯ ಸಂತರ ಪರಂಪರೆಯ ಒಂದು ಪ್ರಧಾನ ಲಕ್ಷಣ. ಪರಮಾರ್ಥಸಾಕ್ಷಾತ್ಕಾರಕ್ಕೆ ಜ್ಞಾನ ಕರ್ಮಗಳಿಗಿಂತ ಭಕ್ತಿಯೇ ಹೆಚ್ಚು ಪ್ರಶಸ್ತ ಮಾರ್ಗವೆಂಬ ಅಂಶವನ್ನು ದೇಶದ ಮೂಲೆಮೂಲೆಗೂ ಹರಡಿದರು. ಹೀಗೆ 'ಭಕ್ತಿಪಂಥ' ಪ್ರಾರಂಭವಾಗಿ ಸಂತರ-ಭಕ್ತರ ಒಂದು ಮಹಾಪೂರವೇ ಹರಿಯಿತು.

ದಕ್ಷಿಣಾಪಥದಲ್ಲಿ ತಮಿಳುದೇಶದ ವೈಷ್ಣವ ಸಂತರು, ಮಹಾರಾಷ್ಟ್ರದಲ್ಲಿ ವಾರಾಕಾರಿ ಸಂತರು ಕರ್ನಾಟಕದಲ್ಲಿ ವೀರಶೈವಶರಣರು ಮತ್ತು ಹರಿದಾಸರು... ಹೀಗೆ ಎಲ್ಲರೂ ಈ ಪ್ರವಾಹದಲ್ಲಿ ಮಿಂದಂಥವರೇ.

ಯಜ್ಞ-ಯಾಗ, ಜಪ-ತಪಗಳನ್ನು ಸಾಧಾರಣ ಜನರು ಸಾಧಿಸಲಾರರಷ್ಟೆ. ಅವರಿಗೆ ಭಗವದಾನುಗ್ರಹವಾಗಲು, ಶ್ರೀಹರಿಯ ನಾಮಸ್ಮರಣೆ ಮಾಡಿದರೆ ಸಾಕೆಂಬ ಸರಳ ಮಾರ್ಗವನ್ನು ತೋರಿಸಿಕೊಟ್ಟರು. ಸುಲಭ ಪೂಜೆಯ ಗುಟ್ಟನ್ನು ಕಿವಿಮಾತಿನಲ್ಲಿ ಹೇಳಿದರು. ಶ್ರೀಪಾದರಾಜರು (ಉಗಾಭೋಗ) ಹೇಳುತ್ತಾರೆ.

ಕೃತಯುಗದಲ್ಲಿ ಧ್ಯಾನವು ತ್ರೇತಾಯುಗದಲ್ಲಿ ಯಜನ ಯಜ್ಞನಗಳು ದಾನವಾಂತಕನ ಅರ್ಚನೆ ದ್ವಾಪರಯುಗದಲ್ಲಿ "ಕಲಿಯುಗದಿ ಗಾನದಲಿ ಕೇಶವಎನಲು ಕೈಗೊಡುವನು ರಂಗವಿಠಲ" ಆ ಮಾನವರಿಗಷ್ಟು ಫಲವೋ ಅಷ್ಟೇ ಫಲವು ಇವರಿಗೂ ಕೊಡುವನಂತೆ ಶ್ರೀ ಹರಿಯು !

ಮತ್ತೊಂದು ಕಡೆ (ಸುಳಾದಿ)

"ಹರಿಯೇ ನಿನ್ನ ಒಮ್ಮೆ ನೆನೆದವ
ನರಕವ ಹೊಗನಂತೆ" ಎನ್ನುತ್ತಾರೆ.

ಕನಕದಾಸರು "ನರರು ದುಷ್ಕರ್ಮದಲಿ ಮಾಡಿರದ ಪಾಪ ತೊಲಗಲು, ನಿನ್ನ ನಾಮಸ್ಮರಣೆಯೊಂದೇ ಸಾಲದೆ" ಎನ್ನುತ್ತಾರೆ.

ಪುರಂದರ ದಾಸರು "ಸ್ಮರಣೆ ಒಂದೇ ಸಾಲದೆ, ಗೋವಿಂದನ ಸ್ಮರಣೆ ಒಂದೇ ಸಾಲದೆ" ಎಂಬ ಹಿತನುಡಿಯನ್ನು ಎಲ್ಲ ಜನರಿಗೂ ಬೋಧಿಸುತ್ತಾರೆ. "ಕಡು ಮೂರ್ಖನಾದರೇನೋ? ಸರ್ವಪ್ರಾಣಿ ಘಾರಕಿಯಾಧರೇನೋ ? ನೀತಿಯಬಿಟ್ಟು ದುಷ್ಕರ್ಮಿಯಾದರೇನೋ ಪ್ರೀತಿಯಿಂದ ಅಜಾಮಿಳನನ್ನು ಸಲುಹಲಿಲ್ಲವೆ ನಮ್ಮ ಶ್ರೀ ಹರಿ ! ಹೀಗೆ ಹರಿಸ್ಮರಣೆಯ ಮಹತ್ವವನ್ನು ಎತ್ತಿ ಹಿಡಿದಿದ್ದಾರೆ. ಇದಕ್ಕೆ ಸಾಕ್ಷಿ ಪ್ರಹ್ಲಾದ, ಧರ್ಮರಾಯ, ದ್ರೌಪದಿ, ಅಜಾಮಿಳ, ವಿಭೀಷಣ, ಅಂಬರೀಷ, ಗಜೇಂದ್ರ, ಇತ್ಯಾದಿ.

'ದಾಸಕೂಟ' ದವರು ತಮ್ಮ ಪರಂಪರೆಯನ್ನು ಸ್ಮರಿಸುವಾಗ ಶ್ರೀಪಾದರಾಜರನ್ನೇ ಆದ್ಯ ಪ್ರವರ್ತಕರೆಂದು ಹೇಳುವುದು ವಾಡಿಕೆ :

ನಮಃ ಶ್ರೀಪಾದರಾಜಾಯ ನಮಸ್ತೆ ವ್ಯಾಸಯೋಗಿನೇ ।

ನಮಃ ಪುರಂದರಾರ್ಯಾಯ ವಿಜಯಾರ್ಯಾಯತೇ ನಮಃ ॥

ಶ್ರೀಪಾದರಾಜರು ಇವರ ವಿಖ್ಯಾತ ಶಿಷ್ಯ ವ್ಯಾಸರಾಯ (ತೀರ್ಥ) ರ್ರು ಮತ್ತಿವರ ಶಿಷ್ಯ ವಾದಿರಾಜರು .... ಇವರು ಸನ್ಯಾಸಿಗಳು ಮಾಧ್ವ ಮಠಾಧಿಪತಿಗಳು ಇವರು ದ್ವೈತ ವೇದಾಂತದ ಪ್ರಮೇಯ ಗ್ರಂಥಗಳ (ಸಂಸ್ಕೃತ) ಕರ್ತೃಗಳು ನಿಜ. ಜೊತೆಗೆ ಕನ್ನಡದಲ್ಲಿ ಕೃತಿಗಳನ್ನು ರಚಿಸಿರುವ ಹರಿದಾಸರೂ ಹೌದು.

ಕನಕ ಪುರಂದರಾದಿ ಹರಿದಾಸರೆಲ್ಲಾ ಸದ್ಗೃಹಸ್ಥರು. ಊರಿನಲ್ಲೇ ಇದ್ದು, ಜನರ ನಿಂತವರು. ಜನಜೀವನದ ಸುಖ ದುಃಖಗಳಲ್ಲಿ ಭಾಗಿಯಾಗಿದ್ದವರು. ದಂತಗೋಪುರ ದಲಿದ್ದು, ಪರೋಪ ದೇಶ ಪಾಂಡಿತ್ಯವನ್ನು ಮೆರೆದವರಲ್ಲ. ಗುರುವಿನ ಗುಲಾಮರಾಗಿ 'ಹರಿದಾಸದೀಕ್ಷೆ' ಯನ್ನು ಪಡೆದು 'ಅಂಕಿತ' ವನ್ನು ಸ್ವೀಕರಿಸಿ, ಊಂಛವೃತ್ತಿ (ಭಿಕ್ಷೆ) ಯಿಂದಲೇ ಜೀವನದ ಸಾರ್ಥಕವನ್ನು ಕಂಡವರು. ಇವರೆಲ್ಲಾ ಕನ್ನಡಿಗರು. ಇವರ ಸಾಹಿತ್ಯವಿರುವುದೂ ಕನ್ನಡದಲ್ಲೇ.

ಹರಿದಾಸರು ಭಾಗವತಧರ್ಮವನ್ನು ಅವಲಂಬಿಸಿ ಆ ಮಾರ್ಗವನ್ನು ಎಲ್ಲ ಜನರಿಗೂ ತೋರಿಸಿಕೊಟ್ಟರು. ಭಾಗವತ (ಸಪ್ತಮಸ್ಕಂಧ) ದಲ್ಲಿ ನಿರೂಪಿಸಿರುವ ನವವಿಧ ಭಕ್ತಿಮಾರ್ಗವನ್ನು ಇಲ್ಲಿ ಸ್ಮರಿಸಬಹುದು. ಭಕ್ತನು ತನ್ನನ್ನು ಭಗವಂತನ ಸೇವಕನೆಂದೂ ದಾಸನೆಂದೂ ಭಾವಿಸಿ, ಭಗವಂತನನ್ನು ತನ್ನ ಒಡೆಯ, ಸ್ವಾಮಿ, ದೊರೆ ಮುಂತಾಗಿ ಭಾವಿಸಿ, ಭಕ್ತಿ ಸಾಧನೆ ಮಾಡುವುದೇ ದಾಸ್ಯಭಾಗ. ಹರಿದಾಸ ಸಾಹಿತ್ಯದಲ್ಲಿ ಈ ಭಾವಕ್ಕೆ ಹೆಚ್ಚು ಪ್ರಾಶಸ್ತ್ಯ. ಆದ್ದರಿಂದಲೇ ಇವರು ಹರಿದಾಸರು.

ಹರಿದಾಸರ ದೃಷ್ಟಿಯಲ್ಲಿ ಆಧ್ಯಾತ್ಮ ಸಾಧನೆಯೇ ಮುಖ್ಯಗುರಿಯೆಂಬುದೇನೋ ದಿಟ: ನಿರ್ಮಲವಾದ ಆದರೂ, ಸಮಾಜದ ಲೋಪದೋಷಗಳನ್ನೂ, ಡಾಂಭಿಕತನ ವನ್ನೂ, ನೀತಿಗೆಟ್ಟ, ನಡತೆಯನ್ನು ಕೆಟ್ಟತನವನ್ನು, ಧೈರ್ಯವಾಗಿ ಬಿರುನುಡಿಗಳಿಂದ ಖಂಡಿಸಿದ್ದಾರೆ. ವ್ಯಂಗ್ಯವಾಡಿದ್ದಾರೆ. ಜನತೆಯನ್ನು ಎಚ್ಚರಿಸಿದ್ದಾರೆ. ಇಲ್ಲಿ ಒಂದೆರಡು ಅಂಶಗಳನ್ನು ಚರ್ಚಿಸಬಹುದು.

ತಂದೆ-ತಾಯಿಗಳ ಪ್ರತಿ-ವಾತ್ಸಲ್ಯ

ಅಂದಿನ ಸಮಾಜದ ದೈನಂದಿನ ಜೀವನದಲ್ಲಿ ತಂದೆತಾಯಿಗಳು ತಮ್ಮ ಮಕ್ಕಳ ವಿಷಯದಲ್ಲಿ ತೋರುತ್ತಿದ ಪ್ರೀತಿ ವಾತ್ಸಲ್ಯಗಳನ್ನು .... ಅದು ಇಂದಿಗೂ ಬಹ ಮಟ್ಟಿಗೆ ಸತ್ಯ. ಒಂದು ಪ್ರಧಾನವಾಂಶವೆಂದು ಪರಿಗಣಿಸಲಾಗಿದೆ.[೧]

ನಮ್ಮ ಹರಿದಾಸರು ಶ್ರೀಹರಿಯನ್ನು ಬಾಲಕೃಷ್ಣನ ರೂಪದಲ್ಲಿ ಕಂಡು, ಅವನನ್ನು ಮಗುವೆಂದು ಭಾವಿಸಿ, ತಮ್ಮನ್ನೇ ತಾಯಿಯ ರೂಪದಲ್ಲಿ ನಿಲ್ಲಿಸಿ, ಎತ್ತಿ ಆಡಿಸಿ, ಮುದ್ದಿಸಿ ನಲಿದಿರುವುದು ನಮ್ಮ ಅಂತಃಕರಣವನ್ನೇ ಕಲಕುವಂತಿದೆ.!

ಶ್ರೀಪಾದರಾಜರು ಪೋಪು ಹೋಗೋಣ ಬಾರೋ ರಂಗವನ್ನೇ ನೋಡಿ. ಪುರಂದರ ದಾಸರದಂತೂ ಅತ್ಯಂತ ಪ್ರಸಿದ್ಧ ಕೃತಿಗಳು

೧. 'ಪೋಗದಿರಲೋ ರಂಗ ಬಾಗಿಲಿಂದಾಚೆಗೆ'

೨. 'ಲಾಲಿಸಿದಳು ಮಗನ ಯಶೋದೆ'

೩. 'ಆಡಿಸಿದಳೆಶೋಧೆ ಜಗದೋದ್ಧಾರನ' ಇತ್ಯಾದಿ.

ಡಾಂಬಿಕತನದ ಖಂಡನೆ

ಶ್ರೀಪಾದರಾಜರು ತಮ್ಮ "ದಾಸರೆಂದರೆ ಪುರಂದರ ದಾಸರಯ್ಯ" ಎಂಬ ಪ್ರಸಿದ್ಧ ಕೀರ್ತನೆಯಲ್ಲಿ, ಊಟದಾಸಗೆ ಪರರ ಮನೆಗೆ ಹೋಗಿ ಅವರನ್ನು ಕಾಡಿಬೇಡುವವನು ಎಂಥ ದಾಸ ?! ಎಂದು ವಿಡಂಬನೆ ಗೈದಿದ್ದಾರೆ. ಆಗಮಗಳನ್ನು ಅರಿಯದೆ, ತಂಬೂರಿ ಯನ್ನು ಮೀಟಿದ ಮಾತ್ರಕ್ಕೆ ಅವನು ದಾಸನೇ ? ರೂಡನಾಮವನ್ನು ಹೊಡೆದು ತಾನೇ ಹಿರಿಯನೆಂದು ಸೋಗು ಹಾಕಿದರೆ ಅವನು ದಾಸನಾಗಬಲ್ಲನೇ ಎನ್ನುತ್ತಾರೆ. ಶ್ರೀಪಾದ ರಾಜರು ಹಾಗೆಯೇ ಪುರಂದರ ದಾಸರ ಖಂಡನೆಯನ್ನು ನೋಡಿ

"ನೂರಾರು ಕರ್ಮಗಳನ್ನು ಡಂಭಕೆ ಮಾಡಿ ಆರಾರಿಗೋ ಹಲವು ದಾನ ಕೊಟ್ಟು || ದಾರಿದ್ರ್ಯವನು ಪಡೆದು ತಿರಿದುಂಬುವುದಕೀಗ ? ದಾರಿಯಾಯಿತೆ ಹೊರತು ಬೇರೆ ಫಲುಂಟೇ ಎನ್ನುತ್ತಾರೆ.

ಈ ಕೆಟ್ಟ ಬದುಕುಗಳಿಂದ ಪ್ರಯೋಜವೇನು ?

"ಥಟ್ಟನೆ ಶ್ರೀಹರಿಯ ಪಾದವನು ನಂಬು ದಿಟ್ಟ ಶ್ರೀಪುರಂದರ ವಿಠ್ಠಲಯೆಂದನಲು ಸುಟ್ಟು ಹೋಗುವುದಯ್ಯ ಕಷ್ಟರಾಜಿಗಳು" ಎಂದು ಬೋಧಿಸುತ್ತಾರೆ.

ಸಾಲಮಾಡಿದವನ ಪಾಡನ್ನೂ ದಾಸರು ಚಿತ್ರಿಸದೇ ಬಿಟ್ಟಿಲ್ಲ

ಮಗನ ಮದುವೆಗೆಂದು ಒಬ್ಬ ಸಾಲವನೆತ್ತಿದ ಜನರಲ್ಲಿ ಸುಗುಣ ಯೆನ್ನಿಸಿಕೊಳ್ಳಲು ವೆಚ್ಚ ಮಾಡಿದ. ಸಾಲತೀರಲಿಲ್ಲ. ಸಾಲ ಕೊಟ್ಟವನು ಬಂದು ಹಗರಣ ಮಾಡಿದರೆ, ಬಗೆಬಗೆ ಯೊಳವರ ಕಾಲ್ಗೆರೆಂಗಿ ಬಿದ್ದಿರುವೆಯಲ್ಲಾ ಎನ್ನುತ್ತಾರೆ ದಾಸರು.[೨]

ದಾಸರು "ಋಣ ವೆಂಬ ಸೂರತವು ಬಹುಬಾಧೆ ಪಡಿಸುತಿದೆ" ಎಂಬ ಒಂದು ಕಿರ್ತನೆಯನ್ನೆ ರಚಿಸಿದ್ದಾರೆ. ಸಾಲ ಮಾಡಿದವರ ಬವಣೆಯ ಸುಂದರ ಚಿತ್ರವಿಲ್ಲಿದೆ.!

ಕುಲ-ಜಾತಿ, ಅಸ್ಪೃಶ್ಯತೆ

ಸಮಾಜದ ಈ ಪಿಡಗನ್ನು ಕುರಿತು ಹರಿದಾಸರು ಮರುಗಿದ್ದಾರೆ. ತಮ್ಮದೇ ಆದ ಪರಿಭಾಷೆಯಲ್ಲಿ ಈ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸಿರುವುದೂ ಉಂಟು. ಕುಲ-ಕುಲವೆಂದು ಬಡಿದಾಡದಿರಿ ಎಂದು ಬುದ್ಧಿ ಹೇಳಿದ್ದಾರೆ. ಕನಕದಾಸರು (ಹರಿಕಥಾ ಮೃತಸಾರ) ಹೇಳುತ್ತಾರೆ.

'ಹೊಲೆಯ' ಎನ್ನುತ್ತ ಜನರು ಕಳವಳಿಸಿ ದೂರ ದೂರ ಸರಿಯುವರು. ತಾವೆಲ್ಲರು ಮೂತ್ರ ದ್ವಾರದಿಂದಲೇ ಬಂದವರೆಂಬುದನ್ನು ಮರೆತರೋ ಏನೋ ? ನೀರಲ್ಲಿ ಮುಳುಗಿದರೆ ಹೊಲೆಯು ತೊಲಗುವುದೆ? ಈ ದೇಹದಲ್ಲಿ ಶ್ರೀ ಹರಿಯು ನೆಲೆಸಿರುವಾಗ ಹೊಲೆಯೆಂಬುದುಂಟೆ ?

ಪುರಂದಾಸರು, 'ಹೊಲೆಯ' ನೆಂಬುದು ಜಾತಿ ಸೂಚಕ ನಿಕೃಷ್ಟ ಪದವಲ್ಲ, ಭ್ರಷ್ಟಾಚಾರ ತಿಳಿಸುವ ಪದ ಎಂದು ಬಿಡಿಸಿ ಹೇಳಿದ್ದಾರೆ. ಹೊಲೆಯನ ಲಕ್ಷಣಗಳನ್ನು ಪಟ್ಟಿ ಮಾಡಿದ್ದಾರೆ.೩

"ಬ್ರಾಹ್ಮಣನೆಂದ್ರರೆ ಬ್ರಹ್ಮವ ತಿಳಿದವನು ಅವನೀಗ ಬ್ರಾಹ್ಮಣನೋ". "ಜೀವದ ಸ್ವರೂಪಯೋಗ್ಯತೆಗಳಿಗೂ, ಕುಲಜಾತಿಗಳಿಗೂ ಸಂಬಂಧವಿರದು."೪

ಟಿಪ್ಪಣಿಗಳು

1. B.A,Salateore, Soical and Folitical life in the Vijayanagar Empire, II, P.13 Madras-1934.
2. Economic Life in the Vijayangara Empire, PP.185-86.

   ಇಲ್ಲಿ ವಿದೇಶಿ ಯಾತ್ರಿಕರು ವರ್ಣಿಸಿರುವ ಸಾಲಗಾರರ ಬವಣೆಯ ಚಿತ್ರವನ್ನು ನೋಡಬಹುದು.
3. ಸಾ.ಕೃ.ರಾಮಚಂದ್ರರಾವ್, ದಾಸಸಾಹಿತ್ಯ ಮತ್ತು ಸಂಸ್ಕೃತಿ, ಪು.೩೮೯. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩.
4. ಅದೇ.

೪೦. ವಿಜಯನಗರ ಚರಿತ್ರೆಯಲ್ಲಿ ಅಪ್ರಕಟಿತ ಆಕಾಶ ಭೈರವ ಕಲ್ಪ ಕೃತಿ

ಕೆಳದಿ ಗುಂಡಾ ಜೋಯಿಸ್

೧೯೬೦ರಲ್ಲಿ ಸರಕಾರದ ಉನ್ನತ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಸ್ಥಾಪಿಸಿ, ಅಭಿವೃದ್ಧಿಗೊಳ್ಳುತ್ತಿರುವ ಕೆಳದಿ ವಸ್ತುಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನಾ ಕೇಂದ್ರದ ಸಂಚಾಲಕನಾಗಿ, ವಿವಿಧೆಡೆಗಳಲ್ಲಿ ಓಲೆಗರಿ ಹಸ್ತಪ್ರತಿ ಸರ್ವೇಕ್ಷಣೆಯಲ್ಲಿ ತೊಡಗಿದಾಗ ನನಗೆ ಗೋಚರಿಸಿದ "ಆಕಾಶ ಭೈರವ ಕಲ್ಪ" ಪ್ರಾಚೀನ ತಾಳೆಯೋಲೆ ಹಸ್ತಪ್ರತಿಯೊಂದು ಈ ಕೆಳಗಿನ Accession ನಂ ಮೇರೆಗೆ ದಾಖಲಾಗಿದ್ದು, ಅಪೂರ್ವ ಹಸ್ತ ಪ್ರತಿಗಳ ಸಾಲಿಗೆ ಸೇರಿದೆಯೆಂದರೆ ಅತಿಶಯೋಕ್ತಿಯಾಗಲಾರದು. ೨೫.೫.೧೯೭೪ರಂದು ಧಾರವಾಡದಲ್ಲಿ ಜರುಗಿದ ೬ನೇ ಕರ್ನಾಟಕ ಇತಿಹಾಸ ಸಮ್ಮೇಳದಲ್ಲಿ ಡಾ.ಪಿ.ಕೆ.ಗೋಡೆರವರು ವಿಜಯನಗರ ಆಕರ ಕುರಿತು " Akasha Bhairava Kalpa, an unknown Source of the History of Vijayanagara" ಎಂಬ ಪ್ರಬಂಧ ಸಾದರ ಪಡಿಸಿ ಬೆಳಕು ಚೆಲ್ಲಿದ್ದಾರೆ, ಇಂತಹ ಮಹತ್ವದಿಂದ ಕೂಡಿದ ಕೆಳದಿ ಸಂಶೋಧನಾಲಯದ ಹಸ್ತಪ್ರತಿಯನ್ನು ಆಧರಿಸಿ, ಮೌಲ್ಯಾತ್ಮತೆಯೊಂದಿಗೆ ಹಸ್ತ ಪ್ರತಿಗಳ ಪರಿಷ್ಕರಣೆ, ಸಂಪಾದನೆ ಹಾಗೂ ಅಧ್ಯಯನ ಕೈಗೊಳ್ಳಲು ತಜ್ಞ ವಿದ್ವಾಂಸರಿಗೆ ವಿಪುಲ ಅವಕಾಶವಿದೆ. ಇದನ್ನು ವಿದ್ವಾಂಸರ ಗಮನಕ್ಕೆ ತರುವುದೇ ನನ್ನ ಪ್ರಬಂಧದ ಉದ್ದೇಶ.

ಕೆಳದಿ ಸಂಶೋಧನಾಲಯದ ಹಸ್ತಪ್ರತಿ.

1. Catalogue of palm leaf maunscripts, Vol II ; Published Keladi Museum &Historical Research Bureau : 2000.
2. Page No 87 : Purana : sl No 701 ; ACC No 1070 : Akashabhairava Kalpa (ಆಕಾಶ ಭೈರವ ಕಲ್ಪ). Script : Grantha lipi ; Langnage : Sanskrit ; Size in cmr ; 26-5 x 3-2 grm.

   Folio : 85 Lines : 7 ; Letters : 32 ;

   Extent : Incomplete ; Age and condition : Good. Date : ? Scribe :?

   Material : Palm leaf manuscripts.

ಇತರೆಡೆಗಳಲ್ಲಿರುವ ಆಕಾಶ ಭೈರವ ಕಲ್ಪ ಹಸ್ತ ಪ್ರತಿಗಳು

೧. ತಂಜಾವೂರಿನಲ್ಲಿರುವ ಸರಸ್ವತಿ ಹಸ್ತಪ್ರತಿ ಭಂಡಾರ ಮತ್ತು BOL ಪುಣೆ.

Ms No 43 of 1925-26 in the Govt Mss Library at the BOR Institute, Poona, this is a modern copy prepared for Bhandarkar orintal Institute from Ms No.6707 of the Tanjore Library : Dr. Burnell has incuded this Ms in the Ms on Tantric Literature and has given a short notice of it in his catalogue. He observes "This Ms contains in a dialoge between Shiva and Parvati, the samrajyalakshmipithika but ends abruptly in patala 136. Gr 3900. It describes the worship of samrajyalaksmi and then goes on to describe how a king's palace should be built : what kind of elephants and weapons etc., he should possess : patala 29 describes the way of laying out his city.[1] The Ms contains 132 folio. Dr. Burnell also refers to other copies of this work which appear to be fragmentary.[2a]

2. Catalogues Catalogorum by Theodor Angrecht part I - Vol I Page 38. From Mahasaivatantra Burmell Taylor 1 117 Oppert 6715 II 3391, 4474 Akacabhairakalpe carabha malamantra BHK 37.

BHK - A Report on the search for Sanskrit MSS during the year 1881-82 by R.G. Bhandarkar, Dated Poona Ist June 1882 39 Pages in folio.

Vol III p.9____ in 20 upadesa from the Mahacaivatantra CS : 5, 54,

(Akashabhairava Kalpa) tantra. Umamaheswara samvada ; in most Mss. described as Mahasaivatantra or as part of it ; in MD. 6645 (Pratyangira-Kavaca) alone side to be part of Mahalakshmi tantra which appear to be wrong. For range of subjects, see extracts from it below ; used paddathi ; mentioned in Pranatosini P.2. This bears some similarity to the text called Mahalakshmi Ratnakosa.

Adyar II P.208b (3Mss) P.231b Adyar Lilarary 42. Allahabad 190 (138). Alwar 2046. America 4407-10, 17414-26 (A.Bh.tantra). Anandashrama 2294. Bik. 1626. BISM Nasik Patwardhan 339. Bomb Uni. 1643. 1645-49. 1686. Burnell 203a (Ganesha stotra from patala

7). 204 a (72 chs). Cs V 54. Gd.1086-88. (all-inc). Gov. or. Libr.Madras 7 (4 Mss). Hpr. Natices XI preface p.14. IM. 4018, 5401 (pancanga). IO, 6211. Jodhpur 877. 878. Kadayanaltur 225. Kavindracarya 1138. Lucknow Mus. MD.7746-7 (chs.1-10). 7748 (7-76chs.) 7749 (chs. 7 to part of 17th). 7750 (chs 16-126). 7751 (ch.51). 1816. Mithila. Mysore I.P.564. III P 121. (78chs). Mysore skt coll P.7 Nepal II P 120. (178 chs) Oppert I. 6715. 7047. II. 3391. 4474 (all Mahasaivatantra in 20 upaderas). RSB VIII, i. 5895. Skt. Coll. Ben. 1917-18. P.12. Sucipattra 103. Taylor I 117. II. 403 (inc). TD XX, Sup. no 920 (Burnell 12155) (frage. from ch.i middle to ch.6 middle). Travuvni 7262 B.C. 8559. Visvabharati 2772. See also TD. XX 99 290, 521-522.

ಕ್ಯಾಟಿಲಾಗ್ ಕ್ಯಾಟಿಲೋಗೋರಂನಲ್ಲಿ ಕಂಡು ಬರುವ ಆಕಾಶ ಭೈರವಕಲ್ಪೀ (ತಂತ್ರೆ) ದಲ್ಲಿ ಅಘೋರ ಕವಚದಿಂಧ ಸಂಕ್ಷೋಭಿಣಿ ಮಂತ್ರ (ch 50).MD 7456 ರವರೆಗಿನ ಭಾಗಗಳು ಇಲ್ಲಿ ಪ್ರಸ್ತುತಕ್ಕೆ ಅನವಶ್ಯಕವಾಗಿದ್ದು ಲೇಖನ ವಿಸ್ತಾರಭಯದಿಂದ ಕೈಬಿಡಲಾಗಿದೆ.

Samrajyalakshmipitika) Burnell 204a (7mss, 6707-10 ; 6715-17) and 12139-41 (TD. XX. Sup. No 25-27 ; 28 (frag) ; 905-7) Ptd. Tanjore sar. Mah.Ser. 58. Mss of this text, said to be a section of A. Bh. Kalpa, are found only in Tanjore.

Oriental Research Institute Mysore.

ಇಲ್ಲಿ ನಂ ೬೪೬ (ಬಿ) ಮತ್ತು ನಂ ೨೫೯೨ (Palm leaf) ಹಸ್ತ ಪ್ರತಿಗಳು ಕ್ಯಾಟಲಾಗ್ ಮೇರೆಗೆ ಕಂಡುಬಂದಿದ್ದು, ನನ್ನ ಪರಿಶೀಲನೆಯಲ್ಲಿ ನಂ ೬೪೬ (ಬಿ) ಹಸ್ತ ಪ್ರತಿಯಲ್ಲಿ ಆಕಾಶ ಭೈರವ ಕಲ್ಪ ಕೃತಿಯಾಗಿರುವುದು ಕಂಡುಬರುವುದಿಲ್ಲ. ನಂ ೨೫೯೨ ನೇ ಓಲೆಗರಿ ಹಸ್ತಪ್ರತಿಯು ಆಕಾಶ ಭೈರವಕಲ್ಪ ಕೃತಿಯೆಂದು ಕಂಡು ಬರುತ್ತದೆ. ಇದರ Mycrofilm ಪ್ರತಿಗೆ ಮನವಿ ಸಲ್ಲಿಸಿರುವೆನು.

ವಿವರ : ಶರಭ ಸಾಲ್ವ ಪಕ್ಷಿರಾಜಕಲ್ಪ ಆಕಾಶ ಭೈರವ ಕಲ್ಪ.

ಪ್ರಮಾಣ : ೪೩.೫ x ೪ ಸೆ.ಮೀ

ಜಲಿ : ಸಂಖ್ಯೆ ೮೯-೧೫೮ : ಸಾಲುಗಳು ೮

ಅಕ್ಷರ : ೬೫ ; ಕಾಲ : ಸ ೧೮ ಶತಕ

ವಿಷಯ : ತಂತ್ರ ಮಂತ್ರ ಶಾಸ್ತ್ರ - ೨ಬಿ

4. Alphabetical list of microfilm in the oriental research institnte, Mysore. Up to july 1972. Vol IV No.2.

No : 309 ; Akasabhairava Kalpa ; anohraig Script : Language : Sanskrit ; Paper Manuscript ; no ofurŒPios : 45 ; 1700 Granthas ; complete ;

5. Institnt Francais D Indologi, Catalogue descriptiy des manuscnricts, Vol I.

No 87 - Akasabhairava kalpa and suliniyanthavidhana.

RE : 8251 ; PL ; 75 fols ; 375 x 36 mms ; 6 - 11 lines ; good condition ; grantha ; old ; origin : Rameswaram :

Blank fols : 41B & 42b.

General contents

1. Fols. 1a-51 B : Akasabhairavakalpa ;[3]

2. 52a-75b : Sulimiyantravidhana.

6. ಮೈಸೂರು ಶ್ರೀಮನ್ಮಹಾರಾಜರವರ ಅರಮನೆಯ ಸರಸ್ವತೀ ಭಂಡಾರದಲ್ಲಿ ಕೈಬರಹ ಸಂಸ್ಕೃತ ಮತ್ತು ಕನ್ನಡ ತಾಳಪತ್ರ ಪುಸ್ತಕಗಳ ಶಾಸ್ತ್ರ ಕ್ರಮದಿಂದ ವಿಂಗಡಿಸಿರುವ ಪಟ್ಟಿ - ೧೯೦೦ ಲಾಗಾಯ್ತು ೧೯೦೫ ರವರೆಗೆ. (೧೯೦೫).

ನಂ ೧೮೪೬ ; ಮಂತ್ರ ಶಾಸ್ತ್ರ ; ಆಕಾಶಭೈರವ ಕಲ್ಪಃ ;

ಮಹಾಶೈವತಂತ್ರಂ ; ನು : ೮೭೬ ; ಲಿಪಿ : ಗ್ರಂಥ ;

ಪತ್ರ ಸಂಖ್ಯೆ ; ೮೫ ; ...... ಪೂರ್ಣ ವಿವೇಕಃ :

ಸಮಗ್ರ

ನು : ೧೮೪೭ ; ಅದೇ ; ನಂ ೮೬೬ ; ಪತ್ರ ಸಂಖ್ಯೆ ೭೩-೨೪೫

ನು : ೧೮೪೮ ; ಅದೇ ; ನಂ ೮೬೭ ; ಪತ್ರ ಸಂಖ್ಯೆ ೨೧೪.

ನು : ೧೮೪೯ ; ಅದೇ ; ನಂ ೯೮೦ ; ಪತ್ರ ಸಂಖ್ಯೆ ೯೩-೧೦೦

ಪೂರ್ಣಪೂರ್ಣವಿವೇಕ ೩೯-೪೧ ಅಧ್ಯಾಯಃ

ನು : ೧೮೫೦ ; ಅದೇ ; ನಂ ೯೪೧ ; ಪತ್ರ ಸಂಖ್ಯೆ ೧೫

ವಿಜಯನಗರ ಚರಿತ್ರೆಗೆ ಆಕಾಶಭೈರವ ಕಲ್ಪ

ಪೂನಾ ಭಾಂಡಾರಕರ್ ಪ್ರಾಚ್ಯ ಸಂಶೋಧನಾ ಕೇಂದ್ರದಲ್ಲಿನ ಆಕಾಶ ಭೈರವ ಕಲ್ಪ ಹಸ್ತಪ್ರತಿಯಲ್ಲಿ "ಸಾಮ್ರಾಜ್ಯ ಲಕ್ಷ್ಮೀ ಪೀಠಿಕಾ"

ಸಾಮ್ರಾಜ್ಯ ಲಕ್ಷ್ಮೀಪೀಠಿಕಾ

ಆಕಾಶ ಭೈರವ ಕಲ್ಪ ಗ್ರಂಥ ಕೃತಿಯಲ್ಲಿ ಸಾಮ್ರಾಜ್ಯ ಲಕ್ಷ್ಮೀ ಪೀಠಿಕಾ ಅಧ್ಯಾಯ ಗಳು, ವಿಜಯನಗರ ಇತಿಹಾಸಕ್ಕೆ ಸಮೀಪದ ಆಕರಗಳನ್ನು ನೀಡಲು ಸಹಕಾರ ನೀಡುತ್ತವೆ. ಪೂನಾ ಭಂಡಾರಕರ್ ಪ್ರಾಚ್ಯ ಸಂಶೋಧನಾ ಭಾಂಡಾಗಾರದ ಹಸ್ತಪ್ರತಿ ಯಲ್ಲಿ ಕಂಡುಬರುವ -

ಇತ್ಯಾಕಾಶ ಭಯರವ ವಾಖ್ಯೇ ಕಲ್ಪೇ ಮಹಾಶೈವತಂತ್ರೇ ಸಾಮ್ರಾಜ್ಯ ಲಕ್ಷ್ಮೀ ಪೀಠಿಕಾಯಾಂ ಸಾಮ್ರಾಜ್ಯ ಲಕ್ಷ್ಮೀ ಮಹಾತ್ಮ್ಯ ಕಥನಂ ನಾಮ ಪ್ರಥಮಃ ಪಟಲಃ

ಈ ಅಧ್ಯಾಯಗಳಲ್ಲಿ ಹಿಂದೂ ರಾಜನೀತಿ ಧರ್ಮಗಳು, ರಾಜನ ಆಡಳಿತ ಕ್ರಮ ಗಳು, ಚಕ್ರವರ್ತಿಯ ಕೆಲಸ ಕಾರ್ಯಗಳು ಕೋಟೆಗಳ ನಿರ್ಮಾಣಗಳು ಪರಸ್ಪರ ರಾಜ ಕಾರ್ಯ ಒಪ್ಪಂದಗಳು ಪವಿತ್ರ ಕ್ಷೇತ್ರಗಳಿಗೆ ಚಕ್ರವರ್ತಿಯ ಭೇಟಿಗಳು, ಧಾರ್ಮಿಕ ನೀತಿಗಳು. ಪಿ.ಕೆ. ಗೋಡೆರವರೇ ನಿರೂಪಿಸಿದಂತೆ

About the twenty patalas of the present treatise are devoted to this subject matter which is follwoed by the description of the fortresses to be constructed by the kings as also fortresses to be avoided by the king. We have also a description of the several remparts of the fortresses and towers. One chapter is devoted to the detailed lines to be followed by the sovereign in laying out his capital and the construction of several buildings there clunding the royal pavilions the palaces with innumerable apartments including the inner apartments for ladies. The treatises also prescribe the auspicious marks of the sovereign and the necessity of his visits to the holy places writh a schedule of his duties to be performed at these places. Description is also given of the military expeditions of the king,. All this subject matter closes with patala 40. from patala 41 onwards we get a dersciption of seveial religious festivals to be performed with all eclat by the sovereign during the course of a year. These include the festivals to be performed on the new years day, the celebrated <u>Ramanavami festival</u>, the <u>Krishna Jayanati festival.</u> The Navaratri festival with special reference to <u>Vijayadashami.</u> The <u>Dipavali festival</u>, the <u>Holy festival</u> slyed as the Kamavrata in which the image of God cupid is painted on a piece of cloth and taken in a procession through the city. One chapter gives us a list of seventy two public servants, begning with the prime minister and ending with the

pithamardaka minister. A Chapter is devoted to the exposition of the 64 arts, Chapters 84-104 are devoted to the description of Nripabhiseka or the coronation of the sovereign and all the rinual connected with it together with some information about the construction of the informa-tion on throne and the maner of its occupation by the sovereign. Ch III deals with the charcteristics of the soveregn and Ch.112, is devoted to the description of the characteristics of the Rajamahisi or the queen consort. Ch 117 deal with the rajaniti or polity. Chs 114-118 deal with the component parts of the kings military equipments such as the chariot, the elephants, the horses, foot soldiers, bows and arrows. Ch 119 is specially devoted to the study and practice of archery. Ch 120-21 are devoted to the exposition of the art of warfare. Chps 122 to 136 deal with the daily routine of the king from morn till eve including his morning duties, Listening to the puranas, conversation with poets, learned men and singers and taking counsel of ministers on matters of state.[6] Chs 128-29 describe the midday programme of the king including the description of the royal dinner with all its grandeur in company of the ladies of the royal house hold. Ch. 130 deals with evening duties of the king. ch. 131 deals with the kings attendance at a dancing performance which is followed by the king's moonlight diver-sions in the company of the ladies of the harem. Ch 134 is devoted entirely to a detailed description of the royal hunt and the king's return to the capital for, washing away his sins consequent upon this hunt by making gift of cows land and gold.

In the Akashabhairavakalpa we find in patala 32 detailed instruc-tions regarding the construction of the several inner apartments of the royal palace. These apartments are as follows -

ಸ್ನಾನಗೇಹ > the bath-room

ಪಚನಾಲಯ > the kitchen room

ಶಯನಾಗಾರ > bed room

ಕೋಶಾಗಾರ > store room

ಶಸ್ತ್ರ ಶಾಲಾ > the armoury

ಮಜ್ಜನಾಲಯ > swfifmming bat

ವಿದ್ಯಾಶಾಲಾ > the study room

ಭೋಜನಾಲಯ > the dinning room

ಧನಗೇಹ > the treasury

ರತ್ನಮಂದಿರ > the room for keeping jewellery

ವಸ್ತ್ರ ಸದನ > room for storing clothes

ಗಂಧ ಮಂದಿರ > room for keeping scents

ದೇವತಾಗಾರ > the temple

ದ್ಯೂತಮಂದಿರ > the room for playing at dice.

ವಿಜಯನಗರ ಕೃಷ್ಣದೇವರಾಯನ ಕಾಲದ ಆಸ್ಥಾನದ ವಿದ್ಯಾಸಂನಾಗಿದ್ದ ಲೊಲ್ಲ ಲಕ್ಷ್ಮೀಧರನು "ಕೋಟೆ ನಿರ್ಮಾಣ ಶಾಸ್ತ್ರವನ್ನು ವಿವರಿಸುವ ಅಷ್ಟಗಿರಿದುರ್ಗ ಸ್ವರೂಪ ಕಥನಮ್" ದ ಆಕಾಶ ಭೈರವಕಲ್ಪದಲ್ಲಿದೆ.

"ಪ್ರಥಮಂ ಗಿರಿದುರ್ಗ ಸ್ಯಾದ್ವನದುರ್ಗ ದ್ವಿತೀಯಕಮ್ ।

ತೃತೀಯಂ ಗಹ್ವರಾಂತಸ್ಥಂ ಜಲದುರ್ಗ ಚತುರ್ಥಕಮ್ ॥

ಪಂಚಮಂ ಕರ್ದಮಾವಿಷ್ಟಂ ಸ್ಯಾನ್ಮಾಭಿನಾಮಿಕಮ್

ಸಪ್ತಮಂ ನರದುರ್ಗಂ ಸ್ಯಾತ್ಕೋಷ್ಟದುರ್ಗ ತಥಾಷ್ಟಮಂ ॥

ಪರ್ಷಿಯ ಮತ್ತು ಅರೇಬಿಯಾದಿಂದ ವಿಜಯನಗರದ ಕೃಷ್ಣದೇವರಾಯನು ಕುದುರೆಗಳನ್ನು ಆಮದು ಮಾಡಿಕೊಳ್ಳುತ್ತಿದ್ದ ಸಂಗತಿಗಳು ಪಟಲ ೧೬೧ ಪುಟ ೪೨೮ ರಲ್ಲಿ -

ಉತ್ತಮಾಃ ವಾಜಿನಃ ಪ್ರೋಕ್ತಾಃ ಪಾರಸೀಕ ಸಮಲದ್ಭವಾಃ ।

ಉರೋ ಜಿತಾಶ್ಚ ಶಿಲಾಶ್ಚ ಹಯಾಶ್ಯಾರಟ್ಟದೇಜ್ಞಾಃ ॥

ಕಥಿತಾ ಮಧ್ಯಮಾ ದೇವಿ ಸಿಂಧುದೇಶ ನದೀಭವಾಃ ।

ಕಬಲಾಶ್ಚಾರ್ಯ ಜಾತಾಶ್ಚ ತಥಾ ಸಾರಸ್ವತಾಹ್ವಯಾ ॥

ಅಧಮಾಷ್ಟಂಕಣೋತ್ಥಾಶ್ಚ ಯೇಚ ಪ್ರಾಗ್ದಕ್ಷಿಣೋದ್ಭವಾಃ ॥"

ಆಕಾಶ ಭೈರವ ಕಲ್ಪದ ೧೧೬ನೇ ಪಟಲದ ೪೩೧ನೆ ಪುಟದ ಭಾಗವೊಂದರಲ್ಲಿ "ಅಶ್ವೋತ್ಪಾತ್ಯಾದಿ ಸ್ವರೂಪ ಕಥನಂ" ಹಾಗೂ "ಉತ್ತಮಾ ವಾಜಿನಃ ಪ್ರೋಕ್ತಾಃ ಪಾರಸೀಕ ಸಮುದ್ಭವಾಃ" ಮುಂತಾದ ಉಲ್ಲೇಖನಗಳು ವಿಜಯನಗರ ಚರಿತ್ರೆಗೆ ಸಮಂಜಸವಾದ ಆಕರಗಳನ್ನು ನೀಡಬಲ್ಲವು.

ಉಪಸಂಹಾರ

ಹೀಗೆ ಶೈವ ತಂತ್ರದ ಆಕಾಶ ಭೈರವ ಕಲ್ಪದಲ್ಲಿರುವ ಸಾಮ್ರಾಜ್ಯ ಲಕ್ಷ್ಮೀ ಪೀಠಿಕಾ ಕೃತಿಯಲ್ಲಿ ಹಿಂದೆಯೇ ವಿವರಿಸಿದಂತೆ ಚಕ್ರವರ್ತಿಗಳ ಕಾರ್ಯ ವೈಖರಿಗಳು, ಕೋಟೆಗಳು, ರಕ್ಷಣಾಕ್ರಮಗಳು ಮುಂತಾದ ಅಮೂಲ್ಯ ಮಾಹಿತಿಗಳು ಉಪಲಬ್ಧವಿದೆ. ಆಪತ್ತಿನ ಸಂದರ್ಭದಲ್ಲಿ ಶಸ್ತ್ರಗಳು, ಕಲ್ಲುಗಳು, ಮರಳುಗಳು, ಪಾತ್ರೆ, ಔಷಧ ಮೇವು, ಕಟ್ಟಿಗೆ, ಬೆಲ್ಲ, ತುಪ್ಪ, ಜೇನುತುಪ್ಪ, ಎಣ್ಣೆಗಳು, ಧಾನ್ಯ, ಹಾಲು ಬೆಣ್ಣೆಮೊಸರು ಮುಂತಾದವುಗಳನ್ನು ಕೋಟೆಯಲ್ಲಿಯೇ ಹೇಗೆ ಶೇಖರಿಸಿಡಬೇಕೆಂಬುದನ್ನು ವಿವರಿಸುತ್ತದೆ. "ಸಾಮ್ರಾಜ್ಯ ಲಕ್ಷ್ಮೀ ಪೀಠಿಕಾ" ಗ್ರಂಥದಲ್ಲಿರುವ 'ಕೋಷ್ಟದುರ್ಗ' ಸಹ ಪ್ರತ್ಯೇಕವಾಗಿ ದಿನಸುಗಳು, ಆಯುಧಗಳು, ಮೇವು, ಸಿಪಾಯಿಗಳು ಮುಂತಾದವುಗಳನ್ನು ಮುಂದಾಗಿಯೇ ಶೇಖರಿಸಲು ಇರುವ ಕೋಟೆ.[7] ಮುಖ್ಯ ಸೇನಾನಿಯು ಕೋಟೆಗಳನ್ನು ಜಯಿಸಿದಾಗ "ಕೋಟೆ ಕೋಲಾಹಲ" "ಸಪ್ತಾಂಗ ಹರಣ" ಮುಂತಾದ ಬಿರುದುಗಳಿಂದ ಸನ್ಮಾನಿಸಲಾಗುತ್ತಿತ್ತು.[8] ಪುರಾತನ ಹಸ್ತಪ್ರತಿಯಲ್ಲಿ ಅಪ್ರಕಟಿತವಾಗಿದ್ದು ಕೆಳದಿ ಸಂಶೋಧನಾಲಯದಲ್ಲಿ ಗೋಚರಿಸಿದ 'ಆಕಾಶ ಭೈರವಕಲ್ಪ' ಸಾಮ್ರಾಜ್ಯ ಲಕ್ಷ್ಮೀ ಪೀಠಕಾದಲ್ಲಿ ಉಲ್ಲೇಖಿಸಿದ ಕೋಟೆಗಳನ್ನು ಕುರಿತಂತೆ ವೈಜ್ಞಾನಿಕವಾಗಿ ಪುರಾತತ್ವ ಅಧ್ಯಯನ ಶೀಲರಿಗೆ ಸಂಶೋಧನಾ ಸರ್ವೇಕ್ಷಣೆಗೆ ವಿಪುಲ ಅವಕಾಶಗಳಿವೆ. ಕೋಟೆಗಳು, ಮದ್ದುಗುಂಡುಗಳು, ರಕ್ಷಣಾ ಸಾಮಗ್ರಿಗಳ ವರ್ಣನೆಗಳು ೧೧೪-೧೧೮ ನೇ ಪಟಲಗಳಲ್ಲಿ ಉಲ್ಲೇಖಿಸಿದಂತೆ, ಹಲವಾರು ವಿವಿರಗಳನ್ನೊಳಗೊಂಡ ಮೈಸೂರು ಅರಮನೆ ಕೋಟೆ, ಶಾಸ್ತ್ರಾಸ್ತ್ರ ಕುರಿತಂತೆ ಮೈಸೂರು ಅರಮನೆ ಹಾಗೂ ರಾಜ್ಯ ಪ್ರಾಚ್ಯವಸ್ತು ಹಾಗೂ ಹಲಸನಾಡು ಸುಬ್ಬರದಯ್ಯ (ಕರಣಿಕ) ನವರಲ್ಲಿನ ನವಾಬ್ ಹೈದರಾಲಿಯ ದಾಖಲೆಗಳಲ್ಲಿದ್ದಂತೆ ಸಂಶೋಧನಾ ಇಲಾಖೆ ನನ್ನ ಸರ್ವೇಕ್ಷಣೆಯಲ್ಲಿ ಅಮೂಲ್ಯ ಹಸ್ತಪ್ರತಿಯೊಂದು ಗೋಚರಿಸಿದೆ. ಇದನ್ನು ದೊರಕಿಸಿಕೊಟ್ಟ ಪ್ರಾಚ್ಯವಸ್ತು ಸಂಗ್ರಹಾಲಯ ಇಲಾಖೆ ನಿರ್ದೇಶಕ ಡಾ.ಗೋಪಾಲ್ ರವರಿಗೆ ಅತ್ಯಂತ ಕೃತಜ್ಞತೆಗಳು.[9] ವಿಜಯನಗರ ಹಂಪೆ ಉತ್ಖನನದಲ್ಲಿ 1856ರ Alexander Green Law, John Collings (City of Victory) ರವರ ಆಕರಗಳು. Splendours of Vijayanagara emprie, Hampi, Marg publications ಹಾಗೂ ಈಚೀನ ಸಂಶೋಧನೆಯಾಗಿವೆ. ಆರಮನೆಯ ವಿವಿಧ ಭಾಗಗಳು ಅನ್ವೇಷಣೆಗಳಿಗೆ ಸಾಮ್ರಾಜ್ಯ ಲಕ್ಷ್ಮೀ ಪೀಠಿಕಾ ಸಹಕಾರ ನೀಡುತ್ತದೆ. ಕೆಳದಿ ರಕ್ಷಣಾ ಸಾಮಗ್ರಿಯ ಕುರಿತು ನನ್ನ ಲೇಖನವೊಂದು ಭಾರತ ರಕ್ಷಣಾ ಇಲಾಖೆಯ ಸೈನಿಕ ಸಮಾಚಾರ[11] ದಲ್ಲಿ ಪ್ರಕಟ ವಾಗಿದೆ.

ವಿಜಯನಗರ ಆಕರ ಕ್ಕೆ ಸೇರಲರ್ಹವಾದ "ಆಕಾಶ ಭೈರವ ಕಲ್ಪ" ಹಸ್ತಪ್ರತಿಯೊಂದು ಕೆಳದಿ ಸಂಶೋಧನಾಲಯದಲ್ಲಿ ನನ್ನ ಸರ್ವೇಕ್ಷಣೆಯಲ್ಲಿ ಗೋಚರಿಸಿದುದೂ ರೋಚಕ ಸಂಗತಿಗಳಲ್ಲೊಂದು. ಇದರಿಂದ ಭಾವಿತಗೊಂಡ ನನಗೆ ಆಸಕ್ತಿಯಿಂದ ಅಧ್ಯಯನ ಕೈಗೊಳ್ಳಲು ಕುತೂಹಲವುಂಟಾದುದು ಸಹಜವಾಗಿಯೇ ಇದೆ. ಭಾರತದ

ಎಲ್ಲೆಡೆಯಲ್ಲಿರುವ ಹಸ್ತಪ್ರತಿ ಕ್ಯಾಟಲಾಗ್ ಸಮೀಕ್ಷಾಧ್ಯಯನ ಕೈಗೊಳ್ಳು ವಂತಾಯಿತು. ಕೆಳದಿ ಮತ್ತು ವಿಜಯನಗರ ಒಂದನ್ನೊಂದು ಬಿಟ್ಟಿರಲಾರದ ಬಾಂಧ್ಯವ್ಯವೂ ಐತಿಹಾಸಿಕ ಸತ್ಯವೇ ಇದೆ. ಮಲ್ಕೋಟೆ ಸಂಸ್ಕೃತಿ ಸಂಶೋಧನ ಸಂಸತ್ ನಿರ್ದೇಶಕ ಪ್ರೋ ಲಕ್ಷ್ಮಿತಾತಾಚಾರ್‌ರವರ ಸೂಚನೆ ಮೇರೆಗೆ ಹಿಂದಿಯಲ್ಲಿ ಪ್ರಕಟ ವಾದದ್ದೆಂದು ಹೇಳಲಾದ ಪ್ರತಿಯೊಂದನ್ನು ತರಿಸಲು ಶ್ರೀ ಕಾಯಾವಾಯ ರಿಸರ್ಚ್ ಇನ್‌ಸ್ಟಟ್ಯೂಟ್, ಕರೋಲ್‌ಬಾಗ್ ನ್ಯೂದೆಹಲಿಗೆ ಅನೇಕ ಬಾರಿ ಪತ್ರ ಬರೆದಿದ್ದರೂ, ಈ ವಿಳಾಸದಾರರೇ ಇಲ್ಲವೆಂದು ಪತ್ರ ಹಿಂದಿರುಗಿ ಬಂದುದು ನಿರಾಸೆಯುಂಟಾಯಿತು. ಆಕಾಶ ಭೈರವ ಕಲ್ಪಕೃತಿಯು ಗ್ರಂಥ ಲಿಪಿಯಲ್ಲಿದ್ದು, ಮೈಸೂರಿನ ಪ್ರಾಚ್ಯಕೋಶಾಗಾರದ ಮೈಕ್ರೋಫಿಲ್ಮ ನ ಕ್ಯಾಟಲಾಗ್‌ನಲ್ಲಿ ಮಾತ್ರ ಒಂದು ಹಸ್ತಪ್ರತಿ ಆಂಧ್ರ ಲಿಪಿಯಲ್ಲಿ ಕಂಡುಬಂದಿದೆ. ಪಾಂಡಿಚೇರಿಯಲ್ಲಿರುವ ಹಸ್ತಪ್ರತಿಯಲ್ಲಿರುವ ವಿವರಣಾತ್ಮಾಕ ಸೂಚಿಯೂ ಗಮನಾರ್ಹವಾಗಿದೆ. ಸಾಮ್ರಾಜ್ಯ ಲಕ್ಷ್ಮೀ ಪೀಠಿಕಾ ಕುರಿತಂತೆ ವಡೋದರ, ಅಲಹಾಬಾದ್, ಒರಿಸ್ಸಾ, ಬಂಗಾಲ, ತಿರುವಾಂಕೂರು, ಚೆನ್ನೈ, ಹೈದರಾಬಾದ್ ಹಾಗೂ ಲಂಡನ್‌ನ ಬ್ರಿಟಿಷ್ ಮ್ಯೂಜಿಯಂಗಳಲ್ಲಿ ಹಸ್ತಪ್ರತಿಗಳಿರುವ ಸಾಧ್ಯತೆಯಿದೆ. ಪ್ರಾಮಾಣಿಕ ಸಂಶೋಧಕ ಕೃತಿಯನ್ನು ಆಧರಿಸಿಕೊಂಡು ಅಧ್ಯಯನ ಕೈಗೊಂಡಲ್ಲಿ ಮಾರ್ಗ ದರ್ಶನ ನೀಡಲು ನನಗೆ ಅತೀವ ಆನಂದವುಂಟಾಗುತ್ತದೆ. ಇಷ್ಟೇ ಅಲ್ಲದೆ ಗ್ರಂಥ ಲಿಪಿ ಬಗ್ಗೆ ಡಾ. ಓಝಾರವರ ಪ್ರಾಚೀನ ಲಿಪಿಮಾಲಾ ಪಠ್ಯಬಾಗದಲ್ಲಿ ಕಂಡಂತೆ ಗ್ರಂಥ ಲಿಪಿ ಅಭ್ಯಾಸವೂ ಸಾಧ್ಯವಿದೆ. ದುರಾದೃಷ್ಟದವಶಾತ್ ಈ ಲಿಪಿಯ ಪರಿಣಿತರೂ ಕಂಡು ಬಾರದೇ ವಿಪುಲ ಜ್ಞಾನ ಸಂಪತ್ತುಗಳು ಕಣ್ಮರೆಯಾಗುತ್ತಿವೆ. ಭಾರತದ ವಿವಿಧೆಡೆಗಳಲ್ಲಿರುವ ಪ್ರಾಚ್ಯಸಂಶೋಧನಾ ಇಲಾಖೆ ತಜ್ಞರುಗಳು ಕೆಳದಿ ಸಂಶೋಧ ನಾಲಯಕ್ಕೆ ಭೇಟಿಯಿತ್ತು ಹಸ್ತಪ್ರತಿ ಸಂಶೋಧನೆಗಳಿಗೆ ಕಂಪ್ಯೂಟರ್ ಸಿ.ಡಿ. ಮುಖಾಂತರ ತಮ್ಮಲ್ಲಿರುವ ಹಸ್ತಪ್ರತಿ ಕ್ಯಾಟಲಾಗ್ ಸಂಪುಟಗಳನ್ನು ಕಳಿಸುವುದಾಗಿ ಪತ್ರ ಬರೆಯುತ್ತಿದ್ದಾರೆ. ಇದರ ಹಿನ್ನಲೆಯಲ್ಲಿ ನನ್ನ ಇತಿಮಿತಿಯೊಂದಿಗೆ ೧೯೩೮ ರಲ್ಲಿಯೇ ಪಿ.ಕೆ. ಗೋಡೆರವರು ಈ ಅಮೂಲ್ಯ ಆಕರವನ್ನು ಗಮನಕ್ಕೆ ತಂದರೂ ಈ ಕುರಿತು ಈವರೆಗೂ ವಿದ್ವಾಂಸರು ಗಮನ ಹರಿಸದಿದ್ದುದು ಸಖೇದಾಶ್ಚರ್ಯ ವಲ್ಲವೇ ? ಕಾಲಪುರಷನ ಇಚ್ಛೆಯು ಕೆಳದಿ ಬಾಂಧ್ಯವ್ಯದಿಂದಾಗಿ ಬೆಳಕು ಕಾಣಬೇಕೆಂದು ಕಾಣುತ್ತದೆ. ಹಂಪೆ ಉತ್ಸವ ವಿಚಾರ ಸಂಕಿರಣದಿಂದ ಇದು ಚಾಲನೆಗೊಂಡರೆ ಕೆಳದಿ ಅರಸರು 'ಹಂಪೆ ಉತ್ಸವಕ್ಕೆ' ನೀಡಿದ ದಾನ ಶಾಸನ ಸಾರ್ಥಕವಲ್ಲವೇ[10] ಇದರಿಂದ ಕೆಳದಿ ಉತ್ಸವಕ್ಕೂ ನಾಂದಿಯಾಗಬಹುದೇನೋ ?

ಅಡಿಟಿಪ್ಪಣಿಗಳು

1. Vide Burnell's Catalogue of Tanjore MSS 1879, P.204.
2. No 6708-10 and 6715-17.

No 6708 ff 77 a recent copy of no. 6707

No 6709 ff 13 patalas 21-22 copy of No 6707

No 6710 ff 10 pp 132-133 copy of No 6707

No 6716 ff 11 P 129.

No 6717 ff 17 pp 19, 20, 34, 37, 33, 40, 41, imperfect.

No 6715 ff 64. 'A recent copy but with many lacunae of another part of the same Tantra the uma- Maheswara Samvada in 72 short adhyayas. This section treats of the worship of the gods.

2b. ಇದನ್ನು ದೊರಕಿಸಿಕೊಟ್ಟ ಡಾ.ನಾಗರಾಜ ಶರ್ಮರಿಗೆ ಕೃತಜ್ಞತೆಗಳು.

3. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

4. Palm leaf manuscripts Catolague in the royal palace, Mysore, Page -158.

5. Karnataka Historic review pp. 8-10.

೬. ನನ್ನ ಪುರಾತನ ಓಲೆಗರಿ ಸರ್ವೇಕ್ಷಣೆಯಲ್ಲಿ ಮೈಸೂರಿನ ಡಾ. ಸಂಪತ್ಕುಮಾರಾಚಾರ್ಯರವರಲ್ಲಿದ್ದ "ಕೃಷ್ಣದೇವರಾಯನ ದಿನಚರಿ" ಕೃತಿಯನ್ನು ನಾನು ಬೆಂಗಳೂರಿನ ಬಿ.ಎಂ.ಶ್ರೀ ಪ್ರತಿಷ್ಠಾನದ ಸ್ಥಾಪಕ ಸದಸ್ಯನಾಗಿದ್ದಾಗ ಇದನ್ನು ಪ್ರಕಟಿಸಲು ನೆರವು ನೀಡಿದ್ದು, ಈ ಕೃತಿಯಲ್ಲಿ ಇಂತಹ ಮಾಹಿತಿಗಳು ಅಡಕವಾಗಿವೆ.

೭. ಇಂತಹ ಪಳೆಯುಳಿಕೆಗಳನ್ನು ಹಂಪೆ, ಹಳೇನಗರ, ಕೌಲೇ ದುರ್ಗದ ಕೋಟೆಗಳಲ್ಲಿ ಈಗಲೂ ಕಾಣಬಹುದು.

೮. ಕೆಳದಿ ಅರಸರಿಗೆ "ಕೋಟೆಕೋಲಾಹಲ" ಇತ್ಯಾದಿ ಬಿರುದುಗಳಿದ್ದುದನ್ನು ಶಿಲಾಶಾಸನಗಳಲ್ಲಿ ಅವಲೋಕಿಸಬಹುದಾಗಿದೆ.

೯. ಅನುಬಂಧ ನೋಡಿರಿ.

೧೦. ಹಂಪೆ ಜಾತ್ರೆಗೆ ಕೆಳದಿ ಅರಸರು ಹಾಕಿಸಿದ ದಾನ ಶಾಸನ ಡಾ.ಕೆಳದಿ ವೆಂಕಟೇಶಜೋಯಿಸ್ : ಪು ೧೦೬.ವಿಜಯನಗರ ಅಧ್ಯಯನ ಸಂಪುಟ. ೭/೨೦೦೩.

ಆಕರಗ್ರಂಥಗಳು

1. Catalogues Catalogorum : by Theodor Anfrecht. part I.

2. Catalogue ; ORI, Mysore.

3. Alphabetical List of Microfilms in the ORI, Mysore. 1972

4. Institut Francais D. Indologie : catalugu Descriptif des Manuscrits,

vol I, Pondicherry 1986.

5. ಮೈಸೂರು ಅರಮನೆ ಸರಸ್ವತೀ ಭಂಡಾರ, ಮೈಸೂರು, ೧೯೦೫.

6. Catalogue of Keladi Museum & Historical Research Bureau : Keladi : 2000.

7. ಇತಿಹಾಸ ದರ್ಶನ ಸಂ : ೬/೧೯೯೧.

8. ವಿಜಯನಗರ ಅಧ್ಯಯನ ಸಂಪುಟ ೭/೨೦೦೩, ಸಂ : ಕೆ.ಆರ್.ರಾಮಕೃಷ್ಣ, ಟಿ.ಎಸ್.ಗಂಗಾಧರ,

ಟಿ.ಎಂ.ಮಂಜುನಾಥಯ್ಯ, (ಹಂಪೆ ಉತ್ಸವ ೨೦೦೧ ರಲ್ಲಿ ಮಂಡಿಸಿದ ಪ್ರಬಂಧಗಳು) ಪ್ರಾಚ್ಯವಸ್ತು ಸಂಗ್ರಹಾಲಯ ನಿರ್ದೇಶನಾಲಯ, ಕರ್ನಾಟಕ ಸರಕಾರ, ಹೊಸಪೇಟೆ.

9. ಕೆಳದಿ ಅರಸರ ಶಾಸನ ಸಂಪುಟ ಶ್ರೀ ಜಗದ್ಗುರ ತೋಂಟದಾರ್ಯಮಠ, ಗದಗ ೧೯೯೧.

10. Karnataka Historical Review vol : V part I 1938.

Karnataka Historical Research Soceity, Dharwar. 1942.

11. Splendours of the Vijayanagara Emprie, Hampi. Marg Publications : George michell& Vasundhara Filliozat. 1981.

12. Vijayanagara through the eyes of Alexander J.Greenlaw 1856.

John gollings. 1983. Director of Archaeology & Museums. 1988.

41 . GLIMPSES OF RECENT EXCAVATIONS IN THE METROPOLIS AND CHANGED SCENARIO ON INTERPRETATION OF THE STRUCTURES IN CITADEL

T.M.Keshawa

This article is written as a sequel to the one published on the palace of Vira Harihara (Recent excavations in the Mint Area, Vijayanagara adhyayana, Vol.8 2003). based on the excavations carried out to the north of the mint in the year 1994-95 to 1997-98 and inscriptional evidences.

The century old Archaeological Survey of India and Department of Archaeology and museums Govt. of Karnataka have been meticulously excavating and documenting the Vijayanagara architectural manifestations in the citadel area and have added to the knowledge of the scholarly world hither to of unknown facts.

The current excavations being carried out by the A.S.I. to the east, north and around Vitthala temple complex has so far laid bare, well paved medieval main street between the Gejjala mandapa and the eastern entrance of the Vitthala temple skirted by its existing bazaars. The excavation carried out to the north of the northern wing of the bazaar has exposed buried stepped well, secular residential structures, perhaps of the traders with lanes and by lanes. The work in progress to the north of the northern entrance to the Vitthala temple has also revealed individual shrines, secular residential structures with streets etc. All these structures were built in un-coursed rubble masonry,

and plastered in mud and lime. Once the excavation is completed in the whole area, the grandeur of an extension described by the saint poet Sri Kanakadasa in his Mohanatarangini about the streets and houses lining on either side may come true after all.

Apart from carrying out excavations it is of paramount importance to identify the exposed remains, based on the available literary data to get a comprehensive picture of the metropolis. In the above pursuit, the efforts of Dr.B.Narasimhaiah in his "Metropolis Vijayanagara" (Significance of remains of citadel) is well documented work in identifying the remains of the citadel in various enclouseres such as royal enclosure and zanana enclosure based on the account of Abdur Razaq, Domingos paes, Duarte Barbosa, Fernao Nuniz. He marshal's all available circumstantial and indirect evidences[1] to identify some of them. Time and again the learned scholar envisages the need of excavating some more areas specified by him to understand the structures re-identified by him. This helps in understanding the complete layout of structures in the citadel area. Unless disputed the structural indentification of zanana enclosures postulated by him as the palace complex of Rama raya should be accepted.

The identifications of the palace of Vira Harihara to the west north west of Hazara Ramachandra temple in the so called "North of Mint" (north easter wing) of Dannayaka enclosure is completed beyond doubt based on the two epigraphs "and the excavation of a total palace complex with durbar hall, royal residences for the king and the women, royal garden with well planned water system, royal kitchen with other accessory structures complete. In the light of the above identification the identifications made by Dr.B. Narasimhaiah of the same area as Governors residence and the following other identifications deffer.

The author had an opportunity in the recent past to contact the above author and the new result has been welcomed by him.

'Behind the kings palace are the house and hall allotted to the Daiang. To the left of the said palace is the darab khaneh (Mint)'.

(Abdur Razaque-major P.H,1855,P.26)

If the above description is taken for analysis-behind kings palace are the house and hall allotted to the Daiang. It is to be observed that while describing the above, the traveller was standing inside the Dannayaks enclosure and infront of a large traced plinth located in the southern part of said enclosure some where near the so called"Band box watch tower and was definitely facing north". He has visualized the palace of Vira Harihara to his right side in the north east corner. Hence he could visualize that to the left of the palace is the durab khana". This present identification holds good since the terraced rectangular structure identified presently as the hall allotted to the Daiang (Dannayak), has structures (to be excavated) separated from the western enclosure wall of the palace of Harihara. With the above identification and contiuning wherein the travel accounts of Razaque, says that

"Opposite the darab khaneh(Mint) is the house of the governor, where are stationed twelve thousand soldiers and guard".(ibid P.29)

It is to be observed that while when one has to give a description of the location of a structure he or she will identify a structure first where he or she is located unless he or she cannot simply say that "behind one or across". While making such an above observastion in all probability Razaque was standing in front of the mint facing south. Hence only he could utter that

opposite is the governor's residence, which has already been identified as the large north-south oriented plinth in the Dannayaks enclousre. This structure is separated by a screen wall further south and 12,000 soldiers were stationed across it. The identification of this large unexcavated area as soldiers barracks could be made possible by the recent trail excavations (2000), carried out be the A.S.I which is to the west of the western most enclosure wall of prime ministers (B.Narasimhaih) (Mint) residence. The Excavation has yielded the mutilated gauntlets, arm guards, broken pieces of helmets strung with iron chains to protect the neck and shoulder etc. In the light of above discovery of soldiers battle outfits(2000), the palace of Vira Harihara, the identification of the palace of Krishna Devaraya, the most celebrated ruler of the dynasty nearer to the truth based on description by the contemporary travellers excavation results, circumstantial evidences is definitely possible and is being worked out by the author currently. There are sufficient evidences to say that the so called'Mint' indentified as prime ministers palace (B.Narasimhaiah),mistakenly indentified as Rangasabha (Nagaraja Rao.M.S.,1983, p.14) was indeed the palace of Krishnadevaraya and his queens whlch is being presently described as "Rangamahal"

Now the question arises which was the area, which catered to the day to day food supply of 12,ooo strong army who were on continous watch and ward duty of the royal residences. Elsewhere, it has been shown that, the area to the west of Krishnadevaraya palace and south of Dannayakas residence (Present unexcavated area to the north northwest of octagonal water pavilion)was the barrack of the army of guards. Even though it could be said so in affirmative, a little patience the said area

would prove it beyond doubt. In the light of above the role of octagonal water pavilion with its water supply system to the palace of Krishnadevaraya (Mint), and barrack of army with elaborarte structuring could be visualized. Now for a while it is assumed that the present road leading from Kamalapur to Hampi had not cut through the Bhojana sala, with a string of schist stone plates running on either side of a water channel, it could have been easily identified as the bhojana sala meant for the soldiers and scores of other servants of the palace, who were on duty rather than being a place for offering or used for some religious affairs as it had earlier been thought to be. In spite being not excavated, the passages, gateways leadilng from the water pavilion towards the palaces near by could easily be discerened.

Thus in the light of casual discussions it can be conclusively proved that

1. The palace complex to the north of Mint or immediately to the west of northeastern gateway mahadwara of Hazara Ramachandra temple is none other than the palace of Vira Harihara.

2. The structures (yet to be exposed)to the west and south west of the above are durab khaneh(Mint) and Dannaik's residence as descirbed by abdur Razaque.

3. The structures being exposed further south of above up to octagonal water pavilion being army barrack.

4.The structures exposed in the 'traditional mint' being the palace of Krishnadevaraya.

5. The octagonal water pavilion and bhojana sala being a composite structural complex serving as "Kitchen and Bhojana

sala for the soldier in the army barrack as well as water supply system to the citabel..

6. The structures in the Royal enclosure were palace structures as well as meant for day to day administration.

Therefore it is humbly placed before the scholarly world, that the above inference is based on the structural remains so far exposed and the evidences that have come in the way. Sufficient care has been taken to refrain from "imagination flying ahead of the facts".

Bibliography

1. Relevant Annual reports of Indian Archaeology-A Review.
2. Vijayanagara Adhayayana. Vol.8," Recent excavations in the Mint area-T.M.Keshava Directorate of Archaeology and musuem.2003.
3. Dr. B.Narasimhaiahi Metropolis Vijayanagara-significance of remains of citadel.
4. K.Srikantaiah,Vijayanagara Kalada Kannada Sahityadalli Janajivanachitra,1983, Geetha book house, Mysore.

ಪ್ರಬಂಧ ಮಂಡಿಸಿದವರು

೧. ಚಂದ್ರಶೇಖರ ವಿ. ದಾವಣಗೇರಿ
ಕಾರ್ಯನಿರ್ವಹಣಾಧಿಕಾರಿ
ಶ್ರೀ ವಿರೂಪಾಕ್ಷ ದೇವಸ್ಥಾನ, ಹಂಪಿ.

೨. ಡಾ.ಜಿ.ಗೋಪಾಲಕೃಷ್ಣ
ಬೆಂಗಳೂರು

೩. ಡಾ.ಹೆಚ್.ಚಂದ್ರಶೇಖರ
ಎಂ.ಐ.ಜಿ ೭೭, ೬ನೇ ಅಡ್ಡರಸ್ತೆ
೬ನೇ ಮುಖ್ಯರಸ್ತೆ,
ಕೆ.ಹೆಚ್.ಬಿ.ಕಾಲೋನಿ.
ಬೆಂಗಳೂರು.೧೯

೪. ಡಾ.ಎಂ.ಜಿ.ಮಂಜುನಾಥ
ನಂ. ೩೭, ಎಂ.ಐ.ಜಿ.೮೦ ಅಡಿ ರಸ್ತೆ
ಕೆಂಗೇರಿ ಉಪನಗರ
ಬೆಂಗಳೂರು-೬೦.

೫. ಡಾ.ಜಗದೀಶ
ಸಹಾಯಕ ಕಾರ್ಯಪಾಲಕ
ಅಭಿಯಂತರ
ಕ.ರ.ಸ.ಕೈ.ಅ.ನಿ.ಲಿ.ಯಾಧವ ಗಿರಿ
ಮೈಸೂರು - ೫೭೦೦೨೦

೬. ಡಾ.ಕೆ.ಎಂ ಸುರೇಶ
ನಿರ್ದೇಶಕರು
ವಸ್ತು ಸಂಗ್ರಹಾಲಯ ವಿಭಾಗ,
ಕ.ವಿ.ವಿ.ಹಂಪಿ.
ವಿದ್ಯಾರಣ್ಯ - ೫೮೩೨೭೬

೭. ಡಾ.ಅ.ಸುಂದರ
ನಂ.೩೨೯, ಸೌಂದರ್ಯ ಶ್ರೀ
೧ನೇ ಮುಖ್ಯ ರಸ್ತೆ, ೨ನೇ ಅಡ್ಡರಸ್ತೆ
ಭಾರತಿ ನಗರ, ಧಾರವಾಡ -
೫೮೦೦೦೧

೮. ಡಾ.ವೆಂಕಟೇಶ ಜೋಯಿಸ್
ಕೆಳದಿ ವಸ್ತು ಸಂಗ್ರಹಾಲಯ ಮತ್ತು
ಸಂಶೋಧನಾಕೇಂದ್ರ, ಕೆಳದಿ-೫೭೭೪೦೧
ಸಾಗರ ತಾ., ಶಿವಮೊಗ್ಗ ಜಿಲ್ಲೆ.

೯. ವೈ.ಹನುಮಂತ ರೆಡ್ಡಿ
ನಿವೃತ್ತ ಇತಿಹಾಸ ಉಪನ್ಯಾಸನಕರು
ಮಾತೃ ಕೃಪಾ, ರೇಣುಕಾ ನಗರ
೫ನೇ ಕ್ರಾಸ್, ತಾಳೂರು ರಸ್ತೆ
ಬಳ್ಳಾರಿ.

೧೦. ಡಾ.ಎಸ್.ಕೆ.ಜೋಷಿ
ನಂ ೧೬, ಸಿಲ್ವರ್ ಆರ್ಚ್‌ಡ್
ಧಾರವಾಡ - ೧

೧೧. ಡಾ.ಎಂ.ಕೊಟ್ರೇಶ
ಯೋಜನಾ ಸಹಾಯಕರು
ವಸ್ತು ಸಂಗ್ರಹಾಲಯ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ ೫೮೩೨೭೬.

೧೨. ಜವದೇವಪ್ಪ ಜೈನಕೇರಿ
೮೭ ಶಾಂತಲಾ ಕುವೆಂಪು ರಸ್ತೆ
ಶಿವಮೊಗ್ಗ - ೫೭೭೨೦೧

೧೩. ಡಾ.ಬಿ.ಜಗದೀಶ್ ಶೆಟ್ಟಿ
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಇತಿಹಾಸ ವಿಭಾಗ
ಪೂರ್ಣ ಪ್ರಜ್ಞಕಾಲೇಜು
ಉಡುಪಿ. ಉಡುಪಿ ಜಿಲ್ಲೆ.

೧೪. ಡಾ.ಸಿ.ಎಸ್.ವಾಸುದೇವನ್
ಮುಖ್ಯಸ್ಥರು
ಪುರಾತತ್ವ ವಿಭಾಗ,
ಕ.ವಿ.ವಿ.ಹಂಪಿ, ವಿದ್ಯಾರಣ್ಯ.

೧೫. ಡಾ.ಎಸ್.ಜಿ ಸಾಮಕ್
"ಸುಮಿತ್ರ"
ಪ್ರಿಯದರ್ಶಿನಿ ಬಡಾವಣೆ
ವಿನೋಬ ನಗರ
ಶಿವಮೊಗ್ಗ - ೫೭೭೨೦೪

೧೬. ಶ್ರೀ ಜೆ.ಕರಿಯಪ್ಪ ಮಾಳಿಗೆ
ಕನ್ನಡ ಉಪನ್ಯಾಸಕರು
ಸರಕಾರಿ ಪ್ರಥಮದರ್ಜೆ ಕಾಲೇಜ್
ಬಳ್ಳಾರಿ

೧೭. ಡಾ.ಜಾಜಿ ದೇವೇಂದ್ರಪ್ಪ
ಹಸ್ತ ಪ್ರತಿ ಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮. ಡಾ.ತಮಿಳ್ ಸೆಲ್ವಿ
ಪ್ರಾಧ್ಯಾಪಕರು
ಕನ್ನಡ ವಿಭಾಗ, ಮದ್ರಾಸ್ ವಿ.ವಿ
ಮರೀನಾ ಕಾಂಪ್ಲೆಕ್ಸ್
ಚೆನ್ನೈ ೬೦೦೦೦೫

೧೯. ಡಾ.ಚೆನ್ನಕ್ಕ ಪಾವಟೆ
ಕನ್ನಡ ಅಧ್ಯಯನ ಸಂಸ್ಥೆ
ಕರ್ನಾಟಕ ವಿಶ್ವವಿದ್ಯಾಲಯ
ಪಾವಟೆನಗರ, ಧಾರವಾಡ.

೨೦. ಎಸ್.ಎಸ್.ಭಗವತಿ
ಮತ್ತು ಎಚ್.ಎಸ್.ಮೇಲಿನಮನೆ
ಕನ್ನಡ ಅಧ್ಯಯನ ಸಂಸ್ಥೆ
ಕರ್ನಾಟಕ ವಿಶ್ವವಿಧ್ಯಾಲಯ
ಪಾವಟೆನಗರ, ಧಾರವಾಡ.

೨೧. ಡಾ.ಟಿ.ಎಂ.ಮಂಜುನಾಥಯ್ಯ
ಪುರಾತತ್ವ ಸಹಾಯಕರು
ಉಪ ನಿರ್ದೇಶಕರ ಕಛೇರಿ
ಪ್ರಾಚ್ಯವಸ್ತು ಸಂಗ್ರಾಲಯಗಳ
ಇಲಾಖೆ, ಕಮಲಾಪುರ

೨೨. ಡಾ.ಡಿ.ವಿ.ಪರಮಶಿವಮೂರ್ತಿ
ಹಿರಿಯ ಶ್ರೇಣಿ ಅಧ್ಯಾಪಕರು
ಶಾಸನ ಶಾಸ್ತ್ರ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೩. ಕೆಳದಿ ಗುಂಡಾಜೋಯಿಸ್
ಕೆಳದಿ ವಸ್ತು ಸಂಗ್ರಹಾಲಯ ಮತ್ತು
ಸಂಶೋಧನಾ ಕೇಂದ್ರ
ಕೆಳದಿ ೫೭೭೪೦೧.
ಶಿವಮೊಗ್ಗ ಜಿಲ್ಲೆ.

೨೪. ಸುಮತೀಂದ್ರ ನಾಡಿಗ್
ಪ್ರಜಾವಾಣಿ ವರದಿಗಾರರು
ಸಂತೆಬೆನ್ನೂರು ೫೭೭೫೫೨
ದಾವಣಗೇರಿ ಜಿಲ್ಲೆ.

೨೫. ಡಾ.ಬಿ.ರಾಜಶೇಖರಪ್ಪ
ಕನ್ನಡ ಪ್ರಧ್ಯಾಪಕರು
೨ನೇ ಅಡ್ಡ ರಸ್ತೆ, ಪಶ್ಚಿಮ
ಜೆ.ಸಿ.ಆರ್.ಬಡಾವಣೆ
ಚಿತ್ರದುರ್ಗ.

೨೬. ಡಾ.ಕೆ.ರವೀಂದ್ರನಾಥ
ಅಧ್ಯಾಪಕರು
ಹಸ್ತಪ್ರತಿ ವಿಭಾಗ
ಕ.ವಿ.ವಿ.ಹಂಪಿ.,ವಿದ್ಯಾರಣ್ಯ.

೨೭. ಶ್ರೀ ತಿರುಮಲೈ ರಂಗಾಚಾರ್ಯ
ನಂ ೭೫, ಅ.ನ.ಕೃ.ರಸ್ತೆ.
ವಿಶ್ವೇಶ್ವರಪುರಂ
ಬೆಂಗಳೂರು.

೨೮. ಡಾ.ಕಲವೀರ ಮನ್ವಾಚಾರ್
ಮುಖ್ಯಸ್ಥರು
ಶಾಸನ ಶಾಸ್ತ್ರ ವಿಭಾಗ
ಕ.ವಿ.ವಿ.ಹಂಪಿ.,ವಿದ್ಯಾರಣ್ಯ.

೨೯. ಶ್ರೀಮತಿ ವಿನೋದ ಪಾಟೀಲ್
ಕೇರಾಆಫ್ ಸದಾಶಿವ ಪಸಾರದ
ಕುಮಾರನಗರ, ಅಕ್ಕಿಹಾಲೂರು
ಹಾವೇರಿ ಜಿಲ್ಲೆ.

೩೦. ಪ್ರೊ.ಲಕ್ಷ್ಮಣ ತೆಲಗಾವಿ
ಪ್ರಾಧ್ಯಾಪಕರು
ಇತಿಹಾಸ ವಿಭಾಗ
ಕ.ವಿ.ವಿ., ವಿದ್ಯಾರಣ್ಯ.

೩೧. ಡಾ.ಚಂದ್ರಶೇಖರ ಶಾಸ್ತ್ರಿ
ಇತಿಹಾಸ ಉಪನ್ಯಾಸಕರು
ವಿಜಯನಗರ ಕಾಲೇಜ್
ಹೊಸಪೇಟೆ.

೩೨. ಡಾ.ವಾಸುದೇವ ಬಡಿಗೇರ
ಅಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪರಾತತ್ವ
ಅಧ್ಯಯನ ವಿಭಾಗ

ಕ.ವಿ.ವಿ.ಹಂಪಿ, ವಿದ್ಯಾರಣ್ಯ.

೩೩. ಡಾ.ಗುರುರಾಜಾಚಾರ್
ನಂ ೧೫೨, ೨ನೇ ಕ್ರಾಸ್
ಕೆ.ಎಸ್.ಆರ್.ಟಿ.ಸಿ. ಲೇ ಔಟ್
ಚಿಕ್ಕಲಸಂದ್ರ, ಬೆಂಗಳೂರು

೩೪. ಡಾ.ವಿರೂಪಕ್ಷ ಪೂಜಾರಹಳ್ಳಿ
ಅಧ್ಯಾಪಕರು
ಚರಿತ್ರೆ ವಿಭಾಗ
ಕ.ವಿ.ವಿ. ಹಂಪಿ., ವಿದ್ಯಾರಣ್ಯ.

೩೫. ಶ್ರೀಮತಿ ಯಶೋದ ರಾಜಶೇಖರಪ್ಪ
೨ನೇ ಅಡ್ಡ ರಸ್ತೆ, ಪಶ್ಚಿಮ
ಜೆ.ಸಿ.ಆರ್ ಬಡಾವಣೆ
ಚಿತ್ರದುರ್ಗ.

೩೬. ಎಂ.ಜಿ.ನಾಗರಾಜ್
ಅನರ್ಘ್ಯಶ್ರೀ ಜಟನಿಕೃಪ
೨೨೧, ೬೮ನೇ ಕ್ರಾಸ್
೫ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು.

೩೭. ಎಚ್.ಟಿ.ತಳವಾರ್
ಉಪನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ
ಇಲಾಖೆ
ಆರಮನೆ ಆವರಣ
ಮೈಸೂರು.

೩೮. ಡಾ.ಆರ್.ಗೋಪಾಲ್
ನಿರ್ದೇಶಕರು
ಪ್ರಾಚ್ಯವಸ್ತುಮತ್ತು ಸಂಗ್ರಹಾಲಯಗಳ
ನಿರ್ದೇಶನಾಲಯ
ಅರಮನೆ ಆವರಣ, ಮೈಸೂರು.

೩೯. ಕೆ.ಎಲ್.ರಾಜಶೇಖರ್
ಪ್ರಸಾರಂಗ
ಕ.ವಿ.ವಿ.ಹಂಪಿ,ವಿದ್ಯಾರಣ್ಯ.

೪೦. ಟಿ.ಎಂ.ಕೇಶವ
ಡೆಪ್ಯೂಟಿ ಸೂಪರಿಂಟೆಂಡಿಂಗ್
ಆರ್ಕಿಯಾಲಜಿಸ್ಟ್,
ಬೆಂಗಳೂರು ವೃತ್ತ, ೫ನೇ ಮಹಡಿ
ಎಫ್ ವಿಂಗ್, ಕೇಂದ್ರ ಸದನ
೧೭ನೇ ಮೇನ್ ರೋಡ್,
ಕೋರಮಂಗಲ
ಬೆಂಗಳೂರು ೫೬೦೦೩೪.

೪೧. ಡಾ.ರು.ಮ.ಷಡಕ್ಷರಯ್ಯ
ಪ್ರಭಾರಿ ನಿರ್ದೇಶಕರು
ಕನ್ನಡ ಸಂಶೋಧನಾ ಸಂಸ್ಥೆ
ಕರ್ನಾಟಕ ವಿಶ್ವ ವಿದ್ಯಾಲಯ
ಧಾರವಾಡ.



ಐದು ಶತಕಗಳಿಗೂ ಹಿಂದಿನ ಭವ್ಯ ಇತಿಹಾಸವುಳ್ಳ ವಿಜಯನಗರ ಸಾಮ್ರಾಜ್ಯದಲ್ಲಿ ಹಬ್ಬ ಹರಿದಿನಗಳು ಹಾಗೂ ಉತ್ಸವಗಳು ವಿಶೇಷ ಆಕರ್ಷಣೆಯಾಗಿದ್ದವು ಎಂಬುದನ್ನು ವಿದೇಶೀಯ ಇತಿಹಾಸಕಾರರು ಹೃದಯಂಗಮವಾಗಿ ವರ್ಣಿಸಿದ್ದಾರೆ. ಇಂತಹ ರಮಣೀಯ ಉತ್ಸವಗಳನ್ನು ನೆನಪಿಸುವ ಸಲುವಾಗಿ ಕರ್ನಾಟಕ ಸರ್ಕಾರ ಪ್ರತಿವರ್ಷ ಹಂಪಿಯ ಉತ್ಸವವನ್ನು ವಿಜೃಂಭಣೆಯಿಂದ ಆಚರಿಸುತ್ತಿದೆ. ಈ ಉತ್ಸವದ ಅಂಗವಾಗಿ ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ವಿಜಯನಗರ ಸಂಸ್ಕೃತಿಯ ವಿವಿಧ ಮುಖಗಳನ್ನು ಕುರಿತಾದ ವಿಚಾರ ಸಂಕಿರಣ ಏರ್ಪಡಿಸಿದ್ದು, ಅಲ್ಲಿನ ಪ್ರಬಂಧಗಳನ್ನು 'ವಿಜಯನಗರ ಅಧ್ಯಯನ' ಎಂಬ ಶೀರ್ಷಿಕೆಯಡಿ ಪ್ರಕಟಿಸುತ್ತಿದೆ. ಪ್ರಸ್ತುತ ಸಂಪುಟ ಈ ಮಾಲಿಕೆಯಲ್ಲಿ ಹತ್ತನೆಯದು. ಈ ವೈವಿಧ್ಯಮಯ ಸಂಪುಟ ಕನ್ನಡ ನಾಡಿನ ಜನತೆಗೆ ಪ್ರಿಯವೆನಿಸುತ್ತದೆ.

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ : ಮೈಸೂರು

